CC-O. In Public Domain. Digitized by eGangotri

ಶ್ರೀ

ಹರಿದಾಸ ಸಾಹಿತ್ಯ

ಒಂದು ಅಧ್ಯಯನ

ಬೇಲೂರು ಕೇಶವದಾಸರು

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಹರಿದಾಸ ಸಾಹಿತ್ಯ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ

ಹರಿದಾಸ ಸಾಹಿತ್ಯ

ಒಂದು ಅವಲೋಕನ

ಕೀರ್ತನಾಚಾರ್ಯ

ಬೇಲೂರು ಕೇಶವದಾಸರು

ಗೀತಾ ಬುಕ್ ಹೌಸ್ : ಪ್ರಕಾಶಕರು : ಮೈಸೂರು

Sri Vidyabharathi Book Centre, Sringeri

CC-O. In Public Domain. Digitized by eGangotri

SRI HARIDASA SAHITYA: *Ondu Avalokana* — By (the Late) Kirtanacharya Belur Keshavadasa. Published by Geetha Book House, New Statue Circle, Mysore 570 001, Second Edition, 1980.

ಪ್ರಥಮ ಮುದ್ರಣ 1944
ಪರಿಷ್ಕೃತ ದ್ವಿತೀಯ ಮುದ್ರಣ 1980

ಕಾಪಿರೈಟ್ © ಕೆ. ಮೋಹನದಾಸ

ಮುದ್ರಕರು
ಶ್ರೀ ಸದ್ಗುರು ಪ್ರಿಂಟರ್ಸ್
[illegible] ರಸ್ತೆ, ಮೈಸೂರು 570 004

Sri Vidyabharathi Book Centre, Sringeri

CC-O. In Public Domain. Digitized by eGangotri

ಕೃತಜ್ಞತೆ

ವಿಖ್ಯಾತ ಕೀರ್ತನಕಾರ ದಿವಂಗತ ಬೇಲೂರು ಕೇಶವದಾಸರ ಅತ್ಯುತ್ತಮ ಕೃತಿಗಳಲ್ಲೊಂದಾದ ಶ್ರೀ ಹರಿದಾಸ ಸಾಹಿತ್ಯ—ಈ ಗ್ರಂಥದ ಪ್ರತಿಗಳು ಸುಮಾರು ಮೂವತ್ತು ವರ್ಷಗಳಷ್ಟು ಹಿಂದೆಯೇ ತೀರಿಹೋಗಿದ್ದು, ಇದರ ಪರಿಷ್ಕೃತ ದ್ವಿತೀಯ ಮುದ್ರಣವನ್ನು ಸಂತೋಷದಿಂದ ಪ್ರಕಟಿಸುತ್ತಿದ್ದೇವೆ. ಗ್ರಂಥಪ್ರಕಾಶನ ಕಾರ್ಯಕ್ಕೆ ಪ್ರೇರೇಪಣೆ ಮಾಡಿದ ಖ್ಯಾತ ಮಹಿಳಾ ಸಾಹಿತಿ ಶ್ರೀಮತಿ ಟಿ. ಸುನಂದಮ್ಮನವರಿಗೆ, ಗ್ರಂಥಕರ್ತರ ಪುತ್ರ ಶ್ರೀ ಕೆ. ಮೋಹನದಾಸ ಅವರಿಗೆ ಮತ್ತು ನಮ್ಮ ಕೋರಿಕೆಯನ್ನು ಮನ್ನಿಸಿ ಗ್ರಂಥದ ಪ್ರಥಮ ಮುದ್ರಣದಲ್ಲಿನ ಅಚ್ಚಿನ ಮತ್ತಿತರ ದೋಷಗಳನ್ನು ತಿದ್ದಿ, ಆಮೂಲಾಗ್ರವಾಗಿ ಪರಿಷ್ಕರಿಸಿಕೊಟ್ಟು ಉಪಕಾರ ಮಾಡಿರುವ ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಕನ್ನಡ ಪ್ರಾಧ್ಯಾಪಕ ಡಾ. ಜಿ. ವರದರಾಜರಾವ್ ಅವರಿಗೆ ನಮ್ಮ ಅನಂತ ಕೃತಜ್ಞತೆಗಳು.

ಪ್ರಕಾಶಕರು

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಿವಿಡಿ

	ಗ್ರಂಥಕರ್ತನ ಮಾತು	9
	ಮುನ್ನುಡಿ	19
	ಶುಭಸಂದೇಶ	25
1.	ದಾಸಸಾಹಿತ್ಯದ ಸ್ವರೂಪ	31
2.	ಹರಿದಾಸರು ಮತ್ತು ಗಾನಕಲೆ	41
3.	ಹರಿದಾಸರ ಜ್ಞಾನ, ಭಕ್ತಿ, ವೈರಾಗ್ಯಗಳು	85
4.	ಜೀವನ ಸ್ವಾತಂತ್ರ್ಯ ಮತ್ತು ಸಾಧನೆ	169
5.	ವಿವಿಧ ರಸಗಳಲ್ಲಿ	192
6.	ಸಂಕೀರ್ಣ	240
7.	ಬ್ರಹ್ಮಾನಂದ	315

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಗ್ರಂಥಕರ್ತನ ಮಾತು

ದಾಸಸಾಹಿತ್ಯ ಗ್ರಂಥಲೇಖನದ ಉದ್ದೇಶವನ್ನು ಪ್ರಥಮಾಧ್ಯಾಯದಲ್ಲಿ ಬರೆದಿರುವ ಕಾರಣ, ಅದನ್ನಿಲ್ಲಿ ತಿಳಿಸುವುದಿಲ್ಲ. ಉಪಲಬ್ಧವಿರುವ ಕನ್ನಡ ಹರಿದಾಸ ಸಾಹಿತ್ಯ ಎಷ್ಟು ಕಡಿಮೆ ಪ್ರಮಾಣದಿಂದಿದ್ದರೂ ಈ ಕಾಲದ ಆವಶ್ಯಕತೆಗೆ ತಕ್ಕಂತೆ ಸಂಗೀತ ದೃಷ್ಟಿಯಿಂದ ಸ್ವರಸಹಿತ ಕೊಡುವುದಕ್ಕಾಗಲಿ, ವಾಙ್ಮಯ ದೃಷ್ಟಿಯಿಂದ ಸಾಹಿತ್ಯವೆಂದು ಕೊಡುವುದಕ್ಕಾಗಲಿ, ಸಾಕಾದಷ್ಟು ಸಮೃದ್ಧವಾಗಿದೆ. ಭಾರತ ಪ್ರಪಂಚದಲ್ಲಿ ವಿದ್ವಜ್ಜನರ ಮನಸ್ಸನ್ನಾಕರ್ಷಿಸಿರುವುದು ಸಂಸ್ಕೃತದಲ್ಲಿ ರಚಿತವಾಗಿರುವ ವ್ಯಾಸ-ವಾಲ್ಮೀಕರ ಸಾಹಿತ್ಯವಾದರೆ, ಸಂಸ್ಕೃತ ವರಿಯದ ಮಹಾಜನರ ಮನಸ್ಸನ್ನಾಕರ್ಷಿಸಿರುವುದು ದೇಶಭಾಷೆಗಳಲ್ಲಿ ರಚಿತವಾಗಿರುವ ಹರಿದಾಸರ ಸಾಹಿತ್ಯ. ಹರಿದಾಸ ಸಾಹಿತ್ಯವು ಭಾಷಾಬದ್ಧವಾದುದಲ್ಲ. ಒಂದು ಭಾಷೆಯಲ್ಲಿ ಬರೆದಿದ್ದರೆ ಮಾತ್ರ ಹರಿದಾಸ ಸಾಹಿತ್ಯವೆಂದು ಕರೆಸಿಕೊಳ್ಳುವ ಸಂಕುಚಿತ ಭಾವನೆ ಭಾಗವತ ಧರ್ಮದಲ್ಲಿಲ್ಲ. ಆದ್ದರಿಂದ ಭಕ್ತಿಪಂಥವನ್ನವಲಂಬಿಸಿದ ಸತ್ಪುರುಷರು ಯಾವ ದೇಶಭಾಷೆಯಲ್ಲಿ ಪ್ರಬಂಧಗಳನ್ನು ಬರೆದಿದ್ದರೂ ಅವು ದಾಸಸಾಹಿತ್ಯದಲ್ಲಿ ಸಮಾವೇಶವಾಗುತ್ತವೆ. ದಕ್ಷಿಣ ಭಾರತದ ತಮಿಳು ನಾಡಿನಲ್ಲಿ ಜನಿಸಿ, ತೆಲುಗು ಭಾಷೆಯಲ್ಲಿ ದಿವ್ಯಕೀರ್ತನೆಗಳನ್ನು ರಚಿಸಿರುವ ತ್ಯಾಗರಾಜರು ಸಹ ಹರಿದಾಸ ವರ್ಗದ ಸತ್ಪುರುಷರಲ್ಲಿ ಒಬ್ಬರಾಗಿರುತ್ತಾರೆ. ತ್ಯಾಗರಾಜರು ಹರಿದಾಸರೆಂಬುದಕ್ಕೆ ಅವರೇ ರಚಿಸಿರುವ **'ಪ್ರಹ್ಲಾದಭಕ್ತಿವಿಜಯ, ನೌಕಾಚರಿತ್ರೆ'**ಗಳೆಂಬ ಹರಿಕಥೆಗಳಿಗಿಂತ ಅನ್ಯಪ್ರಮಾಣ ಬೇಕಾಗಿಲ್ಲ. ತ್ಯಾಗರಾಜರು ಪ್ರಹ್ಲಾದ ಭಕ್ತಿವಿಜಯದಲ್ಲಿ ನಾಂದೀ ಪದ್ಯಗಳನ್ನು ಬರೆಯುತ್ತಾ—ಶ್ರೀ ರಾಮಚಂದ್ರನನ್ನೂ ಗಣಪತಿಯನ್ನೂ ಶಾರದಾಂಬೆಯನ್ನೂ ನಾರದರನ್ನೂ ಸ್ತೋತ್ರ ಮಾಡಿದನಂತರ

ಪುರಂದರದಾಸರ ಮೇಲೆ—

> ದುರಿತವ್ರಾತಮುಲೆಲ್ಲನು
> ಪರಿಮಾರ್ಚೆಡಿ ಹರಿಗುಣಮುಲ ಬಾಡುಚುನೆಪುಡುನ್ ।

Sri Vidyabharathi Book Centre, Sringeri

CC-O. In Public Domain. Digitized by eGangotri

ಪರವಶುಡೈವೆಲಯು ಪುರಂ
ದರದಾಸುನಿ ಮಹಿಮಮುಲನು ದಲಚೆ ದಮದಿಲೋನ್ ||

ತುಲಸೀದಾಸರ ಮೇಲೆ—

ತುಲಸೀ ಕಾನನಮಂದುನ
ವಿಲಸಿತಮುಗ ಹರಿನಿ ಚೂಚಿ ವಿಸ್ಮಯಮಯುತುಡೈ |
ಪುಲಕೀಕೃತ ತನುಡಗುನಾ
ತುಲಸೀದಾಸವರುನಿ ಸನ್ನುತುಲು ಸೇತು ಮದಿನ್ ||

ಭದ್ರಾಚಲ ರಾಮದಾಸರ ಮೇಲೆ—

ಕಲಿಯುಗಮುನ ವರಭದ್ರಾ
ಚಲಮುನ ನೆಲಕೊನ್ನ ರಾಮಚಂದ್ರುನಿ ಪದಭ |
ಕ್ತುಲಕೆಲ್ಲ ವರುಡನಂದಗಿ
ವೆಲಸಿನ ಶ್ರೀರಾಮದಾಸು ವಿನುತಿಂತು ಮದಿನ್ ||

ಎಂಬ ಪದ್ಯಗಳಿಂದ ದಾಸಶ್ರೇಷ್ಠರುಗಳನ್ನು ವಂದಿಸಿ, ಅನಂತರ ಮಾತು ಗಳಿಂದ—ನಾಮದೇವ, ಶುಕಾರಾಮ, ಜ್ಞಾನದೇವ, ಸಹದೇವ, ಜಯದೇವ, ನಾರಾಯಣತೀರ್ಥರುಗಳ ನಾಮೋಚ್ಚಾರಣ ಮಾಡಿ ಕಥಾರಂಭ ಮಾಡಿರು ತ್ತಾರೆ.

ಆದ್ದರಿಂದ ಉತ್ತರ ಭಾರತದ **ತುಲಸೀದಾಸರ** ಹಿಂದೀ ರಾಮಾಯಣ, **ಕಬೀರ, ಕಮಾಲ, ಮೀರಾಬಾಯಿ** ಮೊದಲಾದವರ ಹಿಂದೀ ಪ್ರಬಂಧ ಗಳೆಲ್ಲಾ ದಾಸಸಾಹಿತ್ಯ; ಮಹಾರಾಷ್ಟ್ರದ **ಸಮರ್ಥ ರಾಮದಾಸ, ಏಕನಾಥಸ್ವಾಮಿ, ನಾಮದೇವ, ತುಕಾರಾಮ, ಜ್ಞಾನದೇವ, ಜಯ ದೇವರುಗಳ** ಗ್ರಂಥಗಳೆಲ್ಲಾ ದಾಸಸಾಹಿತ್ಯ. **ಪೋತನ್ನನ** ಆಂಧ್ರಭಾಗವತ, ಭದ್ರಾಚಲ **ರಾಮದಾಸರ** ಗೀತಪ್ರಬಂಧಗಳು, **ತ್ಯಾಗರಾಜರ** ಕೀರ್ತನೆ ಗಳೆಲ್ಲಾ ದಾಸಸಾಹಿತ್ಯ; ತಮಿಳುನಾಡಿನ **ಆಳ್ವಾರರ** ಪ್ರಬಂಧಗಳೆಲ್ಲಾ ದಾಸಸಾಹಿತ್ಯ. ದಾಸಮನೋಭಾವದಿಂದ ರಚಿಸಿರುವ ಗಡುಗಿನ **ನಾರಣಪ್ಪನ**

Sri Vidyabharathi Book Centre, Sringeri

CC-O. In Public Domain. Digitized by eGangotri

ಕನ್ನಡ ದಶಪರ್ವಭಾರತ ದಾಸಸಾಹಿತ್ಯ. ಈ ಸಾಹಿತ್ಯರಾಶಿಯನ್ನು ವಿಸ್ತಾರಿಸಿದ ಸಾಹಿತ್ಯಪ್ರಪಂಚ ಮತ್ತಾವ ದೇಶದಲ್ಲೂ ಇಲ್ಲ.

ಪಾಶ್ಚಾತ್ಯ ಕವಿಗಳಲ್ಲಿ ವರ್ಡ್ಸ್‌ವರ್ತ್, ಗಯಟೆ, ಟಾಲ್‌ಸ್ಟಾಯ್—ಈ ಮೂವರು ವಿನಾ ಭಕ್ತಿಪರ ಸಾಹಿತ್ಯವನ್ನು ಇತರ ಕವಿಗಳು ಹೆಚ್ಚಾಗಿ ರಚಿಸಿರುವುದು ಕಂಡುಬರುವುದಿಲ್ಲ. ದೇವರ ಅವತಾರಗಳನ್ನು ಹೇಳುವ ಮತ್ತು ದೇವರಲ್ಲಿ ಭಕ್ತಿಯನ್ನು ಬೆಳೆಸುವ ಪುರಾಣಗಳು ಪಾಶ್ಚಾತ್ಯರಲ್ಲಿ ಕಂಡುಬರುವುದಿಲ್ಲ. ನಾಮಸ್ಮರಣೆಯನ್ನು ಬಲುಬಾರಿ ಮಾಡಿದರೆ ಹುಡುಗಾಟಿಕೆಯೆಂದು ತಿಳಿಯುವ ಹುಡುಗಬುದ್ಧಿಯೇ ಪಾಶ್ಚಾತ್ಯರನ್ನು ಬಿಟ್ಟಿಲ್ಲ. ಏಸು ಸ್ವಾಮಿಯನ್ನು ದೇವರ ಮಗನೆಂದು ಕರೆಯುವುದಕ್ಕಿಂತ ಹೆಚ್ಚಿನ ದೇವತ್ವದ ಅನುಭವವನ್ನು ಭಾರತೀಯರಂತೆ ಪಾಶ್ಚಾತ್ಯರು ಪಡೆದಿರುವುದಿಲ್ಲ. ದೇವರನ್ನು ಎದುರಿಗೆ ನಿಲ್ಲಿಸಿಕೊಂಡು ಸಖನಂತೆ, ಸ್ವಾಮಿಯಂತೆ, ಪತಿಯಂತೆ, ತನಯನಂತೆ ಮಾತಾಡಿದ ಭಾಗ್ಯವಂತ ಸಾಹಿತ್ಯ ಭರತಖಂಡದಲ್ಲಿ ವಿನಾ ಅನ್ಯತ್ರ ಈ ಪ್ರಮಾಣದಲ್ಲಿರಲು ಸಾಧ್ಯವಿಲ್ಲ. ಭಾರತೀಯರ ಮನಸ್ಸು ಬೆಳೆದಿರುವ ರೀತಿಯೇ ಬೇರೆ. ಅದಕ್ಕೆ ತಕ್ಕಂತೆ ಭಾರತೀಯರ ಅನುಭವವೂ ಬೇರೆ.

ವಿದ್ಯಾರಣ್ಯಸ್ವಾಮಿಗಳು **'ಸರ್ವದರ್ಶನಸಂಗ್ರಹ'**ವೆಂಬ ಮತಗಳ ಇತಿಹಾಸ ಗ್ರಂಥದಲ್ಲಿ ಅನೇಕ ದರ್ಶನಗಳ ಉಗಮ-ವಿಕಾಸಗಳನ್ನು ತಿಳಿಸುತ್ತಾ ಕಡೆಯಲ್ಲಿ ಶಾಂಕರದರ್ಶನವನ್ನು ಮತ್ತಷ್ಟು ವಿಸ್ತರಿಸಿ—**"ಇತಿ ಶ್ರೀ ಸಾಯಣಾಚಾರ್ಯ ವಿರಚಿತೇ ಸರ್ವದರ್ಶನಸಂಗ್ರಹೇ, ಸಕಲದರ್ಶನ ಶಿರೋತರ್ನ್ನಂ ಶಾಂಕರದರ್ಶನಂ ಸಮಾಪ್ತಂ"** ಎಂದು ಅಭಿಮಾನದಿಂದ ಬರೆದಿರುವಂತೆ, ಲೇಖಕನಾದರೂ ಇತರ ದೇಶಗಳಲ್ಲಿರುವ ಹರಿದಾಸ ಸಾಹಿತ್ಯವನ್ನು ವಿಮರ್ಶಿಸಿ, ಸಕಲ ಸಾಹಿತ್ಯ ಶಿರೋರತ್ನದಂತಿರುವುದು **ಕನ್ನಡ ಹರಿದಾಸ ಸಾಹಿತ್ಯ**ವೆಂದು ಬರೆದರೆ ಅಪರಾಧವಾಗುವುದಿಲ್ಲ. ಏಕೆಂದರೆ ಎಷ್ಟೆಷ್ಟು ತೂಕಮಾಡಿ ನೋಡಿದರೂ ಕನ್ನಡ ದಾಸಸಾಹಿತ್ಯವಿರುವುದು ಹಾಗೆ; ಬರೆಯುವುದೂ ಅದಕ್ಕೇ!

ಭಾಷೆಯಲ್ಲಿ ಪ್ರೌಢ ಗ್ರಂಥಗಳ ಸ್ಥಾನ ಬೇರೆ. ಪ್ರೌಢ ಗ್ರಂಥಗಳನ್ನು ಬರೆದಿರುವ ಕವಿಗಳು ಮಹಾಪಂಡಿತರು. ಆದರೆ ಅವರ ಗ್ರಂಥಗಳನ್ನು ಯಾವ ದೇಶದಲ್ಲೂ ವಾಲ್ಮೀಕರ ರಾಮಾಯಣದಂತೆ—ವ್ಯಾಸರ ಗೀತೆಯಂತೆ, ನಿಖಿಲ ಭಾರತದ ಹರಿದಾಸ ಪ್ರಬಂಧಗಳಂತೆ—ದೇವಗೃಹದ

Sri Vidyabharathi Book Centre, Sringeri

CC-O. In Public Domain. Digitized by eGangotri

ವ್ಯಾಸಪೀಠವಲ್ಲಿಟ್ಟು ಜನರು ಪಾರಾಯಣ ಮಾಡುತ್ತಿಲ್ಲ. ಮಹಾಪಂಡಿತರ ಪ್ರೌಢ ಗ್ರಂಥಗಳು ಭಾಷಾಪಾಂಡಿತ್ಯವನ್ನು ಸಂಪಾದಿಸುವುದಕ್ಕೆ ಮಾತ್ರ ಸಹಕಾರಿಗಳು. ಪ್ರೌಢಗ್ರಂಥಗಳು, ವಿದ್ವತ್ಪರೀಕ್ಷೆಗಳಲ್ಲಿ ಹೆಚ್ಚು ಅಂಕಿಗಳನ್ನು ಕೊಡಿಸುವುದಕ್ಕೆ ಸಹಕಾರಿಗಳು. ಕಚೇರಿಗೆ ಹೋಗುವಾಗ ಬಿಗಿದು ಕಟ್ಟಿಕೊಳ್ಳುವ ತೊಡಿಗೆಯಂತೆ ಪ್ರೌಢ ಸಾಹಿತ್ಯವಿದ್ದರೆ, ಮನೆಯಲ್ಲಿ ಜೀವನವನ್ನು ಸುಖಮಯಮಾಡುವ ಉಡಿಗೆಯಂತಿರುವುದು ದಾಸಸಾಹಿತ್ಯ.

ಸಾಹಿತ್ಯದ ರುಚಿ ಬಲ್ಲ ಪಾಶ್ಚಾತ್ಯ ವಿಮರ್ಶಕರು ಸಾಹಿತ್ಯ ಹೇಗಿರಬೇಕೆಂಬುದನ್ನು ಸುಂದರವಾಗಿ ವರ್ಣಿಸಿರುವ ಮಾತಿನ ತಾತ್ಪರ್ಯವನ್ನು ಕನ್ನಡದಲ್ಲಿ ಕೊಟ್ಟರೆ ಈ ಸಂದರ್ಭಕ್ಕೆ ಬಲು ಹೊಂದಿಕೆಯಾಗುವುದು. ಆ ಮಾತುಗಳೆಂದರೆ:

ಮಿಲ್ಟನ್ : ಇಹಪರಗಳೆರಡಕ್ಕೂ ಸಾಧಕವಾದ—ಆತ್ಮಸಿದ್ಧಿಯನ್ನು ಪಡೆದ ಮಹಾನುಭಾವರ ಅನುಭವದ ಉದ್ಗಾರ—ಸಾಹಿತ್ಯ.

ಕೀಟ್ಸ್ : ಮನುಷ್ಯನ ಶಬ್ದರಚನಾಚಾತುರ್ಯವು, ತನ್ನಿಂದ ತಾನೇ ಹೊರಸೂಸಿ ಬರುತ್ತಿದ್ದರೆ—ಇತರ ಕಟ್ಟುಗಳಿಗೆ ಸಿಕ್ಕಿ ಪಕ್ವವಾಗದೆ, ಇತರ ಪ್ರೇರಣೆಗಳಿಂದ ಬಾಧಿತವಾಗದೆ, ತೇಜೋವಂತವಾಗಿ ಶಕ್ತಿಯುತವಾಗಿ ಪ್ರಸ್ಫುರಿಸಿ ಬರುತ್ತಿರುವಂತೆ ಪ್ರಭಾವಶಾಲಿಯಾಗಿದ್ದರೆ—ಅದು ಸಾಹಿತ್ಯ.

ವರ್ಡ್ಸ್‌ವರ್ತ್ : ಜ್ಞಾನದ ತಿರುಳಿನಂತೆ ಮಾತನ್ನು ಕಳೆಕಟ್ಟಿಸಿದರೆ—ಶಾಸ್ತ್ರಸಮ್ಮತವಾಗಿ ಆವೇಶ ಬರುವಂತೆ ತಿಳಿಸಿದರೆ—ಅದು ಸಾಹಿತ್ಯ.

ಶೆಲ್ಲಿ : ಸಾಹಿತಿ ಅಥವಾ ಕವಿಯು ಪ್ರಪಂಚದ ಅನಂಗೀಕೃತ ಶಾಸನಕರ್ತನಂತಿರುತ್ತಾನೆ. ವಿಷಯದಿಂದ, ಶೈಲಿಯಿಂದ, ಪ್ರಪಂಚದ ಅನುಭವವನ್ನು ವಿಮರ್ಶಿಸಿಕೊಡುವವನು ಸಾಹಿತಿ. ಅಂತಹ ಸಾಹಿತಿಯ ಮಾತು—ಸಾಹಿತ್ಯ.

ಪೋಪ್ : ಮಾನವ ಭಾಷೆಯ ಪರಿಪೂರ್ಣತೆಯು ಪದ್ಯ. ಎಲ್ಲರ ಮನದಲ್ಲಿದ್ದು ಭಾಷೆಗಿಳಿಸಲು ಸಾಧ್ಯವಾಗದಿದ್ದುದನ್ನು ಸುಂದರ ಶಬ್ದಗಳಿಂದ ಹೇಳಿದರೆ ಅದು ಪದ್ಯ. ಆ ಪದ್ಯ—ಸಾಹಿತ್ಯ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮತ್ಯೂರ್ಸ್ : ಒಬ್ಬನ ಆತ್ಮೋದ್ಧಾರಮಾಡಲು ಸಮರ್ಥವಾಗಿದ್ದರೆ ಅದು ಪದ್ಯ. ಅದೇ—ಸಾಹಿತ್ಯ.

ಷೇಕ್ಸ್‌ಪಿಯರ್ : ಕಲ್ಪನಾ ಸಾಮ್ರಾಜ್ಯದಲ್ಲಿ ವಿಹರಿಸುತ್ತಾ, ಅವ್ಯಕ್ತ ತತ್ತ್ವವನ್ನು ವ್ಯಕ್ತಗೊಳಿಸಿ, ದೇಶಕಾಲಗಳ ಪರಿಮಿತಿಯಲ್ಲಿ ಅಮೂರ್ತವಾದುದನ್ನು ಮೂರ್ತಿಮಂತವಾಗಿ ಕಣ್ಣೆದುರಿಗೆ ನಿಲ್ಲಿಸಿ, ಕಬ್ಬವನ್ನು ಹಬ್ಬಗೊಳಿಸುವವನು ಕವಿ. ಆವನ ಕಾವ್ಯ—ಸಾಹಿತ್ಯ.

ಕೋಲ್‌ರಿಜ್ : ನಂಬಲಾಗದ ಸಂದೇಹಗ್ರಸ್ತ ವಿಷಯವನ್ನು ಶಬ್ದ ಸಂಪತ್ತಿನಿಂದ ತತ್ಕಾಲದಲ್ಲಿ ನಂಬುವಂತೆ ಮಾಡುವವನು ಕವಿ. ಅವನ ಕಾವ್ಯ —ಸಾಹಿತ್ಯ.

ಮೆಥ್ಯು ಆರ್ನಾಲ್ಡ್ : ಜೀವನದ ಪರಿಪೂರ್ಣ ವಿಮರ್ಶೆ—ಸಾಹಿತ್ಯ.

ಹೀಗೆ ಮೇಲ್ಕಂಡ ನವಮಣಿಗಳ ಮಾತಿನಂತೆ ವಿಮರ್ಶಿಸಿ ನೋಡಿದರೂ ಎಲ್ಲ ಗುಣಗಳಿಂದ ಪರಿಪೂರ್ಣವಾಗಿ 'ಅತ್ಯತಿಷ್ಠದ್ದಶಾಂಗುಲಂ' ಎಂಬ ಶ್ರುತಿ ವಾಕ್ಯದಂತೆ ದಶಾಧಿಕ ಗುಣವಂತರಾಗಿರುವುದು ಕನ್ನಡ ಹರಿದಾಸ ಸಾಹಿತ್ಯ.

ಕೆಲವು ವರ್ಷಗಳಿಂದ ಕನ್ನಡ ಸಾಹಿತ್ಯವನ್ನು—ಇದು ಜೈನ ಸಾಹಿತ್ಯ, ಇದು ವೀರಶೈವಸಾಹಿತ್ಯ, ಇದು ಬ್ರಾಹ್ಮಣಸಾಹಿತ್ಯ ಎಂದು ಜಾತಿಭೂತದ ಬಾಯಲ್ಲಿಟ್ಟು ಕರೆಯುವ ವಾಡಿಕೆ ಏಕೋ ಬಂದುಬಿಟ್ಟಿದೆ. ಈ ಜಾತಿಭೂತ ಆಧುನಿಕರಿಗೆ ಹಿಡಿದಿರುವಂತೆ ಪ್ರಾಚೀನರಿಗೆ ಹಿಡಿದಿರಲಿಲ್ಲ ಎಂಬುವುದೂ ಕಂಡುಬರುತ್ತಿದೆ. ಈ ಮೂರರಲ್ಲೂ ಪ್ರೌಢ ಅಥವಾ ಪಂಡಿತ ಸಾಹಿತ್ಯ, ಸರಳ ಅಥವಾ ಸಂತ ಸಾಹಿತ್ಯವಿದ್ದು, ಪಂಡಿತಸಾಹಿತ್ಯಪಾಠ ದಲ್ಲೂ ಸಂತಸಾಹಿತ್ಯಪಠಣೆಯಲ್ಲೂ ನಿಂತಿರುವುದು ಕಂಡುಬರುತ್ತಿದೆ. ಈ ಮೂರರಲ್ಲೂ ಸಂತಸಾಹಿತ್ಯಭಾಗವು ಸಾಂಪ್ರದಾಯಿಕ ಕೆಲವು ಭಾಗಗಳ ವಿನಾ ಮಿಕ್ಕವು ಸಾರ್ವಜನಿಕವಾಗಿರುವುದು ಸಹ ಕಂಡುಬರುತ್ತಿದೆ. ಇಷ್ಟು ಉಪ ಯುಕ್ತ ಸಾಹಿತ್ಯವನ್ನು ಒಟ್ಟುಗೂಡಿಸಿ ಪರಸ್ಪರ ಸಾಮ್ಯಗಳನ್ನು ತಿಳಿಸುತ್ತ ಬಂದರೆ ಹರಿದು ಹಂಚಿದ ಕರ್ನಾಟಕದ ಏಕೀಕರಣಕ್ಕೆ ದೊಡ್ಡದೊಂದು ಅಸ್ತಿಭಾರವನ್ನು ಹಾಕಿದಂತಾಗುತ್ತದೆ. ವಿಶ್ವವಿದ್ಯಾನಿಲಯದಂಥ, ಕನ್ನಡ ಪರಿಷತ್ತಿನಂಥ ಮಹಾಸಂಸ್ಥೆಗಳ ಕಾರ್ಯವಿದಾಗಿರುವುದರಿಂದ ಅಧಿಕಾರಮುದ್ರೆ

Sri Vidyabharathi Book Centre, Sringeri

ಯೊತ್ತಿ ಮಾತಾಡುವ ಶಕ್ತಿ ಏಕಮಾತ್ರ ವ್ಯಕ್ತಿಯಾಗಿರುವ ಗ್ರಂಥಕರ್ತನಿಗೆ ಎಲ್ಲಿಂದ ಬರಬೇಕು? ಹರಿದಾಸಸಾಹಿತ್ಯದಲ್ಲೇನಿದೆಯೆಂದು ಕೇಳಿದಾಗ ಮಾತ್ರ —ಇದೆ; ಬೇಕಾದಷ್ಟಿದೆ; ನಿಮಗೆ ಸಾಕಾದಷ್ಟು ಕೊಡಲು ಸಿದ್ಧವಿದೆ; ಎಂದು ಪ್ರಸಾದವಿನಿಯೋಗ ಮಾಡುವ ಹಕ್ಕು ತಪ್ಪದೆ ಲೇಖಕನಿಗಿರುತ್ತದೆ.

ಸಾರಾಂಶದ ಮಾತೆಂದರೆ, ಕರ್ನಾಟಕದ ಜನರು ಕನ್ನಡಿಗರಾಗಬೇಕು. ಕನ್ನಡ ಕನ್ನೆಯರು ಕನ್ನಡ ಕನ್ನಡಿಯಲ್ಲಿ ಕನ್-ನಡೆಯಿಂದ ಕನ್ನಡದ ಹಾಡು ಹಾಡಬೇಕು. ನಾಡು ಶೋಭಿಸಬೇಕು. ನುಡಿ ಬೆಳಗಬೇಕು.

ಗ್ರಂಥವಿಮರ್ಶಕರಿಗೆ ಸೂಚನೆ

ಗದ್ಯಪದ್ಯಾತ್ಮಕ ಗ್ರಂಥಗಳನ್ನೋದುವುದೊಂದು ಪ್ರತ್ಯೇಕ ಕಲೆ. ಚತುಷ್ಷಷ್ಟಿ ಕಲೆಗಳಲ್ಲಿ ಒಂದಾಗಿ ಪ್ರಸಿದ್ಧವಾಗಿರುವ ಆ ಕಲೆ ಗಮಕ ಕಲೆ. ವ್ಯಾಖ್ಯಾಗಾಯನದಂತೆ ಪದ್ಯವನ್ನು ರಾಗವಾಗಿ ರಸಭಾವಗಳರಿಯದೆ ಹಾಡಿದ ಮಾತ್ರಕ್ಕೆ ಅದು ಗಮಕ ಕಲೆಯೆನಿಸುವುದಿಲ್ಲ. ರಸಭಾವಗಳು ಆವಿರ್ಭವಿಸು ವಂತೆ ಗದ್ಯವನ್ನು ರಾಗವಿಲ್ಲದೆ ಓದಿದರೂ ಅದು ನಿಜವಾದ ಗಮಕಕಲೆಯೆನಿಸು ತ್ತದೆ. ಪ್ರಕೃತ ನಮ್ಮೀ ಗ್ರಂಥವನ್ನು ವಿಮರ್ಶಿಸುವ ವಿದ್ವನ್ಮಣಿಗಳು, ಗಮಕಿ ಗಳಂತೆ ಒಂದಲ್ಲ—ಎರಡು ಸಲ ಓದಿ ಧಾಟಿಯನ್ನು ಕುದುರಿಸಿಕೊಂಡು ಮನಸ್ಸಿ ನಲ್ಲಿ ವಿಮರ್ಶೆಮಾಡಿಕೊಳ್ಳಬೇಕು. ಹಾಗೆ ಮಾಡಿಕೊಂಡ ಮನಸ್ಸಿನ ಭಾಷೆ ಯನ್ನು ಭಾವಪೂರ್ಣವಾಗಿ ಶಬ್ದದಲ್ಲಿಡಬೇಕು. ವಿಮರ್ಶೆ(criticism)ಎಂದರೆ ಖಂಡನೆ ಎಂದು ಅರ್ಥಮಾಡಿಕೊಂಡರಾಗುವುದಿಲ್ಲ. 'Read yourself into Shakespeare'—ಷೇಕ್ಸಪಿಯರ್ ನೀನೆಂದು ಭಾವಿಸಿ ಓದಿ ವಿಮರ್ಶಿಸ ಬೇಕು. ಉಗಾಭೋಗ ಪದ ಸುಳಾದಿ ಲಾವಣಿ ಮೊದಲಾದವುಗಳ ಧಾಟಿ ತಿಳಿಯದೆ ಹೋಗಬಹುದು. ವೃತ್ತಗಳ ಹೆಸರು ಸಹ ಕೇಳದವರು ಓದುವ ಚಟದಲ್ಲಿ ವಿವಿಧ ವೃತ್ತಗಳು ಒಂದಾಗುತ್ತಲೊಂದು ಬಂದರೂ ಒಂದು ಬಗೆಯ ಧಾಟಿಯಿಂದ ಓದುವುದನ್ನು ಕಾಣುತ್ತಿರುವಂತೆ ಪದ ಸುಳಾದಿಗಳನ್ನಾದರೂ ಓದಿಬಿಡಬಹುದು.

ಬರ್ನಾರ್ಡ್ ಷಾ ಮಹಾಶಯನು ತನ್ನ ಉದ್ದಾಮ ಗ್ರಂಥಗಳನ್ನು ಓದಿ ಬೆಲೆಕಟ್ಟುವ ಜನರು ಗ್ರೇಟ್ ಬ್ರಿಟನ್ನಿನಲ್ಲಿಲ್ಲವಾಯಿತೇ' ಎಂದು ಒಂದು ಬಾರಿ ಮಿಡುಕಿ ಆಕ್ಷೇಪಿಸಿದನಂತೆ! ಆಗ ಬ್ರಿಟನ್ನಿನ ಒಂದೊಂದು ವಿದ್ಯಾ

Sri Vidyabharathi Book Centre, Sringeri

 CC-0. In Public Domain. Digitized by eGangotri

ಸಂಸ್ಥೆಯುವರೂ ಷಾ ಮಹಾಶಯನ ಪುಸ್ತಕಗಳ ಹಾಳೆಗಳನ್ನು ಮಗುಚಿ ಹೊಗಳಲಾರಂಭಿಸಿದರಂತೆ! ಈ ಟೊಳ್ಳುತನವನ್ನು ಪರೀಕ್ಷಿಸಬೇಕೆಂದು ಷಾ ಮಹಾಶಯನು ಕೆಲಸಕ್ಕೆ ಬಾರದ ಒಂದು ಪುಸ್ತಕವನ್ನು ಪ್ರಕಟಿಸಿದನಂತೆ! ಆಗಲೂ ಬ್ರಿಟನ್ನಿನವರು 'ಷಾ, ಷಾ' ಎಂದು ಹೊಗಳಿದರಂತೆ! ಷಾ ಮಹಾಶಯನು ಸದ್ದಡಗುವತನಕ ಕಾದಿದ್ದು ಈಗ ಬ್ರಿಟನ್ನಿನವರ ಟೊಳ್ಳುತನ ಗಟ್ಟಿಯಾಯಿತೆಂದು ಸಾರಿದನಂತೆ! ನುಂಗಬಾರದ ತುತ್ತು ಷಾ! ಜನರೇನು ಮಾಡಬಲ್ಲರು?

ಈ ಬಗೆಯ ಪರಿಸ್ಥಿತಿ ನಮ್ಮ ಕರ್ನಾಟಕದಲ್ಲಿಲ್ಲವೆಂಬುವುದು ನಮ್ಮ ನಂಬಿಕೆ. ಪ್ರಹಸನಪಟುಗಳಾದ ಕೈಲಾಸಂರವರ 'ಟೊಳ್ಳು ಗಟ್ಟಿ'ಯನ್ನು ನಮ್ಮ ಶಾಲಾಬಾಲಕರು ಸಹ ಸವಿಕಟ್ಟಾಗಿ ಓದಲು ಕಲಿತಿದ್ದಾರೆ. ಅಂದಮೇಲೆ ನಮ್ಮ ಗ್ರಂಥದ ವಿಮರ್ಶಕ ವಿದ್ವನ್ಮಣಿಗಳು ತಪ್ಪುಗಳು ಇದ್ದರೂ ತಿದ್ದಿಕೊಂಡು ಓದುವರೆಂದೇ ನಮ್ಮ ಭರವಸೆ. ಆದರೆ ಇದಕ್ಕೆ ಬೇಕಾಗಿರುವುದು ಸ್ವಲ್ಪ ಪ್ರಯತ್ನ. ಗ್ರಂಥದಲ್ಲಿ ಕ್ಲಿಷ್ಟಪದಗಳ ಕೋಷ್ಟಕವನ್ನು ಬೇಕೆಂದೇ ಕೊಟ್ಟಿಲ್ಲ. ಓದುವ ಧಾಟಿಯಲ್ಲಿ ಕ್ಲಿಷ್ಟತೆಯನ್ನುಂಟು ಮಾಡುವ ಶೈಲಿ ಹರಿದಾಸ ಸಾಹಿತ್ಯದಲ್ಲಿಲ್ಲ. ಈ ಎಲ್ಲ ವಿವರಗಳನ್ನು ಮನಸ್ಸಿನಲ್ಲಿಟ್ಟುಕೊಂಡು ನಮ್ಮನ್ನು ಕ್ಷಮಿಸಿ ವಿಮರ್ಶೆ ಮಾಡಬೇಕೆಂದು ಮತ್ತೊಮ್ಮೆ ಸೂಚಿಸುತ್ತೇನೆ. ಬೇಸಿಕ್ ಇಂಗ್ಲೀಷಿನಲ್ಲಿ ೮೫೦ ಶಬ್ದಗಳಿಂದ ಪ್ರಪಂಚದ ಜ್ಞಾನವನ್ನು ಕೊಡಬೇಕೆಂದು ತಜ್ಞರು ಹವಣಿಸುತ್ತಿದ್ದಾರೆ. ೫೦೦ ಶಬ್ದಗಳಿಗಿಂತ ಕನ್ನಡ ಹರಿದಾಸರು ಹೆಚ್ಚಾಗಿ ಉಪಯೋಗಿಸಿ ಪ್ರಪಂಚದ ಜ್ಞಾನವನ್ನು ಮಾಡಿಕೊಟ್ಟಿರುವರೇ ಎಂಬುದನ್ನೂ ಸಂಶೋಧಕರು ಶೋಧಿಸಿ ಸಂತೋಷಪಡಬೇಕೆಂದು ಮತ್ತೊಂದು ಸವಿನಯ ಸೂಚನೆ.

ಉಪಕಾರ ಸ್ಮರಣೆ

ಕನ್ನಡ ಹರಿದಾಸ ಸಾಹಿತ್ಯ ವಿಮರ್ಶಾತ್ಮಕ ಗ್ರಂಥವನ್ನು ಬರೆಯಬೇಕೆಂದು ಉದ್ದೇಶಿಸಿದಾಗ, ಸಂಗೀತ ಶಾಸ್ತ್ರಕ್ಕೆ ಸಂಬಂಧಪಟ್ಟ ವಿಷಯ ತಿಳಿಸಬೇಕೆಂದು ಮೈಸೂರು ಶ್ರೀಮನ್ಮಹಾರಾಜರವರ ಆಸ್ಥಾನ ಪಂಡಿತ ಕಿನ್ನರಿವಿದ್ವಾನ್ ಹುಲುಗೂರು ಕೃಷ್ಣಾಚಾರ್ಯರನ್ನು ಕೇಳಿಕೊಂಡೆ. ಕಿನ್ನರಿಯವರು ದಯವಿಟ್ಟು ೨೫ ಪುಟಗಳ ದೊಡ್ಡದೊಂದು ಪ್ರಬಂಧವನ್ನೇ ಬರೆದು

Sri Vidyabharathi Book Centre, Sringeri

CC-O. In Public Domain. Digitized by eGangotri

ಕಳುಹಿಸಿದರು. ಅದುವರೆಗೆ ನಾನು ಸಂಗ್ರಹಿಸಿದ್ದ ವಿಷಯಗಳ ಜೊತೆಗೆ ಆಚಾರ್ಯರ ಪ್ರಬಂಧವೂ ಸಾಧಕವಾಗಿ ನನ್ನ ರೀತಿಯಲ್ಲಿ ಸಂಗೀತಕ್ಕೆ ಸಂಬಂಧಿಸಿದ ದ್ವಿತೀಯಾಧ್ಯಾಯವನ್ನು ಬರೆಯಲು ಸಹಕಾರಿಯಾಯಿತು. ಮತ್ತೆ ಹುಲುಗೂರವರು ತಮ್ಮ ಪ್ರಬಂಧವನ್ನು ತಾವು ಬರೆದಿರುವಂತೆಯೇ ಮುದ್ರಿಸಬೇಕೆಂದು ಅಪೇಕ್ಷಿಸಪಟ್ಟರು. ಸಂಗೀತಶಾಸ್ತ್ರವಿಷಯವನ್ನು ಹೆಚ್ಚಾಗಿ ತಿಳಿದುಕೊಳ್ಳಬೇಕೆಂಬುವವರ ಅನುಕೂಲಕ್ಕಾಗಿ ಅವರದೇ ಒಂದು ಕೈಪಿಡಿಯಾಗಿರಲೆಂದು ಪ್ರತ್ಯೇಕವಾಗಿ ಮುದ್ರಣಮಾಡಿಸಿ ಪ್ರಕಟಿಸಿರುತ್ತೇನೆ. ಈ ಎಲ್ಲ ಉಪಕಾರದ ಬಗ್ಗೆ ಶ್ರೀ ಆಚಾರ್ಯರವರನ್ನು ವಂದಿಸುತ್ತೇನೆ.

ಹರಿದಾಸರ ಉಗಾಭೋಗ ಮತ್ತು ಸುಳಾದಿಗಳ ಹಾಡುವ ಪುರಾತನ ಸಂಪ್ರದಾಯವನ್ನು ಹಾಡಿತೋರಿಸಿ, ಆ ಸಾಹಿತ್ಯಕ್ಕೆ ನಾನು ಹಾಡಿದಂತೆ ಸ್ವರಚಿಟ್ಟಿಗಳನ್ನು ಹಾಕಿಕೊಡಬೇಕೆಂದು ಪ್ರಾರ್ಥಿಸಿದಾಗ, ಆಸ್ಥಾನವಿದ್ವಾನ್ ಸೋಸಲೆ ರಾಮದಾಸರೂ, ಸಂಗೀತವಿದ್ವಾನ್ ಪದ್ಮನಾಭರಾಯರೂ ನೆರವಾಗಿ ಮಾಡಿದ ಸಹಾಯಕ್ಕೆ ಅವರೀರ್ವರನ್ನೂ ವಂದಿಸುತ್ತೇನೆ.

ಶ್ರೀಮನ್ಮಹಾರಾಜರ ಕಾಲೇಜು ತೆಲುಗು ಪಂಡಿತರು ಶ್ರೀಮಾನ್ ಅನಂತಕೃಷ್ಣಶರ್ಮರ ಸಹಾಯ ಬೇಡಿದಾಗ, ನಲವತ್ತು ವರ್ಷಗಳ ಹಿಂದೆ ಎಟ್ಟಿಯಾಪುರಂ ಸಂಸ್ಥಾನದ ಸಂಗೀತ-ಸಾಹಿತ್ಯ ವಿದ್ವಾನ್ ಸುಬ್ಬರಾಮ ದೀಕ್ಷಿತರವರು ಪ್ರಕಟಿಸಿದ ಎರಡು ಗ್ರಂಥಗಳನ್ನು ಒದಗಿಸಿಕೊಟ್ಟು ಅವರು ಮಾಡಿದ ಸಹಾಯಕ್ಕಾಗಿ ಅವರನ್ನು ವಂದಿಸುತ್ತೇನೆ.

ನಾನು ಬರೆಯುವ ಗ್ರಂಥಗಳಿಗೆ ದೊಡ್ಡವರಿಂದ ಮುನ್ನುಡಿಯನ್ನು ಬರೆಯಿಸುವ ವಾಡಿಕೆಯನ್ನು ಇಟ್ಟುಕೊಂಡಿರಲಿಲ್ಲ. ಆದರೆ ಈ ಭಾರಿ ಮಾತ್ರ ನನ್ನ ಸಂಕಲ್ಪವನ್ನು ಬದಲಾಯಿಸಬೇಕಾಯಿತು. ಹೆಸರಿನ ದೊಡ್ಡಸ್ತಿಕೆಗಿಂತ ನಿಜವಾದ ದೊಡ್ಡಸ್ತಿಕೆ, ನಿಜವಾದ ಸಾಹಿತ್ಯ-ಪಾಂಡಿತ್ಯ, ಎರಡೂ ಉಳ್ಳವರನ್ನು ಕಂಡು ನನ್ನೀಗ್ರಂಥವನ್ನು ಓದಿತೋರಿಸಬೇಕೆನಿಸಿತು. ಬಯಕೆಗೆ ತಕ್ಕಂತೆ ಆಂಗ್ಲ-ಕರ್ನಾಟಕ ಭಾಷೆಗಳೆರಡರಲ್ಲೂ ಬಲು ಪರಿಶ್ರಮ ಮಾಡಿರುವ ಅಗ್ರಗಣ್ಯರ ಪಜ್ತಿಯಲ್ಲಿರುವ—ತಮ್ಮನ್ನು ತಾವು ಯಾವಾಗಲೂ ಮರೆಸಿಕೊಳ್ಳುತ್ತಿರುವ—ಮೈಸೂರು ಸಿವಿಲ್ ಸರ್ವಿಸ್‌ನಲ್ಲಿ ಸೀನಿಯರ್ ಅಸಿಸ್ಟೆಂಟ್ ಕಮಿಾಷನರಾಗಿರುವ ಶ್ರೀಮಾನ್ ಕೆ. ಪಿ. ರಾಮನಾಥಯ್ಯರನ್ನೂ, ನಿವೃತ್ತ ಅಸಿಸ್ಟೆಂಟ್ ಕಮಿಾಷನರ್ ಎಚ್. ನಾರಾಯಣ

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಯರನ್ನೂ ಕಂಡು ಉಭಯರಿಗೂ ಗ್ರಂಥವನ್ನು ಓದಿ ತೋರಿಸಿದೆನು. ಈರ್ವರೂ ತಮ್ಮ ಮೆಚ್ಚಿಕೆಯನ್ನು ತೋರ್ಪಡಿಸಿ ಒಂದು ಮುನ್ನುಡಿಯನ್ನು ಬರೆದುಕೊಟ್ಟರು. ಈ ಬಗ್ಗೆ ಉಭಯರನ್ನೂ ವಂದಿಸುತ್ತೇನೆ.

ಕಡೆಯದಾಗಿ—ಕೆಲಕೆಲವು ಪುರಂದರದಾಸರ ಕೀರ್ತನೆಗಳಿಗೂ ತ್ಯಾಗರಾಜರ, ದೀಕ್ಷಿತರ ಮುತ್ತು ಕ್ಷೇತ್ರಜ್ಞರ ಕೃತಿಗಳಿಗೂ ಇರುವ ಸಾಮ್ಯವನ್ನು ತೋರಿಸುತ್ತಾ ಒಬ್ಬೊಬ್ಬರೂ ಪುರಂದರದಾಸರ ಮಾರ್ಗವನ್ನು ಹೇಗೆ ಅನುಸರಿಸಿರುವರೆಂಬುದನ್ನು ಸ್ವರಸಹಿತ ಬರೆದು ಸಿದ್ಧಗೊಳಿಸಿದಾಗ, ಗ್ರಂಥ ವಿಸ್ತಾರಭಯ, ಕಾಗದದ ಅಭಾವದ ಭಯ ಎರಡೂ ನನಗುಂಟಾಯಿತು. ಆ ಕಾಲದಲ್ಲಿ ಮದ್ರಾಸ್ ಮ್ಯೂಸಿಕ್ ಅಕಾಡೆಮಿಯವರ ತ್ರೈಮಾಸಿಕ ಪತ್ರಿಕೆಯೊಂದು ನನ್ನ ಕರಗತವಾಯಿತು. ಅಕಾಡೆಮಿಯವರು ತಮ್ಮದು ತಮಿಳು ನಾಡಾದರೂ, ಕನ್ನಡ ಹರಿದಾಸ ಸಾಹಿತ್ಯದಲ್ಲಿ ತೋರಿಸುತ್ತಿರುವ ಅದರ ಶೋಧನೆಗಳನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ಶ್ರೀ ಪುರಂದರ ದಾಸರೆಂಬ ಶಿರ್‌ನಾಮೆಯಿಂದ ಇಂಗ್ಲೀಷಿನಲ್ಲಿ ಬರೆದಿರುವ ಲೇಖನವು ನನ್ನ ಬರವಣಿಗೆಗೆ ಬಲುಮಟ್ಟಿಗೆ ಹೊಂದಿಕೆಯಾಗಿರುವುದು ಕಂಡುಬಂದಿತು. ಅಕಾಡೆಮಿಯವರು ಮಾಡುತ್ತಿರುವ ಮಹಾಕಾರ್ಯವನ್ನು ಅಂಶತ್ವೇನ ಅವರ ಮಾತಿನಿಂದಲೇ ನಮ್ಮ ಗ್ರಂಥದಲ್ಲಿ ಪ್ರಕಟಿಸಿ ಹೆಚ್ಚು ಜನರಿಗೆ ತಿಳಿಯುವಂತೆ ಮಾಡಬೇಕೆಂದೆನಿಸಿತು. ಆದ್ದರಿಂದ ಅವರ ಲೇಖನವನ್ನು ಅಂಶತ್ವೇನ ಪ್ರಕಟಿಸಿರುವುದು ಮಾತ್ರವಲ್ಲದೆ ಇನ್ನೂ ವಿಶೇಷವಾಗಿ ಹರಿದಾಸ ಸಾಹಿತ್ಯದ ಪರಿಶ್ರಮ ಮಾಡಿ ಕರ್ಣಾಟಕಸಂಗೀತಕಲೆಯನ್ನು ಉತ್ತರಪ್ರಾಂತ್ಯದಲ್ಲಿ ಸಹ ವ್ಯಾಪಿಸುವಂತೆ ಮಾಡುವ ಶಕ್ತಿಯನ್ನು ಸಂಸ್ಥೆಯವರಿಗೆ ಪರಮಾತ್ಮನು ಕೊಡಲೆಂದು ಹಾರೈಸಿ, ಅವರ ಉದ್ಯಮಕ್ಕಾಗಿ ಸಂಸ್ಥೆಯವರನ್ನೆಲ್ಲಾ ಬಹುವಾಗಿ ವಂದಿಸುತ್ತೇನೆ.

೬ ಮುದ್ರಣಕಾರರ ಉಪಕಾರ ಸ್ಮರಣೆ

ಕೇವಲ ಕೀರ್ತನರಂಗದಲ್ಲೇ ವ್ಯವಸಾಯಮಾಡುತ್ತ ಅಷ್ಟರಿಂದಲೇ ತೃಪ್ತನಾಗಿದ್ದ ನನ್ನನ್ನು ಗ್ರಂಥಕಾರ್ಯಕ್ಕೂ ಪ್ರೇರಿಸಿ, ಮೊದಲಿನಿಂದ ನಾನು ಬರೆದ ಗ್ರಂಥಗಳನ್ನು ಅಕ್ಕರೆಯಿಂದ ಮುದ್ರಿಸಿಕೊಟ್ಟು ಅನೇಕ ರೀತಿಯಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ನನಗೆ ಉಪಕಾರ ಮಾಡಿರುವ ಸುಬೋಧ ವಿದ್ಯುನ್ಮುದ್ರಣಾಲಯದ ಯಜಮಾನರಾದ ಶ್ರೀಮಾನ್ ಎಂ. ರಾಮರಾಯರವರು ಈ ಗ್ರಂಥ ಮುದ್ರಣದಲ್ಲೂ ಆಸಕ್ತಿ ವಹಿಸಿ ಸಕಾಲದಲ್ಲಿ ಅಂದವಾಗಿ ಮುದ್ರಿಸಿಕೊಟ್ಟಿರುವುದಕ್ಕಾಗಿ ಅವರನ್ನು ಸಹ ಬಹಳವಾಗಿ ವಂದಿಸುತ್ತೇನೆ.

ಗ್ರಂಥಕರ್ತ

Sri Vidyabharathi Book Centre, Sringeri

CC-O. In Public Domain. Digitized by eGangotri

ಮುನ್ನುಡಿ

ಕನ್ನಡ ವಾಙ್ಮಯದಲ್ಲಿ ದಾಸಸಾಹಿತ್ಯಕ್ಕೆ ಒಂದು ವಿಶೇಷ ಸ್ಥಾನವಿದೆ. ಅದು ತನ್ನದೇ ಆದ ಪ್ರತಿಭೆಯಿಂದ ಪ್ರಕಾಶಿಸುತ್ತಲಿದೆ. ಅಂತಹ ಸಾಹಿತ್ಯವನ್ನು ವಿಮರ್ಶೆಮಾಡಿ ಈ ಗ್ರಂಥವನ್ನು ಬರೆದಿರುವವರು ತಲೆತಲಾಂತರದಿಂದ ಹರಿದಾಸರೆಂದು ಖ್ಯಾತಿಪಡೆದವರ ಕುಲದಲ್ಲಿ ಜನಿಸಿ, ಜನ್ಮಾರಭ್ಯ ದಾಸ ಸಾಹಿತ್ಯದಲ್ಲಿ ಬೆಳಗಿ, ಕೀರ್ತನಾಚಾರ್ಯರೆಂದು ಹೆಸರುಗೊಂಡ, ಪ್ರಸಿದ್ಧ ವಾಗ್ಮಿಗಳೂ ಬಹುಶ್ರುತರೂ ಆದ ಶ್ರೀ ಕೇಶವದಾಸರು. ಪ್ರೇಮಮಯರಾದ ಶ್ರೀ ದಾಸರು ನಮ್ಮಲ್ಲಿ ಇಟ್ಟುಕೊಂಡಿರುವ ಪ್ರೇಮವೇ ದಾಸಸಾಹಿತ್ಯದ ಕಡೆಗೆ ಮೊದಲಿನಿಂದ ನಮ್ಮ ಮನಸ್ಸನ್ನು ಕೊಡಲು ಅವಕಾಶ ಮಾಡಿ ಕೊಟ್ಟಿತು. ಅದರ ಫಲ ನಮ್ಮೀ ಮುನ್ನುಡಿ.

ವಿಜಯನಗರದ ಸಾಮ್ರಾಜ್ಯವು ನಾಶವಾದಾಗ ದಾಸ ಸಾಹಿತ್ಯದ ಬಹುಭಾಗವು ನಾಶವಾಗಿಹೋಯಿತು. ಈಗ ದೊರೆಯುತ್ತಿರುವುದು ಒಂದು ಅಂಶ ಮಾತ್ರ. ಪುರಂದರದಾಸರೊಬ್ಬರೇ ನಾಲ್ಕುಮುಕ್ಕಾಲು ಲಕ್ಷ ದೇವರ ನಾಮಗಳನ್ನು ರಚಿಸಿದ್ದರೆಂದು ಗೊತ್ತಾಗಿದೆ. ಅಳಿದುಹೋಗಿರುವುದಕ್ಕಾಗಿ ವ್ಯಸನಪಡುವುದಕ್ಕಿಂತ ಉಳಿದಿರುವುದು ಪೂರ್ತಿಯಾಗಿ ಅಚ್ಚಾಗಿ ಪ್ರಕಟ ವಾಗಿಲ್ಲವಲ್ಲಾ ಎಂದು ವ್ಯಸನಪಡಬೇಕಾಗಿದೆ. ಆ ಕೆಲಸ ಮೊದಲು ಆದಲ್ಲದೆ ಸಾಹಿತ್ಯದ ಸಂಪೂರ್ಣ ಸೌಂದರ್ಯವು ಜನತೆಗೆ ಗೊತ್ತಾಗುವುದಿಲ್ಲ.

ಪ್ರಕಟವಾಗಿರುವ ಭಾಗವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ, ಎಲ್ಲ ಚಳವಳಿಗಳ ಚರಿತ್ರೆಗಳಲ್ಲಿ ಕಂಡುಬಂದ ಏರಿಳಿತ ದಾಸಸಾಹಿತ್ಯದ ಬೆಳೆವಳಿಗೆ ಯಲ್ಲೂ ಕಂಡುಬಂದಿದೆ. ಈಗ ತಿಳಿದಿರುವ ಪ್ರಕಾರ ದಾಸಸಾಹಿತ್ಯದ ನಿರ್ಮಾಣಕಾರರು ೯ನೇ ಶತಮಾನದಲ್ಲಿದ್ದ ಅಚಲಾನಂದರೆಂದು ಗೊತ್ತಾಗಿದೆ. ಇವರ ಭಾಷಾಶೈಲಿ ೧೫ನೇ ಶತಮಾನದ ಭಾಷೆಯಂತಿದೆಯೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಅದು ಬರೇ ಅಭಿಪ್ರಾಯವಾಗಿದ್ದರೂ ಅಚಲಾ ನಂದರ ಪದಗಳನ್ನು ಬಿಟ್ಟರೆ ಮೂರು ಶತಮಾನಗಳನಂತರ ಬಂದ ನರಹರಿ ತೀರ್ಥರ ಕೆಲವು ದೇವರ ನಾಮಗಳ ವಿನಾ ವ್ಯವಸ್ಥೆಗೊಂಡ ಯಾವ ಹರಿದಾಸ ಸಾಹಿತ್ಯವೂ ಉಪಲಬ್ಧವಾಗಿಲ್ಲ. ೧೫-೧೬ನೇ ಶತಮಾನಗಳು ದಾಸಸಾಹಿ

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ಯದ ಉತ್ಕರ್ಷಕಾಲವೆನ್ನಬಹುದು. ಅದು ಕನ್ನಡ ರಾಜ್ಯಾಧಿಪತ್ಯದ ಸುವರ್ಣ ಯುಗ. ಶ್ರೀಪಾದರಾಯರು, ವ್ಯಾಸರಾಯರು, ಪುರಂದರದಾಸರು, ವಾದಿ ರಾಜರು, ಕನಕದಾಸರು ಇವರೆಲ್ಲಾ ಉತ್ತಮ ಶ್ರೇಣಿಯ ಹರಿದಾಸರು. ಇವರ ತರುವಾಯ ಒಂದೂವರೆ ಶತಮಾನದಷ್ಟು ಕಾಲ ಸ್ವಲ್ಪ ಮಸಕಾಗಿದ್ದು ಅನಂತರ ವಿಜಯದಾಸರು, ಗೋಪಾಲದಾಸರು, ಜಗನ್ನಾಥದಾಸರು ಮೊದ ಲಾದವರ ಪ್ರಭಾವದಿಂದ ದಾಸಸಾಹಿತ್ಯ ಮತ್ತೆ ಹೇರಳವಾಗಿ ಬೆಳೆಯಿತು. ಅನಂತರ ೧೯ನೇ ಶತಮಾನದಲ್ಲಿ ಆನಂದದಾಸರು, ಶ್ರೀನಿವಾಸದಾಸರು, ಕೃಷ್ಣದಾಸರುಗಳಿಂದ ಸ್ವಲ್ಪ ಮಾತ್ರ ಬೆಳೆಯಿತು. ಈ ೨೦ನೇ ಶತಮಾನ ದಲ್ಲಿ ಅದು ಶುದ್ಧಾಂಗವಾಗಿ ನಿಂತುಹೋಗಿದೆ.

ಪುರಂದರದಾಸರ ಕಾಲದಲ್ಲಿ ಜನಗಳಿಗೆ ಉಪದೇಶ ಮಾಡಬೇಕಾಗಿದ್ದ ವಿಷಯಗಳೆಲ್ಲವೂ ಸಂಸ್ಕೃತ ಭಾಷೆಯಲ್ಲಿದ್ದುವು. ಆ ಭಾಷೆ ಕೆಲವು ಪಂಡಿತ ರಲ್ಲಿ ಮಾತ್ರ ಅಡಗಿದ್ದು ಅದು ಜನಸಾಮಾನ್ಯರ ಸ್ವತ್ತಾಗಿರಲಿಲ್ಲ. ಜನ ಸಾಮಾನ್ಯರಿಗೆ ಉಪದೇಶಾವಳಿಯು ಮುಟ್ಟಬೇಕಾಗಿದ್ದರೆ ದೇಶಭಾಷೆಯ ಮೂಲಕವೇ ಆಗಬೇಕಾಗಿತ್ತು. ಧರ್ಮೋಪದೇಶಕ್ಕೆ ದೇಶಭಾಷೆಯನ್ನುಪ ಯೋಗಿಸುವುದು ಆ ಕಾಲದಲ್ಲಿ ಹೊಸ ಪದ್ಧತಿಯಾಗಿರಲಿಲ್ಲ. ತಮಿಳು ದೇಶ ದಲ್ಲಿ ದ್ರಾವಿಡ ಪ್ರಬಂಧಗಳು ವೇದಮಂತ್ರಗಳಷ್ಟೇ ಪ್ರಾಶಸ್ತ್ಯಪಡೆದು ಜನರ ನಿತ್ಯಪಠಣೆಯಲ್ಲಿದ್ದುವು. ಶಿವಶರಣರು ವಚನಶಾಸ್ತ್ರವನ್ನು ಪ್ರಚಾರಕ್ಕೆ ತಂದಿದ್ದರು. ಆಗಬೇಕಾದ ಕೆಲಸ ಮಾತ್ರ ಅಪಾರವಾಗಿತ್ತು. ವಚನ ಶಾಸ್ತ್ರವು ಕೇವಲ ಒಂದು ಪಂಗಡಕ್ಕೆ ಮಾತ್ರ ಸಂಬಂಧಪಟ್ಟಿತ್ತು. ಸಾಹಿತ್ಯವು ಹೆಚ್ಚು ರುಚಿಕರವಾಗಿ ಜನರ ನಿತ್ಯಬಳಕೆಯಲ್ಲಿರುವಂತೆ ಮಾಡಬೇಕಾದ ಆವಶ್ಯಕತೆ ಹೆಚ್ಚಾಗಿತ್ತು. ಈ ಕೊರತೆಗಳನ್ನು ನಿವಾರಿಸುವುದಕ್ಕೆ ಮೊದಲು ಶ್ರೀಪಾದರಾಯರೂ ವ್ಯಾಸರಾಯರೂ ಕೈಹಾಕಿದರು. ವಚನರೂಪದಲ್ಲಿ ಉಪದೇಶ ಮಾಡಿದರೆ ಜನರಿಗೆ ಹಿಡಿಸುವುದಿಲ್ಲವೆಂದು ಸಂಗೀತರೂಪದಲ್ಲಿ ಹರಡ ಲಾರಂಭಿಸಿದರು. ಶ್ರೀಪಾದರಾಯ ಮೊದಲಾದ ಯತಿಪುಂಗವರು ಮಠಾಧಿ ಪತಿಗಳಾಗಿದ್ದುದರಿಂದ ಸ್ವೇಚ್ಛೆಯಿಂದ ಜನಸಾಮಾನ್ಯರಲ್ಲಿ ಬೆರೆಯಲು ಅವಕಾಶ ಕಡಿಮೆಯಾಗಿತ್ತು. ಪುರಂದರದಾಸರು ಧರ್ಮಪ್ರಚಾರಕ್ಕಾಗಿ ತಮ್ಮ ಜೀವನವನ್ನು ಮೀಸಲುಮಾಡಿ ರಂಗಸ್ಥಳಕ್ಕೆ ಬರುತ್ತಲೇ ದಾಸಸಾಹಿತ್ಯವು ಕಳೆಗಟ್ಟಿ ಜನರ ಮನೆಮನೆಗಳಲ್ಲಿ ವ್ಯಾಪಿಸಿತು. ಸಂಗೀತಪದ್ಧತಿಯಲ್ಲಿ ಅನೇಕ

Sri Vidyabharathi Book Centre, Sringeri

CC-O. In Public Domain. Digitized by eGangotri

ಸುಧಾರಣೆಗಳಾದವು. ಉಗಾಭೋಗ ಸುಳಾದಿ ದೇವರ ನಾಮಾದಿಗಳು ಜನಪ್ರಿಯಗಳಾಗಿ ಎಲ್ಲರ ಬಾಯಲ್ಲೂ ಯಾವಾಗಲೂ ಮೊಳಗುವಂತಾದವು. ಕರ್ಣಾಟಕ ಸಂಗೀತ ಪದ್ಧತಿಗೆ ಪುರಂದರದಾಸರು ಜನ್ಮದಾತರೆಂದು ಅವರ ಹೆಸರು ಎಲ್ಲೆಲ್ಲೂ ಪ್ರಸಿದ್ಧಿಗೆ ಬಂದಿತು.

ದಾಸಸಾಹಿತ್ಯದಲ್ಲಿ ಶಬ್ದಗಳ ಜೋಡುಕಟ್ಟು ಬಹು ಸುಂದರವಾಗಿದೆ. ಕನ್ನಡ ಪದ್ಯಗಳಿಗೆ ವಾಡಿಕೆಯಾಗಿರುವ ಪಙ್ಕ್ತಿಯ ಎರಡನೆಯ ಅಕ್ಷರದ ಪ್ರಾಸದ ಜೊತೆಗೆ ಅನೇಕ ಸಂದರ್ಭಗಳಲ್ಲಿ ಕೊನೆಯ ಅಕ್ಷರದ ಪ್ರಾಸಗಳೂ ಪಙ್ಕ್ತಿಗಳ ನಡುವೆ ಅಲ್ಲಲ್ಲಿ ತಲೆದೂಗಿಸುವ ಮಧ್ಯಪ್ರಾಸಗಳೂ ಹೇರಳವಾಗಿ ಸೇರಿ ಕಾವ್ಯದ ಸೌಂದರ್ಯವನ್ನು ಹೆಚ್ಚಿಸಿವೆ. ಪ್ರಾಸದಲ್ಲಿ ಸ್ವರಗಳೂ ಲ, ನ, ಸ, ವ, ಮ, ಮುಂತಾದ ಲಲಿತವರ್ಣಗಳೂ ಬಹುಮುದ್ದಾಗಿ ಸೇರಿಕೊಂಡು ಉಚ್ಚಾರಮಾತ್ರದಿಂದ ಮನಸ್ಸಿನ ಅಭಿಪ್ರಾಯವು ಹೊರಸೂಸಿ ಬರುವಂತೆ ಮನೋಹರವಾಗಿವೆ. ಸಂಗೀತದ ಸಹಕಾರವೂ ಸೇರಿರುವುದರಿಂದ ಕಾವ್ಯದಲ್ಲಿ ರಸವು ಉಕ್ಕಿಬರುತ್ತಿದೆ. ರಸಪೋಷಣೆಯನ್ನು ಚೆನ್ನಾಗಿ ಮಾಡಬಲ್ಲ ಅಕ್ಷರಯುತ ಶಬ್ದಗಳು ಹಾಡುಗಳಲ್ಲಿ ರಮ್ಯವಾಗಿ ಹೆಣೆದುಕೊಂಡಿವೆ. ಗಹನವಾದ ತತ್ತ್ವವಿಚಾರವನ್ನು ಸುಲಭಮಾತುಗಳಲ್ಲಿ ಅಡಕವಾಗಿ ಮನಸ್ಸಿಗೆ ತಟ್ಟನೆ ಹಿಡಿಯುವಂತೆ ದೇವರನಾಮಗಳ ರಚನೆಯಾಗಿದೆ. ನೊಂದ ಮನಸ್ಸನ್ನು ಸಮಾಧಾನಗೊಳಿಸಿ ಪೂರ್ವದ ಸ್ಥಿತಿಗೆ ತರುವುದಕ್ಕಾಗಲಿ, ಉತ್ತಮಗೊಳ್ಳಬೇಕೆಂಬ ಮನಸ್ಸನ್ನು ಮೇಲ್ಮಟ್ಟಕ್ಕೆ ತೆಗೆದುಕೊಂಡು ಹೋಗುವುದಕ್ಕಾಗಲಿ, ಮಂಕು ಮನಸ್ಸನ್ನು ಸಮಾಧಾನಗೊಳಿಸಿ ಪೂರ್ವದ ಸ್ಥಿತಿಗೆ ತರುವುದಕ್ಕಾಗಲಿ, ಮಂಕು ಮನಸ್ಸನ್ನು ಎಚ್ಚರಿಸುವುದಕ್ಕಾಗಲಿ ದಾಸಸಾಹಿತ್ಯವು ದಿವ್ಯೌಷಧಿಯಂತಿದೆ. ಸುಸ್ವರದಲ್ಲಿ ಹಾಡಿದ ದಾಸಸಾಹಿತ್ಯವನ್ನು ಕೇಳಿದವರು ಎಂತಹ ಮನುಷ್ಯರಾದರೂ ತತ್ಕಾಲದಲ್ಲಿ ತಮ್ಮನ್ನು ತಾವು ಮರೆತುಕೊಂಡು ತಲ್ಲೀನರಾಗಿ ಆನಂದಪರವಶರಾಗುವುದರಲ್ಲಿ ಸಂದೇಹವಿಲ್ಲ. ಇಂತಹ ಉತ್ತಾರಕವಾದ ಸಾಹಿತ್ಯಕ್ಕೆ ಎಣೆಯಾದದ್ದು ಮತ್ತೊಂದಿಲ್ಲವೆಂದೇ ಅನ್ನಬಹುದು.

ವೀರಶೈವ ವಚನಸಾಹಿತ್ಯದ ಕರ್ತೃಗಳು ವೀರಶೈವರು ಮಾತ್ರ ಇರುವಂತೆ ದಾಸಸಾಹಿತ್ಯದ ಕರ್ತೃಗಳಲ್ಲಿ ಮಾಧ್ವರು ಮಾತ್ರವೇ ಇಲ್ಲ; ಸ್ಮಾರ್ತರೂ ಶ್ರೀವೈಷ್ಣವರೂ ಸ್ತ್ರೀಯರೂ ಬ್ರಾಹ್ಮಣೇತರರೂ ಎಲ್ಲರೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಇದ್ದಾರೆ. ಆದುದರಿಂದ ದಾಸಸಾಹಿತ್ಯವು ಎಲ್ಲ ಪಂಗಡದವರ ಸ್ವತ್ತಾಗಿರುತ್ತದೆ. ಅಲ್ಲಲ್ಲಿ ಕರ್ತೃಗಳು ಸ್ವಂತ ಮತದ ಸೂಚನೆ ಮಾಡಿದ್ದರೂ ಒಟ್ಟಿನಲ್ಲಿ ಉಪದೇಶವು ಯಾವ ಒಂದು ಪಂಗಡಕ್ಕೂ ಸಂಬಂಧಪಡದ ವಿಶ್ವಧರ್ಮವಾಗಿರುತ್ತದೆ. ಪಂಗಡಗಳ ಭೇದವನ್ನು ಲೆಕ್ಕಿಸದೆ, ಎಲ್ಲ ಪಂಗಡಗಳನ್ನೂ ಎಂದರೆ ಜನಸಾಮಾನ್ಯರನ್ನು ಒಂದೇ ಸಮನಾಗಿ ಮೇಲಕ್ಕೆತ್ತುವ ಉಪದೇಶವಾಕ್ಯಗಳು ದಾಸಸಾಹಿತ್ಯದಲ್ಲಿ ಎಲ್ಲೆಲ್ಲಿಯೂ ತುಂಬಿವೆ. ವಿಷ್ಣು ಪರವಾದ ನಾಮಗಳೇ ಬಹಳ ಮಟ್ಟಿಗೆ ಬಂದಿರುವುವೆಂದು ಜನರು ಭಾವಿಸಬಹುದಾದರೂ ಅವು ಸರ್ವಶಬ್ದವಾಚ್ಯನಾದ ಪರಬ್ರಹ್ಮನ ಸಂಕೇತನಾಮಗಳಾಗಿರುವುದರಿಂದ ದುರಭಿಮಾನವೇ ಆಗುವುದಿಲ್ಲ. ಪುರಂದರದಾಸರೇ ಈ ಭಾಗವನ್ನು ಹೇಗೆ ಸ್ಪಷ್ಟಗೊಳಿಸಿರುವರೆಂಬುದನ್ನು 'ಜಂಗಮರು ನಾವು' ಎಂಬ ನಾಮದಿಂದಲೇ ಅರ್ಥಮಾಡಿಕೊಳ್ಳಬಹುದು. ಅಭ್ಯಾಸಬಲದಿಂದ ದಾಸರುಗಳು ಅವರ ಸ್ವಂತ ಉಪಾಸ್ಯಮೂರ್ತಿಯ ಹೆಸರನ್ನು ಉಚ್ಚರಿಸುವರೇ ಹೊರತು ಆ ಹೆಸರುಗಳಿಂದ ಇತರರಿಗೆ ಅಪಾರ್ಥಮಾಡಿಕೊಳ್ಳಲು ಎಂದಿಗೂ ಅವಕಾಶವಿರುವುದಿಲ್ಲ. ಹಾಗೆ ನೋಡಿದರೆ ಬ್ರಾಹ್ಮಣರಲ್ಲಿ ಅತಿಪ್ರಬಲವಾಗಿ ಇತರರ ಕಣ್ಣಳಿಗೆ ವಿಪರೀತವಾಗಿ ತೋರುವ—ಮಡಿ, ಆಚಾರ, ಸ್ನಾನ, ಜಪ, ತಪ, ಹೋಮ ಮುಂತಾದ ಪ್ರಕ್ರಿಯೆಗಳು ಅಂತರಂಗ ಶುದ್ಧಿಯಿರದಿದ್ದರೆ ಉಪಯೋಗವಿಲ್ಲವೆಂತಲೂ ಒಬ್ಬೊಬ್ಬ ದಾಸರೂ ಅಂತಶ್ಶುದ್ಧಿಗೆ ಮಹತ್ವಕೊಟ್ಟು ಬಾಹ್ಯಾಡಂಬರವನ್ನು ಖಂಡಿಸಿರುತ್ತಾರೆ. 'ಕಣ್ಣಿನೊಳಗೆ ನೋಡು ಹರಿಯ, ಒಳಗಣ್ಣಿನಿಂದಲಿ ನೋಡು ಮೂಜಗ ಧೊರೆಯ' ಎಂಬ ದೇವರನಾಮದಲ್ಲಿ ಯೋಗಾಭ್ಯಾಸದ ಬಲದಿಂದ ಅಂತರಾತ್ಮನನ್ನು ಕಂಡುಕೊಂಡು ಆನಂದವನ್ನು ಪಡೆಯುವುದೇ ನಿಜವಾದ ಸಾಧನವೆಂದು, ಯೋಗಿಗಳ ಯೋಗಾಭ್ಯಾಸವನ್ನು ಕೊಂಡಾಡಿರುತ್ತಾರೆ. ದಾಸಸಾಹಿತ್ಯದಲ್ಲಿ ಕೇವಲ ಯೋಗವನ್ನೇ ಕುರಿತು ಹಾಡಬೇಕೆಂದರೂ ಒಬ್ಬೊಬ್ಬ ದಾಸರೂ ಹಾಡಿದ ದೇವರನಾಮಗಳು ಅಗಣಿತವಾಗಿವೆ. ಹರಿದಾಸರೆಲ್ಲರೂ ಭಕ್ತಿಪಂಥಿಗಳಾದುದರಿಂದ ಎಲ್ಲ ತರಗತಿಯ ಜನರ ಅಂತಸ್ತಿಗೆ ಸರಿಹೋಗುವಂತೆ ಸಗುಣೋಪಾಸನೆಯ ಮುಖ್ಯಾಂಗವಾದ ಮೂರ್ತಿಪೂಜೆಗೆ ವಿಶೇಷ ಪ್ರಾಶಸ್ತ್ಯಕೊಟ್ಟು ಭಕ್ತಿಪರ ದೇವರನಾಮಗಳನ್ನು ಹಾಡಿರುತ್ತಾರೆ. ಹರಿದಾಸರು ದೇವರ ಮಹಿಮೆಯನ್ನು ಕೊಂಡಾಡುವಾಗ, ಜೀವನ ಅಸ್ವಾತಂತ್ರ್ಯವನ್ನೂ ಅಶಕ್ತತೆಯನ್ನೂ ಅಪೂರ್ಣತೆಯನ್ನೂ ಮನಮರುಗು

Sri Vidyabharathi Book Centre, Sringeri

 CC-O. In Public Domain. Digitized by eGangotri

ವಂತೆ, ಕಣ್ಣೀರು ಬರುವಂತೆ, ಬಲು ಒಪ್ಪವಾಗಿ ಚಿತ್ರಿಸಿರುತ್ತಾರೆ. ಆದರೂ ಹೀನದೀನ ಮಾನವನು ಭಕ್ತನಾದರೆ, ಅವನಲ್ಲಿ ಭಕ್ತಿಯ ಆವೇಶ ಹುಟ್ಟಿ ನಾಮಸ್ಮರಣೆಯೊಂದಾದರೂ ಬಲಿತು ನಿಂತರೆ, ಅವನೇ ಮಹಾಸತ್ವಶಾಲಿ, ಅವನಿಗೇ ದೇವರು ವಶವಾಗುತ್ತಾನೆ, ಅವನು ಏನು ಮಾಡಲೂ ಸಮರ್ಥ, ಎಂದು ಮೊದಲಾದ ಅನುಭವದ ನುಡಿಗಳಿಂದ ಮಾನವನನ್ನು ಹುರಿದುಂಬಿಸಿರುತ್ತಾರೆ. ಇಷ್ಟು ಮಾತ್ರವಲ್ಲದೆ ಒಬ್ಬೊಬ್ಬ ಹರಿದಾಸರೂ ತನ್ನ ಕಾಲದೇಶಪರಿಸ್ಥಿತಿಗೆ ತಕ್ಕಂತೆ ಇಡೀ ಸಮಾಜಕ್ಕೆ ಸಂದೇಶವಾಕ್ಯಗಳನ್ನು ಸಹ ಕೊಟ್ಟಿರುತ್ತಾರೆ.

ಇವೇ ಮೊದಲಾದ ಅನೇಕ ವಿಶೇಷ ಗುಣಗಳು ಸಮಗ್ರವಾಗಿ ಪ್ರಕಾಶಿಸುವಂತೆ ಶ್ರೀ ಬೇಲೂರು ಕೇಶವದಾಸರು ಈ ಗ್ರಂಥವನ್ನು ರಚಿಸಿರುತ್ತಾರೆ. ಚಾರಿತ್ರಿಕ ದೃಷ್ಟಿಯಿಂದ ಇವರು ಮಾಡಿರುವ ವಿಮರ್ಶೆ ಬಹಳ ಬೆಲೆಯುಳ್ಳದ್ದಾಗಿರುತ್ತದೆ. ದಾಸಸಾಹಿತ್ಯದಲ್ಲಿ ಅಂಗಭೂತವಾಗಿ ಕಂಡುಬರುವ ಒಂದೊಂದು ಮುಖ್ಯ ಲಕ್ಷಣವನ್ನೂ ಒಂದೊಂದು ಪ್ರತ್ಯೇಕ ಅಧ್ಯಾಯದಲ್ಲಿ ವಿಸ್ತರಿಸಿ ಅದನ್ನು ಪೋಷಿಸುವ ಕೀರ್ತನೆಗಳ ಮಾದರಿಗಳನ್ನು ಉದಹರಿಸಿರುತ್ತಾರೆ.

ಈ ಗ್ರಂಥವು ಸಕಾಲದಲ್ಲಿ ಹೊರಬಿದ್ದಿರುವುದೊಂದು ಸಂತೋಷದ ಸಂಗತಿಯಾಗಿದೆ. ಏಕೆಂದರೆ ಈ ಕಾಲದಲ್ಲಿ ದಾಸಸಾಹಿತ್ಯ ಬೆಳೆಯುವ ಮಾತಿರಲಿ, ಇದ್ದದ್ದೆಲ್ಲಾ ಅಳಿದುಹೋಗುತ್ತಿದೆ. ಅದಕ್ಕೆ ಕಾರಣವೇನೇ ಇರಲಿ, ಬೆಳವಣಿಗೆ ನಿಂತಿರುವುದು ವಿಷಾದದ ಸಂಗತಿ. ಹೇಗಾದರೂ ಮಾಡಿ ಇರುವುದನ್ನುಳಿಸಿಕೊಂಡು ಮುಂದೆ ಬೆಳೆಯುವಂತೆ ಮಾಡುವುದು ಅಭಿಮಾನಿಗಳಿಗೆ ಕರ್ತವ್ಯ. ಈ ಕರ್ತವ್ಯನಿರ್ವಹಣೆಗೆ ಈ ಗ್ರಂಥವು ಸಹಾಯಕವಾದೀತೆಂದು ಆಶಿಸುತ್ತೇವೆ. ಇದರ ಪರಿಣಾಮವಾಗಿ ಹೊಸ ಚೈತನ್ಯದಿಂದ ಸ್ಫೂರ್ತಿಪಡೆದು ಹೊಸ ರೀತಿಯಲ್ಲೇ ದಾಸಸಾಹಿತ್ಯವು ಬೆಳೆಯುವುದಾದರೆ ಒಂದು ಸೂಚನೆಯನ್ನು ಕೊಡಲು ಬಯಸುತ್ತೇವೆ. ಇದು ಆತ್ಮಶಕ್ತಿಯ ತೇಜಸ್ಸನ್ನು ಉದ್ದೀಪನಗೊಳಿಸಿ ಮುಂದುವರಿಯುವ ಕಾಲ. ಪ್ರಾರ್ಥನೆಯನ್ನು ಮಾಡುತ್ತ, ಅನುಗ್ರಹವನ್ನು ಬೇಡುತ್ತ, ಸಿದ್ಧಿಯ ಕಾಲವನ್ನು ನಿರೀಕ್ಷಿಸುತ್ತ, ತನ್ನಲ್ಲಿ ತಾನು ತೃಪ್ತಿಪಟ್ಟುಕೊಂಡು ಸುಮ್ಮನೆ ಕುಳಿತಿರುವ ಅನುಕೂಲಕಾಲವಿದಲ್ಲ. 'ಪ್ರಯತ್ನಮೇಕಮಗ್ರತೋ ನಿಧಾಯ ಭೂತಿಮಾಪ್ನುಮಃ' ಎಂಬುದಾಗಿ

Sri Vidyabharathi Book Centre, Sringeri

 CC-O. In Public Domain. Digitized by eGangotri

೭೦೦ ವರ್ಷಗಳ ಕೆಳಗೇ ಶ್ರೀಮನ್ಮಧ್ವಾಚಾರ್ಯರು ಹೇಳಿರುವಂತೆ ಪುರುಷ ಪ್ರಯತ್ನಕ್ಕೆ ಮಹತ್ವಕೊಟ್ಟು ಮನುಷ್ಯರನ್ನು ಕಾರ್ಯತತ್ಪರರನ್ನಾಗಿ ಮಾಡಲು ಇದು ಕಾಲ. ಆಚಾರ್ಯರ ಅಮರವಾಣಿಯನ್ನು ಅಕ್ಷರಶಃ ಸತ್ಯವೆಂದು ವಿಜ್ಞಾನಶಾಸ್ತ್ರಗಳು ತೋರಿಸಿಕೊಡುತ್ತಲಿವೆ. ಇದುವರೆಗೆ ಧರ್ಮೋಪದೇಶವೂ ವಿಜ್ಞಾನಶಾಸ್ತ್ರಗಳ ಉಪದೇಶವೂ ಒಂದಕ್ಕೊಂದು ಸಂಬಂಧವಿಲ್ಲದಂತೆ ಸ್ವತಂತ್ರವಾಗಿ ಸಮಾನಾಂತರವಾಗಿ ನಡೆಯುತ್ತಿದ್ದವು. ಇನ್ನುಮೇಲೆ ಹೀಗೆ ನಡೆಯುವುದು ಸಾಧ್ಯವಲ್ಲ. ಜನರ ಮನಸ್ಸು ವಿಜ್ಞಾನಶಾಸ್ತ್ರಗಳಿಗೂ ಧರ್ಮೋಪದೇಶಕ್ಕೂ ಸಾಮರಸ್ಯವಿರುವಂತೆ ಉಪದೇಶ ಕ್ರಮವನ್ನು ರೂಪಗೊಳಿಸಿ, ಸಮಾಜದ ಅನೈಕ್ಯತೆಯನ್ನು ಪರಿಹರಿಸಿ, ಜನರಲ್ಲಿ ವಿಶೇಷವಾಗಿ ಧೈರ್ಯೋತ್ಸಾಹಗಳನ್ನು ತುಂಬಿ ಮಹತ್ಕಾರ್ಯಗಳಲ್ಲಿ ತೊಡಗುವಂತೆ ಪ್ರೇರಿಸುವ ಹೊಸ ಬಗೆಯ ಸಾಹಿತ್ಯವೇ ರಚಿತವಾಗಬೇಕು. ಹಿಂದಿನ ಕಾಲದಲ್ಲೇ ಹೊಸ ಮಾರ್ಗವನ್ನು ತೋರಿಸಿ ಸಮಾಜವನ್ನು ಕಟ್ಟಿದ ಹರಿದಾಸ ಸಾಹಿತ್ಯವು ಇಂದಿನ ಕಾಲದಲ್ಲಿ ಕಟ್ಟಲಾರದೆಂಬ ಸಂಶಯ ಯಾರಿಗೂ ಇರುವುದಿಲ್ಲ. ಈ ಬಗೆಯ ಸೂಚನೆಗೆ ಅಭಿಮಾನಿಗಳು ಬೆಂಬಲ ಕೊಡುವರೇ? ಕೀರ್ತನರಂಗದಲ್ಲೇ ನಲವತ್ತು ವರ್ಷ ಕಾಲ ನುರಿತು ಕೀರ್ತನಪ್ರಪಂಚದಲ್ಲಿ ಕ್ರಾಂತಿಯನ್ನುಂಟುಮಾಡಿ ಹಾದಿ ತೋರಿಸಿದ ಕೀರ್ತನಾಚಾರ್ಯರೇ ನಮ್ಮ ಸಲಹೆಯನ್ನು ಮನ್ನಿಸಿ ಮಾರ್ಗದರ್ಶಕರಾಗುವರೆ? ಎಂಬುದು ನಮ್ಮ ಸೂಚನೆ.

ಕೆ. ಪಿ. ರಾಮನಾಥಯ್ಯ

ಎಚ್. ನಾರಾಯಣರಾವ್

Sri Vidyabharathi Book Centre, Sringeri

CC-O. In Public Domain. Digitized by eGangotri

ಶುಭಸಂದೇಶ

(ಹರಿಮಂದಿರ ಸಂಸ್ಥೆಯ ಪೋಷಕರಾದ ಮುಂಬಯಿ ಹೈಕೋರ್ಟು ನ್ಯಾಯಾಧೀಶ ಶ್ರೀಯುತ ನಾ. ಸ್ವಾ. ಲೋಕೂರರವರ ಶುಭಸಂದೇಶ)

ಸಾಹಿತ್ಯವೆಂಬುವುದು ಭಾಷಾವ್ಯವಹಾರಕ್ಕೆ ಸಂಬಂಧಪಟ್ಟ ಬಲುಮುಖ್ಯವಾದ ಶಾಸ್ತ್ರ. ಸಾಹಿತ್ಯಜ್ಞಾನವಿಲ್ಲದೆ ಯಾವ ಶಾಸ್ತ್ರಾಭ್ಯಾಸ ಮಾಡಿದರೂ ಆ ಶಾಸ್ತ್ರವನ್ನು ಅರ್ಥವಾಗುವಂತೆ ಬರೆಯುವುದಕ್ಕಾಗಲಿ, ನಿರೂಪಿಸುವದಕ್ಕಾಗಲಿ ಸಾಧ್ಯವಾಗುವದಿಲ್ಲ. ವಿಚಿತ್ರ ಕಲ್ಪನೆಗಳಿಂದೊಡಗೂಡಿದ ಶಬ್ದಸಂಪತ್ತಿನಿಂದ ರವಿ ಕಾಣದುದನ್ನು ಕವಿ ಕಂಡನೆಂಬಂತೆ ಅಮೂರ್ತವಾದುದನ್ನು ಮೂರ್ತಗೊಳಿಸಿ ತತ್ಕಾಲದಲ್ಲಿ ಮನರಂಜನೆಯನ್ನುಂಟುಮಾಡುವುದು ಪ್ರೌಢಸಾಹಿತ್ಯವೆಂದು ಕರೆಸಿಕೊಳ್ಳುತ್ತದೆ. ಇದರಂತೆ ಅಥವಾ ಇದರಿಂದ ಪ್ರತ್ಯೇಕವಾಗಿ— ಆತ್ಮಸಾಮ್ರಾಜ್ಯದಲ್ಲಿ ವಿಹರಿಸುತ್ತ ಪ್ರೇಮಸ್ವರೂಪನಾದ ಪರಮಾತ್ಮನ ಪ್ರೇಮರಸದಲ್ಲಿ ತನ್ಮಯರಾಗಿ ತಾವು ಪಡೆದ ಆನಂದಾನುಭವಗಳನ್ನು ಪ್ರಯತ್ನವಿಲ್ಲದ ಸ್ಫೂರ್ತಿಯಿಂದ ಹಾಡಿ, ಕಲ್ಲುಮನಸ್ಸನ್ನು ಕರಗಿಸಿ, ನಾಸ್ತಿಕನನ್ನೂ ತತ್ಕಾಲದಲ್ಲಿ ಆಸ್ತಿಕನನ್ನಾಗಿ ಮಾಡಿ, ಸ್ಮರಿಸಿದಾಗೆಲ್ಲಾ ಆನಂದರಸವನ್ನು ಪ್ರಸ್ಫುರಿಸುವಂತೆ ಮಾಡುತ್ತಿರುವುದು ಸಂತಸಾಹಿತ್ಯವೆಂದು ಕರೆಸಿಕೊಳ್ಳುತ್ತದೆ. ಈ ಎರಡು ಬಗೆಯ ಸಾಹಿತ್ಯದಲ್ಲಿ ಅತ್ಯಂತ ಪೂಜ್ಯವಾಗಿರುವುದರಿಂದಲೂ, ಮಾನವನ ಜೀವನಕ್ಕೆ ಹೊಂದಿಕೊಂಡಿರುವುದರಿಂದಲೂ, ಸಂತಸಾಹಿತ್ಯಕ್ಕೆ ಯಾವ ಭಾಷೆಯಲ್ಲಿ ನೋಡಿದರೂ ಅಗ್ರಸ್ಥಾನ ದೊರೆತಿರುವುದು ಕಂಡುಬರುತ್ತದೆ.

ವಿವಿಧ ಭಾಷೆಗಳಲ್ಲಿರುವ ಸಂತಸಾಹಿತ್ಯರಾಶಿಯಲ್ಲಿ ಆರಿಸಿದರೆ ಕರ್ಣಾಟಕ ಸಂಗೀತಶಾಸ್ತ್ರನಿರ್ಮಾತರೂ ಹೊಸ ಕನ್ನಡ ಶೈಲಿಗೆ ಮಾರ್ಗದರ್ಶಕರೂ ಆದ ಕನ್ನಡ ಹರಿದಾಸರ ಸಾಹಿತ್ಯ ಉತ್ತಮೋತ್ತಮವಾದುದೆಂದು ಗೋಚರವಾಗುತ್ತದೆ. ಕನ್ನಡ ಹರಿದಾಸ ಸಾಹಿತ್ಯದಂತಹ ಸಂಗೀತಮಯ ಸಾಹಿತ್ಯವು ಇತರ ಯಾವ ಭಾಷೆಗಳಲ್ಲಿರುವುದಕ್ಕಿಂತ ದೊಡ್ಡ ಪ್ರಮಾಣದಲ್ಲಿರುವುದು ಕನ್ನಡ ಭಾಷೆಯ ಅಥವಾ ಜನತೆಯ ಭಾಗ್ಯವಾಗಿರುತ್ತದೆ. ವೇದಶಾಸ್ತ್ರ

Sri Vidyabharathi Book Centre, Sringeri

 CC-O. In Public Domain. Digitized by eGangotri

ಗಳನ್ನು ನಿಂದಿಸದೆ, ಕಾವ್ಯನಿಯಮವನ್ನು ಮೀರದೆ, ನಿಯಮಕ್ಕಾಗಿ ಅನವಶ್ಯ ಶಬ್ದಗಳನ್ನು ಪಯೋಗಿಸದೆ, ಅತ್ಯಂತ ಸರಳವೂ ಸುಂದರವೂ ಆದ ಭಾಷಾ ಸರಣಿಯಲ್ಲಿ ಹಾಡಿರುವ ಹಾಡುಗಳನ್ನು ಕನ್ನಡದಲ್ಲಿ ಅಲ್ಲದೆ ಮತ್ತೆಲ್ಲಿ ಕಾಣ ಬಹುದು?

ಐವತ್ತೇ ವರ್ಷಗಳ ಹಿಂದೆ ಕರ್ಣಾಟಕದ ಮನೆಮನೆಗಳಲ್ಲಿ ವ್ಯಾಪಿಸಿ ಜೀವನವನ್ನು ಸುಖಮಯವಾಗಿ ಮಾಡುತ್ತಿದ್ದ ಇಂತಹ ಹರಿದಾಸ ಸಾಹಿತ್ಯವು ನವನಾಗರಿಕತೆಯ ಪ್ರಭಾವದಿಂದ ಖಿಲವಾಗುತ್ತಿರುವುದನ್ನು ಕಂಡು— ಸ್ವಯಂ ವಿಜಯದಾಸರವರ ಪರಂಪರೆಯಲ್ಲಿ ಐದನೆಯವರೂ, ಕೀರ್ತನಕಲೆಯಲ್ಲಿ ನುರಿತು ಕರ್ಣಾಟಕ ಕೀರ್ತನಪ್ರಪಂಚದಲ್ಲೇ ಕ್ರಾಂತಿಯನ್ನುಂಟು ಮಾಡಿ ಹೊಸ ಮಾರ್ಗವನ್ನು ತೋರಿಸಿದವರೂ ಆದ ಕೀರ್ತನಾಚಾರ್ಯ ಶ್ರೀಮಾನ್ ಬೇಲೂರು ಕೇಶವದಾಸರು ಕನ್ನಡ ಹರಿದಾಸರ ಜೀವನಚರಿತ್ರೆಯನ್ನು ಒಂದು ಸಾವಿರ ಪುಟಗಳ ಎರಡು ಪಹಿಗಳಲ್ಲಿ ಪ್ರಕಟಿಸಿ ಈಗ 'ದಾಸ ಸಾಹಿತ್ಯ ವಿಮರ್ಶೆ' ಎಂಬ ಗ್ರಂಥವೊಂದನ್ನು ಬೆಳಕಿಗೆ ತಂದಿರುವುದು ಕನ್ನಡ ಭಾಷೆಗೂ ಜನತೆಗೂ ಮಹಾಸೇವೆಯನ್ನು ಸಲ್ಲಿಸಿದಂತಾಗಿರುತ್ತದೆ. ಗ್ರಂಥ ವಿಸ್ತಾರಭಯದಿಂಧ ಎಷ್ಟೇ ಸಂಕ್ಷೇಪಿಸಿ ಬರೆದಿದ್ದರೂ ದಾಸಸಾಹಿತ್ಯ ವಿಮರ್ಶೆಯಲ್ಲಿ ಕೊಟ್ಟಿರುವ ಸಾಹಿತ್ಯದ ಮಾದರಿಗಳನ್ನು ನೋಡಿದರೆ ಶಬ್ದಸಂಪತ್ತು, ಅರ್ಥಸಂಪತ್ತು, ರಸಭಾವಗಳ ಸಂಪತ್ತು ಒಂದಕ್ಕಿಂತ ಮತ್ತೊಂದು ಅವಿರೋಧವಾಗಿ ಪರಿಪೂರ್ಣವಾಗಿ ಪ್ರಪಂಚದ ಸಾಹಿತ್ಯದಲ್ಲಿ ಕನ್ನಡ ಹರಿದಾಸ ಸಾಹಿತ್ಯಕ್ಕೆ ಸರಿತೂಗುವ ಸಾಹಿತ್ಯ ಮತ್ತಾವ ಭಾಷೆಯಲ್ಲಾದರೂ ಇದೆಯೇ ಎಂಬ ಆಶ್ಚರ್ಯವನ್ನುಂಟುಮಾಡುತ್ತಿದೆ.

ಕನ್ನಡ ಹರಿದಾಸ ಸಾಹಿತ್ಯಸೇವೆಗಾಗಿಯೇ ಶ್ರೀಯುತ ಕೇಶವದಾಸರು ಹರಿಮಂದಿರ ಸಂಸ್ಥೆಯನ್ನೇರ್ಪಡಿಸಿ, ಹರಿದಾಸ ಸಾಹಿತ್ಯದ ಮೇಲೂ ಭಾರತೀಯ ತತ್ತ್ವಶಾಸ್ತ್ರದ ಮೇಲೂ ಅನೇಕ ಗ್ರಂಥಗಳನ್ನು ಪ್ರಕಟಿಸಬೇಕೆಂದು ಸಂಕಲ್ಪಿಸಿ ಕಾರ್ಯಾರಂಭ ಮಾಡಿರುವುದು ಅತ್ಯಂತ ಶ್ಲಾಘನೀಯವಾದ ಉದ್ಯಮವಾಗಿರುತ್ತದೆ. ಈ ಮಹಾಕಾರ್ಯವು ಕನ್ನಡ ಜನತೆಯ, ಕನ್ನಡ ಶ್ರೀಮಂತರ ಮತ್ತು ಕನ್ನಡ ರಾಜಾಧಿರಾಜರ ಬೆಂಬಲದಿಂದಲೇ ಯಶಸ್ವಿಯಾಗಿ ನಡೆಯಬೇಕಾಗಿರುವುದರಿಂದ—ವಿಶಾಲ ಕರ್ಣಾಟಕದ ಮಹನೀಯರುಗಳು ಪೋಷಕರಾಗಿಯೂ, ಆಜೀವ ಸದಸ್ಯರಾಗಿಯೂ, ಆಶ್ರಯದಾತ

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಗಿಯೂ ಮುಕ್ತಹಸ್ತದಿಂದ ಸಹಾಯಮಾಡಿ ಕನ್ನಡ ನುಡಿನಾಡುಗಳಿಗಾಗಿ ನಲವತ್ತು ವರ್ಷಗಳಿಂದ ದುಡಿದಿರುವ ಶ್ರೀ ಕೇಶವದಾಸರ ಅನುಭವದ ಪ್ರಯೋಜನವನ್ನು ಪಡೆಯಬೇಕೆಂದು ವಿನಯಪೂರ್ವಕವಾಗಿ ಸೂಚಿಸುತ್ತೇನೆ.

ನಾ. ಸ್ವಾ. ಲೋಕೂರ

ಮುಂಬಯಿ
ಜನವರಿ ೧, ೧೯೪೪

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಹರಿದಾಸ ಸಾಹಿತ್ಯ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಅಧ್ಯಾಯ ಒಂದು

ದಾಸಸಾಹಿತ್ಯದ ಸ್ವರೂಪ

ಕರ್ನಾಟಕ ಭಕ್ತವಿಜಯದ ಎರಡು ವಹಿಗಳನ್ನು ಬರೆದು ಮುಗಿಸಿದಾಗ
ಕನ್ನಡ ಹರಿದಾಸ ಸಾಹಿತ್ಯದ ಮೇಲೆ ಚಿಕ್ಕದೊಂದು ವಿಮರ್ಶಾತ್ಮಕ ಗ್ರಂಥ
ವನ್ನು ಬರೆಯಬೇಕೆಂಬ ಹಿರಿಯಾಶೆ ನನ್ನ ಮನಸ್ಸಿನಲ್ಲಿ ಅಂಕುರಿಸಿತು.
ಹೆಚ್ಚು ತಿಳಿವಳಿಕೆಯುಳ್ಳ ಅನೇಕರಿಂದ ಕೂಡಿದ ದೊಡ್ಡ ಸಂಸ್ಥೆಯಿಂದ ಆಗ
ಬೇಕಾದ ಕಾರ್ಯವಿದೆಂದು ಸಂಕೋಚದಿಂದ ತಟಸ್ಥನಾಗಿದ್ದೆನು. ಉದ್ದಾಮ
ಪಂಡಿತರಿರುವ ಇಷ್ಟು ದೊಡ್ಡ ಕನ್ನಡ ನಾಡಿನಲ್ಲಿ ಹತ್ತು ವರ್ಷಗಳ ದೀರ್ಘಾ
ವಧಿಯಲ್ಲಿ ಯಾರೂ ಕೈಕೊಳ್ಳದಿರುವುದನ್ನು ನೋಡಿ, ಮುಂದೆ ಬರೆಯಬಹು
ದಾದ ವಿದ್ವನ್ಮಣಿಗಳ ಚಿತ್ರಕ್ಕೆ ತಡಿಕೆಯಿರಲೆಂದು ಈ ಉದ್ಯಮದಲ್ಲಿ ಕೈಹಾಕಿ
ದೆನು. ದಾಸಸಾಹಿತ್ಯಸಮುದ್ರದಲ್ಲಿ ಏನಿದೆಯೆಂದು ಹುಡುಕುತ್ತ ಹೊರಟರೆ
ಯಾವುದನ್ನು ಬರೆಯಬೇಕು ಯಾವುದನ್ನು ಬಿಡಬೇಕು ಎಂಬ ಭಯ
ನನಗಾಯಿತು. ದಾಸ ಸಾಹಿತ್ಯ ಏಕಮುಖವಾಗಿಲ್ಲ. ಇಡಿಯಾದ ಗ್ರಂಥ
ಕೆಲವಿದ್ದರೆ ಬಿಡಿಯಾದ ಗ್ರಂಥ ಹಲವು ಇವೆ. ಒಂದು ಬಗೆಯ ಪದ್ಯಗಳಲ್ಲ.
ಒಂದು ಬಗೆಯ ಪದಗಳಲ್ಲ. ಪದಗಳ ನಡೆಯನ್ನು ನೋಡುತ್ತ ಕುಳಿತರೆ,
ಸಂಗೀತಶಾಸ್ತ್ರವೇ ಎದ್ದು ಬರುವಂತೆ ಕಾಣುತ್ತದೆ. ಒಂದೇ ರಾಗದಲ್ಲಿರುವ
ಪದಗಳನ್ನು ಆ ರಾಗದ ಸ್ವರಗ್ರಾಮಗಳಲ್ಲಿ ಕ್ರಮವಾಗಿ ಇರಿಸಿದರೆ, ತಾಳಗತಿ
ಯಲ್ಲಿ ಆ ರಾಗದ ಸುಖಸ್ಥಾನಗಳ ಆಲಾಪನೆಯನ್ನು ಪೂರ್ತಿಮಾಡಿರುವಂತೆ
ಕಂಡುಬರುತ್ತದೆ. ತಾಳಗಳ ದೃಷ್ಟಿಯಿಂದ ನೋಡಿದರೆ ಯಾರೂ ಉಪ
ಯೋಗಿಸದಿರುವ ಧ್ರುವತಾಳ ಮಠ್ಯತಾಳಗಳ ಅಕ್ಷರಕಾಲಗಳನ್ನು ತೋರಿಸಿ
ಚರಣಗಳ ಕೊನೆಯಲ್ಲಿ ತ್ರ್ಯಶ್ರ ಮಿಶ್ರ ಖಂಡ ಸಂಕೀರ್ಣ ಜಾತಿಗಳ ನಡೆ
ಯನ್ನು ಸಾಹಿತ್ಯಾಕ್ಷರಗಳಲ್ಲಿಟ್ಟಿರುವುದು ಕಂಡುಬರುತ್ತದೆ. ನರ್ತನ ದೃಷ್ಟಿ
ಯಿಂದ ನೋಡಿದರೆ ಭರತನ ಲಕ್ಷಣಶಾಸ್ತ್ರಕ್ಕೆ ಲಕ್ಷ್ಯವಿದೆಂದು ರಾಗ
ಭಾವಕ್ಕೆ ಹೊಂದಿದ ರಸಭರಿತ ಶಬ್ದಗಳು ಕುಣಿಕುಣಿಯುತ್ತ ನರ್ತನದ
ಮುಕ್ತಾಯಗಳನ್ನು ತೋರಿಸುವುದು ಕಂಡುಬರುತ್ತದೆ, ಕೆಲಕೆಲವು ಶಬ್ದ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳನ್ನು ನೋಡಿದರೆ ಸಂಸ್ಕೃತ ಭಾಷಾ ನಾಟಕಗಳಲ್ಲಿ ಹೀನಪಾತ್ರಗಳಿಗಾಗಿ ನಿರ್ಮಿಸಿರುವ ಪ್ರಾಕೃತ ಭಾಷೆಯಂತೆ ಕನ್ನಡಕ್ಕೊಂದು ಪ್ರಾಕೃತ ಭಾಷೆಯನ್ನು ನಿರ್ಮಿಸಿರಬಹುದೇ ಎಂಬ ಸಂಶಯವಾಗುತ್ತದೆ. ಒಂದು ಸಂಪ್ರದಾಯಕ್ಕೆ ಆದ್ಯಪ್ರವರ್ತಕರು ಬೇರೊಬ್ಬರಿದ್ದು ಅವರ ಮಾರ್ಗವನ್ನನುಸರಿಸಿ ಮತ್ತೊಬ್ಬರು ಗ್ರಂಥರಚನೆ ಮಾಡಿದ್ದರೆ ಪರಿಶೀಲಿಸಿ ಇದು ಹಿರಿಯರ ಮಾರ್ಗದಂತಿದೆ ಆದ್ದರಿಂದ ಸರಿ, ಇದು ಹಿರಿಯರ ಮಾರ್ಗ ಬಿಟ್ಟಿದೆ ಆದ್ದರಿಂದ ತಪ್ಪು, ಎಂದು ಬರೆಯಬಹುದು. ಕರ್ಣಾಟಕ ಸಂಗೀತದ ಆದ್ಯಪ್ರವರ್ತಕರೂ ಹೊಸಗನ್ನಡ ಶೈಲಿಯ ನಿರ್ಮಾತರೂ ಹರಿದಾಸರೇ ಆಗಿರುವ ಕಾರಣ ಋಷಿತುಲ್ಯರಾದ ಆ ಪುರಾತನ ದಾಸರುಗಳ ಸಾಹಿತ್ಯವನ್ನು ವಿಮರ್ಶಿಸಲು ಅಧಿಕಾರವಿದೆಯೇ ಎಂಬ ಭಯವಾಗುತ್ತದೆ. ದಾಸಸಾಹಿತ್ಯ ವಿಮರ್ಶೆಗೆ ಹೊರಟು ಸಂಪ್ರದಾಯ ವರಿಯದೆ ಟೀಕೆ ಮಾಡಿದರೆ 'ಅಹಂ ರುದ್ರೇಭಿಃ' ಎಂಬ ವೇದವಾಕ್ಯವನ್ನು ತೆಗೆದುಕೊಂಡು ರುದ್ರೇಭಿಃ ಎಂಬುವುದು ಅಪಶಬ್ದವೆಂದು ತೋರಿಸಿದಂತೆ ಆಗುತ್ತದೆ.

ಹಾಗಿದ್ದರೆ ಈ ವಿಮರ್ಶಾತ್ಮಕ ಗ್ರಂಥದ ಉದ್ದೇಶವೇನು ಎಂದು ಯಾರಾದರೂ ಕೇಳಬಹುದು. ಉತ್ತರವಿಷ್ಟೆ! ಕೆಲಕೆಲವು ತಪ್ಪು ಭಾವನೆಗಳನ್ನು ಸರಿಪಡಿಸುವುದು; ದಾಸರ ಮತ ಧರ್ಮ ಕಾಲ ದೇಶ ಗಾನ ಜ್ಞಾನ ಭಕ್ತಿ ವೈರಾಗ್ಯ ಭಾಷಾಸೇವೆ ದೇಶಸೇವೆ ಮೊದಲಾದ ಸಂಗತಿಗಳನ್ನು ತಿಳಿಯಪಡಿಸುವುದು; ಸಂಗೀತ ಸಾಹಿತ್ಯಗಳ ಕೆಲವು ಮಾದರಿಗಳನ್ನು ತೋರಿಸುವುದು; ಇಷ್ಟೇ.

ದಾಸರ ಮತ

ದಾಸರಲ್ಲಿ ಮೊದಲಿಗರಾದ ಅಚಲಾನಂದರು ಶುಕಾಚಾರ್ಯರ ಪರಂಪರೆಯಿಂದ ಬೆಳೆದುಬಂದ ಭಾಗವತಧರ್ಮದ ಅನುಯಾಯಿಗಳು. ವೈಕುಂಠ ದಾಸರು ತೆಂಕಲೈ ಸಂಪ್ರದಾಯದ ಶ್ರೀವೈಷ್ಣವರು. ಮಿಕ್ಕ ಪ್ರಸಿದ್ಧ ದಾಸರುಗಳು ಮಧ್ವಮತಸ್ಥರು. ಮಧ್ವಮತದ ತತ್ತ್ವವಾದರೋ—

ಶ್ರೀಮನ್ಮಧ್ವಮತೇ ಹರಿಃ ಪರತರಃ, ಸತ್ಯಂ ಜಗತ್, ತತ್ತ್ವತೋ ಭೇದಃ,
ಜೀವಗಣಾಃ ಹರೇರನುಚರಾ ನೀಚೋಚ್ಚಭಾವಂಗತಾಃ ।
ಮುಕ್ತಿರ್ನೈಜಸುಖಾನುಭೂತಿಃ, ಅಮಲಾಭಕ್ತಿಶ್ಚ ತತ್ಸಾಧನಂ, ಅಕ್ಷಾದಿ
ತ್ರಿತಯಂ ಪ್ರಮಾಣಂ, ಅಖಿಲಾಮ್ನಾಯೈಕವೇದ್ಯಃ ಹರಿಃ ॥ ೧ ॥

Sri Vidyabharathi Book Centre, Sringeri

 CC-O. In Public Domain. Digitized by eGangotri

ತಾ|| ದೇವರು (ಹರಿಯು) ಸರ್ವೋತ್ತಮನು. ಜಗತ್ತು ಸತ್ಯವಾದದ್ದು. ತತ್ತ್ವದಿಂದ ಇರುವುದು ಭೇದ. ತರತಮಭಾವದಿಂದಿರುವ ಜೀವರು ಹರಿಯ ಅನುಚರರು. ವಿಷಯಸ್ಪರ್ಶವಿಲ್ಲದ ನಿಜಸುಖಾನುಭವವೇ ಮುಕ್ತಿ. ಮುಕ್ತಿಗೆ ಭಕ್ತಿ ಸಾಧನೆ. ಪ್ರತ್ಯಕ್ಷ ಅನುಮಾನ ಆಗಮಗಳು ಮೂರು ಪ್ರಮಾಣಗಳು. ಸಕಾಲಾಗಮಗಳಿಂದ ವೇದ್ಯನಾದವನು ದೇವರು.

ಮಾನವಪ್ರಪಂಚ ವ್ಯವಹಾರಕ್ಕೆ ಈ ತತ್ತ್ವಗಳು ಸಾಧಕವಾಗಿವೆ. ಲೋಕದಲ್ಲಿ ಇದುವರೆಗೆ ಸ್ಥಾಪಿತವಾಗಿರುವ ಮತಗಳು ವೈದಿಕವಾಗಿರಲಿ ಅವೈದಿಕವಾಗಿರಲಿ, ದ್ವೈತ-ಅದ್ವೈತ ಎಂಬ ಎರಡು ದೊಡ್ಡ ಗುಂಪುಗಳಲ್ಲಿ ಸಮಾವೇಶವಾಗುತ್ತವೆ. ಶಬ್ದಶ್ರವಣಮಾತ್ರದಿಂದ ದ್ವೈತ ಮೊದಲಿದ್ದು ಅನಂತರ ಅದ್ವೈತ ಬಂದಿತೆಂದು ಅರ್ಥವಾಗುತ್ತದೆ. ದ್ವೈತಿಗಳು ಜೀವ-ಬ್ರಹ್ಮರು ಭಿನ್ನರೆಂದರೆ, ಅದ್ವೈತಿಗಳು ಅಭಿನ್ನರೆನ್ನುತ್ತಾರೆ. ದ್ವೈತಿಗಳು ಜಗತ್ತು ಸತ್ಯವೆಂದರೆ, ಅದ್ವೈತಿಗಳು ಮಿಥ್ಯವೆನ್ನುತ್ತಾರೆ. ದ್ವೈತಿಗಳು ಜಗತ್ತು ಸತ್ಯವಾದರೂ ನಶ್ವರವೆಂದರೆ, ಅದ್ವೈತಿಗಳು ಸತ್ಯವೆಂದು ಹೇಳಿ ನಶ್ವರವೆನ್ನಬೇಕಾಗಿಲ್ಲ; ಜಗತ್ತು ತ್ರೈಕಾಲಿಕನಿಷೇಧವುಳ್ಳದ್ದು ಅಂದರೆ ಹಿಂದೆ ಇರಲಿಲ್ಲ ಈಗ ಇಲ್ಲ ಮುಂದೆ ಇರುವುದಿಲ್ಲ; ಎನ್ನುತ್ತಾರೆ. ಅದ್ವೈತ ತತ್ತ್ವದ ಪರಮಾವಧಿ ಹೀಗಿದ್ದರೂ ಐಕ್ಯರೂಪವಾದ ಮುಕ್ತಿಯು ಶತ ಕೋಟಿ ಜನ್ಮಗಳ ಪುಣ್ಯದಿಂದ ವಿನಾ ಲಭಿಸುವುದಿಲ್ಲವೆಂದು 'ಮುಕ್ತಿರ್ನೋ ಶತಕೋಟಿಜನ್ಮಸುಕೃತೈಃ ಪುಣ್ಯೈರ್ವಿನಾ ಲಭ್ಯತೇ' ಎಂದು ಶಂಕರ ಭಗವತ್ಪಾದರು ಅಪ್ಪಣೆ ಕೊಡಿಸಿರುತ್ತಾರೆ. ಪರಮಾರ್ಥದ ಮಾತು ಹೀಗಿದ್ದರೆ ವ್ಯವಹಾರವನ್ನವರು ನಿರಾಕರಿಸಿಲ್ಲ. ಎಲ್ಲ ಆಚಾರ್ಯರಿಗಿಂತ ಅಧಿಕವಾಗಿ ಭಕ್ತಿ ಮಾರ್ಗವನ್ನವರು ಉಪದೇಶಿಸಿರುತ್ತಾರೆ. 'ನಾನು' ಎಂಬುವುದು ಹೋಗುವ ವರೆಗೆ ಐಕ್ಯವಿಲ್ಲ. 'ನಾನು' ಇರುವವರೆಗೆ ಜಗತ್ತು ಮಿಥ್ಯವಲ್ಲ. 'ನಾನು' ಹೋದಾಗ ಜಗತ್ತಿನ ಮಾತೇ ಇಲ್ಲ. ಇಷ್ಟು ಸೂಕ್ಷ್ಮವಾಗಿದೆ ಅದ್ವೈತ. ವ್ಯವಹಾರದಲ್ಲಾದರೋ—ಅದ್ವೈತಿಗಳಿಗಾಗಲಿ ದ್ವೈತಿಗಳಿಗಾಗಲಿ ದೇವರು ದೊಡ್ಡವನೆನ್ನುವುದಕ್ಕಿಂತ, ಜಗತ್ತು ನಶ್ವರವೆನ್ನುವದಕ್ಕಿಂತ ಹೆಚ್ಚು ವಿಚಾರ ಬುದ್ಧಿಗೆ ವಿಷಯವಾಗುತ್ತಿಲ್ಲ. ಆದ್ದರಿಂದ ಹರಿದಾಸರ ಮತ ಯಾರಿಗೂ ಬಾಧಕವಾಗಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ದಾಸರ ಧರ್ಮ

ಮತ ಶಬ್ದಾರ್ಥಕ್ಕಿಂತ ಧರ್ಮ ಶಬ್ದಾರ್ಥವು ವ್ಯಾಪಕವೆಂದು ಕಾಣುತ್ತದೆ. ಮತ ಶಬ್ದಕ್ಕೆ ಕೆಲಕೆಲವು ಪಂಗಡಗಳವರು ಆಚರಿಸುವ ಸಾಂಪ್ರದಾಯಿಕ ಕರ್ಮವೆಂದು ಅರ್ಥ ಸಂಕೋಚವಾಗಿದೆ. ದಾಸರು ಅನುಸರಿಸಿದ ಧರ್ಮವೆಂದರೆ ಭಾಗವತ ಧರ್ಮ. ವೇದಾರ್ಥನಿರ್ಣಯಕ್ಕಾಗಿ ಬ್ರಹ್ಮಸೂತ್ರಗಳನ್ನು ರಚಿಸಿ, ಆ ಸೂತ್ರಗಳಿಗೆ ವ್ಯಾಖ್ಯಾನದಂತಿರಲೆಂದು ಆಖ್ಯಾನರೂಪವಾಗಿ ಶ್ರೀಮದ್ಭಾಗವತವನ್ನು ಬರೆದ ವ್ಯಾಸ ಭಗವಾನರ ಧರ್ಮ; ವ್ಯಾಸಪುತ್ರರಾದ ಶುಕಬ್ರಹ್ಮರು ಉಪದೇಶಿಸಿ ಪ್ರಚಾರ ಮಾಡಿದ ಧರ್ಮ; ಅಂದರೆ ಭಕ್ತಿಪಂಥ. ಅದ್ವೈತ ಗುರುಪರಂಪರೆಯಲ್ಲಿ ಈ ತಂದೆಮಕ್ಕಳುಗಳಿದ್ದಾರೆ. ದ್ವೈತ ಗುರುಪರಂಪರೆಯಲ್ಲಿ ಮಧ್ವಾಚಾರ್ಯರೇ ಬದರಿಕಾಶ್ರಮಕ್ಕೆ ಹೋಗಿ ವೇದವ್ಯಾಸರಲ್ಲಿ ಶಿಷ್ಯತ್ವವಹಿಸಿದ್ದಾರೆ. ಆದ್ದರಿಂದ ಭಾಗವತ ಧರ್ಮ ಸಕಲ ಧರ್ಮಗಳಿಗೆ ಸಮಾನವಾದದ್ದು. ಭಕ್ತಿಗೆ ಮಹತ್ವ ಕೊಡದ ಮತ ಪ್ರಪಂಚದಲ್ಲಿಲ್ಲ. ಭಕ್ತಿಪಂಥದಲ್ಲಿ ವರ್ಣಾಶ್ರಮಗಳ ಪ್ರಶ್ನೆಯಿಲ್ಲ. ಭಾಗವತ ಭಾರತಾದಿ ಆಗಮಗಳಿಂದ ಭಗವನ್ಮಹಿಮೆಯನ್ನು ತಿಳಿದು ಭಗವಂತನನ್ನು ಆರಾಧಿಸಲು ಮನುಷ್ಯಮಾತ್ರರೆಲ್ಲಾ ಅಧಿಕಾರಿಗಳು. ವರ್ಣಾಶ್ರಮಧರ್ಮಗಳನ್ನೂ ಪಾಲಿಸಿಕೊಂಡು ವಿಶ್ವವ್ಯಾಪಕ ಭಕ್ತಿಪಂಥವನ್ನುಪದೇಶಿಸಿ ಸಮಾಜವನ್ನುದ್ಧರಿಸಲು ಹೊರಟವರು ಹರಿದಾಸರು. ವೇದಗಳನ್ನು ನಿಂದಿಸದೆ, ಪುರಾಣಗಳನ್ನು ತಿರಸ್ಕರಿಸದೆ, ಕರ್ಮಮಾರ್ಗವನ್ನು ಜರಿಯದೆ, ನಿತ್ಯವೂ ಸತ್ಯವೂ ಆದ ರಾಜಮಾರ್ಗದಲ್ಲಿ ಸಂಚರಿಸಿದವರು ಹರಿದಾಸರು.

ಶಂಕರ, ರಾಮಾನುಜ, ಮಧ್ವ, ವಲ್ಲಭಾಚಾರ್ಯರಂಥ ಸಕಲ ಪ್ರಸಿದ್ಧ ಭಾಷ್ಯಕಾರರು ಜಗತ್ತಿನ ಸೃಷ್ಟಿ ಸ್ಥಿತಿ ಲಯ ಜ್ಞಾನ ಅಜ್ಞಾನ ನಿಯಮನ ಬಂಧಮೋಕ್ಷಗಳಿಗೆ ಯಾವ ಶ್ರೀಮನ್ನಾರಾಯಣನು ಕಾರಣನೆಂದು ಸಾರಿದರೋ, ಸಂಧ್ಯಾದಿ ಕರ್ಮಗಳನ್ನಾಚರಿಸುವಾಗ ಯಾವನ ಕೇಶವಾದಿ ಚತುರ್ವಿಂಶತಿ ನಾಮಗಳಿಂದ ಆಚಮನ ಅಂಗನ್ಯಾಸಗಳನ್ನು ಸಕಲ ವೈದಿಕ ಮತಾನುಯಾಯಿಗಳೂ ಮಾಡಿ 'ಯಸ್ಯ ಸ್ಮೃತ್ಯಾ ಚ ನಾಮೋಕ್ತ್ಯಾ ತಪಸ್ಸಂಧ್ಯಾಕ್ರಿಯಾದಿಷು ನ್ಯೂನಂ ಸಂಪೂರ್ಣತಾಂ ಯಾತಿ ಸದ್ಯೋವಂದೇ ತಮಚ್ಯುತಂ' ಇತ್ಯಾದಿ ಮಂತ್ರವನ್ನುಚ್ಚರಿಸಿ, ಅಚ್ಯುತಾನಂತಗೋವಿಂದ ನಾಮೋಚ್ಚಾರಣೆಗಳಿಂದ ಮಂತ್ರ ತಂತ್ರ ಸ್ವರವರ್ಣ ಲೋಪದೋಷಗಳ

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವರೋ, ಸಕಲ ಕರ್ಮಗಳ ಸಮಾರೋಪಣೆಯಲ್ಲಿ 'ಕಾಯೇನ ವಾಚಾ ಮನಸೇಂದ್ರಿಯೈರ್ವಾ ಬುದ್ಧ್ಯಾತ್ಮನಾ ವಾ ಪ್ರಕೃತೇಃ ಸ್ವಭಾವಾತ್ ಕರೋಮಿ ಯದ್ಯತ್ಸಕಲಂ ಪರಸ್ಮೈ ನಾರಾಯಣಾಯೇತಿ ಸಮರ್ಪಯಾಮಿ' ಎಂಬುದಾಗಿ ಸಕಲರೂ ಕರ್ಮಫಲವನ್ನು ಶ್ರೀಹರಿಗೆ ಸಮರ್ಪಿಸುವರೋ, ಅಧ್ಯಯನದ ಆದಿಯಲ್ಲಿ ಅಂತ್ಯದಲ್ಲಿ 'ಹರಿಃ ಓಂ' ಎಂಬ ಶಬ್ದಗಳನ್ನು ಸ್ವರಪೂರ್ವಕ ಉಚ್ಚರಿಸುತ್ತಾ ಅಧ್ಯಯನದ ಫಲವನ್ನು ಶ್ರೀಕೃಷ್ಣನಿಗೆ ಸಮರ್ಪಿಸುವರೋ, ಪುರಾಣಗಳೆಷ್ಟಿದ್ದರೂ ರಾಮಾಯಣ ಭಾರತ ಭಾಗವತ ಪುರಾಣಗಳನ್ನು ಪಠಣಮಾಡಿ, ಶ್ರವಣಮಾಡಿ 'ವೇದೇ ರಾಮಾಯಣೇ ಚೈವ ಪುರಾಣೇ ಭಾರತೇ ತಥಾ ಆದಾವಂತ್ಯೇ ಚ ಮಧ್ಯೇ ಚ ವಿಷ್ಣುಸ್ಸರ್ವತ್ರ ಗೀಯತೇ' ಎಂಬ ಸಕಲಶಾಸ್ತ್ರಗಳ ಮಥಿತಾರ್ಥವನ್ನು ಒಂದೇ ಶ್ಲೋಕದಿಂದ ಕಥನಮಾಡಿ ಪುನೀತರಾಗುವರೋ ಅಂಥಾ ಪ್ರಸಿದ್ಧನಾದ ಶ್ರೀಹರಿಯ ಭಕ್ತಿಮಾರ್ಗವನ್ನು ಅನುಸರಿಸಿ, ಸ್ವಯಂ ಹರಿದಾಸರೆನಿಸಿ, ಸ್ವಾರ್ಥವನ್ನು ಪರಿತ್ಯಜಿಸಿ ಲೋಕೋಪಕಾರ ಮಾಡಿದವರು ಹರಿದಾಸರು. ಅಂದಬಳಿಕ ದಾಸರು ಯಾರಿಗೆ ಬೇಡ? ಅವರ ಧರ್ಮ ಯಾವ ಕಾಲಕ್ಕೆ ಬೇಡ?

ದಾಸರ ಕಾಲ

ದಾಸಸಾಹಿತ್ಯದ ಉಗಮ ಒಂಬತ್ತನೇ ಶತಮಾನದಷ್ಟು ಹಿಂದಿನ ಕಾಲದಲ್ಲೇ ಆಯಿತೆಂಬುದರಲ್ಲಿ ಲೇಶವಾದರೂ ಸಂಶಯವಿಲ್ಲ. ಶಾಲೀವಾಹನ ಶಕ ೮೦೧ ಅಂದರೆ ಕ್ರಿ.ಶ. ೮೭೯ರಲ್ಲಿದ್ದ ಅಚಲಾನಂದರು ಇದುವರೆಗೆ ದೊರೆತಿರುವ ಇತಿಹಾಸದಂತೆ ದಾಸಸಾಹಿತ್ಯರಚನೆಗೆ ಮೊದಲಿಗರು. ಕನ್ನಡ ಭಾಷಾ ಸಾಹಿತ್ಯದಲ್ಲಿ ಎಂಟನೇ ಶತಕದಲ್ಲಿ ರಚಿತವಾದುದೆಂದು ಉಪಲಬ್ಧವಾಗಿರುವ ಪ್ರೌಢ ಗ್ರಂಥ ನೃಪತುಂಗನ ಕವಿರಾಜಮಾರ್ಗ. ಗ್ರಂಥದ ಪ್ರೌಢಿಮೆ ನೋಡಿದರೆ ಅದಕ್ಕಿಂತ ಎಷ್ಟೋ ಹಿಂದಿನ ಕಾಲದಿಂದ ಕನ್ನಡದಲ್ಲಿ ಗ್ರಂಥರಚನೆಯಾಗುತ್ತಿತ್ತೆಂದು ಅರ್ಥವಾಗುತ್ತದೆ. ಶಾಸನಗಳಲ್ಲಿ ಅತ್ಯಂತ ಹಳೆಯದೆಂದು ದೊರೆತಿರುವುದು ಕ್ರಿ.ಶ. ೪೫೦ರ ಹಲ್ಮಿಡಿಯ ಶಾಸನ. ಈ ಶಾಸನದಲ್ಲಿ ಸಂಸ್ಕೃತ ಮಾತುಗಳು ಹೆಚ್ಚಾಗಿವೆ. ಅನಂತರ ದೊರೆತಿರುವ ಶಾಸನಗಳಲ್ಲಿ ಏಳನೇ ಶತಕದ ಬಾದಾಮಿಯ ಶಾಸನ ಹಳೆಯದು. ಆ ಶಾಸನದ—

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾಧುಗೆ ಸಾಧು, ಮಾಧುರ್ಯಂಗೆ ಮಾಧುರ್ಯಂ
ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್
ಮಾಧವನೀತನ್ ಪೆರನಲ್ಲ

ಎಂಬ ಮಾತುಗಳಲ್ಲಿ ಅರ್ಥವಾಗದ ಶಬ್ದ ಒಂದೂ ಇಲ್ಲ. ಹಳಗನ್ನಡ ಧೋರಣೆ ಬಂದರೆ ಕವಿಗಳು ಈಗಲೂ ಹೀಗೆ ಬರೆಯುತ್ತಾರೆ. ಹೊಸಗನ್ನಡ ಧೋರಣೆ ಬಂದರೆ ದಾಸರ ಶೈಲಿಯನ್ನನುಸರಿಸುತ್ತಾರೆ.

ಅಚಲಾನಂದರ—

ಪಾತಕರೊಳಗೆಲ್ಲ ನಾನೆ ವೆಗ್ಗಳನಯ್ಯ
ಪ್ರಾಯಶ್ಚಿತಕ್ಕೆ ನಿನ್ನ ನಾಮವೆ ಘನವಯ್ಯ
ಪಾತಕವನು ನಾನು ಮಾಡಿದ್ದು ಏನು?
ಪಾತಕ ಪಾವನ ಎರಡು ನಿನ್ನಾಧೀನ
ಪಾತಕವೆನಗಿಲ್ಲ ಪ್ರಾಯಶ್ಚಿತ್ತವೆನಗಿಲ್ಲ
ಕೇಳಯ್ಯ ದೇವ ಅಚಲಾನಂದ ವಿಠಲ ॥ ೧ ॥

ಸುಖವಾದರೆ ತನ್ನಿಂದಾಯಿತೆಂಬೋರೋ
ದುಃಖವಾದರೆ ದೈವ ಮಾಡಿತೆಂಬೋರೋ
ಸುಖಕೆ ತಾನ್ಯಾರೋ ದುಃಖಕೆ ತಾನ್ಯಾರೋ
ಸುಖದುಃಖವೆರಡೂ ಹರಿಯೆ ನಿನ್ನಾಧೀನ
ರುಕುಮಿಣಿಪತಿ ಅಚಲಾನಂದ ವಿಠಲ ॥ ೨ ॥

ಸಿರಿ ನಿನಗುಂಟೆಂದು ಗರ್ವಿಸಲಿ ಬೇಡ
ಸಿರಿ ಎನಗಿಲ್ಲೆಂದು ಮುನಿದು ನೋಡಲಿ ಬೇಡ
ಹರಿಯೆ ನಿನ್ನಂಥ ಒಡೆಯರು ಎನಗಂಟು
ಆರುಹೊ ನಿನ್ನೊಡೆಯರ ಅಚಲಾನಂದ ವಿಠಲ ॥ ೩ ॥

ಈ ಉಗಾಭೋಗಗಳು ಹೊಸಗನ್ನಡ ಶೈಲಿಯಲ್ಲಿವೆ. ಹರಿದಾಸ ಪರಂಪರೆಯಲ್ಲಿ ಇಬ್ಬರು ಅಚಲಾನಂದರಾಗಿಲ್ಲ. ಅಚಲಾನಂದರ ಶಿಷ್ಯರು ಅನೇಕರಾಗಿದ್ದರೂ ಸಂತತಿಯುವರು ತಂದೆ ಅಚಲಾನಂದ ವಿಠಲ್ಲ, ಗುರು ಅಚಲಾನಂದ ವಿಠಲ, ಮುದ್ದು ಅಚಲಾನಂದ ವಿಠಲ ಎಂಬುದಾಗಿ ಹಾಡಿದ

Sri Vidyabharathi Book Centre, Sringeri

CC-O. In Public Domain. Digitized by eGangotri

ಹಾಡುಗಳಿವೆ. ಸಂಸ್ಕೃತದಲ್ಲಿ ಗದ್ಯಪದ್ಯಗಳನ್ನೂ, ಪ್ರೌಢಿಮೆಗಾಗಿ ಕನ್ನಡದಲ್ಲಿ ಸಂಸ್ಕೃತಮಯವಾದ ಹಾಡುಗಳನ್ನೂ ಇವರು ಬರೆದಿದ್ದಾರೆ. ವಂಶಪರಂಪರೆಯಿಂದ ಸಂಗೃಹೀತವಾಗಿರುವ ನಮ್ಮ ದಪ್ತರದಲ್ಲಿರುವಂತೆ ಇತರ ಅನೇಕ ಸಂಪ್ರದಾಯಸ್ಥರ ಮನೆಗಳಲ್ಲೂ ವ್ಯತ್ಯಾಸವಿಲ್ಲದೆ ಈ ಉಗಾಭೋಗಗಳಿವೆ. ಆದ್ದರಿಂದ ಹೊಸ ಕನ್ನಡ ಶೈಲಿಗೆ ದಾರಿ ಅಚಲಾನಂದರಿಂದಾಯಿತೆಂದು ತಿಳಿದರೆ ತಪ್ಪಾಗುವುದಿಲ್ಲ. ಈ ಉಗಾಭೋಗಗಳು ಸ್ಥಾಯೀ ಗಾನ ಪದ್ಧತಿಯಂತೆ ಹಾಡುವ ಕ್ರಮು ಈ ಕಾಲದಲ್ಲಿ ಮರೆತಿದ್ದರೂ ಸರ್ವ ಲಘುಗತಿಯಲ್ಲೂ ಅಟ್ಟತಾಳ ಗತಿಯಲ್ಲೂ ಹಾಡುವ ರೂಢಿ ಇದೆ. ಅಚಲಾನಂದರ ನಂತರ ಅವರ ಸಂತತಿಯವರೂ ಇತರ ಪೀಠಸ್ಥ ಶಿಷ್ಯರೂ ಭಾಗವತ ಧರ್ಮವನ್ನು ಪ್ರಚಾರಮಾಡಿರಬಹುದಾಗಿದ್ದರೂ ಪ್ರಸಿದ್ಧವಾದ ಇತಿಹಾಸ ದೊರೆಯುವುದಿಲ್ಲ. ಕ್ರಿ.ಶ. ೮೭೯ರಿಂದ ಮೂರು ಶತಮಾನಗಳ ಕಾಲವನ್ನು ಕತ್ತಲೆಯ ದಿನಗಳೆಂದು ಕರೆಯಬಹುದು. ಕ್ರಿ.ಶ. ೧೨೦೫ ರಿಂದ ೧೨೧೪ರ ವರೆಗೆ ಶ್ರೀಮನ್ಮಧ್ವಾಚಾರ್ಯರ ಪೀಠವನ್ನಲಂಕರಿಸಿ ಮಠರಾಜ್ಯಭಾರಮಾಡಿದ ನರಹರಿತೀರ್ಥರು ಭಾಗವತಧರ್ಮಪ್ರಚಾರಕ್ಕಾಗಿ ಅನೇಕ ಕನ್ನಡ ದೇವರ ನಾಮಾದಿಗಳನ್ನು ಮಾಡಿದರು. ಆ ಪೈಕಿ ನಮಗೆ ದೊರೆತಿರುವುದು ಮೂರೇ ಹಾಡುಗಳು. ಆ ಹಾಡುಗಳ ಭಾಷೆ ಅಚಲಾನಂದರ ಕಾಲಕ್ಕಿಂತ ಸುರಿತಿರುವಂತೆ ಕಾಣುತ್ತದೆ. ಹಾಡಿನ ರಾಗವೂ ನಡೆಯೂ ಗಾನದೃಷ್ಟಿಯಿಂದ ಕಳೆಕಟ್ಟಿ ಬಂದಿವೆ. ಆ ಪೈಕಿ ಒಂದು ಹಾಡು ಈ ರೀತಿ ಇದೆ:

ಆನಂದಭೈರವಿ—ಆದಿತಾಳ

ಎಂತು ಮರುಳಾದೆ | ನಾ | ನೆಂತು ಮರುಳಾದೆ ‖ ಪ ‖

ಎಂತು ಮರುಳಾದೆ | ಭವದೊಳು ಬಳಲಿದೆ
ಸಂತತ ಪೊರೆ ರಘು | ಕುಲತಿಲಕ ‖ ಅ ‖

ಮಾತಿನಲ್ಲಿ ಹರಿದಾಸತನ | ರೀತಿಯಲ್ಲಿ ಪ್ರಭುದಾಸತನ
ಪ್ರೀತಿ ಧನಾದಿ ವಿಷಯದಲ್ಲಿ | ನಿ | ರ್ಭೀತಿ
ದೈವಗುರುದ್ರೋಹದಲಿ ‖ ಅ.ಪ. ‖

Sri Vidyabharathi Book Centre, Sringeri

 CC-O. In Public Domain. Digitized by eGangotri

ಏಕಾಂತದಲ್ಲಿ ಧನದ ಗೋಷ್ಠಿ | ಲೋಕಾಂತದಿ ವೈರಾಗ್ಯದ ಗೋಷ್ಠಿ
ಶ್ರೀಕಾಂತನ ಸೇವೆಗೆ ಅನುಮಾನ | ಭೂಕಾಂತನ ಸೇವೆಗೆ
ಸುಮ್ಮಾನ || ೨ ||

ಡೊಂಬನಂತೆ ಬೈಲಿಗೆ ಹರಹಿ | ಡಂಭತನಕೆ ಕರ್ಮವ ಮಾಡಿ
ಅಂಬುಜನಾಭಗೆ ದೂರಾಗಿ | ಕುಂಭೀಪಾಕಕೆ ಗುರಿಯಾದೆ || ೩ ||

ಯಾರಿಗಾಗಿ ಧಾವತಿಪಡುವೆ | ಇ | ನ್ನಾರಿಗೆ ಒಡವೆಯ ಬಚ್ಚಿಡುವೆ
ನಾರಿಪುತ್ರಮಿತ್ರಾದಿಗಳು | ಯಾರು ಬಾರರೋ ಸಂಗಡದೀ || ೪ ||

ಭಜಿಸು ಬ್ರಹ್ಮಾದಿವಂದಿತ ಹರಿಯ | ತ್ಯಜಿಸು ಕಾಮಾದಿ ದುರ್ವಿಷಯ
ಸುಜನವಂದಿತನಾದ ನರಹರಿಯ | ಭಜಿಸು ಶ್ರೀಶ
ಶ್ರೀ ರಘುಪತಿಯ || ೫ ||

ನರಹರಿತೀರ್ಥರು ಮಧ್ವಾಚಾರ್ಯರ ಪೀಠವನ್ನಲಂಕರಿಸಿದವರಲ್ಲಿ ಎರಡನೆಯವರು. ಸ್ವಾಮಿ ಶಾಸ್ತ್ರಿಗಳೆಂದು ಇವರ ಪೂರ್ವಾಶ್ರಮದ ಹೆಸರು. ಇವರು ಗಜಪತಿರಾಜರ ವಿದ್ಯಾಗುರುಗಳಾಗಿದ್ದುದಲ್ಲದೆ ಬೊಕ್ಕಸದ ಮುಖ್ಯಾಧಿಕಾರಿಗಳಾಗಿದ್ದರು. ಮಧ್ವಾಚಾರ್ಯರು ಆ ಪ್ರಾಂತ್ಯ ದಿಗ್ವಿಜಯಕ್ಕೆ ಬಂದಾಗ ಶಾಸ್ತ್ರಿಗಳು ಆಚಾರ್ಯರ ಪಾಂಡಿತ್ಯಕ್ಕೆ ಮೆಚ್ಚಿ ಅವರಿಂದ ಸನ್ಯಾಸ ಗ್ರಹಣ ಮಾಡಿದರು. ಸ್ವಾಮಿ ಶಾಸ್ತ್ರಿಗಳ ಆಶ್ರಮನಾಮ ನರಹರಿತೀರ್ಥರೆಂದಾಯಿತು. ಸನ್ಯಾಸಿಗಳಾದರೂ ಗುರುಗಳನ್ನು ಹಿಂಬಾಲಿಸಲು ತೀರ್ಥರಿಗೆ ಸಾಧ್ಯವಾಗಲಿಲ್ಲ. ಗಜಪತಿರಾಜನು ಮೃತನಾಗುತ್ತಲೇ ರಾಜ್ಯಕಾರ್ಯನಿರ್ವಾಹ ನರಹರಿತೀರ್ಥರ ಕೊರಳಿಗೆ ಕಟ್ಟಿತು. ರಾಜಕುಮಾರನು ವಯಸ್ಕನಾಗುವವರೆಗೆ ಹನ್ನೆರಡು ವರ್ಷ ತೀರ್ಥರಿಗೆ ಲೌಕಿಕ ಬಿಡಲಿಲ್ಲ. ಆಗಿನ ಮನಸ್ಸಿನ ಸ್ಥಿತಿಯಲ್ಲಿ ಹಾಡಿದುದು ಮೇಲ್ಕಂಡ ದೇವರನಾಮ. ನರಹರಿತೀರ್ಥರು ವೇದಾಂತ ಪೀಠಾರೋಹಣಮಾಡಿದಮೇಲೆ ಹರಿದಾಸರಂತಿದ್ದು ಕನ್ನಡ ದೇವರನಾಮಗಳಿಂದ ಜನಸಮಾಜಕ್ಕೆ ಧರ್ಮಬೋಧನೆ ಮಾಡಿದರು. ಮತ್ತೆ ಇವರ ನಂತರ ಕ್ರಿ.ಶ. ೧೪೫೦ ರವರೆಗೆ ದಾಸಸಾಹಿತ್ಯದ ಇತಿಹಾಸ ದೊರೆಯುವುದಿಲ್ಲ. ಸುಮಾರು ಕ್ರಿ.ಶ ೧೪೦೬ರಿಂದ ೧೪೮೬ರವರೆಗಿದ್ದ ಶ್ರೀಪಾದರಾಯರ ಕಾಲದಲ್ಲಿ ಹರಿದಾಸ ಸಾಹಿತ್ಯಕ್ಕೆ ಕಳೆಬಂದಿತು. ವೇದಾದಿ ಸಕಲ ಶಾಸ್ತ್ರಗಳಲ್ಲಿ, ಕನ್ನಡ ಸಾಹಿತ್ಯದಲ್ಲಿ, ಸಂಗೀತದಲ್ಲಿ, ಶ್ರೀಪಾದರಾಯರಿಗೆ ಆ ಕಾಲದಲ್ಲಿ

Sri Vidyabharathi Book Centre, Sringeri

CC-0. In Public Domain. Digitized by eGangotri

ಸಮರು ಮತ್ತೊಬ್ಬರಿರಲಿಲ್ಲ. ಸಂಗೀತದಲ್ಲಿ 'ಸುಳಾದಿ'ಯೆಂಬ ಪರಿಭಾಷೆಯಿಂದ ಕರ್ಣಾಟಕ ಗಾಯನಕ್ಕೆ ಹೊಸ ಬೆಳಕನ್ನು ಕೊಟ್ಟ ಕೀರ್ತಿ ಈ ಮಹನೀಯರದು. ಇವರ ಸಂಗೀತ–ಸಾಹಿತ್ಯಗಳ ಮಾದರಿಗಳನ್ನು ಮುಂದಿನ ಅಧ್ಯಾಯಗಳಲ್ಲಿ ಕೊಡಲಾಗುತ್ತದೆ.

ಶ್ರೀಪಾದರಾಯರ ಅನಂತರ ಬಂದವರು ವ್ಯಾಸರಾಯರು. ಸಳುವ ನರಸಿಂಹನ ಕಾಲದಿಂದ ಅಚ್ಯುತರಾಯನ ಕಾಲದವರೆಗೆ ಸುಮಾರು ಅರವತ್ತು ವರ್ಷ ಕರ್ಣಾಟಕ ಸಾಮ್ರಾಜ್ಯದೇವತೆಯೆಂದು ಹೊಗಳಿಸಿಕೊಂಡು ಕೃಷ್ಣದೇವರಾಯನಿಂದ ರತ್ನಾಭಿಷಿಕ್ತರಾಗಿ ಕನ್ನಡ ಭಾಷೆಗೆ, ಗಾಯಕರಿಗೆ, ಶಾಸ್ತ್ರಪಂಡಿತರಿಗೆ, ಇವರು ಕೊಟ್ಟ ಆಶ್ರಯವು ಸುವರ್ಣಾಕ್ಷರಗಳಿಂದ ಬರೆದಿಡುವಂತಿವೆ. ಇವರಿಗಿದ್ದ ಮತಸಹಾನುಭೂತಿ, ರಾಜಕಾರಣ ನೈಪುಣ್ಯ ಮೊದಲಾದ ಸದ್ಗುಣಗಳು ಪ್ರಪಂಚದಲ್ಲಿ ಮತ್ತೆ ಯಾರಿಗಾದರಿದ್ದರೆ ಅದು ವಿದ್ಯಾರಣ್ಯರಿಗಿತ್ತೆಂದು ಒಬ್ಬರ ಹೆಸರನ್ನು ಹೇಳಬಹುದು. ಕರ್ಣಾಟಕ ಸಾಮ್ರಾಜ್ಯ ಸ್ಥಾಪನೆ–ಪಾಲನೆಗಳಿಗೆ ಕಾರಣರಾದ ಇವರೀರ್ವರನ್ನು ಬಿಟ್ಟರೆ ಕರ್ಣಾಟಕಕ್ಕೆ ಇತಿಹಾಸವೇ ಇಲ್ಲವೆನ್ನಬಹುದು. ಪಕ್ಷಧರಮಿಶ್ರನೆಂಬ ಉತ್ತರ ಭಾರತದ ಉದ್ದಾಮಪಂಡಿತನು ವ್ಯಾಸರಾಯರನ್ನು ಯಾವ ಬಗೆಯಿಂದಲೂ ಸೋಲಿಸಲರಿಯದೆ, ಅವರ ವಿದ್ಯಾಗುರುಗಳಾದ ಶ್ರೀಪಾದರಾಯರ ಬಳಿಗೆ ಬಂದು ಸ್ವಾಮಿಾ, ನಿಮ್ಮ ಶಿಷ್ಯರ ಪ್ರಭಾವವನ್ನು ಕೇಳಿ!

> ಯದಧೀತಂ ತದಧೀತಂ ಯದನಧೀತಂ ತದಪ್ಯಧೀತಂ ।
> ಪಕ್ಷಧರವಿಪಕ್ಷಃ ನಾವೇಕ್ಷಿ ವಿನಾ ನವೀನ ವ್ಯಾಸೇನ ॥

ತಾ|| ನಾನು ಓದಿರುವುದನ್ನು ಅವರು ಓದಿದ್ದಾರೆ. ನಾನು ಓದದಿರುವುದನ್ನೂ ಅವರು ಓದಿದ್ದಾರೆ. ಈ ಪಕ್ಷಧರನಿಗೆ ಎದುರಾಳಿಯು ಅಭಿನವ ವ್ಯಾಸರ ವಿನಾ ಮತ್ತೊಬ್ಬರನ್ನು ನೋಡಲಿಲ್ಲ; ಎಂದು ಹೇಳಿದನಂತೆ! ವ್ಯಾಸರಾಯರು ಸ್ವಯಂ ಗಾನಪಂಡಿತರೂ ಕನ್ನಡ ಭಾಷಾಪಂಡಿತರೂ ಆಗಿದ್ದುದರಿಂದ ಅವರ ಸಂಗೀತ ಸಾಹಿತ್ಯಗಳ ಮಾದರಿಯನ್ನು ಮುಂದಿನ ಅಧ್ಯಾಯಗಳಲ್ಲಿ ನೋಡಬಹುದು. ಇಂಥಾ ವ್ಯಾಸರಾಯರ ಶಿಷ್ಯರು ಪುರಂದರದಾಸರು.

ಪುರಂದರದಾಸರ ಕಾಲವೆಂದರೆ ಕರ್ಣಾಟಕ ಸಂಗೀತಸಾಹಿತ್ಯಗಳ ಸುವರ್ಣಯುಗ. ಗಾಯನ ಮೂಲಕ ಕನ್ನಡ ಭಾಷಾಪ್ರಚಾರ ಧರ್ಮ

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಚಾರ ಮಾಡಿ ಸಮಾಜವನ್ನುದ್ಧರಿಸಲು ಕಂಕಣ ಕಟ್ಟಿ ನಿಂತವರು ಪುರಂದರದಾಸರು. ಅವರವರ ಆಶ್ರಮಧರ್ಮಪರಿಪಾಲನೆಯಲ್ಲಿ, ಶಾಸ್ತ್ರ ಗ್ರಂಥರಚನೆಯಲ್ಲಿ, ರಾಜ್ಯಕಾರ್ಯನಿರ್ವಹಣದಲ್ಲಿ ಯಾವುದು ಮೇಲ್ಕಂಡ ಮುನಿತ್ರಯರಿಂದ ಸಾಧ್ಯವಾಗುತ್ತಿರಲಿಲ್ಲವೋ ಅದು, ಆ ಕಾರ್ಯಕ್ಕೇ ಜನ್ಮವನ್ನು ಧಾರೆಯೆರೆದ ಪುರಂದರದಾಸರಿಂದಾಯಿತು. ದಾಸರ ಸಂಗೀತ, ಸಾಹಿತ್ಯಗಳ ಮಾದರಿಗಳನ್ನು ಮುಂದಿನ ಅಧ್ಯಾಯಗಳಲ್ಲಿ ಕೊಟ್ಟಿರುವುದರಿಂದ ಅವುಗಳನ್ನು ಅಲ್ಲಿ ನೋಡಬಹುದು. ಪುರಂದರದಾಸರು ಕರ್ಣಾಟಕ ಗಾಯನ ಸಂಪ್ರದಾಯಕ್ಕೆ ಆಚಾರ್ಯಪುರುಷರಾದ ವಿವರವನ್ನು ಮುಂದಿನ ಪುಟಗಳಲ್ಲಿ ಬರುವ 'ಹರಿದಾಸರು ಮತ್ತು ಗಾನಕಲೆ' ಎಂಬ ಅಧ್ಯಾಯದಲ್ಲಿ ನೋಡಬಹುದು.

ಒಂದು ವೈಶಿಷ್ಟ್ಯ :

ಹರಿದಾಸರೆಲ್ಲರೂ ಭಕ್ತಿಪಂಥಿಗಳಾದುದರಿಂದ ಅವರ ಉಪಾಸನೆಯು ಸಗುಣೋಪಾಸನೆ. ಉಪಾಸನೆಗೆ ತಕ್ಕಂತೆ ಅವರು ಪಡೆದ ಸಾಕ್ಷಾತ್ಕಾರ ಸಗುಣ ಸಾಕ್ಷಾತ್ಕಾರ. ಕರ್ಣಾಟಕದಲ್ಲಿ ಮಾತ್ರವಲ್ಲ, ಮಹಾರಾಷ್ಟ್ರದಲ್ಲಿ ಜನ್ಮತಾಳಿದ ಹರಿದಾಸರದೂ ಸಗುಣೋಪಾಸನೆ. ಉತ್ತರ ಭಾರತದ ತುಲಸೀದಾಸ ಕಬೀರದಾಸರು ಸಗುಣೋಪಾಸಕರು. ಪರಮಾತ್ಮನನ್ನು ಬಯಲೆಂದು ಯಾವ ದೇಶದ ಹರಿದಾಸರೂ ಭಾವಿಸಲಿಲ್ಲ. ಬಯಲೆಂದರೆ (ಆಕಾಶಂ ಗಗನಂ ಶೂನ್ಯಂ) ಶೂನ್ಯವೆಂದರ್ಥವಾಗುವುದು. ಶೂನ್ಯವೆಂದರೆ ನಾಮ ರೂಪ ಗುಣ ಕ್ರಿಯೆಗಳೊಂದೂ ಇರದಿರುವುದು. ಇಂತಹದೊಂದು ಏನಾದರಿದ್ದರೆ ಅದನ್ನು ಭಾವನೆಗೆ ತೆಗೆದುಕೊಳ್ಳುವುದು ಹೇಗೆ? ಭಾವನೆಗೆ ನಿಲುಕದ ಶೂನ್ಯವು ಸಾಕ್ಷಾತ್ಕಾರವಾಯಿತೆಂಬ ಬಗೆ ಹೇಗೆ? ಅಕ್ಷಿಗೆ ಗೋಚರವಾಗುವುದು ಬೇಡ, ಮತ್ಯಾವ ಇಂದ್ರಿಯಗಳಿಗಾದರೂ ಯಾವ ರೀತಿಯಿಂದಾದರೂ ತಿಳಿಯಬೇಕಲ್ಲವೇ? ತಿಳಿವಳಿಕೆಗೆ ಸಿಗದ ಶೂನ್ಯವನ್ನು ಶಬ್ದದಿಂದ ವರ್ಣಿಸುವುದು ಹೇಗೆ? ಈ ಎಲ್ಲ ಪ್ರಶ್ನೆಗಳೂ ಅವರ ಮುಂದಿದ್ದುದರಿಂದ ಹರಿದಾಸರು ದೇವರನ್ನು ಬಯಲೆನ್ನುವ ಗೊಡವೆಗೆ ಹೋಗಲಿಲ್ಲ. ಪುರುಷಸೂಕ್ತವೂ ಸಕಲ ಪುರಾಣಗಳೂ ಪರಮಾತ್ಮನನ್ನು ಯಾವ ರೀತಿ ವರ್ಣಿಸಿದವೋ ಆ ರೀತಿಯಿಂದ ಅವರು ಭಗವದುಪಾಸನೆ

Sri Vidyabharathi Book Centre, Sringeri

CC-0. In Public Domain. Digitized by eGangotri

ಮಾಡಿದರು. ಅರ್ಜುನನಂತೆ ದಿವ್ಯ ವಿಶ್ವರೂಪವನ್ನು ಕಂಡರು. ಕಂಡದ್ದನ್ನು ಭಾಷೆಯಿಂದ ವರ್ಣಿಸಿದರು. ಆ ವರ್ಣನೆಗಳು ಹೃದಯಂಗಮವಾಗಿವೆ. ಭಾಷೆಗೆ ಭೂಷಣಗಳಾಗಿವೆ. ಭಾವನೆಗೆ ವಿಷಯವಾಗದ, ಭಾಷೆಗೆ ಭೂಷಣವಾಗದ ಬಿಡಿನುಡಿಗಳು ಹರಿದಾಸ ಸಾಹಿತ್ಯದಲ್ಲಿಲ್ಲ.

ಈ ವಿಮರ್ಶಾತ್ಮಕ ಗ್ರಂಥದಲ್ಲಿರುವ ಸಂಗತಿಗಳೆಂದರೆ—ಹರಿದಾಸ ಸಾಹಿತ್ಯದ ಉಗಮ ಮತ್ತು ಕಾಲ, ಹರಿದಾಸರಿಗೂ ಗಾನಕಲೆಗೂ ಇರುವ ಸಂಬಂಧ, ಒಂದೆಡೆಯಲ್ಲಿ ಕೊಟ್ಟಿರುವ ನೂರು ಉಗಾಭೋಗಗಳು, ಹರಿದಾಸರ ಜ್ಞಾನಭಕ್ತಿವೈರಾಗ್ಯಗಳು, ನವವಿಧ ಭಕ್ತಿಯಲ್ಲಿ, ನವರಸಗಳಲ್ಲಿ ಹಾಡಿರುವ ಮಾದರಿಗಳು, ವಿವಿಧ ವಿಷಯಗಳಲ್ಲಿ, ಪದ್ಯಗ್ರಂಥಗಳಲ್ಲಿ ಇರುವ ಕಾವ್ಯಚಾತುರ್ಯಗಳು, ಸಾಕ್ಷಾತ್ಕಾರದ ಅನುಭವಗಳು; ಇಷ್ಟು ವಿಷಯ ಗಳನ್ನೂ ಅವರವರ ಮಾತಿನಿಂದ ತಿಳಿಸಿರುವುದಲ್ಲದೆ ಲೇಖಕನ ಸ್ವಾತಂತ್ರ್ಯ ವೇನೂ ಇರುವುದಿಲ್ಲ. ಸಂಸ್ಕೃತ ಗ್ರಂಥಗಳಲ್ಲಿರುವ ಅಭಿಪ್ರಾಯಗಳನ್ನು ಸಂಸ್ಕೃತದಲ್ಲೇ ಓದಿದಾಗ ಕೇಳಿದಾಗ ಮನಸ್ಸಿನ ಮೇಲಾಗುವ ಪರಿಣಾಮಕ್ಕೂ ಅದೇ ಅಭಿಪ್ರಾಯಗಳನ್ನು ಹರಿದಾಸರ ತಾಯ್ನುಡಿಯಲ್ಲಿ ಓದಿದಾಗ ಮನಸ್ಸಿನ ಮೇಲಾಗುವ ಪರಿಣಾಮಕ್ಕೂ ಇರುವ ವ್ಯತ್ಯಾಸವನ್ನು ತಾಯ್ನುಡಿಯ ಸವಿಯರಿತಿರುವ ಸಹೃದಯರು ಹೇಳಬೇಕಲ್ಲದೆ ಗ್ರಂಥಕರ್ತನಿಗೆ ಅಧಿಕಾರ ವಿರುವುದಿಲ್ಲ. ಸಕ್ಕರೆ ಹೇಗಿದೆಯೆಂದರೆ ಸಿಹಿಯಾಗಿದೆಯೆಂದು ಮಾತ್ರ ಹೇಳ ಬಹುದು. ಸಿಹಿ ಹೇಗಿದೆಯೆಂದು ಮತ್ತೆ ಕೇಳಿದರೆ ತಿಂದುನೋಡು ಎನ್ನುವು ದಕ್ಕಿಂತ ಮಾರುತ್ತರವಿಲ್ಲ.

ಅಧ್ಯಾಯ ಎರಡು

ಹರಿದಾಸರು ಮತ್ತು ಗಾನಕಲೆ

'ಓಂ'ಕಾರವು ಸಕಲ ವರ್ಣಾತ್ಮಕ ವೇದಶಾಸ್ತ್ರಗಳಿಗೆ ಮೂಲವಾಗಿರುವಂತೆ, ನಾದಾತ್ಮಕ ಸಂಗೀತಶಾಸ್ತ್ರಕ್ಕೂ ಮೂಲವಾಗಿರುವುದು. ಧ್ವನಿ ಮಾಡಬಲ್ಲ ಮಾನವಪ್ರಾಣಿಯ ನಾಭಿಯಿಂದ ಹೊರಟು ಕಂಠದಿಂದ ಕೇಳಿಬರುವ ಮೊಟ್ಟ

Sri Vidyabharathi Book Centre, Sringeri

CC-O. In Public Domain. Digitized by eGangotri

ಮೊದಲ 'ಂಂಂ' ನಾದವು 'ಅಉಮ್' ಎಂಬ ವ್ಯಕ್ತಾವ್ಯಕ್ತ ಸ್ಥಿತಿಯಲ್ಲಿ ಕೇಳಿ 'ಓಂ' ಎಂಬ ವ್ಯಕ್ತರೂಪವನ್ನು ತಾಳುವುದು. ಯಾವ ದೇಶಕಾಲಗಳಲ್ಲಿ ಯಾರ ಕಂಠದಿಂದ ಬಂದರೂ ಅದು 'ಓಂ'ಕಾರವೇ ಆಗುವುದು. ಆದ್ದರಿಂದ ಎಲ್ಲಕ್ಕೂ ಮೂಲ 'ಓಂ'ಕಾರವೆಂದು ಶಾಸ್ತ್ರಕಾರರು ನಿರ್ಣಯಿಸಿರುವರು. ಪ್ರಾಚೀನ ಗ್ರಂಥಗಳಲ್ಲಿ ನಾದದಿಂದ ವರ್ಣವೂ ವರ್ಣಗಳಿಂದ ಪದವೂ ಪದಗಳಿಂದ ವಾಕ್ಯವೂ ವಾಕ್ಯಗಳಿಂದ ವ್ಯವಹಾರವೂ ನಡೆಯುವ ಕಾರಣ, 'ನಾದೇನ ವ್ಯಜ್ಯತೇ ವರ್ಣಃ ಪದಂ ವರ್ಣಾತ್ ಪದಾದ್ವಚಃ | ವಚಸಾ ವ್ಯವಹಾರೋಯಂ ನಾದಾಧೀನಮತೋ ಜಗತ್ ||' ಎಂದು ಹೇಳಿರುವರು. ಆದ್ದರಿಂದ ನಾದದ ಸ್ಥಾನವು ಬಲು ದೊಡ್ಡದು. ನಾದೋಪಾಸನೆಯೆಂಬುವುದು ಸಂಗೀತಕ್ಕೆ ಶಾಸ್ತ್ರಸಮ್ಮತವಾದ ಹೆಸರು. ಸ್ಮೃತಿಕರ್ತ ಯಾಜ್ಞವಲ್ಕ್ಯರು ನಾದೋಪಾಸನೆಯ ಮಹಿಮೆಯನ್ನು ಅನುಭವಿಸಿ, 'ವೀಣಾವಾದನತತ್ತ್ವಜ್ಞಃ ಶ್ರುತಿಜಾತಿವಿಶಾರದಃ ತಾಲಜ್ಞಶ್ಚಾಪ್ರಯಾಸೇನ ಮೋಕ್ಷಮಾರ್ಗಂಚ ಗಚ್ಛತಿ ||' ಎಂಬುದಾಗಿ ಸ್ಪಷ್ಟಪಡಿಸಿರುವರು. ಅಂದಬಳಿಕ ನಾದೋಪಾಸನೆಯೆಂದರೆ ಬ್ರಹ್ಮೋಪಾಸನೆಯೆಂದೇ ವ್ಯಾಖ್ಯಾನವಾಗುವುದು. 'ಓಂ'ಕಾರದ ನಾದಸಂಗೀತವಾದರೆ ವರ್ಣಸಾಹಿತ್ಯವೆನಿಸುವುದು. ವಾಕ್ಕಿನಿಂದ ಅರ್ಥ ಬೇರೆಯಿರದಂತೆ ಸಂಗೀತದಿಂದ ಸಾಹಿತ್ಯ ಬೇರೆಯಿರದು. ಸಂಗೀತದಲ್ಲಿ ಸಾಮಗಾನಕ್ಕೆ ವೈದಿಕ ಗಾನವೆಂತಲೂ, ರಾಮಾಯಣಾದಿ ಆರ್ಷ ಗ್ರಂಥಗಳನ್ನು ರಾಗವಾಗಿ ಪಾರಾಯಣ ಮಾಡುವುದಕ್ಕೆ ವ್ಯಾಖ್ಯಾಗಾನವೆಂತಲೂ, ಸಂಸ್ಕೃತ-ಪ್ರಾಕೃತ ಭಾಷೆಗಳಲ್ಲಿ ಕವಿತೆ ಮಾಡಿ ದೇವರನ್ನು ಕೊಂಡಾಡುವುದಕ್ಕೆ ಲೌಕಿಕ ಗಾನವೆಂತಲೂ, ದೇವತಾಸ್ತೋತ್ರವಲ್ಲದ ಗಾನಕ್ಕೆ ಕೇವಲ ಲೌಕಿಕ ಗಾನವೆಂತಲೂ, ಶಾಸ್ತ್ರಜ್ಞರು ಪ್ರಭೇದಗಳನ್ನು ಕಲ್ಪಿಸಿರುವರು.

ಯಜ್ಞಾದಿಗಳನ್ನು ಆಚರಿಸುವಾಗ ಉಚ್ಚಕಂಠದಿಂದ ಒಂದೇ ಸ್ವರದಲ್ಲಿ ಹೇಳುವ ಕೆಲವು ವೇದಮಂತ್ರಗಳಿವೆ. ಅರ್ಥವತ್ತಾದ ಸಾಹಿತ್ಯಪ್ರಭಾವದಿಂದ ಆ ಏಕಸ್ವರ ಗಾಯನವು ಉತ್ತಮೋತ್ತಮವಾಗಿ ಕೇಳಿಸುತ್ತದೆ. ಋಗ್ಯಜುಸ್ಸಾಮವೇದಗಳಲ್ಲಿ ಕ್ರಮವಾಗಿ ಉದಾತ್ತ, ಅನುದಾತ್ತ, ಸ್ವರಿತಗಳೆಂಬ ಮೂರು ಸ್ವರಗಳೂ, ಮತ್ತೆ ಉದಾತ್ತತರ, ಅನುದಾತ್ತತರಗಳು ಎಂಬೆರಡು ಸ್ವರಗಳೂ, ಅನಂತರ ಮಂದ್ರ, ಅತಿಸ್ವಾರಗಳೆಂಬ ಸ್ವರಗಳೂ ಸೇರಿ

Sri Vidyabharathi Book Centre, Sringeri

CC-0. In Public Domain. Digitized by eGangotri

ಸಪ್ತಸ್ವರ ಗಾಯನವಾಗುತ್ತದೆ. ಸಂಪೂರ್ಣ ಸಪ್ತಸ್ವರ ಗಾಯನವಿರುವುದು ಸಾಮವೇದದಲ್ಲಿ ಮಾತ್ರ. ಆದ್ದರಿಂದ ಋಷಿಗಳು ಸಾಮವೇದದಿಂದ ಸಂಗೀತದ ಉಗಮವಾಯಿತೆಂದು ಸ್ಪಷ್ಟೀಕರಿಸಿರುತ್ತಾರೆ.

ಸಂಗೀತ ಇಷ್ಟು ಪ್ರಾಚೀನ ಶಾಸ್ತ್ರವಾದರೂ, ಈ ಶಾಸ್ತ್ರದ ಮೇಲೆ ಎರಡು ಸಾವಿರ ವರ್ಷಗಳಿಗಿಂತ ಪುರಾತನ ವಿಧಾಯಕ ಗ್ರಂಥ ಯಾವುದೂ ಉಪಲಬ್ಧವಾಗಿಲ್ಲ. ಕ್ರಿ.ಪೂ. ಒಂದನೇ ಶತಮಾನದಲ್ಲಿ ಜನ್ಮತಾಳಿದವನೆಂದು ತರ್ಕಸಿದ್ಧವಾಗಿರುವ ಭರತಮುನಿಯು, ನಾಟ್ಯಶಾಸ್ತ್ರದ ಮೇಲೆ ಮುವ್ವತ್ತೇಳು ಅಧ್ಯಾಯಗಳ ಗ್ರಂಥವೊಂದನ್ನು ಬರೆದಿರುತ್ತಾನೆ. ಇಷ್ಟು ದೊಡ್ಡ ಗ್ರಂಥದಲ್ಲಿ ಎರಡೇ ಎರಡು ಅಧ್ಯಾಯಗಳಲ್ಲಿ ಸಂಗೀತಶಾಸ್ತ್ರದ ಮೇಲೆ ಸೂತ್ರವತ್ತಾಗಿ ಕೆಲವು ನಿಬಂಧನೆಗಳನ್ನು ಮಾಡಿರುತ್ತಾನೆ. ಭರತಮುನಿಗಿಂತ ಮುಂಚೆ ಗಾಯನ ಪದ್ಧತಿ ಹೇಗಿತ್ತೆಂಬುದನ್ನು ತಿಳಿಯಲು ಸಾಧ್ಯವಿಲ್ಲ. ತನಗಿಂತ ಪೂರ್ವದಲ್ಲಿ ಇದ್ದ ಪದ್ಧತಿಯನ್ನು ಭರತನು ಅನುಸರಿಸಿದನೆಂದು ಅನೇಕರು ಅಭಿಪ್ರಾಯಪಡುತ್ತಾರೆ. ಸಂಪ್ರದಾಯ ಗ್ರಂಥಗಳಲ್ಲಿ–ಸದಾಶಿವ ಬ್ರಹ್ಮ ಆಂಜನೇಯ ರಾವಣ ಅರ್ಜುನ ನಾರದ ಮೊದಲಾದವರು ಲಕ್ಷ ಲಕ್ಷ ಗ್ರಂಥಗಳನ್ನು ಬರೆದಿರುವರೆಂದು ಹೇಳುತ್ತಾರೆ. ಆ ಹೇಳಿಕೆ ಕೇಳಿಕೆಯಲ್ಲಿ ಮಾತ್ರ ನಿಂತಿರುತ್ತದೆ. ಆದ್ದರಿಂದ ಭರತಮುನಿಯನ್ನು ಸಂಗೀತಕ್ಕೂ ನೃತ್ಯಕ್ಕೂ ಆದಿ ಆಚಾರ್ಯನೆಂದು ತೃಪ್ತಿಪಡಬೇಕಾಗುತ್ತದೆ. ಭರತನು ತನ್ನ ಗ್ರಂಥದಲ್ಲಿ ಲೌಕಿಕ ಸಂಗೀತಕ್ಕಾಗಿ ಅನೇಕ ಪ್ರಮೇಯಗಳನ್ನು ಕಂಡು ಹಿಡಿದು ತಕ್ಕ ಪರಿಭಾಷೆಗಳನ್ನು ಕಲ್ಪಿಸಿರುವುದು ಒಡೆದುಕಾಣುತ್ತದೆ. ಭಾರತೀಯ ಸಂಗೀತದ ಬೆಳವಣಿಗೆ ಅವನ ಗ್ರಂಥದಿಂದಲೇ ಆಗಿರುತ್ತದೆ. ಮತ್ತೆ ಶಾಸ್ತ್ರಗ್ರಂಥಗಳನ್ನು ಬರೆದವರು ಭರತನ ಮತವನ್ನು ಆಧಾರವಾಗಿ ಇಟ್ಟುಕೊಂಡು ಬರೆದಿರುತ್ತಾರೆ. ಅರ್ಥವಾಡಿಕೊಂಡ ವಿಷಯಗಳನ್ನು ತಮ್ಮ ರೀತಿಯಿಂದ ಬೆಳೆಸಿರುತ್ತಾರೆ. ಅರ್ಥವಾಗದೆ ಗಹನವಾಗಿರುವುದನ್ನು ದೇವಗಾನವೆಂದು ಕೈಬಿಟ್ಟಿರುತ್ತಾರೆ. ಒಟ್ಟಿನಲ್ಲಿ ಭರತ ಗಾಯನವು ವ್ಯಾಸರ ಬ್ರಹ್ಮಸೂತ್ರದಂತಿದೆ. ಒಬ್ಬೊಬ್ಬರೂ ತಮ್ಮ ತಮ್ಮ ಮತವನ್ನು ಸ್ಥಾಪಿಸಿದ್ದಾರೆ. ಪರ್ಯವಸಾನದಲ್ಲಿ ಅದು ಎರಡು ದೊಡ್ಡ ಪ್ರಭೇದವಾಗಿ ನಿಂತಿದೆ. ಆ ಎರಡರಲ್ಲಿ ಒಬ್ಬೊಬ್ಬರೂ ತಮ್ಮದೇ ಶಾಸ್ತ್ರೀಯವೆಂದು ಪ್ರತಿಪಾದಿಸುತ್ತಾರೆ.

ಭರತನಿಂದ ಎಷ್ಟೋ ಕಾಲಕ್ಕೆ ಮುಂಚೆ ಆರ್ಯ–ದ್ರಾವಿಡ ಸಂಸ್ಕೃತಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳು ಬೆರೆತು ಸಮರಸವಾಗಿದ್ದವು. ಒಂದು ಸಂಸ್ಕೃತಿಗಿಂತ ಮತ್ತೊಂದು ಹೀನವೆಂಬ ಭಾವನೆ ಉಳಿದಿರಲಿಲ್ಲ. ಶ್ರೀರಾಮಯುಧಿಷ್ಠಿರಾದಿ ಸಾರ್ವಭೌಮರ ಪ್ರಭಾವದಿಂದ ಭಾರತವು ಏಕರಾಷ್ಟ್ರವಾಗಿತ್ತು. ಭರತನು ಆಸೇತುಹಿಮಾಚಲದವರೆಗೆ ಸಂಚರಿಸಿ ಜನರ ಪ್ರವೃತ್ತಿ ಹೇಗಿತ್ತೆಂಬುದನ್ನು ಅಭ್ಯಾಸ ಮಾಡಿದ್ದನು. ಆ ಪ್ರವೃತ್ತಿಗಳನ್ನು ಭಾರತೀ, ಸಾತ್ವತೀ, ಆರಭಟೀ, ಕೈಶಿಕೀ ಎಂದು ಕರೆದಿದ್ದನು. ಪ್ರವೃತ್ತಿ ಪರಿಭಾಷೆಗಳನ್ನು ಮತ್ತೆ ದೇಶಪರಿಭಾಷೆಯಾಗಿರಬೇಕೆಂದು ಅವಂತೀ, ಅರ್ಧಮಾಗಧೀ, ಪಾಂಚಾಲಮಧ್ಯಾ, ದಾಕ್ಷಿಣಾತ್ಯಾ ಎಂದು ಕರೆದನು. ದಾಕ್ಷಿಣಾತ್ಯರ ವಿಷಯದಲ್ಲಿ—'ತತ್ರ ದಾಕ್ಷಿಣಾತ್ಯಾ ಬಹುಗೀತನೃತ್ಯವಾದ್ಯಾಃ ಕೈಶಿಕೀಪ್ರಾಯಾಃ ಚತುರಮಧುರ ಲಲಿತಾಂಗಾಭಿನಯಾಃ' ಎಂದು ಉಲ್ಲೇಖಿಸಿ ಟಿಪ್ಪಣಿ ಮಾಡಿದ್ದನು. ಅನಂತರ ತನ್ನ ದೇಶಪರ್ಯಟನದ ಅನುಭವಕ್ಕೆ ಅನುಸಾರವಾಗಿ ಶಾಸ್ತ್ರಗ್ರಂಥವನ್ನು ಬರೆದನು. ಭರತನ ದಾಕ್ಷಿಣಾತ್ಯರೆಂದರೆ ಕರ್ಣಾಟಕ, ಆಂಧ್ರ, ಅರವ, ಮಲೆಯಾಳ, ತುಳು ದೇಶಗಳ ಜನರು.

ಯಾವ ದೇಶದಲ್ಲಾಗಲಿ ಮೊದಲು ಹುಟ್ಟುವುದು ಭಾಷೆ. ಭಾಷೆ ಬೆಳೆದು ಬಳಕೆಗೆ ಬಂದಮೇಲೆ, ಬೆಳೆದ ಬೆಳವಣಿಗೆ ಸ್ವಚ್ಛಂದವಾಗದಂತೆ ತಡೆಗಟ್ಟಿದ್ದು ವ್ಯಾಕರಣ. ಅಂತೆಯೇ ದಾಕ್ಷಿಣಾತ್ಯರಲ್ಲಿ ಹುಟ್ಟಿ ಬೆಳೆದದ್ದು ಗಾನ ಮತ್ತು ನರ್ತನ. ಅಸಹ್ಯವಾಗದಂತೆ ಅಶ್ಲೀಲವಾಗದಂತೆ ನಿಯಮಬದ್ಧ ಮಾಡಿದವನು ಭರತ ಮುನೀಶ್ವರ. ಇಷ್ಟು ದೊಡ್ಡ ಅನುಭವಿಯಾದುದರಿಂದ ಭರತನು ನಿಖಿಲ ಭಾರತಕ್ಕೂ ಆಚಾರ್ಯಪುರುಷನಾದನು. ಅಸಂಸ್ಕಾರಿಗಳ ಬಯಲಾಟದಲ್ಲಾಗಲಿ, ಸಂಸ್ಕಾರಿಗಳ ನಾಟಕಗಳಲ್ಲಾಗಲಿ, ನಟಗಾಯಕರುಗಳಿಗೆ ಭರತರೆಂದು ಹೆಸರು ಬರುವಷ್ಟು ಜನಾನುರಾಗವನ್ನು ಭರತನ ನಾಟ್ಯಶಾಸ್ತ್ರವು ಪಡೆಯಿತು. ಅವರ ವಾಕ್ಯಕ್ಕೆ ಭರತವಾಕ್ಯವೆಂದು ಹೆಸರಾಯಿತು. ಮಹಾಕವಿ ಕಾಳಿದಾಸನು, 'ಮುನಿನಾ ಭರತೇನ ಯಃ ಪ್ರಯೋಗೋ ಭವತೀಷ್ವಷ್ಟರಸಾಶ್ರಯೋ ನಿಯುಕ್ತಃ | ಲಲಿತಾಭಿನಯಂ ತಮದ್ಯ ಭರ್ತಾ ಮರುತಾಂ ಶ್ರೋತು ಮನಾಃ ಸ ಲೋಕಪಾಲಃ ||' ಎಂಬದಾಗಿ ತನ್ನ ವಿಕ್ರಮೋರ್ವಶಿ ಯದಲ್ಲಿ ಉಲ್ಲೇಖಿಸಿದನು. ಭರತನಿಂದ ವೈದಿಕ ಸಮಾಜಕ್ಕೆ ಮೀಸಲಾಗಿದ್ದ ಗಾಯನವು ಸಾರ್ವಜನಿಕವಾಯಿತು. ಸೂತ್ರವತ್ತಾಗಿ ಹಾಕಿಕೊಟ್ಟ ಗಾನಪದ್ಧತಿ ವಿಸ್ತಾರವಾಗಿ ಬೆಳೆಯಿತು. ಭರತನ ಸಂಪ್ರದಾಯ

Sri Vidyabharathi Book Centre, Sringeri

CC-O. In Public Domain. Digitized by eGangotri

ದಲ್ಲಿ ಮುಖ್ಯವೂ ಪ್ರೌಢವೂ ಆದದ್ದು ಧ್ರುವಪದ ಗಾನ. ಅಂದರೆ ಜಾತಿ ವಿನ್ಯಾಸವಮಾಡಿ ಧ್ರುವಪದವನ್ನು ಹಾಡುವುದು. ಅಂದರೆ ರಾಗಾಲಾಪನೆ ಮಾಡಿ ಪಲ್ಲವಿಯನ್ನು ಹಾಡುವುದು. ಈ ಗಾನದಲ್ಲಿ ವಾದ್ಯಗಳಿರಬಹುದು, ನರ್ತನವಿರಬಹುದು. ಭರತನದು ನಾಟ್ಯಶಾಸ್ತ್ರವಾದ ಕಾರಣ ನಾಟ್ಯ, ನಾಟ್ಯಕ್ಕೆ ತಕ್ಕ ಗಾಯನ, ಗಾಯನಕ್ಕೆ ತಕ್ಕ ವಾದನ. ಇದೇ ಭರತನ ನಾಟ್ಯ ಶಾಸ್ತ್ರಸರ್ವಸ್ವ.

ದಿನದಿನಕ್ಕೆ ನಿಖಿಲ ಭಾರತದಲ್ಲೂ ಬೆಳೆದ ಭರತಗಾನ ಪದ್ಧತಿಯಲ್ಲಿ ಸರ್ವಸಾಧ್ಯವಲ್ಲದ ಧ್ರುವಪದದ ಕ್ಲಿಷ್ಟತೆ ಕಡಮೆಯಾಗುತ್ತಬಂತು. ಲಯ ತಾಳಗಳ ನಿಬದ್ಧತೆ ಸಡಿಲವಾಯಿತು. ವಿವಿಧ ಜಾತಿಗಳಲ್ಲಿ ವಿವಿಧ ಮಟ್ಟು ಗಳನ್ನು ಸರಳವಾಗಿ ಹಾಡುವ ಸರಣಿ ಹುಟ್ಟಿತು. ಈ ಗಾಯನ ತತ್ಕಾಲದಲ್ಲಿ ಸ್ಥಾಯಿಯಾ ಎಂದು ಕರೆಸಿಕೊಂಡಿತು. ಮುಂದೆ ಶಾರ್ಙ್ಗದೇವನ ಕಾಲದಲ್ಲಿ 'ಉಗಾಭೋಗ'ವೆಂಬ ಹೆಸರನ್ನು ಪಡೆಯಿತು. ಒಂಬತ್ತನೆ ಶತಮಾನದಲ್ಲಿ ಸ್ಥಾಯಿಯಾ ಪದ್ಧತಿಗೆ ಭಾಷೆಯನ್ನು ಹುದುಗಿಸಿ ಹಾಡಿದ ಮೊದಲ ಕೀರ್ತಿ ಕನ್ನಡ ಭಾಷೆಗೆ ಬಂದಿತು. ಹರಿದಾಸರಲ್ಲಿ ಮೊದಲಿಗರೆನಿಸಿದ ಅಚಲಾನಂದರ ಹೆಸರು ಮುಂದೆ ಬಂದಿತು.

ಸಂಗೀತಕ್ಕೆ ಅನುಕೂಲವಾಗುವಂತೆ ಭಾಷೆಯನ್ನು ಹೊಂದಿಸುವುದು ಸಂಪೂರ್ಣ ಭಾಷಾಜ್ಞಾನವಿದ್ದವರಿಗೆ ಮಾತ್ರ ಸಾಧ್ಯ. ಸಂಗೀತದ ಭಾಷೆ ಸಾಮವೇದದ ಭಾಷೆಯಂತಿರಬೇಕು. ಛಂದಸ್ಸು ಅಲಂಕಾರ ವಿಶೇಷಾರ್ಥ ಅರ್ಥೋಚ್ಚಾರ ಶಿಥಿಲೋಚ್ಚಾರಗಳಾವುವಕ್ಕೂ ಒಳಪಟ್ಟ ಕ್ಲಿಷ್ಟಭಾಷೆ ಆಗಿರಬಾರದು. ಸಾಕಷ್ಟು ವ್ಯಾಕರಣ ನಿಯಮಕ್ಕೊಳಪಟ್ಟ ಸರಳ ಭಾಷೆ ಆಗಿರಬೇಕು. ಅಂತಹ ಸಂಗೀತಭಾಷೆಯನ್ನು ಕನ್ನಡದಲ್ಲಿ ಕಂಡುಹಿಡಿದವರು ಅಚಲಾನಂದರು. ಅವರು ಸಮಗ್ರ ಭರತಖಂಡವನ್ನು ಸಂಚರಿಸಿದವರು; ಶಾಸ್ತ್ರವಿದ್ಯಾಪಾರಂಗತರು; ಗಾನವಿದ್ಯಾಕುಶಲರು; ಅತಿಮಾನುಷ ಮಹಿಮೆ ತೋರಿ ನೇಪಾಳದ ರಾಜನಿಂದ ಸನ್ಮಾನಿತರಾದವರು; ಧರ್ಮ ಪ್ರಚಾರಕ್ಕಾಗಿ ಕರ್ಣಾಟಕದಲ್ಲಿ ಆರು ಕೀರ್ತನಪೀಠಗಳನ್ನು ಸ್ಥಾಪಿಸಿದವರು. ಅಚಲಾನಂದರು ತಾವಿದ್ದ ಕಾಲವನ್ನೂ ತಮಗೆ ಸಾಕ್ಷಾತ್ಕಾರವಾದ ದಿನ ವನ್ನೂ ತಿಳಿಸುವ 'ಕಾಶೀತಿ ಸಂಖ್ಯಾ ಶಕ ಕಾಲಕೇಬ್ದೇ ವಿಳಂಬಿ ವರ್ಷೇ ಕಲಿ ಚೈತ್ರ ಶುಕ್ಲೇ ಪಕ್ಷೇ ದಶಮ್ಯಾಂ ದ್ವಿನಮಧ್ಯಕಾಲೇ ಪ್ರತ್ಯಕ್ಷತೋ ಭೂತ್

Sri Vidyabharathi Book Centre, Sringeri

CC-O. In Public Domain. Digitized by eGangotri

ಗುರುವಿಠಲಾಖ್ಯಃ' ಎಂಬ ಶ್ಲೋಕದಲ್ಲಿ ಶಾಲೀವಾಹನ ಶಕ ೮೦೧ ಎಂದು ತಿಳಿಸಿರುವ ಕಾರಣ ಸಂಶಯಕ್ಕೆ ದಾರಿಯಿರುವುದಿಲ್ಲ. ಇವರ ಹಾಡುಗಳು ೨೫ಕ್ಕಿಂತ ಹೆಚ್ಚಾಗಿ ದೊರೆಯುವುದಿಲ್ಲ. ಇವರ ಹಾಡಗಳ ಭಾಷೆ ತಿಳಿಗನ್ನಡದ ಸಂಗೀತ ಶೈಲಿಯಲ್ಲಿದೆ. ಇವರ ಪರಂಪರೆಯವರು ಕರ್ನಾಟಕದಲ್ಲಿ ಸಂಗೀತ ವನ್ನು ಬೆಳೆಸಿದರು. ಇವರ ಸರಣಿಯನ್ನು ನರಹರಿತೀರ್ಥರು ಸ್ವೀಕರಿಸಿ ದರು. ನರಹರಿತೀರ್ಥರ ಸಮಕಾಲಿಕ ಜಯದೇವ ಕವಿಯು ಬಂಗಾಳ ಬಿಹಾರ ಪ್ರಾಂತ್ಯಗಳಲ್ಲಿದ್ದು ಇದೇ ಸಂಪ್ರದಾಯವನ್ನು ಅವಲಂಬಿಸಿಯೋ ಎಂಬಂತೆ, ಗೀತಗೋವಿಂದವೆಂಬ ದಿವ್ಯಕಾವ್ಯವನ್ನು ರಚಿಸಿ, ಪ್ರತಿ ಗೀತೆಗೂ ರಾಗತಾಳಗಳನ್ನು ಗೊತ್ತುಪಡಿಸಿದನು.

ಶಾರ್ಙ್ಗದೇವ

ಭರತಮುನಿಯ ಅನಂತರ ಸಂಗೀತಶಾಸ್ತ್ರದಮೇಲೆ ಪ್ರಸಿದ್ಧ ಗ್ರಂಥ ರಚನೆಮಾಡಿದವನು ಶಾರ್ಙ್ಗದೇವ. ಈತನದು ಕಾಶ್ಮೀರದೇಶ. ದೇವಗಿರಿ ಯನ್ನು ಆಳಿದ ಸಿಂಹಣರಾಜನ (೧೨೧೦-೪೭) ಆಶ್ರಯದಲ್ಲಿದ್ದವನು. ವೇದಾಂತದಲ್ಲಿ ಅಧ್ಯಾತ್ಮ ವಿವೇಕವನ್ನೂ ಸಂಗೀತದಲ್ಲಿ ಸಂಗೀತರತ್ನಾಕರ ವನ್ನೂ ಇವನು ಬರೆದನು. ಸಂಗೀತರತ್ನಾಕರದಲ್ಲಿ—ಸ್ವರಾಧ್ಯಾಯ, ವಿವೇಕಾ ಧ್ಯಾಯ, ಪ್ರಕೀರ್ಣಾಧ್ಯಾಯ, ಪ್ರಬಂಧಾಧ್ಯಾಯ, ತಾಳಾಧ್ಯಾಯ, ವಾದ್ಯಾಧ್ಯಾಯ, ನೃತ್ಯಾಧ್ಯಾಯಗಳೆಂಬ ಏಳು ಭಾಗಗಳಿವೆ. ಭರತನು ನಾಟ್ಯಶಾಸ್ತ್ರವನ್ನು ವಿಸ್ತರಿಸಿ ಬರೆದಂತೆ ಶಾರ್ಙ್ಗದೇವನು ಸಂಗೀತಶಾಸ್ತ್ರವನ್ನು ವಿಸ್ತರಿಸಿ ಬರೆದಿರುವನು. ಈ ಗ್ರಂಥಕ್ಕೆ ಏಳು ವ್ಯಾಖ್ಯಾನಗಳಿವೆ. ಅವುಗಳಲ್ಲಿ ಕಲ್ಲಿನಾಥನ ವ್ಯಾಖ್ಯಾನ ಪ್ರಸಿದ್ಧವಾದದ್ದು.

ಶಾರ್ಙ್ಗದೇವನು ನಿಬಂಧನೆಯಿಲ್ಲದೆ ಬೆಳೆಯುತ್ತಿದ್ದ ಸ್ಥಾಯಿಗಾನ ಪದ್ಧತಿಯನ್ನು ಕ್ರಮಪಡಿಸಿದನು. ಸ್ಥಾಯಿಯಲ್ಲಿ ಐದು ಬಗೆಯ ಧಾತುಗಳು ಬೇಕೆಂದು ನಿಬಂಧನೆ ಮಾಡಿದನು. ಈ ನಿಬಂಧನೆಯಲ್ಲಿ ಎರಡಕ್ಕಿಂತ ಕಡಮೆ ಧಾತುಗಳಿದ್ದರೆ ಸಂಗೀತ ಪ್ರಬಂಧವಾಗುವದಿಲ್ಲವೆಂದು ನಿಷೇಧಿಸಿದನು. ಅಂತಹ ಪ್ರಬಂಧಗಳೇನಿದ್ದರೂ ಅವು ಬಿಡಿವಚನಗಳೆನಿಸುವವು. ಹೀಗೆ ಕಟ್ಟಿಗೊಳಗಾದ ಪ್ರಬಂಧವು ಉಗಾಭೋಗವೆನಿಸಿತು. ಉತ್ತರ ಭಾರತದಲ್ಲಿ ಸ್ಥಾಯಿ, ಠಾಯಿ, ಆಸ್ಥಾಯಿ ಎಂದು ಕರೆಸಿಕೊಳ್ಳುವ ಪ್ರಬಂಧವು

Sri Vidyabharathi Book Centre, Sringeri

CC-0. In Public Domain. Digitized by eGangotri

ಕನ್ನಡ ಹರಿದಾಸ ಸಾಹಿತ್ಯದ ಮೊದಲ ಪ್ರಬಂಧವಾಯಿತು. ಉದ್ಗ್ರಾಹ, ಮೇಲಾಪಕ, ಧ್ರುವ, ಅಂತರಾ, ಆಭೋಗವೆಂಬವುಗಳು ಉಗಾಭೋಗದ ಐದು ಧಾತುಗಳು. ಒಂದು ರಾಗವನ್ನು ಗ್ರಹಿಸಿ ಮೇಳದಲ್ಲಿ ನಿಲ್ಲಿಸಿ ರಾಗವನ್ನು ಧ್ರುವಗೊಳಿಸಿ ಸಮೀಪ ರಾಗಗಳ ಸೂಕ್ಷ್ಮ ಸ್ಥಾನಗಳಲ್ಲಿ ವಿನ್ಯಾಸಮಾಡಿ ರಾಗ ಸಮಾರೋಪಣ ಮಾಡುವುದು ಧಾತುಗಳ ತಾತ್ಪರ್ಯ. ಈ ಅಭಿಪ್ರಾಯವನ್ನು ಶಾಙ್ಗ್ರ್ದೇವನು—

> ಉದ್ಗ್ರಾಹಃ ಪ್ರಥಮೋ ಭಾಗಃ ತತೋ ಮೇಳಾಪಕಃ ಸ್ಮೃತಃ
> ಧುವತ್ವಾಚ್ಚ ಧ್ರುವಃ ಪಶ್ಚಾದಾಭೋಗಸ್ತ್ವಂತಿಮೋ ಮತಃ
> ಧ್ರುವಾ ಭೋಗಾಂತರೇ ಜಾತಃ ಧಾತುರನ್ಯೋಂತರಾಭಿದಃ ॥

ಎಂಬ ಶ್ಲೋಕರೂಪದಿಂದ ತಿಳಿಸಿರುವನು. ಇಷ್ಟನ್ನೂ ಮೂಕ ರಾಗದಲ್ಲಿ ವಿನ್ಯಾಸಮಾಡದೆ ಲಲಿತಸಾಹಿತ್ಯ ಸಹಿತವಾಗಿ ಪೂರ್ಣ ಮಾಡಿದರೆ ಅದು ಉಗಾಭೋಗವೆನಿಸುವುದು. ಉಗಾಭೋಗವನ್ನು ಸಾಮಾನ್ಯವಾಗಿ ಸರ್ವ ಲಘುಗತಿಯಲ್ಲಿ ಹಾಡಬಹುದು. ಹೀಗೆ ಹಾಡಿ ಧರ್ಮಪ್ರಚಾರಮಾಡಿದವರು ಅಚಲಾನಂದರಾದಿಯಾದ ಹರಿದಾಸರು. ಈ ಮೂರು ಶತಮಾನಗಳ ಅವಧಿಯಲ್ಲಿ ಗೀತಗೋವಿಂದದ ವಿನಾ ಸಂಸ್ಕೃತದಲ್ಲಾಗಲಿ, ಕನ್ನಡದಲ್ಲಿ ವಿನಾ ಅನ್ಯಭಾಷೆಗಳಲ್ಲಾಗಲಿ ಸಂಗೀತಕ್ಕೆ ಹೊಂದಿಕೆಯಾಗುವ ಸಾಹಿತ್ಯ ರಚನೆಯಾಗಿರಲಿಲ್ಲ.

ಶಾಙ್ಗ್ರ್ದೇವನು ತನ್ನ ಕಾಲದವರೆಗೆ ೨೬೪ ರಾಗಗಳು ಪ್ರಸಿದ್ಧವಾಗಿದ್ದರೂ ಅವುಗಳಲ್ಲಿ ೫೨ ದೇಶೀ ರಾಗಗಳು ಮಾತ್ರ ಗಾನಾರ್ಹಗಳೆಂದು ನಿರ್ಣಯಿಸಿದನು. ರಾಗಗಳಲ್ಲಿ ಸಪ್ತಸ್ವರಗಳು ಪೂರ್ತಿಯಾಗಿದ್ದರೆ ಸಂಪೂರ್ಣ ರಾಗವೆಂದೂ ಆರು-ಐದು ಸ್ವರಗಳಿದ್ದರೆ ಷಾಡವ-ಔಡವ ರಾಗಗಳೆಂದೂ ಭರತನ ಮತವನ್ನೇ ಪೋಷಿಸಿ ೫ಕ್ಕಿಂತ ಕಮ್ಮಿ ೪, ೩ ಸ್ವರಗಳಿಂದ ನಿರ್ಮಿಸಬಹುದಾದ ರಾಗಗಳನ್ನು ನಿಷೇಧಿಸಿದನು. ವೇದದಲ್ಲಿ ಏಕಸ್ವರ ಗಾನಕ್ಕೆ ಆರ್ಚಿಕವೆಂದೂ, ದ್ವಿಸ್ವರ ಗಾನಕ್ಕೆ ಗಾಥಿಕವೆಂದೂ, ತ್ರಿಸ್ವರ ಗಾನಕ್ಕೆ ಸಾಮಿಕವೆಂದೂ, ಚತುಃಸ್ವರ ಗಾನಕ್ಕೆ ಸ್ವರಾಂತರನೆಂದೂ ಹೆಸರುಗಳಿವೆ. ಅವು ಪೂಜ್ಯ ವೇದಗಳಿಗೆ ಮಾತ್ರ ಭೂಷಣವಲ್ಲದೆ, ಸಂಗೀತಕ್ಕೆ ಯೋಗ್ಯಗಳಲ್ಲವೆಂಬುದು ಶಾಙ್ಗ್ರ್ದೇವನ ಮತ. ತಾಳಶಾಸ್ತ್ರದಲ್ಲಿ ಶಾಙ್ಗ್ರ್ದೇವನು ಕಂಡುಹಿಡಿದ ತಾಳಗಳು ಪ್ರಚಾರಕ್ಕೆ ಬರದೆ ಕಾಲಾಂತರದಲ್ಲಿ ಶ್ರೀಪಾದ

Sri Vidyabharathi Book Centre, Sringeri

ರಾಯರಿಂದ ಆಚರಣೆಗೆ ಬಂದ ಸುಳಾದಿಗಳ ಸಪ್ತತಾಳಗಳಲ್ಲಿ ಅಂತರ್ಭೂತ ವಾಗಿವೆ.

ಗೋಪಾಲನಾಯಕ

ಕ್ರಿ.ಶ. ಹದಿಮೂರರ ಉತ್ತರಾರ್ಧದಲ್ಲಿ ಹಾಗು ಹದಿನಾಲ್ಕರ ಪೂರ್ವಾರ್ಧದಲ್ಲಿದ್ದವನು ಗೋಪಾಲನಾಯಕನೆಂಬ ವಾಗ್ಗೇಯಕಾರನು. ಈತನು ಶಾರ್ಙ್ಗದೇವನ ಸಂಪ್ರದಾಯವನ್ನು ಪೋಷಿಸಿ ಹಿಂದುಸ್ತಾನೀ ಗಾಯನಕ್ಕೆ ಆಚಾರ್ಯಪುರುಷನಾದನು. ಇವನ ಕಾಲದಲ್ಲಿ ದೇವಗಿರಿಯಲ್ಲಿ ಯಾದವರೂ ದ್ವಾರಸಮುದ್ರದಲ್ಲಿ ಹೊಯ್ಸಳರೂ ಸಾಮ್ರಾಜ್ಯವಾಳುತ್ತಿದ್ದರು. ಕನ್ನಡ ಸಂತತಿಯವರಾಗಿದ್ದ ಈ ಉಭಯರಲ್ಲಿ ಸಾಮರಸ್ಯವಿರಲಿಲ್ಲ. ಇದೇ ಕಾಲದಲ್ಲಿ ದೆಹಲಿಯಲ್ಲಿ ಖಿಲ್ಜಿ ಸಂತತಿಯ ಅಲ್ಲಾವುದೀನನು ಉತ್ತರ ಭಾರತದ ಸುಲ್ತಾನನಾಗಿದ್ದನು. ಖಿಲ್ಜಿಯು ದಕ್ಷಿಣ ಭಾರತವನ್ನು ಜಯಿಸ ಬೇಕೆಂದು ದೇವಗಿರಿಯ ಮೇಲೆ ಮಲ್ಲಿಕ್ ಕಾಫರನೆಂಬ ದಂಡನಾಯಕನನ್ನು ಕಳುಹಿಸಿದನು. ಯಾದವ ವಂಶದ ರಾಮಚಂದ್ರದೇವನಿಗೂ ಮಲ್ಲಿಕನಿಗೂ ಘೋರ ಯುದ್ಧವಾಯಿತು. ಮಲ್ಲಿಕನು ಜಯಶೀಲನಾದನು. ರಾಮಚಂದ್ರನು ಹೇರಳವಾಗಿ ಕಪ್ಪಕೊಟ್ಟು ೧೩೦೭ರಲ್ಲಿ ಖಿಲ್ಜಿಯೊಡನೆ ಸ್ನೇಹ ಬೆಳಸಿದನು. ಸಂಧಿಕಾಲದಲ್ಲಿ ರಾಮಚಂದ್ರನ ಆಸ್ಥಾನ ಪಂಡಿತನಾಗಿದ್ದ ಗೋಪಾಲ ನಾಯಕನ ಗಾನ ಕೇಳಿ ಮಲ್ಲಿಕನು ಅವನನ್ನು ತನ್ನೊಡನೆ ದೆಹಲಿಗೆ ಕರೆದು ಕೊಂಡು ಹೋದನು. ಸಂಗೀತವನ್ನು 'ಹರಾಂ' ಎನ್ನುತ್ತಿದ್ದ ಅಲ್ಲಾವುದೀ ನನು ನಾಯಕನ ಗಾನಕ್ಕೆ ಮೆಚ್ಚಿ ತನ್ನಲ್ಲಿ ಆಶ್ರಯಕೊಟ್ಟನು. ಮುಸಲ್ಮಾನ ರಾಜರ ಪ್ರೀತ್ಯರ್ಥವಾಗಿ ನಾಯಕನು ಹಿಂದುಸ್ತಾನಿಯಲ್ಲಿ ಕವಿತೆಮಾಡಿ ಹಾಡಲಾರಂಭಿಸಿದನು. ನಾಯಕನು ಶಾರ್ಙ್ಗದೇವನ ಉಗಾಭೋಗ ಪದ್ಧತಿಯ ಎರಡು ಧಾತುಗಳನ್ನು ಆರಿಸಿಕೊಂಡು ಮಾಡಿದ ಕವಿತೆಗಳು ಲೋಕಪ್ರಿಯವಾದವು. ಉಗಾಭೋಗದಂತೆ ವಿವಿಧ ಮಟ್ಟುಗಳಲ್ಲಿ ರಚಿಸಿದ ಇವನ ಪ್ರಬಂಧಗಳು ಉತ್ತರ ಭಾರತದಲ್ಲಿ ವ್ಯಾಪಿಸಿದವು. ಕಾಲಕ್ರಮದಲ್ಲಿ ಇವನ ಪದ್ಧತಿಯನ್ನನುಸರಿಸಿ ಹಾಡಿದ ಬೇಜು ಬಾವರೆ, ತಾನಸೇನ, ರಾಮದಾಸ, ಸೂರದಾಸ, ಆದಾರಂಗ ಮೊದಲಾದವರು ಹಿಂದುಸ್ತಾನೀ ಗಾಯನಕ್ಕೆ ಆಚಾರ್ಯಪುರುಷರಾದರು. ಹೀಗೆ ಗೋಪಾಲನಾಯಕನಿಂದ ಪ್ರಾರಂಭವಾಗಿ ಬೆಳೆದ ಹಿಂದುಸ್ತಾನೀ ಭಾಷಾ ಗಾನವು ಹಿಂದೂಸ್ತಾನೀ

Sri Vidyabharathi Book Centre, Sringeri

CC-0. In Public Domain. Digitized by eGangotri

ಸಂಗೀತವೆನಿಸಿತು. ಅಚಲಾನಂದರ ಪರಂಪರೆಯಲ್ಲಿ ಬೆಳೆದು ನರಹರಿತೀರ್ಥ ಶ್ರೀಪಾದರಾಜರುಗಳಿಂದ ವಿಕಾಸಗೊಂಡ ಕನ್ನಡ ಭಾಷೆಯ ಗಾನವು ಕರ್ಣಾಟಕ ಸಂಗೀತವೆನಿಸಿತು. ಈ ಹೆಸರುಗಳು ಭಾಷಾಭೇದದಿಂದ ಬಂದ ವಲ್ಲದೆ ಸಂಪ್ರದಾಯಭೇದದಿಂದ ಬಂದವುಗಳಲ್ಲ. ೧೪೩೩ ರಿಂದ ೪೬೭ರ ಮಧ್ಯಕಾಲದಲ್ಲಿ ಶಾರ್ಙ್ಗದೇವನ ಸಂಗೀತರತ್ನಾಕರಕ್ಕೆ ವ್ಯಾಖ್ಯಾನ ಮಾಡಿದ ಕಲ್ಲಿನಾಥನೆಂಬ ವಾಗ್ಗೇಯಕಾರನು 'ಯೋಕ್ತಾಸ್ಮಾಭಿಃ ಕಲಾಸಂಖ್ಯಾ ಸಾ ದಕ್ಷಿಣಪಥಿ ಸ್ಥಿತಾ' ಎಂಬ ಶ್ಲೋಕದ ಅಸ್ಮಾಭಿಃ ಎಂಬ ಪದಕ್ಕೆ ಭರತ ಮತಾನುಸಾರಭಿಃ ಎಂದೇ ವ್ಯಾಖ್ಯಾನ ಮಾಡಿರುವುದರಿಂದ ೧೪೫೦ರವರೆಗೆ ದಕ್ಷಿಣೋತ್ತರ ಭಾರತಗಳಲ್ಲಿ ಭರತ ಮತವೇ ಆಚರಣೆಯಲ್ಲಿತ್ತೆಂದೂ ಸಂಪ್ರದಾಯ ಭೇದವಾಗಲಿಲ್ಲವೆಂದೂ ಗೋಚರವಾಗುತ್ತದೆ. ಕಲ್ಲಿನಾಥ ನಾದರೋ—ವಿಜಯನಗರ ಸಾಮ್ರಾಜ್ಯದಲ್ಲಿ ಇಮ್ಮಡಿ ದೇವರಾಜರ ಆಶ್ರಯ ದಲ್ಲಿದ್ದು ಪ್ರಖ್ಯಾತಿಪಡೆದವನು. ತನಗೆ ಆಶ್ರಯದಾತನಾದ ದೊರೆಯನ್ನು— 'ಸಂಗೀತಸಾಹಿತ್ಯಕಲಾಸ್ವಭಿಜ್ಞಃ ಪ್ರತಾಪವಾನಿಮ್ಮಡಿದೇವರಾಜಃ' ಎಂದು ಮೊದಲಾಗಿ ನಿಪುಣತರವಾಗಿ ಬಣ್ಣಿಸಿದ ಮಹಾಕವಿಯು. ಈ ವಾಗ್ಗೇಯ ಕಾರನನ್ನು ಇತಿಹಾಸ ಬಲ್ಲವರು ಕನ್ನಡಿಗನೆಂದೇ ನಿಶ್ಚಯಿಸಿದ್ದಾರೆ.

ಸಾರಾಂಶ: ಭರತನ ಕಾಲಕ್ಕೆ ಮುಂಚೆ ಎಷ್ಟೋ ಕಾಲದಿಂದ ದಾಕ್ಷಿಣಾತ್ಯರು ಕೈಶಿಕೀಪ್ರಾಯರಾಗಿದ್ದರು. ಲಲಿತ ಮಧುರ ಗಾನ ನರ್ತನ ಗಳಲ್ಲಿ ನಿಷ್ಣಾತರಾಗಿದ್ದರು. ಕನ್ನಡಿಗನಾದ ಗೋಪಾಲನಾಯಕನು ಹಿಂದು ಸ್ತಾನೀ ಗಾಯನಕ್ಕೆ ಆಚಾರ್ಯಪುರುಷನಾದನು. ಆತನ ಪರಂಪರೆಯಲ್ಲಿ ಬಂದ ತಾನಸೇನ ಮೊದಲಾದವರು ಆ ಸಂಪ್ರದಾಯವನ್ನು ಬೆಳೆಸಿದರು. ಅದರಂತೆ ಕನ್ನಡಿಗರಾದ ಅಚಲಾನಂದ ಪರಂಪರೆಯವರು ಕರ್ಣಾಟಕ ಸಂಪ್ರ ದಾಯವನ್ನು ಬೆಳೆಸಿದರು. ಭಾಷಾಭೇದವಲ್ಲದೆ ಸಂಗೀತಭೇದವಾಗಿರಲಿಲ್ಲ.

ಪುಂಡರೀಕವಿಠಲ

ಪುಂಡರೀಕವಿಠಲನು ಬೆಂಗಳೂರು ಜಿಲ್ಲಾ ಶಿವಗಂಗೆಯ ಬಳಿಯ ಸಾತ ನೂರಿನವನು. ಪುರಂದರದಾಸರ ಸಮಕಾಲಿಕನು. ಇವನು ಅಚಲಾನಂದರ ಆರು ಕೀರ್ತನಪೀಠಗಳ ಪೈಕಿ ಶಿವಗಂಗೆ ಪೀಠದ ಪರಂಪರೆಗೆ ಸೇರಿದ ಹರಿದಾಸ ನಿರಬೇಕೆಂದು ಊಹಿಸಲು ಅವಕಾಶವಿದೆ. ಇವನು ಅಹಮದನಗರದ

Sri Vidyabharathi Book Centre, Sringeri

CC-O. In Public Domain. Digitized by eGangotri

ಸುಲ್ತಾನ ಬುರಹಾನ್‌ಖಾನನ ಆಶ್ರಯದಲ್ಲಿದ್ದು ಸಂಗೀತಶಾಸ್ತ್ರದಮೇಲೆ 'ಸದ್ರಾಗಚಂದ್ರೋದಯ'ವೆಂಬ ಪ್ರಸಿದ್ಧ ಗ್ರಂಥವನ್ನು ಬರೆದಿದ್ದಾನೆ. ಈ ಸಾಹಸಿಯು ಜಯಪುರದ ದೊರೆಯಾಗಿದ್ದ ಮಾಧವಸಿಂಹನ ಆಶ್ರಯಪಡೆದು ಆ ರಾಜನ ತಂಗಿಗೆ ಗಾನವಿದ್ಯಾಗುರುವಾಗಿದ್ದಾನೆ. ಆ ಕಾಲದಲ್ಲಿವನು 'ರಾಗ ಮಂಜರಿ' ಎಂಬ ಗ್ರಂಥವನ್ನು ಬರೆದಿದ್ದಾನೆ. ಅಕ್ಬರ ಚಕ್ರವರ್ತಿ ರಾಜ ಕುಮಾರಿಯನ್ನು ವಿವಾಹಮಾಡಿಕೊಂಡಾಗ ಈತನು ರಾಜಕುಮಾರಿಯನ್ನು ಹಿಂಬಾಲಿಸಿದ್ದಾನೆ. ಅಕ್ಬರನಲ್ಲಿ ಇವನಿಗೆ ಆಶ್ರಯ ದೊರೆತಿದೆ. ದೆಹಲಿ ಯಲ್ಲಿದ್ದಾಗ ೧೫೭೬ರಲ್ಲಿ ರಾಗಮಾಲಾ, ನರ್ತನಮಂಜರಿ ಎಂಬ ಮತ್ತೆರಡು ಗ್ರಂಥಗಳನ್ನು ಬರೆದು ಚಕ್ರವರ್ತಿಯ ಮೆಚ್ಚಿಕೆಗೆ ಪಾತ್ರನಾಗಿದ್ದಾನೆ. ಭರತಮುನಿಯನಂತರ ಸಂಗೀತದಲ್ಲಿ ವಿಶೇಷ ಸುಧಾರಣೆಮಾಡಿ ರಾಗಮೇಳ ಗಳ ವ್ಯವಸ್ಥೆಮಾಡಿ ಸಂಗೀತವು ಸುಗಮವಾಗುವಂತೆ ಮಾಡಿದ್ದಾನೆ. ಸಂಗೀತದ ಜಾತಿಗಳು ಭರತಮುನಿಯಿಂದ ನಿರ್ಣೀತವಾಗಿದ್ದರೂ ಅವುಗಳ ಸ್ವರಪದ್ಧತಿ ಯನ್ನು ಪರಿಷ್ಕರಿಸಿದ್ದಾನೆ. ಮೇಳಪ್ರಸ್ತಾರವೆಂಬ ಹೊಸ ಶೋಧನೆ ನಡೆಸಿ ಗಣಿತಶಾಸ್ತ್ರದ ಸಹಾಯದಿಂದ ಮೇಳಗಳ ಸಂಖ್ಯೆಯನ್ನು ಕ್ಲಿಪ್ತಮಾಡಿದ್ದಾನೆ. ಸ್ವರನಿರ್ದೇಶ ಮಾಡುವುದರ ಕ್ಲಿಷ್ಟತೆಯನ್ನು ಕಳೆದು ಹೊಸ ಪರಿಭಾಷೆ ಯನ್ನು ರಚಿಸಿದ್ದಾನೆ. ಇದರಿಂದ ಸ್ವರಗಳು ನಾದಶಾಸ್ತ್ರಲಕ್ಷಣಕ್ಕೆ ಕೇವಲ ಲಕ್ಷಿತವಾಗಿರದೆ ಗಣಿತಶಾಸ್ತ್ರತತ್ತ್ವವನುಸರಿಸಿ ಕ್ರಮಾಂಕ ಗೃಹೀತವಾಗಿವೆ. ಇವನ ಅಭಿಪ್ರಾಯದಂತೆ ಸ್ವರಮೇಳಗಳ ಸಂಖ್ಯೆ ತೊಂಬತ್ತು. ಒಟ್ಟಿನಲ್ಲಿ ವಿಚಾರಿಸಿದರೆ ಕರ್ಣಾಟಕ ಸಂಗೀತಕ್ಕೆ ಈತ ಆಚಾರ್ಯಪುರುಷನಂತಿದ್ದಾನೆ. ಇವನ ಸಂಗೀತವು—ದೇಶ, ಭಾಷಾ, ಆಹಾರ, ಆಚಾರ, ಇವನೇ ರಚಿಸಿದ ಶಾಸ್ತ್ರ, ಇವೆಲ್ಲದರ ಪ್ರಭಾವದಿಂದ, ಉತ್ತರ ದೇಶದಲ್ಲಿ ಅದು ಅದರಂತೆ ಮೂರು ಶತಮಾನ ಕಾಲ ಬೆಳೆದ ಹಿಂದುಸ್ತಾನೀ ಸಂಗೀತದಿಂದ ವ್ಯತ್ಯಾಸ ವಾಗಿ ಕಂಡುಬಂದಿದ್ದರೂ, ಅಲ್ಲಿನ ರಾಜಾಧಿರಾಜರಿಂದೆಲ್ಲ ವಿಶೇಷ ಮನ್ನಣೆ ಯನ್ನು ಪಡೆದಿವೆ. ಇವನ ಸಂಪ್ರದಾಯನಂತೆ ಹಾಡಿದ ಜನಾರ್ದನಭಟ್ಟ, ಭಾನುಭಟ್ಟ ಎಂಬ ವಾಗ್ಗೇಯಕಾರರು ಷಹಜಹಾನನ ಆಸ್ಥಾನದಲ್ಲಿ ಮನ್ನಣೆ ಪಡೆದು ಕರ್ಣಾಟಕಕ್ಕೆ ಕೀರ್ತಿ ತಂದಿರುತ್ತಾರೆ.

ಪುಂಡರೀಕನ ನಂತರ ದಕ್ಷಿಣ ಭಾರತದಲ್ಲಿ ಬಂದ ವಾಗ್ಗೇಯಕಾರರು ಇವನ ಗ್ರಂಥಗಳನ್ನು ನೋಡದಿದ್ದ ಕಾರಣ, ಮತ್ತೆ ತಮ್ಮದೇ ಆದ ಶೋಧನೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳಿಂದ ಸ್ವತಂತ್ರ ಮಾರ್ಗವನ್ನು ಕಂಡುಹಿಡಿದಿದ್ದಾರೆ. ಹಾಡಲು ಸಾಧ್ಯವಲ್ಲದ ರಾಗಗಳನ್ನು ಹಿಂದಿನವರಂತೆ ದೇವಗಮ್ಯವೆಂದು ಗಂಟುಕಟ್ಟಿ ಮುದ್ರೆಯೊತ್ತಿದ್ದಾರೆ. ಮೂರುನಾಲ್ಕು ಸ್ವರಗಳಿಂದೆಲ್ಲಾ ರಾಗವನ್ನು ನಿರ್ಮಿಸಿ ಹೊಸ ಹೊಸ ಹೆಸರುಗಳನ್ನು ಕೊಟ್ಟಿದ್ದಾರೆ. ದಕ್ಷಿಣೋತ್ತರ ದೇಶಗಳಲ್ಲಿ ಒಂದೇ ಆಗಿದ್ದ ರಾಗಗಳ ಹೆಸರುಗಳನ್ನು ಬದಲಾಯಿಸಿದ್ದಾರೆ.

ರಾಮಾಮಾತ್ಯ

ಈ ಅಮಾತ್ಯನು ಆಂಧ್ರದೇಶದ ನಿಯೋಗಿ ಬ್ರಾಹ್ಮಣ. ರಾಜಾ ತೋದರಮಲ್ಲನ ವಂಶಕ್ಕೆ ಸೇರಿದವ. ಕರ್ಣಾಟಕದ ಪ್ರಸಿದ್ಧ ಚಕ್ರವರ್ತಿ ಕೃಷ್ಣದೇವರಾಯನ ಆಶ್ರಯದಲ್ಲಿದ್ದು ರಾಜಬಾಂಧವ್ಯವನ್ನು ಸಂಪಾದಿಸಿದವ (?). ಅಳಿಯ ರಾಮರಾಜನ ಕಾಲದಲ್ಲಿ ರಾಜನ ತಮ್ಮ ವೆಂಕಟಾದ್ರಿ ರಾಜನಿಂದ ಪ್ರೇರಿತನಾಗಿ—ರಾಗಕದಂಬ, ಗದ್ಯಪ್ರಬಂಧ, ಪಂಚತಾಳೇಶ್ವರ, ಸ್ವರಾಂಕ, ಶ್ರೀರಂಗವಿಲಾಸ ಮೊದಲಾದ ಕಾವ್ಯಗ್ರಂಥಗಳನ್ನು ರಚಿಸಿ ರಾಜಮನ್ನಣೆಯನ್ನು ಪಡೆದವ. ಅಭಿನವ ಭರತಾಚಾರ್ಯನೆಂದು ಪ್ರಖ್ಯಾತ. ಈತನನ್ನು ಕುರಿತು ರಾಮರಾಜನು—

> ಸಂಗೀತಶಾಸ್ತ್ರೇ ಬಹುಧಾ ವಿರೋಧಾಸ್ಸಂತ್ಯೇವ ಲಕ್ಷ್ಯೇಷು ಚ ಲಕ್ಷಣೇಷು ।
> ಸರ್ವಂ ಸಮಾಕೃತ್ಯ ಸ ರಾಮಮಂತ್ರೀ ತನೋತು ಶಾಸ್ತ್ರಂ ವಚಸಾ ತವೇತಿ ॥

ಎಂಬುದಾಗಿ ವೆಂಕಟಾದ್ರಿ ರಾಜನನ್ನು ಪ್ರೇರಿಸಿದನಂತೆ! ಅಮಾತ್ಯನು 'ಸಂಗೀತಕಲಾನಿಧಿ' ಎಂಬ ಗ್ರಂಥವನ್ನು ಬರೆದನಂತೆ! ಆದರೆ ಈತನ ಗ್ರಂಥಗಳೊಂದೂ ಉಪಲಬ್ಧವಿಲ್ಲ. ಈತನ ಸ್ವರಶಾಸ್ತ್ರ ಗ್ರಂಥವನ್ನು ಮುಂದೆ ವೆಂಕಟಮಖಿಯು ಕೆಲವಂಶಗಳಲ್ಲಿ ಖಂಡಿಸಿರುವುದು ಗೊತ್ತಾಗುತ್ತದೆ.

ವೆಂಕಟಮಖಿ

ಹೊಯ್ಸಳ ಕರ್ಣಾಟಕ ವಂಶೋದ್ಭವನಾದ ವೆಂಕಟಮಖಿಯು ವಂಶೋನ್ನತಿಯಲ್ಲಿ ನೋಡಿದರೆ ಮಧುರೆಯ ನಾಯಕರಾಜರ ಮಂತ್ರಿಯಾಗಿದ್ದ ಗೋವಿಂದ ದೀಕ್ಷಿತರ ದ್ವಿತೀಯ ಕುಮಾರನು. ಗೋವಿಂದ ದೀಕ್ಷಿತರು ರಾಜಕಾರ್ಯಧುರಂಧರರಾಗಿದ್ದಂತೆ ವೈದಿಕವಿದ್ಯೆಯಲ್ಲಿ ಅಪ್ಪಯ್ಯ ದೀಕ್ಷಿತರ ಸರಿಸಮಾನರಾಗಿ ಖ್ಯಾತಿಪಡೆದವರು. 'ಸಂಗೀತಸುಧಾನಿಧಿ'

Sri Vidyabharathi Book Centre, Sringeri

 CC-O. In Public Domain. Digitized by eGangotri

ಎಂಬ ಲಕ್ಷಣಗ್ರಂಥವನ್ನು ಬರೆದವರು. ನಾಯಕ ವಂಶದ ಅಚ್ಯುತ ರಾಜನನ್ನೂ ದೀಕ್ಷಿತರನ್ನೂ ಓರ್ವ ಕವಿಯು:

ತ್ರಿನಾಮಾದ್ಯಂತ ನಾಮಾನೌ ಮಹೀಭೃದ್ದೀಕ್ಷಿತಾವುಭೌ ।
ಶಸ್ತ್ರೇ ಶಾಸ್ತ್ರೇ ಚ ಕುಶಲೌ ಆಹವೇಷು ಹವೇಷು ಚ ॥

ಎಂದು ವರ್ಣಿಸಿರುವನು. ಅಚ್ಯುತ, ಅನಂತ, ಗೋವಿಂದ ಎಂಬುವು ತ್ರಿನಾಮಗಳು. ಇವುಗಳ ಆದ್ಯಂತ ನಾಮಗಳುಳ್ಳವರು ಅಚ್ಯುತರಾಜ, ಗೋವಿಂದ ದೀಕ್ಷಿತ ಎಂಬುವರು. ಅಚ್ಯುತನು ಶಸ್ತ್ರದಲ್ಲಿ–ಆಹವದಲ್ಲಿ (ಯುದ್ಧ) ಕುಶಲನಾದರೆ, ದೀಕ್ಷಿತರು ಶಾಸ್ತ್ರದಲ್ಲಿ-ಯಜ್ಞದಲ್ಲಿ (ಹವೇಷು) ಕುಶಲರು. ಇಷ್ಟು ದೊಡ್ಡಸ್ತಿಕೆಯುಳ್ಳ ದೀಕ್ಷಿತರ ಪುತ್ರ ವೆಂಕಟಮುಖಿ. ಮುಖಿಯು 'ಚತುರ್ದಂಡೀಪ್ರಕಾಶ'ವೆಂಬ ಲಕ್ಷಣ ಗ್ರಂಥವನ್ನು ಬರೆದಿರುತ್ತಾನೆ. ಗ್ರಂಥದಲ್ಲಿ ತನ್ನ ತಂದೆ 'ಸಂಗೀತಸುಧಾನಿಧಿ'ಯಲ್ಲಿ ಬರೆದಿರುವುದನ್ನು ತಾನು ಬರೆಯುತ್ತೇನೆಂದು ತಿಳಿಸುತ್ತಾನೆ. ಈತನು ಉತ್ತರ ದೇಶದ ಪ್ರಸಿದ್ಧ ತಾನಪ್ಪಾಚಾರ್ಯನಲ್ಲಿ ಸಂಗೀತವಿದ್ಯೆಯನ್ನು ಲಕ್ಷ್ಯಲಕ್ಷಣಸಹಿತವಾಗಿ ಅಭ್ಯಾಸಮಾಡಿ 'ಗಂಧರ್ವ ಜನತಾ ಖರ್ವ ದುರ್ವಾರ ಗರ್ವ ಭಂಜನುರೇ' ಎಂಬ ಕೀರ್ತನೆಮಾಡಿ ಹಾಡಿದನೆಂಬ ಪ್ರಸಿದ್ಧಿಯಿದೆ. ತಾನಪ್ಪಾಚಾರ್ಯನು ಅಕ್ಬರನ ಆಶ್ರಯದಲ್ಲಿದ್ದ ತಾನಸೇನನೋ ಅದೇ ಹೆಸರಿನ ಮತ್ತೊಬ್ಬನೋ ಗೊತ್ತಾಗುವಂತಿಲ್ಲ. ಅಕ್ಬರನ ಆಶ್ರಿತನಾಗಿದ್ದರೆ ಅವನ ಕಾಲ ೧೫೫೬ ರಿಂದ ೧೬೦೫. ವೆಂಕಟಮುಖಿ ವಿಜಯ ರಾಘವನಾಯಕನ ಕಾಲದವ. ವಿಜಯ ರಾಘವನಾಯಕನ ಪ್ರೇರಣೆಯಿಂದ 'ಚತುರ್ದಂಡೀಪ್ರಕಾಶ'ವನ್ನು ರಚಿಸಿದವ. ವಿಜಯ ರಾಘವನಾಯಕನ ತಂದೆ ರಘುನಾಥ ಭೂಪಾಲನ ಪಟ್ಟಾಭಿಷೇಕವಾದ್ದು ೧೬೧೪ರಲ್ಲಿ. ತಂದೆಯ ರಾಜ್ಯಭಾರದ ಕಾಲವೆಷ್ಟು? ಮಗನಿಗೆ ರಾಜ್ಯಾಭಿಷೇಕವಾದ್ದು ಯಾವಾಗ? ೧೬೨೦ರಲ್ಲಿ ಡಚ್ಚರಿಗೆ ವಿಜಯ ರಾಘವನಾಯಕನು ನಾಗಪಟ್ಟಣವನ್ನು ಕೊಟ್ಟನೆಂದು ಶಾಸನ ಲಿಖಿತವಾಗಿದೆ. ಈ ಮಿತಿಗೆ ೨೦-೩೦ ವರ್ಷಗಳ ಹಿಂದೆ ತಾನಸೇನನು ದಕ್ಷಿಣ ಯಾತ್ರೆಗೆ ಬಂದು ಮಧುರೆಯಲ್ಲಿ ನೆಲೆಸಿ ವೆಂಕಟಮುಖಿಗೆ ವಿದ್ಯಾಭ್ಯಾಸ ಮಾಡಿಸಿರಲು ಸಾಧ್ಯವೇ? ತಾನಸೇನನ ಜೀವಿತಕಾಲವೆಷ್ಟು? ಇವೆಲ್ಲಾ ಬಗೆಹರಿಯದ ಸಮಸ್ಯೆಗಳಾಗಿವೆ.

ಕಾಲಜಿಜ್ಞಾಸ ಹೇಗಾದರಿರಲಿ, ವೆಂಕಟಮುಖಿಯು 'ಚತುರ್ದಂಡೀ

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಕಾಶ'ವು ದಕ್ಷಿಣ ಭಾರತಕ್ಕೆಲ್ಲಾ ಪ್ರಸಿದ್ಧ ಲಕ್ಷಣಗ್ರಂಥವಾಗಿದೆ. ವೆಂಕಟಮಖಿಯು ಎಷ್ಟೋ ಶಾಸ್ತ್ರ ಗ್ರಂಥಗಳನ್ನು ವಿಚಾರಿಸಿ ಸ್ವತಂತ್ರ ಗ್ರಂಥ ಬರೆದಿದ್ದರೂ ಪುಂಡರೀಕವಿಠಲನ ಗ್ರಂಥಗಳು ಅವನಿಗೆ ದೊರೆತಿಲ್ಲ. ಕನ್ನಡಿಗನಾದರೂ ವಿಠಲನು ಉತ್ತರ ಭಾರತದಲ್ಲಿ ನೆಲೆಸಿ ಎಂದೋ ಎಲ್ಲೋ ಅದೃಶ್ಯನಾದ್ದರಿಂದ ಅವನ ಗ್ರಂಥಪ್ರಚಾರ ತಮಿಳುನಾಡಿನಲ್ಲಿ ಆಗಿರಲಿಕ್ಕಿಲ್ಲ. ವೆಂಕಟಮಖಿಗೇ ಏಕೆ? ರಾಮಾಮಾತ್ಯನಿಗೂ ಪುಂಡರೀಕನ ಗ್ರಂಥಗಳು ದೊರೆತಿಲ್ಲ. ದೊರೆತಿದ್ದರೆ ರಾಜಸಭೆಯಲ್ಲಿ ಸಂಗೀತ ಲಕ್ಷ್ಯಲಕ್ಷಣಗಳ ವಿರೋಧ ಪ್ರಶ್ನೆ ಹುಟ್ಟುತ್ತಿರಲಿಲ್ಲ.

ವೆಂಕಟಮಖಿಯು ರಾಗ ಮೇಳಗಳ ಸಂಖ್ಯೆ ೭೨ ಎಂದು ನಿಶ್ಚಯಿಸಿದ್ದಾನೆ. ಪುಂಡರೀಕನ 'ಸದ್ರಾಗಚಂದ್ರೋದಯ'ದ ಹೆಸರು ಬಹುಜನರಿಗೆ ತಿಳಿದಿಲ್ಲವಾದ್ದರಿಂದ ಅವನ ತೊಂಬತ್ತು ಮೇಳಗಳ ಪ್ರಸ್ತಾಪ ಜನರಿಗೆ ರುಚಿಸುವುದಿಲ್ಲ. ಆದರೂ ಒಂದು ಶತಮಾನದ ಅನಂತರ ವೆಂಕಟಮಖಿಯ ರಾಗಮೇಳಗಳಿಗೆ ಸಾಲದಿದ್ದುದನ್ನು ತುಳಾಜಿ ಮಹಾರಾಜನು ಪೂರವಿಸಿ 'ಸಂಗೀತಸಾರಾಮೃತೋದ್ಧಾರ'ವೆಂಬ ಗ್ರಂಥ ಬರೆದು ಪರಿಷ್ಕರಿಸಿದ್ದಾನೆ.

ಇವರ ಅನಂತರ ಇವರಷ್ಟು ಪ್ರಸಿದ್ಧ ಶಾಸ್ತ್ರಕರ್ತರು ಬರಲಿಲ್ಲ. ಲಕ್ಷ್ಯದಲ್ಲಿ ದೃಷ್ಟಿಯಿಟ್ಟ ವಾಗ್ಗೇಯಕಾರರು ಗಣಿತಶಾಸ್ತ್ರಬಲದಿಂದ ರಾಗಗಳ ಸಂಖ್ಯೆಯನ್ನು ಬೆಳೆಸಿದ್ದಾರೆ. ಇವುಗಳಲ್ಲಿ ಸುಶ್ರಾವ್ಯ ರಾಗಗಳೆಷ್ಟೆಂಬುದು ದೊಡ್ಡ ಪ್ರಶ್ನೆಯಾಗಿದೆ.

ತ್ಯಾಗರಾಜರು

ಪುರಂದರದಾಸರಂತೆ ತ್ಯಾಗರಾಜರು ಸತ್ಪುರುಷ ವರ್ಗಕ್ಕೆ ಸೇರಿದವರು. ಜಾತ್ಯಾ ಆಂಧ್ರ ಬ್ರಾಹ್ಮಣರು ತಮಿಳುನಾಡಿನ ತಿರುವೆಯಾರಿನಂಥ ಕೇಂದ್ರದಲ್ಲಿ ನೆಲೆಸಿದ್ದರೂ, ಮಾತೃಭಾಷೆಯಾದ ತೆಲುಗಿನಲ್ಲಿ ಸಹಸ್ರಾವಧಿ ಕೀರ್ತನೆಗಳನ್ನು ರಚಿಸಿ, ಕರ್ಣಾಟಕ ಸಂಗೀತವನ್ನು ಪ್ರಚಾರಮಾಡಿದವರು. ದಕ್ಷಿಣ ಭಾರತದಲ್ಲಿ ತ್ಯಾಗರಾಜರ ಕೃತಿಗಳಿಗೆ ದೊರೆತಿರುವ ಸ್ಥಾನ ಮತ್ತೆ ಯಾರಿಗೂ ದೊರೆತಿಲ್ಲ. ತೆಲುಗು ಭಾಷೆಯಲ್ಲಿ ಶಬ್ದಾಡಂಬರವಿಲ್ಲದ ಲಲಿತ ಸಾಹಿತ್ಯವನ್ನು ಕಂಡುಹಿಡಿದ ಕೀರ್ತಿ ಇವರದು. ಆಂಧ್ರ ಸಾಹಿತಿಗಳು ತ್ಯಾಗರಾಜರ ಭಾಷೆಗೆ ಸಾಹಿತ್ಯದ ಸ್ಥಾನ ಕೊಡುವುದಿಲ್ಲ. ರಾಜರ ಭಾಷೆಯಂತೆ ಸಂಗೀತ

Sri Vidyabharathi Book Centre, Sringeri

 CC-O. In Public Domain. Digitized by eGangotri

ಭಾಷೆಯನ್ನು ನಿರ್ಮಿಸಲು ಅವರು ಸಮರ್ಥರಾಗಿಲ್ಲ. ಇವರ ಕೃತಿಗಳೂ ಜಯದೇವನ ಗೀತೆಗಳಂತೆ, ದಾಸರ ಪದಗಳಂತೆ, ಹಾಡುವವರ ಪಾಲಾಗಿ ಬಿಟ್ಟಿವೆ. ನೂರು ವರ್ಷಕ್ಕೆ ಸ್ವಲ್ಪ ಹಿಂದಿನ ಕಾಲದಲ್ಲಿದ್ದ ಇವರ ಕೀರ್ತನೆಗಳನ್ನು ಇವರೇ ಹಾಡಿದಂತೆ ಹಾಡುವ ಪದ್ಧತಿ ನೂರರಲ್ಲಿ ಹತ್ತಕ್ಕಾದರೂ ಇದೆಯೇ ಎಂಬುವುದು ದೊಡ್ಡ ಪ್ರಶ್ನೆಯಾಗಿದೆ. ಇವರ ವಹಿಗಳಿಂದ ಆರಿಸಿ ಹಾಡುವೆನೆಂಬ ಕೀರ್ತನೆಗಳು ಸಹ ರೀತಿ ಗೊತ್ತಿಲ್ಲದ ಕಾರಣ ಮೊದಲು ಆರಿಸಿಕೊಂಡವರು ಹಾಡಿದ ರಾಗತಾಳಗಳಲ್ಲಿ ಪ್ರಚಾರವಾಗುತ್ತಿವೆ. ತ್ಯಾಗರಾಜರ ಕಾಲದಲ್ಲಿ ದಕ್ಷಿಣ ಭಾರತದಲ್ಲೆಲ್ಲಾ ಪುರಂದರದಾಸರ ಕೀರ್ತನೆಗಳನ್ನು ಹಾಡುವ ವಾಡಿಕೆಯಿತ್ತಂತೆ. ತ್ಯಾಗರಾಜರ ತಾಯಿ ಅನೇಕ ಭಕ್ತಿಪರ ರಾಮಕೀರ್ತನೆಗಳನ್ನು ಹಾಡುತ್ತಿದ್ದರಂತೆ. ತಾಯಿಯ ಹಾಡುಗಳನ್ನು ಕೇಳಿ ತ್ಯಾಗರಾಜರಿಗೂ ಪುರಂದರದಾಸರಂತೆ ತಾನಾಗಬೇಕು, ಅವರ ಹಾಗೆ ತಾನೂ ಹಾಡಬೇಕು, ಎಂಬ ಭಾವೋದ್ರೇಕವುಂಟಾಯಿತಂತೆ. ಆ ಉದ್ರೇಕವೇ ತ್ಯಾಗರಾಜರು ಇಷ್ಟು ದೊಡ್ಡ ವಾಗ್ಗೇಯಕಾರರಾಗಲು ಕಾರಣವಾಯಿತಂತೆ. ತ್ಯಾಗರಾಜರ ಜೀವನ ಚರಿತ್ರೆಯು ಇದಕ್ಕೆ ತಕ್ಕಂತೆ ಮಾರ್ಪಟ್ಟಿರುವುದು ಕಂಡುಬರುತ್ತದೆ. ಪುರಂದರದಾಸರಿಗೂ ತ್ಯಾಗರಾಜರಿಗೂ ಇದ್ದ ವ್ಯತ್ಯಾಸವೆಂದರೆ—ಒಬ್ಬರು ಮಹದೈಶ್ವರ್ಯವನ್ನು ತ್ಯಜಿಸಿ ಭಕ್ತರಾದವರು, ಮತ್ತೊಬ್ಬರು ಮಹದೈಶ್ವರ್ಯ ಬಂದರೂ ತಿರಸ್ಕರಿಸಿದವರು, ಇಷ್ಟೇ! ಪುರಂದರದಾಸರ ದೇವರನಾಮಗಳಂತೆ ತ್ಯಾಗರಾಜರು ಪಲ್ಲವಿ ಅನುಪಲ್ಲವಿ ಒಂದರಿಂದ ಅನೇಕ ಚರಣಗಳುಳ್ಳ ಕೀರ್ತನೆಗಳನ್ನು ರಚಿಸಿರುತ್ತಾರೆ. ಅನೇ ರಾಗ ತಾಳಗಳಲ್ಲಿ, ಅದೇ ವರ್ಣ ಮಟ್ಟುಗಳಲ್ಲಿ, ಅದೇ ಭಾವನೆಯಿಂದ ರಚಿಸಿದ ಕೀರ್ತನೆಗಳಿಗೆ ಕಡಮೆಯಿಲ್ಲ. ಪುರಂದರದಾಸರಂತೆ ತ್ಯಾಗರಾಜರೂ ಹರಿಕಥೆಗೆ ಅನುಕೂಲವಾಗುವಂತೆ ಪ್ರಹ್ಲಾದ ಭಕ್ತಿವಿಜಯ ನೌಕಾಚರಿತ್ರೆಗಳೆಂಬ ಕಥೆಗಳನ್ನು ರಚಿಸಿರುತ್ತಾರೆ. ಉಭಯರೂ ಗಾನಕೀರ್ತನೆಗಳಿಂದ ಹಣವನ್ನು ಗಳಿಸಲಿಲ್ಲ. ಉಭಯರೂ ರಾಜಾಧಿರಾಜರು ಬಂದು ಕೇಳಿಕೊಂಡರೂ ನರಸ್ತುತಿ ಮಾಡಲಿಲ್ಲ. ಇಂಥ ತ್ಯಾಗಶೀಲ ತ್ಯಾಗರಾಜರನ್ನು ಸಂಗೀತಗಾರರೆಂದು ಕರೆಯುವುವಕ್ಕೆ ಬದಲಾಗಿ ಹರಿದಾಸರೆಂದು ಕರೆಯುವುದು ಯೋಗ್ಯವಾಗಿದೆ. ತ್ಯಾಗರಾಜರು ಪುರಂದರದಾಸರನ್ನು ತಮ್ಮ ಆದರ್ಶ ಗುರುಗಳೆಂದು ಭಾವಿಸುತ್ತಿದ್ದರೆಂಬುದಕ್ಕೆ ಅವರೇ

Sri Vidyabharathi Book Centre, Sringeri

 CC-0. In Public Domain. Digitized by eGangotri

ರಚಿಸಿದ ಪ್ರಹ್ಲಾದಭಕ್ತಿವಿಜಯುದಲ್ಲಿ ಪ್ರಾರಂಭದಲ್ಲೇ—

> ದುರಿತವ್ರಾತಮುಲೆಲ್ಲನು | ಪರಿಮಾರ್ಜಿಡಿ ಹರಿಗುಣಮುಲ ಬಾಡು
> ಚುನೆಪುಡುನ್
> ಪರವಶುಡೈವೆಲಯು ಪುರಂ | ದರದಾಸುನಿ ಮಹಿಮಮುಲನು
> ಮದಿಲೋನ್ ॥೧॥

ಎಂದು ಹಾಡಿದ ಕಂದಪದ್ಯಕ್ಕಿಂತ ಮತ್ತೊಂದು ಪ್ರಮಾಣ ಬೇಕಾಗಿಲ್ಲ.

ಇವರ ಸಂಗೀತಕ್ಕೆ ಸ್ವಪ್ನಲಬ್ಧವಾದ 'ಸ್ವರಾರ್ಣವ'ವೆಂಬ ನಾರದರ ಗ್ರಂಥ ಸಂಪ್ರದಾಯವಾಯಿತೆಂದು ಹೇಳುತ್ತಾರೆ. ಹಾಡಿದ್ದೇ ರಾಗ ಹೇಳಿದ್ದೇ ಶಾಸ್ತ್ರವೆಂಬಷ್ಟು ಗೌರವಸಂಪಾದನೆ ಮಾಡಿದ ಋಷಿತುಲ್ಯರಾದ ತ್ಯಾಗರಾಜರ ಕೀರ್ತನೆಗಳು ಲಕ್ಷಣಲಕ್ಷಿತವಾಗಿವೆಯೇ ಎಂಬುದಕ್ಕೆ ಯಾರಿಗೂ ಅಧಿಕಾರ ವಿಲ್ಲ.

ಇವರನಂತರ ೧೭೬೩ ರಿಂದ ೧೮೨೭ರ ವರೆಗಿದ್ದ ಶಾಮಶಾಸ್ತ್ರಿಗಳೂ ೧೭೭೫ ರಿಂದ ೧೮೩೫ರ ವರೆಗಿದ್ದ ಮುತ್ತುಸ್ವಾಮಿ ದೀಕ್ಷಿತರೂ ಪ್ರಸಿದ್ಧ ಗಾಯಕರಾಗಿ ಸಂಸ್ಕೃತ-ಆಂಧ್ರ ಭಾಷೆಗಳಲ್ಲಿ ಅನೇಕ ಕೀರ್ತನೆಗಳನ್ನು ಮಾಡಿರುತ್ತಾರೆ. ಮುತ್ತುಸ್ವಾಮಿ ದೀಕ್ಷಿತರಂತು ಹೆಜ್ಜೆಹೆಜ್ಜೆಗೆ ಪುರಂದರ ದಾಸರ ದಾರಿಯನ್ನು ಅನುಸರಿಸಿರುವುದು ಕಂಡುಬರುತ್ತದೆ.

ಶ್ರೀಪಾದರಾಜರು

ಲಕ್ಷಣಶಾಸ್ತ್ರಕರ್ತರ ಸರಣಿಯನ್ನನುಸರಿಸಿ ತತ್ತತ್ಕಾಲದ ಪ್ರಮುಖ ವಾಗ್ಗೇಯಕಾರರ ನಾಮಸ್ಮರಣೆ ಮಾಡಿದ ಅನಂತರ ಪುನಃ ಮೂರು ಶತಮಾನಗಳಷ್ಟು ಕಾಲ ಹಿಂತಿರುಗಿದರೆ, ಪ್ರಸಕ್ತ ವಿಷಯಕ್ಕೆ ಬೇಕಾದ ಸಂಗತಿಗಳೊಂದೊಂದೂ ಹೊಂದಿಕೆಯಾಗಿ ಬರುತ್ತದೆ.

ವಿಜಯದಾಸರು ಒಂದು ಸುಳಾದಿಯಲ್ಲಿ ಅಚಲಾನಂದರಿಂದ ಹಿಡಿದು ಪುರಂದರದಾಸರವರೆಗೆ, ಪುರಂದರದಾಸರಿಂದ ಹಿಡಿದು ತಮ್ಮ ಕಾಲದವರೆಗೆ ಎಷ್ಟೋ ಮಂದಿ ಹರಿದಾಸರು ಗಾನರೂಪದಿಂದ ಭಾಗವತಧರ್ಮಪ್ರಚಾರ ಮಾಡಿದರೆಂದು ಉಲ್ಲೇಖಿಸಿರುವರು. ಅಚಲಾನಂದರು ರಾಮಾನುಜ ಮಧ್ವಾ ಚಾರ್ಯರುಗಳಿಗಿಂತ ಮೂರು ಶತಮಾನ ಹಿಂದಿನ ಕಾಲದವರು. ಅಚಲಾ ನಂದರ ಹಿಂದೆ ಯಾರಿದ್ದರೆಂಬುದು ಗೊತ್ತಾಗುವುದಿಲ್ಲ. ಇತಿಹಾಸ ಕಾಲವನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಬಿಟ್ಟು ಪುರಾಣ ಕಾಲಕ್ಕೆ ತೆರಳಿದರೆ ಐದು ಸಾವಿರ ವರ್ಷಗಳಿಗಿಂತ ಮುಂಚೆ ವ್ಯಾಸಪುತ್ರರಾದ ಶುಕಾಚಾರ್ಯರು ಕೀರ್ತನದಿಂದ ಭಾಗವತ ಧರ್ಮವನ್ನು ಪ್ರಚಾರ ಮಾಡಿದರೆಂಬ ಉಲ್ಲೇಖ ಪದ್ಮಪುರಾಣದಲ್ಲಿ ದೊರೆಯುತ್ತದೆ. ನಮ್ಮ ಇತಿಹಾಸ ಪಾಶ್ಚಾತ್ಯರ ಇತಿಹಾಸದಂತೆ ಕ್ರಿಸ್ತಪೂರ್ವ ಕೆಲವು ಶತಮಾನಗಳಿಂದ ಆರಂಭವಾಗಿಲ್ಲ. ಐದು ಸಾವಿರ ವರ್ಷಗಳ ಹಿಂದೆ ಬದುಕಿ ಬಾಳಿದ 'ಮಾಹೆಂಜೊದಾರೋ' ಶೋಧನವು ದ್ರಾವಿಡ ಜನರ ನಾಗರಿಕತೆ ಹೇಗಿತ್ತೆಂಬುದನ್ನು ತೋರಿಸಿಕೊಟ್ಟಿದೆ. ನಮ್ಮ ಪುರಾಣಗಳು ಪಾಶ್ಚಾತ್ಯರ 'ಮೈಥಾಲಜಿ'ಯಂತೆ (ಪೌರಾಣಿಕ ಸಂಗತಿ) ಕಟ್ಟುಕಥೆಗಳಲ್ಲ. ಪುರಾಣಗಳು ನಮ್ಮ ಪೂರ್ವಿಕರ ಇತಿಹಾಸಗಳು. ಆದ್ದರಿಂದ ಅಚಲಾನಂದರು ಪರಂಪರೆಯಿಂದ ಶುಕಾಚಾರ್ಯರು ಉಪದೇಶಿಸಿದ ಭಾಗವತ ಧರ್ಮಾವಲಂಬಿಗಳು. ಬುದ್ಧದೇವ ಶಂಕರಾಚಾರ್ಯರುಗಳ ಕಾಲಕ್ಕಿಂತ ಹಿಂದೆ ಇದ್ದುದು ಆ ಧರ್ಮ. ಆ ಧರ್ಮವು ಸರ್ವಧರ್ಮಗಳಿಗೂ ಆದಿ ಮಧ್ಯ ಅಂತ್ಯಗಳಲ್ಲಿ ಕಳೆಯನ್ನಿತ್ತಿರುವುದು. ಅದನ್ನೇ ಧರ್ಮಪ್ರಚಾರಕ್ಕಾಗಿ ನರಹರಿತೀರ್ಥರು ಅನುಸರಿಸಿದರು; ಶ್ರೀಪಾದರಾಜರು ಬೆಳೆಸಿದರು.

ಶ್ರೀಪಾದರಾಜರು ಶ್ರೀರಂಗ ಕ್ಷೇತ್ರದಲ್ಲಿ ಬಹುಕಾಲ ವಾಸಮಾಡಿದ ಕಾರಣ, ಅಲ್ಲಿ ದ್ರಾವಿಡ ಪ್ರಬಂಧಗಳಿಂದ ಹರಿಭಕ್ತಿ ಮಾರ್ಗ ಪ್ರಚಾರವಾಗುತ್ತಿದ್ದುದನ್ನು ಕಣ್ಣಾರೆ ನೋಡಿದರು. ಕನ್ನಡನಾಡಿನಲ್ಲಿ ವಚನಶಾಸ್ತ್ರದಿಂದ ಏನು ಕಾರ್ಯವಾಗುತ್ತಿದೆಯೆಂಬುದನ್ನು ಪರಿಶೀಲಿಸಿದರು. ತಮ್ಮ ಪೂರ್ವಿಕರಾದ ನರಹರಿತೀರ್ಥರ ಗಾನಪ್ರಬಂಧಗಳನ್ನು ಸ್ವಯಂ ಕಲಿತಿದ್ದರು. ಗದ್ಯ ಪದ್ಯಗಳ ಸರಣಿಯಿಂದ ಧರ್ಮಪ್ರಚಾರ ಮಾಡುವುದಕ್ಕಿಂತ, ಗಾನಪ್ರಬಂಧ ರೂಪವಾಗಿ ಧರ್ಮಪ್ರಚಾರ ಮಾಡುವುದು ಅವರಿಗೆ ರುಚಿಸಿತು. ಭರತ ಶಾರ್ಙ್ಗದೇವಾದಿಗಳ ಶಾಸ್ತ್ರಗ್ರಂಥಗಳನ್ನು ಪರಿಶೀಲಿಸಿದರು. ಶಾರ್ಙ್ಗದೇವನ ಪಂಚಧಾತುಕ ಉಗಾಭೋಗದಲ್ಲಿ ಹೆಚ್ಚು ಸಾಹಿತ್ಯ ಸೇರಿಸಲು ಅವಕಾಶವಿದ್ದುದರಿಂದ ಅದನ್ನೇ ರಚಿಸಿ ಹಾಡಿ ಹಾಡಿಸಿದರು. ಗೀತಗೋವಿಂದದ ಶ್ಲೋಕ ಸಂಗೀತದಂತೆ ಕನ್ನಡದಲ್ಲಿ ವೃತ್ತನಾಮಗಳನ್ನು ಬರೆದರು. ಪಲ್ಲವಿ ಅನುಪಲ್ಲವಿ ಚರಣಗಳಿಂದ ಕೂಡಿದ ಅನೇಕ ದೇವರ ನಾಮಗಳನ್ನು ವಿವಿಧ ರಾಗಗಳಲ್ಲಿ ರಚನೆ ಮಾಡಿದರು. ಸ್ವಯಂ ನರ್ತನಸೇವೆಮಾಡುತ್ತಿದ್ದುದರಿಂದ ನರ್ತನಕ್ಕಾಗಿ ಪ್ರತ್ಯೇಕ ಸಾಹಿತ್ಯವನ್ನು ನಿರ್ಮಿಸಿದರು. ರಾತ್ರಿ ಭಜನೆಗಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ರಚಿಸಿದ ಭ್ರಮರಗೀತೆಯು ಜಾತಿ ನಡೆಗಳ ದೃಷ್ಟಿಯಿಂದ ನೋಡಿದರೆ ಸಂಗೀತವೇ ಸಾಹಿತ್ಯವೋ ಸಾಹಿತ್ಯವೇ ಸಂಗೀತವೋ ಎಂಬಷ್ಟು ಭ್ರಮೆಯನ್ನುಂಟುಮಾಡಿತು. ಎಲ್ಲಕ್ಕಿಂತ ಹೆಚ್ಚಾಗಿ ಸಪ್ತತಾಳಗಳಲ್ಲಿ ಒಂದಾಗುತ್ತ ಲೊಂದರಲ್ಲಿ ಹಾಡಲು ಅನುಕೂಲವಾಗಿರುವಂತೆ 'ಸುಳಾದಿ'ಯೆಂಬ ಪರಿಭಾಷೆಯಿಂದ ಹೊಸದೊಂದು ಮಾರ್ಗವನ್ನೇ ಕಲ್ಪಿಸಿ ಹಾಡಿ ಹಾಡಿಸಿದರು. ಶ್ರೀಪಾದರಾಯರು ಕರ್ಣಾಟಕ ಗಾಯನಕ್ಕೆ ಮಾಡಿದ ಸೇವೆ ಒಂದಲ್ಲ ಎರಡಲ್ಲ. ಆದ್ದರಿಂದ ಭಜನ ಕೀರ್ತನೆಗಳಲ್ಲಿ 'ನಮಃ ಶ್ರೀಪಾದರಾಜಾಯ' ಎಂದು ಅವರ ಹೆಸರಿನಿಂದಲೇ ಪರಂಪರೆಯನ್ನು ಕಥನ ಮಾಡಲು ಪ್ರಾರಂಭವಾಯಿತು. ಶ್ರೀಪಾದರಾಜರ ಮಾರ್ಗವನ್ನು ವ್ಯಾಸರಾಯರು ಅನುಸರಿಸಿದರು. ವ್ಯಾಸರಾಯರಿಗೆ ಪುರಂದರದಾಸರು ಶಿಷ್ಯರಾದರು. ಹೀಗೆ ಬೆಳೆಯಿತು ಗಾನಪರಂಪರೆ.

ಪುರಂದರದಾಸರು

ಪುರಂದರದಾಸರ ಹೆಸರೆತ್ತಿದರೆ—ಕರ್ಣಾಟಕ ಸಂಗೀತಕ್ಕೆ ಆಚಾರ್ಯ ಪುರುಷರು, ಅವರ ಮಾರ್ಗವನ್ನು ತ್ಯಾಗರಾಜರು, ಮುತ್ತುಸ್ವಾಮಿ ದೀಕ್ಷಿತರು, ಕ್ಷೇತ್ರಜ್ಞ, ತುಳಜಿಮಹಾರಾಜ ಮೊದಲಾದವರು ಅನುಸರಿಸಿದರು; ಅವರ ಪ್ರಸಾದವೇ ಈಗ ಬೆಳೆದು ಬೆಳಗುತ್ತಿರುವ ಕರ್ಣಾಟಕ ಸಂಗೀತ ಎಂದು ಕನ್ನಡ ತೆಲುಗು ತಮಿಳುನಾಡುಗಳಲ್ಲಿ ಒಮ್ಮತದಿಂದ ಸಮ್ಮತಿಸಿ ಸನ್ಮಾನಿಸುವರು. ಮದ್ರಾಸ್ ಮ್ಯೂಸಿಕ್ ಅಕಾಡೆಮಿಯವರು ತಮ್ಮ ತ್ರೈಮಾಸಿಕ ಪತ್ರಿಕೆಯ ೧೯೪೩ರ ಸಂಚಿಕೆಗಳಲ್ಲಿ (ಸಂಪುಟ ೧೩, ಸಂಚಿಕೆ ೧-೪) ಬರೆದಿರುವುದನ್ನು ಕನ್ನಡ ವಾಚಕರಿಗೆ ಅಂಶತ್ವೇನ ಕೊಟ್ಟರೆ ಪ್ರಸಕ್ತ ವಿಷಯಕ್ಕೆ ಹೊಂದಿಕೆಯಾಗುತ್ತದೆ:

> ದೈವೀಸಂಪತ್ತು, ಕಲೆ, ಸಂಸ್ಕೃತಿ ಇವುಗಳೇ ಮೂರ್ತೀಭವಿಸಿಬಂತೆಂಬ ದೊಡ್ಡಸ್ತಿಕೆ ಪಡೆದವರಲ್ಲಿ ಅತ್ಯಂತ ದೊಡ್ಡವರೆನಿಸಿದವರು ಶ್ರೀ ಪುರಂದರದಾಸರು. ಅಗಣಿತೈಶ್ವರ್ಯದಿಂದ ನವಕೋಟಿನಾರಾಯಣನೆಂದು ಹೊಗಳಿಸಿಕೊಳ್ಳುತ್ತಿದ್ದ ಇವರು ಎಲ್ಲವನ್ನೂ ತ್ಯಜಿಸಿ ಹರಿದಾಸರಾಗಿ ಮಾಡಿದ ತ್ಯಾಗವು ಅಸಾಧಾರಣವಾದದ್ದು. ಸಂಗೀತಶಾಸ್ತ್ರಕ್ಕೆ ಇವರು ಮಾಡಿದ ಅಪಾರ ಸೇವೆ ಅಮೋಘವಾಗಿರುವುದು. ಸಂಖ್ಯಾದೃಷ್ಟಿಯಿಂದ ಇತರ ಎಲ್ಲಾ ವಾಗ್ಗೇಯಕಾರರ ಕೃತಿಗಳನ್ನೂ ಕೂಡಿಸಿ ಹೋಲಿಸಿದರೆ ಪುರಂದರದಾಸರ ಕೃತಿಗಳ ಏಕಾಂಶ ಸಹ ಆಗುತ್ತಿಲ್ಲ. ಸರಳ ಸ್ವರಾವಳಿ, ಉಗಾಭೋಗ, ಗೀತೆಗಳಿಂದ ಅನೇಕ ಚರಣಗಳುಳ್ಳ ದೇವರ ನಾಮ ಸುಳಾದಿಗಳ ತನಕ ಗಣಿಸಿದರೆ ದಾಸರ

Sri Vidyabharathi Book Centre, Sringeri

CC-O. In Public Domain. Digitized by eGangotri

ಕೃತಿಗಳ ಸಂಖ್ಯೆ ನಾಲ್ಕೂ ಮುಕ್ಕಾಲು ಲಕ್ಷವೆಂದು ಅವರ ಮಕ್ಕಳೇ ಒಂದು ದೇವರ ನಾಮದಲ್ಲಿ ಹಾಡಿರುತ್ತಾರೆ. (ದುರ್ದೈವದಿಂದ ಇವೆಲ್ಲವೂ ವಿಜಯನಗರ ಸಾಮ್ರಾಜ್ಯದ ಜೊತೆಯಲ್ಲಿ ನಾಶವಾಗಿ ಈಗ ೨-೩ ಸಾವಿರ ದಷ್ಟು ಮಾತ್ರವಿದ್ದು ಅಷ್ಟು ಮಾತ್ರವೇ ಇಂದೂ ಆಶ್ಚರ್ಯವನ್ನುಂಟು ಮಾಡುತ್ತಿವೆ.— ಗ್ರಂ.ಕ) ಪುರಂದರದಾಸರ ಕೃತಿಗಳೆಲ್ಲಾ ಉಪಲಬ್ಧವಿದ್ದರೆ ಆ ಗ್ರಂಥರಾಶಿ ರಾಮಾಯಣ ಮಹಾಭಾರತಗಳಿಗಿಂತ ದೊಡ್ಡದಾಗಿ ಅನೇಕ ಪುಸ್ತಕಗಳಲ್ಲಿ ಬರೆದಿಡಬೇಕಾಗುತ್ತಿತ್ತು. ಪ್ರಪಂಚದ ವಿವಿಧ ಸಂಪ್ರದಾಯ ಗಳಲ್ಲಿ ಪರಿಪೂರ್ಣತೆಯ ಪರಮಾವಧಿಯನ್ನು ಪಡೆದಿರುವ ಕರ್ನಾಟಕ ಸಂಗೀತ ಪದ್ಧತಿಗೆ ಜನ್ಮದಾತರೇ ಪುರಂದರದಾಸರು. ಸ್ವರ, ರಾಗ, ಲಯಗಳಿಗೆ ತಕ್ಕಂತೆ ಸಾಹಿತ್ಯಾಕ್ಷರಗಳನ್ನು ಜೋಡಿಸಿದ ಇವರ ಭಾಷೆ ವರ್ಣನಾತೀತವಾದ ಅಲಂಕಾರ ಮೊದಲಾದ ಕಾವ್ಯಸಂಪತ್ತಿನಿಂದ ಕೂಡಿ ಮನಮೋಹಕವಾಗಿರು ತ್ತದೆ. ಹಿಂದೂ ಧರ್ಮದ ನಿತ್ಯತತ್ತ್ವಗಳನ್ನು ಉಪದೇಶಿಸುವುದರಲ್ಲಿ ಪುರಂದರ ದಾಸರು ಅದ್ವಿತೀಯರು. ದಾಸರು ತಮ್ಮ ಉಪದೇಶನನ್ನು ಚಿತ್ತಾಕರ್ಷಕ ವಾದ ಆಪ್ಯಾಯಮಾನವಾದ ಮಧುರ ಸಂಗೀತದ ಮೂಲಕ ಜನತೆಯಲ್ಲಿ ಹರಡಿದರು. ಪುರಂದರದಾಸರನ್ನು ಮೀರಿಸುವ ಅಥವಾ ಸರಿಗಟ್ಟುವ ವಾಗ್ಗೇಯಕಾರರು ಭರತಖಂಡದಲ್ಲಾಗಲಿ, ಇಡೀ ಪ್ರಪಂಚದಲ್ಲಾಗಲಿ, ಮತ್ತೊಬ್ಬರಾಗಲಿಲ್ಲ. ಪುರಂದರದಾಸರ ಸಮಕಾಲಿಕರಾಗಲಿ, ಅವರ ಗುರು ಗಳಾದ ವ್ಯಾಸರಾಯರೇ ಆಗಲಿ, ಆನಂತರ ಬಂದ ಹರಿದಾಸರಾಗಲಿ, ಇವರನ್ನು ಏಕವಾಕ್ಯತೆಯಿಂದ ಕೊಂಡಾಡಿದರು ಮತ್ತು ದಾಸರನ್ನು ನಾರದ ಮಹರ್ಷಿಗಳ ಅವತಾರವೆಂದೇ ಸಾರಿದರು. ದಾಸರ ಕೃತಿಗಳನ್ನು ಕೇಳಿ ತಮ್ಮ ಮನಸ್ಸಿನ ಮೇಲಾದ ಪರಿಣಾಮದಿಂದ ವ್ಯಾಸರಾಯರಂಥ ದಾಸರ ಗುರುಗಳು 'ದಾಸರೆಂದರೆ ಪುರಂದರದಾಸರಯ್ಯಾ' ಎಂದು ಹಾಡಿಬಿಟ್ಟರು. ತಾಯಿಯು ಹಾಡುತ್ತಿದ್ದ ಪುರಂದರದಾಸರ ದೇವರ ನಾಮಗಳನ್ನು ಕೇಳಿ ಕೇಳಿ ತ್ಯಾಗರಾಜರ ಮನಸ್ಸಿನ ಮೇಲಾದ ಪರಿಣಾಮವು ಅವರು ಅಷ್ಟು ದೊಡ್ಡ ವಾಗ್ಗೇಯಕಾರರಾಗಲು ಕಾರಣವಾಯಿತೆಂಬುವುದಕ್ಕೆ ಬಲವತ್ತರ ಪ್ರಮಾಣಗಳಿವೆ. ತಮ್ಮದೇ ಆದ ಹೊಸ ರೀತಿಯಲ್ಲಿ ಹಾಡಿದ ಮುತ್ತುಸ್ವಾಮಿ ದೀಕ್ಷಿತರು ಪುರಂದರದಾಸರ ಸುಳಾದಿಗಳ ತಾಳ ಕ್ರಮವನ್ನೂ ಕೀರ್ತನೆಗಳ ಶೈಲಿಯನ್ನೂ ಅನುಸರಿಸಿರುವುದು ಕಂಡುಬರುತ್ತದೆ. ಪದಗಳನ್ನು ಹಾಡು ವುದರಲ್ಲಿ ಪ್ರಖ್ಯಾತನಾದ ಕ್ಷೇತ್ರಜ್ಞನು ಸಹ ಪುರಂದರದಾಸರ ಪದಗಳ ಮಾದರಿಯನ್ನನುಸರಿಸಿ ಹಾಡಿರುವುದು ಕಂಡುಬರುತ್ತದೆ.

ಕರ್ನಾಟಕ ಸಂಗೀತಕ್ಕೆ ಪುರಂದರದಾಸರು ತಂದೆಯ ಸ್ಥಾನದಲ್ಲಿರುವರು ಎಂಬುವುದು ಒಪ್ಪತಕ್ಕ ಮಾತು. ದಾಸರು ಪದಗಳನ್ನು ರಚಿಸಿ ಹಾಡಿದ ಕವಿಗಳು ಮಾತ್ರವಲ್ಲ, ಅವರು ಉತ್ತಮ ವರ್ಗದ ಲಕ್ಷಣಕಾರರು. ಈಗ

Sri Vidyabharathi Book Centre, Sringeri.

CC-O. In Public Domain. Digitized by eGangotri

ನಮ್ಮದೆಂದು ಹೆಸರಾಗಿರುವ ದಾಕ್ಷಿಣಾತ್ಯ ಸಂಗೀತ ಪದ್ಧತಿಯು ಸಂಪೂರ್ಣವಾಗಿ ಅವರ ಪ್ರಸಾದವಾಗಿರುತ್ತದೆ. ಉತ್ತರ ಭಾರತದ ಸಂಗೀತವು ದಕ್ಷಿಣ ಭಾರತದ ಸಂಗೀತದಿಂದ ಪ್ರತ್ಯೇಕವಾಗಿ ಒಂದು ಸಾವಿರ ವರ್ಷಗಳ ಮೇಲಾದವು(?). ಕ್ರಮವಾದ ಲಕ್ಷಣಶಾಸ್ತ್ರದ ಸಂಸ್ಕಾರ-ಸಹಾಯಗಳಿಲ್ಲದೆ ಎರಡು ಪದ್ಧತಿಗಳೂ ಅನೇಕ ಶತಮಾನಗಳ ಕಾಲ ಸರಿಯಾದ ರೂಪವಡೆಯಲಾರದೆ ಅವ್ಯಕ್ತಾವಸ್ಥೆಯಲ್ಲಿದ್ದವು. ಹಾಗಿದ್ದ ದಾಕ್ಷಿಣಾತ್ಯ ಸಂಗೀತಕ್ಕೆ ಒಂದು ರೂಪ ಕೊಟ್ಟು ಪ್ರತಿಷ್ಠಿಸಿದವರು ಪುರಂದರದಾಸರು. ಅನಂತರ ವೆಂಕಟಮುಖಿಯ ಪ್ರಯತ್ನದ ಫಲವಾಗಿ ಕರ್ಣಾಟಕ ಸಂಗೀತವು ಮತ್ತಷ್ಟು ಮುಂದುವರಿದು ಬೆಳಗುವಂತಾಯಿತು. ಹೀಗೆ ವಿಜ್ಞಾನ, ಕಲೆ ಈ ಎರಡರಲ್ಲೂ ನಿಪುಣರಾದ ಮಹಾತ್ಮರ ಸೇವಾ ಸಂಯೋಗವು ಉತ್ತರ ಭಾರತಕ್ಕೆ ದೊರೆಯದಿದ್ದುದರಿಂದ, ಅಲ್ಲಿನ ಸಂಗೀತದ ಬೆಳವಣಿಗೆ ಸಡಿಲವಾಗಿ ಬಿಡಿಯಾಗಿ ಆಯಿತು. ಭರತನ ಸಂಪ್ರದಾಯಕ್ಕೆ ವಿಚ್ಛಿತ್ತಿ ಬಂದಿತು. ಆದರೂ ಕೆಲವು ಹಳೆಯ ರಾಗಗಳ ರೀತಿಯು ದಾಕ್ಷಿಣಾತ್ಯ ಸಂಗೀತದಲ್ಲಿ ಉಳಿಯದೆ ಉತ್ತರ ಭಾರತದ ಸಂಗೀತದಲ್ಲುಳಿದು ಅದು ಕೆಲವಂಶದಿಂದ ಮಧುರವೆನಿಸಿತು.

ಪುರಂದರದಾಸರು ಸಂಗೀತದ ಅಭ್ಯಾಸ ಕ್ರಮವನ್ನು ಬದಲಾಯಿಸಿ ಮಾಳವಗೌಳದ ಮೇಳದಿಂದ ಪ್ರಾರಂಭಿಸಿದರು. ಷಡ್ಜ, ಮಧ್ಯಮ, ಪಂಚಮಗಳಿಗೆ ನಾಲ್ಕು ನಾಲ್ಕು ಶ್ರುತಿಗಳ ಅಂತರವಿರುವ ಖರಹರಪ್ರಿಯ ರಾಗದಿಂದ ಅಭ್ಯಾಸ ಮಾಡುವುದು ಪೂರ್ವಪದ್ಧತಿಯಾಗಿತ್ತು. ಭರತನ ಮೂರ್ಛನೆಯು ನಿಯತ ಷಡ್ಜ ಶ್ರುತಿಯಿಂದ ಅಭ್ಯಾಸದ ಪ್ರಾರಂಭವನ್ನು ಮಾಡುವುದನ್ನು ಮರೆತು ಉತ್ತರ ಭಾರತೀಯರು ಷಡ್ಜ ಸ್ವರವನ್ನು ಮೊದಲ ಶ್ರುತಿಯಿಂದ ಗುಣಿಸಿ ಷಡ್ಜ, ಮಧ್ಯಮ, ಪಂಚಮಗಳಿಗೆ ನಾಲ್ಕು ನಾಲ್ಕು ಶ್ರುತಿಗಳ ಅಂತರವಿಟ್ಟು ಅಭ್ಯಾಸ ಮಾಡಿದ ಕ್ರಮವು ಶಂಕರಾಭರಣ ಅಥವಾ ಬಿಲವಲ ರಾಗವಾಗಿಬಿಟ್ಟಿತು. ಪುರಂದರದಾಸರಾದರೋ—ಭರತನ ಧ್ಯೇಯದಲ್ಲಿ ದೃಷ್ಟಿಯಿಟ್ಟು ಅದೇ ಕ್ರಮದಲ್ಲಿ ಶ್ರುತಿಗಳಿಗೆ ಸ್ವರಗಳನ್ನಿಟ್ಟು ಚತುಃಶ್ರುತಿಗೆ ಬದಲಾಗಿ ದ್ವಿಶ್ರುತಿಗಳ ಅಂತರವಿರುವ ಸೌಲಭ್ಯವನ್ನು ಕಲ್ಪಿಸಿ ಮಾಳವಗೌಳದಿಂದ ಪಾಠಕ್ರಮವನ್ನು ಪ್ರಾರಂಭಿಸಿದರು. ಎಲ್ಲ ಬಗೆಯ ತೊಡಕುಗಳಲ್ಲೂ ಜ್ಞಾನವನ್ನುಂಟುಮಾಡುವ ಸ್ವರ, ತಾಳ, ಪ್ರಸ್ತಾರಗಳನ್ನೊಳಗೊಂಡ—ಕರ್ಣಾಟಕ ಸಂಗೀತದಲ್ಲಿ ನೈಪುಣ್ಯವನ್ನು ಪಡೆಯಲು ಕಾರಣವಾಗಿರುವ—ಸ್ವರಾವಳಿಗಳು, ಜಂಟಿ ಸ್ವರಗಳು, ಅಲಂಕಾರಗಳು, ಗೀತೆ ಮೊದಲಾದವುಗಳೇ ಈ ಪಾಠ ಪದ್ಧತಿಯ ಕ್ರಮವು.

ದಾಸರು ರಚಿಸಿದ ಕೀರ್ತನೆಗಳೊಂದೊಂದರಲ್ಲೂ ಶಬ್ದ, ಅರ್ಥ, ಸಂಗೀತ ಈ ಮೂರೂ ಸಮರಸವಾಗಿ ಹೊಂದಿಕೊಂಡಿರುವ ಕೌಶಲ್ಯವು ಅಸಾಧಾರಣವಾಗಿರುವುದು. ದಾಸರು ರಚಿಸಿದ ಲಕ್ಷ್ಯಗೀತೆಗಳು ಕೆಲವು ಮಾತ್ರ ನಮಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ದೊರೆತು ಲಕ್ಷಣ ಗೀತೆಗಳು ಇನ್ನೂ ದೊರೆಯದಿರುವುದು ದುರ್ದೈವದ ಸಂಗತಿಯಾಗಿರುವುದು. ಲಕ್ಷಣ ಗೀತೆಗಳು ನಮಗೆ ಇನ್ನಾದರೂ ದೊರೆತಲ್ಲಿ ನಮ್ಮ ಸಮ್ಮೇಲನಗಳಲ್ಲಿ ವಿವಾದಾಸ್ಪದವಾದ ಕ್ಲೇಶವನ್ನುಂಟುಮಾಡುತ್ತಿರುವ ಜಟಿಲ ಸಮಸ್ಯೆಗಳು ಪರಿಹಾರವಾಗಿ ನಮ್ಮ ತಿಳಿವಳಿಕೆಯು ಉತ್ತಮಗೊಳ್ಳಬಹುದು. ತಾನವರ್ಣಗಳನ್ನೂ ತಿಲ್ಲಾನಗಳನ್ನೂ ದಾಸರು ರಚಿಸಿರುವುದು ಪ್ರಸಿದ್ಧವಾಗಿದ್ದರೂ, ಆದಿಯಪ್ಪ ಅಯ್ಯನು ತನ್ನ ತಾನವರ್ಣಗಳನ್ನು ಪುರಂದರದಾಸರ ಮಾದರಿಯನುಸರಿಸಿ ರಚಿಸಿರುವನೆಂಬುದಕ್ಕಿಂತ ಹೆಚ್ಚಿನ ಸಂಗತಿಗಳಾಗಲಿ ದಾಸರ ತಾನವರ್ಣ ತಿಲ್ಲಾನಗಳಾಗಲಿ ಈ ಕಾಲದಲ್ಲಿ ಉಪಲಬ್ಧವಿಲ್ಲ. ಪುರಂದರದಾಸರ ಕವಿತೆಗಳಲ್ಲಿ ಎಲ್ಲಕ್ಕಿಂತ ಕೀರ್ತನೆಗಳೇ ಬಹಳ. ಪದವೆಂದರೂ ದೇವರ ನಾಮವೆಂದರೂ ಕೀರ್ತನೆಗಳೆಂದೇ ಅರ್ಥ. ದಾಸರ ಬಹುಭಾಗ ಕೀರ್ತನೆಗಳು ಮಧ್ಯಮ ಕಾಲದಲ್ಲಿವೆ. ಎಲ್ಲ ಬಗೆಯ ತಾಳಗಳಿದ್ದರೂ ಛಾಪು ಜಂಪತಾಳಗಳೇ ದಾಸರಿಗೆ ಪ್ರಿಯವಾಗಿದ್ದ ತಾಳಗಳೆಂದು ಕಂಡುಬರುತ್ತದೆ. ಪುರಂದರದಾಸರು ಹಿಂದಿನವರಿಗಿಂತ ಆದಿತಾಳವನ್ನು ಹೆಚ್ಚಾಗಿ ಉಪಯೋಗಿಸಿರುತ್ತಾರೆ. ಈ ಭಾಗದಲ್ಲಿಯೂ ಪುರಂದರದಾಸರ ಮಾರ್ಗವನ್ನು ತ್ಯಾಗರಾಜರು ಅನುಸರಿಸಿರುತ್ತಾರೆ. ಚೌಕ ತಾಳ ಕೀರ್ತನೆಗಳನ್ನು ರಚಿಸುವುದರಲ್ಲಿ ದಾಸರು ನಿಪುಣರಾಗಿದ್ದರು. ನಾಯಕ–ನಾಯಕೀ ಭಾವವನ್ನು ತೋರಿಸುವುದರಲ್ಲಿ ಭಾಷೆಯೊಂದರ ವಿನಾ ದಾಸರಿಗೂ ಕ್ಷೇತ್ರಜ್ಞನಿಗೂ ವ್ಯತ್ಯಾಸ ಕಂಡುಬರುವುದಿಲ್ಲ. ದಾಸರ ನಾಯಕ–ನಾಯಕೀ ಭಾವದ ಕೀರ್ತನೆಗಳು ಕ್ಷೇತ್ರಜ್ಞನಿಗೆ ಮಾದರಿಯಾಗಿದ್ದಂತೆ ಎಲ್ಲ ವಾಗ್ಗೇಯಕಾರರಿಗೂ ಮಾದರಿಯಾಗಿವೆ.

ಪುರಂದರದಾಸರ ಸಂಗೀತವಿದ್ಯಾಪ್ರೌಢಿಮೆಯನ್ನು ಪ್ರಕಟಿಸುವ ಕವಿತೆಗಳೆಂದರೆ ಸುಳಾದಿಗಳು. ಸುಳುವಾದ ಹಾದಿ ಸುಳಾದಿಯೆಂಬುದಕ್ಕಿಂತ ಅರ್ಥವಲ್ಲಿ ಎಷ್ಟೇ ಭಿನ್ನಾಭಿಪ್ರಾಯವಿದ್ದರೂ ಬೇರೊಂದು ಸಮರ್ಪಕವಾದ ಅರ್ಥ ದೊರೆತಿಲ್ಲ. ಸಂಗೀತಕಾರರು ಈ ಅರ್ಥವನ್ನು ಅರಿತಿಲ್ಲ. ಆನಂದಾನುಭವಕ್ಕೆ ಸುಲಭ ಮಾರ್ಗವೆಂದೂ ಅರ್ಥಮಾಡಿಕೊಳ್ಳುವುದು ಬಹು ಸಮಂಜಸವಾಗಿದೆ. ಸುಳಾದಿಯು ನಡೆಯಾದರೂ ಕೀರ್ತನೆಗಳ ನಡೆಯಂತೆಯೇ ಇದ್ದು ಪಲ್ಲವಿ, ಅನುಪಲ್ಲವಿಗಳಿಂದ ರಹಿತವಾಗಿರುತ್ತದೆ. ಸುಳಾದಿಯಲ್ಲಿ ಏಳೆಂಟು ಭಾಗಗಳಿದ್ದು ಪ್ರತಿ ಭಾಗಕ್ಕೂ ಪ್ರತ್ಯೇಕ ತಾಳಗಳು ಇರುತ್ತವೆ. ಕೆಲವು ಸುಳಾದಿಗಳ ಒಂದೊಂದು ತಾಳದ ಚರಣವನ್ನೂ ಒಂದೊಂದು ರಾಗದಲ್ಲೂ ಮಿಕ್ಕವನ್ನು ಬೇರೆಬೇರೆ ತಾಳಗಳಲ್ಲಿ ಒಂದೇ ರಾಗದಲ್ಲೂ ಹಾಡುವ ರೂಢಿಯಿದೆ. ಸುಳಾದಿಯು ರಾಗದ ಸಂಚಾರವನ್ನು ತೋರಿಸುವ ಪ್ರೌಢವಾದ ಸಾಹಿತ್ಯವಾಗಿದೆ. ಅದರಲ್ಲಿ ಪಾಂಡಿತ್ಯವು ತುಂಬಿ ಸೂಸುತ್ತಿದೆ. ತುಳಜೇಂದ್ರ ಮಹಾರಾಜನು ತನ್ನ 'ಸಂಗೀತಸಾರಾಮೃ

Sri Vidyabharathi Book Centre, Sringeri

CC-O. In Public Domain. Digitized by eGangotri

ತೋದ್ಧಾರ'ದಲ್ಲಿ ವಿವರಿಸಿರುವ ರಾಗಗಳ ಲಕ್ಷಣಕ್ಕೆ ಪುರಂದರದಾಸರ
ಸುಳಾದಿಗಳ ವಿವಿಧ ಪ್ರಯೋಗಗಳೇ ಆಧಾರವೆಂದು ಸ್ಪಷ್ಟವಾಗಿ ಉಲ್ಲೇಖ
ಮಾಡಿರುತ್ತಾನೆ. ಸುಳಾದಿಗಳನ್ನು ಹಾಡುವ ಕ್ರಮವು ಮರೆತುಹೋಗು
ತ್ತಿರುವುದರಿಂದ ಅದರ ಪುನರುದ್ಧಾರ ಮಾಡುವುದರಿಂದ ಕರ್ಣಾಟಕ
ಸಂಗೀತಶಾಸ್ತ್ರಕ್ಕೂ ಕಲೆಗೂ ಮಹೋಪಕಾರ ಮಾಡಿದಂತಾಗುತ್ತದೆ.

ಉಗಾಭೋಗವೆಂಬ ಹೆಸರಿನ ಮತ್ತೊಂದು ಬಗೆಯ ಸಂಗೀತ ಸಾಹಿತ್ಯ
ವನ್ನು ಪುರಂದರದಾಸರು ರಚಿಸಿರುತ್ತಾರೆ. ಉಗಾಭೋಗ ಶಬ್ದಾರ್ಥ
ವಾದರೂ ಸುಳಾದಿ ಶಬ್ದಾರ್ಥದಂತೆ ಚರ್ಚಾಸ್ಪದವಾಗಿರುತ್ತದೆ. 'ಸ್ವರ್ಗೀಯ
ಆನಂದವನ್ನು ಪಡೆಯುವುದಕ್ಕೆ ಸಹಕಾರಿ' ಎಂಬದಾಗಿ ಸಂಕೇತಾರ್ಥವನ್ನು
ಸೂಚಿಸುವುದು ಎಂದರೆ ಅರ್ಥವು ಸಮಂಜಸವಾಗುತ್ತದೆ. ಉಗಾಭೋಗ
ಗೀತೆಗಿಂತ ಸರಳ ತರಗತಿಯ ಸಂಗೀತ. ಹಾಡಿನಲ್ಲಿ ವೈವಿಧ್ಯವಿಲ್ಲದಂತೆ
ಸರ್ವ ಲಘುಗತಿಯಲ್ಲಿ ಯಾವ ರಾಗದಲ್ಲಿ ಬೇಕಾದರೂ ಹಾಡಬಹುದು.
ಅರ್ಥದ ಭಾವವನ್ನೂ ಪರಿಶೀಲಿಸಿದರೆ ಅಥವಾ ದೇವೋನ್ಮಾದ ಸ್ಥಿತಿಯಲ್ಲಿ
ಹಾಡಿದ ಹಾಡೆಂದು ಗೋಚರವಾಗುತ್ತದೆ. ಪುರಂದರದಾಸರು ತಮ್ಮ
ಗುರುಗಳಂತೆ ವೃತ್ತನಾಮಗಳನ್ನೂ ರಚಿಸಿರುತ್ತಾರೆ. ವೃತ್ತನಾಮದಲ್ಲಿ
ಪಲ್ಲವಿಯನ್ನು ಹಾಡಿದನಂತರ ಒಂದು ವೃತ್ತ, ವೃತ್ತವಾಗುತ್ತಲೇ ಒಂದು
ಚರಣ—ಈ ರೀತಿ ಇರುತ್ತದೆ.

ಕರ್ಣಾಟಕ ಸಂಗೀತ ಸಂಸ್ಕೃತಿಯ ಬೆಳವಣಿಗೆಗೆ ಯಾರು ಎಷ್ಟೆಷ್ಟು
ಕೆಲಸ ಮಾಡಿರುವರೆಂದು ಬೆಲೆಯನ್ನು ಕಂಡುಹಿಡಿಯುವದೊಂದು ವಾಡಿಕೆ.
ಆದರೆ ಯಾವ ನಿಧಿಯನ್ನು ಅನುಗ್ರಹರೂಪವಾಗಿ ನಮಗೆ ದಯಪಾಲಿಸಿರು
ವರೋ, ಅಂಥ ನಿಧಿಯ ನಿರ್ಮಾತರೂ, ಹಾಡಿದ್ದೇ ರಾಗ ಹೇಳಿದ್ದೇ ಕವಿತೆ
ಎಂಬಂತೆ ಸಹಸ್ರಗಟ್ಟಳೆ ಕೃತಿಗಳನ್ನು ರಚಿಸಿ ಮಾನವತ್ವದ ಮುದ್ರೆಯೊತ್ತಿ
ನಮಗೆ ಹೆಮ್ಮೆಯನ್ನುಂಟುಮಾಡಿಕೊಟ್ಟಿರುವರೋ ಅಂಥ ಪುರಂದರದಾಸರ
ಮಹೋಪಕಾರವನ್ನು ಮಾತುಗಳಿಂದ ವರ್ಣಿಸುವ ಬಗೆ ಹೇಗೆ? ಸಂಸ್ಕೃತ
ಸಾಹಿತ್ಯಕ್ಕೆ ವಾಲ್ಮೀಕರು ಹೇಗೋ ಕರ್ಣಾಟಕ ಸಂಗೀತಕ್ಕೆ ಪುರಂದರ
ದಾಸರು ಹಾಗೆ ಎಂಬ ಗೌರವವನ್ನು ಪಡೆದಿರುವವರು ಪುರಂದರದಾಸರು.
ಇಂಥ ಮಹಾಪುರುಷರನ್ನು ಲಕ್ಷಲಕ್ಷ ವರ್ಷಗಳಿಗೊಮ್ಮೆ ಪಡೆಯುವುದು
ಕಾಲದ ಭಾಗ್ಯ, ದೇಶದ ಭಾಗ್ಯ.

ಅಕಾಡೆಮಿಯವರು ಬರೆದಿರುವ ಅನೇಕ ಸಂಗತಿಗಳು ಅಕ್ಷರಶಃ ಸತ್ಯ
ವಾಗಿವೆ. ಹತ್ತು ವರ್ಷಗಳ ಹಿಂದೆ ಪ್ರಕಟವಾದ 'ಕರ್ಣಾಟಕ ಭಕ್ತವಿಜಯ'
ದಲ್ಲಿ ಬರೆದಿರುವುದನ್ನು ಅನುಸರಿಸಿರುವುದು ಮಾತ್ರವಲ್ಲದೆ ಸಂಗೀತ ಮೇಳ
ವಿಷಯದಲ್ಲಿ ಮತ್ತಷ್ಟು ಶೋಧನೆಮಾಡಿ ಪುರಂದರದಾಸರ ಉಪಕಾರವನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ಮರಿಸಿರುತ್ತಾರೆ. ತುಲನಾತ್ಮಕ ದೃಷ್ಟಿಯಿಂದ ಕೆಲಕೆಲವು ಕೀರ್ತನೆಗಳ ಸಾಮ್ಯ-ವೈಷಮ್ಯಗಳನ್ನು ಸ್ವರಸಹಿತ ಸಿದ್ಧಗೊಳಿಸಿದಾಗ ಮೇಲ್ಕಂಡ ಮಾಸ ಪತ್ರಿಕೆಯನ್ನು ಮಿತ್ರರು ತಂದು ತೋರಿಸಿದ್ದು, ಗ್ರಂಥವಿಸ್ತಾರ ಭಯ, ಕಾಗದದ ಅಭಾವ ಭಯಗಳಿಂದ ಚಿಂತಿಸುತ್ತಿದ್ದ ನನಗೆ ಮಹೋಪಕಾರ ವಾಗಿದೆ. ಇಂಥ ಮಹತ್ಕಾರ್ಯವನ್ನು ಅಕಾಡೆಮಿಯಂಥ ದೊಡ್ಡ ಸಂಸ್ಥೆ ಯವರು ಮಾಡುವುದೇ ಯೋಗ್ಯವೆಂದು ನನಗೆ ತೋರಿದೆ.

ಆದ್ದರಿಂದ ಆ ಭಾಗವನ್ನು ಅವರಿಗೆ ಬಿಡೋಣ. ಈ ಸಮಯದಲ್ಲಿ ಮತ್ತು ವರ್ತಮಾನ ಕಾಲದವರೆಗೆ ಹಿಂದುಸ್ತಾನಿ ಸಂಗೀತದ ಅಭ್ಯುದಯ ಹೇಗಾಗಿದೆಯೆಂಬುದನ್ನು ವಿಚಾರಿಸೋಣ.

ಕನ್ನಡ ನಾಡಿನ ಗೋಪಾಲನಾಯಕನೆಂಬ ವಾಗ್ಗೇಯಕಾರನು ಹಿಂದುಸ್ತಾನಿ ಭಾಷೆಯಲ್ಲಿ ಕವಿತೆಮಾಡಿ ಆ ಸಂಗೀತ ಪದ್ಧತಿಗೆ ಆಚಾರ್ಯ ಪುರುಷನಾದನೆಂದು ಹಿಂದೆ ತಿಳಿಸಿದೆ. ತಾನಸೇನನ ಕಾಲದಲ್ಲಿ ಹಿಂದುಸ್ತಾನಿ ಸಂಗೀತವು ತನ್ನ ಪರಮಾವಧಿಯನ್ನು ಮುಟ್ಟಿತೆಂದು ಕೆಲವರು ಭಾವಿಸಿ ದ್ದಾರೆ. ಈ ಭಾವನೆಗೆ ಅಕ್ಬರ್ ಬಾದಷಹನ ಕಾಲದಲ್ಲಿ ನಡೆದ ರಾಗ ಪರೀಕ್ಷೆಯ ಒಂದು ಘಟನೆಯು ಕಾರಣವೆಂದು ಇತಿಹಾಸಲಿಖಿತ ಸಂಗತಿ ಯನ್ನು ತೋರಿಸುತ್ತಾರೆ. ಆ ಸಂಗತಿಯನ್ನು *The Hindu Superiority* ಎಂಬ ಗ್ರಂಥದಲ್ಲಿ ವಿಟ್ಟನ್ ಮಹಾಶಯನನ್ನು ಉದ್ಧರಿಸಿ ಬರೆಯಲಾಗಿದೆ:

> ಚಕ್ರವರ್ತಿ ಅಕ್ಬರನು ತಾನಸೇನನೆಂಬ ವಾಗ್ಗೇಯಕಾರನನ್ನು ಕುರಿತು ಶ್ರೀರಾಗವನ್ನು ಹಾಡೆಂದು ಮಧ್ಯಾಹ್ನದಲ್ಲಿ ಆಜ್ಞೆ ಮಾಡಿದನು. ತಾನಸೇನನು ರಾತ್ರಿ ರಾಗವಾದ ಶ್ರೀರಾಗವನ್ನು ಮಧ್ಯಾಹ್ನದಲ್ಲಿ ಹಾಡಿದಾಗ ನಾದಪ್ರಭಾವ ದಿಂದ ಅರಮನೆಯಲ್ಲಿ ಅವನ ಗಾನ ಕೇಳುವವರೆಗಿನ ಪ್ರದೇಶದಲ್ಲಿ ದುಂಡಗೆ ಕತ್ತಲೆ ವ್ಯಾಪಿಸಿತು.

ಈ ಸಂಗತಿ ಇತಿಹಾಸ ಘಟಿತವಾಗಿದ್ದ ಮಾತ್ರಕ್ಕೆ ಗಾನವು ತನ್ನ ಪರಮಾವಧಿಯನ್ನು ಮುಟ್ಟಿತೆಂದು ಹೇಳಲು ಸಹಾಯಕವಾಗಿಲ್ಲ. ಕಲೆಯು ಬೆಳೆಯುವುದಕ್ಕೂ ವೈಯಕ್ತಿಕ ಸಿದ್ಧಿಗಳಿಗೂ ಸಂಬಂಧವಿರುವುದಿಲ್ಲ. ಹಿಂದು ಸ್ತಾನಿ ಗಾನಕಲೆಯು ವಿಕಾಸಹೊಂದಲು ಪ್ರಾರಂಭವಾದದ್ದು ತಾನಸೇನನ ಕಾಲದಲ್ಲಿ. ಆ ಕಾಲದಲ್ಲಿ ಉತ್ತರ ಭಾರತದಲ್ಲಿ ಧ್ರುವಪದ ಗಾಯನವು ಗಾನಪಾಂಡಿತ್ಯದ ಎಲ್ಲೆಯಾಗಿತ್ತು. ಸ್ಥಾಯಿ ಗಾನವು ಧ್ರುವಪದವನ್ನು

Sri Vidyabharathi Book Centre, Sringeri

CC-0. In Public Domain. Digitized by eGangotri

ಮರೆಸಿತು. ಬೇಜುಬಾವರೆ ಎಂಬುವನು ಅನೇಕ ಲಕ್ಷಣ ಗೀತೆಗಳನ್ನು ಬರೆದು ಗಾನವನ್ನು ವಿಧಿಬದ್ಧ ಮಾಡಿದನು. ಗಾನದ ಮಾಧುರ್ಯ ವಿವಿಧ ಜಾತಿಗಳಲ್ಲಿ ದಿನದಿನಕ್ಕೆ ಬೆಳೆಯಿತು. ಬ್ರಿಜಭಾಷೆಯು ಗಾನ ಭಾಷೆ ಯಾಯಿತು. ಶಾಸ್ತ್ರೀಯ ಗಾನ ಬೆಳೆದಂತೆ ಅಶಾಸ್ತ್ರೀಯ ಗಜಲ್ ಕವಾಲಿ ಗಳೆಂಬ ವಕ್ರಮಾರ್ಗಗಳುದಿಸಿದವು. ಪಂಡಿತರ ಮನ್ನಣೆಯಿಲ್ಲದೆ ಅದು ತಟಸ್ಥ ವಾಯಿತು. ಪರಂಪರೆಯಿಂದ ಬಂದ ಆರು ಪುರುಷ ರಾಗಗಳು ಮೂವತ್ತು ರಾಗಿಣಿಗಳು ಇವುಗಳಿಂದ ಜನ್ಯರಾಗಗಳ ಸಂಖ್ಯೆ ನೂರನಲವತ್ತಕ್ಕೇರಿತು. ಆಚರಣೆಯಲ್ಲಿ ಐವತ್ತು ಸಾಮಾನ್ಯ ರಾಗಗಳೂ ಐವತ್ತು ಅಪರೂಪ ರಾಗ ಗಳೂ ಉಳಿದುಕೊಂಡುವು. ಇವು ಪ್ರಾಚೀನ ಕಾಲದಿಂದ ಬಂದ ಕಾರಣ— ಶ್ರವಣಮಧುರವಾಗಿರುವ ಕಾರಣ—ಯಾವ ದೇಶದಲ್ಲೂ ಮನ್ನಣೆಯನ್ನು ಪಡೆದವು. ಹಿಂದುಸ್ತಾನಿ ಗಾಯನದ ಉತ್ಕರ್ಷ ಹದಿನೆಂಟನೇ ಶತಮಾನ ದಿಂದ ಹತ್ತೊಂಬತ್ತರ ಪೂರ್ವಾರ್ಧದವರೆಗಾಯಿತು. ಈ ಕಾಲ ದಕ್ಷಿಣ ಭಾರತದಲ್ಲಿ ತ್ಯಾಗರಾಜರ, ಮುತ್ತುಸ್ವಾಮಿ ದೀಕ್ಷಿತರ, ಶಾಮಶಾಸ್ತ್ರಿಗಳ ಕಾಲ. ಅಂದರೆ ಒಂದೊಂದೂ ತನ್ನ ರೀತಿಯಲ್ಲಿ ಏಕಕಾಲದಲ್ಲಿ ಬೆಳೆದ ಕಾಲ.

ಸಾರಾಂಶ: ಭರತಮುನಿಯ ಕಾಲದಿಂದ ಎರಡು ಸಾವಿರ ವರ್ಷಗಳ ಪರಮಾವಧಿಯಲ್ಲಿ ಒಂದೂವರೆ ಸಾವಿರ ವರ್ಷಗಳಷ್ಟು ಕಾಲ ಒಂದೇ ಸಂಪ್ರ ದಾಯದಲ್ಲಿದ್ದ ಗಾನ ಕ್ರಮವು ಕ್ರಮವಾಗಿ ಬದಲಾಗುತ್ತ ಬಂತು. ವಿವಿಧ ಶಾಸ್ತ್ರಕಾರರು ದಕ್ಷಿಣ ಭಾರತದಲ್ಲಿ ಜನಿಸಿದ ಭರತನ ಹೆಸರು ಹೇಳುತ್ತಲೇ ತಮ್ಮ ತಮ್ಮ ಮತಗಳನ್ನು ಸ್ಥಾಪಿಸಿದರು. ಹದಿನೇಳನೇ ಶತಮಾನದಲ್ಲಿ ಹಿಂದುಸ್ತಾನಿ, ಕರ್ಣಾಟಕಿ ಎಂಬ ದೊಡ್ಡ ಭೇದಗಳು ಎದ್ದು ಕಾಣಿಸಿದುವು. ವೆಂಕಟಮುಖಿಯ ಕಾಲದಿಂದ ಬಂದ ವಾಗ್ಗೇಯಕಾರರು ರಾಗಗಳ ಸಂಖ್ಯೆ ಯನ್ನು ಬೆಳೆಸಿದರು. ಮೂರು ನಾಲ್ಕು ಸ್ವರಗಳಿಂದ ಹುಟ್ಟಿದ ರಾಗಗಳು ರುಚಿಸದಂತಾದುವು. ಲಯತಾಳಗಳ ಪ್ರಾಧಾನ್ಯ ಹೆಚ್ಚಿ ಸ್ವರರಾಗಗಳ ಮಾಧುರ್ಯ ಕಡಮೆಯಾಯಿತು. ಒಂದು ಕಾಲದಲ್ಲಿ ಭರತಖಂಡದ ಆದ್ಯಂತ ಅಭಿರುಚಿಯನ್ನುಂಟುಮಾಡುತ್ತಿದ್ದ ದಾಕ್ಷಿಣಾತ್ಯ ಗಾಯನವು ತುಂಗಭದ್ರೆ ಯನ್ನು ದಾಟದಂತಾಯಿತು. ಹಿಂದುಸ್ತಾನಿ ಗಾಯನವು ಎಷ್ಟೆಷ್ಟು ಸಡಿಲ ವಾಗಿದ್ದರೂ ಎಲ್ಲಿದ್ದರೂ ಕೇಳಬೇಕೆಂಬ ಆಸೆ ಜನತೆಯಲ್ಲಿ ಬೆಳೆಯಿತು.

ಊಟದಲ್ಲಿ ಬೇಕಾಗಿರುವುದು ರುಚಿ; ಪರಿಕರಗಳ ಆಳತೆಯಲ್ಲ. ಹಾಗೆ

Sri Vidyabharathi Book Centre, Sringeri

 CC-O. In Public Domain. Digitized by eGangotri

ಗಾನದಲ್ಲಿರುವುದು ಮಾಧುರ್ಯ; ಕಟ್ಟುಕಟ್ಟಲೆಗಳಲ್ಲ.

ದಿವಂಗತ ರವೀಂದ್ರರ ದರ್ಶನಮಾಡಿದಾಗ 'Have you got any thing like Kabir's songs in your language?' (ನಿಮ್ಮ ಭಾಷೆ ಯಲ್ಲಿ ಕಬೀರನ ಹಾಡುಗಳಂಥಾ ಹಾಡುಗಳಿವೆಯೇ?) ಎಂದು ಕೇಳಿದರು. 'Even better ones from Purandara' (ಇನ್ನೂ ಉತ್ತಮವಾದ ಪುರಂದರದಾಸರ ಕೀರ್ತನೆಗಳಿವೆ) ಎಂದು ನಾನು ಹೇಳಿದೆ. 'Oh, why not you translate them into English?' (ಇಂಗ್ಲೀಷಿಗೇಕೆ ಭಾಷಾಂತರ ಮಾಡಬಾರದು?) ಎಂದರು. ನಾನು ಗೌರವಪೂರ್ವಕವಾಗಿ 'ಇಂಗ್ಲೀಷಿಗೆ ಕಬೀರನ ಹಾಡುಗಳನ್ನು ಭಾಷಾಂತರ ಮಾಡಿರುವಿರಲ್ಲಾ! ಆದರೆ....' ಎಂದೆ. ಠಾಕೂರರು, 'After all it is a translation' (ಏನಿದ್ದರೂ ಅದು ಭಾಷಾಂತರ) ಎಂದರು. ಸ್ವಲ್ಪ ಹೊತ್ತು ಮೌನ! ಆನಂತರ ಸಂಗೀತಶಾಸ್ತ್ರದ ಮಾತು ಬಂತು. ಕರ್ಣಾಟಕ ಸಂಗೀತದ ಮಾತು ಪ್ರಧಾನವಾಯಿತು. ನಮ್ಮ ದೇಶದ ಪ್ರಸಿದ್ಧ ಗಾಯಕರ ಹೆಸರು ಹೇಳಿದೆ. ಅವರ ಸ್ವರ ಕಲ್ಪನಾಚಾತುರ್ಯವನ್ನು ವರ್ಣಿಸಿದೆ. 'ಸರಿ' ಸಂತೋಷ! ಆ ಗಾಯಕರಲ್ಲಿ ಶ್ರುತಿಗೆ ಸೇರಿ ಹಾಡುವವರೆಷ್ಟು ಜನ? ಸ್ವರಗಳನ್ನು ಸ್ವರ ಸ್ಥಾನದಲ್ಲಿ ಉಚ್ಚರಿಸುವವರೆಷ್ಟು ಜನ? ಅದು ತಿಳಿದಿದೆಯೇ?' ಎಂದರು. ಇವರಿಗೇಕೋ ಕರ್ಣಾಟಕ ಸಂಗೀತದಲ್ಲಿ ವಿಶ್ವಾಸವಿಲ್ಲ ಎಂದುಕೊಂಡೆ. ಸಾಯಂಕಾಲ ದಿವಾನ ರಂಗಾಚಾರ್ಯರ ಸ್ಮಾರಕ ಮಂದಿರದಲ್ಲಿ ಕವೀಂದ್ರರ ವ್ಯಾಖ್ಯಾನವಾಯಿತು. ಎದುರಿಗೆ ಮೊದಲ ಸಾಲಿನಲ್ಲಿ ಕುಳಿತೆ. ಜನರು ಬಲವಂತಪಡಿಸಿದಮೇಲೆ ಠಾಕೂರರು ಒಂದು ಹಾಡು ಹಾಡಿದರು. ಆ ಕಂಠ ಮಾಧುರ್ಯ! ಆ ವೈಶಾಲ್ಯ! ಆ ಪರಿಪೂರ್ಣತೆ! ಆ ಭಾಷಾಮಾರ್ದವ! ಒಂದೊಂದೂ ನನ್ನ ಮನಸ್ಸನ್ನು ಬದಲಾಯಿಸಿದವು. ನನ್ನ ಸಿಟ್ಟಿಳಿಯಿತು. ಇದ್ದರೆ ಹೀಗಿರಬೇಕು ಸಂಗೀತ ಅಂದುಕೊಂಡೆ. ವಿಶ್ವಕವಿಗಳದು ತಪ್ಪಿರ ಬಹುದು; ನಾನು ತಿಳಿದದ್ದೇ ಸರಿ ಇರಬಹುದು. ಆದರೆ ಪುರಂದರದಾಸರ, ತ್ಯಾಗರಾಜರ. ಪರಂಪರೆಯವರಿಗೆ ಇಷ್ಟು ಮಾತ್ರ ಕಳಂಕವಾದರೂ ಏಕೆ, ಎಂಬುದು ನನ್ನ ಪ್ರಶ್ನೆ.

ಪುರಂದರದಾಸರ ಕಾಲದಲ್ಲಿ ಸಂಗೀತ ಈ ಸ್ಥಿತಿಯಲ್ಲಿರಲಿಲ್ಲ. ಸಂಗೀತ ಪ್ರವೃತ್ತಿಯುಳ್ಳವರು ದಾಕ್ಷಿಣಾತ್ಯರೆಂದು ಭರತನು ಉಲ್ಲೇಖಿಸಿದುದಕ್ಕೆ

Sri Vidyabharathi Book Centre, Sringeri

CC-O. In Public Domain. Digitized by eGangotri

ತಕ್ಕಂತೆ ಅವರು ಗಾನ ಪದ್ಧತಿಗೆ ಆಚಾರ್ಯರೆನಿಸಿದ್ದರು. ವಿಜಯನಗರ ಸಾಮ್ರಾಜ್ಯ ಪ್ರಭಾವದಿಂದ ಕೃಷ್ಣಾನದಿಯ ದಕ್ಷಿಣ ಪ್ರಾಂತ್ಯ ಒಟ್ಟು ಕರ್ಣಾಟಕವೆಂದೇ ಕರೆಸಿಕೊಂಡಿತ್ತು. ಉತ್ತರ ಭಾರತವನ್ನು ಜಯಿಸಿ ಆಳಿದ ಚಕ್ರವರ್ತಿಗಳು ಭರತಖಂಡವನ್ನು ಹಿಂದುಸ್ತಾನ, ಕರ್ಣಾಟಕ ಎಂದು ಎರಡೇ ಭಾಗ ಮಾಡಿ ಕರೆದಿದ್ದರು. ಕನ್ನಡ ಮಾತನಾಡುವ ಜನರ ರಾಷ್ಟ್ರ ಮಾತ್ರ ಕರ್ಣಾಟಕವೆಂಬ ಸಂಕುಚಿತ ಭಾವನೆಯಿರಲಿಲ್ಲ. ಒಂದೇ ಕುಲ ದವರಾದ ಕನ್ನಡಿಗರಲ್ಲಿ ತಮಿಳರಲ್ಲಿ ತೆಲುಗರಲ್ಲಿ ಪ್ರತ್ಯೇಕತೆ ಹುಟ್ಟಿರಲಿಲ್ಲ. ಒಂದು ಭಾಷಾ ಸಂಸ್ಕೃತಿ ಮತ್ತೊಂದಕ್ಕೆ ಸಹಾಯಕವಾಗಿತ್ತು. ಬ್ರಿಜ ಭಾಷಾ ಸಾಹಿತ್ಯವುಳ್ಳ ಸಂಗೀತವನ್ನು ಪಂಜಾಬಿಗಳು, ರಾಜಸ್ತಾನಿಗಳು, ಬಂಗಾಳಿಗಳು ಉಪಯೋಗಿಸುತ್ತಿರುವಂತೆ ಕನ್ನಡ ಭಾಷಾ ಸಾಹಿತ್ಯವುಳ್ಳ ಸಂಗೀತವನ್ನು ಆಂಧ್ರರೂ ತಮಿಳರೂ ಉಪಯೋಗಿಸುತ್ತಿದ್ದರು. ಸೋದರ ಭಾಷೆಗಳಾಗಿದ್ದುದರಿಂದ ಅರ್ಥಮಾಡಿಕೊಳ್ಳಲು ಕಷ್ಟವಾಗಿರಲಿಲ್ಲ. ವಕ್ರ ರಾಗ ಗಳ ಸಂಖ್ಯೆ ಬೆಳೆದಿರಲಿಲ್ಲ. ಮಾತುಗಳಿಗಿಂತ ನಾದ ಪ್ರಧಾನವಾಗಿದ್ದುದರಿಂದ ಸಂಗೀತ ಲೋಕಪ್ರಿಯವಾಗಿತ್ತು. ಕರ್ಣಾಟಕ ಗಾಯನ ಹಿಂದುಸ್ತಾನ ದಲ್ಲೂ ಹಿಂದುಸ್ತಾನೀ ಗಾಯನ ಕರ್ಣಾಟಕದಲ್ಲೂ ಸಮಸಮವಾಗಿ ಅಭಿರುಚಿ ಯನ್ನುಂಟುಮಾಡುತ್ತಿದ್ದುವು. ಮಾಂಡಲಿಕ ರಾಜರೊಬ್ಬೊಬ್ಬರೂ ಸಂಗೀತ ಸಾಹಿತ್ಯ ವಿಶಾರದರಾಗಿದ್ದರು. ಲಕ್ಷಣಕ್ಕೆ ಅನುಗುಣವಾಗಿ ಲಕ್ಷ್ಯವಿರ ಬೇಕೆಂಬ ಭೀತಿ ಗಾಯಕರಿಗಿತ್ತು. ಹೀಗಿದ್ದುದರಿಂದ ಪುರಂದರದಾಸರ ಗಾನಪ್ರಚಾರ ಧರ್ಮಪ್ರಚಾರ ಕಾರ್ಯಗಳು ಸುಗಮವಾಗಿ ನಡೆದುವು. ದಕ್ಷಿಣ ಭಾರತಕ್ಕೆ ಪುರಂದರದಾಸರು ಪ್ರಥಮ ಗಾಯನಾಚಾರ್ಯರಾದರು. ದಾಸರ ಹಾಡು ಮನೆಮನೆಗಳಲ್ಲಿ ವ್ಯಾಪಿಸಿತು.

ಪುರಂದರದಾಸರ ಕಾಲಕ್ಕೆ ಮುಂಚೆ ಸಂಗೀತಶಿಕ್ಷಣ ಕ್ರಮ ವ್ಯವಸ್ಥಿತ ವಾಗಿರಲಿಲ್ಲ. ಕೀರ್ತನೆಗಳ ಜೊತೆಯಲ್ಲಾಗಲಿ ಧ್ರುವಪದದಲ್ಲಾಗಲಿ ಸ್ವರ ಕಲ್ಪನೆ ಮಾಡುವ ರೂಢಿ ಇರಲಿಲ್ಲ. ಭರತ ಶಾರ್ಙ್ಗದೇವಾದಿಗಳ ಜಾತಿ ವಿನ್ಯಾಸ ವಿಧಾನವರಿತು ಆಲಾಪನೆ ಮಾಡುವುದು, ಘನವನ್ನು ಹಾಡುವುದು, ಗುಡುಗುವುದು, ಮಧ್ಯಮಕಾಲದಲ್ಲಿ ರಾಗದ ಸೌಕುಮಾರ್ಯವನ್ನು ತೋರಿಸು ವುದು, ಆಭೋಗ ಕ್ರಮದಂತೆ ರಾಗ ಸಮಾರೋಪಣೆ ಮಾಡುವುದು, ಚಿಕ್ಕ ದೊಂದು ಲಲಿತ ವಾಕ್ಯವನ್ನು ಭಾಷೆಯಿಂದಾರಿಸಿಕೊಂಡು ಒಂದರಿಂದ ಆರು

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಲದವರೆಗೆ ಪಲ್ಲವಿ ಹಾಡುವುದು, ಆಕಾರದಿಂದ ತಾನ ಹೊಡೆಯುವುದು— ಇದು ಪದ್ಧತಿಯಾಗಿತ್ತು. ವೇದೋಪನಿಷತ್ತುಗಳಿಂದ ಒಂದು ವಾಕ್ಯವನ್ನಾರಿಸಿ ಪಲ್ಲವಿಯನ್ನು ಹಾಡಿಬಿಟ್ಟರೆ ವೇದವೇತ್ತರು ಅದನ್ನು ವೈದಿಕ ಗಾನವೆಂದು ಕೊಂಡಾಡುತ್ತಿದ್ದರು. ಆಗ 'ತತ್ತ್ವಮಸಿ'ಯನ್ನು ಪಲ್ಲವಿಯಾಗಿ ಹಾಡುವ ರೂಢಿ ಎಷ್ಟು ಪ್ರಬಲವಾಗಿತ್ತೆಂಬುದಕ್ಕೆ ಶಂಕರಾಚಾರ್ಯರ ಕಾಲದಲ್ಲಿ ಪದ್ಮಪಾದರು ಅಮರುಕನ ರಾಜಧಾನಿಯಲ್ಲಿ 'ತತ್ತ್ವಮಸಿ ತತ್ತ್ವಮಸಿ ತತ್ತ್ವಮಸಿ' ಎಂದು ಹಾಡುತ್ತ ರಾಜಸಭಾಪ್ರವೇಶ ಮಾಡಿದ ಐತಿಹಾಸಿಕ ಕಥೆಗಿಂತ ಹೆಚ್ಚಿನ ಪ್ರಮಾಣ ಬೇಕಾಗಿಲ್ಲ.

ದಿನದಿನಕ್ಕೆ ಸಂಗೀತ ವಿದ್ಯೆ ಬೆಳೆಯಿತು. ವಿಚಾರ ಹೆಚ್ಚಿತು. ಆಡಿದ ಮಾತಿಗೆ ಹಾಡಿದ ರಾಗಕ್ಕೆ ಹೊಡೆದ ತಾನಕ್ಕೆ ಸ್ವರಗಳನ್ನೇ ಹಾಡಿ ತೋರಿಸ ಬೇಕಾಯಿತು. ಕಾಲದ ಆವಶ್ಯಕತೆಗೆ ತಕ್ಕಂತೆ ಪುರಂದರದಾಸರು ಬಂದರು. ಹಳೇ ಮನೆಯನ್ನೊಡೆದು ಅದೇ ಸಾಮಾನುಗಳಿಂದ ಭವ್ಯಮಂದಿರವನ್ನು ಕಟ್ಟುವಂತೆ ಮೊದಲಿನಿಂದ ಪಾಠಕ್ರಮವನ್ನು ಬದಲಾಯಿಸಿದರು. ಸ್ವರಾವಳಿ, ಜಂಟಿಸ್ವರ, ಅಲಂಕಾರ, ಗೀತೆ, ಉಗಾಭೋಗ, ಸ್ವರಜತೆ, ವರ್ಣ, ಕೀರ್ತನೆ, ಸುಳಾದಿಗಳೆಂಬ ಅಭ್ಯಾಸ ಕ್ರಮವನ್ನೇರ್ಪಡಿಸಿದರು. ಎಲ್ಲ ಸುಧಾರಣೆಗಿಂತ ಖರಹರಪ್ರಿಯದಲ್ಲಿದ್ದ ಪ್ರಥಮಾಭ್ಯಾಸವನ್ನು ಮಾಳವಗೌಳ ಮೇಳದಿಂದ ಆರಂಭಿಸಿದ್ದು ದೊಡ್ಡ ಸುಧಾರಣೆಯಾಯಿತು.

ದಾಸರು ಹಾಕಿಕೊಟ್ಟ ಪಾಠಕ್ರಮದಲ್ಲಿ ಸರಳೆ, ಜಂಟಿಸ್ವರ, ಅಲಂಕಾರ ಮತ್ತು ಮಲಹರಿ ರಾಗದ ಐದು ಗೀತೆಗಳ ಅಭ್ಯಾಸ ಮಾಡುವುದರ ವಿನಾ ಮಿಕ್ಕವು ಈ ಕಾಲದಲ್ಲಿ ಮಾಯವಾಗಿವೆ. ಆಂಧ್ರ, ತಮಿಳು ನಾಡುಗಳಲ್ಲಿ ಕನ್ನಡ ಸಾಹಿತ್ಯ ಅರ್ಥವಾಗಲಿಲ್ಲವೆಂದೂ ಅದರ ಸ್ಥಾನದಲ್ಲಿ ತಾವೇ ಬೇರೆಯ ದನ್ನು ಮಾಡಿಕೊಂಡೆವೆಂದೂ ಬಿಟ್ಟಿದ್ದರೆ ತಪ್ಪಲ್ಲ. ಕನ್ನಡ ರಾಜರಾಳುವ ಮೈಸೂರಿನಂಥ ಆದರ್ಶ ಸಂಸ್ಥಾನದಲ್ಲಿ ಒಂದು ಶತಮಾನದಿಂದ ದಕ್ಷಿಣ ದೇಶ ದಿಂದ ಬರುತ್ತಿರುವ ಕೀರ್ತನೆಗಳ ಅಭ್ಯಾಸ ಸಡಗರದಲ್ಲಿ ವಾಗ್ಗೇಯಕಾರರು ಲೋಕಕ್ಕೇ ಆದರ್ಶದಂತಿದ್ದ ಆ ಲಕ್ಷಣಗೀತೆಗಳು, ಸ್ವರಜತೆಗಳು, ತಾನ ವರ್ಣಗಳು, ತಿಲ್ಲಾನ ಮೊದಲಾದವುಗಳನ್ನು ಕಳೆದುಕೊಂಡಿರುವುದು ಅಕ್ಷಮ್ಯ ವಾದ ಅಪರಾಧವಾಗಿದೆ. ಯಾವ ಗೊತ್ತಿಲ್ಲದ ದಿವಸದಿಂದ ಹರಿದಾಸರು ಬೇರೆ, ಸಂಗೀತಗಾರರು ಬೇರೆ, ಎಂದು ಸಂಗೀತ ಶಾಸ್ತ್ರವನ್ನು ವಾಗ್ಗೇಯ

Sri Vidyabharathi Book Centre, Sringeri

CC-0. In Public Domain. Digitized by eGangotri

ಕಾರರಿಗೆ ಬಿಟ್ಟು ಸಾಹಿತ್ಯ ಭಾಗವನ್ನು ಹರಿದಾಸ ನಾಮಧೇಯರು ತೆಗೆದು ಕೊಂಡು ಮಡಿಮಡಿಯಾಗಿ ಕುಳಿತರೋ ಅಂದೇ ಕರ್ಣಾಟಕ ಸಂಗೀತದ ಸರ್ವ ನಾಶವಾಯಿತು. ದಕ್ಷಿಣ ಭಾರತದಿಂದ ಹೊಸಹೊಸದಾಗಿ ಬರುತ್ತಿದ್ದ ತೆಲುಗು ಕೀರ್ತನೆಗಳನ್ನು ಕೇಳಿದ ಮೈಸೂರಿನ ವಾಗ್ಗೇಯಕಾರರಲ್ಲಿ ಅತಿಗಣ್ಯರಾದ ಸದಾಶಿವರಾಯರಂಥವರಿಗೂ ಮನೆಯ ಮಾತು ಮರಾಠಿಯಾಗಿದ್ದರೂ ದೇಶದ ಮಾತು ಕನ್ನಡವಾಗಿದ್ದರೂ ತೆಲುಗಿನಲ್ಲಿ ಕೀರ್ತನೆ ಮಾಡಬೇಕೆಂಬ ಮೋಹ ಬಿಡಲಿಲ್ಲ. ಇದರಿಂದ ಸಂಗೀತಕ್ಕೆ ತೆಲುಗು ಭಾಷೆಯೇ ಚೆಂದ, ತೆಲುಗೇ ಸಂಗೀತ, ಎಂಬ ಪರಿಣಾಮ ಸಮಾಜದ ಮೇಲಾಯಿತು. ವಾಗ್ಗೇಯಕಾರ ರೊಬ್ಬೊಬ್ಬರೂ ವರ್ಣಗಳನ್ನು ರಚಿಸಲಿ, ಮಹಾರಾಜರ ಮೇಲೆ ತಿಲ್ಲಾನ ಗಳನ್ನು ಹಾಡಲಿ, ಎಲ್ಲಕ್ಕೂ ತೆಲುಗು ಸಾಹಿತ್ಯವನ್ನೇ ತಮಗೆ ಬರದಿದ್ದರೂ ಕಂಡವರಿಂದ ಬರೆಸಿ ಹಾಡುವ ಪರಿಪಾಠವಾಯಿತು. ಕನ್ನಡ ದಾಸ ಸಾಹಿತ್ಯಕ್ಕೆ ದೊಡ್ಡ ಧಕ್ಕೆ ಬಡಿಯಿತು. ಹರಿದಾಸರು ಇವೆಲ್ಲವನ್ನೂ ನೋಡುತ್ತ ರಸಗತ ಭಗವದ್ರೂಪಗಳ ಚಿಂತನೆಯಲ್ಲಿದ್ದರು. ಸುರಪುರದ ಆನಂದದಾಸರಂಥ ವೈಣಿಕರೂ, ಕರ್ಣಾಟಕ ಹಿಂದುಸ್ತಾನೀ ಗಾಯನ ನಿಪುಣರೂ, ಮುಮ್ಮಡಿ ಕೃಷ್ಣರಾಜ ಪ್ರಭುಗಳಿಂದ ಕನಕಾಭಿಷೇಕ ಮಾಡಿಸಿ ಕೊಂಡ ಕೀರ್ತನಧುರೀಣರೂ, ಕನ್ನಡ ಸಂಗೀತವನ್ನು ಹಾಡಿ ಆಶ್ಚರ್ಯ ಪಡಿಸಿದ್ದರ ಪರಿಣಾಮ ಕಾರ್ಯರೂಪಕ್ಕೆ ಬರಲಿಲ್ಲ.

ಕಳೆದುಹೋದುದಕ್ಕೆ ವ್ಯಸನವನ್ನು ಸ್ವಲ್ಪ ಮರೆಯೋಣ! ಉಗಾ ಭೋಗ ಮತ್ತು ಸುಳಾದಿಗಳ ಅವಶಿಷ್ಟ ಮಾದರಿಗಳನ್ನು ಮುಂದಿನ ಸಾಧಕರಿ ಗಾಗಿ ಕೊಡೋಣ!

ಉಗಾಭೋಗಗಳು

ಸ್ವರಸಹಿತ ಕೊಟ್ಟಿರುವ ಈ ಎರಡು ಉಗಾಭೋಗಗಳು ಭಜನ ಕೀರ್ತನಗಳ ಆದ್ಯಂತ ಸಮಯಗಳಲ್ಲಿ ಹಾಡತಕ್ಕವುಗಳು. ಸಂಪ್ರದಾಯಜ್ಞ ರೆಂದು ಹಾಡುವವರು ಸಹ ಸಾಹಿತ್ಯವನ್ನು ಮಾತ್ರ ತೆಗೆದುಕೊಂಡು ತಮಗೆ ತೋರಿದಂತೆ ಹಾಡುತ್ತಿರುವುದು ಎಲ್ಲೆಲ್ಲೂ ಕಂಡುಬರುತ್ತಿದೆ. ಮಾಡಿದವರು ಯಾವ ಭಾವಾವೇಶದಿಂದ ಯಾವ ರಾಗ ತಾಳಗಳಲ್ಲಿ ಹಾಡಿದರೋ ಹಾಗೆ ಹಾಡುವುದೇ ನ್ಯಾಯಸಮ್ಮತ. ಪುರಂದರದಾಸರ ಶಿಷ್ಯರು ವಿಜಯದಾಸರ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಲದಿಂದ ವಿಚ್ಛೇದವಿಲ್ಲದೆ ಅದೇ ಪರಂಪರೆಯಲ್ಲಿ ನಾಲ್ಕು ತಲೆಮಾರುಗಳಿಂದ ಲೇಖಕನೂ ಆಸ್ಥಾನ ವಿದ್ವಾನ್ ಸೋಸಲೆ ರಾಮದಾಸರೂ ಹಾಡಿಕೊಂಡು ಬಂದಿರುವ ಕ್ರಮವಿದಾದುದರಿಂದ ಸಂಶಯಕ್ಕೆ ದಾರಿಯಿರುವುದಿಲ್ಲ. ಇತರ ಉಗಾಭೋಗಗಳ ವಿಷಯದಲ್ಲಿ ಪೂರ್ವದ ನಿಬಂಧನೆಯೇನೆಂಬುದು ಗೊತ್ತಿಲ್ಲ.

ರಾಗ: ಮೋಹನ — ತಾಳ: ಜಂಪೆ

|| ಸರಿಗಾ ಗಗ || ಗಾಗಗ || ರಿಗಪಾಪ || ಧಪಪಗ ಗರಿರಿ ||
ಸತತ ಗಣ – ನಾಥಸಿ ದ್ಧಿಯನೀವ ಕಾ . . . ರ್ಯದಲಿ ||
|| ಸರಿಗಾ ರಿಸ || ಸಾಸಧಧ || ಪಪಧ ಸಾರಿ || ಗಾಧಪಗರೀಸ ||
ಮುಕುತಿ ಪಥ ಕೀವ ಮನ - ಮಹ ರುದ್ರ ದೇವ . . ರು . ||
|| ಗಗಗಾ ಪಧ || ಸ ಸ ಸ ಸ ಸ || ಸ ರಿ ಗಾ ರಿ ಸ ಸಾ ರಿಸ ಧ ಪಧಾ ||
ಭಕುತಿ ದಾ- ಯಕಳು ನಮ್ಮ ಭಾ . ರ ತೀ . ದೇ . . ವಿ ಯು ||
|| ಧಾ ಧಗರಿ ಸಾ || ಸಾ ಸ ಧ ಧಪಗಪ ಪಧಾ || ಸಾ ಪಧಾಸಧಪ ||
ಯುಕುತಿ ಶಾ ಸ್ತ್ರ . ಗ ಳ . . . ಲ್ಲಿ . . ವನಜಸಂ
ಪಗಗಾ ಪಗಧಪಗರಿ ||
ಭ . ವ ನ . ರ . ಸಿ . ||
|| ಸಾಗಗಾಗ || ಗಗಗಗಗ || ಗಾಪಧಾಸಾಸಾ || ಸಧಧಪ ಪಗಗರಿರೀ ||
. ಸತ್ಕರ್ಮ ಗಳನಡೆಸಿ ಸು . ಜ್ಞಾ . ನ ಮ . ತಿ . ಯಿ ...ತ್ತು ||
|| ಗಪಗಾರಿಸ || ಸಸಸ ಧಧಧಸಾಧಾ || ೯ ಸರಿಗಾಪಾ ಧಪ || ಗರೀಸ... ||
ಪರಿಪಾ.ಲಿ ಸುವನ . . . . ಮ್ಮ ಪವಮಾ ನ. ನು. . . . ||
|| ಧಧಧಧ || ಧಾಧಪಪಗಗಾ ೯ ಗಪಾಧಸಾ || ಸ ಸ ರಿ ಗ ರಿ ಸ ಸ ಧಾ
ಚಿತ್ತದಲಿ ಆನಂ. . . ದ ಸುಖವನೀ ವ ಳು ರ . ಮಾ . . .
|| ೯ ಸ ರೀ ಗಾ ಗಾ ಗ || ಗಾ ಗ ರಿ ರಿ ಸ ಸ ರಿ ಗ ಪ || ಗರಿ ಸರೀಗ ಸಾಸಾ ||
ಭಕುತ ಜ ನ ರೊ . ಡೆ .ಯ ಶ್ರೀ . . . . ಪುರಂ . ದ ರ
ರಿ ಸ ಸ ಧಾ ಧ ಪಾ ಧಾ
ವಿ . . ಠ ಲ ನು

Sri Vidyabharathi Book Centre, Sringeri

CC-O. In Public Domain. Digitized by eGangotri

|| ಧ ಧಾ ರಿ ಸ ಸ || ಸ ಧಾ ಧಾ ಧ ಪ ಪ ಗ ಪ ಧ || ಸಾ ಧ ಧಾ ಸ ಧ ಪ ||
ಸ ತ ತ ಇ ವ ರೊ . ಳು ನಿಂ . . . ತು . . ಕೃ ತಿ ಯ ನ ಡೆ
ಪ ಗ ಗಾ ಗ ಪ ಧ ಪ ಗ ರಿ || ಸ ಧ ||
ಸು . ವ ನು . . . .

ರಾಗ: ಸುರಟಿ — ತಾಳ: ಆದಿ

|| × ಸನಿಧಪ ಪಪಮಮಾ || ૯ ಮಗಾ ಪಮಾ || ರೀ ರಿಗರಿಮ ||
ಇಂದಿನ ದಿ ನವೇ . . ಶುಭ ದಿನ ವೂ . . . .
|| ಪನಿ ಸನಿಧ ಪಪ ಮಮಾವ || ૯ ಮಗಾಪಮಾ ರಿಮರಿಮ ಗರೀಸ ||
. . ಇಂದಿನ ದಿನ ವೇ . . ૯ ಶು ಭ ದಿ ನ ವೂ . . . . .
|| ૯ ರಿಮಾ ರಿಸಾ ರೀಪಮ ಪಾ || ૯ ನಿದಾನೀ ૯ ಸಾ . . . . . .
ಇ ಂ ದಿ ನ ವಾ . . ರ ಶುಭವಾ . ರಾ . . .
|| ૯ ನಿ ಸಾ ರಿ ಸಾ ಸಾನಿಧಪಾ || ૯ ಮಪಾಮಾಗ ಮಮರಿಸ ರಿಮಪನಿ ||
ಇಂ . ದಿ ನ ತಾ . . ರೇ ಶು ಭ ತಾ . ರೇ . . . .
|| ಧನಿ ಸನಿಧ ಪಪಪಮಮಾ || ૯ ಮಗಾಸಮಾ ರಿಮರಿಗ ಗರೀಸ ||
ಇಂದಿನ ದಿನವೇ . . ಶು ಭ ದಿ ನ ವೂ . . . . . ||
|| ಮಾಮಮಾ ಮಾಮಮ || ಮಮಾಮಮಾ ಮಗಪಮ ರೀ ||
ಇಂ ದಿ ನ ಯೋ . ಗ ಶುಭಯೋ . . . . . ಗ
|| ૯ ರಿಮಾರಿಸಾ ರಿಸ ಸನಿ ನೀ || ಧ ನಿಸಾರಿಮಾ ಮಗ ಮಮರೀ ||
ಇಂ . ದಿನ ಕ ರ ಣ . . . ಶುಭ ಕ ರ ಣ . . . .
|| ૯ ನಿಸಾ ನಿಧಾ ಪಾ ನಿಮಪಾ || ૯ ಮಪಾನಿಧನಿ || ಸಾ ಸಸ ||
ಇಂ ಮು ಪು ರಂ ದ . ರ . ವಿ . ಠಲ . ರಾ ಯನ
|| ૯ ನೀ૯ನೀ ನಿನಿ ಧನಿಸರಿ | ಸಾ ನಿಧಾ ಪಾ૯ ಮಮಮಗ ರಿಮಪನಿ ||
ಸಂ ದರು ಶನ ಫ . ಲ . . ವೆನ ಗಾ ಯ್ತು . . . .
|| ಧನಿ ಸನಿ ಧ ಪಪ ಪಮಮಾ || ૯ ಮಗಾಪಮಾ ರಿಮರಿಮ ||
ಇಂ ದಿ ನ ದಿನ ವೇ ಶು ಭ ದಿ ನ ವೂ . . .

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಸುರಟಿ ರಾಗದ ಉಗಾಭೋಗ ಮಹಿಮಾದೃಷ್ಟಿಯಿಂದ ಮಹತ್ತರವಾದದ್ದು. ಪುರಂದರದಾಸರಿಗೆ ವ್ಯಾಸರಾಯರಿಂದ ಅಂಕಿತೋಪದೇಶವಾಗಿ ಆತ್ಮಸಾಕ್ಷಾತ್ಕಾರವಾದ ಆನಂತರದಲ್ಲಿ ಹಾಡಿದ್ದು. ದಾಸರು ಜೀವನ್ಮುಕ್ತ ಸ್ಥಿತಿಗೆ ಬಂದ ಮಂಗಳ ಮಹೋತ್ಸವದ ಮೊದಲ ಉದ್ಗಾರವಿದು. ಪರಮ ಮಂಗಳಗಳಿಗೆ ಮಂಗಳವು.

ಸುಳಾದಿ

ಸುಳಾದಿಯ ಆದ್ಯಪ್ರವರ್ತಕರು ಶ್ರೀಪಾದರಾಯರೆಂಬುದನ್ನು ಹಿಂದೆ ತಿಳಿಸಿದೆ. ಇವರು ರಚಿಸಿದ ಸುಳಾದಿಗಳ ಸಂಖ್ಯೆ ಎಷ್ಟೆಂಬ ವಿವರ ತಿಳಿಯಲು ಸಾಧ್ಯವಿಲ್ಲ. ನಮ್ಮಲ್ಲಿ ಉಪಲಬ್ಧವಿರುವುದು ಒಂದೇ ಒಂದಾದ ಇವರ ಮೊದಲ ಸುಳಾದಿ ಇದು. ಇವರಾಗಲಿ ಪುರಂದರದಾಸರಾಗಲಿ ರಚಿಸಿದ ಸುಳಾದಿಗಳಲ್ಲಿ ದೀರ್ಘವಾದ ಸಾಹಿತ್ಯ ಸರಣಿಯಿರುವುದಿಲ್ಲ. ಸಂಗೀತ ಪ್ರಧಾನವಾದ ಸುಳಾದಿಯಲ್ಲಿ ಸಾಹಿತ್ಯ ಹೆಚ್ಚಾಗಿರಬೇಕಾಗಿಲ್ಲ. ಶ್ರೀಪಾದ ರಾಯರು ಪ್ರತ್ಯೇಕ ತಾಳಕ್ಕೆ ಪ್ರತ್ಯೇಕ ರಾಗವಿರಬೇಕೆಂದು ನಿಬಂಧನೆಮಾಡಿದರು. ಪುರಂದರದಾಸರು ಇವರನ್ನು ಅನುಸರಿಸಿದರು. ಕೆಳಗೆ ಕೊಟ್ಟಿರುವ ಉಭಯರ ಸುಳಾದಿಗಳು ಅವರವರು ಹಾಡಿದ ಕ್ರಮದಂತೆ ಪರಂಪರೆಯಾಗಿ ಬಂದಿವೆ. ಸುಳಾದಿಗಳ ಮತ್ತೊಂದು ವೈಶಿಷ್ಟ್ಯವೆಂದರೆ ಯಾವ ತಾಳದ ಸಾಹಿತ್ಯವನ್ನು ಮತ್ಯಾವ ತಾಳದಲ್ಲಿ ಬೇಕಾದರೂ ಹಾಡಲನುಕೂಲವಾಗಿರುವುದು. ಶಬ್ದಗಳು ಅಪಾರ್ಥವಾಗುವದಿಲ್ಲ. ಶುದ್ಧ ಪ್ರತಿಯಾಗಿದ್ದರೆ ಒಟ್ಟಿನಲ್ಲಿ ಹರಿದಾಸ ಸಾಹಿತ್ಯವೇ ಈ ರೀತಿ ಇದೆ. ಅಕ್ಷರಗಳನ್ನು ಸೇರಿಸದೆ ಇದ್ದದ್ದನ್ನು ತೆಗೆಯದೆ ಹಾಡಲನುಕೂಲವಾದ ಸೌಲಭ್ಯ ಮತ್ತೆ ಯಾವ ಸಾಹಿತ್ಯದಲ್ಲೂ ಕಂಡುಬರುವುದಿಲ್ಲ. ಸಂಗೀತ ಸಾಹಿತ್ಯಗಳ ಮೇಲೆ ಈ ಮಹನೀಯರಿಗೆ ಎಂಥಾ ಹಿಡಿತವಿತ್ತೆಂಬುದನ್ನು ಶಬ್ದದಿಂದ ವರ್ಣಿಸಲು ಶಕ್ಯವಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಪಾದರಾಯರ ಸುಳಾದಿ

ರಾಗ: ನಾಟ — ತಾಳ: ಧ್ರುವ

|| ಪಪ ಪಮರೀ | ಮಾಮರಿ | ರೀ | ಸರಿಗಾಮಾ | ಮರಿರೀ ರಿಸಸಾ ||
ನಿನ್ನಾಧೀ . ನ ಶ ರೀ . ರ ಕರಣ ಚೇ ಷ್ಟೆ . ಗಳೆ . ಲ್ಲ
|| ಸನಿಸಾ ಸನಿ ಸ | ರಿ ಗ | ಮ ಪಾಪಾ ನಿಪ | ಪಮಮರಿ ರಿರಿ ||
ನಿ . ನ್ನಾ ಧೀ ನ . ಬಂ ಧ ಮೋಕ್ಷ ನಿ . ಯ. ತಿ . ಗಳು
|| ಗಮ ಮಮ ಮರಿರೀ ರಿಸಸನಿ | ನೀ ಸಾ ಸರಿಗಾ | ಮ ಪ ಪ ಪ ||
ನಿ . ನ್ನಾ . ಧೀ . ನ ಯೋಗ್ಯ. ತೆ ಸಾ ಧ . ನ ಸಾಧ್ಯಂಗಳು
|| ಪನಿಸನಿ ನಿಪಪಮ | ಮರಿ ಮರಿ | ರೀ ರಿಗಮ ಪಧಧಧ ||
ನಿ. ನ್ನಾ. ಧೀ . ನ . ಸು . ಕೃ . ತ ದುಷ್ಕೃತಫಲಗಳು
|| ಸಾಸನಿನಿಪ ಪ | ಮಗ | ಮಾ ಪ ಧ ನಿ | ಸಾಸನಿ ರಿ ರಿ ||
ನಿನ್ನಾ. ಧೀ ನ ವಿ . ಷ ಯಾತ್ಮಕ ಬುದ್ಧಿ . ಗಳು
|| ಸ ನಿ ರೀ ರೀ ಗ | ಮಾ | ಮ ರಿ ರಿ ಸ ಸಾ ಸಾ | ರೀ ರಿ ಸ ಸ ಸ ||
ನಿ . ನ್ನಾ ಧೀ ನ ಚ ರಾ . ಚ ರ ವೆಂ ದು ಶ್ರುತಿ . ವಾಕ್ಯ
|| ಸಾ ಸ ನಿ ಪಾ ಪಾ | ಪ ಮ ಮ ಗ | ಮಾ ಪ ಧ ನಿ | ಸಾ ರಿ ಸ ರೀ ||
ಪು ಣ್ಯ . ಪಾ ಪ ಗ . ಳಿಂ ತು ನಿನ್ನ ವ್ಯಾ ಪಿ ಸ . ವೋ
|| ಗಮಪಮ ಮರಿರೀ | ರಿಸಸಸ | ನೀ ಸಾಸನಿ ನಿಪ | ಪಮ ಮರಿರಿರೀ ಸ ||
ಉ . ಣ್ಣಿ . ಸು . ವೆ ಜೀ. ವರಿ ಗೆ ಪಾಪಂ ಗ . ಳ . ನೆಂತೋ .
|| ಪಾಪಮಗಮ ಪಾ | ಧನಿಸಾ | ಸಾ ಸಾ ರಿ ಸ ಸ ನಿ | ಸಾಗಮಪಾಪಾ ||
ನಿನ್ನ . ಮಹಿ ಮೆ ಗೆ . ನ ಮೊ ಅಂತರಾ . . . ತ್ಮ . ಕ ನೆ
|| ಗಮಪಮಮರಿ ರಿಸ | ಸನಿ ಸರಿ | ರೀ ಪಸಸನಿನಿಪ | ಪಮಮರಿ ರಿರಿಸಾ ||
ಎ . ನ್ನ . ಪಾ. ಲಿ. ಪ . ಭಾ. ರ ನಿ. . ನ್ನದೊ. ರಂ ಗ . ವಿಠಲ ||

ರಾಗ: ಗೌಳ — ತಾಳ: ಮಠ್ಯ

|| ಪಾಮಪ | ಪಮ | ಮಾ ರಿಗಮಾರೀ | ಸಸಸನಿಪಾ | ಪಾಪ | ರಿರಿರೀ ||
ಮುನ್ನನಿ . ನ್ನ . . ಚ . ರ ಣ ಕಮಲ . . ವ ನೆ ನೇಯದೇ

Sri Vidyabharathi Book Centre, Sringeri

CC-O. In Public Domain. Digitized by eGangotri

|| ಸರಿಪಮ | ೯ ಪನಿ | ಸನಿಪಾ ಮಮಮಾ | ನಿಪಪನಿ ನಿಸಾ | ಸನಿ ರಿಸ ||
ಪ.ನ್ನಗ ಶ . ಯ . ನ ನೇ . . ಭವದ . ಲ್ಲಿಬಂ . . ದೆನೊ
|| ರಿರಿರಿರಿ | ೯ ಸನಿ | ಪಾ ನಿಸರಿಸರೀ | ಗಮರಿಸ | ಸಸಸ | ಪಾಪಾಗನಿಸಾ ||
ಎ.ನ್ನಯ ಗು . ಣ ದೋ..ಷ ಎಣಿಸದ ಲೆ ಬಂ . . . . .ದು
|| ನಿಸರೀಸಾ ಸ | ಸ ಸನಿ | ಪಾ ಮಪನೀನೀ | ಪಾಸಾಸನಿ ಪ | ಮಪ |
ಘ . . ನ್ನ ಮ ಹಿಮ . . ಕಾ. .ಯೊ ರಂ . ಗ . ವಿ . ಠ
ಮರಿಗಮರಿಸ ||
ಲ ಸ್ವಾ. .ಮಿ.

ರಾಗ: ವರಾಳಿ — ತಾಳ: ತ್ರಿಪುಟ

|| X ಸಸ | ಸ ನಿ ಧಾ ಪಾ | ಮ ಪ ಧ ಪ ಪ ಮ | ರಿ ಗಾ ರಿ ಸಾ |
ಕ ರ ಣಂ . ಗ ಳು . . . . ತ
|| ಸ ಸರಿ | ಗಾ ರಿ ಸ | ಸಾ ರಿ ನೀ ೯ | ಸಾ ಸಾ |
ಮ್ಮವಿಷ ಯ ಕೆ . ಳಿ ಯು ಶಿ ವೆ
|| ೯ ಸಾ ಸರಿ | ಗಾ ಗಾ || ಗಾಗಮಮಾ | ಮಪಧಪ ದಾ ||
ಹ .ರ ಣ ನಿ ನ್ನದು . . ಕಾ. . . ಯೋ
|| ನಿ ಸ ರಿ ಸ ರಿ | ಸನಿದಾ ಪಾಪಮ | ರಿಗಾರಿಸಸ | ಸರಿಗಮ ಪಧನೀ |
ಕ . ರು . ಣಾ . . . ಕ . ರಾ . . . .
|| ೯ ಗಮ | ಪಾ ಧಾಧನಿ | ಸನಿಧಧನೀ | ಸಾಸನಿ ಸರಿ ಗಾ ||
ಶ ರ ಣು ಎಂ ಂ ಬೆ . . ನಿ. ನ . . ಗೇ . .
|| ೯ ರಿ ಸ | ಸ ರಿ ಗಾ ರಿ ಸ || ಸಾ ಗ ರಿ ಸ ನಿ | ಸಾ ಸಾ ||
ನಿ . ನ್ನ ಭ . . . ಕ್ತ . . ರೀ ಗೇ ||
|| ೯ ಧಪದಾ | ಧನಿಸಾ | ನಿ ಸ ನಿ ಸ ರಿ ಸ | ಸನಿಧಾ ಪಮಪಮ ||
ಬಿ . ರು ದು.ನಿ ನ್ನ . . ದ . . ಲ್ಲ . . ವೇ . . .
|| ಪಮಪಸ | ಸನಿನಾ ಪಾಪಮ | ಪಮ ಗಾ | ರಿಸ ರಿಗಮಪ | ಧನಿ ||
ರಂ ಗ . . ವಿ . . ಠ . ಲ ರೇ ಯ . . . .

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಗ: ಆರಭಿ — ತಾಳ: ಅಟ್ಟ

|| ಧ ರಿ ಸಾ ಸಾ ಸನಿದಾ | ಧ ಪ ಮಪಧಾಪಾ | ಪಮ ಮಗ ರಿರಿ ||
ಬಂದು ಬ ಂ ದು . . ನಾನಾ ಭ ವ ದ ಲಿ ನೊಂ . . ದೆನೊ
|| ರಿಪಮಗರೀ ಸರಿಮಗ | ರಿಸನಿಧ ಸರಿರಿಮ ಪಧ | ಧರಿಸನಿ ದಾ ॰ ಪ ||
ನಂದ . ನ ಕಂ . . ದ . . . ಇಂದಿ . ರಾ . ನಂ . . ದಾ . .
|| ಪಮಪಾಧಾ ಸಾ | ರಿ ರಿ ಸ ರಿ ಮ ಗ ರಿ ರಿ | ಸ ಸ ಸ ನಿ ಧಾ ಧಾ ||
ಕುಂ . ದ ದಂ ತೆ ಶುದ್ಧ ಧವ ಳ . ಮ ಂ . . ದ . ಹಾ ಸ
|| ಸ ನಿ ಧ ರಿ ಸಾ ಸನಿದಾ | ಧಪ ಮಪಧಾಪಾ | ಮಗರೀ ರಿಮಪಧ ||
ಸು ಂ ದ . ರ ಮೂ . . ರುತಿ ರ ಂ ಗ ವಿ ಠ . ಲ ರೇ.ಯ .

ರಾಗ: ಕೇದಾರ — ತಾಳ: ಆದಿ

|| × × ಸ ಸಾ ನಿ ಪಾ | ಪಮಗಾ | ಗರಿಸಾ || ಸಪಾನಿಸಾಸಾ |
ಹ ರಿ ಯೆ ನಿ . . ನ್ನ ಒ . ಮ್ಮೆ ನೆನೆದಗೆ ನ
ಗರಿಮಗ | ರಿಸಸಾ ||
ರ . ಶ . .ವಿ ಲ್ಲ
|| ॰ ॰ ಸಮಾಗಮಾ | ಪಾಪನಿ | ಸಾಸಾ || ಸ ಮ ಗ ರಿ ಸ ರಿ ಸ ನಿ |
ಮೊರೆಹೊ. ಕ್ಕನೊ. ಒ ಮ್ಮೆ ಪ್ರೊ . ರೆ . ಯೊ . ರಂ
ಪಾಪಮ | ಗಾಗಮ | ಪನಿ ||
ಗ . ವಿ ಠ ಲ . . .

ಜತಿ || ರಾಗ: ಶ್ರೀ — ತಾಳ: ತ್ರಿಪುಟ

|| × × ಸಾ | ಸ ನಿ ಪಾ ಪ ಮ ರೀ || ರಿ ಗಾ | ರೀ ರಿ ಸ ||
ಮಂ ಗ . . ಳ . . . ಮ ಹಿ ಮ . ಭು
|| ರೀ ॰ ॰ | ರೀ ಪ ಮ ಪಾ || ನೀ ಮಾ ಪಾ ಪ ಮ ಪ ಮ ಪ ನಿ ||
ಜಂ . . ಗ . . ಶ ಯ . ನ ನ . . . ಮೊ .
|| ॰ ನಿ ಸ | ರೀ ರಿ ಗ || ರಿ ಸಾ | ಸ ನಿ ಪಾ ನಿ ಸ ರೀ ||
ಜಂಗು ಳಿದ್ಯೆ . ಪದ ಗಂ . . ಡ . .

Sri Vidyabharathi Book Centre, Sringeri

CC-O. In Public Domain. Digitized by eGangotri

|| ಪ ಸಾ | ಸ ನಿ ಪಾ ಧ ನಿ || ಪಾ ಮಾ॰ ರಿ | ರಿ ಗ ರಿ ಸ
ರಂ . ಗ . . ವಿ . ಠ ಲ . ನ . ಮೊ.

ಕೆಳಕಂಡ ಪುರಂದರದಾಸರ ಸುಳಾದಿಯು ತಿರುಪತಿ ಶ್ರೀನಿವಾಸನ ಸನ್ನಿಧಿಯಲ್ಲಿ ನಿಂತಾಗ 'ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ' ಎಂಬ ಶ್ರುತಿವಾಕ್ಯದಂತೆ ಅಂತರಂಗದಲ್ಲಿ ತೇಜೋದರ್ಶನ, ಬಹಿರಂಗದಲ್ಲಿ ಸಗುಣ ಸಾಕ್ಷಾತ್ಕಾರಗಳಾದ ಮಹಾ ಸಂಭ್ರಮದಲ್ಲಿ ಭಾವೋದ್ರೇಕದಿಂದ ಹಾಡಿದುದಾಗಿರುತ್ತದೆ. ಹಾಡಲು ತಕ್ಕ ವಾತಾವರಣ, ತಕ್ಕ ಸನ್ನಿವೇಶಗಳನ್ನು ಕಲ್ಪಿಸಿಕೊಂಡು ಹಾಡಿದರೆ ಉಂಟಾಗುವ ಆನಂದವು ಅವರ್ಣನೀಯವಾದುದು. ಹಾಡಬೇಕೆಂಬುವರು ತಕ್ಕ ವಾತಾವರಣವಿದ್ದಾಗ ಮಾತ್ರ ಹಾಡಬೇಕೆಂದೂ ತುಂಬಿದ ನಾದದಲ್ಲಿ ಲೇಶವೂ ಅಪಸ್ವರ ಬರದಂತೆ ಹಾಡಬೇಕೆಂದೂ ಸೂಚಿಸುತ್ತೇವೆ.

ಬ್ರಹ್ಮಾನಂದ ಸುಳಾದಿ

ರಾಗ: ಕೇದಾರಗೌಳ — ತಾಳ: ಧ್ರುವ

|| ಮ ಪ ಧಾ ಪಾ ಪ | ॰ ಪ | ಪ ಮ ಪ ಧಾ ಪಾ | ಧ ಪ ಮ ಗ ರಿ ರಿ ||
ಆ . ಪಾ ದ ಆ . ನಂ ದ ಆ . ನ ಖ ಆ . . . ನಂದ
|| ರಿಪ ಮಗರೀ ರಿಮ | ಗರಿಸಾ | ಸಾನಿಸರೀ ರೀ | ರಿಪಮಗ ರಿ ರಿ ||
ಆ . ಜಾ.ನು ಆ . . . ನಂ ದ ಆ . ಜಂಘೆ ಆ . . . ನಂಡ
|| ರೀರಿ ಮಪಾ ಪಾ | ಸ ನಿ ಸಾ | ಸಾ ನಿ ಸ ರೀ ಸಾ | ಸನಿನಿಧ ಪಪ ||
ಆಊ . ರು ಆ . ನಂ ದ . ಆ . ಕ ಟಿ ಆ . . . ನಂದ
|| ಮಪಸಾಸಾ ಸನಿ | ನಿಧಧಪ | ಪಾ ಮಪಧಾಪಾ | ಪಮಮಗ ರಿ ರಿ
ಆ . ನಾ ಭಿ ಆ . . . ಕುಕ್ಷಿ . . ಆ . ನಂದ ಮ . ಯ . ವಯ್ಯ
|| ಪಾಮಗಸಾ ರೀ | ಪಮಪಾ | ಪಾ ಪಾಸನಿಧಮ | ಪಾಸನಿ ಸ ಸ ||
ಆ ಭು . ಜ ಆ . ನಂ . ದ ಆ ಕಂಬು . ಗ್ರೀ.ವಾ ನಂದ
|| ನಿ ಸ ರೀ ಸಾ ಸನಿ | ಧಾ ಧಪ | ಪಾ ಮಪಸನಿಸಾ | ರಿ ಗ ಸಾ ಸ ಸ ||
ಆ . ನಂ ದ ಮ . ಯ ವ . ಯ್ಯ ಆ . ಶಿ . ರೋ ರು . ಹ ಗ ಳು

Sri Vidyabharathi Book Centre, Sringeri

CC-O. In Public Domain. Digitized by eGangotri

|| ನಿ ಸ ರೀ ರೀ ರೀ | ರಿ ಪ ಮ ಗ | ರೀ ರಿ ಗ ಗ ರಿ ಸಾ | ಸಾನಿಧ ಧಪಪಾ
ಆ . ನಂ ದ ವಾ . . ಸ . ರ್ವಾಂ ಗ ದ ವೈ . ಭ ವ ಗ . ಳಿ . ಲ್ಲ
|| ನಿ ಸ ರೀ ಸಾ ನಿಸ | ನಿಧ ಪಾ | ಪಾ ಮಪಧಾಪಾ ಪಮಮಗ ರಿ ರಿ
ಅ . ಸಂಖ್ಯಾ ತಾ. . . ನಂ ದ ಪುರಂದರ ವಿ . . . ಠ ಲ

ರಾಗ: ಮೋಹನ — ತಾಳ: ಮಠ್ಯ

|| ಪ ದ ಸ ಸ | ರಿ ಸ ಸ ಧ | ಧಾಧಧಧ || ಪ ಧ ಸ ರಿ ಸ | ಸಧಪಾ |
ಪಾ . ವ ಕ ಕೋ. . . ಟಿ ಸೂ.ರ್ಯ ಪ್ರ ಭೆಯ ಸೋ. . . ಲಿ
ಧ ಪ ಪ ಗ ಗಾ ||
ಸು . . . ವ
|| ಗಗಧಪ | ೯ ಪಗ | ಪಾ ಧಪ ಪಗರೀ || ಗಪಧಸ | ಸ ಸಪ | ಧಾ ಸಾಸಾ ||
ದೇವನಂ ಗ . ದ ಕಾಂ . . ತಿ ಆ . ನಂ ದ ಮ. ಯ ವ ಯ್ಯ
|| ಪಗಗಪ | ೯ ಧ | ಸಾ ಸ ರಿ || ಗ ರಿ ಸ ಸ | ೯ ಸಾ | ಸ ಧ ಧ ಪ ಪ ||
ಹಾ.ವಭಾ . ವ ಭ್ರೂವಿ . ಭ್ರಮವಿಲಾ . ಸ ಗ . ಳಿ . ಲ್ಲ
|| ಧಧರಿಸ | ೯ ಸ | ಧಧಪಪ || ಪದಸಾ ಧಧ | ಪಪಗ | ಧಪ ಗಾಗರಿರೀ
ದೇ.ವನ ಂ ಗ .ಕಾಂ.ತಿ ಆ . . ನ ಂ ದಮ. ಯ. ವ . ಯ್ಯ.
|| ಗಗಗಗ | ಗರಿ | ಗಪಾಪ || ಪಗಪಾ ಧಧ | ಧಪ | ಧ ಸ ಸ ಸ ||
ದೇ.ವಾ. ದಿದೇ . . ವ ಪು.ರಂ ದರ . ವಿ . ಠ ಲ ನ
|| ಧಧಧಾಗರಿ | ಸಾ ಸ | ೯ ರಿಸಧಾಪಾ || ಧ ಸಸಧ | ಪ ಪಗ | ಧಪ ಗರಿಸ ||
ಪಾ.ವ . . ನ ರೂ . . . . ಪ ಆ.ನಂದ . ವ . ಯ. ಮ.ಯ್ಯ

ರಾಗ: ಭೈರವಿ — ತಾಳ: ರೂಪಕ

|| ನಿ ಸ.ರೀ | ಸ ಸ ಸ ಸ || ನಿ ಸ ರೀ | ಸಾ ಸ ನಿ ಧಾ ಪಾ ||
ಬೊ . ಮ್ಮ ಬೊಮ್ಮಬೊಮ್ಮ ಬೊ.ಮ್ಮ ಶ್ರೀ ಹ . ರಿ ಯ
|| ಪಮಪಾ | ಧನಿಸಾ ಸನಿಧಪ || ಮಪಸನಿ | ಧಪ ಮಪಮಗರಿಸ ||
ಕ . ರ್ಮ ಪಾ. . ನಂ . ದ ಕುರುಹ. ಗ . ಳಾ . . ನಂದ

Sri Vidyabharathi Book Centre, Sringeri

CC-O. In Public Domain. Digitized by eGangotri

|| ರಿಗಮಾ | ಮಗ ರಿಗ ಗರಿಸಾ || ರಿರಿಗಾ | ಮಾ ಪಾಧನಿಸಾ
ಸು.ಮ್ಮಾ ನ . ವಾ. ನಂದ ಸುಳಿವು ಗ ಳಾ ನಂದ
|| ರಿ ಗ ಮ ಗ | ರೀ ಸರಿ ಸ ನಿ ಧ ಪ || ಮಪಸನಿ | ಧಪ ಮಗರೀಗಾ
ನ . ಮ್ಮ . ಶ್ರೀ ಪು ರಂ . ದ . ರ ವಿ . ಠ . ಲ . ರಾ . ಯನ
|| ಗರಿಗಾ | ಮಫಧಪ || ಮಪಸನಿ | ಧಪ ಮಗಗಮ ಪಾ ||
ಕರುಣ ವಾ.ನಂದ ಕೋ. . . ಪ . ವಾ. . ನಂ .
ಪಮಗಾ | ರೀ ೯ ಸಾ ೯
ದ . . . . .

ರಾಗ: ಮಲಯಮಾರುತ — ತಾಳ: ಅಟ್ಟ

|| ದನೀಸಾ | ಸಾನಿಧಾ | ಪಾಪಗ || ಗಪಾಧನಿ | ಧಪ ಗಾಗಧಪಾ | ಗರಿಸಾ ||
ದ ಶ ಮಾ . ರು ತ ಗ . ಳು ಆ . ನಂ ದ . ಮ . ಯ . ವ ಯ್ಯ
|| ಸರೀಗಾ | ಗಾ ಗರೀಗಾ ೯ | ಪಾಪಾ || ಧನೀಸಾ | ಸನಿಧಾ
ಹೃಷೀಕೇ . ಶ . ನ . ಏ ಕಾ ದ ಶ ವಾ ದ . .
ಧಾ ೯ ನಿ ಧಾ | ಪಾ ೯ ೯ ||
ಹೃ ಷಿ ೯ ಕ . .
|| ನಿಧನಿಸಾ | ಸಾ ಸಾಸನಿಧಾ | ನಿ ಸ ರಿ ಸ ರೀ || ೯ ಸ ರಿ ಸ ರಿ ಗಾ
ಆ . . ನಂ ದ ಮಯ. . ವ . . . ಯ್ಯ ಆ . ನಂ .
ರೀ ಸಾ ಧ ನಿ ಸಾ ನಿ ಸ ನಿ ಧ || ಪಾ ||
. ದ ಮ . ಯ ವ . . ಯ್ಯಾ .
|| ದನಿ: ಸಾ | ಸಾ ನಿಸಸಿಧಾ ೯ | ಧಪಪಗ || ಗ ಪಾ ಧಾನಿ | ಧಪಗಗಾ |
ಅಸಂಖ್ಯಾ . ತಾ. . . . ನಂದ . ಪುರಂ ದ . ರ . ವಿ ಠ
ಗ ಪ ಧ ಪ ಗ ರಿ ಸ
ಲ . . . . . .

ರಾಗ: ಮಧ್ಯಮಾವತಿ — ತಾಳ: ಆದಿ

|| ಪಪಾ ಪಮ ಪಾಸನಿ ನಿ ನಿ | ಪಸಸ ನಿಪಾ ಪಮ | ಮರಿ ರಿ ರಿ ರಿ
ಆ ನಂ ದ . . . . ದ . ನಾ . ಕುಮಾರ

Sri Vidyabharathi Book Centre, Sringeri

CC-0. In Public Domain. Digitized by eGangotri

|| ರಿಮಪನಿಸಮ ಮರಿರೀ ರಿ ಸ ಸ | ರಿ ಮ ರಿ ಮ | ಪ ಪ ಪ ಪ ||
ಆ . ನಂ . . ದ . ನಾ ವಾಹನ ಆ ನ ಂ ದ ಆ ಶ ಯ ನ
|| ಪಾನಿಮಪಾ ಪಾಸನಿ ಸ ಸ ಸ | ರಿ ಮ ರೀ ಸಾ ಸ ನಿ | ಪಾ ಪನಿಸಾಸಾ
ಆ ನ ಂ ದ ಆ . . ಗ ಮ ನ ಆ ನ ಂ ದ ವಿ . ಹಾ . . . ರ
|| ರಿ ಮ ರೀ ಸಾ ಸನಿಪಾಪಮ ಪಾಪನಿ | ಸ ರಿ ಸ ನಿ ಪಾಪಮ ||
ಆ . ನಂ ದ ಆ . ನ ಂ ದ ಮ ತ್ತೆ ಪ . ರ . ಮಾ . .
ರಿಮಪಮ ರೀ ೯ ಸ
ನ ಂ . . ದ . .
|| × ನಿ ಸ ರೀ ಸಾ ರೀ ರಿ ರಿ | ಸ ನಿ ಸ ರೀ ಸಾ | ಸನಿಪಾ ಪನಿಸಾ ||
ಆ . ನಂ ದ ಮೂರುತಿ . ಪು ರಂ ದ ರ ವಿ . . ಠ . ಲ
|| ನಿ ಸ ರೀ ಸಾ ಸಾಸನಿಪಮ ಪನಿ | ಪರಿಸನಿ ಪಾಪಮ | ರಿಮಪಮ ರೀ ೯ ಸ
ಆ . ನಂ ದ ನ ಂ ದ ನ . ತಾ . ನಾ.ದ. ನೀ . ಪ ರಿ . ಯ . ಲಿ

ಜತೆ ರಾಗ: ಸುರಟಿ — ತಾಳ: ತ್ರಿಪುಟ

|| ನಿಸನಿಧ | ಪಾ ಪಧನಿಧ || ಪಮಮಾ ೯ ಗ ರಿಮರಿಮ ಸರೀಸ ||
ಜ್ಞಾ. . . ನಾ . . . . ನ ಂ ದ . . ಮ . . . ಯ . .
|| ಸಾ ಸನಿಸಾ | ರಿಮಮಾ || ಮಮಾ | ಮಗಪಮ ರೀ ||
. ಪು ರ ಂ ದ . ರ ವಿ ಠ ಲ . . . ನ
|| ೯ ೯ ರೀ | ರೀ ಪ ಮ ಪಾ || ನಿ ಧಾ | ನಿ ನಿ ಸಾ
ನಾ ನಾ . . ರೂ ಪ ಗ ಳಿ . ಲ್ಲಾ
|| ೯ ೯ ಸಾ | ಸನಿನಿಧಪಾ || ಪಪಮಾ೯ಗ ರಿ ಮ ಪ ನಿ ||
. . ಆ ನಂ . . ದ ಮ . ಯ . ವ . ಯ್ಯ.
|| ೯ ನಿಸನಿಧ | ಪಾ ಪಧನಿಧ || ಪಮ ಮಾ೯ಗ | ರಿಮರಿಮ ಸರೀಸ
ಜ್ಞಾ. . . ನಾ . . . . ನ ಂ ದ . ಮ . . . ಯ

ಇದರಂತೆ ನರ್ತನಕ್ಕೆ ಹೊಂದಿಕೆಯಾಗುವ ನಾಯಕ ನಾಯಕೀ ಭಾವದಿಂದ ಕೂಡಿದ ಪುರಂದರದಾಸರ ಪದಗಳನ್ನು ಕೊಡಬೇಕಾದುದು ಅಗತ್ಯ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾದರೂ ಕಾಗದದ ಅಭಾವ ಗ್ರಂಥವಿಸ್ತಾರಭಯ ಕಾರಣಗಳಿಂದ ಕೊಟ್ಟಿಲ್ಲ. ನವರತ್ನಗಳೆಂದು ಪ್ರಖ್ಯಾತವಾಗಿರುವ ಆನಂದದಾಸರ ಒಂಬತ್ತು ಕೀರ್ತನೆಗಳ ಪೈಕಿ ಒಂದನ್ನು ಮಾದರಿಗಾಗಿ ಕೆಳಗೆ ಕೊಟ್ಟಿದೆ.

ರಾಗ: ಆರಭಿ — ತಾಳ: ಆದಿ

|| ಪಾ ೯ ೯ ೯ ೯ ಪಾ | ಮ ಪ ಧ ಪ | ಧಾ ಧಾ ||
ಪಾ . . . . ದ ದ . ರು . ಶ ನ
|| ಧಸಧರಿ ಸಾನಿಧಾ ಧಧಪಾ | ಪಾ ಪಮಮಾ ಮಗರೀ ರೀ
ಪಾ... . . . ಮ . ರ ಜ ನ . . ರಿ . . ಗೆ
|| ರಿ ಮ ರಿ ಮ ಪಾ ಪಮಮಾ ಮಗರೀ | ರಿಸ ಸನಿಧಾ | ೯ ಧ ರಿ ಸಾ ||
ಆ . . . . ಗು . . ವ . . ದೇ. . . . . ನ . .
|| ರೀ ೯ ೯ ೯ ೯ ೯ ಸ | ನಿ ಧ ಪ ಮ | ಗ ರೀ ಮಾ ಪ ಧ || ಪ ||
ಯ್ಯಾ . . . . ಜ ಗದೊಳು ನ ರ ಹ ರಿ ಯ . || ಪ ||
|| ಪಾ ಧಪಪಮ ಪಾ ಧ ಸ ಧ ಸ | ಸನಿಧಾ ಸಾ | ೯ ಸ ಸಾ ||
ವೇ . . . . ದ ಮಾ. . . . . . ನಿ . ಮೊದ
|| ಸಾ ರಿ ಸ ರೀ ರೀ | ಮ ಗ ರೀ ಸಾ | ಸ ನಿ ಧಾ ಧಾ ||
ಲಾ . . ದ ಅ ಮ . . ರ ರಿ . . ಗ
|| ಧ ಸ ಧ ರಿ ಸಾ ಸ ನಿ ಧಾ | ಧಧಪಾ | ಮಪಧಸ ||
ಗಾ. . . ಧ ವಾ. . . . ದ ಶ್ರೀ . . .
|| ಸ ನಿ ಧಾ ಧ ಧ ಪಾ ಪಾ | ಮ ಪ ಮ ಗ | ರಿ ಮ ಪ ದ || ಅ ||
ದೇ . . . . ವಿ ಭ ಜಿ . ಸು . ವ . . . || ಅ ||
|| ಧ ಧ ಸಾ ಸಾ ಸ ನಿ ದಾ ಧ | ಧಧಪಾ | ಮಮಗರೀರೀ ||
ಶ್ರೀ. ಭೂ ರ ಮ . ಣಿ ಯ ರಕರಾ ಬ್ಜ ಗ . ಳಿ ಗೆ
|| ರಿ ರಿ ಧ ಧ ಪ ಪ ಪ ಪ | ಮಮಪ ಮಾ | ಮಗರೀಮಪದಾ || ೧ ||
ವೈ. . ಭ ವ ಗ ರೆ ವ ಮೆ ರೆ ವ ಸು . ರ ತ . ರು ವ || ೧ ||
|| ಧ ಸಾ ಸ ನಿ ಧಾ ಪಾ ಮ ಪ ಧ ಪ | ಧಾ ೯ ಸನಿ | ಧಾಧಾ ಧ ಸ ರಿ ಸ
ಪ್ರ . ಹ್ಲಾ . . ದ ವ . ರ . ದಾ ನಂ . ದು ಕ . ರೆ .

Sri Vidyabharathi Book Centre, Sringeri

CC-O. In Public Domain. Digitized by eGangotri

|| ರೀ ॰ ॰ ಸ ರಿ ಮ ಮ ಗ ರೀ । ಸಾ ಸನಿಧಾಪಾ । ಮಗ ರಿಮ ಪಾಧಾ ||೨||
ದಾ . . ಕ್ಷ ಣ ದಿ ದ್ವಿ . ರ ದ . ರಾ . . ಜ ನ . ಪೊ. ರೆ ದ ||೨||
|| ಸನಿಧಾಸಾ ಸನಿಧಾಪಾಮಪ । ಧ ಪಾ ಮ । ಗ ರಿ ರೀ ||
ಕಾ. . . ಳಿಂ . . ದಿ ನ ದಿ ಯ ನೀ ರ ಡಿ ಸಿ ಗೋ
|| ಧ ಧ ಪ ಪಾ ಪ ಮ ಗ ರೀ । ಮ ಪ ಧ ಸ ನಿ । ಧಾ ಧಾ ಸ ಸ ||
ಗ ಣ ವ ನೀಂ ಟಿ ವೈ . . ಮ ರೆ ಯ ಲಾ. . . ಕ್ಷ ಣ
|| ಸನಿಧಾಧಾ ಧ ಸ ರೀ ರೀ ಸ ರಿ । ಮ ಮ ಗ ರೀ ಸಾ । ಸ ನಿ ಧ ಧ
ವ್ಯಾ. . . ಳಾ . . . ಲ ಯ ವ ಪೊ . . ಕ್ಕ ಕ ರ ಪಿ ಡಿ
|| ಧಾ ರಿ ಸ ಸಾ ಸ ನಿ ಧಾ ಧ ಸ ರಿ ಸ । ರೀ ॰ ॰ ॰ । ರೀ ॰ ॰ ॰ ||
ದೆ ಳೆ ದು ತ ರ . ಲು ಆ . . . ಗ . . . . ||
|| ರೀ ಮ ಮ ಗ ರೀ ರೀ ರಿ ರಿ । ರೀ ಮ ಗ ರೀ । ರೀ ಸಾ ಸ ನಿ ಧಾ ||
ತಾ ಳ ಮೇ . . ಳ ಗಳಿಂ ತ ಥೈ್ಯ . . . ಯೆ ನ . ಲಿ
|| ಧ ರಿ ಸ ಸ ಸ ಸ ನಿ ಧಾ ಧಾ । ಧಾ ರಿ ಸ । ರೀ ರಿ ರಿ ||
ತಾಂ ಡ ವ ದ ಲೀ . . ಲೆ ಯಾ ಟ ದ ಲೀ . .
|| ರೀ ಮ ಗ ಗ ರಿ ರಿ ಪ ಮ ಪ । ॰ ॰ ಮಾಮಗರೀ । ರಿ ರಿ ಸ ನಿ ಧಾ ||
ಅಂ ಬ ರ ದ ಲಿ ಪೂ. . . . . ಮ ಳೆ .ಯ ಗ ರೆ ಯ. ಲು
|| ಸ ರಿ ಮ ಗ ರೀ ಸ ನಿ ಧಾ ಧ ಧ ಧ ರಿ । ಸ ನಿ ಧಾ ಪಾ ಪಾ । ಮ ಗ
ಉ. ರ . ಗ ರಾ . . ಜ ನ ಪ. ಣಾ . . ಗ್ರು ದ ಲಿ .
ರಿ ಮ ಪಾ ದಾ ||೩||
ನ . ಲಿ ವ ||೩||

|| ಧ ಧ ಪ ಪ ಪಾ ಪ ಮ । ಪಾ ಪ ಮಾ । ಮ ಗ ರೀ ಸ ರಿ
ಅ ಂ ಡ ಜ ರಾ ಜ ಪ್ರ ಕಾಂ ಡ ರ ಥ . ದೊ ಳ ಖಿ
|| ರಿ ಮ ಮ ಮ ಗ ರೀ ರೀ ಸ ರಿ । ಮ ಗ ರೀ ಸಾ ಸ ನಿ । ಧಾ ಸ ಸ ಸ ||
ಳಾಂ ಡ ಕೋ ॰ . ಟಿ ಬ್ರಂ ಹ್ಮಾಂ . ಡ ನಾ . . ಯ ಕ ನು
|| ಧಾ ಪ ಧಾ ರಿ ಸ ರಿ । ಮ ಗ ರಿ ರಿ । ಪ ಮ ಪಾ ||
ಹೆಂ ಡ ರಂ ಧ ರಿ ಸಿ ಕೊಂ ಡಿ ರ . ಲೂ . ರು

Sri Vidyabharathi Book Centre, Sringeri

CC-O. In Public Domain. Digitized by eGangotri

|| ಧ ಧ ಪ ಪಾ ಪ ಮ ಪಾ ಮ ಪ । ಧ ಸ ಸ ನಿ ಧಾ । ಸಾ ಸಾ ||
ದ್ದಂ ಡ ಮ ದ . ದ ವೇ . ತ ಂ ದ . ದ ಶುಂ ಡಾ
|| ಸ ನಿ ಧಾ ಧಾ ಧ ರಿ ರಿ ಸ ರಿ । ಮ ಗ ರೀ ಸಾ ಸ ನಿ । ಧಾ ಧ ಧ ಧ ||
ದ ಂ . ಡ ಪೋಲ್ವ ಪದ ಪು ಂ . ಡ ರೀ . . ಕ ಗ ಳ
|| ಧ ಸ ಧ ರಿ ರೀ ಸಾ ಸಾ ಸ ನಿ ಧ ಧ । ಧ ಧ ರಿ ಸ । ರಿ ರಿ ರಿ ಸ ||
ಮ ಂ . . ಡಿ ತ ಕ ರ . ತ ಲ ಮ ಂ ಡ ಲ ದೊ ಳ ಗೆ ಅ
|| ರೀ ರೀ ಮ ಗ ರೀ ರಿ ರಿ ಸ । ಧ ರಿ ಸ ಸ । ಸ ನಿ ಧಾ ಧ ಧ ||
ಖಂ ಡ ವಾ . . ಗಿ ರಿ ಸಿ ಕೊಂ ಡ ಡಿ ದಾ . . ವ ರೆ
|| ಧಸಧರಿಸಾ ಸನಿಧಾ ಧಪಾ ಮಪಧಸಸನಿ | ಧಪಮಗರಿಮಪದ || ೪ ||
ಬಂ . . ಡು ಕ . . ಣ್ಣಳಿಂ ದುಂಡು.ಸು. ಖ . ಸು . ರಿ . ವ . || ೪ ||
|| ರೀ ಸ ಸ ರಿ ರಿ ಸಾ । ರಿ ಸಾ ಸ ನಿ ಸ ನಿ ಧಾ ಧಾ ಧ ||
ಶ್ರೀ ಸು ರ ಪು ರ ರಾ ಜ ಧಾ ನಿ . ಯೊ ಳ ಗೆ ನಿ
|| ರೀ ಸ ಸ ನಿ ಧಾ ಧಾ ಧ ಧ । ಧ ರಿ ರಿ ಸ ಸಾ ರಿ ರಿ ರಿ ರಿ ||
ವಾ ಸ ವಾ . . ಗಿ ಸ ಕ ಲಾ . ಭೀ . . ಷ್ಟೆಯ ತ ನ್ನ
|| ರೀ ಪ ಮಾ ಮ ಗ ರಿ ರಿ ರಿ । ಧಾ ಗ ರಿ ಸಾ ಸಾ ಸ ನಿ ಧಾ ಧ ಧ ||
ದಾ ಸ ರ . ವ ಸ ರ ಕೆ ಸ . ಲಿ ಸು ವ ಶ್ರೀ . . ಕ ಮ
|| ಧ ಸ ಧ ರಿ ಸಾ ಸ ನಿ ಧಾ ಧ ಪ ಪ । ಮ ಪ ಪ ಮ ಗ | ರಿ ಸ
ಲೇ . . . ಶ ವಿ . . . . ತ ಲ ನಾ . ದ ನ . ರ .
ರಿ ಮ ಪಾ ಧಾ || ೫ ||
ಹ . ರಿ ಯ || ೫ ||

ಈ ಕೀರ್ತನೆ ನರ್ತನಕ್ಕೆ ಎಷ್ಟು ಹೊಂದಿಕೆಯಾಗಿದೆ, ಚರಣಗಳ ಕೊನೆಯಲ್ಲಿ ತ್ರ್ಯಶ್ರ ಮಿಶ್ರ ಖಂಡ ಸಂಕೀರ್ಣ ತಾಳಜಾತಿಗಳನ್ನು ಸಾಹಿತ್ಯಾಕ್ಷರದಲ್ಲಿ ಹೇಗೆ ಹುದುಗಿಸಿದ್ದಾರೆ, ಎಂಬುದನ್ನು ಗಾನಪಾರಂಗತರು ಪರಿಶೀಲಿಸಬೇಕು.

ವರ್ತಮಾನಕಾಲದಲ್ಲಿ ಪುರಂದರದಾಸರ ಕನ್ನಡ ಕೃತಿಗಳಿಗೆ ಪ್ರಾಪ್ತವಾದ ಗತಿ ತ್ಯಾಗರಾಜರ ತೆಲುಗು ಕೀರ್ತನೆಗಳಿಗೆ ಪ್ರಾಪ್ತವಾದ

Sri Vidyabharathi Book Centre, Sringeri

CC-0. In Public Domain. Digitized by eGangotri

ತೆಂಬ ಭಯ ತಲೆದೋರುತ್ತಲಿದೆ. ತಮಿಳು ನಾಡಿನ ಜನರಿಗೆ ತೆಲುಗು ಕೀರ್ತನೆಗಳು ಬೇಕಾಗಿಲ್ಲ. ಸಂಗೀತವೆಲ್ಲಾ ತಮಿಳಾಗಬೇಕೆಂಬ ಚಳವಳಿ ಬಲಿಷ್ಠವಾಗಿದೆ. ವಿಶಾಲಮನಸ್ಕರು ಕಟ್ಟಿದ ತಡೆಯು ಗುಪ್ತಚಳುವಳಿಗೆ ಬಾಧಕವಾಗಿಲ್ಲ. ಸಂಗೀತ ದೃಷ್ಟಿಯಿಂದ ಅವಶಿಷ್ಟ ಮೈಸೂರು ಕನ್ನಡ ನಾಡಿನಲ್ಲಿ ಭಾಷೆಯ ಮತ್ತು ಗಾನ ಸಂಸ್ಕೃತಿಯ ಹೆಸರಿನಿಂದ ಬಿಸಿ ಹುಟ್ಟಿಲ್ಲ. ಬಿಸಿ ಹುಟ್ಟಲು ಮೈಸೂರಿನ ವಾತಾವರಣ ಅನುಕೂಲವಾಗಿಲ್ಲ. ಒಂದು ವೇಳೆ ತಮಿಳು ನಾಡಿನ ಸಂಗೀತ ತಮಿಳಾದರೆ ಕನ್ನಡ ನಾಡಿನ ಸಂಗೀತ ಕನ್ನಡವಾಗಬೇಕೆಂಬ ಬೇಡಿಕೆ ಬರಬಹುದು. ಅಷ್ಟುಮಾತ್ರಕ್ಕಾದರೂ ಈಗಿನಿಂದ ಸಿದ್ಧತೆಯಿರಬೇಕು. ಬರಿಗೈಯಿಂದ ಬಾಯಿ ಭಾಗವತ ಹೇಳಿದರೆ ಮಾತಿಗೆ ಬೆಲೆ ಬರುವುದಿಲ್ಲ. ಅಂದಮಾತ್ರಕ್ಕೆ ಪ್ರಚಾರದಲ್ಲಿರುವ ತ್ಯಾಗರಾಜ ಪ್ರಭೃತಿಗಳ ದಿವ್ಯಕೀರ್ತನೆಗಳನ್ನು ಬಿಡಬೇಕೆಂದಲ್ಲ. ಕರ್ಣಾಟಕ ಸಂಸ್ಕೃತಿಯೆಂಬ ಹೆಸರಿಗಾದರೂ ಮಾನಕೊಡಲು ಸರಿಗರ್ಧ ಕನ್ನಡ ಗಾಯನವಿರಬೇಕು. ಹೀಗೆ ಮಾಡುವುದರಿಂದ ಗಾಯನದ ಸಂಪತ್ತು ಬೆಳೆಯುತ್ತದೆ. ಸ್ವತ್ವವನ್ನು ಉಳಿಸಿಕೊಂಡಂತಾಗುತ್ತದೆ. ತ್ಯಾಗರಾಜರಂಥ ಮಹಾಪುರುಷರಿಗೆ ಭಾವೋದ್ರೇಕವನ್ನುಂಟುಮಾಡಿದ ಪುರಂದರದಾಸರ ಕೀರ್ತನೆಗಳು ಕಾಲಕ್ಕೆ ಮಾದರಿಯಾಗಲಾರವೆಂಬ ಭಯವಿಲ್ಲ. ಕಳೆದುಕೊಂಡ ನಾಡನ್ನೂ ಸಂಸ್ಕೃತಿಯನ್ನೂ ಮತ್ತೆ ಗಳಿಸುವ ಶಕ್ತಿ ಕನ್ನಡ ಜನತೆಗಿಲ್ಲ. ಇದ್ದಷ್ಟನ್ನು ಉಳಿಸಿಕೊಂಡರೆ ಅದು ದೊಡ್ಡ ಸಂಪತ್ತು. ಅಚ್ಚಕನ್ನಡ ನಾಡಿನಲ್ಲಿ ನೆರೆಯುವ ಗಾನಗೋಷ್ಠಿಗಳಲ್ಲಿ ಕುಳಿತರೆ—ಗಾಯಕರು ಕನ್ನಡಿಗರಾದರೂ ಕನ್ನಡತನದ ಕುರುಹಿಗಾಗಿ ಕನ್ನಡ ನಾಂದೀಪ್ರಬಂಧವೊಂದನ್ನು ಸಹ ಆರಂಭದಲ್ಲಿ ಹಾಡುವುದಿಲ್ಲ. ಕಡೆಯ ತನಕ ಕಾದರೆ—ಜನರ ಬೇಡಿಕೆ ಬಂದರೆ—ಕೇಳುವುದಕ್ಕೆ ಸಿಗುವುದು ಒಂದೋ ಎರಡೋ ದೇವರನಾಮ. ಇದು ಕಾರಣ ಉತ್ತರ ಕರ್ಣಾಟಕದವರು ಕರ್ಣಾಟಕ ಗಾಯನವೆಂದರೆ ಮೂಗು ಮುರಿಯುತ್ತಾರೆ. ನಮ್ಮ ಕಾಲದ ಕನ್ನಡ ವಾಗ್ಗೇಯಕಾರರಿಗೆ ಸ್ವರ ಚಿಟ್ಟೆಗಳನ್ನು ಬರೆದುಕೊಂಡು ತೆಲುಗು ಸಾಹಿತ್ಯವನ್ನು ಬಲ್ಲವರಿಂದ ಬರೆಸಿ ಹಾಡಿ ಹೆಸರುಪಡೆಯಬೇಕಾದ ಆವಶ್ಯಕತೆ ಈಗ ಇರುವುದಿಲ್ಲ. ಅದೇ ಚಿಟ್ಟೆಗೆ ಕನ್ನಡ ಸಾಹಿತ್ಯ ಬರೆದು ಹಾಡಿದರೆ ರಸ ಕಸವಾಗುವುದಿಲ್ಲ. ಹೊರಗಿನವರಿಗೆ ಅರ್ಥವಾಗುವುದಿಲ್ಲವೆನ್ನಲು ಆ ನಾಡುಗಳಿಂದ ಬರುವ ಗಾಯನದ ಬೇಡಿಕೆಗಳು ಕನ್ನಡ ಗಾಯಕರಿಗೆ

Sri Vidyabharathi Book Centre, Sringeri

ಆಶಾಜನಕವಾಗಿಲ್ಲ. ಕಲಾಭಿಮಾನಿಗಳಾದ ಮೈಸೂರರಸರ ಆಶ್ರಯವಿರದಿದ್ದರೆ ಕನ್ನಡ ಗಾಯಕರಿಗೆ ತಮ್ಮ ಸಂಸ್ಕೃತಿಯನ್ನು ಕಾದಿಟ್ಟುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಇವೆಲ್ಲವನ್ನೂ ಸಮಾಜದ ಗಾನಪ್ರೇಮಿಗಳೂ ಗಾಯಕರೂ ಯೋಚಿಸಬೇಕು.

ಎಷ್ಟು ಬಗೆಯಿಂದ ವಿಚಾರಿಸಿದರೂ ದೇವತಾವಿದ್ಯ ಸಂಗೀತ. ವಿವಿಧ ಸಂಪ್ರದಾಯಗಳಿದ್ದರೂ ಪರಿಪೂರ್ಣತೆಯ ಪರಮಾವಧಿಯನ್ನು ಮುಟ್ಟಿರುವುದು ಕರ್ಣಾಟಕ ಸಂಗೀತ. ಇಂತಹ ಕಲೆಯು ಶಾಸ್ತ್ರಮಾರ್ಗ ಬಿಟ್ಟು ಸ್ವಚ್ಛಂದವಾಗಿ ಹರಿದು ಹೋಗುತ್ತದೆಯೇ, ಶಾಸ್ತ್ರಮಾರ್ಗದಲ್ಲಿದೆಯೇ, ಇದ್ದರೆ ತುಂಗಭದ್ರೆಯನ್ನೇಕೆ ದಾಟುತ್ತಿಲ್ಲ, ಎಂಬ ಎಲ್ಲದರ ಪರಿಶೀಲನೆಯಾಗಬೇಕು. ಭರತಮುನಿ, ಶಾರ್ಙ್ಗದೇವ, ಪುಂಡರೀಕವಿಠಲ, ವೆಂಕಟಮಖಿ, ತುಳಜಾ ಮಹಾರಾಜ, ಇವರೆಲ್ಲರ ಲಕ್ಷಣಗ್ರಂಥಗಳನ್ನೂ ವಿಮರ್ಶೆಗೆ ತೆಗೆದುಕೊಳ್ಳಬೇಕು. ಲಕ್ಷಣವು ಪ್ರಯೋಗಕ್ಕೆ ಯೋಗ್ಯವಾಗದಿದ್ದರೆ ಲಕ್ಷ್ಯವನ್ನೇ ಲಕ್ಷಣವೆಂದು ಶಾಸ್ತ್ರಬದ್ಧಮಾಡಬೇಕು. ಎರಡು ಶತಮಾನಗಳ ಹಿಂದೆ ಕರ್ಣಾಟಕ ಸಂಗೀತ ಉತ್ತರ ಭಾರತದಲ್ಲಿ ಹಿರಿದಾಗಿ ಅಭಿರುಚಿ ಹುಟ್ಟಿಸಿರಲು ಕಾರಣವೇನು, ಪ್ರಯಾಣ ಸೌಕರ್ಯ ಹೆಚ್ಚಿ ಎಲ್ಲವೂ ಸಮರಸವಾಗಿರಬೇಕಾದ ಈ ಕಾಲದಲ್ಲಿ ಹುಟ್ಟಿಸದಿರಲು ಕಾರಣವೇನು, ಎಂಬ ದೊಡ್ಡ ಸಮಸ್ಯೆ ಪರಿಹಾರವಾಗಬೇಕು. ಅದು ಬಿಟ್ಟು ದಿನದಿನಕ್ಕೆ ಪ್ರಾಂತ್ಯ ಪ್ರಾಂತ್ಯಕ್ಕೆ ಸಂಗೀತ ಪದ್ಧತಿ ಬೇರೆಯಾಗುತ್ತ ಬಂದರೆ, ಭರತಖಂಡವನ್ನು ಹರಿದು ಹಂಚಲು ಹೊರಟಿರುವ ಪಾಕಿಸ್ಥಾನ ದ್ರವಿಡಸ್ಥಾನ ಸಿಕ್ಕಿಸ್ಥಾನ ಆ ಸ್ಥಾನ ಈ ಸ್ಥಾನ ಮೊದಲಾದ ಅರ್ಥವಿಲ್ಲದ ಸ್ಥಾನಗಳಂತೆ ಅಪಹಾಸ್ಯಕ್ಕೆ ಗುರಿಯಾಗಿಬಿಡುವುದು. ಎಲ್ಲ ಅವ್ಯವಸ್ಥೆಗಳಿಗೆ ಶಾಸ್ತ್ರೀಯ ಶಿಕ್ಷಣವಿಲ್ಲದಿರುವುದು ಕಾರಣ. ರಾಜ್ಯಾಂಗದ ವೈದ್ಯವಿದ್ಯೆಗೆ ಶಿಲ್ಪವಿದ್ಯೆಗೆ ವಿಜ್ಞಾನವಿದ್ಯೆಗೆ ಕಲಾಶಾಲೆಗಳಿರುವಂತೆ ಸಂಗೀತಕ್ಕೆ ಕಲಾಶಾಲೆಯಾಗಬೇಕು. ಪ್ರಯೋಗ ಪರೀಕ್ಷಣಗಳಿಂದ ಕಲೆಯು ವೃದ್ಧಿ ಹೊಂದಬೇಕು. ಲಕ್ಷಣ ಗ್ರಂಥಗಳು ಸಂಸ್ಕೃತದಲ್ಲಿರುವ ಕಾರಣ ಸಂಗೀತ ಕಲಿಯುವವನು ಮೊದಲಿನಿಂದ ಸಾಹಿತ್ಯವನ್ನು ಕಲಿಯಬೇಕು. ಶಾಸ್ತ್ರಸಹಿತ ಸಂಗೀತವನ್ನು ಅಭ್ಯಾಸ ಮಾಡಬೇಕು. ಅಕ್ಷರವಿದ್ಯೆಗಳನ್ನು ಕಲಿಸುವ ಶಾಲೆಗಳಲ್ಲಿ ಗುಂಪು ಸೇರಿಸುವಂತೆ ಸಂಗೀತ ಶಾಲೆಯಲ್ಲಿ ಸೇರಿಸುವುದು ಸಾಧ್ಯವಲ್ಲ. ಹಾಳೆಗಳನ್ನು ಮಗುಚಿ ಟಿಪ್ಪಣಿ ಬರೆಸುವ ವಿದ್ಯೆ ಸಂಗೀತವಲ್ಲ. ಪ್ರತಿ ವಿದ್ಯಾರ್ಥಿಗೆ ಸ್ವರರಾಗ ಭಾವಗಳು

Sri Vidyabharathi Book Centre, Sringeri

CC-0. In Public Domain. Digitized by eGangotri

ಕುದುರುವವರೆಗೆ ಪ್ರತ್ಯೇಕವಾದ ಅಭ್ಯಾಸವಾಗಬೇಕು. ವಿವಿಧ ತರಗತಿಗಳನ್ನು ಏರ್ಪಡಿಸಿ ಪರಮಾವಧಿಯ ತರಗತಿಯಿಂದ ವರ್ಷಕ್ಕೆ ನಾಲ್ಕಾರು ಜನರು ಉತ್ತೀರ್ಣರಾಗುವಂತೆ ಮಾಡಿದರೆ ಇಷ್ಟೊಂದು ಪರಿಶ್ರಮಕ್ಕೆ ಫಲ ದೊರಕು ವುದು. ಅವರಿಂದ ಗಾನಸಂತತಿ ಬೆಳೆಯುವುದು. ಕೋಟಿಕೋಟಿ ಜನಸಂಖ್ಯೆ ಯುಳ್ಳ ಭರತಖಂಡದಲ್ಲಿ ಇಂಥದೊಂದು ಶಾಲೆಯಿರದಿರುವುದು ದೇಶಕ್ಕೆ ದೊಡ್ಡ ಅಪಮಾನ. ಕರ್ಣಾಟಕ ಸಂಗೀತವೆಂದು ಹೆಸರುಪಡೆದು—ಕನ್ನಡ ಲಕ್ಷಣಕಾರರಿಂದ ಶಾಸ್ತ್ರಬದ್ಧವಾದ ಸಂಸ್ಕೃತಿಯು ಇದಾಗಿರುವುದರಿಂದ— ಕರ್ಣಾಟಕಕ್ಕೆ ಕೇಂದ್ರವಾಗಿರುವ ಮೈಸೂರಿನಲ್ಲಿ ಇಂಥದೊಂದು ಕಲಾಶಾಲೆ ಯಾಗುವುದು ಕನ್ನಡ ನಾಡಿಗೆ, ರಾಜರಿಗೆ, ಪ್ರಜೆಗಳಿಗೆ, ಎಲ್ಲರಿಗೆ ಭೂಷಣ.

ಸಂಗೀತ ಯಾರಿಗೆ ಬೇಡ? ಅಳುವ ಮಕ್ಕಳನ್ನು ನಗಿಸುವುದು ಸಂಗೀತ. ಮದುವೆ ಮುಂಜಿಗಳಲ್ಲಿ ಮಂಗಳ ಮಂಟಪಗಳನ್ನು ಬೆಳಗಿಸುವುದು ಸಂಗೀತ. ರಾಜದರ್ಬಾರುಗಳನ್ನು ಕಳೆಕಟ್ಟಿಸುವುದು ಸಂಗೀತ. ರಣರಂಗ ದಲ್ಲಿ ವೀರರನ್ನು ಹುರಿಗೊಳಿಸುವುದು ಸಂಗೀತ. ಮಾನವನ ಬಾಳಿನ ಆದಿ ಯಿಂದ ಅಂತ್ಯದವರೆಗೆ ಸಂಗೀತ. ಜೀವನಕ್ಕೆ ಇಷ್ಟೊಂದು ಹೊಂದಿರುವುದ ರಿಂದ ದೇವತಾವಿದ್ಯವೆನಿಸಿತು ಸಂಗೀತ. ಶಾಸ್ತ್ರಗಳು ಸ್ವಾಮಿಯನ್ನು ಸಾಮ ಗಾನಪ್ರಿಯನೆಂದು ಹೊಗಳಿದವು. ಪುರಾಣಗಳು ಪರಮಪುರುಷನ ಸಭೆ ಯನ್ನು ಗಂಧರ್ವರ ಗಾನದಿಂದ ಅಪ್ಸರೆಯರ ನರ್ತನದಿಂದ ಕಳೆಗಟ್ಟಿಸಿದವು. ಯಾಜ್ಞವಲ್ಕ್ಯ ನಾರದ ತುಂಬುರರು ಸಂಗೀತದಿಂದ ಪರಮಾರ್ಥನೆಯಿದೆ ಎಂದರುಹಿದರು. ಆಚಾರ್ಯರುಗಳಲ್ಲಿ ಶುಕರು ಕೀರ್ತನಕ್ಕೆ ಆದ್ಯಪ್ರವರ್ತಕ ರಾದರು. ಆ ಪರಂಪರೆಯನ್ನು ಕರ್ಣಾಟಕದ ಹರಿದಾಸರು ಅನುಸರಿಸಿದರು. ಅವರಲ್ಲಿ ಪುರಂದರದಾಸರು ಅತ್ಯಂತ ಪ್ರಖ್ಯಾತರಾದರು. ಹುಟ್ಟಿದ ಮಕ್ಕಳ ಜೋಗುಳದಿಂದ ಕುಟ್ಟಿ ಬೀಸಿ ಹೊರುವ ಕಾಯಕಗಳಲ್ಲೆಲ್ಲಾ ಮನಸ್ಸಿನ ಹೊರೆಯನ್ನಿಳಿಸುವ ದೇವತಾ ಕಥೆಗಳುಳ್ಳ ಹಾಡುಗಳಿಂದ ನೀತಿಯನ್ನು ಬೋಧಿಸಿ ಜೀವನವನ್ನು ರಸಮಯವಾಗುವಂತೆ ಮಾಡಿದರು.

ಈ ಪೈಕಿ ಏಕಾಂಶ ಕಾರ್ಯ ಮಾಡಿದ್ದರೂ ಪಾಶ್ಚಾತ್ಯರು ನೂರಾಗಿ ಹೊಗಳಿ ಸಾವಿರವಾಗಿ ಪ್ರಚಾರ ಮಾಡಿ ಲಕ್ಷವಾಗಿ ಶೇಖರಿಸಿ ಸ್ಮಾರಕ ಮಂದಿರಗಳನ್ನು ಕಟ್ಟುತ್ತಾರೆ. ಅಧೀನ ಜನಾಂಗಗಳ ತನುಮನಗಳನ್ನು ವಿದ್ಯಾಭ್ಯಾಸದ ನೆಪದಿಂದ ತಮ್ಮದನ್ನಾಗಿ ಮಾಡಿಕೊಳ್ಳುತ್ತಾರೆ. ಅಧೀನರು -ಮ್ಮನ್ನು ತಾವು ಮರೆಯುತ್ತಾರೆ. ಅದರ ಪರಿಣಾಮವಾಗಿ ನಮ್ಮ ಕಾಲೇಜು

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳ ಹಳೆಯ ಹುಡುಗರೆನಿಸಿದ ಮುದುಕರಿಂದ ಇಂದಿನ ಹುಡುಗರ ತನಕ ಕೇಳಿದರೂ ಷೇಕ್ಸಪಿಯರನ ನೂರಾರು ನಾಟಕ ವಾಕ್ಯಗಳನ್ನು ಉದಹರಿಸುತ್ತಾರೆ. ಅವನಿಗೆ ಸಮಾನ ಕಾಳಿದಾಸನ ಹೆಸರೆತ್ತುವುದಿಲ್ಲ. ಅವನ ಒಂದು ಶ್ಲೋಕವನ್ನು ಕಲಿಯುವುದಿಲ್ಲ. ವ್ಯಾಸ ವಾಲ್ಮೀಕರ ಹೆಸರಿರಲಿ, ದಾಸರ ಹೆಸರೇ ಪಠ್ಯಪುಸ್ತಕದಲ್ಲಿ ಬರೆದಿರುವ ನಾಲ್ಕು ಪಙ್ಕ್ತಿಗಳಿಗಿಂತ ಹೆಚ್ಚಾಗಿ ಗೊತ್ತಾಗಿಲ್ಲ. ನಮ್ಮ ಗಾಯಕರನ್ನು ಕೇಳಿದರೆ 'ಲಂಬೋದರ' ಹೇಳುತ್ತಾರೆ. ಯಾರಿಗಾದರೂ ಸ್ವಾಭಿಮಾನ ಹುಟ್ಟುವ ಕಾಲವಿದು. ಸ್ವಾತಂತ್ರ್ಯ ಹೋರಾಟದ ಬಿಸಿ ಭಾರತಕ್ಕೆ ಬಹುವಾಗಿ ಬಡಿದಿದೆ. ಯುದ್ಧರಂಗವಾಗಿರದಿದ್ದರೂ ಅನ್ನವಸ್ತ್ರಗಳ ಯುದ್ಧರಂಗವಿದಾಗಿದೆ. ಲಂಡನ್ ಪಟ್ಟಣದ ಪುನರ್ರಚನೆಯು ಐವತ್ತು ವರ್ಷಗಳೊಳಗಾಗಬೇಕೆಂಬುದನ್ನು ಆಳರಸರು ಆಗಲೇ ಬರೆದಿಟ್ಟುಕೊಂಡಿದ್ದಾರೆ. ಆ ಶ್ರೀಮಂತಿಕೆ ನಮಗಿಲ್ಲ. ನಮ್ಮ ಸಂಸ್ಕೃತಿಯ ಪುನರ್ರಚನೆಯನ್ನಾದರೂ ನಾವು ಮಾಡಿಕೊಳ್ಳಬೇಕು. ಆಳರಸರ ಮಾತಿನಂತೆ ಭಾರತವು ಸ್ವತಂತ್ರ ರಾಷ್ಟ್ರವಾದರೆ ಭರಣವಿಲ್ಲದ ಬರಿಮನೆಯಲ್ಲಿ ಬಾಳುವೆ ಮಾಡಲು ಬರುವುದಿಲ್ಲ. ರಾಷ್ಟ್ರವೆಂದರೆ ಬರೀ ಕಲ್ಲುಮಣ್ಣುಗಳಲ್ಲ. ಸಂಗೀತ ಸಾಹಿತ್ಯ ಕಲೆ ತತ್ತ್ವಶಾಸ್ತ್ರ ಮೊದಲಾದವುಗಳಿಂದ ಜನಾಂಗವು ನಾಗರಿಕವಾಗಿದ್ದರೆ ಅದು ರಾಷ್ಟ್ರವೆನಿಸುತ್ತದೆ. ಅದು ಸ್ವತಂತ್ರವಾಗಿ ಬಾಳಲು ಸಮರ್ಥವಾಗುತ್ತದೆ. ಹಿಂದೂ ರಾಷ್ಟ್ರದ ಹಿಂದುಗಳು ಜಾಗೃತರಾಗಬೇಕು, ಸಂಘಟಿತರಾಗಬೇಕು. ಜಾತಿ ಮತ ಭಾಷೆಗಳ ಸಂಕುಚಿತ ಭಾವನೆ ಬಿಡಬೇಕು. ಸಂಸ್ಕೃತಿಗಾಗಿ ಸಂಸ್ಕೃತಿಯನ್ನು ಬೆಳೆಸಿ ಹಂಚಬೇಕು. ಪ್ರಭುತ್ವದವರು ಇದಕ್ಕೆ ಸಹಾಯ ಮಾಡಬೇಕು.

ಸಂಗೀತ ಸಾಹಿತ್ಯ ಮತಬೋಧನೆ ನೀತಿಬೋಧನೆ ಸಮಾಜರಚನೆಗಳ ವಿಷಯದಲ್ಲಿ ಹರಿದಾಸರು ಮಾಡಿದ ಸೇವೆ ಅಪಾರವಾದುದು. ಆ ಸಂಪತ್ತನ್ನು ಉಳಿಸಿಕೊಂಡು ಅಭಿವೃದ್ಧಿಗೊಳಿಸಿ ಕರ್ಣಾಟಕದ ಧ್ವಜವನ್ನು ಎತ್ತಿಹಿಡಿಯುವ ಭಾರ ಕನ್ನಡಿಗರದು. ಸಂಗೀತಕ್ಕೆ ಸಂಬಂಧಪಟ್ಟ ಅಧ್ಯಾಯವಿದು, ಆದುದರಿಂದ ಸಂಗೀತದ ಆಚಾರ್ಯಪುರುಷರು ಪುರಂದರದಾಸರಾದುದರಿಂದ ಅವರ ಸಂಗೀತವನ್ನು ವಿಮರ್ಶಿಸಿ ಗಾನಗೋಷ್ಠಿಗಳಲ್ಲಿ ವ್ಯಾಪಿಸುವಂತೆ ಮಾಡಿದರೆ ಅವರ ಸ್ಮಾರಕವಾಗುವುದೆಂದೂ, ಕನ್ನಡ ಜನತೆಗಾಗಿ ದಾಸರು ಮಾಡಿದ ತ್ಯಾಗವು ಸಾರ್ಥಕವಾಗುವುದೆಂದೂ ಸೂಚಿಸುವೆನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಧ್ಯಾಯ ಮೂರು

ಹರಿದಾಸರ ಜ್ಞಾನ, ಭಕ್ತಿ, ವೈರಾಗ್ಯಗಳು

ಭಗವದ್ಗೀತಾದಿ ಶಾಸ್ತ್ರಗಳಲ್ಲೂ ಸಂತರ ಗ್ರಂಥಗಳಲ್ಲೂ ಜ್ಞಾನ, ಭಕ್ತಿ, ವೈರಾಗ್ಯಗಳನ್ನು ಪ್ರತ್ಯೇಕ ಸಾಧನಮಾರ್ಗಗಳೆಂದು ಕರೆದಿರುವಂತೆ ಗೋಚರ ವಾಗುತ್ತದೆ. ಜ್ಞಾನಯೋಗ, ಭಕ್ತಿಯೋಗ ಎಂದು ಕರೆಯುವಂತೆ ವೈರಾಗ್ಯ ವನ್ನು ವೈರಾಗ್ಯಯೋಗವೆಂದು ಎಲ್ಲೂ ಕರೆದಿಲ್ಲ. ಜ್ಞಾನ, ಭಕ್ತಿಗಳಿಂದ ಪ್ರಾಪ್ತವಾಗುವುದು ವಿಷಯವೈರಾಗ್ಯವಾದುದರಿಂದ ಪ್ರತ್ಯೇಕವಾಗಿ ಅದನ್ನು ವೈರಾಗ್ಯಯೋಗವೆಂದು ಕರೆಯಬೇಕಾದುದಿಲ್ಲ. ಜ್ಞಾನ, ಭಕ್ತಿ, ವೈರಾಗ್ಯ ಗಳು ಒಂದನ್ನೊಂದು ಬಿಟ್ಟಿರುವುದಿಲ್ಲ. ಯಥಾರ್ಥ ಜ್ಞಾನವಾಗುತ್ತಲೇ ಜ್ಞೇಯ ವಸ್ತುವಿನಲ್ಲಿ ಭಕ್ತಿ ಸಹಜವಾಗಿ ಹುಟ್ಟುತ್ತದೆ. ಜ್ಞಾನಭಕ್ತಿಗಳಿಂದ ತನ್ಮಯನಾದರೆ ವಿಷಯವಾಸನೆ ತಾನಾಗಿ ಕಳಚಿ ವೈರಾಗ್ಯವುಂಟಾಗುತ್ತದೆ. ನಿತ್ಯವೂ ಸತ್ಯವೂ ಆದ ವಸ್ತುವಿನ ಯಥಾರ್ಥ ತಿಳಿವಳಿಕೆಗೆ ಜ್ಞಾನವೆಂದು ಹೆಸರು. ಭಗವಾನ್ ಶ್ರೀಕೃಷ್ಣನು—

ಯತ್ ಜ್ಞಾತ್ವಾ ನ ಪುನರ್ಮೋಹಂ ಏವಂ ಯಾಸ್ಯಸಿ ಪಾಂಡವ ।
ಸರ್ವಂ ಜ್ಞಾನಪ್ಲವೇನೈವ ವೃಜಿನಂ ಸಂತರಿಷ್ಯಸಿ ।
ಜ್ಞಾನಾಗ್ನಿಸ್ಸರ್ವಕರ್ಮಾಣಿ ಭಸ್ಮಸಾತ್ಕುರು ತೇಽರ್ಜುನ ।
ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ ।

ಎಂಬ ವಾಕ್ಯಗಳಿಂದ ಅರ್ಜುನನಿಗೆ ಜ್ಞಾನದ ದೊಡ್ಡಸ್ತಿಕೆಯನ್ನು ಉಪದೇಶಿ ಸಿರುತ್ತಾನೆ. ಭಕ್ತಿ ಶಬ್ದಕ್ಕೆ ಅನೇಕರು ಅನೇಕ ರೀತಿಯಿಂದ ವ್ಯಾಖ್ಯಾನ ಮಾಡಿರುತ್ತಾರೆ. ಭಾಗವತಧರ್ಮಿಗಳು—'ನಿರವಧಿಕ ಅನಂತ ಅನವದ್ಯ ಕಲ್ಯಾಣಗುಣತ್ವ ಜ್ಞಾನಪೂರ್ವಕಃ ಸ್ವಾತ್ಮೀಯ ಸಮಸ್ತವಸ್ತುಭ್ಯೋ ಅನೇಕಗುಣಾಧಿಕೋ ಅಂತರಾಯ ಸಹಸ್ರೇಣಾಪಿ ಅಪ್ರತಿಬದ್ಧೋ ನಿರಂತರ ಪ್ರೇಮಪ್ರವಾಹಃ' ಎಂಬದಾಗಿ ನಿರ್ವಚನ ಮಾಡಿರುತ್ತಾರೆ. ಅಂದರೆ— ನಿರವಧಿಕ, ಅನಂತ, ಅನವದ್ಯ, ಕಲ್ಯಾಣ ಗುಣಗಳಿಂದ ಕೂಡಿರುವವನು ಶ್ರೀಹರಿಯೆಂಬ ಜ್ಞಾನಪೂರ್ವಕವಾಗಿ, ಸಹಸ್ರ ವಿಘ್ನಗಳು ಬಂದರೂ ತನ್ನಲ್ಲಿ

Sri Vidyabharathi Book Centre, Sringeri

 CC-O. In Public Domain. Digitized by eGangotri

ತನ್ನವರಲ್ಲಿ, ಸಮಸ್ತ ವಸ್ತುಗಳಲ್ಲಿ, ಅನೇಕ ಗುಣಾಧಿಕವಾಗಿ ತಡೆಯಿಲ್ಲದೆ ನಿರಂತರ ಮಾಡುವ ಪ್ರೇಮಪ್ರವಾಹವೆಂದು ಭಕ್ತಿ ಶಬ್ದಕ್ಕೆ ಅರ್ಥವಾಗುತ್ತದೆ.

ವೈರಾಗ್ಯವೆಂದರೆ ತನ್ನ ಯೋಗ್ಯತೆಗೆ ಯಾವುದು ಯೋಗ್ಯವೋ ಅದನ್ನು ತನ್ನ ದೇಹರಕ್ಷಣೆಗಾಗಿ ಇಂದ್ರಿಯಗಳ ದ್ವಾರಾ ಸ್ವೀಕರಿಸಿ, ಇತರ ವಿಷಯಗಳಲ್ಲಿ ಅಪೇಕ್ಷೆಯನ್ನು ಬಿಡುವುದು ಎಂದರ್ಥವಾಗುತ್ತದೆ. ಈ ಮೂರೂ ಒಂದಾಗುತ್ತಲೊಂದು ತನ್ನಿಂದ ತಾನೇ ಹೊಂದಿಕೊಂಡು ಹರಿದಾಸರು ಒಂದೊಂದು ಸ್ಥಳದಲ್ಲೂ ವಿಸ್ತರಿಸಿ ಭಾಷೆಯಲ್ಲಿ ಹೊಂದಿಸಿ ಸಮಾಜಕ್ಕೆ ಉಪದೇಶಿಸಿರುತ್ತಾರೆ.

ವಿಜಯದಾಸರು 'ಗುರೋಸ್ತು ಮೌನಂ ವ್ಯಾಖ್ಯಾನಂ' ಎಂಬ ಮಾತನ್ನು ಮನಸ್ಸಿನಲ್ಲಿಟ್ಟುಕೊಂಡೋ ಎಂಬಂತೆ 'ಜ್ಞಾನಸುಳಾದಿ'ಯಲ್ಲಿ ಜ್ಞಾನಿ ಹೇಗಿರಬೇಕೆಂಬುದನ್ನು ತಿಳಿಸಿರುತ್ತಾರೆ.

ಜ್ಞಾನಸುಳಾದಿ

ಧ್ರುವ ತಾಳ

ಜ್ಞಾನವೆಂಬುವದಿದೆ | ಕೇವಲಾಧಿಕಾರಿಗೆ | ಮೌನದಲ್ಲಿಪ್ಪುದೆ ಮುಖ್ಯವಯ್ಯ
ಕಾನನ ಪಟ್ಟಣ | ಸಮನಾಗಿ ತಿಳಿದು | ಅಜ್ಞಾನಿಯಂತಿರಬೇಕು ನೋಳ್ಪರಿಗೆ
ಏನೇನು ಆದರಿಂದ | ಮಾತು ವೆಗ್ಗಳಿಸಲು| ಸ್ಥಾಣೂಪಾದಿಯಲ್ಲಿ |
ತೋರಬೇಕು
ಕಾಣಿಸಿಕೊಳ್ಳದೆ | ಇರಬೇಕು ಕಂಡರು | ನಾನಲ್ಲವೆಂದೂ | ಜಗದಿ ಹರಿಯ
ಧ್ಯಾನಮಾಡಬೇಕು| ಅಡಿಗಡಿ ಮರೆಯದೆ| ಪ್ರಾಣೇಂದ್ರಿಯಗಳಲ್ಲಿ| ನಿತ್ಯದಲಿ
ಏನೇನು ಮಾಡುವ | ವ್ಯಾಪಾರ ಧರ್ಮಗಳ | ವಾಣಿಯರಸ ಮಿಕ್ಕ | ಸುರರು
ಮಾಳ್ಪರೆಂದು
ಹಾನಿವೃದ್ಧಿಗಳಿಗೆ | ಕರ್ತೃ ನಾನಲ್ಲನೆಂದು | ಜಾಣನಾಗಿ ತಾ | ತಿರುಗುತ
ಲಿಪ್ಪುದು
ಈ ನೀತಿಯನ್ನೆ ತಿಳಿದು | ತಿಳಿಸಿಕೊಟ್ಟದರಿಂದ | ನಾನೆಂಬ ಸೊಲ್ಲು
ಹರಿಯಿತ್ತುದೆಂದು
ಜ್ಞಾನಿಯಾದವ ಇನಿತು | ಇರಬೇಕು ಇದ್ದರೆ | ಹಾನಿಯೆಂಬೋದಿಲ್ಲ
ಗಣಿಸಿದರು
ಆನಂದದಿಂದಲಿ ಸರ್ವಕಾಲದಲಿ ಮ | ಧ್ಯಾನೆಯಂದದಿ ನೀ ತಿರುಗುತಿರು

Sri Vidyabharathi Book Centre, Sringeri

CC-0, In Public Domain. Digitized by eGangotri

ಮಾನವರೊಳು ಮೆ | ಲ್ಲನೆ ಜುಣುಗಾಡುತ್ತ | ಕೇಣಿ ಸಂತೋಷವನು | ಬೇಡಿಕೊಳದೆ
ಕಾಣಿ ಮೊದಲಾದ ಲಾಭ | ಬಯಸದೆ ನಿತ್ಯದಲಿ | ಏನು ದೊರಕಿದರು | ಭುಂಜಿಸುತ
ರಾಣಿ ಮಿಕ್ಕಾದವರು | ಹರಿಯ ಸೇವಕರೆಂದು | ಮಾನಸ ಕಾಯ ವಾಚ | ದಲ್ಲಿ ತಿಳಿದು
ಜ್ಞಾನಪರಿಪೂರ್ಣ | ವಿಜಯವಿಠಲನಂಘ್ರಿ | ರೇಣು ಕೊಂಡಾಡು | ಭಕತರೊಳೋಲಾಡು || ೧ ||

ತಾಳ ಮಟ್ಟ

ಭೂತ ಪ್ರಾಣಿಗಳೆಲ್ಲ | ಹರಿಯ ಪ್ರತಿಮೆಯೆಂದು | ಮಾತುಮಾತಿಗೆ ತಾನು | ಮರೆಯದೆ ಸ್ಮರಿಸುತ
ಈ ತೆರದಲ್ಲಿ ಸಾಂಖ್ಯ | ಶಾಸ್ತ್ರವ ನಿಶ್ಚೈಸಿ | ಶೀತೋಷ್ಣ ಸಮವೆಂದು | ಸಂತತದಲಿ ತಿಳಿದು
ಖ್ಯಾತಿಯಾಗದೆ ಜಗಕೆ | ಪೇಳದೆ ಗುಪ್ತದಲಿ | ಗಾತುರ ಮಲಿನನಂತೆ | ಸಂಚರಿಸುತಲಿದ್ದು
ಶ್ರೀತರುಣೀ ಸರ್ವ ಜೀವರಾಶಿಗಳ | ಖ್ಯಾತನಾದ ಹರಿಯ ಅಧೀನವೆಂದು
ಆತುಮದಿಂದಲಿ ಅತಿಶಯುವನೆ ತಿಳಿದು | ಮಾತುಮಾತಿಗೆ ಅನುಭವಕೆ ತರಲಿಬೇಕು
ಸೀತಾಂಶುವದನ ವಿಜಯವಿಠಲನ | ದೂತರ ಸಂಗಡ ಓಡಾಡಲಿಬೇಕು ||೨||

ತ್ರಿಪುಟ ತಾಳ

ನಿಂದಲ್ಲಿ ಕುಳಿತಲ್ಲಿ ನೆರೆಮಾತನಾಡುವಲ್ಲಿ | ಬಂದು ಪೋಗುವಲ್ಲಿ ತಿರುಗುವಲ್ಲಿ
ನಿಂದೆ ಬರೂವಲ್ಲಿ ನಿಶ್ಚಿಂತನಾದಲ್ಲಿ | ವಂದನೆ ಬರುವಲ್ಲಿ ವಾಕ್ಯದಲ್ಲಿ
ಮಂದಿ ನೆರೆದಲ್ಲಿ ಮಂದರದಲ್ಲಿದ್ದಲ್ಲಿ | ಮಂದಿರದಲಿ ಕೆಲಸ ಮಾಡುವಲ್ಲಿ
ತಂದು ಕೊಡುವರಲ್ಲಿ ತೆಗೆದುಕೊಂಬುವರಲ್ಲಿ | ಬಂಧನದಲ್ಲಿ ಮಹಾಭಾಗ್ಯದಲ್ಲಿ
ಮಂದಹಾಸದಲ್ಲಿ ಮೇಳವಾಡುವಲ್ಲಿ | ದುಂದುಭಿವಾದ್ಯಗಳ ಕೇಳುವಲ್ಲಿ
ಕಂದೆರೆದು ನೋಡುವಲ್ಲಿ ಕವಳ ಮೆಲುವಲ್ಲಿ | ಗಂಧ ಕೊಂಬುವಲ್ಲಿ ತಕ್ಕೈಸಲ್ಲಿ
ಮುಂದೆ ಪಿಡಿವಲ್ಲಿ ಗುಹ್ಯಕರ್ಮದಲ್ಲಿ | ಒಂದೊಂದು ಬಗೆ ವ್ಯಾಪಾರದಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಪೊಂದಿಕೊಂಡಿಪ್ಪರಲ್ಲಿ ದೂರ ಬಿಟ್ಟವರಲ್ಲಿ । ಹಿಂದೆ ಆಡುವರಲ್ಲಿ ಹಿತವರಲ್ಲಿ
ಸಂದೇಹವಿಡಿಯದೆ ವಿಜಯವಿಠಲನ । ಎಂದೆಂದು ನೆನೆಸು ಒಂದೆ ಮನದಲ್ಲಿ ॥೩॥

ತಾಳ ಅಟ್ಟ

ಪಶು ವಾಜಿ ಗಜ ಮತ್ತೆ ಶಿಶುವು ಮಡದಿ ಮಗ । ಸೊಸೆ ಬಂಧುಬಳಗ ರಾಜಿಸುವ ನಾನಾ
ಕುಶಲ ಮನುಜ ಮಿತ್ರ ಪರಿವಾರ ಮೊದಲಾದ । ವಶರಾದ ಮಾನಿಸ ಮಿಕ್ಕ ಜೀವ
ಪ್ರಸರಗಳಿಗೆ ನಿತ್ಯ ರಸರಸ ಉಣಿಸುತ । ವಸನ ಭೂಷಣ ದಿವ್ಯ ಕುಸುಮ ತರುವಾಯ
ಎಸೆವ ಧಾನ್ಯಗಳ ಹಸನಾದ ತೃಣ ಸರ್ವ । ವಸುಧಿಯೊಳಗಿದ್ದ ದಶ ದಿಕ್ಕಿನೊಳಗುಳ್ಳ
ಪೆಸರಾದ ದ್ರವ್ಯವ ನಸುನಗುತ ಶಿರಿ । ಬಿಸಜನಾಭಗೆ ಅರ್ಪಿಸಿ ಜೀವಗಣಕೆಲ್ಲ
ಬೆಸನ ಕೊಡುತ ಪಾಲಿಸಬೇಕು । ಲೋಕವ । ಬಸುರೊಳಗಿಟ್ಟ ವಿಜಯ ವಿಠಲನ
ಅಸಮದೈವವೆಂದು ನಿಶಿದಿನ ನೆನೆಯಬೇಕು ॥ ೪ ॥

ತಾಳ ಆದಿ

ಭಜನೆ ಮಾಡು ಮನವೆ ಒಂದೆ ಜ್ಞಾನದಲಿ । ಗಜತುರಗ ಮೊದಲಾದ ನಾನಾ ಠಾವಿನಲ್ಲಿ
ಅಜದೇವರಾರಭ್ಯ ಮುಕ್ತಾಮುಕ್ತರಲ್ಲಿ । ನಿಜವಾಗಿ ಮಾಡುವ ಹರಿಯ ವ್ಯಾಪಾರವನ್ನು
ರುಜುವಾಗಿ ಹಿಗ್ಗು ದುರಿತವ್ರಜವನೊದೆದು । ನಿಜಸುಖವನಧಿಯೊಳೋಲಾಡು ನಿತ್ಯ
ತ್ರಿಜಗಮಧ್ಯದೊಳು ಯಾವಜ್ಜೀವ । ತನಕ ರುಜುವಾದ ಮಾರ್ಗವಾವದಾದರು ಗ್ರಹಿಸು
ಸುಜನವಂದಿತ ನಮ್ಮ ವಿಜಯವಿಠಲನ । ಭುಜಬಲದಿಂದ ಭವದೂರನಾಗು ॥ ೫ ॥

Sri Vidyabharathi Book Centre, Sringeri

CC-0. In Public Domain. Digitized by eGangotri

ಜತೆ

ನೀಚಾಧಿಷ್ಠಾನದಲ್ಲಿ ಹರಿಯ ಪೂಜಿಸದಿರು | ಯೋಚಿಸು ವಿಜಯವಿಠಲನ
ಸ್ತೋತ್ರಮರಲ್ಲಿ ||೧||

ಯಾವ ಮತದಲ್ಲಾದಲಿ ಜ್ಞಾನಿಯಿರಬೇಕಾದ ಕ್ರಮವನ್ನು ಇದಕ್ಕಿಂತ ಬೇರೆಯಾಗಿ ಹೇಳಿಲ್ಲ. ಶಿವನ ಜ್ಞಾನವಾದರೇನು? ಕೇಶವನ ಜ್ಞಾನವಾದರೇನು? ಶಿವನೆಂಬ ಜಾಗದಲ್ಲಿ ಕೇಶವನೆಂದಾರಾಯಿತು, ಕೇಶವನೆಂಬ ಜಾಗದಲ್ಲಿ ಶಿವನೆಂದರಾಯಿತು. ಸರ್ವಶಬ್ದವಾಚ್ಯನು ಒಬ್ಬನೇಯಾದುದರಿಂದ ಬಾಧೆ ಬರುವುದಿಲ್ಲ. ದಾಸೋಽಹಂ ಎನ್ನುವವನು ಸೋಽಹಂ ಎಂದರೂ ಜ್ಞಾನಿಗೆ ಇದಕ್ಕಿಂತ ಬೇರೆ ಉಪದೇಶವಿರುವುದಿಲ್ಲ, ನಡತೆಯಿರುವುದಿಲ್ಲ. ಜ್ಞಾನ ಸುಳಾದಿಯಿದ್ದಂತೆ ಭಕ್ತಿಯ ಮೇಲೂ ಸುಳಾದಿಯಿರುವುದರಿಂದ ಅದನ್ನು ಕೆಳಗೆ ಉದಹರಿಸಿದೆ.

ಭಕ್ತಿ ಸುಳಾದಿ

ಧ್ರುವ ತಾಳ

ಹರಿದಾಸರೊಡನಾಡು | ಹರಿಯಂಘ್ರಿಯುಗ್ಮ ನೋಡು | ಹರಿಯೆಂದು
ಕೊಂಡಾಡು | ಹರಿನಾಮ ಪಾಡು
ಹರಿಪ್ರಸಾದವ ಬೇಡು | ಹರಿಸೇವೆಯನ್ನೆ ಮಾಡು | ಹರಿಗೆ ಕರವ ನೀಡು |
ಹರಿಯ ಬಿಡದೆ ಕಾಡು
ಹರಿಯೆಂದು ನಲಿದಾಡು | ಹರಿಗೊಪ್ಪಿಸಿ ಬಿಡು | ಹರಿದ್ವೇಷಿಗಳ ಬಿಡು |
ಹರಿಧ್ಯಾನದಲ್ಲಿ ಕೂಡು
ಹರಿಕರುಣದ ಜೋಡು | ಹರಿಯುದಂತೆ ತೊಡು | ಹರಿನಗರಿಗೆ ಓಡು |
ಹರಿಯಲ್ಲಿ ರತಿಯಿಡು
ಹರಿಗೆ ಇಲ್ಲವೊ ಈಡು | ಹರಿ ವಿಜಯವಿಠಲ | ಹರಿಹರಿಯೆಂದರೆ | ಹರುಷ
ಬಡುವದು ನಾಡು ||೧||

ಮಟ್ಟ ತಾಳ

ಹರಿಭಕುತಿ ಜ್ಞಾನ ಹಿರಿದು ಬಲ್ಲವರೊಡನೆ| ಹರಿಭಕುತರೆಲ್ಲ ಹರಿಹರಿದಾಡಿರೊ
ಸರಿವದನ ನಮ್ಮ ವಿಜಯವಿಠಲನ| ಪರಿಪರಿ ನೆನೆದವಗೆ ನರಕ ಪರೀಹಾರ
||೨||

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ರಿಪುಟ ತಾಳ

ಹರಿಯ ನಂಬಿರೊ ಜನರು ವರಜ್ಞಾನಪರರಾಗಿ । ಹರಿದು ಪೋಗುವದು
ಪಾಪದ ಗೂಡು
ಹರಿಪವನರ ಮತ ಒಂದೆಂದು ತಿಳಿಯಿರೋ । ಹರಿಯು ಇದ್ದಲ್ಲಿ
ಪವನನಿಪ್ಪನಲ್ಲಿ
ಹರಿಯ ಭಜಿಸಿ ಜಗತ್ಪ್ರಾಣನ ತೊರೆದರೆ । ಹರಿಪುರವಾಗದು ಶತಕಲ್ಪಕ್ಕೂ
ಹರಿಶ್ರವಣ ಬಳಿವಿಡಿದು ಪರಮಭಕುತಿಯಲ್ಲಿ । ಹರಿಕಥೆಗಳ ಕೇಳು ನಿರುತದಲಿ
ಹರಿವಂದಿತ ನಮ್ಮ ವಿಜಯವಿಠಲರೇಯ । ಹರಿಯೆಂದು ನುಡಿದರೆ ಹರಿದು
ಬಪ್ಪನು ಕಣೊ ॥ ೩ ॥

ಅಟ್ಟ ತಾಳ

ಹರಿಭಕುತಿ ಕಂಡಕಂಡವರಿಗೆ ದೊರಕದು । ಹರಿದು ಬಿದ್ದರಿಲ್ಲ
ಪರ್ವತಾಗ್ರದಿಂದ
ಹೊರಳಾಡಿದರಿಲ್ಲ ಸುತ್ತು ವಳಯದೊಳು । ಹರಿದು ಮುಳುಗಿ ಪೋಗಿ
ಎದ್ದು ಬಂದರಿಲ್ಲ
ಹರಿಭಕುತೀ ಕೋಟಿಜನ್ಮಪುಣ್ಯದಿಂದ । ಬರುವದಲ್ಲದೆ ಅನ್ಯಥ ವಾಕು ಸಲ್ಲ
ಹರಿಣಾಂಕ ಕುಲಪಾಲ ವಿಜಯವಿಠಲರೇಯ । ವರಿಸಿ ಬಂದರೆ ಸುಲಭ
ಬರಿಮಾತಿಗೆ ದೂರ ॥ ೪ ॥

ಆದಿ ತಾಳ

ಹರಿ ಪರಮಪುರುಷ । ಹರಿ ಪರದೇವತೆ । ಹರಿ ನಾಶರಹಿತ । ಹರಿ
ಅಚಿಂತ್ಯಾದ್ಭುತ
ಹರಿ ಅಪ್ರಾಕೃತ ಕಾಯ । ಹರಿ ಪ್ರಳಯಾದಿರಹಿತ । ಹರಿ ಮುಕ್ತಾಶ್ರಯ ।
ಹರಿ ಸರ್ವಾಂತರಿಯಾಮಿ
ಹರಿ ಜೀವ ಜಡಭೇದ । ಹರಿ ಅಣುಮಹದ್ರೂಪ । ಹರಿ ಜಗತ್ಕಾರಣ ।
ಹರಿ ರಮೆಯೊಳ ಪ್ರಿಯ
ಹರಿ ವೈಕುಂಠರಮಣ । ಹರಿ ವಿಜಯವಿಠಲ । ಹರಿ ಕೊಡುವನು ಭಕ್ತಿ ।
ಕೈಕೊಂಡ ಮನುಜಗೆ ॥ ೫ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಜತೆ

ಭಕುತಿಗೆ ಕೇಡಿಲ್ಲ ಅನಂತ ಕಲ್ಪಕ್ಕ | ಭಕುತಿಯ ಪಡೆಯಿರೋ
ವಿಜಯವಿಠಲನಲ್ಲಿ ॥ ೧ ॥

ಸುಳಾದಿಯಂತೆ ಒಂದು ದೇವರನಾಮದ ಮಾದರಿ

ಪೂರ್ವಿ – ಛಾಪು

ಇದೀಗ ಭಕುತಿಯೋ ಮು | ಕ್ತಿದೀಗ ಮುಕುತಿಯೊ ॥ ಪ ॥

ಮಧುದ್ವಿಷನ್ನ ಪಾದಕಮಲಕೆ | ಮಧುಪನಂತೆ ಎರಗುತಿಪ್ಪವ ॥ ಅ.ಪ. ॥

ಡಂಭವ ಸಾರುವರತ್ತತ್ತ ಜರಿದು | ಕುಂಭಕ ಪೂರಕ ರೇಚಕ ಪಿಡಿದು
ಅಂಬುಧಿಶಯನ ಪದಾಂಬುಜ ವೀಕ್ಷಿಸಿ | ಬಿಂಬವ ಕಾಂಬುವ
ಹಂಬಲ ಪಿಡಿವದಿದೀಗ ॥ ೧ ॥

ಕಂಡರ ಕಾಲಿಗೆ ಕುಮನುಜರಿಗೆ | ಮಂಡೆಯ ಬಾಗದೆ ಪರೇಶ ಕೊಟ್ಟಷ್ಟು
ಉಂಡು ಸುಜನರ
ಕಂಡು ಸುಖಿಸುತ ಪಾಷಂಡ ಸಂಭಾಷಣೆ ಸೋಕದೆ ಇಪ್ಪವ ॥ ೨ ॥

ಸದ್ಭಕ್ತಿ ಸದ್ಧರ್ಮ ಮಾಡುತ್ತ ನೋಡುತ್ತ | ಸದ್ಗೋಷ್ಠಿ ಸಚ್ಛಾಸ್ತ್ರ ಹೇಳುತ್ತ
ಕೇಳುತ್ತ |
ದುಗ್ಧಸಮುದ್ರೇಶ ವಿಜಯವಿಠಲಗೆ | ಇದ್ದದ್ದೆ ಸಂಪತ್ತು ತಪ್ಪದೆ ಒಪ್ಪಿಪ
॥ ೩ ॥

ಜ್ಞಾನಭಕ್ತಿಗಳಿಗಿರುವಂತೆ ವೈರಾಗ್ಯಕ್ಕೆ ಒಂದು ಸುಳಾದಿಯ ಮಾದರಿ

ಧ್ರುವ ತಾಳ

ವೈರಾಗ್ಯ ಮಾರ್ಗ ಕೇಳು ದಾರಿದ್ರ್ಯ ಮಾರ್ಗ ಕೀಳು | ಮಾರಮಣನ ಪದ
ಆರಾಧಿಸುವದಕೆ
ನಾರಿಯು ಧರಣಿಯು ಧನವ ಬಿಟ್ಟರಾಯಿತೆ | ವೈರಾಗ್ಯವಲ್ಲ ಕಂಡ್ಯ ಧೀರರಿಗೆ
ಶರೀರಕ್ಕಪಾರ ಭಸ್ಮ ಧರಿಸಿಕೊಂಡು | ಚೀರವಸ್ತ್ರವನ್ನುಟ್ಟು ತಿರುಗಿದರೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾರಾದರೂ ಅವನ ಅವಧೂತನೆಂಬರೆ | ಸಾರಿಸಾರಿಗೆ ಇನ್ನು ಪೇಳಿರಯ್ಯಾ
ವೈರಾಗ್ಯವೆಂಬಂಥ ವಾರುತಿಯೊಂದಲ್ಲದೆ | ಶ್ರೀರಮಣಗೆ ಇದು ಪ್ರೀಯವಲ್ಲ
ನಾರಿ ಸುತರುಗಳು ಶರೀರಬಂಧುಗಳೆಂ | ದರಿತಿರಬೇಕು ಅನುದಿನವು
ನೀರಿನೊಳಗೆ ಇನ್ನು ಕಮಲವು ಇದ್ದಂತೆ | ಕಾರಣನಾಗಿ ಕಾರ್ಯವಿಲ್ಲದಿರಬೇಕು
ಮಾರರಮಣ ನಮ್ಮ ಗೋಪಾಲವಿಠಲನು | ತೋರಿ ಕೊಟ್ಟ ವೈರಾಗ್ಯ
ಸಾರುವೆನು ||೧||

ಮಟ್ಟ ತಾಳ

ಸ್ವಯೋಗ್ಯತೆಯೊಳಗೆ | ಆಯತವಾದದ್ದೇ | ನೋಯದೆ ಉಣುವೋದೇ |
ನ್ಯಾಯದ ವೈರಾಗ್ಯ
ಆಯಾಸವ ಪಡದೆ | ಪರರ ಶ್ರೇಯಸು ನೋಡಿ | ಶ್ರೀಯರಸನಿತ್ತ
ನೆಂಬದೆ ವೈರಾಗ್ಯ
ಪ್ರೀಯದಿ ನೀನಿತ್ತ | ಕರ್ತೃತ್ವವು ಎನಗೆ | ನೀ ಇಲ್ಲದೆ ಎನ್ನಿಂದಾಗದು
ಎನುತಲಿ
ನೋಯದೆ ಇಪ್ಪುದೇ | ನ್ಯಾಯದ ವೈರಾಗ್ಯ | ಮಾಯಾರಮಣ ನಮ್ಮ
ಗೋಪಾಲವಿಠಲನ ಪ್ರೀಯದಿ ನೆಚ್ಚಿ | ಅನ್ಯಕ್ಕೆರಗದಿಪ್ಪುದೆ ವೈರಾಗ್ಯ ||೨||

ತ್ರಿಪುಟ ತಾಳ

ಧನವ ಪರಿತ್ಯಾಗ ಮಾಡಿದರಾಯಿತೆ | ಘನವಾದ ವೈರಾಗ್ಯವಲ್ಲ ನೋಡೀ
ಧನವ ಬಿಟ್ಟರವೇ ದನಗಳು ಅನುದಿನ | ಘನವೇನು ಇವಕೆ ಅವಕ್ಕೆ ನೋಡೀ
ಮನೆಯ ಬಿಟ್ಟೇಕಾಂತದಲಿ ಕುಳಿತರಾಯಿತೆ | ಘನವಾದ ವೈರಾಗ್ಯವಲ್ಲ
ನೋಡೀ
ಮನೆಯ ಬಿಟ್ಟರವೇ ಅನುದಿನ ಗೂಗಿಗಳು | ಘನವೆಂದು ಕರೆವರೆ ಜ್ಞಾನಿಗಳು
ತನುಮನದಭಿಮಾನವನು ಬಿಟ್ಟರಾಯಿತೆ | ಘನವಾದ ವೈರಾಗ್ಯವಲ್ಲ ನೋಡಿ
ತನುಮನದಭಿಮಾನವನು ಬಿಟ್ಟು ಕುನ್ನಿ ತಾ | ಮನೆಮನೆ ತಿರುಗದೆ
ಅನುಗಾಲವು
ಘನಮಹಿಮ ಚೆಲ್ವ ಗೋಪಾಲವಿಠಲನ | ನೆನೆದು ಏಕಾಂತದಲ್ಲಿ
ನಿರ್ಮಲಮನನಾಗೊ ||೩||

Sri Vidyabharathi Book Centre, Sringeri

CC-0. In Public Domain. Digitized by eGangotri

ಅಟ್ಟ ತಾಳ

ಆಗ ಭೋಗಂಗಳು ಆಗದೆ ಇರಲ್ಯಾಕೆ | ಯಾಗಂಗಳ ಮಾಡಿ ಅರ್ಪಿಸಿ
ಹರಿಗೆ | ಸಮ
ಭಾಗವೆರಡು ಹರಿಯಿಂದಾದದ್ದು ಎಂದು | ಭೋಗಿಸುತಿಪ್ಪುದೆ ವೈರಾಗ್ಯ |
ವೈರಾಗ್ಯ
ಕಾಗೆಯಂತೆ ಮಯ್ಯ ಕಠ್ರುಗೆ ಮಾಡಿನ್ನು | ರೋಗ ಬಂದ್ಯವ್ಯಂತೆ ನಾಮವ |
ಬರಕೊಂಡು
ಭೋಗದ ವಸ್ತು ಪರಿತ್ಯಾಗ ಮಾಡಿನ್ನು | ಆಗುಪ ಕಾರ್ಯಗಳಾಗುತ್ತಲಿರೆ | ಅಂತೆ
ಹ್ಯಾಗೆ ಜನರು ಕಾಂಬ ಹಾಗೇವೆ ಬಾಹಿರ ವೈ | ರಾಗ್ಯವನು ಮಾಡೆ |
ವೈರಾಗ್ಯವಲ್ಲವೋ
ನಾಗಶಯನ ಗೋಪಾಲವಿಠಲ ಸಮ್ಮ | ತಾಗಿ ಉಣಿಸಿದ್ದು ಉಂಡಿಹುದೆ |
ವೈರಾಗ್ಯ ॥ ೪ ॥

ಆದಿ ತಾಳ

ಧನವ ಕಟ್ಟಿದ ಚೀಲ | ಧಾನ್ಯ ತುಂಬಿದ ಗೋಣಿ | ಪುನುಗು ಬೆಕ್ಕಿನಂತೆ |
ಪುಣ್ಯಾತ್ಮರಘದಂತೆ
ಒಣಗಿದ್ದ ಗೋಡೆಗೆ ಹರಳು ಮಿಾಟಿದಂತೆ | ಉಣುವ ಜಿಹ್ವೆಗೆ ಕೈ |
ಅನುಕೂಲವಾದಂತೆ
ಮನಸಿಗೆ ಹರುಷವ ಮಾಧವ ಮಾಡಿದ್ದು | ತನುವಿಗೆ ಸುಖವೆಂದು | ತಿಳಿದು
ಕೆಡದಲೆ
ಗುಣಿಸುತ ಅಲ್ಲಲ್ಲಿ | ಗುಣ ತಿಳಿದು ಹರಿಯ | ನೆನೆದು ನೆನೆದು ದಿನ |
ಗಳೆವುದೆ ವೈರಾಗ್ಯ
ಮುನಿನುತ ಸಿರಿಗೋಪಾಲವಿಠಲನು | ಇನಿತೀಪರಿಯಾಗಿದ್ದರೆ ಪೊರೆವ ॥ ೫ ॥

ಜತೆ

ಅರಿಯದ ವೈರಾಗ್ಯ ಹರಹಿಕೊಂಬುದಕಿಂತ | ಅರಿತು ಮೊರೆಯುಹೊಗಿರೋ
ಗೋಪಾಲವಿಠಲನ ॥ ೧ ॥

Sri Vidyabharathi Book Centre, Sringeri

 CC-O. In Public Domain. Digitized by eGangotri

ಉಗಾಭೋಗಗಳು

ಗಾನದಿಂದ ಧರ್ಮ, ನೀತಿ, ಮತ ಮತ್ತು ಲೋಕಾನುಭವಗಳನ್ನು ಉಪದೇಶ ಮಾಡುವುದು ಹರಿದಾಸರು ಕೈಕೊಂಡ ಮಾರ್ಗವಾದುದರಿಂದ ಸುಭಾಷಿತಗಳಂತೆ ಅಗಣಿತ ಉಗಾಭೋಗಗಳನ್ನು ಒಬ್ಬೊಬ್ಬ ದಾಸರೂ ರಚಿಸಿರುತ್ತಾರೆ. ಸಹಸ್ರಾವಧಿ ಇರಬೇಕಾದ ಅಂತಹ ಸುಭಾಷಿತಗಳಲ್ಲಿ ಈಗ ಐನೂರಕ್ಕಿಂತ ಹೆಚ್ಚಾಗಿ ದೊರೆಯುವುದಿಲ್ಲ. ಸಂಪ್ರದಾಯಸ್ಥರಿಂದ ತಿಳಿದು ಬರೆದುಕೊಳ್ಳದ ದೋಷ, ಹೇಳುವವರು ತಮ್ಮ ಧಾಟಿಗೆ ಹೊಂದಿಸಿಕೊಳ್ಳಲು ಮಾಡಿಕೊಂಡ ವ್ಯತ್ಯಾಸ, ಸಂಕುಚಿತಮನಸ್ಕರು ತಾವು ಮಾಡಿದ್ದೆಂದರೆ ಜನಾನುರಾಗ ಬರಲಾರದೆಂದು ದೊಡ್ಡವರ ಮುದ್ರಿಕೆಗಳನ್ನು ದುರುಪಯೋಗ ಮಾಡಿಕೊಂಡು ಬಿಸಿಬಿಸಿ ಮಾತುಗಳನ್ನು ಬರೆದ ದೋಷಗಳಿಂದೆಲ್ಲಾ ದಾಸ ಸಾಹಿತ್ಯವು ಕಲುಷವಾಗುತ್ತಿರುವುದನ್ನು ನೋಡಿ ವಿಷಾದವಾಗುತ್ತಿದೆ. ಇಷ್ಟೆಲ್ಲಾ ಕಳೆದುಳಿದು ಶುದ್ಧವಾಗಿರುವ ಉಗಾಭೋಗಗಳಲ್ಲಿ ಪಂಚಧಾತುಕ ಉಗಾಭೋಗಗಳು ಕೆಲವು ಮಾತ್ರ ಇದ್ದಂತೆ ಇವೆ. ಕೆಳಗೆ ಮಾದರಿಗಾಗಿ ಕೊಟ್ಟಿರುವ ಉಗಾಭೋಗಗಳಲ್ಲಿ ಹೆಚ್ಚು ಸಂಖ್ಯೆಯವು ಕೇವಲ ದ್ವಿಧಾತುಕಗಳಾಗಿವೆ. ಹಾಡುವ ಸಂಪ್ರದಾಯ ಮರೆತಿರುವುದರಿಂದ ಅವುಗಳನ್ನು ಅಟ್ಟತಾಳ ಗತಿಯಿಂದಾಗಲಿ ಏಕತಾಳ ಗತಿಯಿಂದಾಗಲಿ ಯಾವ ರಾಗದ ಕಳೆಯಲ್ಲಾದರೂ ಹಾಡಬಹುದು. ಹಿಂದಿನ ಅಧ್ಯಾಯದಲ್ಲಿ ಕೊಟ್ಟಿರುವ ಎರಡು ಮಾದರಿಗಳನ್ನು ನೋಡಿ ರಾಗದ ಜೀವಸ್ವರಗಳನ್ನರಿತು ಉದ್ಗ್ರಾಹ ಆಭೋಗ ಕ್ರಮದಂತೆ ವಿನ್ಯಾಸ ಮಾಡಬಹುದು.

ಅಚಲಾನಂದರ ಉಗಾಭೋಗಗಳು

ಪಾತಕರೊಳಗೆಲ್ಲ ನಾನೆ ವೆಗ್ಗಳನಯ್ಯ
ಪ್ರಾಯಶ್ಚಿತ್ತಕೆ ನಿನ್ನ ನಾಮವೆ ಘನವಯ್ಯ
ಪಾತಕವನು ನಾನು ಮಾಡಿದ್ದು ಏನು
ಪಾತಕ ಪಾವನ ಎರಡು ನಿನ್ನಾಧೀನ
ಪಾತಕವೆನಗಿಲ್ಲ ಪ್ರಾಯಶ್ಚಿತ್ತವೆನಗಿಲ್ಲ
ಕೇಳಯ್ಯ ದೇವ ಅಚಲಾನಂದವಿಠಲ ॥ ೧ ॥

Sri Vidyabharathi Book Centre, Sringeri

CC-0. In Public Domain. Digitized by eGangotri

ಸುಖವಾದರೆ ತನ್ನಿಂದಾಯಿತೆಂಬೋರೋ
ದುಃಖವಾದರೆ ದೈವ ಮಾಡಿತೆಂಬೋರೋ
ಸುಖಕೆ ತಾನ್ಯಾರೋ ದುಃಖಕೆ ತಾನ್ಯಾರೋ
ಸುಖದುಃಖವೆರಡೂ ಹರಿಯೆ ನಿನ್ನಾಧೀನ
ರುಕುಮಿಣೀಪತಿ ಅಚಲಾನಂದವಿಠಲ || ೨ ||

ಸಿರಿ ನಿನಗುಂಟೆಂದು ಗರ್ವಿಸಲಿ ಬೇಡ
ಸಿರಿ ಎನಗಿಲ್ಲೆಂದು ಮುನಿದು ನೋಡಲಿ ಬೇಡ
ಹರಿಯೆ ನಿನ್ನಂಥ ಒಡೆಯರು ಎನಗುಂಟು
ಆರುಹೊ ನಿನ್ನೊಡೆಯರಾರಚಲಾನಂದವಿಠಲ || ೩ ||

ನಿಂದರೆ ನೆರಳಿಲ್ಲ ಹಿಡಿಯೆ ಕೊಂಬೆಯಿಲ್ಲ
ಮುಂದೆ ಭಾವಿ ಹಿಂದೆ ಕಿಚ್ಚು ಬೆನ್ನಟ್ಟಿತಿದೆ
ಅಂಧನಾಗಿ ನಾ ಸಿಲುಕಿದೆ ಭವದೊಳು
ತಂದೆ ಸಲಹೊ ಅಚಲಾನಂದವಿಠಲ || ೪ ||

ತಾ ಮಾಡಿದ ಕರ್ಮಫಲ ತನಗಲ್ಲದೆ
ವಿಧಿಯ ಬೈದರೆ ವಿಧಿ ಎಲ್ಲಿ ಪೋಪನಯ್ಯ
ವಿಧಿ ಕರ್ಮ ವಿಚಾರಿ ನಡೆ ಬಲ್ಲನೇನಯ್ಯ
ಕೇಳಯ್ಯ ದೇವ ಅಚಲಾನಂದವಿಠಲ || ೫ ||

ಕೊಡಲಿಬೇಕು ಪಾಪದ ಬೇರು ಕಡಿವಲ್ಲಿ
ಕೊಡಲಿಬೇಕು ಪುಣ್ಯವ ಕಟ್ಟಿಕೊಂಬಲ್ಲಿ
ಕೊಡಲಿಬೇಕು ಗುರುಹಿರಿಯರ ಕೈಯಲ್ಲಿ
ಕೊಡಲಿಬೇಕು ಸತ್ಪಾತ್ರರ ಎಡೆಯಲ್ಲಿ
ಒಡೆಯ ಕೇಳು ಅಚಲಾನಂದವಿಠಲ || ೬ ||

ವಿಷಯವುಳ್ಳವನಿಗೆ ವಿವೇಕವಿಲ್ಲ
ಹಸಿವರಿತುಂಬಗೆ ರೋಗವಿಲ್ಲ
ಲೋಭಿಗೆ ತನ್ನವರು ಪರರೆಂಬುವುದಿಲ್ಲ
ಕೇಳಯ್ಯ ದೇವ ಅಚಲಾನಂದವಿಠಲ || ೭ ||

Sri Vidyabharathi Book Centre, Sringeri

CC-O. In Public Domain. Digitized by eGangotri

ಹೆಂಡತಿ ಮಾಡಿದ ಪಾಪ ಗಂಡನಿಗುಂಟು
ಗಂಡ ಮಾಡಿದ ಪುಣ್ಯ ಹೆಂಡತಿಗುಂಟು
ಹೆಂಡತಿ ಮಾಡಿದ ಪುಣ್ಯ ಗಂಡಗಿಲ್ಲ
ಗಂಡ ಮಾಡಿದ ಪಾಪ ಹೆಂಡತಿಗಿಲ್ಲ
ಹ್ಯಾಂಗಯ್ಯ ದೇವ ಅಚಲಾನಂದವಿಠಲ ॥ ೮ ॥

ಜಗದಂತರಿಯಾಮಿ ಬಯಲೆನಬಹುದೆ?
ಅಗಣಿತಗುಣನ ನಿರ್ಗುಣನೆನಬಹುದೆ?
ಜಗದ ತಂದೆಯ ನೀನು ತಾನೆನಬಹುದೆ?
ಜಗದೊಡೆಯನ ಬಿಟ್ಟನ್ಯರ ಭಜಿಸೋದೆ?
ನಗಧರ ಅಚಲಾನಂದವಿಠಲನೇ ! ॥ ೯ ॥

ಹಗಲು ನಾಲ್ಕು ಝಾವ ಹಸಿವೆಗೆ ಕುದಿದು
ಇರುಳು ನಾಲ್ಕು ಝಾವ ನಿದ್ರೆಗೆ ಕುದಿದು
ವೃಥಾಯ ಹೊತ್ತೆಲ್ಲ ಹೋಯಿತಲ್ಲಾ !
ಎನ್ನಾಯುಷ್ಯ ವೃಥಾಯ ಹೋಯಿತಲ್ಲ !
ನಿನ್ನ ನೆನೆಯಲಿಲ್ಲ ವಿಷಯಸುಖವಿಲ್ಲ
ಕೇಳಯ್ಯ ದೇವ ಅಚಲಾನಂದವಿಠಲ ॥ ೧೦ ॥

ಶ್ರೀಪಾದರಾಯರ ಉಗಾಭೋಗಗಳು

ಅನಂತಕಾಲದ ಪುಣ್ಯದಿಂದಲಿ ಎನ್ನ
ಮನಸು ಎರಗಿತೊ ನಿನ್ನ ಪಾದದಲ್ಲಿ
ಎನ್ನ ಮನ ಅನ್ಯತ್ರ ಪೋಗದಂತೆ ಮಾಡಿ
ನಿನ್ನ ವಾರೊಳು ನಿಲಿಸೊ ರಂಗವಿಠಲ ॥ ೧ ॥

ಧ್ಯಾನವು ಕೃತಯುಗದಿ ಯಜ್ಞ ತ್ರೇತಾಯುಗದಿ
ದಾನವಾರಿಯ ದೇವತಾರ್ಚನೆಯು ದ್ವಾಪರದಿ
ಆ ನರರಿಗೆಷ್ಟು ಫಲ ಈ ಕಲಿಯುಗದಲ್ಲಿ
ಗಾನದಿ ಕೇಶವನ ರಂಗವಿಠಲನೆನಲು ॥ ೨ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಮನೆಯಿಂದ ಸಂತೋಷ ಕೆಲವರಿಗೆ ಲೋಕದೊಳು
ಧನದಿಂದ ಸಂತೋಷ ಕೆಲವರಿಗೆ ಲೋಕದೊಳು
ಸತಿಯಿಂದ ಸಂತೋಷ ಕೆಲವರಿಗೆ ಲೋಕದೊಳು
ಸುತರಿಂದ ಸಂತೋಷ ಕೆಲವರಿಗೆ ಲೋಕದೊಳು
ಇನಿತು ಅವರವರ ಸಂತೋಷ ಅವರಿಗಿರಲಿ
ಎನಗೆ ಸಂತೋಷ ನಿನ್ನಲಿ ರಂಗವಿಠಲ ॥ ೩ ॥

ಕಲಿಕಾಲಕೆ ಸಮಯುಗವಿಲ್ಲವಯ್ಯ
ಕಲುಷ ಹರಿಸಿ ಕೈವಲ್ಯವೀವುದಯ್ಯ
ಸಲೆ ನಾಮಕೀರ್ತನೆ ಸ್ಮರಣೆ ಸಾಕಯ್ಯ
ಸ್ಮರಿಸಲು ಸಾಯುಜ್ಯಪದವೀವುದಯ್ಯ
ಬಲವಂತ ಶ್ರೀರಂಗವಿಠಲನ ನೆನೆದರೆ
ಕಲಿಯುಗವೇ ಕೃತಯುಗವಾಗುವದಯ್ಯ ॥ ೪ ॥

ಬಲ್ಲವನು ಎಲ್ಲವನು ಹರಿಯಿರಲು ಭಜಿಸದೆ
ಕ್ಷುಲ್ಲದೇವರ ಬೇಡಿ ಸುಖವ ಬಯಸುವೆ ನೀನು
ಕಳ್ಳಗೋವಿನ ಪಾಲ ಕರುವು ಬಯಸಿದಂತೆ
ಹಲ್ಲು ಹೋಹದನರಿಯ ಅಕ್ಕಟಕಟಾ
ಬಲ್ಲಿದ ದೈವ ಶ್ರೀರಂಗವಿಠಲನು ಕೈ
ವಲ್ಯವನೆ ಕೊಟ್ಟು ಸಂತೈಸುವನು ಭಜಿಸೊ ॥ ೫ ॥

ಭವವೆಂಬ ಅಡವಿಯಲ್ಲಿ ತಾಪತ್ರಯದಿ ಸಿಲುಕಿ
ಭಯಗೊಳ್ಳದಂತೆ ಗೆಲ್ಲುವದಕೆ ಶ್ರೀಹರಿನಾಮ
ಹೊರತಾಗಿ ಮತ್ತುಂಟೆ ಎನ್ನ ಮನವ ನಿನ್ನ
ಚರಣದಲ್ಲಿಟ್ಟು ಸಲಹೊ ನಮೋ ರಂಗವಿಠಲ ॥ ೬ ॥

ಚೆನಕನನೊಲ್ಲೆನವ್ವ ಕುಲುಕಿ ನಡೆಯುವನ
ಷಣ್ಮುಖನನೊಲ್ಲೆನವ್ವ ಹಲವು ಬಾಯವನ
ಇಂದ್ರನನೊಲ್ಲೆನವ್ವ ಮೈಗಣ್ಣೆನವನ

Sri Vidyabharathi Book Centre, Sringeri

CC-O. In Public Domain. Digitized by eGangotri

ಚಂದ್ರನನೊಲ್ಲೆನವ್ವ ಕ್ಷಯರೋಗದವನ
ಸೂರ್ಯನನೊಲ್ಲೆನವ್ವ ಉರಿದು ಮೂಡುವನ
ಹರನ ನಾನೊಲ್ಲೆನವ್ವ ಹಣೆಗಣ್ಣಿನವನ
ಜನಕೆಲ್ಲ ಚೆಲುವನ ಜಗಕೆ ಒಡೆಯನ
ತಂದು ತೋರೇ ನಮ್ಮ ರಂಗವಿಠಲನ ॥ ೭ ॥

ತುರುಬಿನ ಮೇಲೆ ಶುರುಬಿಡ ಮಲ್ಲಿಗೆ ಜಾಜಿ
ಕೊರಳಲ್ಲಿ ಕಂಠೀಸರ ವನಮಾಲೆ
ಮರಿದುಂಬಿ ಝೇಂಕಾರ ಸರಿಗಮಪಧನಿಸ
ಸನಿಧಪಮಗರಿಸ ಅಧರದಲೂದುತಿರೆ
ಕರದಲ್ಲಿ ವೇಣು ಬೆರಳಲ್ಲಿ ಮಿಟವುತ
ವರ ಕಲ್ಪತರುವಿನ ನೆರಳಿನಲ್ಲಿ ಸಿರಿ
ಅರಸನು ಶ್ರೀಪತಿ ರಂಗವಿಠಲನು
ಸರಸದಿ ನಾದವ ಮಾಡಿದನು ॥ ೮ ॥

ವ್ಯಾಸರಾಯರ ಉಗಾಭೋಗಗಳು

ಜಾರತ್ವ ಮಾಡಿದ ಪಾಪಂಗಳಿಗೆ ಎಲ್ಲ
ಗೋಪೀಜನ ಜಾರನೆಂದರೆ ಸಾಲದೆ
ಚೋರತ್ವ ಮಾಡಿದ ಪಾಪಂಗಳಿಗೆ ಎಲ್ಲ
ನವನೀತಚೋರನೆಂದರೆ ಸಾಲದೆ
ಜೀವಹತ್ಯಾಪಾಪ ಮಾಡಿದವರಿಗೆಲ್ಲ
ಮಾವನ್ನ ಕೊಂದವನೆನೆ ಸಾಲದೆ
ಪ್ರತಿದಿವಸ ಮಾಡಿದ ಪಾಪಂಗಳಿಗೆ ಎಲ್ಲ
ಪತಿತಪಾವನ ಸ್ವಾಮಿಯೆನೆ ಸಾಲದೆ
ಇಂತಿಪ್ಪ ಮಹಿಮೆಯೋಳೊಂದನಾದರು ಒಮ್ಮೆ
ಸಂತಸದಿ ನೆನೆಯುವರ ಪೊರೆವ ಸಿರಿಕೃಷ್ಣ ॥ ೧ ॥

ಕರಿ ಹರಿಯೆನಲಾ ವಾಕ್ಯವ ಕೇಳಿ
ಸಿರಿಗೆ ಹೇಳದೆ ಬಂದೆ ಉರಗನ ಮಂಚ ಧುಮುಕಿ

Sri Vidyabharathi Book Centre, Sringeri

CC-0. In Public Domain. Digitized by eGangotri

ಕರವಿತ್ತ ವಿರಿಂಚಿ ಕೈಲಾಘವನೊಲ್ಲಡೆ
ಭರದಿ ಹನುಮನಿತ್ತ ಹಾವಿಗೆಯ ದಾಟ
ಗರುಡನೊದಗಿಬರೆ ತಿರುಗಿ ನೋಡದೆ ಬಂದೆ । ನಿನ್ನ ।
ತ್ವರಿತಕ್ಕೆ ನಮೋ ನಮೋ ನಮೋಯೆಂಬೆ ಸಿರಿಕೃಷ್ಣ ॥ ೨ ॥

ಧರ್ಮಪಥ ಮೆಟ್ಟಲು ಮನವೆರಗದು ದು
ಷ್ಕರ್ಮಕ್ಕೆ ಚಿಗಿಚಿಗಿದಾಡುವುದು । ಯುಗ
ಧರ್ಮವೋ ಜೀವರ ಕರ್ಮವೋ ಹರಿ ಹರಿ
ದುರ್ಮದೋಕ್ತಿಗಳಿಂದ ಚರಿಸುವ ಜನರ ಮೈ
ಚರ್ಮ ಸುಲಿಸದೆ ಬಿಡನು ಕಡೆಗೆ ಸಿರಿಕೃಷ್ಣ ॥ ೩ ॥

ತಂದೆ ನೀ ತಂದೆ ಜನುಮಜನುಮಕೆ ತಂದೆ
ಕಾಮಕ್ಕೆ ತಂದೆ ಡಾಂಭಿಕಕೆ ತಂದೆ
ಎಂದಿಗೂ ನೀ ತಂದೆಯೆಂದು ನಾ ಬಂದೆನೋ
ಕಂದರ್ಪಜನಕ ಸಿರಿಕೃಷ್ಣ ನೀ ಪೊರೆಯೊ ॥ ೪ ॥

ನಿನ್ನ ಎಂಜಲನುಂಡು ನಿನ್ನ ಬೀಳುಡೆಯುಟ್ಟು
ಮುನ್ನ ಮಾಡಿದ ಕರ್ಮ ಬೆನ್ನ ಬಿಡದಿರ್ದಡೆ
ನಿನ್ನ ಪಾಲ್ಗೈಸುವದೇಕೆ ಗೋವಿಂದ
ನಿನ್ನ ಹಾರೈಸುವದೇಕೆ ಗೋಪಾಲ
ದಿನಕರನುದಿಸಿ ಕತ್ತಲೆ ಹಿಂಗದಿರ್ದೊಡೆ
ಇರುಳೇನು ಹಗಲೇನು ಕುರುಡನಿಗೆ ಸಿರಿಕೃಷ್ಣ ॥ ೫ ॥

ವಾದಿರಾಜರ ಉಗಾಭೋಗಗಳು

ಡಿಲ್ಲಿರಾಯನ ಕಂಡು ಪುಲ್ಲಿನ ಗೇಹ ಬೇಡುವಂ
ತಲ್ಲವೇನೋ ಸಿರಿವಲ್ಲಭನ
ಸಲ್ಲದೈಹಿಕ ಭಾಗ್ಯ ನಿಲ್ಲುವದೆಂದು ಭ್ರಮಿಸಿ
ಬಲ್ಲಿದ ಸದ್ಭಕ್ತರು ಬೇಡುವರೇ

Sri Vidyabharathi Book Centre, Sringeri

CC-O. In Public Domain. Digitized by eGangotri

ಪುಲ್ಲು ಕಲ್ಲು ಜಲ ಮೆದ್ದು ನಿರುತದಲ್ಲಿ
ತಲ್ಲೆಯೂರಿ ತಪವ ಮಾಡುವರೂ
ಬಲ್ಲಿದ ಲಕುವಿಪಾಶ ಎಲ್ಲರೊಳಿದ್ದು ಫಲವ
ಒಲ್ಲೆನೆಂದರು ತಾ ಕೊಡುತಿಪ್ಪನು
ಚಲ್ವ ಹಯವದನ ತಿಮ್ಮನಲ್ಲದೆ ಕೈವಲ್ಯ ಮು
ತ್ತೆಲ್ಲಿ ಬೇಡಿದರು ಅಲ್ಲೇನು ಫಲವಿಲ್ಲ ॥ ೧ ॥

ಶ್ರೀನಾಥ ಪ್ರಭುವೆತ್ತ ಹೀನಯೋನಿಗಳಲ್ಲಿ
ನಾನಾ ದುಃಖವನುಂಬ ಹೀನಮನುಜನೆತ್ತ
ಭಾನುಮಂಡಲವೆತ್ತ ಶ್ವಾನನುಬ್ಬರವೆತ್ತ
ಮಾನವ ಈಶ ನಾನೆನ್ನದಿರೋ
ದಾನವಕುಲವೈರಿ ಹಯವದನ ವೆಂಕಟ
ಶ್ರೀನಿವಾಸ ದಾಸ ದಾಸನೆಂದೆನಿಸೋ ॥ ೨ ॥

ಅಡಿಯೊಳಾಧಾರವಿಲ್ಲ ಹಿಡಿವಡಕೆ ಕೊಂಬೆಯಿಲ್ಲ
ಕಡೆಹಾಯಿಸುವರಿಲ್ಲ ಕಡುನೊಂದೆನಲ್ಲ
ಬಡತನ ಬಿಡದಲ್ಲ ಭಂಗಪಟ್ಟೆನಲ್ಲ
ಒಡೆಯನ ದಯವಿಲ್ಲ ಪಡೆದು ಹುಟ್ಟಲಿಲ್ಲ
ಗರುಡ ಸರ್ಪನ ಸ್ನೇಹದಂತಾಯಿತಲ್ಲ
ಕನ್ನಡಿಯೊಳಗಿನ ಗಂಟು ಕನಸಿನೊಳಗಿನ ನಂಟು
ಉಣಹೋಗಿ ಬಾಯಿ ಮರೆತಂತಾಯಿತಲ್ಲ
ಎನ್ನ ಮನದುಬ್ಬಸವ ಶ್ರೀಕಂಠ ಬಲ್ಲ
ಯಾರ ಮುಂದುಸುರಲೊ ಹಯವದನ ॥ ೩ ॥

ಅನ್ನದಾಶೆಗೆ ಪೋಗಿ ಪರರ ಬಾಗಿಲ ಕಾಯ್ದು
ಅನೇಕ ಬಾಧೆಗಳಿಂದ ನೊಂದೆನೊ ಹರಿಯೆ
ಅನ್ಯತ್ರ ಪೊರಮಟ್ಟು ಪೋಗಲಾದರೂ ಬಿಡರು
ಮನ್ನಿಸುತ ಕೃಪೆಯಿಂದ ಕೂಡಿ ಇರರು

Sri Vidyabharathi Book Centre, Sringeri

CC-0. In Public Domain. Digitized by eGangotri

ಅನಾಥಬಂಧು ಹಯವದನ ನಿನ್ನರಮನೆಯ
ಕುನ್ನಿ ಎಂಜಲನಿಕ್ಕಿ ಪೊರೆಯೊ ತಂದೆ ॥ ೪ ॥

ಎನಗೆ ನಿನ್ನಲಿ ಭಕ್ತಿಯಿರಲಿ ಇಲ್ಲದಿರಲಿ
ಜನ ಹರಿದಾಸನೆಂದೆನ್ನ ಕರೆಯಲಾಗಿ
ಮನ ಪಾಪಕೆರಗದಂತೆ ನೋಡಿಕೋ ಸ್ವಾಮಿ
ಕನರಿ ಯಮನ ಭಟರು ಮುಂದೆ ಬಂದರಾಗ
ನಿನ್ನ ಘನತೆಗೆ ಸಾಲದಯ್ಯ
ಅನುದಿನ ನೀ ಎನ್ನ ಕಾಯಬೇಕಾಯಿತು ಅನಿಮಿತ್ತಸುಜನಬಂಧು
ತನ್ನಾಳ ಹಯವದನ ಅನ್ಯಗೊಪ್ಪಿಸಿಕೊಟ್ಟ
ನೆಂಬ ದುರ್ವಾರ್ತೆಯ ತಪ್ಪಿಸಿಕೋ ತಂದೆ ॥ ೫ ॥

ನಲ್ಲನಿಲ್ಲದ ಸತಿ ಚಲುವಿದ್ದು ಫಲವೇನು
ಸಲ್ಲದ ಹಣ್ಣಿಗೆ ಸವಿಯಿದ್ದು ಫಲವೇನು
ಬಲ್ಲವರಿಲ್ಲದ ಸಭೆಯಿದ್ದು ಫಲವೇನು । ನಮ್ಮ
ನೊಲ್ಲದ ಹಯವದನ ಎಲ್ಲಿದ್ದರೇನು ॥ ೬ ॥

ಪುರಂದರದಾಸರ ಉಗಾಭೋಗಗಳು

ಇಂದಿನ ದಿನವೇ ಶುಭದಿನವು ಇಂದಿನ ವಾರ ಶುಭವಾರ
ಇಂದಿನ ತಾರೆ ಶುಭತಾರೆ ಇಂದಿನ ಯೋಗ ಶುಭಯೋಗ
ಇಂದಿನ ಕರಣ ಶುಭಕರಣ ಇಂದು ಪುರಂದರವಿಠಲರಾಯನ
ಸಂದರುಶನ ಫಲವೆನಗಾಯ್ತು ಸಂದರುಶನ ಫಲವೆನಗಾಯ್ತು ॥ ೧ ॥

ಪರಮಾನಂದವು ಹರಿಗೆ ಪರಮಾನಂದವು ಸಿರಿಗೆ
ಪರಮಾನಂದವು ವರದ ಪುರಂದರವಿಠಲಗೇ ॥ ೨ ॥

ಶುಭವೆನ್ನಿ ಶೋಭನ ಹರಿಗೆ ಶುಭವೆನ್ನಿ ಶೋಭನ ಸಿರಿಗೆ
ಶುಭವೆನ್ನಿ ಶೋಭನ ವರದ ಪುರಂದರವಿಠಲಗೆ ॥ ೩ ॥

ಜಯ ಜಯ ಮಂಗಳ ಹರಿಗೆ ಜಯ ಜಯ ಮಂಗಳ ಸಿರಿಗೆ
ಜಯ ಜಯ ಮಂಗಳ ವರದ ಪುರಂದರವಿಠಲಗೆ ॥ ೪ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಹಗಲು ನಿನ್ನ ನೆನೆಯಲಿಲ್ಲ ಹಸಿವು ತೃಷೆಯಿಂದ
ಇರುಳು ನಿನ್ನ ನೆನೆಯಲಿಲ್ಲ ನಿದ್ರೆ ಭರದಿಂದ । ಈ ।
ಎರಡರ ಬಾಧೆಗೆ ಒಳಗಾದೆ ನಾ ಪುರಂದರವಿಠಲ ॥ ೫ ॥

ನಿನ್ನ ಧ್ಯಾನವ ಕೊಡೊ ಎನ್ನ ಧನ್ಯನ ಮಾಡೊ
ಪನ್ನಗಶಯನ ಶ್ರೀ ಪುರಂದರವಿಠಲ ॥ ೬ ॥

ಪಂಕಜನಯನನೆ ಪಂಕಜನಾಭನೆ
ಪಂಕಜೋದ್ಭವನಯ್ಯ ಪುರಂದರವಿಠಲ ॥ ೭ ॥

ಭಾಗಿರಥೀಪಿತನೆ ಭಾಗವತರ ಪ್ರಿಯನೆ
ಯೋಗಿಗಳೊಡೆಯ ಶ್ರೀ ಪುರಂದರವಿಠಲ ॥ ೮ ॥

ಎಲ್ಲಿ ಹರಿಕಥಾಪ್ರಸಂಗ ಅಲ್ಲಿ ಗಂಗೇ ಯಮುನೆ
ಚೆಲುವೆ ಗೋದಾವರೀ ಸರಸ್ವತಿಯು ಸಿಂಧೂ
ಎಲ್ಲ ತೀರ್ಥಗಳು ಎಣೆಯಾಗಿ ನಿಂದಿರಲು
ವಲ್ಲಭ ಪುರಂದರವಿಠಲನು ಮೆಚ್ಚಿದ ॥ ೯ ॥

ಜಗವ ಸುತ್ತಿಹುದೆಲ್ಲ ನಿನ್ನ ಮಾಯವಯ್ಯ
ನಿನ್ನ ಸುತ್ತಿರುವುದು ಎನ್ನ ಮನವಯ್ಯ
ಜಗಕೆ ಬಲ್ಲಿದ ನೀನು ನಿನಗೆ ಬಲ್ಲಿದ ನಾನು
ಜಗವು ನಿನ್ನೊಳಗೆ ನೀನು ಎನ್ನೊಳಗೆ
ಕರಿಯು ಕನ್ನಡಿಯೊಳಗಡಗಿದಂತೆ ಸ್ವಾಮಿ
ಪುರಂದರವಿಠಲ ನೀ ಎನ್ನೊಳಡಗಿದೆ ॥೧೦॥

ಎನ್ನಮ್ಮ ಸಿರಿದೇವಿ ಇನ್ನು ಅರಿಯಳು ಮಹಿಮೆ
ಕುನ್ನಿಮಾನವ ನಾನು ಏನು ಬಲ್ಲವನೋ
ಪನ್ನಗಾದ್ರಿನಿಲಯ ಪರಮಪಾವನ ಕೃಷ್ಣ
ಎನ್ನನುದ್ಧರಿಸಯ್ಯ ಪುರಂದರವಿಠಲ ॥ ೧೧ ॥

ಮನಶುದ್ಧಿಯಿಲ್ಲದವಗೆ ಮಂತ್ರದಿಂ ಫಲವೇನು
ತನುಶುದ್ಧಿಯಿಲ್ಲದವಗೆ ತೀರ್ಥದಿಂ ಫಲವೇನು

Sri Vidyabharathi Book Centre, Sringeri

CC-0. In Public Domain. Digitized by eGangotri

ಮೀನುಮೊಸಳೆಗಳಂತೆ ಇದ್ದಲ್ಲಿ ಫಲವೇನು
ಶ್ರೀಶೈಲದ ಕಾಗೆಯಂತೆ ಹೊರಗೆ ಮಿಂದು
ಒಳಗೆ ಮೀಯದ ಜನರ ಕಂಡು
ನಗುತಿಪ್ಪ ಬೆರಗಾಗಿ ಪುರಂದರವಿಠಲ ॥ ೧೨ ॥

ಗುರಿಯನೆಚ್ಚವನೆ ಬಿಲ್ಲಾಳು
ಹರಿಯ ಭಜಿಸಿದವನೆ ಮಾಸಾಳು
ಹರಿಯೆಂದು ಓದದ ಓದೆಲ್ಲ ಹಾಳು
ಪುರಂದರವಿಠಲ ಪಾರ್ಥನ ಮನೆಯಾಳು ॥ ೧೩ ॥

ಗುರುಕರುಣವಾಗುವುದು ಪರಮದುರ್ಲಭವಯ್ಯ
ಪರಿಪರಿ ವ್ರತಗಳಾಚರಿಸಲು ಫಲವೇನು
ಗುರುಕರಣವೊಂದಲ್ಲದೆ ಗತಿಗೆ ಬೇರುಂಟೆ ದಾರಿ
ಶರೀರದ ಪುತ್ರಮಿತ್ರಕಳತ್ರಬಾಂಧವರು
ನೆರೆ ಸಲಿಸುವರೆ ಸದ್ಗತಿಗೆ ಸಾಧನವ
ನಿರುತವು ಗುರುಪಾದ ನಿಜವಾಗಿ ಮನದಲ್ಲಿ
ಅರಿತು ಭಜಿಸಲು ದುರಿತವ ಪರಿಹರಿಸಿ
ಪರಿಪಾಲಿಸುವ ನಮ್ಮ ಪುರಂದರವಿಠಲ ॥ ೧೪ ॥

ಹೊಲೆಯು ಬಂದನೆಂದು ಒಳಗೆ ದೇವರ ಮಾಡಿ
ಗಣಗಣ ಗಂಟೆಯ ಬಾರಿಸುವರಯ್ಯಾ
ತನುವಿನ ಕೋಪವು ಹೊಲೆಯಲ್ಲವೇ
ಪರಧನ ಪರಸತಿ ಹೊಲೆಯಲ್ಲವೇ
ಹೊರಗಿದ್ದ ಹೊಲೆಯನ ಒಳಗೆ ಬಚ್ಚಿಟ್ಟರೆ
ಇದಕೇನು ಮದ್ದೋ ಪುರಂದರವಿಠಲ ॥ ೧೫ ॥

ಕೆಟ್ಟೆನೆಂದೆನಲ್ಯಾಕೆ ಕ್ಲೇಶಪಡುವದ್ಯಾಕೆ
ಹೊಟ್ಟೆಗಾಗಿ ಪರರ ಕಷ್ಟಪಡಿಸುವದ್ಯಾಕೆ
ಹುಟ್ಟಿಸಿದ ದೈವ ಹುಲ್ಲು ಮೇಯಿಸದಿರನೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಸೃಷ್ಟಿಮಾಡಿದವ ಸ್ಥಿತಿಮಾಡಲರಿಯನೆ
ಗಟ್ಯಾಗಿ ನಂಬು ಪುರಂದರವಿಠಲನ ॥ ೧೬ ॥

ಸಕಲ ಸಾಧನಕೆಲ್ಲ ಸಿದ್ಧಿಗೊಳಿಸುವುದು
ಭಕುತಿ ಸಾಧನವಲ್ಲದನ್ಯ ಸಾಧನವುಂಟೆ
ಭಕುತಿಗಭಿಮಾನಿ ಭಾರತಿಯ ಕರುಣದಿಂ
ಮುಕುತಿಗೆ ಪಥವೆಂದು ಮನವಿಟ್ಟು ಭಜಿಸಿರೋ
ಅಖಿಳೇಶ ಪುರಂದರವಿಠಲ ತಾನೊಲಿವ ॥ ೧೭ ॥

ಬೇಡುವ ಕಷ್ಟಕ್ಕಿಂತ ಸಾವುದೆ ಲೇಸು
ಬೇಡಿದರೊಬ್ಬರು ಕೊಡುವರುಂಟೇ ದೇವ
ಗೂಡು ಕಿರಿದು ಮಾಡಿ ಬಲಿಯ ದಾನವ ಬೇಡಿ
ಆಡಿಸಿಕೊಂಡುದ ನೀ ಬಲ್ಲೆ ಪರರನು
ಬೇಡದಂತೆ ಮಾಡು ಪುರಂದರವಿಠಲ ॥ ೧೮ ॥

ಒಂದು ಕಾಲದಲಿ ಆನೆಯ ಮೇಲೆ ನಡೆಸುವಿ
ಒಂದು ಕಾಲದಲಿ ಬರಿಗಾಲಲ್ಲಿ ನಡೆಸುವಿ
ಒಂದು ಕಾಲದಲಿ ಅಮೃತಾನ್ನ ಉಣಿಸುವಿ
ಒಂದು ಕಾಲದಲಿ ಉಪವಾಸ ಮಾಡಿಸುವಿ
ನಿನ್ನ ಮಹಿಮೆಯ ನೀನೆ ಬಲ್ಲೆಯೋ ದೇವ
ಪನ್ನಗಶಯನ ಶ್ರೀ ಪುರಂದರವಿಠಲ ॥ ೧೯ ॥

ಹರಿ ನಿನ್ನ ಭಂಡಾರ ಕದ್ದ ಕಳ್ಳ ನಾನು
ನಿನ್ನ ಭಕ್ತಿಯೆಂಬ ಸಂಕೋಲೆಯಿಕ್ಕು
ನಿನ್ನ ದಾಸರ ಕೈಯಲೆನ್ನನೊಪ್ಪಿಸಿಕೊಂಡು
ನಿನ್ನ ವೈಕುಂಠದೊಳು ಸೆರೆಯಿಟ್ಟು ಕಾಯೋ
ಪನ್ನಗಶಯನ ಶ್ರೀ ಪುರಂದರವಿಠಲ ॥ ೨೦ ॥

ನಿನ್ನಂಥ ಸ್ವಾಮಿ ಎನಗುಂಟು ನಿನಗಿಲ್ಲ
ನಿನ್ನಂಥ ತಂದೆಯು ಎನಗುಂಟು ನಿನಗಿಲ್ಲ

Sri Vidyabharathi Book Centre, Sringeri

CC-0. In Public Domain. Digitized by eGangotri

ನಿನ್ನಂಥ ಧೊರೆಯು ಎನಗುಂಟು ನಿನಗಿಲ್ಲ
ನೀನೆ ಪರದೇಶಿ ನಾನೆ ಸ್ವದೇಶಿ
ನಿನ್ನರಸಿ ಲಕುಮಿ ಎನ್ನ ತಾಯಿ
ನಿನ್ನ ತಾಯ ತೋರೋ ಪುರಂದರವಿಠಲ ॥ ೨೧ ॥

ಆನೆಯು ಕರೆದಾಗ ಜ್ಞಾನವಿಪ್ಪದ್ದೇನು
ನಾನು ಒರಲೆ ನೀನು ಕೇಳದಿರುವದೇನು
ದಾನವಾಂತಕ ದೀನರಕ್ಷಕನೆಂಬ ಮಾನ
ನೀನು ಉಳಿಸಿಕೊಳ್ಳೊ ಪುರಂದರವಿಠಲ ॥ ೨೨ ॥

ಕಡೆಹಾಯಿಸುವುದು ನಿನ್ನ ಭಾರ
ನಿನ್ನ ನೆನೆಯುವುದು ಎನ್ನ ಭಾರ
ಸತಿಸುತರಿಗೆ ಹರಿ ನೀನೆ ಗತಿ
ಒಪ್ಪಿಸಿಕೊಡುವದು ಎನ್ನ ರೀತಿ
ಪಡಿಹಾಕಿ ಸಲಹುವದು ನಿನ್ನ ಧರ್ಮ । ನಿ
ನ್ನಡಿಗಳಿಗೆ ನಮಿಸುವದು ಎನ್ನ ಕರ್ಮ
ಎನ್ನ ತಪ್ಪುಗಳೆಣಿಸೆ ನಿನಗೆ ಸಲ್ಲ
ನಿನ್ನೊರತು ಬದುಕುವದು ಎನ್ನದಲ್ಲ
ನಿನ್ನ ಚಿತ್ತಕಾಗಿ ಮಾನಾಭಿಮಾನ
ನಾನೊಪ್ಪಿಸಿ ಕೊಡದಿರೆ ಅಪಮಾನ
ಹರಿಯೆ ನಿನಗೆ ನಾ ಮೊರೆಯಿಡುವೆ
ಪುರಂದರವಿಠಲ ನಿನ್ನ ಪಾಡುವೆ ॥ ೨೩ ॥

ಅಂಗಜನಯ್ಯನೆ ಮಂಗಳಮಹಿಮನೆ
ಹೆಂಗಳೇರರಸ ಶ್ರೀ ಪುರಂದರವಿಠಲ ॥ ೨೪ ॥

ಮಾತಾಪಿತರು ನಿನಗಂದೆ ಮಾರಿದರಯ್ಯ
ನೀತವೆ ನಿನಗಿದು ಪೊರೆಯದಿದ್ದರೆ ಜೀಯ
ಯಾತಕೆ ಭಕುತವತ್ಸಲನೆಂಬ ಬಿರಿದ ಪೊತ್ತೆ

Sri Vidyabharathi Book Centre, Sringeri

CC-O. In Public Domain. Digitized by eGangotri

ನಾ ತಡೆಯೆನೊ ನಿನ್ನ ಬಿರುದಿಗಂಜುವನಲ್ಲ । ಶಾ ।
ಶ್ವತ ಮೂರುತಿ ಪೊರೆಯೊ ಎನ್ನ । ವಿ ।
ಖ್ಯಾತ ಮೂರುತಿ ಶ್ರೀ ಪುರಂದರವಿಠಲ || ೨೫ ||

ಸೂಸಲಾಶೆಗೆ ಬಡಿಗಲ್ಲಿಗೆ ಸಿಲುಕಿದ
ಮೂಷಕನ ಪರಿಯಂತೆ ಆದೆನೆಲೋ ದೇವ
ಹೇಸಿ ವಿಷಯಗಳಿಗೆ ಎರಗುವದೆನ್ನ ಮನಸು
ಘಾಸಿಯಾಗದಂತೆ ಸಲಹಯ್ಯಾ
ದಾಸರ ಸಂಗದೊಳಿರಿಸೆನ್ನನವರತ
ದಾಸರ ಪ್ರಿಯ ಶ್ರೀ ಪುರಂದರವಿಠಲ || ೨೬ ||

ಅನುಕೂಲವಿಲ್ಲದರ ವರ್ಜಿಸಲಿಬೇಕು
ವಿನಯದಿ ಗುರುಹಿರಿಯರಲ್ಲಿ ನಡೆಯಲಿಬೇಕು
ಮನವು ಕಪಟದ ಠಾವ ಬಿಟ್ಟು ತೊಲಗಲಿಬೇಕು
ವನಜನಾಭನ ಭಕ್ತಸಂಗವಿರಬೇಕು
ಪುರಂದರವಿಠಲನ ಚರಣಸ್ಮರಣೆ ಬೇಕು || ೨೭ ||

ನಾ ಘನ್ನ ನೀ ಘನ್ನ ತಾ ಘನ್ನವೆನ್ನದಿರು
ಘನ್ನನೊಬ್ಬನೆ ಕಾಣೊ ಪುರಂದರವಿಠಲ || ೨೮ ||

ಮನದಭಿಮಾನಿ ಮಹಾರುದ್ರನ ಭಜಿಸಲು
ಅನವರತ ಶ್ರೀಹರಿಯ ಆರಾಧಿಸುವದಕ್ಕೆ
ಮನಶುದ್ಧಿಯನೀವ ಮತಿ ಕೊಡುವ
ಮನುಜೋತ್ತಮರು ಕೇಳಿ ಮನಕೆ ಪ್ರೇರಕನವನು
ವನಜಾಕ್ಷ ಪುರಂದರವಿಠಲನ ಒಲುಮೆಗೆ
ಮನಸು ಕಾರಣವಲ್ಲದೆ ಮಿಗಿಲಾವದು || ೨೯ ||

ಭಾರತಮಲ್ಲ ಕರ್ಣನೆಂಬರು ಗಡ
ಭಾರತಮಲ್ಲ ಭೀಷ್ಮನೆಂಬರು ಗಡ
ಭಾರತಮಲ್ಲ ದುರ್ಯೋಧನೆಂಬರು ಗಡ

Sri Vidyabharathi Book Centre, Sringeri

CC-O. In Public Domain. Digitized by eGangotri

ಭಾರತಮಲ್ಲ ಭೀಮನೆಂಬರು ಗಡ
ಭಾರತಮಲ್ಲ ಗದುಗಿನ ವೀರ
ನಾರಾಯಣನಲ್ಲದೆ ಮತ್ತೊಬ್ಬರಲ್ಲ
ಪುರಂದರವಿಠಲ ಈ ಪರಿಯ ಬಲ್ಲ ॥ ೩೦ ॥

ಉದಯಾಸ್ತಮಯವೆಂಬ ಎರಡು ಕೊಳಗವಿಟ್ಟು
ಆಯುಸ್ಸೆಂಬ ರಾಶಿ ಅಳಿದು ಹೋಗದ ಮುನ್ನ
ಬದಿಗಿಟ್ಟು ಎಲ್ಲವ ಹರಿಯ ನೆನೆಯಬೇಕು
ಮನಮುಟ್ಟಿ ನೆನೆದರಾತನ ಕಾರ್ಯ ಗಟ್ಟಿ
ಹಾಂಗಲ್ಲದಿರೆ ತಾಪತ್ರಯ ಬೆನ್ನಟ್ಟಿ
ಹದಗೆಟ್ಟು ಪೋದರೆ ನೀ ಕೆಟ್ಟೆ
ಪುರಂದರವಿಠಲನ ಕರುಣಾದೃಷ್ಟಿ
ಯಾರ ಮೇಲಿದ್ದರೆ ಅವನೆ ಜಗಜಟ್ಟಿ ॥ ೩೧ ॥

ಆಯುಸ್ಸು ಇದ್ದರೆ ಅನ್ನಕ್ಕೆ ಕೊರತಿಲ್ಲ
ಜೀವಕ್ಕೆ ಎಂದಿಗೂ ತನು ಕೊರತೆಯಿಲ್ಲ
ಸಾವು ಹುಟ್ಟೆಂಬುವದು ಸಹಜ ಲೋಕದೊಳು
ನೋಯದೆ ಭಜಿಸು ನೀ ಪುರಂದರವಿಠಲನ್ನ ॥ ೩೨ ॥

ನಿನ್ನನೇ ಪಾಡುವೆ ನಿನ್ನನೇ ಹೊಗಳುವೆ
ನಿನ್ನನೇ ನಾ ಬೇಡಿ ಬೇಸರಿಸುವೆ
ನಿನ್ನ ಕಾಲನು ಪಿಡಿವೆ ನಿನ್ನ ಹಾರೈಸುವೆ
ನಿನ್ನೊರತು ಹಾಕುವ ದೇವರಿನ್ನುಂಟೇ
ಘನ್ನ ಪುರಂದರವಿಠಲ ದೇವದೇವ ॥ ೩೩ ॥

ತುಳಸಿಯಿರಲು ಕುರುಚಿಯನು ತರುವಿರೋ
ಗಂಗೆಯಿರಲು ಕೂಪಸ್ನಾನ ಮಾಡುವಿರೋ
ಹಂಸವಿರಲು ಪಾಲ ಕೋಳಿಗೆರೆಯುವಿರೋ
ಬಾವನ್ನ ನೆಳಲಿರಲು ಬೇಲಿಯ ಬಯಸುವಿರೋ

Sri Vidyabharathi Book Centre, Sringeri

CC-O. In Public Domain. Digitized by eGangotri

ತಾಯ ಮಾರಿ ತೊತ್ತನೆ ತರುವಿರೋ
ಪುರಂದರವಿಠಲನ ದೂರ ಮಾಡುವಿರೋ ॥ ೩೪ ॥

ಮರವಿದ್ದರೇನಯ್ಯ ನೆರಳಿಲ್ಲದನಕ
ನೆರಳಿದ್ದರೇನಯ್ಯ ನೀರಿಲ್ಲದನಕ
ನೀರಿದ್ದರೇನಯ್ಯ ವರತಿ(ಒರತೆ)ಯಿಲ್ಲದನಕ
ಧನವಿದ್ದರೇನಯ್ಯ ಕೊಡುವಮನವಿಲ್ಲದನಕ
ಮನವಿದ್ದರೇನಯ್ಯ ಜ್ಞಾನವಿಲ್ಲದನಕ
ತನುವಿದ್ದರೇನಯ್ಯ ಪುರಂದರವಿಠಲನ
ನೆನೆನೆನೆದು ಊಳಿಗ ಮಾಡದನಕ ॥ ೩೫ ॥

ಸಿರಿವಿರಿಂಚಾದಿಗಳು ಅರಿಯದಂಥಾ ಮಹಿಮೆ
ಅರಿತು ಪಾಡಲು ಜಗದಿ ಅರುಹರಾರಯ್ಯ
ಅರವಿಂದದಳನಯನ ಶರಣೆಂದವರ ಕಾವ
ಕರುಣಾಸಾಗರ ನಮ್ಮ ಪುರಂದರವಿಠಲ ॥ ೩೬ ॥

ಅರ್ಭಕನ ತೊದಲುನುಡಿ ತಾಯ್ತಂದೆ ಕೇಳಿ ಮನ
ವುಬ್ಬಿ ನಲಿವಂದದಲಿ ಉರಗಶಯನ
ಕಬ್ಬ ನಾನಾಡಿದರೆ ತಾಳಿ ರಕ್ಷಿಸೊ ಎನ್ನ
ಕಬ್ಬುಬಿಲ್ಲಾನಯ್ಯ ಪುರಂದರವಿಠಲ ॥ ೩೭ ॥

ಅಣುವಿಗೇ ಅಣುವಾಗಿ ಘನಕೆ ನೀ ಘನವಾಗಿ
ಗುಣತ್ರಯಾವರಣಗಳ ವಿದಾರಿಪವನಾಗಿ
ಗುಣನಿಧೀ ಪುರಂದರವಿಠಲ ನೀನಿರಲು
ಎಣಿಕೆ ಮಾಡುವರ್ಯಾರು ಶೌರಿ ಕಂಸಾರಿ ॥ ೩೮ ॥

ಬಡವರಲಿ ನನ್ನಂಥ ಬಡವರಿನ್ನಿಲ್ಲ
ಕೊಡುವರಲಿ ನಿನ್ನಂತೆ ಕೊಡುವರಿನ್ನಿಲ್ಲ
ದೃಢಭಕ್ತಿ ನಿನ್ನಲ್ಲಿ ನೆಲೆಸುವಂತೆ ಮಾಡಿ
ಬಿಡದೆ ಪಾಲೀಸಯ್ಯ ಪುರಂದರವಿಠಲ ॥ ೩೯ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾವ ದೈವವು ನೀನೆ ಕೊಲುವ ದೈವವು ನೀನೆ
ಕೈವಲ್ಯಫಲದಾತ ಕೇಶವನು ನೀನೇ
ಯಾವ ದೈವಕ್ಕೆ ಈ ವೈಭವವನು ಕಾಣೆ
ರಾವಣಾಂತಕ ಸ್ವಾಮಿ ಪುರಂದರವಿಠಲ || ೪೦ ||

ಮನೋವಚನಗಳಲ್ಲಿ ಕಾಯಕರ್ಮಗಳಲ್ಲಿ
ನೀನೆ ನೀನೆ ನೀನೆ ಪುರಂದರವಿಠಲ || ೪೧ ||

ಬಲಿಯಂತೆ ಮಕುಟವ ಕದ್ದುಕೊಂಡೋಡಬೇಕು
ವಾಲಿಯಂತೆ ನಿನ್ನ ಮೂದಲಿಸಲಿಬೇಕು
ಸುಗ್ರೀವನಂತೆ ಲೆಕ್ಕಿಸದಿರಬೇಕು
ಪುರಂದರವಿಠಲ ನೀ ಬರಬೇಕು || ೪೨ ||

ಬಲಿಯ ಮನೆಗೆ ವಾಮನ ಬಂದಂತೆ
ಭಗೀರಥಗೆ ಶ್ರೀಗಂಗೆ ಬಂದಂತೆ
ಮುಚುಕುಂದನಿಗೆ ಶ್ರೀ ಮುಕುಂದ ಬಂದಂತೆ
ಗೋಪಿಯರಿಗೆ ಗೋವಿಂದ ಬಂದಂತೆ
ವಿದುರನ ಮನೆಗೆ ಶ್ರೀಕೃಷ್ಣ ಬಂದಂತೆ
ವಿಭೀಷಣನ ಮನೆಗೆ ರಾಮ ಬಂದಂತೆ
ನಿನ್ನ ನಾಮವು ಎನ್ನ ನಾಲಿಗೆಗೆ ಬಂದು
ಪುರಂದರವಿಠಲ ನೀ ನಿಂತು ನುಡಿಸೋ || ೪೩ ||

ಮರ್ಕಟನ ಕೈನೂಲ ಗುಕ್ಕರಿಯ ತೆರನಂತೆ
ಸಿಕ್ಕಿಕೊಂಡು ಕಾಮ ಕ್ರೋಧ ಮೋಹಗಳೆನ್ನ
ಹಿಕ್ಕಿ ಹೀರುತಲಿವೆ ಯಾಕೆ ನೋಡುತಲಿದ್ದೀ
ಅಕ್ಕಟಕ್ಕಟ ನಿನ್ನ ದಾಸನಲ್ಲವೆ ನಾನು
ಸಿಕ್ಕು ಬಿಡಿಸಿ ನಿನ್ನ ಭಕುತಿಯ ತೋರಿಸೊ
ಪಕ್ಷಿವಾಹನ ನಮ್ಮ ಪುರಂದರವಿಠಲ || ೪೪ ||

ಅಪಾಯಕೋಟಿಗೆಲ್ಲ ಉಪಾಯವೊಂದೇ
ಹರಿಭಕ್ತರು ತೋರಿದ ಉಪಾಯವೊಂದೇ

Sri Vidyabharathi Book Centre, Sringeri

CC-O. In Public Domain. Digitized by eGangotri

ಉಪಾಯವೊಂದೇ ಪುರಂದರವಿಠಲನ
ಓಯಿಟ್ಟು ಕರೆವ ಉಪಾಯವೊಂದೇ ॥ ೪೫ ॥

ತಾಯಿ ಗೋಪಿಯಂತೆ ಒರಳನೆಳೆಸಲಿಲ್ಲ
ವಾಲಿಯಂತೆ ಎದುರುವಾದಿಸಲಿಲ್ಲ
ಭೃಗು ಮುನಿಯಂತೆ ಎದೆಯನೊದೆಯಲಿಲ್ಲ
ಭೀಷ್ಮನಂತೆ ನಿನ್ನ ಹಣೆಯನೊಡೆಯಲಿಲ್ಲ
ಕೊಂಕಣೇರೆನ್ಮೆಗೆ ಕೊಡತಿ ಮದ್ದಿಂಬಂತೆ
ಆವರೆ ಮದ್ದು ನಿನಗೆ ಪುರಂದರವಿಠಲ ॥ ೪೬ ॥

ಹಸಿವಾಯಿತೇಳು ದೇವರ ತೊಳೆಯೆಂಬರೋ
ಹಸನಾಗಿ ಮನಮುಟ್ಟಿ ಪೂಜೆಯ ಮಾಡರೋ
ವಸನ ಭೂಷಣ ದ್ರವ್ಯಕಾಗಿ ತೊಳಲುವರೊ । ಈ
ಬಿಸಜಾಕ್ಷನೆಲ್ಲರು ಪುರಂದರವಿಠಲ ॥ ೪೭ ॥

ಕ್ರಿಮಿಕೀಟನಾಗಿ ಹುಟ್ಟಿದಂದು ಹರಿಶರಣೆಂತೆನಲುಂಟೆ
ಹರಿ ಹರಿಣನಾಗಿ ಹುಟ್ಟಿದಂದು ಹರಿಶರಣೆಂತೆನಲುಂಟೆ
ಕತ್ತೆ ಕರಡಿಯಾಗಿ ಹುಟ್ಟಿದಂದು ಹರಿಶರಣೆಂತೆನಲುಂಟೆ
ಹಂದಿ ಶುನಕನಾಗಿ ಹುಟ್ಟಿದಂದು ಹರಿಶರಣೆಂತೆನಲುಂಟೆ
ಮರೆತೀಯೆ ಮಾನವ ನಿನ್ನ ಹಿಂದಿನ ಭವಗಳನೊಂದು
ಮಾನುಷ ದೇಹ ಬಂದೀತೊ ನಿನಗೀಗ
ಬೇಗ ನೆನೆಯೆಲೊ ಪುರಂದರವಿಠ್ಠಲರಾಯನ ॥ ೪೮ ॥

ಹೃದಯದ ಮಲವನ್ನು ತೊಳೆಯಲರಿಯದೆ
ಉದಯದೊಳು ಮಿಂದು ಗಡಗುಟ್ಟುವರು ನೋಡು
ಮುದಿಗಪ್ಪೆ ಮಾಡಿದ ತಪ್ಪೇನು ಆದರಿಂದ
ಹೃದಯನಿರ್ಮಲರಾಗಿ ಸ್ನಾನವ ಮಾಡಿರೊ
ಪದುಮನಾಭ ಶ್ರೀ ಪುರಂದರವಿಠಲನ
ಪದವ ನೆನೆದರದು ಗಂಗಾಸ್ನಾನ ॥ ೪೯ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಹಾಡಿದರೆ ಎನ್ನೊಡೆಯನ ಹಾಡುವೆ
ಬೇಡಿದರೆ ಎನ್ನೊಡೆಯನ ಬೇಡುವೆ
ಒಡೆಯನಿಗೆನ್ನ ಒಡಲನು ತೋರುವೆ
ಬಡತನ ಬಿನ್ನಹ ಮಾಡುವೆ
ಪೊಡವೀಪತಿ ಶ್ರೀ ಪುರಂದರವಿಠಲನ
ಅಡಿಗಳ ಸೇರಿ ಬದುಕುವೆ || ೫೦ ||

ವಿಜಯದಾಸರ ಉಗಾಭೋಗಗಳು

ದಾಸನಾಗುವೆನೆಂದು ಆಶೆಮಾಡಲು ಬಲು ಕ್ಲೇಶವ ಬಡಿಸುವ । ಆ ।
ಭಾಸವ ನುಡಿಸುವ ನಾಶಮಾಡುವ ಸಕಲೈಶ್ವರ್ಯಗಳನ್ನೆಲ್ಲ
ಗ್ರಾಸವಾಸಕೆ ತರರೀಸನು ಪರರಿಂದ ಮೋಸವಾದ ಭವ
ಕ್ಲೇಶಪಾಶದಿ ಬಿಗಿದು ದ್ವೇಷವ ಮಾಡಿಸುವ ನೀಚರ ಕೈಯಿಂದ
ಕಾಸಿನವನ ಮಾಡಿ ಬೀಸಿ ಬಿಸಾಡುವ ಲೇಸು ಕೊಡುವ ನಮ್ಮ
ವಿಜಯವಿಠಲನು
ದಾಸನಾಗುವನಿಗೆ ಕ್ಲೇಶ ಬಡಿಸದೆ ಒಲಿಯ || ೧ ||

ರೆಕ್ಕೆ ಮುರಿದ ಪಕ್ಕಿ ಬಾಯಿ ಬಿಟ್ಟಂತೆ ಗಗನಕ್ಕೆ ಮೊಗವೆತ್ತಿ ಕೂಗುತಿಪ್ಪೆ
ಅಕ್ಕರೆ ನಿನಗಿನ್ನು ಬಾರದೇನೆಲೊ ದೇವಕ್ಕಳೊಡೆಯ ತ್ರಿಜಗದಲ್ಲಿ ನೀನು
ಠಕ್ಕಿಸಿ ಪೋಗುವೆಯಾ ಸರ್ವಜೀವಿಗಳೊಳ್ಯಾತಕ್ಕೆ ಎನ್ನೊಬ್ಬನ ಪುಟ್ಟಿಸಿದೆ
ಪಕ್ಕದಾಸನು ನಾನು ವಿಜಯವಿಠಲ ನಿನ್ನ ಲೆಕ್ಕಕ್ಕೆ ಮೊದಲಿಗ
ನೆನಿಪೆನಯ್ಯಾ || ೨ ||

ಧ್ವಜವಜ್ರಾಂಕುಶ ರೇಖಾಂಕಿತದ ಹರಿಯ ಪಾದಾಂ
ಬುಜವ ಸೇವಿಸುವ ಅಜ ಭವರ ಭಾಗ್ಯ ನೋಡು
ತ್ರಿಜಗವಂದ್ಯನ ಪಾಡು ಭಕುತಿಯ ನೀ ಬೇಡು
ಕುಜನರ ಮಾತ ಸುಡು ದುರ್ಜನರ ಸಂಗವ ಬಿಡು
ಗಜರಾಜನ ಕಾಯ್ದ ಕೃಷ್ಣನ ಧ್ಯಾನಮಾಡು
ವಿಜಯವಿಠಲನ ಬಿಡದೆ ಕೊಂಡಾಡು || ೩ ||

Sri Vidyabharathi Book Centre, Sringeri

CC-O. In Public Domain. Digitized by eGangotri

ಕೋಟಿಕೋಟಿಗೆ ನಿನ್ನ ನಾಮವೊಂದೇ ಸಾಕು ದಾಟಿಸುವದು ಭವಸಾಗರವ
ಬೂಟಕತನವಲ್ಲಿ ಹರಿದಾಸನಾದರೆ ತೋಟವಿಲ್ಲದೆ ಊಟಿಯೆತ್ತಿದಂತಕ್ಕು
ನೀಟಾಗದು ಕಣೋ ಎಂದಿಗು ಯಮಭಟರ ಕಾಟ ತಪ್ಪದು
ಕಾಶಿಯೊಳಗಿದ್ದರೂ
ಹಾಟಕಾಂಬರಧರ ವಿಜಯವಿಠಲರೇಯ ನಾಟಿಸುವದು ನಿನ್ನ ಚರಣದಲ್ಲಿ
ಮನಸು ‖ ೪ ‖

ದೂರದಲ್ಲಿದ್ದೀಯೇನೋ ಮೊರೆಯಿಟ್ಟು ಕೂಗಿದಾರು ಯಾರು ನೀನೆಂದು
ಕೇಳದಿಪ್ಪುದು ಧರ್ಮವೆ
ದರಿದ್ರುನ ಸೊಲ್ಲು ವ್ಯರ್ಥವೆಯಾಗಿದೆ ತಿರುಗಿ ಕೂಗಿದರಿಂದ ಏನಹುದೋ
ಧೀರ ನೀ ಬಧಿರನೊ ಕುರುಡನೊ ಕುಂಟನೊ ಕೀರುತಿಯೊಲ್ಲೆನೆಂಬ
ಮೌನವೇನೋ
ಧಾರುಣಿಯೊಳಗಿದ್ದವರ ನೋಡೆ ನಾನೊಬ್ಬ ಭಾರವೇನೋ ತಂದೆ
ಅಕಟಕಟಾ
ಸಾರಿದವರ ಪೊರೆವ ವಿಜಯವಿಠಲ ನಿನ್ನ ಕಾರುಣ್ಯತನಕೆ ನಾನೊಬ್ಬನೇ
ಎರವೇ ‖ ೫ ‖

ಕಾಲಕಾಲಕೆ ನಿನ್ನ ನಾಮಸ್ಮರಣೆಯನ್ನು ನಾಲಿಗೆಗೆ ಕೊಡು ಕಂಡ್ಯ
ನಾರಾಯಣ
ಬಾಳಿದೆನೋ ಭವದೊಳಗೆ ಆಶೆಗೆ ಬಿದ್ದು ಕಾಲವನೂ ಕಳೆದೆ ಕಮಲೇಶರಂಗ
ಲಾಲಿಸಯ್ಯ ಮಾತ ಕರುಣದಿಂದಲಿ ನಿನ್ನ ಆಳುಗಳ ಕೂಡ ನಾಲಗವನಿತ್ತು
ಕೀಳುಮತಿಯ ಬಿಡಿಸಿ ಕೀರ್ತನೆ ಮಾಡಿಸೊ ಕಾಲಿಗೆರಗುವೆನೊ ದುರಿತಾರಿ
ಪಾಲಸಾಗರಶಾಯಿವಿಜಯ ವಿಠಲ ನಿನ್ನ ಪಾಲಿಗೆ ಬಂದೆನೊ
ಪತಿತಪಾವನನೇ ‖ ೬ ‖

ಕ್ಷೇಮವೆ ಕೊಡು ಜೀಯ ಇವರಿಬ್ಬರಿಗೆ ನಿತ್ಯ ಕಾಮಿತಾರ್ಥವು ಎನಗೆ
ಇದೆಯಲ್ಲವೇ
ಭೂಮಿಯೊಳಗೆ ಮತ್ತೊಂದಪೇಕ್ಷೆಯಿಲ್ಲವೊ ಸ್ವಾಮಿ ಕರುಣದಿಂದ ಒಲಿದು
ನೋಡೋ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಮನೋಹರ ನಮ್ಮ ವಿಜಯವಿಠಲ ನಿನ್ನ ನಾಮದ ಬಲಕಿಂತ
ಅನ್ಯಬಲಗಳುಂಟೇ ॥ ೭ ॥

ನಾನೆ ನೀನೆಂದು ಒಮ್ಮೆಗಾದರು ನರ ಅನಂತಜನ್ಮದಲ್ಲಿ ನುಡಿದನಾಗೆ
ಶ್ವಾನಸೂಕರ ದುರ್ಯೋನಿಯಲ್ಲಿ ಪುಟ್ಟಿ ಮಾನಸಾಧನನಾಗಿ ಕಟ್ಟಕಡೆಗೆ
ನಾನಾ ಸಂಕಟಪಟ್ಟು ಹೀನಭೋಜನ ಮಾಡಿ ತಾನಿಳಿವ ನಿತ್ಯ ನರಕದಲ್ಲಿ
ಅನಂತಜನ್ಮಕ್ಕು ಸೇವಕನೆಂದನೆ ತಾನೊಲಿದು ಗತಿ ವಿಜಯವಿಠಲ-
ನೀವ ॥ ೮ ॥

ನಿನ್ನ ದಾಸನೆಂದೆನಿಸಬೇಕಾದರೆ ಭಂಗಪಡಲು ಬೇಕು ದಿನ ಪ್ರತಿದಿನದಲ್ಲಿ
ಅನ್ನವಸ್ತ್ರಕಿಲ್ಲದೆ ತಿರುಗಬೇಕು ಬೆನ್ನಬಿಡದೆ ರೋಗಂಗಳು ಬರಬೇಕು
ಪನ್ನಗಶಯನ ಶ್ರೀವಿಜಯವಿಠಲರೇಯ ಎನ್ನನೀಪರಿಯಲ್ಲಿ ಮಾಡಿದ
ಬಗೆ ಏನು ॥ ೯ ॥

ಎಲೊ ಎಲೊ ದುರಿತವೆ ಓಡು ನಿಲ್ಲಲಾಗದು ಎನ್ನ ಬಳಿಯಲ್ಲಿ ಮೊದಲಂತೆ
ತಲೆಬಲಿತು ಸೊಕ್ಕಿ ನಿಂದೆಯಾದರೆ ನಿನ್ನ ಕುಲಕೆ ಕ್ಷೇಮವಿಲ್ಲ ಕೈಲಿ ಕಡ್ಡಿಯನಿತ್ತೆ
ಮಲ್ಲರ ಗಂಡ ಶ್ರೀಕೃಷ್ಣ ಕಂಡರೆ ತಲೆಯ ಚಂಡಾಡುವ ಭೂತಬಲಿಯನೀವ
ತಿಳಿದುಕೊ ನಿನ್ನೊಳು ಮೊದಲಂತೆ ನಾನಲ್ಲ ಸುಲಭ ವಿಜಯವಿಠಲನೊಲಿದರೆ
ಭಯವಿಲ್ಲ ॥ ೧೦ ॥

ಗೋಪಾಲದಾಸರ ಉಗಾಭೋಗಗಳು

ನೀರೊಳಗೆ ನಿಂದು ಗಡಗುಟ್ಟಿ ನಾರುವಗೆ ಗಂಭೀರ ಕಸ್ತೂರಿ ಗಂಧ ಲೇಪದ
ಮದವೋ

ಭಾರ ಬೆನ್ನಿಲಿ ಪೊತ್ತು ಕಾಲ್ಮುದುರಿ ಮಲಗಿದಗೆ ಧೀರ ಶೇಷನ ಮೇಲೆ
ಶಯನ ಮದವೋ

ಮೋರೆಯಲಿ ನೆಲಕೆದರಿ ಬೇರ ಮೆದ್ದವಗೆ ಸಾರ ಷಡ್ರಸದ ಭೋಜನದ
ಮದವೋ

ಕರುಳನೇ ಕಿತ್ತು ವನಮಾಲೆ ಹಾಕಿದವಗೆ ಹಾರಪದಕಂಗಳ ಹಾಕಿಕೊಂಡಿಹ
ಮದವೋ

Sri Vidyabharathi Book Centre, Sringeri

 CC-O. In Public Domain. Digitized by eGangotri

ಮೂರಡಿಯ ಭೂದಾನವನು ಬೇಡಿದವಗಿಂದು ಸಾರಿದರಭೀಷ್ಟಗಳ
ಕೊಡುವ ಮದವೋ
ಧಾರುಣಿಯೊಳಗೆ ನಿಜ ನಾರಿಯುಳ ಕಳಕೊಂಡು ಮೂರು ಝಾವದ
ರಮೆಯ ಭೋಗದ ಮದವೋ
ಪೌರ ನಾರಿಯರಿಂದ ಬೈಸಿಕೊಂಡವಗೆ ವಾರಿಜಭವಾದಿಗಳು ವಂದಿಸುವ
ಮದವೋ
ಊರೆಲ್ಲ ನೋಡೆ ಬೆತ್ತಲೆನಿಂದವನಿಗಿಂದು ಚಾರುವಸ್ತ್ರಗಳುಟ್ಟು ಹೊದೆವ
ಮದವೋ
ಘೋರ ತುರಗವನೇರಿ ಕುಣಿಕುಣಿದಾಡಿದಗೆ ಚಾರುಸಿಂಹಾಸನದಿ ಕುಳಿತ
ಮದವೋ
ಆರಿಗೂ ತಪ್ಪದು ಹಿಂದಿನ ಭವಣೆ ಬಹು ದೂರ ವಿಚಾರಿಸೋ ನಾರಮಣನೇ
ಮೂರುದಿನದರಸುತನ ಸ್ಥಿರವೆಂದು ನೆಚ್ಚಿ ನೀ ಸೇರಿದವರನು
ಬಿಡುವದುಚಿತವೇನೋ
ಶ್ರೀರಂಗರಾಜ ಗೋಪಾಲವಿಠಲರಾಯ ಸಾರವನೆ ತಿಳಿದು
ಕೀರುತಿಯ ಪಡೆಯೋ ॥ ೧ ॥

ಮನೆಯ ಕಟ್ಟುವರುಂಟು ಮಡದಿ ಮಕ್ಕಳುಂಟು
ಧನವ ಗಳಿಸುವರುಂಟು ಫಳಿಸದಿದ್ದವರುಂಟು
ದನವ ಕಟ್ಟುವರುಂಟು ದಾನಮಾಡುವರುಂಟು
ಋಣವ ಕೊಟ್ಟವರುಂಟು ಋಣ ಮಾಡಿದವರುಂಟು
ಮಣೆಗಾರತನವಿದರೊಳೆಂದಿಗೂ ಬೇಡ
ಮುನಿಗಳು ಸಹಿತಾಗಿ ಮೋಸಹೋದರು ಇದಕೆ
ಗುಣಪೂರ್ಣ ಚಲ್ವ ಗೋಪಾಲವಿಠಲ ನಿನ್ನ
ಗುಣಚಿಂತನೆಯೊಳಿಡು ಇಷ್ಟೆ ಸಾಕು ॥ ೨ ॥

ಘೋರಿಸುವ ದಾರಿದ್ರ್ಯ ದೂರಮಾಡಿದೆ ನಿನ್ನ
ಚಾರುಚರಣಾರವಿಂದವನೆ ಕೂಡಿ
ಹಾರೈಸಿದ ಬಯಕೆ ಪೂರೈಸಿದೆಯೆ ತಾಯೆ
ಕಾರುಣ್ಯಕೇನೆಂಬೆ ಕಮಲಾಲಯೇ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾರುವೆನು ವರದ ಗೋಪಾಲವಿಠ್ಠಲನ
ಕಾರುಣ್ಯಪಾತ್ರನ್ನ ಮಾಡಿದೆಯೆ ಇಂದು ॥ ೩ ॥

ಹಲ್ಲಣಿಲ್ಲದ ಕುದುರೆ ಹತ್ತಿ ಹಾರಿಸಿದಂತೆ
ಬೆಲ್ಲ ಹಾಕದೆ ಪರಮಾನ್ನವ ತಿಂದಂತೆ
ಇಲ್ಲದೆ ಹುಟ್ಟು, ಹರಿಗೋಲನೇರಿದಂತೆ
ಸೊಲ್ಲಿಗೆಯು ಬುಡದಲ್ಲಿ ಅಳೆದಂತೆ ಸಾಧನೆ
ಎಲ್ಲಾ ಒಂದೇ ಎಂಬ ಜ್ಞಾನವುಂಟಾದರೆ
ಬೆಲ್ಲ ಬೇವು ಆಗುವದು ಅವನಿಗೆ ನೋಡು
ಮಲ್ಲಮರ್ದನ ನಮ್ಮ ಗೋಪಾಲವಿಠಲನ
ಒಲ್ಲದವ ಕಾಣಸೊ ಗತಿಯೆಂದಿಗಾದರು ॥ ೪ ॥

ಇತರ ದಾಸರ ಉಗಾಭೋಗಗಳು

ಕ್ಷೀರಸಾಗರಕೆ ಶ್ರೀಹರಿ ಬಂದಂತೆ
ಪ್ರಹ್ಲಾದನ ಮನೆಗೆ ನರಸಿಂಹ ಬಂದಂತೆ
ವಿದುರನ ಮನೆಗೆ ಶ್ರೀಕೃಷ್ಣ ಬಂದಂತೆ
ಗೋಪೇರ ಮನೆಗೆ ಗೋವಿಂದ ಬಂದಂತೆ
ಲಕುಮಿಪತಿವಿಠಲ ಬರಲೀ ನಿತ್ಯ
ಎನ್ನ ಮನಮಂದಿರದೊಳಿರಲಿ ॥ ೧ ॥

ಉಡುಪಿಯ ಕೃಷ್ಣನೆ ಸಡಗರ ನಿನಗೇಕೆ
ಬಡವನಾದವನ ಭವ ಮಡುವಿನೊಳು ನೂಕಿ
ಮಿಡುಕಿಸಿ ನೋಡುವುದು ತರವೇನೊ ಹರಿಯೆ
ಒಡಲಿಗೋಸುಗ ನಿನ್ನ ಬೇಡಬಂದವನಲ್ಲ
ದೃಢ ಭಕುತಿ ಜ್ಞಾನಗಳ ಕೊಟ್ಟು ರಕ್ಷಿಸೊ ಧೊರೆಯೆ
ಕಡಲಶಯನ ನಮ್ಮ ಮುದ್ದುಮೋಹನವಿಠಲ ॥ ೨ ॥

ಹರಿಯ ಭಜಿಸಬೇಕು ಮನಮುಟ್ಟಿ
ಭಜಿಸಿದರೆ ಅವನ ಕಾರ್ಯ ಗಟ್ಟಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಲ್ಲದಿದ್ದರೆ ತಾಪತ್ರಯ ಬೆನ್ನಟ್ಟಿ
ಸದೆಯುವದು ಹೆಡಮುರಿಗೆ ಕಟ್ಟಿ
ಯೋಗೀಂದ್ರವಿಠಲನ ಕರುಣಾದೃಷ್ಟಿ
ಯಾರೀಗೆ ದೊರೆತರೆ ಅವನೆ ಜಗಜಟ್ಟಿ || ೩ ||

ಅಲ್ಲದ ಕರ್ಮವ ಮಾಡದಿರು
ಅಚ್ಯುತನಾಮವ ಮರೆಯದಿರು
ಪಾರವಧುಗಳ ನೀ ನೋಡದಿರು
ಪರಲೋಕಕೆ ದೂರಾಗದಿರು
ನೋಡುವದೇ ಹರಿಮೂರ್ತಿಯೆನ್ನು
ಕೇಳುವದೇ ಹರಿಕೀರ್ತಿಯೆನ್ನು
ಮಾಡುವದೇ ಸಜ್ಜನ ಸಂಗವೆನ್ನು
ಯೋಗೀಂದ್ರವಿಠಲ ಗತಿಯೆನ್ನು || ೪ ||

ನೆನೆಯೆ ಮನವನಿತ್ತೆ ಪೊಗಳೆ ನಾಲಿಗೆಯಿತ್ತೆ
ಬೆಲೆಯಿಲ್ಲದಾ ನಿನ್ನ ನಾಮಗಳಿತ್ತೆ
ನೋಡೆ ಕಂಗಳನಿತ್ತೆ ಕೇಳೆ ಕಿವಿಗಳನಿತ್ತೆ
ಪರಿಚಯ ಮಾಡಲು ತನುವಿತ್ತೆ
ಬಾಲ್ಯ ಯವ್ವನವಿತ್ತೆ ಹರಿದಿನ ವ್ರತವಿತ್ತೆ
ಇನ್ನು ನಿನ್ನ ಕರುಣಕೆ ಸರಿಯುಂಟೇ
ಅಜಮಿಳ ಅಣ್ಣನೆ ಧ್ರುವರಾಯ ತಮ್ಮನೆ
ರುಕುಮಾಂಗದ ನಿನ್ನ ಮೊಮ್ಮಗನೇ
ಆ ದಿನ ಅವರಿಗೆ ಬೇಡಿದನಿತ್ತೆ
ಈ ದಿನ ಇಲ್ಲದೆ ಹೋಗಿತ್ತೇ
ಅಂದು ಸಿರಿವಂತನೆ ಇಂದು ನೀ ಬಡವನೆ
ಎಂದೆಂದಿಗೂ ಲಕ್ಷ್ಮೀಪತಿ ನೀನಲ್ಲವೆ
ಇದು ಏನು ವಿನೋದ ಯೋಗೀಂದ್ರವಿಠಲ
ನಿನ್ನ ಮನದ ಚಿತ್ರಕೆ ನಮೋಯೆಂಬೆ || ೫ ||

Sri Vidyabharathi Book Centre, Sringeri

CC-O. In Public Domain. Digitized by eGangotri

ನೀರಿನ ಮೇಲಿನ ಗುಳ್ಳೆಯಂತೆ
ಈ ದೇಹ ನಿಮಿಷವೊ ನಿಮಿಷಾರ್ಧವೋ
ಹಾರಲ್ಯಾತಕೆ ಸತಿಸುತರಿಗೆ ಧನಕಾಗಿ
ಹಾರಲ್ಯಾತಕೆ ಗೇಣು ಹೊಟ್ಟೆಗಾಗಿ
ಯಾರಿಗ್ಯಾರು ಯಮದೂತರು ಎಳೆದಾಗ
ಯಾರು ಬಿಡಿಸುವರಿಲ್ಲ ರಾಮಕೃಷ್ಣ || ೬ ||

ವರ ಧ್ರುವನವತಾರ ಶ್ರೀಪಾದರಾಯರು
ಸಿರಿರಂಗವಿಠಲನ ಉಪಾಸಕರು
ತರಳ ಪ್ರಹ್ಲಾದನೆಂದೆನಿಸಿ ಶೇಷಾವೇಶ
ಗುರು ವ್ಯಾಸರಾಯರೆ ಕೃಷ್ಣೋಪಾಸಕರು
ಸುರಮುನಿಯವತಾರವೆನಿಸಿದವರು ಶ್ರೀ
ಪುರಂದರದಾಸರು ವಿಠಲೋಪಾಸಕರು
ಧರೆಯೊಳಿವರ ನರರೆನ್ನುವರ ಬಿಡದೆ
ನರಕಕ್ಕೈದಿಸುವ ಗುರುಮಧ್ವಪತಿವಿಠಲ || ೭ ||

ಈ ಕಾಲದಲ್ಲಿ ಉಪಲಬ್ಧವಿರುವ ಸುಮಾರು ಐನೂರು ಉಗಾಭೋಗಗಳಲ್ಲಿ ಮೇಲ್ಕಂಡ ನೂರನ್ನು ಮಾದರಿಗಾಗಿ ಕೊಟ್ಟಿದೆ. ಈ ನೂರು ಐನೂರರಲ್ಲಿ ಆರಿಸಿ ತೆಗೆದವಲ್ಲ. ಒಂದು ಕ್ರಮವನುಸರಿಸಿ ಕೊಟ್ಟವುಗಳೂ ಅಲ್ಲ. ಪ್ರಾಸವಿಲ್ಲದ ಅಂತ್ಯಾಕ್ಷರ ನಿಯಮಗಳಿರುವವು ಕೆಲವಿದ್ದರೆ, ಪ್ರಾಸಬದ್ಧವಾಗಿರುವವು ಹಲವು ಇವೆ. ಸರ್ವ ಲಘುಗತಿಯಲ್ಲಿಯಾಗಲಿ ಅಟ್ಟತಾಳದ ಗತಿಯಲ್ಲಾಗಲಿ ಜಂಪತಾಳದ ಗತಿಯಲ್ಲಾಗಲಿ ಹೊಂದಿಸಿ ಹಾಡಲು ಅನುಕೂಲವಾಗಿವೆ. ಭಕ್ತಿಪಂಥದಲ್ಲಿ ಭಕ್ತನು ಸ್ವಾಮಿಗೆ ಮೊರೆಯಿಡುವ ಆರ್ತಭಾವವು ಈ ಉಗಾಭೋಗಗಳಲ್ಲಿ ಎದ್ದು ಕಾಣುತ್ತಿದೆ. ಶ್ರೀಮದ್ಭಾಗವತದಲ್ಲಿ ಹೇಳಿರುವ—

ಅಹಂ ಹರೇ ತವ ಪಾದೈಕಮೂಲ ದಾಸಾನುದಾಸೋ ಭವಿತಾಸ್ಮಿ ಭೂಯಃ
ಮನಃ ಸ್ಮರೇತಾಸುಪತೇರ್ಗುಣಾಂಸ್ತೇ ಗೃಣೀತ ವಾಕ್ಕರ್ಮ ಕರೋತು ಕಾಯಃ ||೨೪||

ನ ನಾಕಪೃಷ್ಠಂ ನ ಚ ಪಾರಮೇಷ್ಠ್ಯಂ ನ ಸಾರ್ವಭೌಮಂ ನ ರಸಾಧಿಪತ್ಯಂ
ನ ಯೋಗಸಿದ್ಧೀರಪುನರ್ಭವಂ ವಾ ಸಮಂಜಸತ್ವಾ ವಿರಹಸ್ಯ ಕಾಂಕ್ಷೇ || ೨೫ ||

Sri Vidyabharathi Book Centre, Sringeri

CC-O. In Public Domain. Digitized by eGangotri

ಅಜಾತಪಕ್ಷಾ ಇವ ಮಾತರಂ ಖಗಾಃ ಸ್ತನ್ಯಂ ಯಥಾ ವತ್ಸತರಾಃ ಕ್ಷುಧಾರ್ತಾಃ
ಪ್ರಿಯಂ ಪ್ರಿಯೇವ ವ್ಯುಷಿತಂ ವಿಷಣ್ಣಾ ಮನೋಽರವಿಂದಾಕ್ಷ ದಿದೃಕ್ಷತೇ ತ್ವಾಂ ॥೨೬॥
(ಸ್ಕಂಧ VI–ಅಧ್ಯಾಯ ೧೧)

"ಓ ಹರಿಯೆ, ನಿನ್ನ ಪಾದಮೂಲದಲ್ಲಿಯೇ ದಾಸ್ಯಭಾವವುಳ್ಳ ದಾಸರಿಗೆ ದಾಸನಾಗಿ ನಾನು ಹುಟ್ಟುತ್ತೇನೆ. ಪ್ರಾಣಪತಿಯೇ, ನನ್ನ ಮನಸ್ಸು ನಿನ್ನ ಗುಣಗಳನ್ನು ಸ್ಮರಿಸುತ್ತಿರಲಿ, ನಾಲಿಗೆ ಗಾನಮಾಡುತ್ತಿರಲಿ, ದೇಹವು ಪೂಜಿಸುತ್ತಿರಲಿ; ನಿನ್ನನ್ನಗಲಿರುವ ಸ್ವರ್ಗ, ಪಾರಮೇಷ್ಠ್ಯ ಪದ, ಸಾರ್ವಭೌಮ ಪದ, ರಸಾತಳಾಧಿಪತ್ಯ, ಯೋಗಸಿದ್ಧಿ, ಇವು ಒಂದೂ ಬೇಡ. ರೆಕ್ಕೆ ಬರದ ಹಕ್ಕಿಮರಿಗಳು ತಾಯನ್ನು ಬಯಸುವಂತೆ, ವತ್ಸಗಳು ಗೋಮಾತೆಯ ಕ್ಷೀರವನ್ನು ಬಯಸುವಂತೆ, ಪತಿವ್ರತೆಯು ದೇಶಾಂತರಗತನಾದ ಪತಿಯನ್ನು ಹಂಬಲಿಸುವಂತೆ, ಕಮಲಾಕ್ಷನಾದ ನಿನ್ನನ್ನು ನೋಡಲು ನನ್ನ ಮನಸ್ಸು ಹಾತೊರೆಯುತ್ತಿದೆ" ಎಂಬ ಮಾತುಗಳಂತೆ ಹರಿದಾಸರು ಹಂಬಲಿಸುತ್ತಿರುವುದು ಕಂಡುಬರುತ್ತಿದೆ.

ಈ ಬಗೆಯ ಆರ್ತಭಾವವನ್ನು ಭರತಖಂಡದ ಪ್ರತಿ ಪ್ರಾಂತ್ಯಗಳ ಹರಿದಾಸರಲ್ಲಿ ಕಾಣಬಹುದು. ಬಂಗಾಳದ ಚೈತನ್ಯ ಮಹಾಪ್ರಭುವಿನ ಮಾತು ಹೀಗೆ; ಸಂಯುಕ್ತ ಪ್ರಾಂತ್ಯದ ತುಲಸೀದಾಸ, ಕಬೀರದಾಸರ ಮಾತು ಹೀಗೆ; ಮಹಾರಾಷ್ಟ್ರದ ತುಕಾರಾಮರ ಮಾತು ಹೀಗೆ; ತಮಿಳುನಾಡಿನ ಆಳ್ವಾರರ ಮಾತು ಹೀಗೆ. ನೀನು ಈಶ, ನಾನು ದಾಸ; ಎಂಬುದಕ್ಕಿಂತ ಮತ್ತೊಂದು ಮಾತು ಭಕ್ತರಿಗೆ ರುಚಿಸುವುದಿಲ್ಲ. ಭಕ್ತಿಯಲ್ಲಿ ಐಕ್ಯವಿರುವದಿಲ್ಲ. ಜೀವ ಬ್ರಹ್ಮೈಕ್ಯದ ಕಡೆಗೆ ದಾಸರ ಮನಸ್ಸು ಹರಿಯುವುದಿಲ್ಲ. ತುಕಾರಾಮ—"ನಾನು ನೀನೆಂಬ ಜ್ಞಾನಕ್ಕೆ ಪುರಸ್ಕಾರವಿರದಿರಲಿ. ನೀನು ನನ್ನನ್ನು ದಂಡಿಸು, ಬಹಿಷ್ಕರಿಸು; ನಾನು ನಿನ್ನ ದಾಸ, ನೀನು ನನ್ನ ಸ್ವಾಮಿ. ನನಗೂ ನಿನಗೂ ಭೇದವೇ ಇರಲಿ, ಅದು ನಾಶವಾಗದಿರಲಿ, ಅದು ಸ್ಥಾಪಿತವಾಗಲಿ, ನಾನು ನೀನಾದರೆ ನಿನ್ನ ಸೇವಕನೆಂಬ ಬಿರುದು ಧರಿಸಲು ನನಗೆಲ್ಲಿರುತ್ತದೆ? ಆಗ ನನ್ನ ನಿನ್ನ ಪ್ರೇಮವೇ ಇರುವುದಿಲ್ಲವಲ್ಲಾ!" ಎಂದು ಮೊರೆಯಿಟ್ಟಿರುತ್ತಾರೆ. ಭಕ್ತನ ನಂಬಿಕೆ ಹೀಗಿದೆ. ಶ್ರೀಮದ್ಭಾಗವತದಲ್ಲಿ ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ, ಆತ್ಮನಿವೇದನಗಳೆಂಬ ನವವಿಧ ಭಕ್ತಿಗಳಿದ್ದರೆ,

Sri Vidyabharathi Book Centre, Sringeri

CC-O. In Public Domain. Digitized by eGangotri

ಭಕ್ತಿಸೂತ್ರಕಾರರಾದ ನಾರದರು ಗುಣಮಾಹಾತ್ಮ್ಯಾಸಕ್ತಿ, ರೂಪಾಸಕ್ತಿ, ಪೂಜಾಸಕ್ತಿ, ದಾಸ್ಯಾಸಕ್ತಿ, ಸ್ಮರಣಾಸಕ್ತಿ, ಸಖ್ಯಾಸಕ್ತಿ, ಕಾಂತಾಸಕ್ತಿ. ವಾತ್ಸಲ್ಯಾಸಕ್ತಿ, ಆತ್ಮನಿವೇದನಾಸಕ್ತಿ, ತನ್ಮಯತಾಸಕ್ತಿ, ವಿರಹಾಸಕ್ತಿ ಗಳೆಂಬ ಏಕಾದಶವಿಧ ಭಕ್ತಿಯನ್ನು ನಿರೂಪಿಸಿರುತ್ತಾರೆ. ಚೈತನ್ಯ ಪಂಥಿಗಳು — ವೈಧೀಭಕ್ತಿ, ಶುದ್ಧಭಕ್ತಿ, ರಾಗಾನುಗಾಭಕ್ತಿ ಈ ಮೂರೂ ಒಂದೊಂದಾಗಿ ಬೆಳೆದ ಈಶ್ವರೀಪ್ರೇಮವನ್ನು 'ರತಿ'ಯೆಂದು ಕರೆದು, ಮತ್ತದರಲ್ಲಿ ಶಾಂತ, ದಾಸ್ಯ, ಸಖ್ಯ, ವಾತ್ಸಲ್ಯ, ಮಧುರ ಭಕ್ತಿಗಳೆಂದು ಪಂಚ ಪ್ರಕಾರಗಳನ್ನು ಏರ್ಪಡಿಸಿರುತ್ತಾರೆ. ಇವುಗಳಲ್ಲಿ ಮಧುರಭಕ್ತಿ ಎಲ್ಲಕ್ಕೂ ಹಿರಿದಾದದ್ದು. ಪರಮಾತ್ಮ ಪತಿ, ಜೀವಾತ್ಮ ಸತಿ; ಎಂದು ಭಕ್ತಿಯನ್ನು ಬೆಳೆಸುವುದು ಮಧುರಭಕ್ತಿ. ಈ ಮಧುರಭಕ್ತಿಯನ್ನು ತಮಿಳುನಾಡಿನ ಆಳ್ವಾರರು ಎಷ್ಟೋ ಕಾಲದ ಹಿಂದೆ ಬೆಳೆಸಿ ದಿವ್ಯಪ್ರಬಂಧಗಳನ್ನು ರಚಿಸಿರುತ್ತಾರೆ. ಕರ್ಣಾಟಕದ ಹರಿದಾಸರು ನಾಯಕ-ನಾಯಕೀ ಭಾವದಿಂದ ಅನುಸಂಧಾನ ಮಾಡಿ ನೂರಾರು ದೇವರ ನಾಮಗಳನ್ನು ಹಾಡಿರುತ್ತಾರೆ. ಸ್ವಾಮಿ ಪತಿ, ನಾನು ಸತಿ, ಎಂದು ವಿವಿಧ ಭಂಗಿಗಳಿಂದ ಶ್ರೀಕೃಷ್ಣನನ್ನು ಕೊಂಡಾಡಿ ಪಾರವಶ್ಯಹೊಂದಿದ ಹೆಳವನಕಟ್ಟೆ ಗಿರಿಯಮ್ಮನ ಹಾಡುಗಳು, ಚಿತ್ತೂರಿನ ರಾಣಿ ಮೀರಾಬಾಯಿಯ ಹಾಡುಗಳನ್ನು ಜ್ಞಾಪಕಕ್ಕೆ ತರುತ್ತವೆ. ಉಭಯರ ಚಿತ್ರಗಳೂ ಕಣ್ಣುಮುಂದೆ ನಿಂತಂತಾಗುತ್ತವೆ. ಮಧುರ ಭಕ್ತಿ ಯಲ್ಲಿ ಪದವಿಾರಿ ರೀತಿನೀತಿಗಳು ಕೆಡದಂತೆ ರಸಪೋಷಣೆ ಮಾಡಿಕೊಂಡು ಹಾಡಿರುವ ಹರಿದಾಸರ ದೇವರ ನಾಮಗಳು ತುಲನಾತ್ಮಕ ದೃಷ್ಟಿಯಿಂದ ನೋಡಿದರೆ ಆಶ್ಚರ್ಯವನ್ನುಂಟುಮಾಡುತ್ತವೆ.

ಮಧುರಭಾವ

ವ್ಯಾಸರಾಯ ಸ್ವಾಮಿಗಳು ಬಾಲಸಂನ್ಯಾಸಿಗಳು. ವೇಂಕಟ ಪರ್ವತ ವನ್ನು ಪಾದದಿಂದ ಸ್ಪರ್ಶಿಸಬಾರದೆಂಬಷ್ಟು ಭಯಭಕ್ತಿಗಳಿಂದ ತೆವಳುತ್ತಲೇ ಪರ್ವತಾರೋಹಣ ಮಾಡಿದರೆಂಬ ಪ್ರಸಿದ್ಧಿಯುಳ್ಳವರು. ಅನೇಕ ಶಾಸ್ತ್ರ ಗ್ರಂಥಗಳನ್ನು ರಚಿಸಿ ತರ್ಕ ವ್ಯಾಕರಣ ವೇದಾಂತಾದಿ ಶಾಸ್ತ್ರಗಳಲ್ಲಿ ಅಪ್ರತಿಮ ಪಾಂಡಿತ್ಯವುಳ್ಳವರೆಂದು ಪ್ರಖ್ಯಾತಿಪಡೆದವರು. ವಿಜಯನಗರ ಸಾಮ್ರಾಜ್ಯ ದೇವತೆಯಂತಿದ್ದು ಪ್ರತಿಯೊಂದು ರಾಜಕಾರ್ಯಗಳಲ್ಲೂ ಸಾರ್ವಭೌಮನಾದ ಕೃಷ್ಣದೇವರಾಯನಿಗೆ ಸಲಹೆ ಕೊಡುತ್ತಿದ್ದವರು. ಇಂಥವರು ಮಧುರ

Sri Vidyabharathi Book Centre, Sringeri

CC-O. In Public Domain. Digitized by eGangotri

ಭಕ್ತಿಯ ಪರಮಾವಧಿಯ ಆನಂದದಲ್ಲಿ ಪರವಶರಾಗಿ ತಮ್ಮನ್ನು ರಾಧೆಯೆಂದು ಅನುಸಂಧಾನ ಮಾಡಿಕೊಂಡು, ಪರಮಾತ್ಮನನ್ನು ಮಾಧವನೆಂದೂ ರಂಗನೆಂದೂ ಕರೆಯುತ್ತ ಭಾವಾವೇಶದಲ್ಲಿ ಹಾಡಿದ ದೇವರ ನಾಮ ಈ ಕೆಳಗೆ ಕೊಟ್ಟಿರುವುದು. ಆರಾಧ್ಯದೇವತೆಯಾದ ಶ್ರೀ ಗೋಪಾಲಕೃಷ್ಣನನ್ನು ರತ್ನಮಂಟಪದಲ್ಲಿ ಶೃಂಗರಿಸಿ ಪೂಜಿಸಿ ಆರತಿಯೆತ್ತಿದ ಸಮಯ! 'ನೃತ್ಯಂ ಸಮರ್ಪಯಾಮಿ ಗೀತಂ ಸಮರ್ಪಯಾಮಿ' ಎಂದು ಉಪಚಾರಗಳನ್ನು ಮಾಡುವ ಸನ್ನಿವೇಶ! ಪುರಂದರದಾಸರು, ಕನಕದಾಸರು, ಮಧ್ವಪತಿ ಮೊದಲಾದ ಹರಿದಾಸರು ಪಕ್ಕಮೇಳದಲ್ಲಿ ಸಜ್ಜಿತರಾಗಿದ್ದಾರೆ. ಗೋವಿಂದ ಭಿಕ್ಷು, ವಿಷ್ಣುತೀರ್ಥ (ವಿಜಯೀಂದ್ರ), ವಾದಿರಾಜ ಮೊದಲಾದ ಇಪ್ಪತ್ತು ನಾಲ್ಕು ಜನ ಯತಿಗಳು ಮಹಾಸಭೆಯಲ್ಲಿ ಕುಳಿತಿದ್ದಾರೆ. ಪಂಡಿತಮಂಡಲಿಗೆಲ್ಲಾ ಅಧ್ಯಕ್ಷನೋ ಎಂಬಂತೆ ಸೋಮನಾಥ ಕವಿಯು ಮುಂಭಾಗದಲ್ಲಿ ಸಮೀಪದಲ್ಲಿ ಮುಕುಳಿತಹಸ್ತನಾಗಿದ್ದಾನೆ. ವ್ಯಾಸರಾಯರು ನರ್ತನಕ್ಕೆ ಮೊದಲ ಹೆಜ್ಜೆಯಿಟ್ಟಕೂಡಲೇ ಅವರಿಗೆ ಭಾವೋದ್ರೇಕವಾಗಿದೆ. ನರ್ತನ ಮಾಡುತ್ತಾ ವಾದ್ಯಗತಿಗೆ ತಕ್ಕಂತೆ—

ರಾಗ : ಯದುಕುಲ ಕಾಂಬೋದಿ — ತಾಳ : ಆದಿ

|| × ಸ ಸ ಧ ಧ ಪ ಪಾಪಮ | ಮಪಮಃಧ ಪಮಪಾ | ಮಗರೀಸರೀ ರಿಸ ||
ರಂ ಗ . ಬಾ. ರ . . ಬಾ. . . . . . ಲೇ . . . . ಕು.
|| ಸ ರಿ ಮ ಗ ರಿ ಸ ಸರಿಮಗ | ರಿಸ ಸಾ | . . . .
ರ ಂ ಗ . ನ ಯ ನೇ . . . ಕೇ. ಳೀ . . . . || ಪ ||
|| × ರಿಮಗಾಸಾ ಸಾ ಸಾ | ರಿ ಮ ಗ ಮ ಪಾ | ಪಾಧಸ ಧಪಪಮ ||
ಹೀಂ ಗಿ . ರ ಲಾ ರೆ . ನೇ . . ಹ ರಿ . ಯ. . .
|| ೯ ಪಮಪಧಸಾ ಧಪ ಪಮಮಾ | ಗಮ ಗಮಪಾ | ಪಾ ಪಾ ||
. ಸಂ ಗ . . ಬಿ . ಟ್ಟ . . ಮೋ. . . . ಲೇ ಈ
|| ಪಮ ಪಧಸಾದಾ ಧಪ ಪ ಮ ಮಾ | ಗಮ ಗಮಪಾ | ಪಾಪಪ ||
. . ತಂಗಾ . ಳಿ . ಯ . . ವೇ . . . . ಳಿ ಗಿಳಿ
|| ಮ ಪಧಧಾಸದ ಧಪಮಮ | ಗಮ ಗಮಪಾ | ಪಾ ರಿಮಗಾ ||
. ಭೃಂಗ . . . ರ . . . . ಪ . . . . . ಬಳ

Sri Vidyabharathi Book Centre, Sringeri

CC-O. In Public Domain. Digitized by eGangotri

|| ಸಾ ಸರಿರೀಪಮ ಮಾಮಾ | ಮಪ ಮಪಧಾ | ಧಾ ಧಪ ಪಮಪಮ ||
. ದಿಂಗ . . ಳಿ ನ ಥಾ . . . . ಳಿ . . ಆ . . .
|| ಪಮ ಪಧಧಾರಿಸ ಧಪಾ ॰ ಪಮಗಾ | ರಿಮಗಸ | ಸರಿಮಪ ಪಧಸಾ ||
. . ನಂಗ . . ಗಿ . ದು . . ವೇ . . . ಳೀ . . . . . || ಅ ||
|| X ಸ ಸ ಧ ಧ ಪ ಪಮಗಾ | ಗ ರಿ ರೀ ರಿಗಾಸ | ಸಾ ಸಾಗರಿ ||
ಅನ್ನ . ಉ ದ ಕ . . ತೊ . ರೆ ದೇ . . . ಆ . .
|| ರೀ ರಿ ಪ ಪ ಮ ಗಾ ರಿ ಸ ಸ ರಿ ಮ ಗ | ರಿ ಸ ಸಾ | ॰ ॰ ॰ ॰ ||
. ಚಿ . ನ್ನ . . ದೊ ಡ ವೆ . . . ಮ ರೆ ದೆ . . . .
|| ॰ ಸ ರಿ ಮ ಮಾ ಮಾ | ಗ ಮ ಪಾ | ಪ ಧ ಧ ಪ ಪ ಮ ||
. ಬಿ ನ್ನ . ಣಿಂ ದ ಉ ಡು ವ ತೊ ಡು ವೊ . . .
|| ॰ ಪಾ ಧಾ ಸಾ ಧ ಧ ಪ ಪ ಮ ಮಾ | ಗ ಮ ಗಾ ॰ ಮ | ಪಾ ॰ ॰ ||
. ಬ ಣ್ಣ . . ದೊಸ ನ . . ಜ ರಿ ದೇ . . . .
|| ॰ ಸ ಸ ಧ ಧಪಪಮ | ಮ ಪ ಮ ಧ ಪಮಗಾ ಮಗರಿಸ ರೀ ||
. ಸ ಣ್ಣ . ವ . ಳ . ಮಾ . . . . . . ಡೀ . . . ಆ
|| ರಿ ರಿಪಪಮಗಾ ರಿ ಸ ಸರಿಮಗ | ರಿ ಸ ಸಾ | ॰ ॰ ॰ ॰ ||
. ರ . ನ್ನೆ . . ಯ . ಳ . . . ಕೂ . ಡಿ . . . .
|| ॰ ಸ ರಿ ಮ ಮಾ ಮಾ | ಗಮ ಗಮಪಾ | ಪಧ ಧಪಪಮ ||
. ಎ ನ್ನ . ಮೇ ಲೆ ಕೋ ಪ . . ದಿಂ ದ . . .
|| ॰ ಪಾ ಧಾ ಸ ಧ ಧ ಪ ಪಮಮಾ | ಗ ಮ ಗಮಪಾ | ಪಾ ॰ ॰ ||
. ಕ ಣ್ಣು . . ತೆ ರೆ ದು . . ನೋ . . . . ಡಿ . .
|| ॰ ಪಾ ಧಾ ಸ ಧ ಧ ಪ ಪಮಮಾ | ಗ ಮ ಗಮಪಾ | ಪಾ ಪಾ ||
. ಕ ಣ್ಣು . . ತೆ ರೆ ದು . . ನೋ . . . . ಡೀ ಕಾ
|| ॰ ಪಾ ಧಾ ಸ ಧ ಧ ಪ ಪ ಮ ಮಾ | ಗಮ ಗಮಪಾ | ಪಾ ॰ ॰ ||
. ಠಿ ಣ್ಯಾ . . ಹೃ ದ ಯ . . ಮಾ . . . . ಡೀ . .
|| ॰ ಪಾ ಧಾ ಸ ಧ ಧ ಪ ಪಮಮಾ | ಗಮ ಗಮಪಾ | ಪಾ ಪ ಪ ||
. ಮ ಣ್ಣು . . ಕೆ ರೆ ದೀ . . ಡಾ . . . ಡೀ ದು ರು

Sri Vidyabharathi Book Centre, Sringeri

 CC-O. In Public Domain. Digitized by eGangotri

|| ೯ ಪಾ ಧಾ ಸ ಧ ಧ ಪ ಪ ಮ ಮಾ | ಗಮ ಗಮಪಾ | ಪಾ ಪ ಪ ||
. ಳ ನ್ನ . . ಉ ದು ರ . . ತೋ . . . ಡೀ ಬ ಲಿ
|| ೯ ಪಾ ಧಾ ಸ ಧ ಧ ಪ ಪ ಮ ಮಾ | ಗಮ ಗಮಪಾ | ಪಾ ಪಾ ||
. ಯ ನ್ನೆ . . ದಾ . ನ . ವ ಬೇ . . . . ಡೀ ತಾ
|| ೯ ಪಾ ಧಾ ಸ ಧ ಧ ಪ ಪ ಮ ಮಾ | ಗಮ ಗಮಪಾ | ಪಾ ಪಾ ||
. ತ ನ್ನೊ . . ಳು . ತಾ ಕ ಡಿ ದಾ. . . . ಡಿ ಆ
|| ೯ ಪಾ ಧಾ ಸ ಧ ಧ ಪ ಪ ಮ ಮಾ | ಗ ಮ ಗಮಪಾ | ಪಾ ಪ ಪ ||
. ರ ಣ್ಯ . . ವಾ. ಸ . ವ ಮಾ . . . . ಡಿ ಬ ಲು
|| ೯ ಪಾ ಧಾ ಸ ಧ ಧ ಪ ಪಮಮಾ | ಗಮ ಗಮಪಾ ಪಾ ಮಗಗಾ
. ಬ ನ್ನ . . ಬ . ಟ್ಟು . . ಓ . . . ಡಿ ಪ . ರ
|| ಸಾ ಸ ರಿ ರೀ ಪ ಮ ಮಾಮಾ | ಮ ಪ ಮಪಧಾ ಧಪ ಪಾಧಪ
. ಹೆ . ಣ್ಣು . . ಗ ಳ ಕೂ . . . . ಡಿ . ಕ ಲಿ .
|| ಪ ಮ ಪಾ ಧಾ ಸ ಧ ಪಾ ಪಮಗಾ | ರೀ ಮ ಗ ಸಾ |
. . ಯ ನ್ನೆ . . ಸಂ ಹಾ . ರ ಮಾ . . .
ಸರಿಮಪ ಪಧಮಾ || ೧ ||
ಡಿ . . . . . .

ಯುಗಳ ಸ್ತನಗಳ ಮೇಲೇ | ಆ | ಮುಗುಳು ಮಲ್ಲಿಗೆ ಮಾಲೆ
ಬಗೆಬಗೆ ಅಲಂಕಾರದಿಂದ | ಸೊಗಸಿಲಿದ್ದ ವೇಳೆ
ಖಗವಾಹನನು ಬಂದ | ಎನ್ನ | ಬಿಗಿಬಿಗಿದಪ್ಪುತ ನಿಂದ
ನಗುತ ಮಾತನಾಡಳಿವಳು | ಸುಗುಣಳಲ್ಲವೆಂದ ||
ನಿಗಮಚೋರನ ಕೊಂದ | ನಗವ ಬೆನ್ನಿಲಿ ತಂದ
ಜಗವ ನೆಗಹುವೆನೆಂದ | ಚಿಗಿದು ಕಂಬದಿ ಬಂದ
ಮಗುವಿನಂದದಿ ನಿಂದ | ಯಾ | ತ್ರಿಗಳ ಮಾಳ್ಪೆನೆಂದ | ಅ |
ನ್ನಗಳನೊಲ್ಲೆನೆಂದ | ಬಲು | ಬೆಣ್ಣೆ ಕದ್ದು ತಿಂದ
ನಗುತ ಚಿತ್ತಲೆಂದನಿ | ಘನ ತೇಜಿಯೇರಿ ನಿಂದಾ || ೨ ||

Sri Vidyabharathi Book Centre, Sringeri

CC-0. In Public Domain. Digitized by eGangotri

ನಾರಿ ಈಗ ನಾನು ಮು | ರಾರಿಯ ಕಂಡೆನು
ವಾರಿಜಾಕ್ಷ ಬಾರೆಂದು | ಶಿರವ ಬಾಗಿದೆನು
ಮಾರನಯ್ಯ ಜಾಣೆ ಎನ್ನ | ಮೋರೆ ನೋಡಿದಾನೆ
ಚೋರನಾರಿ ಇವಳೆಂದು | ಬಾರದೆ ಪೋದಾನೆ ||
ನೀರೊಳಡಗಿದಾನೆ | ಮೋರೆ ಮುಚ್ಚಿದಾನೆ
ಕ್ಷೋರೆ ತೋರಿದಾನೆ | ಆ | ಘೋರರೂಪ ತಾನೆ | ಬ್ರಹ್ಮ |
ಚಾರಿಯೆಂತೆಂದಾನೆ | ಕ್ಷತ್ರ್ರರ ಶಿರ ತರಿದಾನೆ
ವಾರಿಧಿ ಕಟ್ಟಿದಾನೆ | ಬಲು | ಚಾರನಾನೆಂದಾನೆ | ನಾ
ರೀಕ ವ್ರತವಳಿದಾನೆ | ಹಯ | ವೇರಿದ ಸಿರಿಕೃಷ್ಣನೇ || ೩ ||

—ಎಂಬುದಾಗಿ ಹಾಡಿದ್ದಾರೆ.

ಈ ಪದದ ಅರ್ಥ ಮನಸ್ಸಿಗೆ ಹತ್ತಬೇಕಾದರೆ ಸಾಧಕನು ಮನೋಭೂಮಿಕೆಯನ್ನು ಮೊದಲು ಹದಗೊಳಿಸಬೇಕು. ಸ್ತ್ರೀಪುರುಷರೆಂದ ಕೂಡಲೇ ಹುಟ್ಟುವ ಪಾಶವೀ ವೃತ್ತಿಯನ್ನು ಚಿತ್ತದಿಂದ ದೂರಗೊಳಿಸಬೇಕು. ತಕ್ಕ ಸನ್ನಿವೇಶಗಳನ್ನು ಕಲ್ಪಿಸಿಕೊಳ್ಳಬೇಕು. ತಾಳಮೇಳಗಳೊಡನೆ ಹಾಡಬೇಕು. ಹಾಡುತ್ತಹಾಡುತ್ತ ನರ್ತನವು ನಡೆಯಲ್ಲಿ ತಾನಾಗಿ ಬರುವುದನ್ನು ಪರೀಕ್ಷಿಸಬೇಕು. ಹಾಡೇ ನರ್ತನವೋ ನರ್ತನವೇ ಹಾಡೋ ಎಂಬಂತೆ ಬರುವುದೇ ಇಲ್ಲವೇ ಎಂಬುದನ್ನು ಭಾವದಿಂದ ತಿಳಿಯಬೇಕು. ದೇವರ ನಾಮದ ಮೂರು ಚರಣಗಳಲ್ಲೂ ದಶಾವತಾರ ವರ್ಣನೆ ಹೇಗೆ ಬಂದಿರುವುದೆಂಬುದನ್ನು ವಿಮರ್ಶಿಸಿ ನೋಡಬೇಕು. ರಸ, ಭಾವ, ಚರಿತ್ರೆ, ಕವಿತಾ ನಿಯಮ ಇವುಗಳಲ್ಲಿ ಕ್ರಮ ಎಲ್ಲಾದರೂ ತಪ್ಪಿದೆಯೋ ಎಂದು ಹುಡುಕಬೇಕು. ಇಷ್ಟಾದರೂ ಮಧುರಭಕ್ತಿಯಲ್ಲಿ ರೀತಿನೀತಿಗಳು ಅಳತೆ ಮೀರದಿರುವುದನ್ನು ಮನವರಿಕೆ ಮಾಡಿಕೊಳ್ಳಬೇಕು. ಇಷ್ಟೆಲ್ಲಾ ಮಾಡದಲ್ಲದೆ ಹರಿದಾಸರುಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ದಾಸಸಾಹಿತ್ಯದ ಬೆಲೆ ಗೊತ್ತಾಗುವುದಿಲ್ಲ.

ವಿರಹಭಾವ

ಪರಮಾತ್ಮನ ವಿರಹದಿಂದ ಸಂತಪ್ತರಾದ ಗೋಪಿಯರ ಮನಸ್ಸಿನ ಸ್ಥಿತಿಯನ್ನು ತಿಳಿಸುವ ಭ್ರಮರಗೀತಕ್ಕಿಂತ ವಿರಹಭಕ್ತಿಯ ಮಾದರಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಮತ್ತೊಂದಿರುವುದಿಲ್ಲ. ಶ್ರೀಪಾದರಾಯರು ಕನ್ನಡಿಸಿರುವ ಗೀತೆ ರಾಗತಾಳಗಳಲ್ಲಿ ಹಾಡುತ್ತ ಕುಳಿತರೆ ಪರಮಾತ್ಮನ ವಿರಹವನ್ನು ಸ್ವಯಂ ಅನುಭವಿಸಿ ಅದೇ ಮನಸ್ಸಿನಿಂದ ಅದೇ ಪಾರವಶ್ಯದಿಂದ ಬರೆದಂತೆ ಕಾಣುತ್ತದೆ.

ರಾಗ : ಮುಖಾರಿ —ತಾಳ : ಅಟ್ಟ

ಭೃಂಗ ನಿನ್ನಾಟ್ಟೀದಾನೇ || ಪ ||

ಭೃಂಗ ನಿನ್ನಾಟ್ಟೀದಾನೇ ಶ್ರೀರಂಗ ಮಧೂರೇಲೀ ನಿಂದೂ
ಅಂಗಜಾಲುಬ್ಧಾಕಾ ಪೂ | ಗೋಲಂಗಳ ತಾಡೇಯಾನಿಕ್ಕಿ
ಅಂಗಾನೇರೆಂಬೋ ಹುಲ್ಲೀ ಮ್ಯಾ | ಗಂಗಾಳಾನೀ ಗೂರೀ ಯೆಚ್ಚು
ಹಿಂಗೀಸೂತ್ತೈದಾನೇ ಆಸೂವಾ | ಏ....ಕೀತಾವಾ || ಅ ||

ನಿನ್ನಾ ನೋಡೇನಮ್ಮಾ ಆಚ್ಚೂ | ತನ್ನಾ ಕಂಡಂತಾಯಿತಯ್ಯೋ
ಚನ್ನಿಗಾರಾರಾಸಾ ಕೂಶಾ | ಲೋನ್ನಾತೀಯಾಲೀಹಾನೇನೋ
ಚಿಣ್ಣಾತಾನಾ ಮೋದಾಲಾಗಾ | ವನ್ನಾ ಕೀತಾವಾ ಬಲ್ಲೀವೋ
ಗನ್ನಗಾರಾ ಚಿತ್ತಾ ಚೋರನ್ನಾ | ಶ್ರೀಹರೀಯಾ ||
ಮನ್ನಾಣೀಗೇ ಮೆಚ್ಚೀ ತನ್ನಾ | ವನ್ನೋಪ್ಪೀಸೀದಾ ಮೂಗೂಧಾ
ವೇಣ್ಣುಗಾಳಾ ವೀರಾಹಾಬ್ಧೀ | ಯನ್ನೀ ದಾಟೀಸೂವೆನೆಂದೂ
ತನ್ನಾನೇಹಾವೆಂಬಾ ನಾವೇ | ಯನ್ನೇರಿಸೀ ಪೋಗದಿನ್ನಾ
ಡುನ್ನೀರೋಳೂ ತೋರಾದ್ದೋದಾನೇ | ಏ ಕೀತಾವಾ || ೧ ||

ತಮ್ಮಾ ನಂದಾಗೋಪಾ ಯಾಶೋ | ದೆಮ್ಮಾನ ಕಂಡೂ ಬಾರೆಂದೂ
ರಮ್ಮೀಯಾ ರಾಮಾಣಾ ನಿನ್ನಾ | ನೊಮ್ಮೀ ಕಾಳೂಹೀದಾನೈಸೇ
ಹಮ್ಮೂಗೆಟ್ಟೂರಮ್ಮಾಣೀರಿಂ | ದುಮ್ಮಾಳೀಸೂವೇವೋ ವೃಥಾ
ನಮ್ಮ ಹಂಬಾಲಿನ್ನೀಸಾವಾಗೇ | ಶ್ರೀಹಾರೀಗೇ ||
ಹಮ್ಮೀಲಟ್ಟಾದಾಲಂಚೀಯು | ಗಮ್ಮಾನೇರ ಕೂಚಾದಾ ಕುಂ
ಕುಮ್ಮ ಕಸ್ತೂರೀಯಾಕಾರಾ | ದಮ್ಮಾದೀ ಸೀಲೂಕೀದಂಗೇ
ಕಮ್ಮ ಗೋಲಾನಾ ಬಾಣಂಗಾ | ಳಮ್ಮಾಳೀ ತೋಯಿಸೂತೀದೇ
ಸುಮ್ಮಾನೇ ಬಾಹೋದೇ ಸುಲಾಭೇ | ಏ ಕೀತಾವಾ || ೨ ||

Sri Vidyabharathi Book Centre, Sringeri

CC-O. In Public Domain. Digitized by eGangotri

ವಧೂಕುಂಜಾವನಾದಲ್ಲೀ | ಮಧುವ್ವೈರೀ ಕೋಳಾಲೂದಾ
ಲ್ಮಧುರಾಸೂಸ್ವ್ವರಾ ಕೇಳೀ | ಮದೀರಾಕ್ಷೇರೆಲ್ಲಾರೂ ಧಾ
ಮಾದಾ ಧ್ಯಾನಾ ಬಿಟ್ಟೋ ವ್ಯಾಗಾ | ಮಾದಾಗಂಪಾವೀಡೀದ್ದೈದೀ
ಮದನಾನಯ್ಯಾನಾ ಕಾಣೂತ್ತಾ | ಶ್ರೀಹರೀಯಾ ||
ಮೂದಾವೇರೀ ತಾಲೇವಾಗೀ | ಮೇದೀನೀ ನೀಟ್ಟೇಸಾಲಾಗಾ
ಮೃದೂವಾಕ್ಯಾದೊಳೀವ್ಯಾಪ್ಪಿ | ಆಧಾರಾನ್ಯಾತಾ ಭೋಜಾನಾ
ಕೊದಾಗೂವಾಸತಾತಾಸಾ | ನ್ನದ್ಧಾನವ್ಯಾನಗಾಲೀ ಕಾ
ಲ್ಲೇದೇಯಾದಾನೆಂತೋ ಕೃಪಾಳೂ | ಏ ಕೀತಾವಾ || ೩ ||

ವಜ್ರಾಂಕೂಶಾ ಧ್ವಾಜಾಂಕೀತಾ | ಹೆಜ್ಜೆಯನ್ನೀ ತೀಳೀದಾ ಆ
ಅಬ್ಜಾ ಜಾಕ್ಷೇರೊಡನೇರಾತೀ | ಕಜ್ಜಾದೂಪಾವಾನಾದಲ್ಲೀ
ನಿರ್ಜರೋತ್ತಂಸಾರೋಡಾನೇ | ಮಜ್ಜಾನಕ್ರೀಡ್ಯಾಡೂವಾ ಸಾ
ಯುಜ್ಯಾಸೂಖಾವೆತ್ತಾಲಿಪ್ಪಾದೋ | ಶ್ರೀಹರೀಯಾ ||
ಅಬ್ಜಾ ಭಾವಾ ಮೂನೀಜಾನಾ | ಪೂಜ್ಯಾನಾಗಾಲೀದಾ ಮೇಲೆ
ನಿರ್ಜೀವಿಗಳಾಗೀ ಕಣ್ಣಾ | ಕಜ್ಜಾಲಕಾಲಕೀಕೊಂಡೂ
ಲಜ್ಜೇಗೆಟ್ಟಾ ತಾನೂಲಾತೇ | ಜರ್ಝರೀತಾದೀ ಜೀವಿಸೇ
ವಜ್ಜರೇದೇಯಲ್ಲಾವೇನಮ್ಮಾ | ಏ ಕೀತಾವಾ || ೪ ||

ಕತ್ತಾಲೇವೀರಾಯಾಬಟ್ಟೋ | ಮುತ್ತೀನಾಜೋಲ್ಲಾದೂರೂಬೀ
ಕತ್ತುರೀ ಶ್ರೀಲೂಕಾವೂಚಾ | ಲಿತ್ತಾ ಕುಂಡಾಲಾವೇಳಾಗೂ
ವೃತ್ತಾವಾದಾನಾನಾದಿ ಮಂ | ದಸ್ಮೀತಾ ತಿಂಗಾಳಿಂದೆಮ್ಮಾ
ಹೃತ್ತಾಪಾ ಪಾರೀಹಾರೀಸುವಾ | ಶ್ರೀಹರೀಯಾ ||
ಮತ್ತೇ ವಕ್ಷಾದಾ ಶ್ರೀವತ್ಸಾ | ಕೌಂಸ್ತೂಭಾ ವೈಜಂತೀಮಾಲೇ
ಶ್ರೀತೂಲಾಸೀ ಘಮಾಘಮಿಾ | ಸುತ್ತಾಲೀ ಹಾಗಾಳಾಮಾಲೇ
ರತ್ನೂನಾ ಕಂಕಾಣಾಭೂಜಾ । ಕೀರ್ತಿಯಿಂದೋಪ್ಪುವಾ ಪೂರೂ
ಷೋತ್ತಾಮಾನಾ ಬಣ್ಣೀಪಾರುಂಟೀ ! ಏ ಕೀತಾವಾ || ೫ ||

ಉತ್ಪಾಲಾ ಶ್ಯಾಮಾಲಾ ಮೋದಾ | ವೆತ್ತ ಭಾವಜೆನ್ನಾದಿಂದ
ಅತ್ಯಮ್ಮಾಲಾ ಪೊನ್ನಾಂಬಾರಾ | ಸುತ್ತೀದಾಮಾ ನೂಪೂರಾ ಝಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಣತ್ಕಾರಾದೀ ಮಿಂಚೀ ಎಮ್ಮಾ | ಚಿತ್ತಾಶೀಖೀಗೇ ಪೀಯೂಷಾ
ಸೂಕ್ತ ಮೇಘಾನಂತೇ ಒಪ್ಪೂವಾ ! ಶ್ರೀಹರೀಯಾ ||
ಹೆತ್ತಾ ತಾಯಿಾ ಆಪ್ತಾ ಬಂಧೂ ! ಗೋತ್ರಾಗಾತೀ ನೀನೇನಮ್ಮಾ
ಚಿತ್ತವೆಂದೂ ನಂಬೀತನ್ನಾ | ಹತ್ತೀಲಿ ಸಾರೀದಾವಾರಾ
ಒತ್ತೀ ತಾ ರಾಥಾವಾನೇರೀ | ಸತ್ವಾರಾ ಬಾರೂವೇನೆಂದೂ
ಮತ್ತ್ರಕ್ಯಾರಾನೋಡಾನ್ಯೈದೀದಾ | ಏ ಕೀತಾವಾ || ೬ ||

ಲಕ್ಷೂಮಿಾ ರಾಮಣಾನಾವಾ | ಸೂಕ್ಷ್ಮೂವಾ ಗೊಲ್ಲಾರೂ ನಾವೂ
ಕುಕ್ಷೀಯೋಳೂ ಬೊಮ್ಮಾಂಡವಗೇ | ಮುಕ್ಷೀಕಾಗಾಳಂತೀಪ್ಪೇ ವೋ
ಮೋಕ್ಷೀಗಾಳಾರಾಸಾ ನಾಪಾ | ಗೋಕ್ಷೀರಾದಿಂ ತೃಪ್ತಾರಾವೂ
ಲಕ್ಷಿಸೂವಾನೆಂತೋ ನಮ್ಮಾನೂ | ಶ್ರೀಹರೀಯಾ ||
ರಕ್ಷೀಸಾಲೂದೀಸೀಜಾನಾ | ಶೀಕ್ಷೇಗೇ ಪಾಲೂ ಬೆಣ್ಣೆಯಾ
ಭಕ್ಷಿಸಿ ನೀರೂತಾ ನಮ್ಮಾ | ಅಕ್ಷೀಗೇ ಹಾಬ್ಬಾನೂಣೀಸೀ
ಈಕ್ಷೋಣೀಭಾರಾಹಾರಾಕಾ | ದೀಕ್ಷಾಗೇನಾರಾರಾಸಾಮ್ಯಾ
ವಕ್ಷ್ಯಮಾಣಾರೇವೇ ಮೂರ್ಖಾರೂ | ಏ ಕೀತಾವಾ || ೭ ||

ಹಿಂದೆ ಮಾಡೀದಾ ಸದ್ಧರ್ಮಾ | ದಿಂದಾ ಮಥೂರಾನಾಗಾರಾ
ದಿಂದೀವಾರಾಕ್ಷೇರಾನಂದಾ | ಸಿಂಧುವೀಗೂದೀತಾ ಪೂರ್ಣಾ
ಚಂದ್ರಾನಂತೋಪ್ಪಿವಾ ಸೀರಿ | ಮಂದರಧಾರಾನಂಘ್ರೀಯ
ಪೊಂದೋ ಭಾಗ್ಯಾಕೇಣೀಯುಂಟೇ | ಶ್ರೀಹರೀಯಾ ||
ಆಂದೆಮ್ಮೋಳೂ ರಾಸಾಕ್ರೀಡೇ | ಯಿಂದಾ ಬಂದಾಪಾರಾಥಾವಾ
ನೊಂದಸೇಣೀಸಾದೇಸಾಲಾ | ಹೆಂದೂ ಬಿನ್ನೈಸೀ ಸಾಷ್ಟಾಂಗಾ
ದಿಂದಾ ವಂದೀಸೂವೇ ಭಕ್ತಾ | ಬಂಧೂವೀಗೇ ಎಮ್ಮಾ ಹೃದಯಾ
ಮಂದೀರಾದೋಳೆಂದೆಂದೀರೆಂದೂ | ಏ ಕೀತಾವಾ || ೮ ||

ಹೆಂಗಾಳೇರೊಂದಾಗೀ ಅಂತಾ | ರಂಗಾದಾರಾಸಾನಾಡೀದಾ
ಮಂಗಳ ಚಾರಿತ್ರೇಯನ್ನೂ | ಸಂಗೀತಾದಿಂ ಪೋಗಾಳೂತ್ತಾ
ಕಂಗಾಳಶ್ರೂಗಳೇವುತ್ತಾ | ಇಂಗೀತಜ್ಞಾ ದೇವಾನಂಗಾ
ಸಂಗದಾನಂದಾವಾ ನೆನೇದೂ | ಶ್ರೀ ಹರೀಯಾ ||

Sri Vidyabharathi Book Centre, Sringeri

CC-O. In Public Domain. Digitized by eGangotri

ಮಂಗಾಳಾ ವೇದಾಸ್ತೇನಾರೀ | ಶೃಂಗಾರಾಕೂರುಮಾನಮ್ಮಾ
ಪೊಂಗಣ್ಣಾನಾಸೀಳ್ದಾ ನಾರಾ | ಸಿಂಗಾ ವಾಟೂಭಾಗಾರ್ವಾನೇ
*ಅಂಗಾದಾಪಾರ್ಥಾಶಂಭೂ ತೂ | ರಂಗಾಪಾ ರಂಗಾವಿಠಾಲ
ತುಂಗ ಮಹಿಮಾ ನಮೋ ಎಂಬೇವೊ | ಏ ಕೇತಾವಾ || ೯ ||

ಈ ಭ್ರಮರ ಗೀತದಲ್ಲಿ ಕನ್ನಡ ಶಬ್ದಗಳು ಎಷ್ಟು ಮುದ್ದಾಗಿ ಹೊಂದಿಕೊಂಡಿವೆ? ಸಂಗೀತದಲ್ಲಿ ಹೇಗೆ ಹುದುಗಿವೆ? ಭಾಷೆಗೆ ತಕ್ಕಂತೆ ಭಾವನೆ, ಭಾವನೆಗೆ ತಕ್ಕಂತೆ ರಾಗ ಈ ಎಲ್ಲದರ ಸಾಮರಸ್ಯ ವಿರಹಭಕ್ತಿಯನ್ನು ಎಷ್ಟು ಪರಮಾವಧಿಗೆ ಮುಟ್ಟಿಸಿದೆ ಎಂಬುದನ್ನು ರಸಋಷಿಗಳಂತೆ ಗಮನಿಸಿ ಆನಂದಪಡಬೇಕು. ಹ್ರಸ್ವಾಕ್ಷರಗಳನ್ನು ದೀರ್ಘಾಕ್ಷರವಾಗಿ ಬರೆದಿರುವುದನ್ನು ಸಂಗೀತಕ್ಕಾಗಿ ಎಂದು ತಿಳಿಯಬೇಕು.

ಅಗಲಿದನಂತರದ ಭಾವನೆಗಿಂತ ಆಗಲುವನೆಂದರಿತು ಗೋಪಿಯರು ಕೃಷ್ಣನನ್ನು ಕೇಳಿಕೊಂಡ ಬಗೆಯು ಹೇಗೆ ಕನ್ನಡವಾಗಿದೆಯೆಂಬುದನ್ನು ಮುಂದಿನ ಪದದಲ್ಲಿ ನೋಡಬೇಕು.

ಶ್ರೀಕೃಷ್ಣನು ಅಕ್ರೂರನೊಡನೆ ಮಥುರಾ ಪಟ್ಟಣಕ್ಕೆ ಪ್ರಯಾಣ ಮಾಡುವನೆಂದರಿತು ಅವನೊಡನೆ ಮಾತಾಡಿದ ಸನ್ನಿವೇಶವಿದು. ಈ ಪದದ ರಚನೆಯಾದದ್ದು ತುಂಗಭದ್ರಾತೀರದಲ್ಲಿರುವ ವೇಣೀಸೋಮಪುರವೆಂಬ ಗ್ರಾಮದಲ್ಲಿ. ವೇಣೀಸೋಮಪುರವು ಗದ್ವಾಲ ಸಂಸ್ಥಾನಕ್ಕೆ ಸೇರಿದೆ. ವೇಣುಗೋಪಾಲಸ್ವಾಮಿಯ ದಿವ್ಯದೇವಾಲಯವನ್ನು ವ್ಯಾಸತತ್ತ್ವಜ್ಞರು ಪ್ರತಿಷ್ಠಿಸಿದ್ದಾರೆ. ವ್ಯಾಸತತ್ತ್ವಜ್ಞರು ವಾಸುದೇವವಿಠಲ ಮುದ್ರಿಕೆಯಿಂದ ಅನೇಕ ಕನ್ನಡ ದೇವರ ನಾಮಗಳನ್ನು ಹಾಡಿದ್ದಾರೆ. ಆ ಸುತ್ತುವಲಯವು ಗೋಕುಲದಂತಿದೆ. ತುಂಗಭದ್ರೆಯು ಯಮುನೆಯಂತೆ ಶೋಭಿಸುತ್ತಿದ್ದಾಳೆ. ವ್ಯಾಸತತ್ತ್ವಜ್ಞರೂ ಗೋಪಾಲದಾಸರೂ ಶ್ರೀಮದ್ಭಾಗವತದಲ್ಲಿ ಅಕ್ರೂರನು ಶ್ರೀಕೃಷ್ಣನನ್ನು ಮಥುರೆಗೆ ಕರೆದೊಯ್ಯಲು ಬಂದ ಘಟ್ಟವನ್ನು ಓದುತ್ತಿದ್ದಾರೆ. ಗೋಪಿಯರಿಗೆ ಶ್ರೀಕೃಷ್ಣನು ಹೇಳುವ ಸಮಾಧಾನಗಳನ್ನು ಚರ್ಚಿ

---

*ಅಂಗದ ಪಾರ್ಥ ಶಂಭು ತುರಂಗಪ ಅಂದರೆ—ಅಂಗದಪ (ರಾಮ), ಪಾರ್ಥಪ (ಕೃಷ್ಣ), ಶಂಭುಪ (ಬುದ್ಧ), ತುರಂಗಪ (ಕಲ್ಕಿ) ಎಂದು ಬಹು ಗೂಢವಾಗಿ ಅವತಾರಗಳನ್ನು ತಿಳಿಸಿರುತ್ತಾರೆ.

Sri Vidyabharathi Book Centre, Sringeri

 CC-O. In Public Domain. Digitized by eGangotri

ಸುತ್ತಿದ್ದಾರೆ. ಗೋಪಿಯರ ಮಧುರಪ್ರೇಮರಸದಲ್ಲಿ ಉಭಯರೂ ಭಾವ ಸಮಾಧಿಗೊಳಗಾಗಿದ್ದಾರೆ. ವ್ಯಾಸತತ್ವಜ್ಞರು ವಿರಹಭಕ್ತಿಯ ಮಟ್ಟದಲ್ಲಿದ್ದರೆ ಗೋಪಾಲದಾಸರು ಮಧುರಭಕ್ತಿಯ ಪರಮಾವಧಿಯನ್ನು ಮುಟ್ಟಿದ್ದಾರೆ. ಸುತ್ತಮುತ್ತ ದಾಸರ ಇಬ್ಬರು ತಮ್ಮಂದಿರೂ ಶಿಷ್ಯರುಗಳೂ ಸ್ತಬ್ಧರಾಗಿ ಕುಳಿತಿದ್ದಾರೆ. ಕೃಷ್ಣಗೋಪಿಯರ ಸಂಭಾಷಣೆಯ ಚಿತ್ರ ಎಲ್ಲರ ಕಣ್ಣಿಗೆ ಕಟ್ಟಿದಂತಾಗಿದೆ. ಅದೋ ಶ್ರೀಕೃಷ್ಣನ ವೇಣುಗಾನ ಕೇಳಿರೆಂದು ಗೋಪಾಲ ದಾಸರು ವ್ಯಾಸತತ್ತ್ವಜ್ಞರನ್ನು ಎಚ್ಚರಿಸಿದ್ದಾರೆ. ಗೋಪಾಲದಾಸರ ಚಿಕ್ಕ ತಮ್ಮಂದಿರು ವಿರಹಭಕ್ತಿಯ ಉದ್ರೇಕದಿಂದ—

ರಾಗ : ತೋಡಿ — ತಾಳ : ಆದಿ

ಆಗಲಿ ಸೈರಿಸಲಾರೆವೋ | ವೇಣುಗೋಪಾಲ || ಪ ||

ಆಗಲೀ ಸೈರಿಸಲಾರೆವೊ | ನಗಧರ ಪನ್ನಗನಗಾಧೀಶ
ಮೃಗಮದ ತಿಗರಿನ | ನಗೆಮೊಗ ಚನ್ನಿಗ
ನಿಗಮಗಳಿಗೆ ಸಿಗ | ದಗಣಿತ ಸುಗುಣ || ನಿನ್ನಗಲಿ || ಅ ||

ಗುಲುಗಂಜಿ ಬರ್ಹಿಯ ಗರಿಯು | ಎಳೆದಳಿರು ಕೇತಕಿಯ ಗರಿಯು
ಥಳಥಳಿಪ ಫಾಲದರಳೆಲೆಯು | ಹೊಳೆವ ಕುಂಡಲಗಳ ಪ್ರಭೆಯು ||
ಉಲಿವ ಹಾರ ಗಳದಿ ಒಪ್ಪುತ್ತಾ | ಸುಧಾಮರಾಮ
ಗೆಳೆಯರಿಂದ ಕೂಡಿ ಪಾಡುತ್ತಾ | ರಾಜಬೀದಿಯೊಳು ||
ಸುಳಿದು ಕುಲುಕಿ ನಲಿನಲಿದಾಡುತ್ತಾ | ನಿತ್ಯಗೋವತ್ಸ
ಗಳನು ಸಂರಕ್ಷಣೆ ಮಾಡುತ್ತಾ | ಕೊಳಲನೂದುತ್ತ ||
ಸುಳಿವಳಿಗಿಳಿ ಸಖಿಗಳ ಕುಲಾವಳಿಗಳ | ಘಲಿಘಲಿಘಲಿರೆಂದು ಕುಣಿಸುತ್ತಾ
ಎಳೆವಾರೆಗಣ್ಣಿಲಿ ನೋಡುತ್ತಾ | ಲಲನೇರ ತನುಮನ ಸೆಳೆಯುತ್ತಾ ||
ಕಿಲಿಕಿಲ ನಗುತೆಮ್ಮೊಳು ರಮಿಸುತ ಕೆಂ | ದೊಳದುಟಿ ಸವಿಯುವ
ಚಲುವ ಚನ್ನಿಗ || ನಿನ್ನಗಲಿ || ೧ ||

ದೇವ ಕೊಳಲನೂದುವದು | ನಾವು ಕೇಳಿ ಮುದದಿ ನಲಿದು
ಗೋವ್ಯಾಘ್ರವೇಕತ್ರು ಬೆರೆದು | ಕೇವಲ ವೈರತ್ವ ಮರೆದು ||
ಮೇವು ಜರಿದು ನಿನ್ನನೆ ನೋಡುತ್ತಾ | ಖಗಮೃಗವು ಏಕೋ
ಭಾವದಿಂದ ಗಾನವ ಕೇಳುತ್ತಾ | ಚಿತ್ರದಿ ಬರೆದ ||

Sri Vidyabharathi Book Centre, Sringeri

CC-O. In Public Domain. Digitized by eGangotri

ಭಾವದಂತೆ ಜನಕೆ ತೋರುತ್ತಾ । ಮನೆಯೊಳು ವಾರ್ತೆ
ನಾವು ಕೇಳಿ ಮನದಿ ಹರ್ಷಿಸುತ್ತಾ । ನಿಲ್ಲದೆ ತ್ವರಿತ ॥
ತಾವನ ಬಾವನ ಮಾವಿನ ಮರದೊಳು । ಗೋವನು ನಿನ್ನನು ಕಾಣುತ್ತಾ
ಭಾವಜ ಕಳೆಗಳು ಉಕ್ಕುತ್ತಾ । ಭಾವದಿ ಬಿಗಿಬಿಗಿದಪ್ಪುತ್ತಾ ॥
ಈ ವಿಧ ಮುದ ನಮಗೀವ ಸುಖಾಂಬುಧಿ । ಪೂವಿನಶರಪಿತ ಮಾವನ
ಬೆರೆದರೆ ॥ ನಿನ್ನಗಲಿ ॥ ೨ ॥

ಅನಘ ನಿನ್ನನುಗಾರರು ಕೂಡಿ । ವನವನ ಸುಳಿಯಲು ನೋಡಿ
ಕೊನೆಗಣ್ಣಿಂದ ಸನ್ನೆಯ ಮಾಡಿ । ಮನೆಯ ಕೆಲಸಗಳೀಡ್ಯಾಡಿ ॥
ವನಿತೇರೆಲ್ಲ ಮಾತನಾಡುತ್ತಾ । ಚಲುವಮೂರ್ತಿಯ
ಮನದೊಳಗೆ ಧ್ಯಾನ ಮಾಡುತ್ತಾ । ಬಂಧುಗಳ ಮಾತ ॥
ಗಣನೆ ಮಾಡದಲೆ ಮೀರುತ್ತಾ । ಊದುವ ಕೊಳಲ
ಧ್ವನಿಯ ಕರ್ಣದಿಂದ ಕೇಳುತ್ತಾ । ನಿನ್ನನರಸುತ್ತ ॥
ತನುಮನಧನವನು ಗಣಗೆನೆ ತಾರದೆ । ವನವನ ತಿರುಗುತ ಬಂದೇವೋ
ತನುಮನವೊಪ್ಪಿಸಿ ನಿಂದೇವೋ । ಮನಸಿಜ ಕೇಳಿಗೆ ಸಂದೇವೋ ॥
ಚಿನುಮಯ ಗುರು ಗೋಪಾಲವಿಠಲ ಮಾ । ಮನೋಹರ ಮುನಿಜನ
ಮನಮಂದಿರ ॥ ನಿನ್ನಗಲಿ ॥ ೩ ॥

ಈ ಪದದಲ್ಲಿರುವ ಶಬ್ದಸಂಪತ್ತು ಅಮೋಘವಾದದ್ದು. ಯಾವದಾದರೂ ವೃತ್ತದಲ್ಲಿ ಷಟ್ಪದಿಯಲ್ಲಿ ಧಾಟಿಯಾಗಿ ಪದ್ಯಗಳನ್ನು ಬರೆಯಬಹುದು. ಗದ್ಯವನ್ನು ಮತ್ತಷ್ಟು ಸುಲಭವಾಗಿ ಬರೆಯಬಹುದು. ಭಾವನೆಗೆ ತಕ್ಕಂತೆ ಶಬ್ದಗಳನ್ನು ಹೊಂದಿಸಿ, ಆ ಎರಡಕ್ಕೆ ತಕ್ಕ ರಾಗವನ್ನಾರಿಸಿ ಸುಖಸ್ಥಾನದಲ್ಲಿರಿಸಿ, ಅಲ್ಲಿಂದ ಮೇಲೂ ಕೆಳಗೂ ಸಂಚರಿಸುವ ದಾರಿ ತೋರಿಸಿ, ತಕ್ಕ ತಾಳದಲ್ಲಿ—ಆ ತಾಳದ ಕಾಲಗಳಲ್ಲಿಟ್ಟು, ಕಾಲದ ವೇಗ ಹೆಚ್ಚಿದಂತೆ ಒಂದಕ್ಕೆರಡಾಗಿ ನಾಲ್ಕಾಗಿ ಪ್ರಾಸಗಳನ್ನು ಜೋಡಿಸಿ. ಕೇಳಲು ಕರ್ಕಶವಾಗದಂತೆ ಪದಗಳನ್ನು ಬರೆಯಬೇಕೆಂದರೆ ಅದು ಬಲು ಪರಿಶ್ರಮದ ಮಾತು.

Sri Vidyabharathi Book Centre, Sringeri

 CC-O. In Public Domain. Digitized by eGangotri

ನವವಿಧ ಭಕ್ತಿ

ಭಕ್ತಿಯಲ್ಲಿ ಭಿನ್ನಭಿನ್ನ ಮತಕಾರರು ಭಿನ್ನಭಿನ್ನ ಪ್ರಕಾರಗಳನ್ನು ಏರ್ಪಡಿಸಿದ್ದಾರೆ. ಆ ಎಲ್ಲ ಪ್ರಕಾರಗಳೂ ನವವಿಧ ಭಕ್ತಿಗಳಲ್ಲಿ ಅಡಕವಾಗಿರುತ್ತವೆ. ವಿರಹ-ಮಧುರ ಭಕ್ತಿಗಳೆಂದು ಮೇಲೆ ಉದಹರಿಸಿದ ಎರಡು ಪ್ರಕಾರಗಳು, ಆತ್ಮನಿವೇದನದ ಅಂಗಗಳಾಗಿವೆ. ಶ್ರೀಮದ್ಭಾಗವತದಲ್ಲಿ ಹೇಳಿರುವ ನವವಿಧ ಭಕ್ತಿ ವಿಚಾರದಲ್ಲಿ ಸಿದ್ಧಾಂತಕಾರರು ಕೇವಲ ನವವಿಧ ಭಕ್ತಿಗಳಿಂದಲೇ ಮೋಕ್ಷಸಾಧನೆಯಾಗುವುದೆಂದು ತಿಳಿಯಬೇಕಾಗಿಲ್ಲ; ಅವು ನವವಿಧ ದ್ವೇಷಗಳಿಂದಲೂ ರಹಿತವಾಗಿರಬೇಕೆಂದು ಎಲ್ಲಿ ಸ್ವಲ್ಪ ಸಂದೇಹ ಬಂದರೂ ಅವಕಾಶವಿರದಂತೆ ಎಚ್ಚರಿಸಿರುತ್ತಾರೆ.

ಲೋಕದಲ್ಲಿ ಯಾವುದು ಕರ್ಮದಿಂದ ಜ್ಞಾನದಿಂದ ಪಡೆಯಲು ಸಾಧ್ಯವಲ್ಲವೋ ಅದು ಭಕ್ತಿಯಿಂದ ಮಾತ್ರ ಸಾಧ್ಯವೆಂದು 'ನಾಯಮಾತ್ಮಾ ಪ್ರವಚನೇನ ಲಭ್ಯಃ ನ ಮೇಧಯಾ ನ ಬಹುನಾ ಶ್ರುತೇನ' ಎಂಬಂಥ ಅನೇಕ ಶ್ರುತಿಗಳು ಸಾರಿದರೆ ಅವನ್ನು ಭಗವದ್ಗೀತೆಯಲ್ಲಿ ಶ್ರೀಕೃಷ್ಣನು—

> ನಾಹಂ ವೇದೈರ್ನ ತಪಸಾ ನ ದಾನೇನ ನ ಚೇಜ್ಯಯಾ
> ಶಕ್ಯ ಏವಂ ವಿಧೋ ದ್ರಷ್ಟುಂ ದೃಷ್ಟವಾನಸಿ ಮಾಂ ಯಥಾ ॥
> ಭಕ್ತ್ಯಾ ತ್ವನನ್ಯಯಾ ಶಕ್ಯಃ ಅಹಮೇವಂ ವಿಧೋಽರ್ಜುನ
> ಜ್ಞಾತುಂ ದ್ರಷ್ಟುಂ ಚ ತತ್ತ್ವೇನ ಪ್ರವೇಷ್ಟುಂ ಚ ಪರಂತಪ ॥
> ಮತ್ಕರ್ಮಕೃನ್ಮತ್ಪರಮಃ ಮದ್ಭಕ್ತಸ್ಸಂಗವರ್ಜಿತಃ
> ನಿರ್ವೈರಃ ಸರ್ವಭೂತೇಷು ಯಃ ಸಮಾಮೇತಿ ಪಾಂಡವ ॥

ಎಂಬ ವಾಕ್ಯಗಳಿಂದ ವ್ಯಾಖ್ಯಾನ ಮಾಡಿದಂತೆ ತಿಳಿಸಿರುತ್ತಾನೆ. ಇಷ್ಟೊಂದು ಅರ್ಥವನ್ನೂ ಹುದುಗಿಸಿ ಕನ್ನಡ ದೇವರ ನಾಮದಲ್ಲಿ ಹರಿದಾಸರು—

ಸ್ಮರಿಸು ಸಂತತ ಹರಿಯ | ಕರುಣಾಳುಗಳ ದೊರೆಯ
ಸರಸಿಯೊಳಗಂದು ಕರಿಯ | ನರನ ಸಂಗರದೊಳಗೆ ಕಾಯ್ದನರಿಯಾ
ಜಪಹೋಮ ತಪದಾನಗಳಿಗೆ ದೊರೆಯ | ಜಗದೀಶ ಶರಣು ಹೊಕ್ಕವರ
ಮರೆಯ, ದೊರೆಯ ॥ ಸ್ಮರಿಸು ಸಂತತ ಹರಿಯನು ॥ ಅ ॥

—ಎಂಬುದಾಗಿ ಹಾಡಿರುತ್ತಾರೆ.

Sri Vidyabharathi Book Centre, Sringeri

CC-0. In Public Domain. Digitized by eGangotri

ಈ ದೇವರನಾಮವು ಬಹು ಸುಂದರವಿರುವುದರಿಂದ ಭಾಷಾದೃಷ್ಟಿಯಿಂದಲೂ ಬಲು ತಿಳಿಯಾಗಿರುವುದರಿಂದ ಪೂರ್ತಿ ಕೊಟ್ಟರೆ ತಪ್ಪಾಗುವುದಿಲ್ಲ. ಬಾಯಿಪಾಠ ಮಾಡಬೇಕೆಂಬುವವರಿಗೆ ಅಪರಾಧ ಮಾಡಿದಂತಾಗುವುದಿಲ್ಲ. ಇದನ್ನು ಸ್ಮರಣಭಕ್ತಿಯ ವಿವರಣೆಯಲ್ಲಿ ಓದಬಹುದು.

ಶ್ರವಣಭಕ್ತಿ

ಶ್ರವಣ ಮನಕಾನಂದವೀವುದು
ಭವಜನಿತ ದುಃಖಗಳ ಕಳೆವುದು
ವಿವಿಧ ಭೋಗಗಳಿಹಪರಂಗಳಲಿತ್ತು ಸಲಹುವದು ।
ಭುವನ ಪಾವನನೆನಿಪ ಲಕುಮಿಾ
ಧವನ ಮಂಗಳ ಕಥೆಯ ಪಠವೋ
ತ್ಸವದಿ ಕಿವಿಗೊಟ್ಟಾಲಿಪುದು ಸಂತತದಿ ಭೂಸುರರು ॥

ಕೀರ್ತನಭಕ್ತಿ

ಕೀರ್ತನ ಭಕ್ತಿಯನ್ನು ಕುರಿತು ಅದು ಭಕ್ತಿಪಂಥದ ದ್ವಿತೀಯ ಸಾಧನವಾಗಿರುವುದರಿಂದ ಪ್ರತಿಯೊಬ್ಬ ದಾಸರೂ ಪರಿಪರಿಯಿಂದ ಸಮಾಜವನ್ನು ಎಚ್ಚರಿಸಿ ಉಪದೇಶ ಮಾಡಿದ್ದಾರೆ. ಕೇಶವಾದಿ ಚತುರ್ವಿಂಶತಿ ನಾಮಗಳಿಗೆ ಭಾಷ್ಯಮಾಡಿದಂತಿರುವ ಆನಂದದಾಸರ ಒಂದು ನಾಮವನ್ನೂ ಕನಕದಾಸರ ಒಂದು ನಾಮವನ್ನೂ ಆರಿಸಿಕೊಡಲಾಗಿದೆ.

ಮಾಡಬಾರದೇ । ಭಜನೆಯ । ಮಾಡಬಾರದೇ ॥ ಪ ॥

ಮೂಢರೊಡನೆ ಕೂಡಾಡಿದವರಿಗತಿ । ಕೇಡಾಗಿರುವುದ ನೋಡೀ
ಭಜನೆಯ ॥ ಅ ॥

ಆರ್ತರಕ್ಷಕನ ಕೀರ್ತನವೊಂದು ಮು । ಹೂರ್ತಗೈಯೆ ಸುಖಪೂರ್ತಿಸುವ
ಭಜನೆ ॥ ೧ ॥

ಸಂತೋಷದಲಿ ಮಹಾಂತರ ತತಿಯೊಳು । ನಿಂತು ಕುಣಿವುತಾನಂತನ
ಭಜನೆಯ ॥ ೨ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಘುಂದಿ ಕೇಳಲಾನಂದಬಡುವರದ | ರಿಂದ ಸೌಖ್ಯವನು ಹೊಂದುವೀ
ಭಜನೆಯು ॥ ೩ ॥

ಮಾಸರೋಜಭವ ಈಶಾದ್ಯರಿಗೆ ಮ | ಹಾ ಸೌಖ್ಯದ ಶ್ರೀ ಕೇಶವನ
ಭಜನೆ ॥ ೪ ॥

ತೋಯನಿಧೀಯೊಳಗಾಯತ ವಟಪುಟ | ಶಾಯಿಯಾದ ನಾರಾಯಣನ
ಭಜನೆ ॥ ೫ ॥

ವೇದವಾದಿಗಳಿಗಾದಿ ದೇವಿಗೆ ಪ್ರ | ಸೀದನಾದ ಶ್ರೀ ಮಾಧವನ ಭಜನೆ॥ ೬॥

ಛಂದೋಗಮ್ಯನ ಸುಂದರ ಗುಣವಾ|ನಂದದಿಂದ ಗೋವಿಂದನ ಭಜನೆ ॥೭॥

ವೃಷ್ಣಿಕುಲಕೆ ವರ್ಧಿಷ್ಣುವಾದ ಪರ | ಮೇಷ್ಠಿಯ ಪಿತ ಶ್ರೀ ವಿಷ್ಣುವಿನ
ಭಜನೆ ॥ ೮ ॥

ಆದಿಯುಗದಲುದಯಾದಮುರಾರಿಯು | ಮೈದೆಗೆಸಿದ ಮಧುಸೂದನನ
ಭಜನೆ ॥ ೯ ॥

ಶಕ್ರನ ಲೋಕವನಾಕ್ರಮಿಸಿದ ಬಲಿ | ವಿಕ್ರಮ ತುಳಿದ ತ್ರಿವಿಕ್ರಮನ
ಭಜನೆ ॥ ೧೦ ॥

ಭೂಮೀಶ್ವರ ಬಲಿ ಆ ಮಹರಾಯನ | ಧಾಮವ ಕಾಯಿದ ವಾಮನನ
ಭಜನೆ ॥ ೧೧ ॥

ಶ್ರೀದೇವಿಗೆ ಸಮರಾದವರಿಲ್ಲೆಂ | ದಾದರದಲಿ ಶ್ರೀ ಶ್ರೀಧರನ ಭಜನೆ ॥೧೨॥

ಈ ಶರೀರದೊಳ್ ಶ್ವಾಸೇಂದ್ರಿಯಗಳ | ಪೋಷಿಸುವ ಹೃಷೀಕೇಶನ
ಭಜನೆಯು ॥ ೧೩ ॥

ಶ್ರೀಭಾಗವತರ ಸೌಭಾಗ್ಯಗಳಿಗೆ | ಶೋಭನದ ಪದ್ಮನಾಭನ ಭಜನೆಯು
॥ ೧೪ ॥

ಮೋದದಿಂದಲಿ ಯಶೋಧೆಯ ಕರವಶ | ನಾದ ಮಹಿಮ ದಾಮೋದರನ
ಭಜನೆ ॥ ೧೫ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಸುರನರಾದಿ ಜೀವರ ಇಂದ್ರಿಯಗಳ | ಹರಣನಾದ ಸಂಕರುಷಣನ
ಭಜನೆ ॥ ೧೬ ॥

ಜೀವರಾಶಿಗಳನಾವರಿಸಿ ಒಳಗೆ | ಕಾವ ಕರುಣಿ ವಾಸುದೇವನ
ಭಜನೆಯ ॥ ೧೭ ॥

ಮನುಮಥನನ ಮೋಹನಗೈವ ಸ್ಮಿತಾ | ನನಯುತ ಪ್ರದ್ಯುಮ್ನನ
ಸಂಕೀರ್ತನೆ ॥ ೧೮ ॥

ಸಿದ್ಧಸಾಧ್ಯರಿಗಸಾಧ್ಯ ಸರ್ಪರ | ನಿರುದ್ಧಗೈವ ಅನಿರುದ್ಧನ ಭಜನೆಯ
॥ ೧೯ ॥

ಸತ್ಯಲೋಕದಧಿಪತ್ಯ ಪಡೆದವಗು | ಸ್ತುತ್ಯನಾದ ಪುರುಷೋತ್ತಮನ
ಭಜನೆ ॥ ೨೦ ॥

ತಕ್ಷಕಸೇನಕ್ಷರಾಕ್ಷರ ಪುರುಷರಿ | ಗಕ್ಷಯ ಫಲದ ಅಧೋಕ್ಷಜನ ಭಜನೆ
॥ ೨೧ ॥

ಜಿಹ್ವೆಯ ಚಾಚುತ ವಿಹ್ವಲ ದೈತ್ಯನ | ಸಂಹರಿಸಿದ ನರಸಿಂಹನ
ಭಜನೆಯ ॥ ೨೨ ॥

ಅಚ್ಚಭಕುತಿಲಿ ಸದುಚ್ಚರಣೆಯಲಿಂ | ದಚ್ಯುತಿರಹಿತನಾದಚ್ಯುತನ
ಭಜನೆ ॥ ೨೩ ॥

ದುರ್ಧರ್ಷಾಸುರಮರ್ದನ ಭಕ್ತಾವಿ | ವರ್ಧನನಾದ ಜನಾರ್ದನನ
ಭಜನೆ ॥ ೨೪ ॥

ಚಂದ್ರಸನ್ನಿಭ ಗಜೇಂದ್ರವಾಹ | ದೇವೇಂದ್ರಾವರಜ ಉಪೇಂದ್ರನ
ಭಜನೆಯ ॥ ೨೫ ॥

ಹರಿದಾಸರ ಅಘಹರಣ ಶೀಲನಾ | ದುರುಗಾಯನ ಶ್ರೀಹರಿ ಸಂಕೀರ್ತನೆ
॥ ೨೬ ॥

ವೈಷ್ಣವಜನರಿಗೆ ಊಷ್ಣವಾದ ಭವ | ತೃಷ್ಣೆ ಕಳೆವ ಶ್ರೀಕೃಷ್ಣನ
ಭಜನೆ ॥ ೨೭ ॥

ಕೇಶವಾದಿ ಕಮಲೇಶವಿಠಲನ | ಈ ಶುಭನಾಮನ ತೋಷದಿ
ಭಜನೆಯ ॥ ೨೮ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಈಶ ನಿನ್ನ ಚರಣಭಜನೆ ಆಶೆಯಿಂದ ಮಾಡುವೇನು
ದೋಷರಾಶಿ ನಾಶಮಾಡು ಶ್ರೀಶ ಕೇಶವ || ಪ ||

ಶರಣುಹೊಕ್ಕೆನಯ್ಯ ಎನ್ನ ಮರಣಸಮಯದಲ್ಲಿ ನಿನ್ನ
ಚರಣಸ್ಮರಣೆ ಕರುಣಿಸಯ್ಯ ನಾರಾಯಣ || ೧ ||

ಶೋಧಿಸೆನ್ನ ಭವದ ಕಲುಷ ಬೋಧಿಸಯ್ಯ ಜ್ಞಾನವೆನಗೆ
ಬಾಧಿಸೂವ ಯಮನ ಬಾಧೆ ಬಿಡಿಸು ಮಾಧವ || ೨ ||

ಹಿಂದನೇಕ ಯೋನಿಗಳಲಿ ಬಂದು ಬಂದು ನೊಂದೆ ನಾನು
ಇಂದು ಭವದ ಬಂಧ ಬಿಡಿಸು ಗೋವಿಂದನೇ || ೩ ||

ಭ್ರಷ್ಟನೆನಿಸಬೇಡ ಕೃಷ್ಣ ಇಷ್ಟು ಮಾತ್ರ ಬೇಡಿಕೊಂಬೆ
ಶಿಷ್ಟರೊಡನೆ ಇಟ್ಟು ಕಷ್ಟ ಬಿಡಿಸು ವಿಷ್ಣುವೆ || ೪ ||

ಮೊದಲು ನಿನ್ನ ಪಾದಪೂಜೆ ಮುದದಿ ಮಾಡುವೇನು ನಾನು
ಹೃದಯದೊಳಗೆ ಹುದುಗಿರಯ್ಯ ಮಧುಸೂದನ || ೫ ||

ಕವಿದುಕೊಂಡು ಇರುವ ಪಾಪ ಸವೆದು ಪೋಗುವಂತೆ ಮಾಡಿ
ಜವನ ಬಾಧೆಯನ್ನ ಬಿಡಿಸೋ ತ್ರಿವಿಕ್ರಮ || ೬ ||

ಕಾಮಜನಕ ನಿನ್ನ ನಾನು ಪ್ರೇಮದಿಂದ ಪಾಡುವಂಥ
ನೇಮವೆನಗೆ ಪಾಲಿಸಯ್ಯ ಸ್ವಾಮಿ ವಾಮನ || ೭ ||

ಮದನನಯ್ಯ ನಿನ್ನ ಮಹಿಮೆ ವದನದಲ್ಲಿ ಇರುವಂತೆ
ಹೃದಯದಲ್ಲಿ ಸದನ ಮಾಡು ಮುದದಿ ಶ್ರೀಧರ || ೮ ||

ಹುಸಿಯನಾಡಿ ಹೊಟ್ಟೆಹೊರೆವ ವಿಷಯದಲ್ಲಿ ರಸಿಕನೆಂದು
ಹುಸಿಗೆ ಹಾಕದಿರಯ್ಯ ಹೃಷೀಕೇಶನೆ || ೯ ||

ಬಿದ್ದು ಭವದನೇಕ ಜನುಮ ಬದ್ಧನಾಗಿ ಕಲುಷದಿಂದ
ಗೆದ್ದು ಪೋಪ ಬುದ್ಧಿ ತೋರು ಪದ್ಮನಾಭನೆ || ೧೦ ||

ಕಾಮಕ್ರೋಧ ಬಿಡಿಸಿ ನಿನ್ನ ನಾಮ ಜಿಹ್ವೆಯೊಳಗೆ ನುಡಿಸು
ಶ್ರೀಮಹಾನುಭಾವನಾದ ದಾಮೋದರ || ೧೧ ||

Sri Vidyabharathi Book Centre, Sringeri

CC-O. In Public Domain. Digitized by eGangotri

ಪಂಕಜಾಕ್ಷ ನೀನು ಎನ್ನ ಮಂಕುಬುದ್ಧಿ ಬಿಡಿಸಿ ನಿನ್ನ
ಕಿಂಕರನ್ನ ಮಾಡಿಕೊಳ್ಳೋ **ಸಂಕರುಷಣ** ॥ ೧೨ ॥

ಏಸು ಜನ್ಮ ಬಂದರೇನು ದಾಸನಲ್ಲವೇನೋ ನಾನು
ಘಾಸಿ ಮಾಡದಿರು ಎನ್ನ **ವಾಸುದೇವನೆ** ॥ ೧೩ ॥

ಬುದ್ಧಿಶೂನ್ಯನಾಗಿ ಎನ್ನಪದ್ಧಕಾರ್ಯ ಕುಹಕಮನವ
ತಿದ್ದಿ ಹೃದಯ ಶುದ್ಧಿ ಮಾಡೊ **ಪ್ರದ್ಯುಮ್ನನೆ** ॥ ೧೪ ॥

ಜನನಿಜನಕ ನೀನೆ ಎಂದು ಎನುವೆನಯ್ಯ ದೀನಬಂಧು
ಎನಗೆ ಮುಕ್ತಿ ಪಾಲಿಸೆಂದು **ಅನೀರುದ್ಧನೆ** ॥ ೧೫ ॥

ಹರುಷದಿಂದ ನಿನ್ನ ನಾಮ ಸ್ಮರಿಸುವಂತೆ ಮಾಡು ನಿತ್ಯ
ವಿರಿಸು ಚರಣದಲ್ಲಿ ಪ್ರೇಮ **ಪುರುಷೋತ್ತಮ** ॥ ೧೬ ॥

ಸಾಧುಸಂಗ ಕೊಟ್ಟು ನಿನ್ನ ಪಾದ ಭಜನೆಯಿತ್ತು ಎನ್ನ
ಭೇದಮಾಡಿ ನೋಡದಿರು **ಅಧೋಕ್ಷಜ** ॥ ೧೭ ॥

ಚಾರುಚರಣ ತೋರಿ ಎನಗೆ ಪಾರಗಾಣಿಸಯ್ಯ ಕೊನೆಗೆ
ಭಾರ ಹಾಕಿರುವೆ ನಿನಗೆ **ನಾರಸಿಂಹನೆ** ॥ ೧೮ ॥

ಸಂಚಿತಾರ್ಥ ಪಾಪಗಳು ಕಿಂಚಿತ್ತಾದ ಪೀಡೆಗಳು
ಮುಂಚಿತಾಗಿ ಕಳೆದು ಪೊರೆಯೊ ಸ್ವಾಮಿ **ಅಚ್ಯುತ** ॥ ೧೯ ॥

ಜ್ಞಾನಭಕ್ತಿ ಕೊಟ್ಟು ನಿನ್ನ ಧ್ಯಾನದಲ್ಲಿ ಇಟ್ಟು ಸದಾ
ಹೀನಬುದ್ಧಿ ಬಿಡಿಸು ಮುನ್ನ **ಜನಾರ್ದನ** ॥ ೨೦ ॥

ಜಪತಪಾನುಷ್ಠಾನವಿಲ್ಲದೆ ಕುಪಥಗಾಮಿಯಾದ ಎನ್ನ
ಕೃಪೆಯ ಮಾಡಿ ಕ್ಷಮಿಸಬೇಕು **ಉಪೇಂದ್ರನೆ** ॥ ೨೧ ॥

ಮೊರೆಯ ಇಡುವೆನಯ್ಯ ನಿನಗೆ ಶರಧಿಶಯನ ಶುಭಮತಿಯ
ಇರಿಸೊ ಭಕ್ತನೆಂದು ಪರಮಪುರುಷ **ಶ್ರೀಹರೀ** ॥ ೨೨ ॥

ಪುಟ್ಟಿಸಾಲು ಬೇಡ ಮುಂದೆ ಪುಟ್ಟಿಸಿದಕೆ ಪಾಲಿಸಿನ್ನು
ಇಷ್ಟೆ ಬೇಡಿಕೊಂಬೆ ನಾನು **ಶ್ರೀಕೃಷ್ಣನೆ** ॥ ೨೩ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಸತ್ಯವಾದ ನಾಮಗಳನು ನಿತ್ಯದಲ್ಲಿ ಪಠಿಸುವರನು
ಅರ್ಥಿಯಿಂದ ಸಲಾಹೂವ ಕರ್ತೃ ಕೇಶವ || ೨೪ ||

ಮರೆಯದಾಲಿ ಹರಿಯ ನಾಮ ಬರೆದು ಓದಿ ಕೇಳಿದರ್ಗೆ
ಕರೆದು ಮುಕ್ತಿ ಕೊಡುವ ನೆಲೇಯಾದಿಕೇಶವ || ೨೫ ||

ಹಿಂದೆ ತಿಳಿಸಿದ್ದಂತೆ ಸ್ಮರಣ ಭಕ್ತಿಯ ಉದಾಹರಣೆಗಾಗಿ 'ಸ್ಮರಿಸು ಸಂತತ ಹರಿಯನು' ಎಂಬ ದೇವರನಾಮವನ್ನು ಇಲ್ಲಿ ಪೂರ್ತಿಯಾಗಿ ಓದ ಬಹುದು.

ಸ್ಮರಣಭಕ್ತಿ

ಸ್ಮರಿಸು ಸಂತತ ಹರಿಯನು || ಪ ||

ಸ್ಮರಿಸು ಸಂತತ ಹರಿಯ ಕರುಣಾಳುಗಳ ದೊರೆಯ । ಸರಸಿಯೊಳಗಂದು ಕರಿಯ ।
ನರನ ಸಂಗರದೊಳಗೆ ಕಾಯ್ದನರಿಯ । ಜಪಹೋಮ । ತಪದಾನಗಳಿಗೆ ದೊರೆಯ ।
ಜಗದೀಶ । ಶರಣುಹೊಕ್ಕವರ ಮರೆಯ । ದೊರೆಯ || ಅ ||

ತಾನೆ ಇಹಪರ ಸೌಖ್ಯ । ದಾನಿಗಳರಸನೆಂದು ಸಾನುರಾಗದಿ ನಂಬಿದ । ಜನಕೆ ಸುರ ।
ಧೇನುವಂಡದಲಿ ಮೋದ । ಸಲಿಸುವ ಮ । ಹಾನಂದ ಪೂರ್ಣಬೋಧ । ಪತಿಸಾಮ ।
ಗಾನಲೋಲನ ಪ್ರಸಾದ । ಪಾದ || ೧ ||

ಅಣುವಿನೊಳಗಣುವಹನು । ಘನಕೆ ಘನತಮನಹನು । ಅಣುಮಹದ್ದ್ವಯ ಲಕ್ಷಣ ।
ಕಲ್ಯಾಣ ಗುಣಜ್ಞಾನ ಘನಲಕ್ಷಣ । ಸಂಪೂರ್ಣ ಮನಮುಟ್ಟಿ ಕರೆಯೇ ಕ್ಷಣ। ಬಂದೊದಗಿ
ಕುಣಿವ ಲಕ್ಷ್ಮೀವಕ್ಷನ । ಅನಪೇಕ್ಷನ || ೨ ||

Sri Vidyabharathi Book Centre, Sringeri

CC-O. In Public Domain. Digitized by eGangotri

ನೋಡಿ ನೋಡಿಸುತಿಹನು । ಬೇಡಿ ಬೇಡಿಸುತಿಹನು । ನೀಡಿ ನೀಡಿಸುವ
ಪಿಡಿವ । ಪಿಡಿಸುವನು ।
ಮಾಡಿ ಮಾಡಿಸುವ ಬಡವ । ರೊಡೆಯ ಕೊಂ । ಡಾಡುವರ ಒಡನಾಡು ।
ಈ ಮಹಿಮೆ ।
ಗೀಡೆಂದು ಆವ ನುಡಿವ । ಕೆಡುವ ॥ ೩ ॥

ಚೆಲುವರೊಳಗತಿ ಚೆಲುವ । ಸುಲಭರೊಳಗತಿ ಸುಲಭ । ಒಲಿವ ಮನಬಂದ।
ತೆರದಿ ।
ಗುಣಕರ್ಮ । ಕುಲಶೀಲವೆಣಿಸ ಮನದಿ । ಭಕುತಿಯಲಿ । ಫಲವ ಕೊಡೆ ತಾ
ತವಕದಿ । ಶಬರಿಯಂ ।
ಜಲನುಂಡ ಕರುಣ ಶರಧೀ । ಭರದಿ ॥ ೪ ॥

ಎಲ್ಲೆಲ್ಲಿ ನೋಡೆ ಮ । ತ್ತಲ್ಲಲ್ಲಿ ನೆಲಸಿಹನು । ಬಲ್ಲಿದನು ಭಾಗ್ಯವಂತ ।
ನಂಬಿದರಿ ।
ಗಲ್ಲದೇ ಒಲಿಯ ಭ್ರಾಂತ । ದುಷ್ಟಜನ । ರೊಲ್ಲ ನಿಶ್ಚಯ ಮಹಾಂತ ।
ರೊಡೆಯ ಕೈ ।
ವಲ್ಯದ್ಧಾಯಕನು ಇಂಥಾ । ಪಂಥಾ ॥ ೫ ॥

ಪ್ರಾದೇಶ ಮಾತ್ರ ಸ್ಥಿತ । ಭೂದೇವಿಯರಸ ಕಾ । ಕೋದರಾದ್ಯಮರವ್ರಾತ।
ಮಹದಾದಿ ।
ದೇವ ಅತ್ಯಂತ ಭೂತ । ದೊಳು ನೆಲೆಸಿ । ಕಾದುಕೊಂಡಿಹ ವಿಧಾತ ।
ಅಂಡತ್ರಿದ ।
ಶಾಧಿಪನ ಸುತನ ಸೂತ । ಚರಿತ ॥ ೬ ॥

ಸ್ವಗತಭೇದವಿಶೂನ್ಯ । ನಿಗಮಸಂಚಾರ ಶ್ರೀ । ಜಗನ್ನಾಥವಿಠಲರೇಯ ।
ತನ್ನ ಪದ ।
ಯುಗಳ ನಂಬಿದರೆ ನೋಯ । ಗೊಡದಂತೆ । ಹಗಲಿರಳು ಕಾಯ್ವ
ಮಾಯಾ । ಧವನು ನ ।
ಮ್ಮಗಲಿ ಸೈರಿಸನು ಜೀಯಾ ಧ್ಯೇಯ ॥ ೭ ॥

Sri Vidyabharathi Book Centre, Sringeri

 CC-O. In Public Domain. Digitized by eGangotri

ರಾಗ : ಧನಾಸರಿ — ತಾಳ : ಆದಿ

ಕಲಿಯುಗದೊಳು ಹರಿ । ನಾಮ ಸ್ಮರಿಸಿದರೆ
ಕುಲಕೋಟಿಗಳುದ್ಧರಿಸುವವು || ಪ ||

ಸುಲಭದ ಮುಕ್ತಿಗೆ ಸುಲಭನೆಂದೆನಿಸುವ
ಜಲರುಹನಾಭನ । ನೆನೆ ಮನವೇ || ಅ ||

ಸ್ನಾನವನರಿಯೆನು ಮೌನವನರಿಯೆನು
ಧ್ಯಾನವನರಿಯೆನೆಂದೆನಬೇಡ ||
ಜಾನಕಿವಲ್ಲಭ ದಶರಥನಂದನ
ಗಾನವಿನೋದನ ನೆನೆ ಮನವೆ || ೧ ||

ಅರ್ಚಿಸಲರಿಯೆನು ಮೆಚ್ಚಿಸಲರಿಯೆನು
ತುಚ್ಛನು ನಾನೆಂದೆನಬೇಡ ||
ಅಚ್ಯುತಾನಂತ ಗೋವಿಂದ ಮುಕುಂದನ
ಇಚ್ಛೆಯಿಂದ ನೀ ನೆನೆ ಮನವೆ || ೨ ||

ಜಪವೊಂದರಿಯೆನು ತಪವೊಂದರಿಯೆನು
ಉಪದೇಶವಿಲ್ಲೆಂದೆನಬೇಡ ||
ಅಪಾರಮಹಿಮ ಶ್ರೀ ಪುರಂದರವಿಠಲನ
ಉಪಾಯದಿಂದಲಿ ನೆನೆ ಮನವೆ || ೩ ||

ಸ್ಮರಣೆಯೆಂಬುವುದು ಧ್ಯಾನ. ಧ್ಯೇಯ ವಸ್ತುವನ್ನು ಸ್ಮರಿಸುವದಕ್ಕೆ ಧ್ಯಾನವೆಂದು ಹೆಸರು. ಸ್ಮರಣೆಗೆ ವಿಷಯವಾಗಬೇಕಾದರೆ ಧ್ಯೇಯ ವಸ್ತುವಿಗೆ ನಾಮವಿರಬೇಕು. ನಾಮದ ಜೊತೆಯಲ್ಲಿ ರೂಪವಿರಬೇಕು. ತಕ್ಕಂತೆ ಗುಣಕ್ರಿಯೆಗಳಿರಬೇಕು. ನಾಮ ರೂಪ ಗುಣ ಕ್ರಿಯೆಗಳಿಲ್ಲದ ವಸ್ತುವಿದೆಯೆಂದಾಗಲಿ, ಅದು ಧ್ಯಾನಕ್ಕೆ ವಿಷಯವಾಗುವುದೆಂದಾಗಲಿ, ಹೇಳಿದರೆ ಅದು ಅನುಭವಕ್ಕೆ ಮಾತ್ರ ಬರುವುದಿಲ್ಲ. ಆದುದರಿಂದ ಯಾವ ಮತದ ಉಪಾಸಕರಾಗಲಿ, ಉಪಾಸನೆಗೆ ವಿಷಯವಾಗಿರುವವೆಂದು ವೇದಕಾಲದಿಂದ ಬಂದಿರುವ ಪಂಚಾಕ್ಷರಿ, ಅಷ್ಟಾಕ್ಷರಿ, ದ್ವಾದಶಾಕ್ಷರಿ ಮೊದಲಾದ ಮಂತ್ರಗಳನ್ನುಪಾಸಿಸಿ ಇಷ್ಟಾರ್ಥಗಳನ್ನು ಪಡೆಯುತ್ತಿರುವರು. ಧ್ಯಾನವೆಂದ ಕೂಡಲೇ ಅದಕ್ಕೆ

Sri Vidyabharathi Book Centre, Sringeri

CC-0. In Public Domain. Digitized by eGangotri

ತಕ್ಕ ನಿಯಮಗಳಿವೆ. ನಿಯಮಗಳು ಸಂಪ್ರದಾಯವನ್ನನುಸರಿಸಿರುವುದರಿಂದ ಯಾರಾದರೂ ಅದಕ್ಕೆ ಗೌರವ ಕೊಡಲೇ ಬೇಕು. ಕೆಳಕಂಡ ಹಾಡಿನಲ್ಲಿ ಎಷ್ಟು ಶಾಸ್ತ್ರಾರ್ಥಗಳು ಅಡಕವಾಗಿವೆಯೆಂಬುದನ್ನು ನೋಡಬೇಕು.

ರಾಗ : ಶಂಕರಾಭರಣ — ತಾಳ : ತ್ರಿಪುಟ

ಧ್ಯಾನವನೆ ಮಾಡೊ । ಬಿಂಬಮೂರುತಿಯ ॥ ಪ ॥
ಆನಂದದಲಿ ಕುಳಿತು । ಅಂತರಂಗದೊಳಗೆ ॥ ಅ ॥

ಸದಾಚಾರನಾಗಿ ದ್ವಾದಶ ಗುರುಗಳಿಗೆರಗಿ
ಮುದದಿಂದ ಮೂಲಮಂತ್ರವನೆ ಜಪಿಸಿ
ಹೃದಯ ನಿರ್ಮಲವಾಗಿ ದೇಹಸ್ಥಿತಿಯ ತಿಳಿದು
ಪದುಮಾಸನವ ಹಾಕಿ ಪರಮವಿಶ್ವಾಸದಲಿ ॥ ೧ ॥

ಅಂಗ ಚಲಿಸದೆ ಚೆನ್ನಾಗಿ ದೃಢದಿಂದ
ಕಂಗಳ ಮುಚ್ಚಿ ಇಂದ್ರಿಯಂಗಳ ತಿಳಿದು
ಮಂಗಳ ಶೋಭಿತಾಖಂಡ ಧ್ಯಾನವಂತ
ರಂಗದೊಳಗೆ ಕುಳಿತು ಎಲ್ಲವನೂ ಕಾಣೋ ॥ ೨ ॥

ಭಗವದ್ರೂಪಗಳೆಲ್ಲ ಒಂದೇ ಸಾರಿ ಸ್ಮರಿಸಿ
ಮಗುಳೆ ಆ ಪರಮಗುರುವಿನ ಮೂರುತಿ
ತೆಗೆದು ವಂದನೆ ಮಾಡಿ ಅಲ್ಲಿಂದ ಹರುಷದಲಿ
ಸ್ವಗುರು ಬಿಂಬಮೂರ್ತಿಯಲಿ ಐಕ್ಯಚಿಂತನೆ ಮಾಡಿ ॥ ೩ ॥

ತಿರುಗಿ ಮೆಟ್ಟಿ ಮೂರು ವೇಗದಿಂದಲಿ ನಿನ್ನ
ವರಮೂರ್ತಿಯಲಿ ಚಿಂತನೆಯ ಮಾಡು
ಭರದಿಂದ ಎಲ್ಲವ ತಂದು ಹೃದಯದಲ್ಲಿ
ಸ್ಥಿರವಾಗಿ ಇಪ್ಪ ಮೂರುತಿಯನ್ನು ಕೂಡಿಸಿ ॥ ೪ ॥

ಆತನೆ ಬಿಂಬಮೂರ್ತಿ ಎಂದು ತಿಳಿದುಕೋ
ಆ ತರುವಾಯ ನಾಡಿಗಳ ಗ್ರಹಿಸಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಆ ತೈಜಸನ ಕಂಡು ವಿಶ್ವಮೂರುತಿಯಲ್ಲಿ
ಪ್ರೀತಿಯುಳ್ಳವನಾಗಿ ಪ್ರತೀಕರಿಸು ಮರುಳೆ ॥ ೫ ॥

ಜ್ಞಾನಪ್ರಕಾಶದಲಿ ಇದ್ದ ನಿನ್ನ ಹೃದಯ
ಸ್ಥಾನದಲ್ಲಿ ಅಷ್ಟದಳ ಕಮಲ ಮಧ್ಯ
ಶ್ರೀನಿವಾಸನ ಮೂರ್ತಿ ನಿಲಿಸಿ ಬಾಹಿರದಲ್ಲಿ
ಏನೇನು ಪೂಜೆಯೋ ನಿಲ್ಲದಲೆ ಮಾಡಿ ॥ ೬ ॥

ಗುಣ ನಾಲ್ಕರಿಂದಲ್ಲಿ ಉಪಾಸನೆಯ ಮಾಡಿ
ಕ್ಷಣಕ್ಷಣಕೆ ಶ್ರೀಹರಿಯ ಪಾದವ ನೋಡುತ
ಅಣೋರಣಿ ಚೇತನ ಚೇತನಕ್ಕೆ ನಿಯಾಮಕ
ಫಣಿಶಯನನಲ್ಲದೆ ಮತ್ತೊಬ್ಬರಿಲ್ಲವೆಂದು ॥ ೭ ॥

ಮಮತೆಯನ್ನೇ ತೊರೆದು ಮೇಲೊಂದಪೇಕ್ಷಿಸದೆ
ಸಮ ವಿಷಮ ತಿಳಿದೊಂದೇ ಭಕುತಿಯಿಂದ
ಸಮಾಧಿಗೊಳಗಾಗಿ ದೃಷ್ಟಿ ಸರ್ವತ್ರಾಸು
ಕ್ರಮದಿಂದಾನಂದಭರಿತ ಭಾವುಕನಾಗಿ ॥ ೮ ॥

ಈ ಪರಿ ಧ್ಯಾನಿಸಲು ದೇವ ಕರುಣವ ಮಾಳ್ಪ
ಪಾಪಸಂಚಿತವು ಪ್ರಾರಬ್ಧನಾಶ
ಅಪರೋಕ್ಷಿತನಾಗೋ ನಿನ್ನ ಯೋಗ್ಯತೆಯೆಷ್ಟೋ
ಗೋಪಾಲ ವಿಜಯವಿಠಲನಲ್ಲಿ ವಾಲ್ಗೈಸಿ ॥ ೯ ॥

ಈ ದೇವರ ನಾಮವು ಬಹಳ ಅರ್ಥವತ್ತಾದದ್ದು. ೧೬ ತಾಳಗಳುಳ್ಳ ವಿಸ್ತಾರವಾದ ಕಂಕಣಾಕಾರ ಸುಳಾದಿಯಲ್ಲಿ ಇದರ ವ್ಯಾಖ್ಯಾನವನ್ನು ವಿಜಯದಾಸರು ಮಾಡಿರುತ್ತಾರೆ. ಮತ್ತೆ ಅದೇ ಸುಳಾದಿಗೆ ಒಂಬತ್ತು ಸುಳಾದಿಗಳು ಟಿಪ್ಪಣಿಗಳಂತೆ ರಚಿತವಾಗಿವೆ. ಈ ಹತ್ತು ಸುಳಾದಿಗಳಲ್ಲಿ ಮಂತ್ರಶಾಸ್ತ್ರ ತಂತ್ರಶಾಸ್ತ್ರ ಯೋಗಶಾಸ್ತ್ರ ಇವೆಲ್ಲದರ ಸಾರಾಂಶವು ವರ್ಣಿತವಾಗಿದೆ. ಈ ಕ್ರಮದಿಂದ ಧ್ಯಾನ ಮಾಡಿದರೆ ಸಾಕ್ಷಾತ್ಕಾರವಾಗುವದೆಂದು ಭರವಸೆ ಕೊಟ್ಟ ಮಹಾನುಭಾವರಾದ ವಿಜಯದಾಸರು—

Sri Vidyabharathi Book Centre, Sringeri

CC-0. In Public Domain. Digitized by eGangotri

'ಸಿದ್ಧಸಾಧನವಿದು ಬಿಂಬ ಕಾಂಬುವದಕ್ಕೆ ।
ಪದ್ಮಿವಲ್ಲಭ ವಿಜಯವಿಠಲನ ದಯದಿಂದ'

ಎಂಬದಾಗಿ ಕಂಕಣಾಕಾರ ಸುಳಾದಿಯ ಜತೆಯಲ್ಲಿ ಹೇಳಿರುತ್ತಾರೆ.

ಪಾದಸೇವನ ಭಕ್ತಿ

ರಾಗ : ಕಾಂಬೋದಿ — ತಾಳ : ಜಂಪೆ

ಭಜಿಸಿ ಬದುಕೆಲೊ ಮಾನವ । ಅಜಸುರೇಂದ್ರಾದಿಗಳು ವಂದಿಸುವ
ಪಾದವನು ॥ ಪ ॥

ಪಾಕಶಾಸನಗೊಲಿದು ಬಲಿಯ ಮೆಟ್ಟಿದ ಪಾದ । ಕಾಕು ಶಕಟನ ಒದ್ದು
ಕೊಂದ ಪಾದ
ನಾಕಭೀಕರ ಬಕನ ಮೆಟ್ಟಿ ಸೀಳಿದ ಪಾದ । ಲೋಕಪಾವನೆ ಗಂಗೆ
ಜನಿಸಿರುವ ಪಾದವನು ॥ ೧ ॥

ಶಿಲೆಯಾದ ಅಹಲ್ಯೆಯ ಶುದ್ಧಿಮಾಡಿದ ಪಾದ । ಒಲಿದು ಪಾರ್ಥನ ರಥವ
ಮೆಟ್ಟಿರ್ದ ಪಾದ
ಕಲಿ ದುರಿಯೋಧನನ ನೆಲಕೆ ಕೆಡಹಿದ ಪಾದ । ಬಲಿದ ಕಾಳಿಂಗನ ಹೆಡೆ
ತುಳಿದ ಪಾದವನು ॥ ೨ ॥

ಗರುಡ ಶೇಷಾದಿಗಳು ಪೊತ್ತು ತಿರುಗುವ ಪಾದ । ಧರಣಿ ಈರಡಿ ಮಾಡಿ
ಅಳೆದ ಪಾದ
ಸಿರಿ ತನ್ನ ತೊಡೆಯ ಮೇಲಿಟ್ಟು ಒತ್ತುವ ಪಾದ । ದೊರೆ ಕಾಗಿನೆಲೆಯಾದಿ
ಕೇಶವನ ಪಾದವನು ॥ ೩ ॥

ಅರ್ಚನಭಕ್ತಿ

ತನ್ನ ಅಂತರ್ಗತ ಪರಮಾತ್ಮನನ್ನು ಧ್ಯಾನಮಾಡಿ ಪ್ರತೀಕದಲ್ಲಿ ಆವಾಹಿಸಿ ಮನೆಗೆ ಬಂದ ಮಾನ್ಯ ಅತಿಥಿಯನ್ನು ಸತ್ಕರಿಸುವಂತೆ ಸತ್ಕರಿಸುವುದಕ್ಕೆ ಅರ್ಚನೆಯೆಂದು ಹೆಸರು. ಆಸನ, ಪಾದ್ಯ, ಅರ್ಘ್ಯ, ಆಚಮನ, ಅಭಿಷೇಕ, ವಸ್ತ್ರ, ಉಪವೀತ, ಗಂಧ, ಅಕ್ಷತೆ, ಪುಷ್ಪ, ಧೂಪ, ದೀಪ, ನೈವೇದ್ಯ,

Sri Vidyabharathi Book Centre, Sringeri

CC-O. In Public Domain. Digitized by eGangotri

ತಾಂಬೂಲ, ದಕ್ಷಿಣ, ಫಲ ಸಮರ್ಪಣಗಳು; ಅರ್ಚನಾಂಗಗಳಾದ ಷೋಡಶೋಪಚಾರಗಳು. ಪೂರ್ವಾಂಗ ಉತ್ತರಾಂಗ ಸಹಿತವಾದ ಪೂಜೆಯು ತೀರ್ಥಗ್ರಹಣದಿಂದ ಪರಿಸಮಾಪ್ತವಾಗುವುದು. ವಿಧಿವಿಧಾನಗಳಿಂದ ಅರ್ಚನೆ ಮಾಡಿ ಪರಮಾತ್ಮನ ಪ್ರಸಾದವನ್ನು ಸಂಪಾದಿಸುವ ಕ್ರಮವನ್ನು ಆಗಮ ಶಾಸ್ತ್ರದಂತೆ ಅಲ್ಲಿ ಸಂಸ್ಕೃತದಲ್ಲಿದ್ದರೆ ಇಲ್ಲಿ ಕನ್ನಡ ಹಾಡುಗಳಾಗಿ ಹಾಡಿ ಸಂಸ್ಕೃತ ತಿಳಿಯದವರಿಗೆ ಹರಿದಾಸರು ಮಹೋಪಕಾರ ಮಾಡಿದರು.

> ಅಗ್ನೌ ಕ್ರಿಯಾವತಾಂ ವಿಷ್ಣೋಃ ಜ್ಞಾನಿನಾಂ ಹೃದಯೇ ಹರಿಃ
> ಪ್ರತಿಮಾ ಸ್ವಪ್ರಬುದ್ಧಾನಾಂ ಸರ್ವತ್ರ ವಿದಿತಾತ್ಮನಾಂ ॥

ಎಂಬ ಶಾಸ್ತ್ರವಾಕ್ಯದಲ್ಲಿ ಅಪ್ರಬುದ್ಧರು ಪ್ರತಿಮೆಯಲ್ಲಿ ದೇವರನ್ನು ತಿಳಿಯುವರೆಂದು ಹೇಳಿದ್ದರೂ ಆ ಶಾಸ್ತ್ರ ಪಙ್ಕ್ತಿಯನ್ನು ಬರೆದವರು ಸಹ ಮೂರ್ತಿ ಪೂಜೆಯನ್ನು ಬಿಟ್ಟದ್ದು ಕಂಡುಬಂದಿಲ್ಲ. ಶಂಕರ, ರಾಮಾನುಜ, ಮಧ್ವರಂಥ ಮತಸ್ಥಾಪನಾಚಾರ್ಯರುಗಳು ಕಡೆಯತನಕ ಮೂರ್ತಿಪೂಜೆಯನ್ನು ಬಿಡಲಿಲ್ಲ. ರಾಮ, ಕೃಷ್ಣ ಮೊದಲಾದ ಅವತಾರಪುರುಷರು ಮೂರ್ತಿ ಪೂಜೆ ಮಾಡಿದರೆಂದು ಪುರಾಣಗಳು ಸಾರುತ್ತಿವೆ. ಶಿವನು ರಾಮನನ್ನು ಪೂಜಿಸುವನಂತೆ! ರಾಮನು ಶಿವನನ್ನು ಪೂಜಿಸುವನಂತೆ! ಮೂರ್ತಿ ಪೂಜೆಯನ್ನು ಬಿಡುವುದೆಂದರೆ ಬಾಲ್ಯದಲ್ಲಿ ಕಲಿತ ಕಾಗುಣಿತಾಕ್ಷರಗಳಿಂದಲೇ ಶಾಸ್ತ್ರಗ್ರಂಥಗಳನ್ನು ಬರೆಯಬೇಕೇ ಎಂದು ಕೇಳಿದಂತಾಗುತ್ತದೆ. ಲೇಖನದ ವಸ್ತು ಬದಲಾಗುವುದಲ್ಲದೆ ಅಕ್ಷರ ಬದಲಾಗುವುದಿಲ್ಲ. ಯಾವ ಆಚಾರ್ಯರು ಬಾಹ್ಯ ಮೂರ್ತಿಪೂಜೆ ಬಿಟ್ಟು ಮಾನಸಿಕ ಪೂಜೆ ಮಾಡಿದರೆಂದು ತೋರಿಸಿದರೂ ಆ ಮಾನಸ ಪೂಜೆಯಲ್ಲಿ ಮಾನಸಿಕ ಮೂರ್ತಿಯನ್ನು ಅವರು ಕಲ್ಪಿಸಿಕೊಳ್ಳದೆ ಪೂಜೆ ಮಾಡಿಲ್ಲ. ಶಿಲೆಯಾದರೇನು, ಲೋಹವಾದರೇನು, ಮಾನಸಿಕವಾದರೇನು, ಅಂತು ಅದು ಮೂರ್ತಿ. ವ್ಯಾಸರಾಯರಂಥಾ ಯತೀಶ್ವರರು ಶಕ್ತಿ ಕುಂದಿದಾಗ—

ರಾಗ : ಕಲ್ಯಾಣಿ — ತಾಳ : ಜಂಪೆ

ಎನ್ನ ಬಿಂಬಮೂರ್ತಿಯ ಪೂಜಿಸುವೆ ನಾನು । ಮನಮುಟ್ಟಿ ಅನುದಿನವು
ಮರೆಯದೆ ಜನರೇ ॥ ಪ ॥

Sri Vidyabharathi Book Centre, Sringeri

CC-0. In Public Domain. Digitized by eGangotri

ಗಾತ್ರವೇ ಮಂದಿರ ಹೃದಯವೇ ಮಂಟಪ | ನೇತ್ರವೇ ಮಹದೀಪ ಹಸ್ತ ಚಾಮರವು
ಯಾತ್ರೆ ಪ್ರದಕ್ಷಿಣೆ ಶಯನ ನಮಸ್ಕಾರ | ಶಾಸ್ತ್ರ ಮಾತುಗಳೆಲ್ಲ ಮಂತ್ರಂಗಳು ॥ ೧ ॥

ಎನ್ನ ಸ್ವರೂಪವೆಂಬುದೆ ರನ್ನಗನ್ನಡಿ | ಎನ್ನ ಮನೋವೃತ್ತಿಯೆಂಬುದೇ ಭಕುತಿ
ಇನ್ನು ನುಡಿಯುವ ಹರಿನಾಮಾಮೃತವೆ ತೀರ್ಥ | ಎನ್ನ ಮನವೆಂದೆಂಬ ಸಿಂಹಾಸನ ॥ ೨ ॥

ಅನ್ಯ ದೇವತೆಯೇಕೆ ಅನ್ಯ ಪ್ರತಿಮೆಯೇಕೆ | ಅನ್ಯವಾದ ಮಂತ್ರತಂತ್ರವೇಕೆ
ಎನ್ನಲ್ಲಿ ಭರಿತ ಸಾಧನೆಗಳು ಇರಲಾಗಿ | ಚೆನ್ನಾಗಿ ಶ್ರೀ ಕೃಷ್ಣಸ್ವಾಮಿಯನು ಪೂಜಿಸುವೆ ॥ ೩ ॥

—ಎಂಬುದಾಗಿ ಹಾಡಿದರು.

ಶ್ರೀ ಪುರಂದರದಾಸರು—

ರಾಗ : ಮುಖಾರಿ — ತಾಳ : ಜಂಪೆ

ಸುಲಭ ಪೂಜೆಯ ಮಾಡಿ ಬಲವಿಲ್ಲದವರು | ಕಾಲಕಾಲದ ಕರ್ಮ ಕೇಶವನಿಗರ್ಪಿಸಿ ॥ ಪ ॥

ನುಡಿವ ನುಡಿಗಳೆಲ್ಲ ಪಾಂಡುರಂಗನ ಜಪವು | ಮಡದಿಮಕ್ಕಳು ಎಲ್ಲ ಪರಿವಾರವು
ನಡುಮನೆ ಅಂಗಳವು ಉಡುಪಿ ಭೂವೈಕುಂಠ | ಎಡಬಲದ ಮನೆಯವರೆ ಕಡುಭಾಗವತರು ॥ ೧ ॥

ಇರುಳು ಹಚ್ಚುವ ದೀಪ ಹರಿಗೆ ನೀರಾಜನವು | ಮಾರಡಿಯ ಧೋತ್ರವೇ ಪರಮವಸ್ತ್ರ
ತಿರುಗಾಡಿ ದಣಿಯುವುದೆ ಹರಿಗೆ ಪ್ರದಕ್ಷಿಣೆಯು | ಮರಳಿ ಹೊಡೆ ಹೊರಳುವದೆ ನೂರು ದಂಡ ॥ ೨ ॥

Sri Vidyabharathi Book Centre, Sringeri

 CC-O. In Public Domain. Digitized by eGangotri

ಹೀಗೆ ಈ ಕಲಿಯಲ್ಲಿ ದಿನದಿನದಿ ನಡೆಸಿದರೆ | ಜಗದೊಡೆಯ ಶ್ರೀಕೃಷ್ಣ
ಸುಲಭನಹನು
ಬೇಗ ತಿಳಿದುಕೊಳ್ಳಿ ಹೋಗುತಿದೆ ಆಯುಷ್ಯ | ಯೋಗಿ ಪುರಂದರ
ವಿಠಲ ಸಾರಿ ಹೇಳಿದನು || ೩ ||

—ಎಂಬುದಾಗಿ ಹಾಡಿದರು.

ಶ್ರೀ ಗೋಪಾಲದಾಸರು—

ನಾನು ಮಾಡುವ ಸ್ನಾನ | ನಿಮಗದೆ ವಿಚಿತ್ರ | ಸ್ನಾನ ಗಂಧಸುವಸನ
ಉಪವೀತ ಸ್ರಕು ಆಚ | ಮಾನ ದೇಹವೆ ಭವನ | ಮನಸಿನ ಬಯಕೆಗಳು
ನಾನಾ ಮಣಿಗಳಾಭರಣ | ದೀಪವೆ ಸುಜ್ಞಾನ ||
ಕೋಣತ್ರಯ ಹೃದಯಾಬ್ಜ ಪೀಠವು | ಈ ನೆರೆದ ಜನರೇ ಆವರಣವು
ಪಾನ ಉಂಬನ್ನವೆ ನೈವೇದ್ಯವು | ಘ್ರಾಣೇಂದ್ರಿಯ ವಿಷಯ ಧೂಪವು
ಕಾಣಿಕೆ ಭಕುತಿ ಗತಿ ಪ್ರದಕ್ಷಿಣೆ | ಶಯನ ನಮನ ನುಡಿಯೆ ಮಹಾಜಪ
ಏನು ಕಂಡದು ಕೇಳಿದದು ಸುಖ | ಶ್ರೇಣಿ ನಿನ್ನಯ ಪ್ರತಿಮೆಗಳು ಜಗ
ತ್ರಾಣ ಗುರು ಗೋಪಾಲವಿಠಲ | ದೀನವತ್ಸಲ ಸಾತ್ವತಾಂಪತಿ
ನೀನಿರುತ ಒಲಿದೆನ್ನ ಪಾಲಿಸು || ೩ || ವಿಜಯವಿಠಲರಾಯ ||

—ಎಂಬುದಾಗಿ ಹಾಡಿದರು.

ಶ್ರೀ ಜಗನ್ನಾಥದಾಸರು—

ವಾರಿಜ ಭವಾಂಡವೆ ಸುಮಂಟಪ
ಮೇರುಗಿರಿ ಸಿಂಹಾಸನವು ಭಾ
ಗೀರಥಿಯೆ ಮಜ್ಜನವು ದಿಗ್ವಸ್ತ್ರ ನುಡಿ ಮಂತ್ರ |
ಭೂರುಹಜ ಫಲಪುಷ್ಪ ಗಂಧ ಸ
ಮೀರ ಶಶಿರವಿ ದೀಪ ಭೂಷಣ
ತಾರಕೆಗಳೆಂದರ್ಪಿಸಲು ಕೈಕೊಂಡು ಮನ್ನಿಸುವ ||
ಮೇದಿನಿಯ ಮೇಲುಳ್ಳ ಗೋಷ್ಪಾ
ದೋದಕಗಳೆಲ್ಲಮಲ ತೀರ್ಥವು
ಪಾದಪ ಧರಾದ್ರಿಗಳು ಸುಕ್ಷೇತ್ರ ಜೀವಗಣ |

Sri Vidyabharathi Book Centre, Sringeri

CC-0, In Public Domain. Digitized by eGangotri

ಶ್ರೀಧರನ ಪ್ರತಿಮೆಗಳು ಅವರುಂ
ಬೋದನವೆ ನೈವೇದ್ಯ ನಿತ್ಯದಿ
ಹಾದಿ ನಡೆವುದು ಯಾತ್ರೆಯೆಂದವನಂಘ್ರಿಗಳ ಭಜಿಸು ||

ಮತ್ತೆ ತತ್ತ್ವಸುವಾಲಿಯಲ್ಲಿ ಭಂಗ್ಯಂತರದಲ್ಲಿ—

ಭೂಮಂಡಲವೆ ಪೀಠ | ವ್ಯೋಮ ಮಂಡಲ ಛತ್ರ | ಸೋಮ ಸೂರಿಯರೇ ಮಹದೀಪ ||
ಮಹದೀಪ ನಕ್ಷತ್ರ ಸ್ತೋ | ಮಗಳೆ ನಿನಗೆ ಉಪದೀಪ ||
ಮಳೆಯ ಮಜ್ಜನವ್ರ ದಿ | ಗ್ವಲಯಗಳು ವಸನಗಳು | ಬೆಳೆವ ಬೆಳಸುಗಳೇ ನೈವೇದ್ಯ ||
ನೈವೇದ್ಯ ಜನರ ಕಂ | ಗಳ ಕಾಂತಿ ನಿನಗೇ ಆರಾರ್ತಿ ||
ಭೂರುಹವ ಚಾಮರವ ಮಾಡುವೆನು ಶರಧಿ | ಘೋರ ಗರ್ಜನೆಯೇ ಮಹವಾದ್ಯ ||
ಮಹವಾದ್ಯ ಜೀವರ ಸಾರ | ಸುಸ್ವರವೇ ಸಂಗೀತ ||
ಪಾತಾಳ ಪಾದುಕ ವಿ | ಧಾತ ಲೋಕವೆ ಮಕುಟ | ಶ್ವೇತ ದ್ವೀಪಗಳೇ ಒಡ್ಯಾಣ ||
ಒಡ್ಯಾಣ ವೈಕುಂಠ ಆತ | ಪತ್ರಗಳೇ ನಿನಗೀವೆ ||
ನಡೆವುದೇ ಹರಿಯಾತ್ರೆ ನುಡಿವುದೇ ಹರಿನಾಮ | ಕುಡಿವ ನೀರುಗಳೇ ಅಭಿಷೇಕ ||
ಅಭಿಷೇಕ ದಿನದಿನದಿ | ಒಡಲಿಗುಂಬುವದೆ ನೈವೇದ್ಯ ||

—ಎಂಬ ರೀತಿಯಲ್ಲಿ ಮಾನಸಪೂಜೆ ಮಾಡಿದರು.

ದೇವರನ್ನು ತಾಯಿಯೆಂದು ಪೂಜಿಸುವವರಿದ್ದಾರೆ. ತಂದೆ ಮೊದಲಾದ ಬಂಧುತ್ವದಿಂದ ಪೂಜಿಸುವವರಿದ್ದಾರೆ. ವಿಶ್ವಂಭರನೆಂದು ಪೂಜಿಸುವವರು ದೂರ್ವೆಯಿಂದ ಪೂಜಿಸುತ್ತಾರೆ. ಸರ್ವಮಂಗಳೆಯೆಂದು ಪೂಜಿಸುವವರು ಹರಿದ್ರಾಚೂರ್ಣದಿಂದ ಪೂಜಿಸುತ್ತಾರೆ. ಪರಮಶಿವನೆಂದು ಪೂಜಿಸುವವರು ಬಿಲ್ವಪತ್ರೆಯಿಂದ ಪೂಜಿಸುತ್ತಾರೆ. ಶ್ರೀಹರಿಯೆಂದು ಪೂಜಿಸುವವರು ತುಲಸಿಯಿಂದ ಅರ್ಚನೆ ಮಾಡುತ್ತಾರೆ. ಶ್ರೀಕೃಷ್ಣನು ಗೀತೆಯಲ್ಲಿ 'ಯಾವ ಯಾವನು ಯಾವ ಯಾವ ರೂಪಗಳಲ್ಲಿ ಭಕ್ತಿಯಿಟ್ಟು ಪೂಜಿಸುವನೋ ಅವ

Sri Vidyabharathi Book Centre, Sringeri

 CC-O. In Public Domain. Digitized by eGangotri

ನನನಿಗೆ ಅದದರಲ್ಲೇ ಶ್ರದ್ಧೆಯನ್ನುಂಟುಮಾಡುತ್ತೇನೆ. ವಿಧಿಯಿಂದ ಮಾಡಲಿ ಬಿಟ್ಟು ಮಾಡಲಿ, ಹೇಗೆ ಮಾಡಿದರೂ ಅದು ನನ್ನನ್ನೇ ಸೇರುತ್ತದೆ' ಎಂದು ಮೊದಲಾಗಿ ಹೇಳಿರುವಂತೆ ಪೂಜೆಯೆಲ್ಲವೂ ಶ್ರೀಕೃಷ್ಣಾರ್ಪಣವಾಗುತ್ತದೆ. ಪುರಂದರದಾಸರು ಶ್ರೀಹರಿಪೂಜೆಗೆ ತುಲಸಿ ಮುಖ್ಯ ಪೂಜಾದ್ರವ್ಯವೆಂಬುದನ್ನು ತಿಳಿಸಲೋಸುಗ—

ರಾಗ : ಮೋಹನ — ತಾಳ : ಅಟ್ಟ

ಒಲ್ಲನೋ ಕೃಷ್ಣ ಕೊಳ್ಳನೋ । ಎಲ್ಲಾ ವಸ್ತುಗಳಿದ್ದು । ತುಲಸಿಯಿಲ್ಲದ
ಪೂಜೆ ॥ ಪ ॥

ಸಿಂಧು ಗೋದಾವರಿ ಗಂಗೆಯುದಕವಿದ್ದು । ಗಂಧ ಪರಿಮಳ ವಸ್ತುಗಳಿದ್ದು
ಛಂದುಳ್ಳ ದಿವ್ಯ ಪಂಚಾಮೃತವಿದ್ದು । ವೃಂದಾವನದ ಶ್ರೀ ತುಲಸಿಯಿಲ್ಲದ
ಪೂಜೆ ॥ ೧ ॥

ಕಮಲ ಮಲ್ಲಿಗೆ ಜಾಜಿ ಚಂಪಕವಿದ್ದು । ವಿಮಲ ಧೂಪದೀಪ ಕರ್ಪೂರವಿದ್ದು
ಅಮಿತ ಪಂಚಭಕ್ಷ್ಯ ಅಮೃತಾನ್ನಗಳಿದ್ದು । ಕಮಲನಾಭಗೆ ಪ್ರಿಯ ತುಲಸಿ
ಯಿಲ್ಲದ ಪೂಜೆ ॥ ೨ ॥

ಪೂಜೆಯ ಮಾಡಿರೋ ಶ್ರೀ ತುಲಸೀ ದಳದಿ। ಮೂಜಗದೊಡೆಯ
ಮುರಾರಿಯನು
'ರಾಜಾಧಿರಾಜಾಯ' ಮಂತ್ರಪುಷ್ಪಗಳಿಂದ । ರಾಜರಾಜ ನಮ್ಮ
ಪುರಂದರವಿಠಲನ ॥ ೩ ॥

—ಎಂದು ಹಾಡಿರುತ್ತಾರೆ.

ಅರ್ಚನಭಕ್ತಿಯ ಪೂಜಾ ವಿಧಾನವೊಂದನ್ನು ತೆಗೆದುಕೊಂಡು ಹರಿದಾಸ ಸಾಹಿತ್ಯದಲ್ಲಿನ ಪದ ಸುಳಾದಿಗಳನ್ನು ಕ್ರಮವಾಗಿ ಕೊಟ್ಟರೆ ಅದೊಂದು ಆಗಮಶಾಸ್ತ್ರವಾಗುತ್ತದೆ. ವೇದಮಂತ್ರಗಳನ್ನು ಪೌರಾಣಿಕ ಸ್ತೋತ್ರಗಳನ್ನು ಕನ್ನಡದಲ್ಲಿ ದೇವರನಾಮಗಳಾಗಿ ನೂರಾರು ನುಡಿಗಳಲ್ಲಿ ಹಾಡಿರುತ್ತಾರೆ.

ಮೂರ್ತಿಪೂಜೆಯ ಅರ್ಥವನ್ನು ತಿಳಿಯದೆ ಕಲ್ಲು ಕಂಚುಗಳೇ ದೇವರೆಂದು ಭ್ರಮಿಸಿದರೆ, ಬೆಳ್ಳಿ ಬಂಗಾರಗಳೇ ಲಕ್ಷ್ಮಿಯೆಂದು ಭ್ರಮಿಸಿದರೆ,

Sri Vidyabharathi Book Centre, Sringeri

CC-0. In Public Domain. Digitized by eGangotri

ಹರಿದಾಸರಂತೆ ಪೆಟ್ಟು ಕೊಟ್ಟವರು ಮತ್ತೊಬ್ಬರಿಲ್ಲ. 'ಶಿಲಾದಿ ವಿಗ್ರಹ ಥಳಾಸೆ ಹರಿಯೆಂಬೆಲಾ ಕೇವಲ ಸುಳ್ಳೋ' ಮತ್ತು 'ಲೋಹ ಕಲ್ಲ ಪ್ರತಿಮೆ ಪೂಜಿಸಿದರೆ ಅಲ್ಲೇನಿಲ್ಲ' ಎಂಬ ಮಾತುಗಳಿಗಿಂತ ಈ ಮಾದರೀ ಗ್ರಂಥದಲ್ಲಿ ಈ ಬಗ್ಗೆ ಹೆಚ್ಚು ಬರೆಯಬೇಕಾಗಿಲ್ಲ.

ವಂದನಭಕ್ತಿ

ರಾಗ : ಮಧ್ಯಮಾವತಿ — ತಾಳ : ಆದಿ

ನಾರಾಯಣ ತೇ ನಮೋನಮೋ | ನಾರದಸನ್ನುತ ನಮೋನಮೋ || ಪ ||
ಮುರಹರ ಭವಹರ ಮುಕುಂದ ಮಾಧವ | ಗರುಡಗಮನ ಪಂಕಜನಾಭ
ಪರಮಪುರುಷ ಭವಭಂಜನ ಕೇಶವ | ನರಮೃಗಶರೀರ ನಮೋನಮೋ
|| ೧ ||

ಜಲಧಿಶಯನ ರವಿಚಂದ್ರ ವಿಲೋಚನ | ಜಲರುಹ ಭವನುತ ಚರಣಯುಗ
ಬಲಿಭಂಜನ ಗೋವರ್ಧನಗಿರಿಧರ | ನಳಿನನಾಭ ತೇ ನಮೋನಮೋ || ೨ ||

ಆದಿದೇವ ನಿಗಮಾಗಮ ಪೂಜಿತ | ಪಾದ ತ್ರಿಜಗ ಮೋಹನ ರೂಪ
ವೇದೋದ್ಧಾರಕ ವೆಂಕಟನಾಯಕ | ಪುರಂದರವಿಠಲ ತೇ ನಮೋ ನಮೋ
|| ೩ ||

ದಾಸ್ಯಭಕ್ತಿ

ಶಬ್ದ ಶ್ರವಣ ಮಾತ್ರದಿಂದ ದಾಸ್ಯಭಕ್ತಿಯು ಸಾಮಾನವಾದುದೆಂದು ಕಂಡುಬರಬಹುದು. ದಾಸ್ಯಭಕ್ತಿ ಅಷ್ಟು ಸುಲಭವಾದುದಲ್ಲ. ದಾಸನೆಂದು ಕರೆದುಕೊಂಡ ಮಾತ್ರಕ್ಕೆ ಅವನು ದಾಸನಾಗುವುದಿಲ್ಲ. ಹಿಂದೆ ಉಗಾಭೋಗಗಳ ಜೊತೆಯಲ್ಲಿ ಕೊಟ್ಟಿರುವ—

ದಾಸನಾಗುವೆನೆಂದು ಆಶೆ ಮಾಡಲು ಬಲು ಕ್ಲೇಶವ ಬಡಿಸುವ | ಅ |
ಭಾಸವ ನುಡಿಸುವ ನಾಶ ಮಾಡುವ ಸಕಲೈಶ್ವರ್ಯಗಳನೆಲ್ಲ
ಗ್ರಾಸವಾಸಕೆ ತರಲೀಸನು ಪರರಿಂದ ಮೋಸವಾದ ಭವ
ಕ್ಲೇಶಪಾಶದಿ ಬಿಗಿದು ದ್ವೇಷವ ಮಾಡಿಸುವ ನೀಚರ ಕೈಯಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಸಿನವನ ಮಾಡಿ ಬೀಸಿ ಬಿಸಾಡುವ ಲೇಸು ಕೊಡುವ ನಮ್ಮ
ವಿಜಯವಿಠಲನ
ದಾಸನಾಗುವನಿಗೆ ಕ್ಲೇಶ ಬಡಿಸದೆ ಒಲಿಯ ||

ಎಂಬಂತೆ ದಾಸತ್ವ ದೊರಕುವುದು ಮಾನವ ಜೀವಿತದ ವಿಷಪರೀಕ್ಷೆ. ಹರಿದಾಸನು ಹೇಗಿರಬೇಕು ಅಥವಾ ಹೇಗಿದ್ದರೆ ಹರಿದಾಸ ಎಂಬುದನ್ನು ವಿಜಯದಾಸರ ಸುಳಾದಿಯಿಂದ ತಿಳಿಯುವುದು ಮೇಲು.

ಹರಿದಾಸ ಲಕ್ಷಣ ಸುಳಾದಿ

ಧ್ರುವತಾಳ

ಹರಿದಾಸ ಲಕ್ಷಣವಿರಬೇಕು ಈ ಪರಿ
ಗರುವ ಕೋಪ ಮದ ಮತ್ಸರ ಬಿಡಬೇಕು ।
ಗುರುಹಿರಿಯರಿಗಾದರಪೂರ್ವಕದಿಂದ
ಕರವ ಮುಗಿದು ನಮಸ್ಕರಿಸುತಲಿರಬೇಕು ।
ನೆರೆಹೊರೆಯವರಿಗೆ ನಿರುತವಿದ್ದರು ಬೇ
ಸರಗೊಳಿಸದೆ ಸಂಚರಿಸುತಿರಬೇಕು ।
ಹರಣ ಹರಿಯಾಧೀನ ನೆರೆದ ಸತೀ ಸುತರು
ನಿರುತ ಹರಿಗೆ ದಾಸರೆಂದು ಗಣಿಸಬೇಕು ।
ಹರಿದಿವಸ ಹರಿಚರಿತೆ ಹರಿಸ್ಮರಣೆ ಹರಿಪೂಜೆ
ಹರಿಶ್ರವಣ ಅಂತರಶುದ್ಧಿಯಿರಲಿಬೇಕು ।
ಹರಿ ಪರದೇವತೆ ವಿಜಯವಿಠಲ ಗತಿ
ಸುರರಾದ್ಯರಿಗೆ ಎಂದು ಉರವಣಿಸಿ ನುಡಿಯಬೇಕು ||೧||

ಮಟ್ಟತಾಳ

ಪರಧನ ಪರಸತಿ ಪರನಿಂದ್ಯದವರ
ಸರಸದಲ್ಲಿರದೆ ಚರಿಸಬೇಕು ದೂರ ।
ನರರು ಬೈದರೆ ಆದರವೆಂದು ತಿಳಿದು
ಹರಷಬಡಲಿಬೇಕು ನಿರುತದಲಿ ।

Sri Vidyabharathi Book Centre, Sringeri

CC-0. In Public Domain. Digitized by eGangotri

ಸುರತರು ದೊರೆತಂತೆ ಕರೆದು ಮನ್ನಿಸಿದರು
ಹಿರಿಹಿರಿ ಹಿಗ್ಗದೆ ಬರಡು ತಾನಿರಬೇಕು ।
ನೆರೆದ ಸುದಣಿಯೊಳು ಚರಿಸಬಾರದು ಪೋಗಿ
ಬರಿದೆ ಕುಳಿತು ಹಾಳು ಹರಟೆಯನಾಡದೆ ।
ಮರಿಯಾದೆಯ ಸೊಲ್ಲು ಇರಬೇಕು ತನ್ನೊಳು
ಪರಮತತ್ವವ ತಿಳಿದು ಆರುಹರಿಗರುಹುತ್ತ ।
ಸುರಿಯಬೇಕು ಸುಖ ಮರಳಿ ಮರಳಿ ನೆನೆದು
ಪರಮ ಗುಪ್ತನಾದ ವಿಜಯವಿಠಲನ
ನೆರೆನಂಬಲಿಬೇಕು ಕುರುಹು ಕಾಣಿಸುವಂತೆ ॥ ೨ ॥

ತ್ರಿಪುಟತಾಳ

ಲೇಸಾದರೂ ಹರಿಯ ಕಾರುಣ್ಯವೆನಬೇಕು
ಲೇಸಾಗದೆ ಬಲು ಕ್ಲೇಶ ಬಂದೊದಗಲು ।
ಏಸು ಜನ್ಮದ ಪಾಪರಾಶಿ ಬಂದೊದಗಿತೊ
ಈ ಶರೀರಕೆ ಬಂದು ಪ್ರಾಪ್ತವಾದದ್ದು ।
ನೀಸದೆ ಬಿಡದೆಂದು ಸತ್ಯದಿಂದಿರಬೇಕು
ಲೇಶವಾದರು ದುಃಖ ಹಚ್ಚಿಕೊಳ್ಳದೆ ಮಹಾ ।
ತೋಷದಲ್ಲಿರಬೇಕು ನೋಯದಲೆ
ಶ್ರೀಶನೆ ಗತಿಯೆಂದು ಬೇಸರದಲೆ ಬಂದ ।
ಕ್ಲೇಶಗಳುಣಬೇಕು ಬಂದಾಗಲೂ
ದೇಶಕಾಲಗುಣ ಪರಿಪೂರ್ಣ ಹರಿಯಿರೆ ।
ಘಾಸಿ ಎಲ್ಲಿಯದೆಂದು ನಲಿಯಬೇಕು
ನಾಶವಾಗದು ಭೇದ ಸಿದ್ಧವೆಂದೆನಬೇಕು ।
ವಾಸುದೇವ ನಮ್ಮ ವಿಜಯವಿಠಲನ
ದಾಸಾನುದಾಸರ ದಾಸನಾಗಲಿಬೇಕು ॥ ೩ ॥

ಅಟ್ಟತಾಳ

ಬಡತನ ಬಂದರೆ ಹಿಗ್ಗುತಲಿರಬೇಕು
ಜಡನಾಗಿ ಬಾಹಿರದಲ್ಲಿ ತೋರಬೇಕು ।

Sri Vidyabharathi Book Centre, Sringeri

CC-O. In Public Domain. Digitized by eGangotri

ಅಡಿಗಡಿಗೇ ಲಜ್ಜೆಗೆಡಬೇಕು ಸರ್ವದಾ
ಒಡಲಿಗೆ ಚಿಂತೆ ಮಾಡದೆ ದೃಢವಿರಬೇಕು ।
ಒಡವೆವಸ್ತು ತಂದೆತಾಯಿ ಈ ಲೋಕದ
ಒಡೆಯ ಕೃಷ್ಣನೆಂದು ಬಿಡದೆ ನಂಬಲಿಬೇಕು ।
ಕೊಡಬೇಕು ಕೊಡಬೇಕು ಒಬ್ಬರಿಗದರೊಳು ।
ಕಡುಗಲಿ ವಿಜಯವಿಠಲನ ಪಾದ
ಪಿಡಿದು ಭಜಿಸಬೇಕು ನಲಿನಲಿದಾಡುತ್ತ ॥ ೪ ॥

ಆದಿತಾಳ

ಉಟ್ಟದಕಿಂತ ಮೇಲು ಇಟ್ಟದಕಿಂತ ಮೇಲು
ಕೊಟ್ಟದಕಿಂತ ಮೇಲು ವಿಠಲನ ಸ್ಮರಣೆ ಮನ ।
ಮುಟ್ಟ ಬಹಿರದಲ್ಲಿ ಅಟ್ಟಹಾಸದಿಂದ
ಚಿಟ್ಟಕ್ಕಿ ಕೂಗುವದು ಇಷ್ಟು ಸುಖವೆ ಮೇಲು ।
ದಟ್ಟಡಿಯಿಂದ ತಿಳಿದು ನಿಷ್ಠೆಯಿಂದಿರಲು
ಇಷ್ಟ ಪ್ರಾಪುತ ಅವಗೆ ಅರಿಷ್ಟ ಪರಿಹರ ।
ಹುಟ್ಟುಸಾವಿಲ್ಲದ ವಿಜಯವಿಠಲನು
ಕೊಟ್ಟು ಸಾಕುವ ದಯವಿಟ್ಟು ದಾಸನ ಮಾಡಿ ॥ ೫ ॥

ಜತೆ

ಈ ಪರಿ ಇದ್ದವಗೆ ಅನಂತ ಜನುಮಕ್ಕು ।
ತಾಪತ್ರಯಗಳಿಲ್ಲ ವಿಜಯವಿಠಲ ಬಲ್ಲ ॥ ೧ ॥

—ಹೀಗಿರದೆ ದಾಸವೇಷ ಧರಿಸಿದರೆ ಅವನನ್ನು ಈಶ ಒಪ್ಪುವುದಿಲ್ಲ. ಆ ಮಾತನ್ನು ಸಹ ವಿಜಯದಾಸರು—

ಪಾಮರ ಮನುಜರು ದಾಸವೇಷವ ಧರಿಸಿ
ನೇಮನಿಷ್ಠೆಗಳೆಲ್ಲ ಪೋಗಾಡಿಕೊಂಡು ।
ಕಾಮಚಾರಿಗಳಾಗಿ ಕಂಡಲ್ಲಿ ಸಂಚರಿಸಿ
ಮಾಮನೋಹರನ ಲೀಲೆಯ ಪೇಳಿದರೇನು ।
ಈ ಮಹಿಯೊಳು ಮೃಷ್ಟಾನ್ನ ಭೋಜನ ವಸನ

Sri Vidyabharathi Book Centre, Sringeri

CC-0. In Public Domain. Digitized by eGangotri

ಇದೇ ಮಹಾ ಫಲವೆಂದು ಹಿಗ್ಗಿ ಕೆಟ್ಟುಪೋಗುವನು ।
ಸ್ವಾಮಿ ತನ್ನ ನಿಜದಾಸನೆಂದವನಿಗೆ ನಾಮಸುಧೆಯನಿತ್ತು
ಸಲಹುತಿಪ್ಪ ॥

—ಎಂದು ಮೊದಲಾಗಿ ಒಂದು ಉಗಾಭೋಗದಲ್ಲಿ ಹೇಳಿರುವರು

ದಾಸ್ಯಭಕ್ತಿಯ ಪರಮಾವಧಿಯನ್ನು ಮುಟ್ಟಿದವನೆಂದರೆ ಒಬ್ಬ ಮಾರುತಿರಾಯ. ಆವನ ಮಾರ್ಗವನ್ನನುಸರಿಸಿ ಸಾಧನೆ ಮಾಡಿ ಸಿದ್ಧಪುರುಷರೆಂದೆನಿಸಿದವರು ಹರಿದಾಸರುಗಳು.

ಪುರಂದರದಾಸರು ಮಾರುತಿಯನ್ನು ನೋಡಿ ದಾಸ್ಯಭಕ್ತಿಯನ್ನು ವಿವರಿಸಿರುವುದರ ಸೊಬಗನ್ನು ಕೆಳಕಂಡ ದೇವರನಾಮದಲ್ಲಿ ನೋಡಬಹುದು.

ರಾಗ : ಮಧ್ಯಮಾವತಿ — ತಾಳ : ಆದಿ

ಸೇವಕತನದ ರುಚಿಯನರಿತೆ | ದೇವ ಹನುಮರಾಯ | ವೈರಾಗ್ಯ ಬೇಡಿದೆ ॥ಪ॥

ಉದಧಿಯ ದಾಟಿ ಸೀತೆಯ ಕ್ಷೇಮ ತಂದಾಗ | ಮಡದಿಯ ಮಾಡೆನ್ನ
ಬಾರದಿತ್ತೇ |
ಪದದಿ ಪಾಷಾಣವ ಪೆಣ್ಣು ಮಾಡಿದವಗೆ | ಇದು ಏನಸಾಧ್ಯವೋ ಹನುಮ
ಒಲ್ಲದ್ಹೋದೆ ॥೧॥

ಕ್ಷಣದಲಿ ಸಂಜೀವನಗಿರಿ ತಂದಾಗ | ಹಣಹೊನ್ನು ಬೇಡಲು ಕೊಡದಿದ್ದನೇ |
ರಾಮ |
ವಿನಯದ ವಿಭೀಷಣಗೆ ರಾಜ್ಯವಿತ್ತವನಿಗೆ | ಏನಸಾಧ್ಯವೊ ಇದು ಹನುಮ
ಒಲ್ಲದೆ ಹೋದೆ ॥೨॥

ಸಾರ್ವಭೌಮನು ಮೆಚ್ಚಿದಾಗಲೆ ನೀ ಪೋಗಿ | ಊರ್ವಿಯ ಬೇಡಲು ಕೊಡ
ದಿದ್ದನೇ | ರಾಮ |
ಸರ್ವವ ತೊರೆದು ಶ್ರೀ ಪುರಂದರವಿಠಲನ | ನಿರ್ವ್ಯಾಜದ ಸೇವೆ
ಮಾಡಿದೆಯೊ ಹನುಮಾ ॥೩॥

Sri Vidyabharathi Book Centre, Sringeri

 CC-O. In Public Domain. Digitized by eGangotri

ಸಖ್ಯಭಕ್ತಿ

ಭಕ್ತಿಯ ಒಂದೊಂದು ಅಂತಸ್ತಿನಲ್ಲೂ ಹರಿದಾಸರು ಅಭ್ಯಾಸ ಮಾಡಿ ತಮ್ಮ ಅನುಭವಗಳನ್ನು ಬರೆದಿರುತ್ತಾರೆ. ಸಖ್ಯಭಕ್ತಿಯಲ್ಲಿ ದಾಸ್ಯಭಾವ ವಿರುವುದಿಲ್ಲ. 'ಇಟ್ಟಂತೆ ಇರುವೆನು' ಎಂದು ದಾಸ್ಯ ಭಕ್ತರು ನುಡಿದರೆ 'ಇದ್ದಂತೆ ಇರುವೆನು' ಎಂದು ಸಖ್ಯ ಭಕ್ತರು ನುಡಿಯುವರು. 'ಅಸ್ಮದಿಷ್ಟೈಕ ಕಾರ್ಯಾಯ ಪೂರ್ಣಾಯ ಹರಯೇ ನಮಃ' ಎಂಬುದಾಗಿ ದೇವರ ಸಖನ ಸ್ಥಾನದಲ್ಲಿ ನಿಂತು ಬಲು ಭರವಸೆಯಿಂದ ಶ್ರೀಮದಾಚಾರ್ಯರು ನುಡಿದಿರುತ್ತಾರೆ. ವಾದಿರಾಜರು 'ನಮ್ಮನ್ನೊಲ್ಲದ ಹಯವದನ ಎಲ್ಲಿದ್ದರೇನು' ಎಂದು ಉಗಾಭೋಗದಲ್ಲಿ ಇತರ ದೃಷ್ಟಾಂತಗಳೊಡನೆ ಕೊನೆ ಮಾತಾಗಿ ಹಾಡಿದ್ದಾರೆ. ಪುರಾಣ ಕಾಲದಲ್ಲಿ ಅರ್ಜುನನು ನನ್ನ ಪ್ರತಿಜ್ಞೆ, ತನ್ನದಲ್ಲವೆಂದು ಕೃಷ್ಣನು ಹೇಳಿದರೆ ಅವನನ್ನೆ ಎದುರಿಸುವೆನೆಂದು ಯುದ್ಧಕ್ಕೆ ಹೊರಟದ್ದಾನೆ. ಸಖನ ಸುಖವನ್ನು ನೋಡಿ ದೇವರಾದವನು ಸಂತೋಷಪಡದಿದ್ದರೆ —ಸಖನ ದುಃಖವನ್ನು ನೋಡಿ ದೇವರಾದವನು ಮರುಗದಿದ್ದರೆ—ಆ ಯಾರ ಗೊಡವೆಗೂ ಬರದ, ಜಗದ್ವ್ಯಾಪಾರವರ್ಜ್ಯ, ಚಿದಾತ್ಮಕ ದೇವರು, ಬೆಳ್ಳಿಯಾದರೂ ಸಲ್ಲದ ನಾಣ್ಯದಂತೆ! ಎಂಬುವುದು ಸಖ್ಯಭಕ್ತರ ಮತ. ಪಾಂಡವರ ಸಖ್ಯಭಕ್ತಿಗೆ ಮೆಚ್ಚಿ ಶ್ರೀಕೃಷ್ಣನು—

ಲಾವಣಿ

ಹದಿನಾಲ್ಕು ಲೋಕಕೆ ದಾತ ಹರಿ | ಪಾಂಡವರ ಮನೆ ದೂತ || ಪ ||

ಚತುರ ಹಸ್ತದಿಂದೆಂಜಲ ತೆಗೆವ | ಅತುಲಿತ ಕಟ್ಟಿತಾ ಎಲ್ಲ ಬಿಸುಡುವ
ಘೃತದಧಿ ಕ್ಷೀರಾದ್ಯಮೃತ ಸುರಸವ | ಸತಿ ವಕ್ಷ ಕೌಂಸ್ತುಭಕಧಿಕೆಂದರಿವ
ಹಿತದಿ ಪೀತಾಂಬರ ಪತನಾನ್ನವ | ಶ್ರೀಪತಿ ಚಿತ್ರಾಕೃತಿಗತಿಶಯ ತಿಳಿದು
ಸತತ ಸದನದಲಿ ಕೆಲಸಕೊದಗುವ || ೧ ||

ಘರ್ಮಬೆಳ್ಳಿ ಬೆತ್ತಂಗಳ ಪಿಡಿವ | ಪೇರ್ಮೆಯಿಂದ ತಾ ವದಗಿ ನಿಂತಿರುವ
ನಿರ್ಮಲವಾಗಿ ಕುದುರೆ ತೊಳೆತರುವ | ಮರ್ಮವರಿತು ಕವಳೋದಕ ಕೊಡುವ
ಕರ್ಮಕಾರನಂದದಿ ಕಾದಿರುವ | ಶರ್ಮದಿಂದ ರಥಕಟ್ಟಿ ಸಾರಥ್ಯವ
ಧರ್ಮಾನುಜ ಹೊರಟಾಗ ನಡೆಸುವ || ೨ ||

Sri Vidyabharathi Book Centre, Sringeri

CC-0. In Public Domain. Digitized by eGangotri

ಕಾಸುವೀಸ ಸಂಬಳವನೆ ಬಯಸ । ಸಾಸಿರ ನಾಮದೊಡೆಯ ಸಿರಿಯರಸ
ಸಾಸಿವೆಯಷ್ಟಾಯಾಸವ ಪಡಿಸ । ದಾಸರ ಮನೆ ಕೆಲಸಕೆ ಅತಿಹರುಷ
ತಾ ಸಮಯವರಿತು ಪಾಲಿಪ ಪುಣ್ಯಪುರುಷ । ಭಾಸುರ ಗುಣಗಣ
ವೇಂಕಟ ವಿಠ
ಲ್ಲೇಶ ಸದಾ ಭಕ್ತರ ಬಳಿ ಸರಸ ॥ ೩ ॥

ಕರ್ಮಯೋಗಿಗಳು ತಾವಾಚರಿಸಿದ ಯಜ್ಞಾದಿಕರ್ಮಗಳಿಗೆ ದೇವರೊಲಿಯ ದಿದ್ದರೆ, ಮತ್ತೆ ಯಜ್ಞಗಳನ್ನಾಚರಿಸಿರುವುದುಂಟು. ಜ್ಞಾನಯೋಗಿಗಳು ದೇವರ ಸಾಕ್ಷಾತ್ಕಾರವಾಗದಿದ್ದರೆ, ಮತ್ತೆ ತಪಸ್ಸು ಮಾಡುವುದುಂಟು. ಸಖ್ಯ ಭಕ್ತರ ಮಾತು ಹಾಗಿಲ್ಲ. ತಮ್ಮಂತೆ ದೇವರು ಬರದಿದ್ದರೆ ನಿಂದಿಸುವದಕ್ಕೆ ಅವರು ಹಿಂದೆಗೆದಿಲ್ಲ. ಭಕ್ತರ ನಿಂದೆ ದೇವರಿಗೆ ವಂದನೆಯಾಗಿಬಿಟ್ಟದೆ. ಪುರಂದರದಾಸರು ಸಖ್ಯಭಕ್ತಿಯಲ್ಲಿ ಆಡಿರುವ ಮಾತುಗಳನ್ನು ನೋಡೋಣ!

ರಾಗ : ಸೌರಾಷ್ಟ್ರ — ತಾಳ : ಅಟ್ಟ

ಏನೆಂತೆಂದೊಲಿವೆ ನಿನ್ನವರಂತೆ ಕೇಡಬುದ್ಧಿ ಎನ್ನೊಳಿಲ್ಲ
ಗುಣಹೀನರಲ್ಲದೆ ದೀನರ ಪಾಲಿಪ ಬುದ್ಧಿ ನಿನ್ನೊಳಿಲ್ಲ ॥ ಪ ॥

ತರಳ ಪ್ರಹ್ಲಾದನಂದದಿ ನಿನ್ನ ರೂಪವ ಕೆಡಿಸಲಿಲ್ಲ
ನರನಂತೆ ಬಂಡಿಯ ಬೋವನ ಮಾಡಿ ನಾ ಹೊಡೆಸಲಿಲ್ಲ
ಸುರನದೀಸುತನಂತೆ ನೊಸಲೊಳು ಬಾಣವ ನೆಡಿಸಲಿಲ್ಲ
ವರ ಅಂಬರೀಷನಂತೆ ಈರೈದು ಜನ್ಮವ ಪಡಿಸಲಿಲ್ಲ ॥ ೧ ॥

ನಾರದನಂತೆ ಕಂಡವರ ಕೊಂಡೆಯ ಮಾತನಾಡಲಿಲ್ಲ
ಪರಾಶರನಂತೆ ನದಿಯೊಳಂಬಿಗರ ಹೆಣ್ಣ ನಾ ಕೂಡಲಿಲ್ಲ
ಆ ರುಕ್ಮಾಂಗದನಂತೆ ಮಗನ ಕೊಲ್ಲಲು ದೃಢಮಾಡಲಿಲ್ಲ
ಮಾರುತಿಯಂತೆ ನೀನುಣಕುಳಿತೆಡೆಯ ಕೊಂಡೋಡಲಿಲ್ಲ ॥ ೨ ॥

ಅನಿಹಿತದಲಿ ವಿಭೀಷಣನಂತೆ ಅಣ್ಣನ ಕೊಲಿಸಲಿಲ್ಲ
ಯುವತಿ ದ್ರೌಪದಿಯಂತೆ ಶಾಖ ಪತ್ರವನೊಂದನುಣಿಸಲಿಲ್ಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಕವ ಪುಂಡರೀಕನಂತೆ ಇಟ್ಟಿಗೆ ಮೇಲೆ ನಾ ನಿಲಿಸಲಿಲ್ಲ
ಅವರಂತೆ ಪುರಂದರವಿಠಲ ನಿನ್ನನು ನಾ ಮೆಚ್ಚಿಸಲಿಲ್ಲ ॥ ೩ ॥

ಪುರಂದರದಾಸರ ಮಾತು ಹೀಗಿದ್ದರೆ ವಿಜಯದಾಸರು ಇನ್ನೂ ಒಂದು ಹೆಜ್ಜೆ ಮುಂದಿಟ್ಟು ಹಾಡಿದ ಸುಳಾದಿ ಕೆಳಕಂಡಂತಿದೆ—

ಧ್ರುವತಾಳ

ಅಂಜಿಸುವದೇನೋ ಪರಂಜಳವಾಗಿದೆ
ಕೆಂಜಡೆಯನೊಡೆಯ ಯಾದವರೇಯ ।
ಎಂಜಲನುಂಡು ಗುಲುಗಂಜಿ ದಂಡೆಯ ಮುಡಿದು
ಗಂಜಿಗೂಳನು ಕುಡಿದದ್ದು ಮರೆತೆಯ ।
ಭುಂಜಿಸಿ ಪರವ ಮಾಡಿ ತಂದ ವಾಗರವ
ಅಂಜದೆ ಏಳು ದಿನ ಗಿರಿಯ ಪೊತ್ತೆ ।
ಕಂಜನಾಭನೆ ನಿನಗಂಜಲ್ಯಾತಕೊ ಧ
ನಂಜಯನಾಮ ಸಿರಿವಿಜಯವಿಠಲ ಗೊಲ್ಲ ॥ ೧ ॥

ಮಟ್ಟತಾಳ

ಬಾಲಕತನದಲ್ಲಿ ಹಾಲು ಮೊಸರು ಕದ್ದು
ಕೋಲುಗುದಿಗೆಯಿಂದ ಕೊಲೆಯ ಕೊಲಿಸಿಕೊಂಡೆ ।
ಕಾಲನು ಒರಳಿಗೆ ಬೀಳ ಕಟ್ಟಿಸಿಕೊಂಡೆ
ಚಾಲಿವರಿದೆ ಗೊಲ್ಲ ಬಾಲೇರಿಗೆ ಎಲ್ಲಾ ।
ಮೂಲೋಕವ ಬಿಡದೆ ಆಳುವ ದೊರೆತನ
ಏಳಲವಾಯಿತೊ ವಿಜಯವಿಠಲರಾಯ ॥ ೨ ॥

ರೂಪಕ ತಾಳ

ರಕ್ಕಸಗಂಜಿ ಮುಚುಕುಂದನ ಮೊರೆಬಿದ್ದೆ
ರಕ್ಕಸಗಂಜಿ ಸಾಗರದಿ ಪುರವ ಬಿಗಿದೆ ।
ರಕ್ಕಸಗಾಗಿ ವಿಕಾರವೊಗನಾದೆ

Sri Vidyabharathi Book Centre, Sringeri

CC-0. Public Domain. Digitized by eGangotri

ರಕ್ಕಸಗಾಗಿ ಕೋಡಗ ಬಲ ನೆರಹಿದೆ ।
ರಕ್ಕಸಾಂತಕ ನಿನ್ನ ಮಕ್ಕಳಾಟಕೆ ದೇ
ವಕ್ಕಳು ಮನಸಿಗೆ ಸಿಕ್ಕದೆಂಬೋರೋ
ಮುಕ್ಕಣ್ಣನೊಲಿಸಿ ಮಕ್ಕಳ ಬೇಡಿದೆ
ಠಕ್ಕು ಮಾಯಾತನ ಕಕ್ಕಜಗೊಂಬೆನೊ ।
ಚಿಕ್ಕವನನ್ನು ಹಿರಿಯನ್ನಮಾಡಿ ಪುಣ್ಯ
ದಕ್ಕಿಸಿಕೊಂಡೆ ವಿಜಯವಿಠಲ ಪುಂಡ ॥ ೩ ॥

ಜಂಪೆತಾಳ

ಅಳುಕುವವಗೆ ಕಾವಳದೊಳು ಹುಲುಸರವೆ
ತುಳಿದರೆ ಮನಸಿಗೆ ಪೊಳೆವ್ರೋದು ಫಣಿಯೆಂದು
ಅಳುಕದಗೇ ಶರಧಿ ಮೊಳಕಾಲುದ್ದವೊ
ಅಳಕುವದ್ಯಾಕೋ ನಿನ್ನಯ ಭೀತಿಗೆ
ಕುಲಿಶ ಪಾಪದ ಗಿರಿಗೆ ವಿಜಯ ವಿಠಲರೇಯ
ಕಲಕಾಲದಂತೆ ನೋಡದ ಪರಿಯೇನೊ ॥ ೪ ॥

ತ್ರಿಪುಟತಾಳ

ಬಾಗಿಲ ಕಾಯಿಸಿದ ಹಾಗ ಕೊಡದೆ ಬಲಿ
ಯೋಗಿ ನಾರದನು ಸ್ತ್ರೀಯಳ ಬೇಡಿದ ।
ಭಾಗೀರಥೀಸುತನು ನಿನ್ನ ಪಂಥವ ಕಳೆದ
ಅನುಜೆಯ ಕದ್ದೊಯ್ದ ಜೋಗಿಯಾಗಿ ಪಾರ್ಥ ।
ನಾಗರಾಜನು ನಿನ್ನ ಕಚ್ಚಿ ಕಂಗೆಡಿಸಿದ
ಹೀಗಿದ್ದವರ ಬೆರಳ ಬಾಗಿಸಿದ್ದದ್ದೇನೋ ।
ನೀ ಗತಿಯೆಂದರೆ ಎನ್ನನಂಜಿಪದ್ಯಾಕೊ
ಭಾಗವತ ಜನಪ್ರಿಯ ವಿಜಯವಿಠಲರೇಯ ॥ ೫ ॥

Sri Vidyabharathi Book Centre, Sringeri

 CC-O. In Public Domain. Digitized by eGangotri

ಅಟ್ಟತಾಳ

ಸೂತಸತಿಯು ಉದುರದಿ ಬಂದವನಿಗೆ
ಖ್ಯಾತಿ ಯಾತಕೊ ಇಷ್ಟು ಭೂತಳದೊಳಗೆ।
ದೂತನಾಗಿ ಪೋಗಿ ಹಸ್ತಿನಪುರದಲ್ಲಿ
ಬೂತಿಗಳಿಂದಲಿ ಬಿಗಿಸಿ ಕಟ್ಟಿಸಿಕೊಂಡೆ।
ಯಾತಕೊ ನಿನಗಿಷ್ಟು ಬಿಂಕದ ಮಾತಿನ್ನು
ಭೀತಿಗೊಂಡವರಿಗೆ ತೃಣ ಮೇರುವಾದಂತೆ!
ಕೋತಿ ಕೊರವಂಗೆ ಸಿಕ್ಕಿದಂತಿಹೆ ನಾನು
ಈ ತೆರದಲಿ ಎನ್ನ ಕಾತುರಗೊಳಿಪರೆ।
ಜಾತಿಯಿಲ್ಲದ ನಿತ್ಯ ಜಾತರಹಿತ ಮಹಾ
ಭೂತ ವಿಜಯವಿಠಲ ನೀತವೆ ನಿನಗಿದು ॥ ೬ ॥

ಆದಿತಾಳ

ಒದ್ದವನು ಒದ್ದೇಪೋದ । ಮೆದ್ದವನು ಮೆದ್ದೇಪೋದ
ಕದ್ದವನು ಕದ್ದೇಪೋದ । ಗೆದ್ದವನು ಗೆದ್ದೇಪೋದ ।
ಇದ್ದವನು ಇದ್ದೇಪೋದ । ಗದ್ದುಗೆ ನೀಡಿದವ
ಹೊದ್ದಿದ ನಿನ್ನವರೊಳು । ಸಿದ್ಧಿದಾಯಕ ವಿಜಯವಿಠಲ
ಬಿದ್ದೆ ನಿನ್ನ ಬಲೆಗೆ ಪೊದ್ದು ಎನ್ನಕೂಡೆ । ನಿ
ಷಿದ್ಧವೆಂದಿಗು ಕಾಣೆ ॥ ೭ ॥

ಜತೆ

ಕಂಡವರಿಗೆ ಮುನ್ನೇ ಪ್ರಾಯಶ್ಚಿತವೆ ಇಲ್ಲ
ಕುಂಡಲಿಶಯನ ಶ್ರೀ ವಿಜಯವಿಠಲ ಗೊಲ್ಲ ॥ ೧ ॥

ಲೋಕದಲ್ಲಿ ಜ್ಞಾನಿಗೂ ಭಕ್ತನಿಗೂ ಮಹದಂತರವಿರುತ್ತದೆ. ಜ್ಞಾನಿಯ ಪರಮಾವಧಿ ಜ್ಞಾನವೆಂದರೆ ತನ್ನ ಬಿಂಬರೂಪಿ ಪರಮಾತ್ಮನನ್ನು ತನ್ನೊಳಗೆ ನೋಡುವುದು. ಯೋಗಿಗಳ ಮಾತಿನಿಂದ ಹೇಳಿದರೆ ಜ್ಯೋತಿ ದರ್ಶನ ಮಾಡುವುದು. ಅಂದರೆ ತನ್ನೊಳಗಿರುವ ಆತ್ಮಜ್ಯೋತಿ ಮಿಂಚಿನಂತೆ ಹೊಳೆ

Sri Vidyabharathi Book Centre, Sringeri

CC-O. In Public Domain. Digitized by eGangotri

ವುದನ್ನು ಕಾಣುವುದು. ಆ ಜ್ಯೋತಿಯನ್ನು ವೇದದಲ್ಲಿ—**'ಸ ಬ್ರಹ್ಮಾ ಸ ಶಿವಃ ಸ ಹರಿಃ ಸೇಂದ್ರಃ ಸೋಕ್ಷರಃ ಪರಮಃ ಸ್ವರಾಟ್'** ಎಂಬದಾಗಿ ಸರ್ವಶಬ್ದವಾಚ್ಯವೆಂದು ಕರೆದಿರುವರು. ಇಂತಹ ತೇಜೋದರ್ಶನ ಮಾಡಿದ ಜ್ಞಾನಿಯು ಜನನಮರಣರಹಿತನಾಗಿ ತೃಪ್ತನಾಗಿ ಇರುತ್ತಾನೆ. ಯಾವ ಪುರಾಣೇತಿಹಾಸಗಳಲ್ಲಿ ನೋಡಿದರೂ ಜ್ಞಾನಿ ಮೌನಿಯಾಗಿರುವುದು ಕಂಡುಬರುತ್ತದೆ. ಜ್ಞಾನಿ ಭಕ್ತನೂ ಆಗಿದ್ದರೆ ಜನರೊಡನಾಡುತ್ತಾನೆ. ಹೆಚ್ಚು ಪ್ರಮಾಣದಿಂದ ಜನರ ಉದ್ಧಾರ ಮಾಡುತ್ತಾನೆ; ಭಕ್ತನೆಂದೇ ಪ್ರತ್ಯೇಕ ಕರಿಸಿಕೊಂಡವನು ಜ್ಞಾನಿಯಂತೆ ತನ್ನೊಳಗೂ ದೇವರನ್ನು ಕಾಣುತ್ತಾನೆ; ಹೊರಗೂ ದೇವರ ದಿವ್ಯಲೀಲಾವಿಭೂತಿಗಳನ್ನನುಭವಿಸುತ್ತಾನೆ; ಮತ್ತು ಲೋಕವನ್ನುದ್ಧರಿಸುತ್ತಾನೆ. ಅಂತಹ ಭಕ್ತನಿಗೆ ದೇವರೂ ಭಕ್ತನಂತೆ ನಡೆದುಕೊಳ್ಳುತ್ತಾನೆ. ಹಾಗೆ ನಡೆದುಕೊಂಡ ಚರಿತ್ರೆಗಳು ಹರಿದಾಸರ ಜೀವಿತದಲ್ಲಿ ಅವರವರೇ ಹಾಡಿದ ದೇವರ ನಾಮಗಳಿಂದ ತಿಳಿದುಬರುತ್ತವೆ.

ನಾಹಂ ವಸಾಮಿ ವೈಕುಂಠೇ ನ ಯೋಗೀ ಹೃದಯೇ ರವೌ
ಮದ್ಭಕ್ತಾ ಯತ್ರ ಗಾಯಂತೇ ತತ್ರ ತಿಷ್ಠಾಮಿ ನಾರದ ॥ ೧ ॥

ತಾ॥ ನಾನು ವೈಕುಂಠದಲ್ಲಿ ವಾಸಮಾಡುವದಿಲ್ಲವೆಂದಲ್ಲ, ಯೋಗಿಗಳ ಹೃದಯದಲ್ಲಿ ವಾಸಮಾಡುವದಿಲ್ಲವೆಂದಲ್ಲ, ಸೂರ್ಯನಲ್ಲಿ ವಾಸಮಾಡುವದಿಲ್ಲವೆಂದಲ್ಲ; ನನ್ನ ಭಕ್ತರು ಎಲ್ಲಿ ಗಾನ ಮಾಡುವರೋ ಅಲ್ಲಿ ವಿಶೇಷತಃ ವಾಸಮಾಡುತ್ತೇನೆ, ಎಂಬಂತೆ ಈ ಸಂದಿಗ್ಧ ವಿಷಯದ ಅರ್ಥವನ್ನು ಮಾಡಿಕೊಳ್ಳಬೇಕು. ಈ ದೃಷ್ಟಿಯಿಂದ ಭಕ್ತನ ದೊಡ್ಡಸ್ತಿಕೆಯನ್ನು ನೋಡಬೇಕು. ಭಕ್ತಿಯ ಸ್ಥಾನಮಾನಗಳನ್ನು ಅರ್ಥಮಾಡಿಕೊಳ್ಳಬೇಕು.

ಭಕ್ತನು ಹೇಗಿದ್ದರೂ ದೇವರಿಗೆ ಬೇಕಾದವ. ದೇವರಿಗೆ ಬೇಕಾದವನಲ್ಲಿ ದೋಷಗಳಿರುವುದಿಲ್ಲ. ಲೌಕಿಕ ಗುಣದೋಷಗಳ ಅಳತೆಯಲ್ಲಿ ಭಕ್ತನನ್ನು ಅಳೆಯುವುದು ಉಚಿತವಲ್ಲ. ಲೋಕ ದೃಷ್ಟಿಯ ದೋಷಗಳು ದೇವರ ದೃಷ್ಟಿಯಲ್ಲಿ ದೋಷಗಳಲ್ಲವೇ ಎಂಬ ಸಂಶಯವಿದ್ದರೆ ಅದು ಕೆಳಕಂಡ ವಿಜಯದಾಸರ ಸುಳಾದಿಯಿಂದ ಪರಿಹಾರವಾಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸುಳಾದಿ

ಧ್ರುವತಾಳ

ಎಲ್ಲಿದ್ದರೇನು ಸಿರಿವಲ್ಲಭನ ತೊಂಡರಿಗೆ
ಇಲ್ಲವಿಲ್ಲವೊ ದೋಷ ಎಳ್ಳನಿತಾದರು ।
ಕೊಳ್ಳಿಗೆ ಕ್ರಿಮಿಗಳು ಚಲ್ಲವರಿದು ಮುತ್ತಿ
ನಿಲ್ಲದೆ ಬದುಕಿ ತಾವೆಲ್ಲ ಪೋಪುದುಂಟೆ ?
ಸೊಲ್ಲುಸೊಲ್ಲಿಗೆ ರಂಗನಲ್ಲದಿನ್ನಿಲ್ಲನೆಂಬ
ಬಲ್ಲಿದ ಭಕ್ತಿಯುಳ್ಳ ಭಕ್ತರಿಗೆ ।
ಎಲ್ಲಿಯು ದೋಷ ಮತ್ತೆಲ್ಲಿಯು ಜನನ
ಬಲ್ಲವರಿಗೆ ಧ್ಯಾನದಲ್ಲಿ ಆನಂದವು ।
ಚಿಲ್ಲರೆ ಮಾರ್ಗ ಬಿಡಿಸಿ ವಿಜಯವಿಠಲರೇಯ
ಸಲ್ಲಿಸುವನು ತನ್ನಲ್ಲಿ ಮನವನಿಡಲು ॥ ೧ ॥

ಮಟ್ಟತಾಳ

ತಪ್ಪದೆ ಎಣ್ಣೆಯ ಕೊಪ್ಪರಿಗೆಯೊಳವನ
ಅಪ್ಪನು ಬಿಸುಡಿಸಲು ಪುಷ್ಪಗಳಾದವು ।
ಸರ್ಪತಲ್ಪನ ಭಜಿಸುತಿಪ್ಪ ಮಹಾತ್ಮರಿಗೆ
ಕಪ್ಪು ಕಲುಷ ಹಾರುತಿಪ್ಪವು ಪುಡಿಯಾಗಿ ।
ಮುಪ್ಪಿಲ್ಲದ ದೈವ ವಿಜಯವಿಠಲ ತ್ರಿ
ಮ್ಮಪ್ಪನ ನೆನೆಯಲು । ಬಪ್ಪುದು ಕೈವಲ್ಯ ॥ ೨ ॥

ತ್ರಿಪುಟತಾಳ

ದಾರಿ ನಡೆದರೇನು ಧರ್ಮ ಮಾಡಿದರೇನು
ಊರು ಊರಿಗೆ ನಿತ್ಯ ತಿರುಗಲೇನು ।
ಭಾರ ಹೊತ್ತರೇನು ಬದುಕು ಮಾಡಿದರೇನು
ಬಾರಿಬಾರಿಗೆ ಮಾತನಾಡಲೇನು ।
ವಾರಿಗ್ಯವರ ಕೂಡ ಹರಿದಾಡಿದರೇನು
ನೀರ ಕಾವಡಿ ನಿತ್ಯ ಹೊತ್ತರೇನು ।

Sri Vidyabharathi Book Centre, Sringeri

CC-0. In Public Domain. Digitized by eGangotri

ನೂರಾರು ಬಾರಿಗೆ ಉಂಡು ತಿಂದರೇನು
ನಾರಿಯೊಡನೆ ಸಂಸಾರ ಮಾಡಿದರೇನು ।
ಪೋರರೊಡನೆ ಕೂಡಿ ಕುಣಿದಾಡಿದರೇನು
ಆರ ಸೇರಿದರೇನು ಆರ ಸೇವಿಸಲೇನು ।
ನಾರಾಯಣನ ಪಾದದಲ್ಲಿ ಹಗಲು ಇರುಳು
ಸೇರುತ ಮನವಿಟ್ಟ ದಾಸರಿಗೆ ।
ಸೂರೆ ವೈಕುಂಠವೊ ಅವರ್ಹಿಂದೆ ಸುತ್ತಲು
ದಾರಿಯೊ ಕನಕದ ಮಳೆ ಕಾಮಧೇನುವೊ ।
ಸಾರ ಹೃದಯರೊಳಿಪ್ಪ ವಿಜಯವಿಠಲನ
ಕಾರುಣ್ಯವಾದರೆ ಘೋರ ಕರ್ಮಗಳುಂಟೆ ॥ ೩ ॥

ಅಟ್ಟತಾಳ

ಜಾತರಹಿತ ಶ್ರೀನಾಥನ ಪಾದವ
ಆತುಮದೊಳಗಿಟ್ಟು ಮಾತುಮಾತಿಗೆ ಬಲು ।
ಪ್ರೀತೀಲಿ ಲಕುಮಿೀಶ ಮಾತಾಪಿತನು ಸರ್ವ
ವೀತನೆ ನಮಗೆಂದು ತಾ ತಿಳಿದವರಿಗೆ ।
ಯಾತಕೆ ಸ್ನಾನ ಸಂಧ್ಯಾನ ಕರ್ಮಂಗಳು
ಪ್ರಾತರಾರಂಭ ದಿನಾಂತವಿಡಿದು ಮುಖ್ಯ ।
ಘಾತಿಸಿಕೊಂಡೀಗ ಬತ್ತಿ ಬಳಲುವದ್ಯಾಕೆ
ದಾತನಂತಿಪ್ಪನು ವಿಜಯವಿಠಲ ಸುರ ।
ವ್ರಾತಕ್ಕೆ ಮೀರಿದ ಆತನೆ ಸರ್ವೇಶ ॥ ೪ ॥

ಆದಿತಾಳ

ನಿಂತಲ್ಲಿ ಕುಳಿತಲ್ಲಿ ಪಜ್ಞ್ಞಿ ಸಾಗಿದಲ್ಲಿ
ಪಂಥದಲ್ಲಿ ಏಕಾಂತದಲಿ ।
ಕಾಂತೆ ಸಂಗಡದಲ್ಲಿ ಸಂತರ ಬಳಿಯಲ್ಲಿ
ತಂತಿನಲ್ಲಿ ವನಾಂತದಲಿ ।
ತಂತು ವಾಸಗಳಲ್ಲಿ ಪಂಥ ಮಾಡುವಲ್ಲಿ
ಭ್ರಾಂತಿಯಲಿ ನಿಶ್ಚಿಂತೆಯಲಿ ।

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂತತ ಹರಿಪಾದಾಕ್ರಾಂತನಾಗಿ ತನ್ನ
ಸಂತರಿಸುವನ ನಿರಂತರದಲ್ಲಿ ।
ಅಂತರಂಗದೊಳಿಟ್ಟು ಅಂತರಮುಖನಾಗಿ
ಸಂತತ ಪಾಡುವ ಅಂತ್ಯಜಗೂ ಭಯ ।
ವೆಂತುಂಟು ಪೇಳಿರೋ ವಿಜಯವಿಠಲನಂಘ್ರಿ
ಚಿಂತೆ ಮಾಡುವ ಕುಲವಂತಗೆ ಭಯವೇ ॥ ೫ ॥

ಜತೆ

ಹ್ಯಾಗಾದರಿರಲಿ ಶ್ರೀ ವಿಜಯವಿಠಲನಂಘ್ರಿ
ಯೋಗದಲ್ಲಿದ್ದವನೆ ಮುಕ್ತಿಪಥಕೆ ಯೋಗ್ಯ ॥ ೧ ॥

ಆತ್ಮನಿವೇದನ ಭಕ್ತಿ

ಆತ್ಮನಿವೇದನವು ಎಲ್ಲಕ್ಕೂ ಹಿರಿದಾದ ಕಡೆಯ ಭಕ್ತಿ. 'ನಾಹಂ ಕರ್ತಾ ಹರಿಃ ಕರ್ತಾ ತತ್ಪೂಜಾ ಕರ್ಮ ಚಾಖಿಳಂ' ಎಂಬುದರಲ್ಲಿ ಆತ್ಮನಿವೇದನ ಭಕ್ತಿ ಅಡಗಿದೆ. 'ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ। ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ' ಎಂಬ ಗೀತೆಯ ಚರಮಶ್ಲೋಕಕ್ಕೆ 'ಆತ್ಮನಿವೇದನ' ಎಂಬ ಶಬ್ದವು ಸೂತ್ರದಂತಿದೆ. 'ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್ । ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಂ' ಎಂಬ ಶ್ಲೋಕಾರ್ಥಕ್ಕೆ ಫಲರೂಪವಾಗಿರುವದು ಆತ್ಮನಿವೇದನ ಭಕ್ತಿಯಾಗಿದೆ. ಶ್ರೀಮದ್ರಾಮಾಯಣದಲ್ಲಿ ಶ್ರೀರಾಮಚಂದ್ರನು ಅಪ್ಪಣೆ ಕೊಡಿಸಿದ 'ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ। ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ' ಎಂಬ ಶ್ಲೋಕಾರ್ಥದಂತೆ ದೊರೆಯುವ ಅಭಯವು ಆತ್ಮನಿವೇದನದ ಫಲವಾಗಿದೆ. ವಾತ್ಸಲ್ಯಾದಿ ಇತರ ಭಾವಗಳಿಂದ—ಸ್ತಂಭನ, ಸ್ವೇದ, ರೋಮಾಂಚ, ಸ್ವರಭಂಗ, ವೈವರ್ಣ್ಯ, ಅಶ್ರುಪ್ರಲಯ, (ಸ್ತ್ರೀಯಾಗಿದ್ದರೆ) ಸ್ತನ್ಯಸ್ರವಗಳುಂಟಾಗುತ್ತವೆ. ಆತ್ಮನಿವೇದನ ಭಕ್ತಿಯಿಂದ ಹಿಂದೆ ನಾಶವಾಗ್ಗಿದ್ದ ಸಂಚಿತಾಗಾಮಿ ಕರ್ಮಗಳ ಜೊತೆಗೆ ಪ್ರಾರಬ್ಧವೂ ನಷ್ಟವಾಗಿ ತನ್ನನ್ನು

Sri Vidyabharathi Book Centre, Sringeri

CC-0. In Public Domain. Digitized by eGangotri

ತಾನು ಮರೆದ ನಿತ್ಯಾನಂದದ ಸ್ಥಿತಿ ಪ್ರಾಪ್ತವಾಗುತ್ತದೆ. ಮತ್ತವನಿಗೆ ಕರ್ಮ ಲೇಪವಾಗುವುದಿಲ್ಲ; ವಾಸನೆಗಳಿರುವುದಿಲ್ಲ. ಅನೇಕ ಜನ್ಮಗಳಲ್ಲಿ ಮಾಡಿದ ಭಕ್ತಿಸಾಧನೆಗೆ ಫಲ ಈ ಮಹಾನಂದ. ಇಂತಹ ಭಕ್ತನಿಗೆ ಪುನರ್ಜನ್ಮವಿಲ್ಲ.

ಆದರೆ—ಈ ಪದವಿಗೇರಿದ ಭಕ್ತನು ಮತ್ತೆ ಪ್ರಪಂಚದಲ್ಲಿರುವುದಿಲ್ಲವೆ? ಜನರೊಡನೆ ವ್ಯವಹರಿಸುವುದಿಲ್ಲವೆ? ಆರ್ತರಾದ ಪಾಮರರಿಗೆ ಮಾರ್ಗ ದರ್ಶಕನಾಗುವುದಿಲ್ಲವೆ? ಎಂಬ ಪ್ರಶ್ನೆಯು ಸಹಜವಾಗಿ ಬರಬಹುದು. ಉತ್ತರವು ನಿರಾಶೆಯನ್ನುಂಟುಮಾಡುವಂತಿಲ್ಲ. ಈ ಬಗೆಯ ಭಕ್ತರು ಪರಮಾ ನಂದಸಾಮ್ರಾಜ್ಯವನ್ನನುಭವಿಸುತ್ತಿದ್ದರೂ ಪರಮಾತ್ಮನ ಇಚ್ಛೆಯಿಂದ ಪ್ರಪಂಚದಲ್ಲಿರುತ್ತಾರೆ. ತಮ್ಮ ವೇಷಭಾಷೆಗಳಿಂದ ತಮ್ಮನ್ನು ಇತರರಿಗೆ ತಿಳಿಸಿಕೊಳ್ಳದಂತಿರುತ್ತಾರೆ. ಮೂಕರಂತೆ, ಬಧಿರರಂತೆ ಕಾಣಿಸುತ್ತಾರೆ. ಇದ್ದಕ್ಕಿದ್ದಹಾಗೆ ನಗುತ್ತಾರೆ, ಅಳುತ್ತಾರೆ, ನಲಿಯುತ್ತಾರೆ. ಯೋಗ್ಯ ಭಕ್ತ ದೊರೆತರೆ ಅವನನ್ನೂ ತಮ್ಮಂತೆ ಮಾಡಿ ಕೃತಾರ್ಥನಾದೆನೆನ್ನುತ್ತಾರೆ. ಈ ಭಕ್ತರ ಇರುವಿಕೆಯನ್ನು ಜಗನ್ನಾಥದಾಸರು ಹೀಗೆಂದು ವರ್ಣಿಸಿರುತ್ತಾರೆ.

ರಾಗ : ಪೀಲು — ತಾಳ : ಆದಿ

ರಂಗ ನಿನ್ನ ಕೊಂಡಾಡುವ ಮಂಗಳಾತ್ಮರ । ಸಂಗ ಸುಖವಿತ್ತು ಕಾಯೊ
ಕರುಣಾಸಾಗರ ॥ ಪ ॥

ಅರಿಯರೊ ನೀನಲ್ಲದೆ ಮತ್ತನ್ಯ ದೇವರ । ಮರೆಯರೋ ನೀ ಮಾಡಿದಂಥ
ನಿತ್ಯೋಪಕಾರ
ತೊರೆಯರೊ ನಿನ್ನಂಘ್ರಿಸೇವ ಪ್ರತಿವಾಸರ । ಅರಿಯರೊ ಪರತತ್ವವಲ್ಲದೆ
ಇತರ ವಿಚಾರ ॥ ೧ ॥

ಮೂಕ ಬಧಿರರಂತಿಪ್ಪರು ನೋಳ್ಪ ಜನಕೆ । ಕಾಕು ಯುಕುತಿಗಳನವರು
ತಾರರೋ ಮನಕೆ
ಸ್ವೀಕರಿಸರನರ್ಪಿತ ಒಂದು ಕಾಲಕ್ಕೇ । ಆ ಕೈವಲ್ಯ ಭೋಗಸುಖ ಅವರಿಗೆ
ಬೇಕೇ ॥ ೨ ॥

ಜಯಾಜಯ ಲಾಭಾಲಾಭಾ ಮಾನಾಪಮಾನ । ಪ್ರೀಯಾಪ್ರಿಯ
ನಿಂದಾಸ್ತುತಿಗಳನುದಿನ

Sri Vidyabharathi Book Centre, Sringeri

CC-O. In Public Domain. Digitized by eGangotri

ಭಯಾಭಯ ಸುಖದುಃಖ ಲೋಷ್ಟಕಾಂಚನ | ಶ್ರೀಯರಸ ಚಿಂತಿಸುವರು
ನಿನ್ನ ಅಧೀನ || ೩ ||
ಈಶಿತವ್ಯರೆಂಬರು ಏಕಾಂತ ಭಕ್ತರು | ದೇಶಕಾಲೋಚಿತ ಧರ್ಮಕರ್ಮಾ
ಸಕ್ತರು
ಆಶಾಕ್ರೋಧ ಲೋಭಮೋಹ ಪಾಶಮುಕ್ತರು | ಈ ಸುಜನರೇ
ಶಾಪಾನುಗ್ರಹಶಕ್ತರು || ೪ ||
ಕಂಡ ಕಂಡಲ್ಲಿ ವಿಶ್ವರೂಪ ಕಾಂಬರು | ಉಂಡು ಉಣಿಸಿದ್ದು ನಿನ್ನ
ಯಜ್ಞವೆಂಬರು
ಬಂಡುಣಿಯಂದದಿ ನಾಮಾಮೃತವ ಸವಿವರು | ಹೆಂಡರು ಮಕ್ಕಳು ನಿನ್ನ
ದಾಸರೆಂಬರು || ೫ ||
ಬಿಡರು ತಮ್ಮ ಸ್ವಧರ್ಮಗಳ ಏನು ಬಂದರು | ಬಡರು ದೈನ್ಯ ಒಬ್ಬರಿಗು
ಲೋಕವಂದ್ಯರು
ಪಿಡಿಯರು ನಿನ್ನ ದ್ವೇಷಿಗಳಿಂದ ಏನು ಬಂದರು | ಕೊಡುವರು ಬೇಡಿ
ದಿಷ್ಟಾರ್ಥ ನಿತ್ಯಾನಂದರು || ೬ ||
ನಗುವರೊ ರೋದಿಸುವರೊ ನಾಟ್ಯವಾಡೋರೋ | ಬಗೆಯರು ಬಡತನ
ಭಾಗ್ಯ ಭಾಗವತರು
ತೆಗೆಯರೊ ನಿನ್ನಲ್ಲಿ ಮನ ಒಮ್ಮೆಗಾದರು | ಜಗನ್ನಾಥ ವಿಠಲ ನಿನ್ನವರೇನು
ಧನ್ಯರೊ || ೭ ||

ಇಂತಹ ಭಕ್ತರ ಮಾತುಗಳು ಹೇಗಿರುವವೆಂಬುದನ್ನು ಕೆಳಕಂಡ ವಿಜಯದಾಸರ ಸುಳಾದಿಯಲ್ಲಿ ನೋಡಬಹುದು.

ಧ್ರುವತಾಳ

ನೀ ನುಡಿದರಾವು ನುಡಿವೆವಯ್ಯ
ನೀ ನಡೆದರಾವು ನಡೆವೆವಯ್ಯ |
ನೀ ಪಿಡಿದರಾವು ಪಿಡಿವೆವಯ್ಯ
ನೀ ತಡೆದರಾವು ತಡೆವೆವಯ್ಯ |
ನೀ ನಿರ್ದಯನಾಗೆ ಅಜಭವಾದಿಗಳು

Sri Vidyabharathi Book Centre, Sringeri

CC-0. In Public Domain. Digitized by eGangotri

ಕಾಣಿಗೆ ಬಾರದೆ ಪೋಪರಯ್ಯ ।
ನೀನೆ ಸ್ವತಂತ್ರ ಅನಾದಿ ಪುರುಷನಯ್ಯ
ನೀನೆ ಜ್ಞಾನಗಮ್ಯ ವಿಜಯವಿಠಲರೇಯ

ಮಟ್ಟತಾಳ

ಅನ್ಯರೊಳು ನೀನೆ । ನಿನ್ನೊಳು ನೀನೆ
ಎನ್ನೊಳು ನೀನೆ । ತನ್ಮಯ ನೀನೆ ।
ಧ್ಯಾನಗಮ್ಯನು ನೀನೆ । ಜ್ಞಾನಮಹಿಮನು ನೀನೆ
ವಿಜಯವಿಠಲ ನೀನೆ । ಅಣುರೇಣು ನೀನೆ ।
ಘನತಮನು ನೀನೆ

ತ್ರಿಪುಟತಾಳ

ಬಂದವನು ನೀನೆ ಭಕುತರಾ ಹೃದಯ
ಮಂದಿರಾದಲ್ಲಿ ವಿಠಲಮೂರ್ತಿ ನೀನೆ ।
ನಿಂದವನು ನೀನೆ ಶೇಷ ಪರ್ವತದಲ್ಲಿ
ಛಂದದ ಸುಂದರ ತಿರುವೆಂಗಳಾ ನೀನೆ ।
ಒಂದೆರಡುಮೂರು ಎರಡು ಒಂದು ಎನಿಸಿ
ಮಂದಮತಿಗೆ ಆಶ್ಚರ್ಯ ತೋರುವ ನೀನೆ ।
ಒಂದಕ್ಕೊಂದಾನಂತ ವಿಜಯವಿಠಲ ನೀನೆ

ಜಂಪೆತಾಳ

ನಿನಗೆ ನೀನೆ ಐಕ್ಯ । ನಿನಗೆ ನೀನೆ ಭೇದ
ನಿನಗೆ ನೀನೆ ಮಾತು । ನಿನಗೆ ನೀನೆ ಕಥೆ ।
ನಿನಗೆ ನೀನೆ ಸ್ತ್ರೀಯು । ನಿನಗೆ ನೀನೆ ಪುರುಷ
ನಿನಗಲ್ಲದೆ ಉಂಟೆ । ಬಿನುಗು ದೈವಂಗಳಿಗೆ ।
ಅನಘ ವಿಜಯವಿಠಲ ।
ನಿನಗೆ ನೀನೆ ಆಳು । ನಿನಗೆ ನೀನೆ ದೊರೆಯು

Sri Vidyabharathi Book Centre, Sringeri

CC-O. In Public Domain. Digitized by eGangotri

ಜತೆ

ನೀನೆ ನೀನೆ ನೀನೆ ನಾನೆಂಬ ಮಾತಿಲ್ಲ
ನೀನೆ ನೀನೆ ವಿಜಯವಿಠಲ ಎಲ್ಲಾ ನೀನೆ

ಇದೇ ಅರ್ಥದಲ್ಲಿ ಇನ್ನೊಂದು ಸುಳಾದಿ

ಧ್ರುವತಾಳ

ಸರ್ವಸಮರ್ಪಣೆ ಮಾಡಿ ಮುಕ್ತನಾಗು
ಸರ್ವಾಧಿಷ್ಠಾನದಲ್ಲಿ ಹರಿಯ ತಿಳಿದು |
ದರ್ವಿಯಂದದಿ ಸರ್ವ ವಿಷಯಂಗಳೊಳಗಿದ್ದು
ನಿರ್ವಾಹ ಕರ್ತನಾಗು ಮನವೊಪ್ಪಿಸಿ |
ಓರ್ವನಿಂದಲಿ ಎಲ್ಲಾ ಸುಖದುಃಖ ಬಪ್ಪುದೆಂದು
ನಿರ್ಲೇಪನಾಗಿ ನೀ ತಿರುಗುತಿರು |
ಸರ್ವೋತ್ಕೃಷ್ಟಮೂರ್ತಿ ವಿಜಯವಿಠಲನು
ಸರ್ವಭಾರ ವಹಿಸಿ ನಿನ್ನ ಪೊರೆವ

ಮಟ್ಟತಾಳ

ನಾನೆ ಸರ್ವಕರ್ತನೆಂಬುವ ತಮಸಿ
ನಾನೆ ಹರಿಯೊಡನೆ ಮಾಳ್ಪೆನೆಂಬನೆ ಬದ್ಧ |
ನಾನೆ ಪಾಪಕೆ ಕರ್ತ ಹರಿ ಪುಣ್ಯಕೆಂದು
ಈ ನುಡಿ ನುಡಿದವನು ಸತ್ವಗುಣದವನು |
ನಾನ್ಯಾತಕೂ ಸಲ್ಲೆ ಹರಿ ಎನ್ನೊಳು ನಿಂತು
ಹೀನ ಲೇಸುಗಳೆಲ್ಲ ಹಿತ ಅಹಿತವನೆಲ್ಲ |
ನಾನಾ ರೂಪದಿ ನಿಂದು ತಾನೆ ಕರ್ತನಾಗಿ
ಮಾಣದೆ ನಡೆಸುವನೆಂದವ ನಿರ್ಗುಣ |
ಸ್ವಾನುಭವಕೆ ತಂದು ಈ ವಿವರವನೆಲ್ಲ
ಅನ್ನಂತ ವಿಜಯವಿಠಲಗೊಪ್ಪಿಸು ನೀನು

ತ್ರಿಪುಟತಾಳ

ಹಿಟ್ಟು ಗಾಳಿಗೆ ತೂರಿ ಮರಳಿ ಕೂಡಿಸಿಕೊಂಡು
ರೊಟ್ಟಿ ಸುಟ್ಟುಕೊಂಡು ಉಂಬೆನೆಂದು |

Sri Vidyabharathi Book Centre, Sringeri

CC-0. In Public Domain. Digitized by eGangotri

ಅಟ್ಟಹಾಸ ಮಾಡಿ ದಿನ ಪ್ರತಿದಿನದಲ್ಲಿ
ಕಷ್ಟಪಟ್ಟರದು ಫಲವಾಹದೆ ।
ಸೃಷ್ಟಿಯೊಳಗೆ ಮನುಜ ಸರ್ವ ಬಗೆಯಿಂದ
ಶಿಷ್ಟನಾಗಿ ಇದ್ದು ಆಚಾರವ ।
ಎಷ್ಟು ಮಾಡಿದರೇನೋ ನಿರ್ಗುಣನಾಗಿ ಮನ
ಮುಟ್ಟ ಸರ್ವಾರ್ಪಿತವೆನ್ನದನಕ ।
ಕೃಷ್ಣ ಮೆಚ್ಚನು ಕಣೋ ಗತಿಗೆ ಸಾಧಕವಲ್ಲ
ಇಷ್ಟರೊಳಗೆ ಆವ ಸುತ್ತುತಿಪ್ಪ ।
ಕಟ್ಟಕಡೆಗೆ ಇದೇ ಮುಕ್ತಿಗೆ ಜ್ಞಾನವೆಂದು
ಪುಟ್ಟದಲ್ಲದೆ ಬಿಂಬ ದರುಶನವಾಗದು ।
ಎಟ್ಟಮಾನವರಿಗೆ ಒರೆದೊರೆದು ಕೇವಲ
ಗುಟ್ಟ ತಿಳುಪಿದರಿಂದಲೇನಹದೋ ।
ದಿಟ್ಟ ದೈವಗಳರಸ ವಿಜಯವಿಠಲ ಜಗ
ಜಟ್ಟಿಗೆ ಪಾಪದ ಲೇಪವೆಲ್ಲಿಹದೋ

ಅಟ್ಟತಾಳ

ಮುಜ್ಜಗದೊಳು ಹರಿ ನಿಬ್ಬಿಡೀಕೃತನಾಗಿ
ತಜ್ಜೀವಿಗಳಂತೆ ವ್ಯಾಪಾರ ಮಾಡುವ ।
ನಿರ್ಜರವಿಡಿದು ತೃಣಾಂತ ನೋಡಲಾಗಿ
ಪೂಜ್ಯ ಭಾವವು ಪ್ರತ್ಯೇಕವಾಗಿಪ್ಪುದು ।
ದುರ್ಜನ ಹರಹರಿ ಇನಿತು ಭಜನೆ ಕೆಲವು
ಸಜ್ಜನರಿಂದಲಿ ಕೈಕೊಳುತಿಪ್ಪನಿದಕೆ ।
ವ್ಯಾಜ್ಯಮಾಡಿದರೆ ಹರಿಗೆ ವ್ಯಥೆಯುಂಟೇ
ಅಬ್ಜ ಪೋಣಿಸಲು ಗಡಾರಿ ತರವಲ್ಲ ।
ಅಬ್ಜಭವನಯ್ಯ ವಿಜಯವಿಠಲರೇಯ
ಲಜ್ಜೆ ಬಿಡದವಗೆ ಲಂಪಟ ಕಟ್ಟುವ

Sri Vidyabharathi Book Centre, Sringeri

CC-O. In Public Domain. Digitized by eGangotri

ಆದಿತಾಳ

*ಬಂದರೆ ಬರುವೆನೆಂದು ಇದೆ ಆರಂಭಿಸಿ
ಒಂದೊಂದು ಮಾತುಗಳ ಯಾವಜ್ಜೀವ ।
ತಂದುಕೊಳಲಿಬೇಕು ಮನಸಿಗೆ ಬಿಡದನು
ಸಂಧಾನವನು ಆವಲ್ಲಿ ಪೋದಲ್ಲಿ ।
ಬಂದಲ್ಲಿ ನಿಂದಲ್ಲಿ ಕುಳಿತಲ್ಲಿ ನುಡಿವಲ್ಲಿ
ನಂದವಾಗಲಿ ಅತಿ ಕ್ಲೇಶವಾಗಲಿ ಗೋ ।
ವಿಂದ ನಿನ್ನ ಪ್ರೀತಿಯೆನಬೇಕು ನಗಬೇಕು
ಹಿಂದೆ ಇಂದು ಮುಂದೆ ಸಂಸಾರವೆಂಬ ।
ಸಂದಣಿಯೊಳಗಿರೆ ನಿರ್ಭಯದವನಿವ
ಸಂದೇಹ ಪೋಗಾಡುವ ವಿಜಯವಿಠಲರೇಯ ।
ಎಂದೆಂದಿಗೆ ತನ್ನ ದಾಸನ ಪೊರೆವ

ಜತೆ

ಸಾಧನಾಸಾಧನ ಹರಿಗೆ ಒಪ್ಪಿಸಿಕೊಟ್ಟು
ಮೋದದಲಿರು ವಿಜಯವಿಠಲನ ನೆರೆನಂಬಿ

ಪರಮಾತ್ಮನ ಪ್ರೇಮರಸದಲ್ಲಿ ಮುಳುಗಿ 'ರಸೋ ವೈ ಸಃ' ಎಂಬ ಉಪನಿಷದ್ವಾಕ್ಯದಂತೆ ಅವನೇ ಪ್ರೇಮ, ಪ್ರೇಮವೇ ಅವನು; ಅವನಿಗೂ ಅವನ ಗುಣಗಳಿಗೂ ಅಭೇದ; ಎಂದು ಭಗವಂತನನ್ನು ಉಪಾಸಿಸಿದ ಭಕ್ತರು, ತಮ್ಮ ಸ್ಥಾನವೇನು, ತಮಗಿರುವ ಸ್ವಾತಂತ್ರ್ಯವೇನು, ಎಂಬುದನ್ನು ಕೆಳಕಂಡಂತೆ ವಿವರಿಸುತ್ತಾರೆ.

ಸುಳಾದಿಯ ಒಂದು ತಾಳ

ತ್ರಿಪುಟ

ಕಲ್ಲು ಪ್ರತಿಮೆ ನಿಂದಿಪ್ಪುದಲ್ಲದೆ ತಾನು
ಸೊಲ್ಲು ಪೇಳುವುದಿಲ್ಲ ನಗುವುದಿಲ್ಲ ।

---

*ಬಂದರೆ ಬರುವೆ–ಹರಿ ಬಂದರೆ ಬರುವೆ. ಬರುವೆನೆಂಬ ಸ್ವಾತಂತ್ರ್ಯದ ಮಾತಾಡಬೇಡ, ಹೀಗಿರಬೇಕು ಆತ್ಮನಿವೇದನ ಮಾಡಿದವನ ಮಾತೆಂದು ಅಭಿಪ್ರಾಯ.

Sri Vidyabharathi Book Centre, Sringeri

CC-0. In Public Domain. Digitized by eGangotri

ಮೆಲ್ಲನೆ ಕಿವಿಗೊಟ್ಟು ಕೇಳುವುದಿಲ್ಲ
ನಿಲ್ಲದೆ ಕೈತಿರುಹಿ ಕರೆವುದಿಲ್ಲ ।
ಎಲ್ಲಿಂದಲೋ ಜನರು ಪೋಗಿ ಬರುತ ನಿಂದು
ಪೊಳ್ಳಾಗದಂತೆ ವರವ ಕೊಡೆಂಬರು ।
ಬೆಲ್ಲ ಕಾಣಿಕೆಯಿತ್ತು ನಮಿಸುವರು ಮತ್ತೆ
ಸುಳ್ಳಾದರೆ ನೋಡದೆ ಹೋಗುವರು ।
ಕಲ್ಲು ಪ್ರತಿಮೆಯಿಂಥಾ ವರವ ಕೊಟ್ಟಿತೇನು
ಅಲ್ಲಿದ್ದ ಲಕುಮೀಶ ಆವರವರ ।
ಸೊಲ್ಲಿನೊಳಗೆ ತಿಳಿದು ಭಕುತಿಗೆ ವಶನಾಗಿ
ಸಲ್ಲಿಸುವನು ವರವ ಮನಸಿನಂತೆ ।
ಎಲ್ಲರು ಒಂದಾಗಿ ಕೊಡದಿರೆ ಸೈರಿಸದೆ
ಕಲ್ಲ ಬೈದರೆ ಅದು ಚಲಿಸುವದೆ ।
ಹಲ್ಲು ನಾಲಿಗೆ ಬಾಯಿ ಆಡಿತಲ್ಲದೆ ಜನಕೆ
ಎಳ್ಳನಿತು ಫಲವಿಲ್ಲ ವಿಚಾರಿಸೆ ।
ಕಲ್ಲಿನ ಪ್ರತಿಮೆಯಂದದಲಿ ಕಾಣೊ ನಾನು
ಬಲ್ಲವನೆನದಿರಿ ಅಜ್ಞಾನಿಯು ।
ಕಲ್ಲಿಗು ಎನಗೂ ಹೆಚ್ಚು ಕೊರತೆಯೆಂಬು
ದಿಲ್ಲವೊ ಇಲ್ಲವೊ ಚೇಷ್ಟೆ ಮಾತರವುಂಟು ।
ಮಲ್ಲಮರ್ದನ ನಮ್ಮ ವಿಜಯವಿಠಲರೇಯ
ಎಲ್ಲ ವಾಣಿಯು ನುಡಿಸಿ ಆರಾಧನೆಗೊಂಬ ।

ಮೇಲ್ಕಂಡ ಸುಳಾದಿಯಿಂದ ವಿಜಯದಾಸರು ಜೀವನಸ್ವಾತಂತ್ರ್ಯವನ್ನು ಸ್ಪಷ್ಟೀಕರಿಸಿದ್ದಾರೆ. ಹೀಗೆ ನವವಿಧ ಭಕ್ತಿಗಳಲ್ಲಿ, ತದಂಗಗಳಾದ ವಾತ್ಸಲ್ಯ ವಿರಹ ಮಧುರ ಭಾವಗಳಲ್ಲಿ, ಸಾಧಕರಂತೆ ಸಾಧನೆ ಮಾಡಿ ಸರ್ವ ಸಮರ್ಪಣೆಯಿಂದ ಸಿದ್ಧರಾಗಿ, ಅಗಣಿತವಾಗಿ ದೇವರನಾಮ ಸುಳಾದಿ ಉಗಾಭೋಗಗಳನ್ನು ಹರಿದಾಸರು ಹಾಡಿ ಕನ್ನಡವನ್ನು ಕನ್ನಡಿ ಮಾಡಿಟ್ಟಿದ್ದಾರೆ. ಗಹನವಾದ ಶಾಸ್ತ್ರತತ್ತ್ವಗಳು ಅವರ ಭಾಷೆಯಲ್ಲಿ ಲಲಿತವಾಗಿ ಧಾರಾಳವಾಗಿ ಹರಿದು ಬಂದಿವೆ. ಉಪಲಬ್ಧವಿರುವವುಗಳಿಗೆ, ವೇದ ಶ್ರುತಿಗಳನ್ನೂ ಶಾಸ್ತ್ರ

Sri Vidyabharathi Book Centre, Sringeri

CC-O. In Public Domain. Digitized by eGangotri

ಪಙ್ಕ್ತಿಗಳನ್ನೂ ಉದಹರಿಸಿ ಏಕವಾಕ್ಯತೆಯನ್ನು ತೋರಿಸಿ, ನೂರಾರು ಪುಟಗಳಲ್ಲಿ ಬರೆದು ಮುದ್ರಿಸಬೇಕೆಂದರೂ ಮುಗಿಯುವಂತಿಲ್ಲ. ಈ ಗ್ರಂಥದಲ್ಲಿ ನೋಡಬೇಕಾಗಿರುವುದು ತಂಬಿಗೆ ತೀರ್ಥದಲ್ಲಿ ಉದ್ಧರಣೆಯಷ್ಟು ಆಪೋಶನ ಹಾಕಿ ಕೃಷ್ಣಾರ್ಪಣವೆನ್ನುವಷ್ಟು ಮಾತ್ರ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಧ್ಯಾಯ ನಾಲ್ಕು

ಜೀವನ ಸ್ವಾತಂತ್ರ್ಯ ಮತ್ತು ಸಾಧನೆ

ಹಿಂದಿನ ಅಧ್ಯಾಯದಲ್ಲಿ ಮುಖ್ಯ ಹರಿದಾಸರುಗಳ ನೂರು ಉಗಾಭೋಗಗಳನ್ನು ಮಾದರಿಗಾಗಿ ಕೊಡಲಾಯಿತು. ಹರಿದಾಸರ ಜ್ಞಾನ ಭಕ್ತಿ ವೈರಾಗ್ಯಗಳನ್ನು ಅವರ ಸುಳಾದಿಗಳಿಂದ ತಿಳಿಸಿದ್ದಾಯಿತು. ನವವಿಧ ಭಕ್ತಿಗಳ ಲಕ್ಷಣವನ್ನೂ ಮುಕ್ತಿಗೆ ಭಕ್ತಿಯೇ ಕಾರಣವೆಂಬುದನ್ನೂ ಅನೇಕ ಪದ ಸುಳಾದಿಗಳಿಂದ ವಿವರಿಸಲಾಯಿತು. ಆತ್ಮನಿವೇದನ ಭಕ್ತಿ ವಿವರಣೆಯ ಕೊನೆಯಲ್ಲಿ ಪ್ರಸಕ್ತ ಅಧ್ಯಾಯಕ್ಕೆ ಬೀಜಭೂತವಾದ ಜೀವ ಸ್ವಾತಂತ್ರ್ಯದ ಮಾತೆತ್ತಿ, ಆ ಅಧ್ಯಾಯವನ್ನು ಮುಗಿಸಿದುದಾಯಿತು. ಈ ಅಧ್ಯಾಯದಲ್ಲಿ ಜೀವನ ಸ್ಥಾನಮಾನಗಳೇನು, ಅವನಿಗಿರುವ ಸ್ವಾತಂತ್ರ್ಯವೆಂತಹದು, ಎಂದು ಮೊದಲಾದ ಸಂಗತಿಗಳ ವಿವರವನ್ನು ಹರಿದಾಸರ ಮಾತುಗಳಿಂದಲೇ ತಿಳಿಸಲು ಪ್ರಯತ್ನಿಸುತ್ತೇವೆ.

'ತಸ್ಮಾತ್ ಶಾಸ್ತ್ರಂ ಪ್ರಮಾಣಂತೇ ಕಾರ್ಯಾಕಾರ್ಯವ್ಯವಸ್ಥಿತೌ' ಎಂಬ ರಾಜದಂಡದಂತಿರುವ ಭಗವದ್ವಾಕ್ಯದಂತೆ, ವೇದ ಶಾಸ್ತ್ರ ಪುರಾಣೇತಿಹಾಸಗಳಲ್ಲಿ ಹೇಳಿರುವ ಸೃಷ್ಟಿ ಮೊದಲಾದ ತತ್ತ್ವಗಳನ್ನು ನಂಬಿದವರು ಹರಿದಾಸರು. ವೇದಗಳಿಗೆ ಶಿರಸ್ಸಿನಂತಿರುವುದು ದಶೋಪನಿಷತ್ತುಗಳು. ಸಕಲ ವೇದಾರ್ಥಗಳನ್ನೂ ಅಡಗಿಸಿ ತಿಳಿಸುವುವು ಬ್ರಹ್ಮಸೂತ್ರಗಳು. ಉಪನಿಷತ್ತುಗಳ ಮತ್ತು ಬ್ರಹ್ಮಸೂತ್ರಗಳ ವ್ಯಾಖ್ಯಾನದಂತೆ ಸರಳ ಸುಂದರ ಭಾಷೆಯಲ್ಲಿ ಹರಿದು ಬಂದಿರುವುದು ಶ್ರೀಕೃಷ್ಣನ ಭಗವದ್ಗೀತೆ. ಈ ಮೂರು ಗ್ರಂಥಗಳನ್ನೂ ಪ್ರಸ್ಥಾನತ್ರಯಗಳೆಂದು ಗೌರವಿಸಿ, ಸಕಲ ವೈದಿಕ ಮತಾಚಾರ್ಯರುಗಳೂ ತಮ್ಮ ತಮ್ಮ ರೀತಿಯಿಂದ ಭಾಷ್ಯಗಳನ್ನು ಬರೆದಿರುತ್ತಾರೆ. ಭರತಖಂಡದ ಮತವೆಂದರೆ—ಹಿಂದೂಮತವೆಂದರೆ—ಇದಕ್ಕೆ ಬೇರೆಯಾದುದಿಲ್ಲ. ಭಾಷ್ಯಕಾರರಲ್ಲಿ ಸಹ ಕೆಲವು ಸೂಕ್ಷ್ಮ ತತ್ತ್ವಗಳಲ್ಲಿ ಅಭಿಪ್ರಾಯ ಭೇದವಿರುವದರ ವಿನಾ ಒಟ್ಟು ಶಾಸ್ತ್ರದಲ್ಲಿ ಭಿನ್ನಾಭಿಪ್ರಾಯವಿರುವುದಿಲ್ಲ. ಬ್ರಹ್ಮಸೂತ್ರಗಳಿಗಿಂತ, ಉಪನಿಷತ್ತುಗಳಿಗಿಂತ, ಪ್ರಶ್ನೋತ್ತರ ರೂಪವಾಗಿ ವಿರಳ ಸರಳವಾಗಿರುವ ಶ್ರೀಮದ್ಭಗವದ್ಗೀತೆಯಲ್ಲಿ ಜೀವಾತ್ಮರ ವಿಷಯವಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಅರ್ಜುನನಿಗೆ ಉಪದೇಶ ಮಾಡಿರುವ, ಕಾಠಕೋಪನಿಷತ್ತಿಗೆ ಭಾಷ್ಯದಂತೆ ಇರುವ—

ಅಶೋಚ್ಯಾನನ್ವಶೋಚಸ್ತ್ವಂ ಪ್ರಜ್ಞಾವಾದಾಂಶ್ಚ ಭಾಷಸೇ
ಗತಾಸೂನಗತಾಸೂಂಶ್ಚ ನಾನುಶೋಚಂತಿ ಪಂಡಿತಾಃ ॥ ೧೧ ॥

ನ ತ್ವೇವಾಹಂ ಜಾತು ನಾಸಂ ನ ತ್ವಂ ನೇಮೇ ಜನಾಧಿಪಾಃ
ನ ಚೈವ ನ ಭವಿಷ್ಯಾಮಃ ಸರ್ವೇ ವಯಮತಃ ಪರಂ ॥ ೧೨ ॥

ದೇಹಿನೋಽಸ್ಮಿನ್ ಯಥಾ ದೇಹೇ ಕೌಮಾರಂ ಯೌವನಂ ಜರಾ
ತಥಾ ದೇಹಾಂತರಪ್ರಾಪ್ತಿಃ ಧೀರಸ್ತತ್ರ ನ ಮುಹ್ಯತಿ ॥ ೧೩ ॥

ಅವಿನಾಶಿ ತು ತದ್ವಿದ್ಧಿ ಏನ ಸರ್ವಮಿದಂ ತತಂ
ವಿನಾಶಮವ್ಯಯಸ್ಯಾಸ್ಯ ಕಶ್ಚಿತ್ಕರ್ತುಮರ್ಹತಿ ॥ ೧೭ ॥

ನ ಜಾಯತೇ ಮ್ರಿಯತೇ ವಾ ಕದಾಚಿತ್
ನಾಯಂ ಭೂತ್ವಾ ಭವಿತಾ ವಾ ನ ಭೂಯಃ
ಅಜೋ ನಿತ್ಯಶ್ಶಾಶ್ವತೋಽಯಂ ಪುರಾಣಃ
ನ ಹನ್ಯತೇ ಹನ್ಯಮಾನೇ ಶರೀರೇ ॥ ೨೦ ॥

ನೈನಂ ಛಿಂದಂತಿ ಶಸ್ತ್ರಾಣಿ ನೈನಂ ದಹತಿ ಪಾವಕಃ
ನ ಚೈನಂ ಕ್ಲೇದಯಂತ್ಯಾಪೋ ನ ಶೋಷಯತಿ ಮಾರುತಃ ॥ ೨೩ ॥

ಅಚ್ಛೇದ್ಯೋಽಯಮದಾಹ್ಯೋಽಯಮಕ್ಲೇದ್ಯೋಽಶೋಷ್ಯ ಏವ ಚ
ನಿತ್ಯಃ ಸರ್ವಗತಸ್ಥಾಣುಃ ಅಚಲೋಽಯಂ ಸನಾತನಃ ॥ ೨೪ ॥

(ಅಧ್ಯಾಯ II)

ಎಂಬಂತೆ ಜೀವನು ಪರಮಾತ್ಮನಂತೆ ನಿತ್ಯನಾದವನು. ಜೀವರಲ್ಲಿ ಪರಸ್ಪರ ಭೇದಗಳಿರದಿದ್ದರೆ ಯುದ್ಧಪ್ರಸಕ್ತಿ ಬರುತ್ತಿರಲಿಲ್ಲ.

ಬಹೂನಿ ಮೇ ವ್ಯತೀತಾನಿ ಜನ್ಮಾನಿ ತವ ಚಾರ್ಜುನ
ತಾನ್ಯಹಂ ವೇದ ಸರ್ವಾಣಿ ನ ತ್ವಂ ವೇತ್ಥ ಪರಂತಪ ॥ ೫ ॥

(ಅಧ್ಯಾಯ VI)

ಎಂಬ ಭಗವದ್ವಾಕ್ಯದಂತೆ ಜೀವನು ಅಜ್ಞಾನಿ.

ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ
ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ ॥ ೬೧ ॥

Sri Vidyabharathi Book Centre, Sringeri

CC-0. In Public Domain. Digitized by eGangotri

ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ
ತತ್ಪ್ರಸಾದಾತ್ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಂ ॥ ೬೨ ॥
(ಅಧ್ಯಾಯ XVIII)

ಎಂಬ ವಾಕ್ಯಗಳಂತೆ ಜೀವನು ಅಸ್ವತಂತ್ರ. ಆದುದರಿಂದ ಜೀವನ ಅಸ್ವಾತಂತ್ರ್ಯವೆಂಥಾದ್ದೆಂಬುದನ್ನು ದಾಸರ ಮಾತುಗಳಿಂದ ತಿಳಿಯಬೇಕಾದುದು ಈ ಅಧ್ಯಾಯದ ಮೊದಲ ವಿಚಾರ.

ಜೀವಕರ್ತೃತ್ವ ಸುಳಾದಿ

ಸೂಚನೆ : ಈ ಸುಳಾದಿ ದೊಡ್ಡದಿರುವುದರಿಂದ, ಮುಖ್ಯ ಮಾತುಗಳನ್ನು ಮಾತ್ರ ಆರಿಸಿಕೊಡಲಾಗಿದೆ.

ಮಟ್ಟತಾಳ

ಪ್ರಥಮ ಸಾಧನ ಜೀವ ಅಸ್ವಾತಂತ್ರ್ಯತ್ವ
ದ್ವಿತೀಯ ಸಾಧನ ಹರಿ ಸ್ವಾತಂತ್ರ್ಯ ಸ್ಮೃತಿ ।
ತೃತೀಯ ಸಾಧನ ಜಡ ಚೇತನ ಜ್ಞಾನ
ಚತುರ ಸಾಧನ ತತ್ವಪೂರ್ಣ ಅಪೂರ್ಣವು ।
ಚತುರ ಸಾಧನದೊಳಗೆ ಸರ್ವ ಸಾಧನವಡಕ
ಮತಿಯಿಂದಲಿ ಮತ್ತೆ ಇದನು ವಿಸ್ತರಿಸಲು ।
ಶತಸಹಸ್ರವು ಆಗಿ ಸಾಧನವೆಣಿಸುವು....
ಚ್ಯುತ ದೂರ ಚೆಲ್ವ ಗೋಪಾಲವಿಠಲ ।
ಸ್ವತಃ ಒಲಿದರೊಲಿವ ಯತನಕಗೋಚರ ॥ ೨ ॥

ರೂಪಕ ತಾಳ

ಕರ್ತೃ ತಾನೆಂದರೆ ದೋಷಫಲವು ಪ್ರಾಪ್ತಿ
ಕರ್ತನಲ್ಲೆಂದರೆ ಸಾಧನಕೆ ಫಲವಿಲ್ಲ ।
ವ್ಯರ್ಥ ಸುಮ್ಮನಿಪ್ಪುವದಕೆ ಜೀವ ಜಡನಲ್ಲ
ಕರ್ತ ಜೀವೆಂಬುದು ಶ್ರುತಿ ಸ್ಮೃತಿಗಳಲಿ ಸಿದ್ಧ ।
ಕರ್ತೃತ್ವವೆಂಬುದು ಜೀವಸ್ವಾಧೀನಲ್ಲ
ಕರ್ತೃನಿಷ್ಠ ಧರ್ಮ ಕೊಟ್ಟರಿವನಿಗುಂಟು ।

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊರತೆ ಮಾಡುವನಲ್ಲ ಕೊಟ್ಟ ಕರ್ತೃತ್ವ ತ
ನ್ನಿಷ್ಟವಾಗಿ ಜೀವಕ್ಕೆ ಹತ್ತಿಪ್ಪುದು |
ಸ್ಫೂರ್ತಿ ಬಂದರೆ ಅರಿವ ಆ | ಸ್ಫೂರ್ತಿ ಬಂದರೆ ಮರೆವ
ಗಾತ್ರ ಹಸಿದರಳುವ ಗಾತ್ರ ತುಂಬಲು ನಲಿವ |
ಕೀರ್ತಿ ಅಪಕೀರ್ತಿ ತನದೆಂದು ಹಿಗ್ಗುವ
ವ್ಯರ್ಥ ಇದರಿಂದ ಆನಂದವಾಚರಿಪ |
ಕರ್ತೃಕಾರ್ಯಕ ವಿಷ್ಣು ಗೋಪಾಲವಿಠಲ
ಪಾತ್ರಾಪಾತ್ರವನರಿತು ಫಲವನೀವ || ೩ ||

ಅಡ್ಡಗೋಡೆಯ ಮೇಲಿಟ್ಟ ದೀಪದಂತೆ ಜೀವನ ಕರ್ತೃತ್ವವಿದೆ. ಶ್ರೀಮದ್ಭಾಗವತದಲ್ಲಿ ನೋಡಲಿ, ಗೀತೆಯಲ್ಲಿ ನೋಡಲಿ, ಜೀವನಿಗೆ ಇದಕ್ಕಿಂತ ಹೆಚ್ಚಾದ ಕರ್ತೃತ್ವ ಕೊಟ್ಟಿಲ್ಲ. ವೇದಾಂತ ಪಂಚದಶಿಯಲ್ಲಿ ಅದ್ವೈತ ಮತ ರೀತ್ಯಾ ಜೀವನನ್ನು ಚಿದಾಭಾಸನೆಂದು ಕರೆಯುತ್ತಾರೆ. ಅಲ್ಲಿ ನೋಡಿದರೂ ಜೀವನಿಗಿರುವ ಸ್ವಾತಂತ್ರ್ಯವಿಷ್ಟೆ! ಇಲ್ಲದ ಸ್ವಾತಂತ್ರ್ಯವನ್ನು ಯಾರುತಾನೇ ಕೊಡಬಲ್ಲರು?

ಪರಮಸಾಹಸಿಗಳೂ ಮಾತುಮಾತಿಗೆ ಭಾರತೀಯರಂತೆ ದೇವರ ಹೆಸರನ್ನು ಉಪಯೋಗಿಸದವರೂ ಆದ ಪಾಶ್ಚಾತ್ಯ ವೇದಾಂತಿಗಳನ್ನು ವಿಚಾರಿಸಿದರೆ—ಆ ವೇದಾಂತಿಗಳಲ್ಲಿ ಎಲ್ಲರ ವೇದಾಂತವನ್ನೂ ಹೃದ್ಗತ ಮಾಡಿಕೊಂಡು, ಇಪ್ಪತ್ತನೇ ಶತಮಾನದ ೧೯೫೩ರಲ್ಲೂ ಜೀವಂತನಾಗಿರುವ ತತ್ತ್ವಶಾಸ್ತ್ರನಿಪುಣನಾದ ಭಕ್ತ ಗಿಲ್ಬರ್ಟ ಮರ್‍ರೇ ಮಹಾಶಯನು ಸಹ, ಜೀವನ ಸ್ವರೂಪವನ್ನು ವರ್ಣಿಸಲು ಹೊರಟು, ಅದೊಂದು ಗಾಳಿಯೆಂದು ಕರೆದು, ಕಡೆಗೆ ಭಗವದ್ಗೀತೆಯ 'ಮಮೈವಾಂಶೋ ಜೀವಲೋಕೇ ಜೀವಭೂತಸ್ಸನಾತನಃ' ಎಂಬಷ್ಟು ಅರ್ಥವುಳ್ಳ ಪರಮಾತ್ಮನ ಒಂದು ಸೂಕ್ಷ್ಮಾಂಶ ಅಥವಾ ಕಿಡಿ, ಮತ್ತು ಅಸ್ವತಂತ್ರ, ಎನ್ನುವುದಕ್ಕಿಂತ ಹೆಚ್ಚು ತಿಳಿಯಲು ಸಮರ್ಥನಾಗಿಲ್ಲ. ದೇಹ ನಾಶವಾದರೂ ಜೀವನು ನಿತ್ಯವೆಂಬ ಸಿದ್ಧಾಂತವನ್ನು ಮಾತ್ರ ಅವನು ಭಾರತೀಯರಂತೆ ಪ್ರತಿಪಾದಿಸಿಗುತ್ತಾನೆ.

ಮತ್ತೂ ವಿಚಾರಿಸಿದರೆ ದೇಹ ನಾನೆಂದು ಭ್ರಮಿಸುವ ಜೀವನು ದೇಹ ಮೊದಲೇ ಅಲ್ಲ, ದೇಹದ ದುರವಸ್ಥೆ ನೋಡಿದರೆ-ದಿನದಿನವೂ ಬೆಳೆಯುತ್ತದೆ,

Sri Vidyabharathi Book Centre, Sringeri

CC-0. In Public Domain. Digitized by eGangotri

ಸಾಯುತ್ತದೆ, ವಿಕಾರ ಹೊಂದುತ್ತದೆ. ಶಾಶ್ವತವಾಗಿಯಾದರೂ ಇರುವುದೆಂದರೆ ಮುದಿಯಾಗುತ್ತಲೇ ಮೃತವಾಗುತ್ತದೆ. ನಾನಾ ರೋಗಗಳು, ನಾನಾ ದುಃಖಗಳು, ನಾನಾ ದಾರಿದ್ರ್ಯಗಳು! ಇಂತಹ ದೇಹದಲ್ಲಿ 'ನಾನು' ಎನ್ನುವ ಜೀವನಿಗೆ ಸಾಲದುದಕ್ಕೆ ನಿತ್ಯತ್ವ. ಏನು ಮಾಡಿದರೂ ಸಾಯುವುದಿಲ್ಲ. ದೇಹದ ಅಭಿಮಾನದಿಂದ ಎಲ್ಲಾ ನಾನು ಎಂದರೆ ಆ ದೇಹ ಇಪ್ಪತ್ತು ನಾಲ್ಕು ತತ್ತ್ವಗಳಿಂದ ಸೃಷ್ಟಿಯಾಗಿದೆ. ಒಂದೊಂದು ತತ್ತ್ವಕ್ಕೆ ಒಬ್ಬೊಬ್ಬ ಅಭಿಮಾನಿದೇವತೆಯಿದ್ದಾನೆ. ರಾಜ್ಯಾಂಗದ ಮುಖ್ಯ ಶಾಖೆಗಳಲ್ಲಿ ಅಧಿಕಾರಿಗಳು ಕುಳಿತು ರಾಜ್ಯವಾಳುವಂತೆ ಅವರು ದೇಹರಾಜ್ಯವಾಳುತ್ತಾರೆ. ಯಾರು ವಿಮುಖರಾದರೂ ಜೀವಕ್ಕೆ ಸುಖವಿಲ್ಲ. ಶಾಸ್ತ್ರಕಾರರು ಇಂತಿಂಥವರು ತತ್ತ್ವ ನಿಯಾಮಕರೆಂಬುದನ್ನರಿತು ಗೀರ್ವಾಣ ಭಾಷೆಯಲ್ಲಿ ಹೇಳಿರುವುದನ್ನು ಹರಿದಾಸರು ಕನ್ನಡದಲ್ಲಿ ಈ ರೀತಿ ತಿಳಿಸುತ್ತಾರೆ.

ಅಟ್ಟತಾಳ

ನುಡಿವನು ವರುಣನು । ಮೆಲುವನು ಪಾವಕ
ಕೇಳುವ ದಿಗ್ದೇವ । ಬಿಡದಪ್ಪಿಕೊಂಬುವ ಅಹಂಕಾರಿಕ ಪ್ರಾಣ ।
ನಡೆವನು ಜಯಂತ । ನೋಡುವ ಸೂರ್ಯನು
ಒಡನೆ ಗುಹ್ಯದಲ್ಲಿ ಮನು ಮಿತ್ರ ಮನದಲ್ಲಿ ।
ಬಿಡದೆ ಇಂದ್ರನು ಇಪ್ಪ ಅಹಂಕಾರದಲಿ ರುದ್ರ
ಪೊಡವಿಯೊಳಗೆ ನಿನಗಾವದು ಅಧೀನ?
ಕಡಲಶಯನ ನಮ್ಮ ವಿಜಯವಿಠಲನಲ್ಲಿ
ದೃಢಭಕುತಿಯು ಮಾಡು ಇದೆ ಸಾಧನ ಸಿದ್ಧ ॥

ಈ ತಾಪತ್ರಯದಲ್ಲಿ ಸಿಕ್ಕಿರುವ ಜೀವನು ದೇಹ ಭ್ರಾಂತಿಯಿಂದ ಹಿರಿಹಿರಿ ಹಿಗ್ಗುವುದನ್ನು ನೋಡಿ—

ರಾಗ : ಭೈರವಿ — ತಾಳ : ಅಟ್ಟ

ಹಿಗ್ಗುವೆ ಯಾಕೋ । ಈ ದೇಹಕೆ ॥ ಪ ॥
ಹಿಗ್ಗುವೆ ತಗ್ಗುವೆ ಮುಗ್ಗುವೆ ನೆಗ್ಗುವೆ । ಅಗ್ನಿಯೊಳಗೆ ಬಿದ್ದು
ದಗ್ಧವಾಗುವ ದೇಹಕೆ ॥ ಅ ॥

Sri Vidyabharathi Book Centre, Sringeri

 CC-O. In Public Domain. Digitized by eGangotri

ಸತಿಪುರುಷರು ಕೂಡಿ ರತಿಕ್ರೀಡೆಗಳ ಮಾಡಿ | ಪತನವಾದಿಂದ್ರಿಯದ
ಪ್ರತಿನೆಯ ದೇಹಕೆ ॥ ೧ ॥

ಆಗ–ಭೋಗಂಗಳ ಆಗುಮಾಡುತಲಿಪ್ಪ | ರೋಗ ಬಂದರೆ ಬಿದ್ದು
ಹೋಗುವ ದೇಹಕೆ ॥ ೨ ॥

ಪರರ ಸೇವೆಯ ಮಾಡಿ ನರಕಭಾಜನನಾಗಿ | ಉರುಳುರುಳಿ ಬಿದ್ದು
ನರಳುವ ದೇಹಕೆ ॥ ೩ ॥

ತೋರುವ ಒಂಬತ್ತು ಬಾಗಿಲಿಂದಲಿ ಮಲ | ನೀರಿಲ್ಲದಿದ್ದರೆ ನಾರುವ
ದೇಹಕೆ ॥ ೪ ॥

ಪುರಂದರವಿಠಲನ ಚರಣಕಮಲಕ್ಕೆ | ಎರಗದೆ ಇರುತಿಹ ಗುರುವಾದ
ದೇಹಕೆ ॥ ೫ ॥

—ಎಂಬುದಾಗಿ ಪುರಂದರದಾಸರು ಬುದ್ಧಿ ಹೇಳಿರುತ್ತಾರೆ. ಬೌದ್ಧ–ಜೈನ ಮತಗಳಲ್ಲಿ ನೋಡಲಿ, ಇಸಾಯಿ–ಇಸ್ಲಾಂ ಮತಗಳಲ್ಲಿ ನೋಡಲಿ, ಜೀವನಿಗೆ ಸ್ವಾತಂತ್ರ್ಯವಿಲ್ಲ. ಬೌದ್ಧರೂ ಜೈನರೂ ಜನ್ಮಾಂತರಗಳುಂಟೆಂಬುದನ್ನು ಸ್ಪಷ್ಟವಾಗಿ ವೈದಿಕ ಮತೀಯರಂತೆ ಹೇಳಿದ್ದರೆ, ಇಸಾಯಿ ಮತದಲ್ಲಿ ಸಹ ಜೀವನಿಗೆ ಜನ್ಮ ಬರುವುದೆಂಬ ಸೂಚನೆಯನ್ನು ಅಸ್ಪಷ್ಟವಾಗಿ ಹೇಳಿದ್ದಾರೆ. ನಾಸ್ತಿಕ ಮತದಲ್ಲಿದ್ದು ಸುಖಿಸೋಣವೆಂದರೆ ಸುಖವೆಂಬುವುದು ಅಲ್ಲೂ ದೊರೆಯುವುದಿಲ್ಲ. ದೇಹ ತಾನೆಂದರೂ, ಮರಣವೂ ಅದರಿಂದಾಗ ಬಹುದಾದ ದುಃಖವೂ ಬಿಟ್ಟದ್ದಲ್ಲ. ದೇಹವಾಗಿ ಸುಖವಿಲ್ಲ, ಜೀವನಾಗಿ ಸ್ವಾತಂತ್ರ್ಯವಿಲ್ಲ. ಇದು ಜೀವನ ಸ್ಥಿತಿ.

ಗೋಪಾಲದಾಸರು ಜೀವನ ಅಸ್ವಾತಂತ್ರ್ಯ ನೋಡಿ, ಕರ್ಮವಾಸನೆಯಿಂದ ಜನ್ಮಗಳೆತ್ತಬೇಕಾಗುವ ದುರ್ಗತಿಗೆ ಬೇಸತ್ತು—

ರಾಗ: ಕಾಂಬೋದಿ — ತಾಳ: ಜಂಪೆ

ಈ ಪರಿಯ ಅಧಿಕಾರ ಒಲ್ಲೆ ನಾನು | ಶ್ರೀಪತಿಯೆ ನೀನೊಲಿದು ಏನು
ಕೊಟ್ಟರು ಸಾಕು ॥ ಪ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಚಿರಕಾಲ ಕಾದು ತಿರುಗಿದ್ದುದಕೆ ನೀನು । ಕರುಣದಿಂದ ರಚಿಸಿ ಈ ದುರ್ಗದಿ
ಇರಪೇಳಿದುದಕೆ ನಾ ತಿರುಗಿ ನೋಡಿದೆನೊಳಗೆ । ಹುರುಳು ಲೇಶವು
ಕಾಣೆ ಕರೆಕರೆ ಬಹಳ ॥ ೧ ॥

ದಾರಿಯಲಿ ಪೋಗಿಬರುವರ ಉಪಟಳವು ಘನ । ಚೋರರಟ್ಟುಳಿಗಂತು
ನೆಲೆಯೆ ಇಲ್ಲ
ವೈರಿವರ್ಗದ ಜನರು ಒಳಗೆ ಬಲು ತುಂಬಿಹರು । ವಿಾರಿ ದಿನಗಳು ಬರಲು
ಊರ ನಿಲಗೊಡರು ॥ ೨ ॥

ನಾಮಾಂಕಿತಕೆ ಮಾತ್ರ ಅಧಿಕಾರ ಎನಗಿತ್ತಿ । ಸ್ವಾಮಿತ್ವವನು ನೋಡು
ಮನೆಮನೆಯೊಳು
ಭೀಮವಿಕ್ರಮರವರು ದುರ್ಬಲಾಗ್ರಣಿ ನಾನು । ಗ್ರಾಮ ಒಪ್ಪಿಸಿ ನಮಿಪೆ
ಸರಿಬಂದುದನೆ ಮಾಡೊ ॥ ೩ ॥

ಸರಿಬಂದ ವ್ಯಾಪಾರ ತಾವು ಮಾಡಿ ಎನ್ನ । ಬರಿಯ ಲೆಕ್ಕಕೆ ಮಾತ್ರ
ಗುರಿಯ ಮಾಡಿ
ಕರೆಕರೆಯಪಡಿಸಬೇಕೆಂದು ಯೋಚಿಸುತಿಹರು । ಕರೆಸಿ ವಿಚಾರಿಸಿ
ನ್ಯಾಯ ಮಾಡಿಸೊ ಧೊರೆಯೆ ॥ ೪ ॥

ಕಾಲಕ್ಕೆ ಕರೆಯಬಂದವರಿಗೆ ಒಳಗಾಗಿ । ಪಾಳೆಯವನೊಪ್ಪಿಸಿಕೊಡುವೆನೆಂದು
ಆಲೋಚಿಸಿ ಇಹರು ಈಗಲೇ ನಿನ್ನ ನಿಜ । ಆಳುಗಳ ಬಲಮಾಡಿ ಎನ್ನ
ರಕ್ಷಿಸೊ ಧೊರೆಯೆ ॥ ೫ ॥

ಕ್ಷಣಕೆ ನೂರುಪಟಳ ಈ ಕೋಟೆಗೆಲೊ ರಾಯ । ಅನುವಾದ ಸರಕು
ಒಂದಾದರಿಲ್ಲ
ಎನಗಾರ ಬಲವಿಲ್ಲ ಇದ್ದವರು ವಶವಿಲ್ಲ । ಮನದಂದು ಗ್ರಾಮ ಕಾಪಾಡುವ
ಬಗೆಯೆಂತೊ ॥ ೬ ॥

ಎನಗೆ ಬಲುನಾಯಕರ ಕೊಂಪೆಯೊಳಗೆ ವಾಸ । ವನು ಬಿಡಿಸಿ ನಿನ್ನ
ನಿಜಪಟ್ಟಣದೊಳು
ಮನೆಮಾಡಿ ಕೊಡಲು ನಾ ನಿನ್ನನೇ ನೋಡುತ್ತ ಅನುಗಾಲ ಬದುಕುವೆನೊ
ಗೋಪಾಲವಿಠಲ ॥ ೭ ॥

—ಎಂಬುದಾಗಿ ಹಳಹಳಿಯಿಂದ ಹಾಡಿ ಮೊರೆಬಿದ್ದಿರುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಜೀವನು ಆಶ್ರಯಿಸಿರುವ ದೇಹವನ್ನು ನೋಡಿ ದೇಹದಾಕಾರ ಜೀವನ ದೆಂದು ಭ್ರಮಿಸಲು ಅವಕಾಶವಿರಬಾರದೆಂದು 'ತತ್ತ್ವಸಾರ'ವೆಂಬ ಗ್ರಂಥ ದಲ್ಲಿ—

ಅಶ್ವವಾಲಾಗ್ರಮಾದಾಯ ವಿಭಜ್ಯ ಶತಧಾ ಹಿ ತತ್
ಪುನಶ್ಚ ಶತಧಾ ಭಿನ್ನಂ ಕಿಯನ್ಮಾತ್ರಂ ಭವಿಷ್ಯತಿ
ತಾವದ್ಬ್ರಹ್ಮಾದಿ ಜೀವಾನಾಂ ಪರಿಮಾಣಂ ಪ್ರಕೀರ್ತಿತಂ

ಎಂಬುದಾಗಿ ಹೇಳಿರುವುದನ್ನು ಜಗನ್ನಾಥದಾಸರು ಕನ್ನಡ ಭಾಮಿನೀ ಷಟ್ಪದಿಯಲ್ಲಿ—

ಕುದುರೆ ಬಾಲದ ಕೊನೆಯ ಕೂದಲ
ತುದಿಯ ಭಾಗವ ಮಾಡಿ ಶತವಿಧ
ವದರೊಳೊಂದನು ನೂರು ಭಾಗವ ಮಾಡಲೆಂತಿಹುದೊ
ವಿಧಿಭವಾದಿ ಸಮಸ್ತ ಜೀವರ
ಮೊದಲು ಮಾಡಿ ತೃಣಾಂತ ಜೀವರೊ
ಅಧಿಕ ನ್ಯೂನತೆ ಇಲ್ಲವೆಂದಿಗು ಜೀವಪರಿಮಾಣ || ೭ ||
(ಹರಿಕಥಾಮೃತಸಾರ, IX)

ಎಂಬುದಾಗಿ ತಿಳಿಸಿರುತ್ತಾರೆ. ಇಷ್ಟು ಸೂಕ್ಷ್ಮರೂಪಿ ಜೀವನ ಹೃದಯಾ ಕಾಶದಲ್ಲಿ ಪರಮಾತ್ಮನು ವಾಸಮಾಡುತ್ತಾನೆಂಬುದನ್ನು ಕಾಠಕೋಪನಿ ಷತ್ತಿನ—

ಅಣೋರಣೀಯಾನ್ಮಹತೋಮಹೀಯಾನಾತ್ಮಾಸ್ಯ ಜಂತೋರ್ನಿಹಿ
ತೋ ಗುಹಾಯಾಂ
ತಮಕ್ರತುಃ ಪಶ್ಯತಿ ವೀತಶೋಕೋ ಧಾತುಪ್ರಸಾದಾನ್ಮಹಿಮಾ
ನಮಾತ್ಮನಃ || ೨೦ || (೧.೨)

ಎಂಬ ಮಂತ್ರಾರ್ಥದಂತೆ ಕನ್ನಡ ಪದ್ಯಗಳಲ್ಲಿ ಭಾಷ್ಯವನ್ನೇ ಅನುಸರಿಸಿ ಸುಲಭವಾಗಿ ತಿಳಿಯುವಂತೆ ಹೇಳಿರುತ್ತಾರೆ. ಇಂತಹ ಜೀವನ ಸ್ವರೂಪಕ್ಕೆ ಜನನಮರಣಗಳಿಗೆ ಕಾರಣವಾದ ಗುಣತ್ರಯಾತ್ಮಕವಾದ ಒಂದು ಆವರಣ ವಿದ್ದು ಅದು ಲಿಂಗದೇಹವೆಂದು ಕರೆಸಿಕೊಳ್ಳುತ್ತದೆ. ಆ ಮಾತನ್ನು ಜಗನ್ನಾಥದಾಸರು—

Sri Vidyabharathi Book Centre, Sringeri

CC-0. In Public Domain. Digitized by eGangotri

ಜೀವನಿಗೆ ತುಷದಂತೆ ಲಿಂಗವು
ಸಾವಕಾಶದಿ ಪೊಂದಿಸುತ್ತಲು
ಪ್ರಾವರಣ ರೂಪದಲಿ ಇಪ್ಪದು ಭಗವದಿಚ್ಛೆಯಲಿ || ೧೩ ||

(ಹರಿಕಥಾಮೃತಸಾರ, ಸಂ. IX)

ಎಂದಿರುತ್ತಾರೆ. ಇಂತಹ ಲಿಂಗದೇಹವು ಷೋಡಶ ಕಳಾತ್ಮಕವಾಗಿರುತ್ತದೆ. ಈ ಶರೀರ ಮತ್ತು ಇದನ್ನಾವರಿಸಿರುವ ಮತ್ತೊಂದು ಸೂಕ್ಷ್ಮ ಶರೀರಕ್ಕೂ ಮಧ್ಯದಲ್ಲಿ ಜೀವನಿಗೆ ತನ್ನ ಸ್ವರೂಪವನ್ನು ಮರೆಮಾಡಿರುವ ಸ್ವಗುಣಾಚ್ಛಾದಿಕವೆಂಬ ಪೊರೆಯೂ, ಪರಮಾತ್ಮನ ಸ್ವರೂಪವನ್ನು ಮರೆಮಾಡಿರುವ ಪರಮಾಚ್ಛಾದಿಕವೆಂಬ ಪೊರೆಯೂ ಅಡ್ಡವಾಗಿರುತ್ತವೆ. ಈ ಎರಡು ಪೊರೆಗಳು ಕಳಚಬೇಕಾದರೆ ಜೀವನು ಬಹುವಿಧ ಸಾಧನೆಗಳನ್ನು ಮಾಡಿ ಭಕ್ತನಾಗಬೇಕು.

ಇಂತಹ ಜೀವನ ಹೃದಯಾಕಾಶದಲ್ಲಿ ವಾಸಮಾಡುವ ಪರಮಾತ್ಮನು ಹೃದಯಕಮಲದ ಅಷ್ಟದಳಗಳಲ್ಲಿ ಕಟಾಕ್ಷ ಬೀರಿದಾಗ ಒಂದೊಂದು ದಳದಲ್ಲಿ ಒಂದೊಂದು ಪ್ರಕಾರದ ಬುದ್ಧಿ ಜೀವನಿಗುಂಟಾಗುತ್ತದೆ. ಅದರ ವಿವರವನ್ನು ಜಗನ್ನಾಥದಾಸರು—

ಸುರಪನಾಲಯಕೈದಿದರೆ ಮನ
ವೆರಗುವುದು ಸತ್ಪುಣ್ಯಮಾರ್ಗದಿ
ಬರಲು ವಹ್ನಿಯ ಮನೆಗೆ ನಿದ್ರಾಲಸ್ಯ ಹಸಿತೃಷೆಯು
ತರಣಿತನಯ ನಿಕೇತನದಿ ಸಂ
ಭರಿತ ಕೋಪಾಟೋಪ ತೋರುವು
ದರವಿದೂರನು ನಿರುತಿಯಲ್ಲಿರೆ ಪಾಪಗಳ ಮಾಳ್ಪ || ೨೨ ||

ವರುಣನಲ್ಲಿ ವಿನೋದಹಾಸ್ಯವು
ಮರುತನೊಳು ಗಮನಾಗಮನ ಹಿಮ
ಕರಧನಾಧಿಪರಲ್ಲಿ ಧರ್ಮದ ಬುದ್ಧಿ ಜನಿಸುವುದು
ಹರನ ಮಂದಿರದಲ್ಲಿ ಗೋಧನ
ಧರಣಿ ಕನ್ಯಾದಾನಗಳ ಒಂ
ದರಘಳಿಗೆ ತಡೆಯದಲೆ ಕೊಡುತಿಹ ಚಿತ್ತ ಪುಟ್ಟುವುದು || ೨೩ ||

Sri Vidyabharathi Book Centre, Sringeri

 CC-O. In Public Domain. Digitized by eGangotri

ಹೃದಯದೊಳಗೆ ವಿರಕ್ತಿಕೇಸರ
ಕೊದಗೆ ಸ್ವಪ್ನಸುಷುಪ್ತಿ ಲಿಂಗದಿ
ಮಧುಹಕರ್ಣಿಕೆಯಲ್ಲಿ ಬರೆ ಜಾಗ್ರತೆಯು ಪುಟ್ಟುವುದು.
ಸುದರಿಶನ ಮೊದಲಾದ ಅಷ್ಟಾ
ಯುಧನ ಪಿಡಿದಾಶಾಧಿಪತಿಗಳ
ಸದನದಲಿ ಸಂಚರಿಸುತೀಪರಿ ಬುದ್ಧಿಗಳ ಕೊಡುವ || ೨೪ ||

(ಹರಿಕಥಾಮೃತಸಾರ, ಸಂ. XI)

ಈ ರೀತಿ ಜೀವಾತ್ಮನು ಪರಮಾತ್ಮನಿಗೆ ಪ್ರತಿಯೊಂದು ವಿಷಯದಲ್ಲಿ ಅಧೀನನಾಗಿರುತ್ತಾನೆ. ಹೀಗೇಕಿರಬೇಕೆಂದರೆ ಇರುವುದೇ ಹಾಗೆ ಎಂಬುದಕ್ಕಿಂತ ಬೇರೆ ಉತ್ತರ ದೊರೆಯುವುದಿಲ್ಲ. ಇಷ್ಟಾದರೂ ಪರಮಾತ್ಮನು ಅನ್ಯಾಯ ಮಾಡಿರುವನೇ ಎಂದರೆ, ಅದರಿಂದ ಅವನಿಗೆ ಯಾವ ಪ್ರಯೋಜನವೂ ಇಲ್ಲ. ಜೀವರಿಂದಾಗಲಿ ಪ್ರಪಂಚದಿಂದಾಗಲಿ ಅವನು ಪಡೆಯಬೇಕಾದುದು ಯಾವದೂ ಇಲ್ಲ. ಸ್ವಭಾವ ಬದಲಾಗುವುದಿಲ್ಲ. ವೈಜ್ಞಾನಿಕನ ಕೊಡತಿಗೆ ಸಿಕ್ಕುವುದು ಇದು ಅಲ್ಲ. ಹೋಗಲಿ, ಜೀವರಾದರೂ ಒಂದೇ ರೀತಿ ಏಕಿಲ್ಲವೆಂದರೆ ಅವರಿರುವುದು ಹಾಗೆ ಎನ್ನುವುದಕ್ಕಿಂತ ಉತ್ತರ ಸಿಗುವುದಿಲ್ಲ. ಇಷ್ಟು ಅಸ್ವತಂತ್ರರಾಗಿದ್ದರೂ ದೇವರನ್ನು ದ್ವೇಷಿಸುವವರಿದ್ದಾರೆ, ದೇವರನ್ನು ಉದಾಸೀನದಿಂದ ನೋಡುವವರಿದ್ದಾರೆ, ದೇವರಲ್ಲಿ ಭಕ್ತಿ ಮಾಡುವವರಿದ್ದಾರೆ. ಹಾಗೆ ಮಾಡುವುದು ಅವರಿಗೆ ಸ್ವಭಾವ. ಹಾಗಿರದಿದ್ದರೆ ರಾಮರಾವಣರ ಯುದ್ಧವಾಗುತ್ತಿರಲಿಲ್ಲ. ಕೌರವಪಾಂಡವರ ಯುದ್ಧವಾಗುತ್ತಿರಲಿಲ್ಲ. ಭಗವದ್ಗಿತೆಯಂಥ ಶಾಸ್ತ್ರವನ್ನು ಶ್ರೀಕೃಷ್ಣನು ಅರ್ಜುನನಿಗೆ ಉಪದೇಶಿಸುತ್ತಿರಲಿಲ್ಲ.

ದೇವರು ಒಬ್ಬನು. ಅವನು ಸರ್ವಾಂತರ್ಯಾಮಿ. ಅವನು ಸರ್ವಸಾಕ್ಷಿ. ಆದ್ದರಿಂದ ಎಲ್ಲವನ್ನೂ ನೋಡುತ್ತಾನೆ. ಜೀವರ ಪ್ರವೃತ್ತಿಗಳಂತೆ ಫಲಗಳನ್ನು ಕೊಡುತ್ತಾನೆ. ತಾನು ನಿರ್ಲಿಪ್ತನಾಗಿರುತ್ತಾನೆ. ಈ ಅರ್ಥವನ್ನು ಮನಸ್ಸಿನಲ್ಲಿಟ್ಟುಕೊಂಡು ಜಗನ್ನಾಥದಾಸರು—

ವಾರಿದನು ಮಳೆಗರೆಯೆ ಬೆಳೆದಿಹ
ಭೂರುಹಂಗಳ ಚಿತ್ರಫಲರಸ
ಬೇರೆಬೇರಿಪ್ಪಂತೆ ಬಹುವಿಧ ಜೀವರೊಳಗಿದ್ದು

Sri Vidyabharathi Book Centre, Sringeri

CC-0. In Public Domain. Digitized by eGangotri

ಮಾರಮಣನವರವರ ಯೋಗ್ಯತೆ
ವಿಾರದಲೆ ಗುಣಕರ್ಮಗಳನನು
ಸಾರ ನಡೆಸುವ ದೇವನಿಗೆ ವೈಷಮ್ಯವೆಲ್ಲಿಹುದು || ೨೩ ||

ಪಾರಿಜಾಪ್ತನ ಕಿರಣಮಣಿಗಳ
ಸೇರಿ ತತ್ತದ್ವರ್ಣಗಳನು ವಿ
ಕಾರಗೈಸದೆ ನೋಳ್ಪರಿಗೆ ಥಳಥಳಿಸುವಂದದಲಿ
ಮಾರಮಣ ಲೋಕತ್ರಯದೊಳಿಹ
ಮೂರು ವಿಧ ಜೀವರೊಳಗಿದ್ದು ವಿ
ಹಾರ ಮಾಡುವನವರ ಯೋಗ್ಯತೆ ಕರ್ಮವನುಸರಿಸಿ || ೨೪ ||

ಕಾದ ಕಬ್ಬಿಣ ಹಿಡಿದು ಬಡಿಯಲು
ವೇದನವು ಲೋಹಕ್ಕೆ ಅಲ್ಲದೆ
ಆದುದೇನೈ ಅನಲಗಾವ್ಯಥೆ ಏನ ಮಾಡಿದರು
ಆದಿದೇವನು ಸರ್ವಜೀವರ
ಕಾದುಕೊಂಡಿಹಸೊಳಹೊರಗೆ ದುಃ
ಖಾದಿಗಳು ಸಂಬಂಧವಾಗುವವೇನು ಚಿನ್ಮಯಗೆ || ೨೭ ||

(ಹರಿಕಥಾಮೃತಸಾರ, ಸಂ. III)

ಎಂಬುದಾಗಿ ಹೇಳಿರುತ್ತಾರೆ. ಜೀವರ ಸ್ಥಿತಿ ಹೀಗಿದ್ದಮೇಲೆ, ಅವರು ನಿತ್ಯರಾಗಿದ್ದಮೇಲೆ, ಅವರೇಕೆ ಜನ್ಮವೆತ್ತಿ ದುಃಖವನ್ನನುಭವಿಸಬೇಕು ಎಂದರೆ ಜನ್ಮವೆತ್ತುವುದು ಅವರ ಸ್ವಾಧೀನದಲ್ಲಿಲ್ಲ. ದೇವರ ಸಹಾಯವಿಲ್ಲದೆ ಸ್ವಯಂ ಜನ್ಮತಾಳಿ ಬರಲು ಅವರಿಗೆ ಸ್ವತಂತ್ರವಿಲ್ಲ. ಬಿತ್ತನೆಯ ಬೀಜ ಬಿತ್ತಿದಲ್ಲದೆ ಮೊಳೆಯುವುದಿಲ್ಲ. ಇದ್ದ ಕಡೆಯಿರಲಿ, ಗಿಡವಾಗಲಿ, ಎಂದು ಪೆಟ್ಟಿಗೆಯಲ್ಲಿ ಬಿಟ್ಟಿದ್ದರೆ, ಅದು ಗಿಡವಾಗುವುದಿಲ್ಲ. ಜೀವರು ದೇಹದಲ್ಲಿ ಬರದಿದ್ದರೂ ಅವರಲ್ಲಿ ಒಂದು ಬಗೆಯ ಪ್ರವೃತ್ತಿಯಿರುತ್ತದೆ. ಆ ಪ್ರವೃತ್ತಿಗೆ ಅನಾದಿ ಕರ್ಮ ಅಥವಾ ವಾಸನಾ ಎನ್ನುತ್ತಾರೆ. ಅದು ಅಭಿವ್ಯಕ್ತಿಗೆ ಬರಲು ದೇವರು ಸಹಾಯ ಮಾಡುತ್ತಾನೆ. ಸೃಷ್ಟಿಗೆ ತರುತ್ತಾನೆ. ಆ ಪಾರುಪತ್ಯವಾದರೂ ದೇವರಿಗೇಕೆಂದರೆ—It is the pleasure of the Government ಎಂದರೆ ಮಾನ್ಯ ಸದಸ್ಯರು ಬಾಯಿ ಮುಚ್ಚುವಂತೆ—ಇದು ದೇವರ

Sri Vidyabharathi Book Centre, Sringeri

CC-O. In Public Domain. Digitized by eGangotri

ಇಚ್ಛೆ, ದೇವರ ದಯೆ ಎಂಬುದಕ್ಕಿಂತ ಉತ್ತರವಿನ್ನಿಲ್ಲ. ಜಗನ್ನಾಥದಾಸರು—

ಮಳಲ ಮನೆಗಳ ಮಾಡಿ ಮಕ್ಕಳು
ಕೆಲವು ಕಾಲದಲಾಡಿ ಮೋದದಿ
ತುಳಿದು ಕೆಡಿಸುವ ತೆರದಿ ಲಕುಮಿರಮಣ ಲೋಕಗಳ
ಹಲವು ಬಗೆಯಲಿ ನಿರ್ಮಿಸುವ ನಿ
ಶ್ಚಲನು ತಾನಾಗಿದ್ದು ಸಲಹುವ
ಎಲರುಣಿಯವೊಲು ನುಂಗುವನಿಗೆಲ್ಲಿಹುದು ಸುಖದುಃಖ ॥ ೨೮ ॥

(ಹರಿಕಥಾಮೃತಸಾರ, ಸಂ. III)

—ಎಂದಿದ್ದಾರೆ.

ದೇವರಂತೆ ಜೀವರೂ ನಿತ್ಯರಾದಮೇಲೆ ದೇವರನ್ನು ದಂಡಿಸಿ ಏಕೆ ಸ್ವತಂತ್ರರಾಗಬಾರದೆಂದರೆ ಅದಕ್ಕೂ ವಿಜಯದಾಸರು ಒಂದು ಸುಳಾದಿಯಲ್ಲಿ-ಲಕ್ಷ ಸೂಜಿಗಳು ಜಾತ್ಯಾ ಸಮವಾಗಿದ್ದರೂ ಒಂದು ಗಡಾರಿಯನ್ನು ಏನೂ ಮಾಡಲಾರವು. ಗಡಾರಿ ಮುನಿದರೆ ಮಾತ್ರ ಸೂಜಿಗಳ ಪರಿಣಾಮವಾಗಲಿಕ್ಕಿಲ್ಲ; ಎಂಬುದಾಗಿ ಹೃದಯಂಗಮವಾಗುವಂತೆ ವರ್ಣಿಸಿರುತ್ತಾರೆ.

ಅದ್ವೈತಮತರೀತ್ಯಾ ಜೀವನು ಬ್ರಹ್ಮನಲ್ಲಿ ಐಕ್ಯಹೊಂದಬೇಕಾದರೂ, ದ್ವೈತಮತರೀತ್ಯಾ ಜೀವನು ಮುಕ್ತಿ ಪಡೆಯಬೇಕಾದರೂ ಒಂದೇ ಗರಡಿಯಲ್ಲಿ ಸಾಧನೆ ಮಾಡಬೇಕು. ಮಾಡುವ ಸಾಧನೆ ಬಲು ದೂರದವರೆಗೆ ಒಬ್ಬರಿಗೊಂದು ಮತ್ತೊಬ್ಬರಿಗೊಂದು ಇಲ್ಲ. ಶಂಕರಾಚಾರ್ಯರು '**ಮೋಕ್ಷ ಸಾಧನಸಾಮಗ್ರ್ಯಾಂ ಭಕ್ತಿರೇವ ಗರೀಯಸೀ**' ಎಂದು ಭಕ್ತಿಗೇ ಮಹತ್ವ ಕೊಟ್ಟಿದ್ದಾರೆ. ಭಕ್ತಿಯನ್ನು ಬಿಟ್ಟು ಯಾವ ವೈದಿಕಮತದಲ್ಲೂ ಮುಕ್ತಿಗೆ ದಾರಿಯಿಲ್ಲ. ಭೇದ ನಷ್ಟವಾಗಿ ಅಭೇದ ಸ್ಥಿರವಾದರೂ, ಆ ಅಭೇದವು '**ನಾಥ ತವಾಹಂ ನಮಾಮಕೀನಸ್ತ್ವಂ**' ಎಂಬಂತೆ ನಿನ್ನಿಂದ ನಾನು, ನನ್ನಿಂದ ನೀನಲ್ಲ; ಎಂಬ ಅಭೇದ. ಸಮುದ್ರದಿಂದ ತರಂಗ, ತರಂಗದಿಂದ ಸಮುದ್ರವಲ್ಲ; ಎಂಬಂತೆ.

ಪರಿಸ್ಥಿತಿ ಹೀಗಿರಲು, ಪರಾಧೀನನಾದ ಜೀವನು ಮಾಡಬೇಕಾದುದೇನು? ಸರ್ವಶಕ್ತನಾದ ಭಗವಂತನ ಕೃಪೆಯನ್ನು ಸಂಪಾದಿಸಿ, ದುಃಖಮಯ ಜನನಮರಣಗಳಿಂದ ಮುಕ್ತನಾಗಲು ಸಾಧನಮಾರ್ಗ ಹುಡುಕುವುದಕ್ಕಿಂತ ಉಳಿದಿರುವುದಾದರೂ ಏನು?

Sri Vidyabharathi Book Centre, Sringeri

CC-0. In Public Domain. Digitized by eGangotri

ಈ ಪರಿಯ ಪರಿತಾಪ ಯಾರ ಮನಸ್ಸಿಗಾದರೂ ಬಂದರೆ ಅಂಥವರಿಗೆ ಸಾಧನದ ದಾರಿಯನ್ನು ಕನ್ನಡ ಹರಿದಾಸರು ತೋರಿಸಿರುತ್ತಾರೆ. ಯೋಗ ಸಾಧನೆ ಮಾಡುವವನಿಗೆ ಹಿಂದುಮುಂದು ನೋಡದೆ ನಮಸ್ಕಾರ ಹಾಕುವ ಅಭ್ಯಾಸ ಹೇಗೆ ಮೊದಲಿನದೋ, ಹಾಗೆ ಭಕ್ತಿಸಾಧನೆ ಮಾಡಬೇಕೆಂಬವನಿಗೆ ನಾಮಸ್ಮರಣೆ ಮಾಡುವುದು ಮೊದಲಿನದು. ನಾಮ ಭಜನೆಯಿಂದ ದೇಹೇಂದ್ರಿಯಗಳು ಪವಿತ್ರವಾದ ವಿನಾ ಭಕ್ತನಿಗೆ ಸಾಧನವಾಗುವುದಿಲ್ಲ. ಕೃಷ್ಣಾಮೃತಮಹಾರ್ಣವದಲ್ಲಿ ಶ್ರೀಮಧ್ವಾಚಾರ್ಯರವರು—

ನಾಮ್ನೋಽಸ್ತಿ ಯಾವತೀಶಕ್ತಿಃ ಪಾಪನಿರ್ಹರಣೇ ಹರೇಃ
ತಾವತ್ಕರ್ತುಂ ನ ಶಕ್ನೋತಿ ಪಾತಕಂ ಪಾತಕೀ ಜನಃ ||

ತಾ|| ಪರಮಾತ್ಮನ ನಾಮಕ್ಕೆ ಪಾಪ ಪರಿಹಾರ ಮಾಡುವುದರಲ್ಲಿ ಎಷ್ಟು ಶಕ್ತಿಯಿದೆಯೋ, ಪಾಪಿಗಳು ಅಷ್ಟು ಪಾಪಗಳನ್ನು ಮಾಡುವದಕ್ಕೆ ಸಮರ್ಥರೇ ಆಗುವುದಿಲ್ಲವೆಂಬದಾಗಿ ಹೇಳಿರುತ್ತಾರೆ. ಕನ್ನಡ ಹರಿದಾಸರುಗಳು 'ನೀನ್ಯಾಕೋ ನಿನ್ನ ಹಂಗ್ಯಾಕೋ ನಿನ್ನ ನಾಮದ ಬಲವೊಂದಿದ್ದರೆ ಸಾಕೊ' ಎಂದು ಮೊದಲಾಗಿ ಒಬ್ಬೊಬ್ಬರೂ ಹಾಡಿದ್ದಾರೆ. ಮಹಾರಾಷ್ಟ್ರ ಭಕ್ತರು ನಾಮಭಜನೆಗೆ ಬಹಳ ಮಹತ್ವ ಕೊಟ್ಟು ನಿರಂತರ ನಾಮಕಥನ ಮಾಡುವುದು ಇಂದಿಗೂ ಆ ದೇಶದಲ್ಲಿ ಕಂಡುಬರುತ್ತದೆ. ಬೆಳಗಾಗಿ ಏಳುತ್ತಲೇ—'ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ || ಹರೇ ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ' ಎಂಬುವುದು ನಮ್ಮ ಜನರ ನಿತ್ಯಪಾಠದಲ್ಲಿದೆ. ಹರೇರ್ನಾಮೈವ ನಾಮೈವ ನಾಮೈವ ಮಮ ಜೀವನಂ || ಕಲೌ ನಾಸ್ತ್ಯೇವ ನಾಸ್ತ್ಯೇವ ನಾಸ್ತ್ಯೇವ ಗತಿರನ್ಯಥಾ ಎಂಬುದಾಗಿ ಪುರಾಣವು ಸಾರುತ್ತಿದೆ. 'ಗೇಯಂ ಗೀತಾ ನಾಮಸಹಸ್ರಂ ಧ್ಯೇಯಂ ಶ್ರೀಪತಿರೂಪಮಜಸ್ರಂ' ಎಂಬುದಾಗಿ ಶಿಷ್ಯರು ಹಾಡಿದರೆ 'ಭಜ ಗೋವಿಂದಂ ಭಜ ಗೋವಿಂದಂ ಭಜ ಗೋವಿಂದಂ ಮೂಢಮತೇ' ಎಂಬುದಾಗಿ ಶಂಕರಾಚಾರ್ಯರು ನಾಮಭಜನೆಗೆ ಮಹತ್ವ ಕೊಟ್ಟಿದ್ದಾರೆ. ಇದೇ ರೀತಿ ರಾಮಾನುಜಾಚಾರ್ಯರು, ವಲ್ಲಭಾಚಾರ್ಯರು ಎಲ್ಲ ಮತಾಚಾರ್ಯರೂ ನಾಮಮಾಹಾತ್ಮ್ಯವನ್ನು ಕೊಂಡಾಡಿದ್ದಾರೆ. ಚೈತನ್ಯ ಮಹಾಪ್ರಭುವಿಗೆ 'ಹರಿಹರಿ ಹರಿಹರಿ' ಎಂದು ಎಷ್ಟು ಭಜಿಸಿದರೂ ಮನದಣಿಯಲಿಲ್ಲ. ರಾಮ

Sri Vidyabharathi Book Centre, Sringeri

 CC-O. In Public Domain. Digitized by eGangotri

ನಾಮುವನ್ನು ಬರೆದ ಮಾತ್ರಕ್ಕೆ ಶಿಲೆಗಳು ಸಮುದ್ರದಲ್ಲಿ ತೇಲಿದವೆಂದೂ ತಮ್ಮ ಕಾಠಿಣ್ಯವನ್ನು ತ್ಯಜಿಸಿದವೆಂದೂ ಮೋರೋಪಂತರು ಅತಿಶಯೋಕ್ತಿಯಿಂದ ಹಾಡಿದ್ದಾರೆ. ಸಾಧಕನಿಗೆ ಮೊದಲಿನಿಂದ ಕಡೆಯತನಕ ನಾಮ ಕಥನವೇ ಸಾಧನೆಯಾಗಿ ಅವನು ಸಿದ್ಧನಾಗಿದ್ದಾನೆ. ಉತ್ತರ ಭಾರತದ ಸಂಕೀರ್ತನವೆಲ್ಲಾ ನಾಮಭಜನೆಯಾಗಿದೆ. ಏಳುವಾಗ ಸ್ಮರಣೆ ಮಾಡಲು ಕಲಿತ ನಾಮವು ಮರಣಕಾಲದಲ್ಲಿಯೂ ನಾಮಸ್ಮರಣೆಯಿಂದಲೇ ಮುಕ್ತಿಗೆ ದಾರಿಯಾಗಿದೆ. ಹರಿದಾಸರು ಮಾತುಮಾತಿಗೂ ನಾಮಸ್ಮರಣೆಯಿರಲೆಂದು ಪ್ರತ್ಯೇಕ ದೇವರ ನಾಮಗಳನ್ನೇ ಅಗಣಿತವಾಗಿ ಬರೆದಿದ್ದಾರೆ.

ಕನಕದಾಸರು ಉತ್ತರ ಕರ್ಣಾಟಕದ ಚಿಕ್ಕದೊಂದು ಪಾಳೆಪಟ್ಟಿನ ದೊರೆತನ ಮಾಡುತ್ತಿದ್ದರು. ವಿಜಯನಗರದ ಅರಸರು ಹೇಳಿದಾಗ ಸಾವಿರ ಕಾಲಾಳುಬಲದೊಡನೆ ಶತ್ರುರಾಜರಮೇಲೆ ದಂಡಯಾತ್ರೆಮಾಡಿ ಗೆದ್ದ ರಾಜ್ಯವನ್ನು ಕರ್ಣಾಟಕ ಸಾಮ್ರಾಜ್ಯಕ್ಕೆ ಸೇರಿಸುತ್ತಿದ್ದರು. ಇಂಥವರಿಗೆ ಮನಸ್ಸು ಪರಿವರ್ತನೆಯಾಯಿತು. ಹರಿದಾಸರಾಗಿ ಕವಿತೆಗೆ ಆರಂಭಿಸಿದ ಕೂಡಲೇ ಕೇಶವಾದಿ ಚತುರ್ವಿಂಶತಿ ನಾಮಗಳ ಕೀರ್ತನೆಯನ್ನು ಹಾಡಿದರು. ಅವರು ತಿರುಪತಿಯಲ್ಲಿ ಹಾಡಿದ ಹಾಡಿನಲ್ಲಿ ಮಾತುಮಾತಿಗೆ ನಾಮಸ್ಮರಣೆಯಿರಲೆಂದು ಕೆಳಕಂಡಂತೆ ಹಾಡಿದರು.

('ತುತಿಸಬಲ್ಲೆನೆ ನಾ ನಿನ್ನ' ಎಂಬಂತೆ)

ಗೋವಿಂದ । ಸಲಹೆನ್ನನು । ಸದಾನಂದ । ಗೋವಿಂದ ॥ ಪ ॥
ಗೋವಿಂದ ಸಲಹೆನ್ನ ಕುಮುದಲೋಚನ ನಿನ್ನ ।

ಸೇವಕರಡಿಯ ಸೇವಕನಯ್ಯ ಗೋವಿಂದ ॥ ಅ ॥
ತಮನ ಸಂಹರಿಸಿ ವೇದವ ತಂದ ಗೋವಿಂದ ।
ಅಮರರಿಗಮೃತಪಾನವನಿತ್ತ ಗೋವಿಂದ
ರಮಣಿಯ ತಂದ ವರಹಾರೂಪ ಗೋವಿಂದ ।
ಭ್ರಮಿಸಿ ಕಂಬದೊಳುದುಭವಿಸಿದ ಗೋವಿಂದ
ಕ್ಷಮೆತಾಳಿ ಬ್ರಹ್ಮಚಾರಿಯಾದೆ ಗೋವಿಂದ ।
ಸಮರದೊಳಖಿಳರಾಯರ ಕೊಂದೆ ಗೋವಿಂದ
ಕಮಲಾಕ್ಷ ಕಡಲಕಟ್ಟಿದ ದಿಟ್ಟ ಗೋವಿಂದ ।

Sri Vidyabharathi Book Centre, Sringeri

CC-O. In Public Domain. Digitized by eGangotri

ಮಮತೆಯೊಳಳಿಯು ಗೋಗಳ ಕಾದೆ ಗೋವಿಂದ
ರಮಣೇರಿಗೊಲಿದು ಚಿತ್ತಲೆನಿಂತೆ ಗೋವಿಂದ ।
ವಿಮಲ ತುರಗವನೇರಿದ ಕಲ್ಕಿ ಗೋವಿಂದ
ನಮಿಪರೊಳಿಹೆ ಗೋವಿಂದ ।
ನಿಂದಿಪರಿಗೆ ಶಮನನಂತಿಹೆ ಗೋವಿಂದ
ಎಲ್ಲರೊಳಿಪ್ಪ ಅಮಿತಮಹಿಮ ಗೋವಿಂದ ।
ಇಂಗಡಲೊಳಿಂಗಮನ ನಿರ್ಜಿತ ಗೋವಿಂದ
ಅಚ್ಯುತ ಸರ್ವೋತ್ತಮನೆ ಚಿನ್ಮಯ ಗೋವಿಂದ ।
ಅಚಲಮುಕ್ತಿ ಕ್ರಮವ ಬೋಧಿಸು ಗೋವಿಂದ
ನಮೋ ಲಕ್ಷ್ಮೀರಮಣ ದಶಾವತಾರವ ತಾಳ್ದ ಗೋವಿಂದ ॥ ೧ ॥

ಮನವೆನ್ನ ಮಾತು ಕೇಳದು ಕಾಣೋ ಗೋವಿಂದ ।
ಮನವ ಗೆಲ್ಲುವ ಬಗೆ ಎನಗಿಲ್ಲ ಗೋವಿಂದ
ಕನಸಿನಂಥ ದೇಹ ಸ್ಥಿರವಲ್ಲ ಗೋವಿಂದ ।
ಬಿನುಗು ಬುದ್ಧಿಗಳನ್ನು ಬಿಡಿಸಯ್ಯ ಗೋವಿಂದ
ನೆನಹ ನಿನ್ನೊಳಗಿಟ್ಟು ಸಲಹಯ್ಯ ಗೋವಿಂದ ।
ನೆನೆವ ದಾಸರ ಮನದೊಳಗಿಹ ಗೋವಿಂದ
ಘನಮಹಿಮನೆ ನಿನ್ನ ಮೊರೆಹೊಕ್ಕೆ ಗೋವಿಂದ ।
ನಿನಗಿಲ್ಲದಪಕೀರ್ತಿ ನನಗೇನೋ ಗೋವಿಂದ
ಜನನರಹಿತ ಗೋವಿಂದ ।
ನಿನ್ನಡಿಗಳ ನೆನಹು ಕೊಡೋ ಗೋವಿಂದ
ದುರ್ವಿಷಯವಾಸನೆ ಬಿಡಿಸೊ ಗೋವಿಂದ ।
ಕುತ್ಸಿತ ಕೆಟ್ಟತನವ ಬಿಡಿಸೊ ಗೋವಿಂದ
ಸದ್ಗುಣವೆಂಬ ಧನವ ತುಂಬಿಸೊ ಗೋವಿಂದ ।
ಇದಕೆ ಬಡತನವೆ ನಿನಗೆ ಗೋವಿಂದ
ಸದಾ ನಿನ್ನ ಘನ ಸ್ಮರಣೆಕೊಡು ಗೋವಿಂದ ।
ಸದಾನಂದ ಸನಕ ಸನಂದಾರ್ಚಿತ ಗೋವಿಂದ ॥ ೨ ॥

ನರಬೊಂಬೆಗಳ ಮಾಡಿ ಕುಣಿಸುವ ಗೋವಿಂದ ।
ನರರ ನೋಡಿ ನೋಡಿ ನಗುತಿಪ್ಪ ಗೋವಿಂದ

Sri Vidyabharathi Book Centre, Sringeri

 CC-O. In Public Domain. Digitized by eGangotri

ಅರಿಯದಂತಖಿಳರೊಡಗಿಪ್ಪ ಗೋವಿಂದ |
ಅರಿಯಾಡಂಬರಗಳ ಹೊಡೆದಂಥ ಗೋವಿಂದ
ಅರಿಯದ ಮುನಿಸತಿಗೊಲಿದಂಥ ಗೋವಿಂದ |
ತರಳನ ಕರೆದು ಆದರಿಸಿದ ಗೋವಿಂದ
ಸುರಬ್ರಹ್ಮಾದಿಗಳಿಗೆ ದೊರೆಯು ನೀ ಗೋವಿಂದ |
ಪರಮಪಾವನನೆಂಬ ಬಿರುದುಳ್ಳ ಗೋವಿಂದ
ಪರಮಪುರುಷ ಪುರುಷೋತ್ತಮ ಗೋವಿಂದ |
ಪರಬ್ರಹ್ಮ ಪರಾತ್ಪರತರ ಗೋವಿಂದ
ಮರೆಹೊಕ್ಕ ಭಕ್ತರ ಸಲಹುವ ಗೋವಿಂದ |
ಕರಿರಾಜ ಕರೆಯಲೊದಗಿ ಬಂದೆ ಗೋವಿಂದ
ಗರುಡಗಮನ ಗೋವಿಂದ |
ಕಿನ್ನರ ಸಿದ್ಧ ಗರುಡ ಸನ್ನುತ ಗೋವಿಂದ
ಅಪರಿಮಿತ ಕರುಣಾಸಾಗರ ಗೋವಿಂದ |
ಅರಿಯದಂಥ ಪರಮಜ್ಯೋತಿಯೆ ಗೋವಿಂದ
ಗಂಗೆಯ ಪೆತ್ತ ಚರಣ ನಿರ್ಗುಣ ಗೋವಿಂದ |
ತೆತ್ತೀಸಕೋಟಿ ಸುರರ ಪೊರೆವ ಗೋವಿಂದ
ಶ್ರೀವೈಕುಂಠಪುರದೊಳಗಿಹ ಗೋವಿಂದ |
ಸರ್ವಾನಂದ ಶರಣು ಕನಕ ಆದಿಕೇಶವ ಗೋವಿಂದ ||೩||

ಪುರಂದರದಾಸರು ನಾಮಕೀರ್ತನೆ ಮಾಡುವವರಿಗೆ ನರಕಭಯವಿಲ್ಲ ಎಂಬುದಾಗಿ ಬಲು ಭರವಸೆಯಿಂದ ಕೆಳಕಂಡ ನಾಮವನ್ನು ಹಾಡಿರುತ್ತಾರೆ.

ರಾಗ : ಧನಾಸರಿ — ತಾಳ : ಆದಿ

ನಾಮಕೀರ್ತನೆ | ಅನುದಿನ ಮಾಳ್ಪಗೆ | ನರಕಭಯಗಳುಂಟೇ ||ಪ||

ನಾಮವೊಂದೇ ಯಮ | ನಾಳ್ಗಳನೊದೆದು ಅ | ಜಾಮಿಳನಿಗೆ ಸು |
ಕ್ಷೇಮ ಕೊಟ್ಟ | ಹರಿ ||ಅ||

ಕೇಸರಿಗಂಜದ ಮೃಗವುಂಟೇ | ದಿ | ನೇಶಗಂಜದ ತಮವುಂಟೇ
ವಾಸುದೇವ ವೈಕುಂಠ ಜಗನ್ಮಯ | ಕೇಶವಕೃಷ್ಣ ಎಂದುಚ್ಚರಿಸುವ ||೧||

Sri Vidyabharathi Book Centre, Sringeri

CC-O. In Public Domain. Digitized by eGangotri

ಕುಲಿಶಕಂಜದ ಗಿರಿಯುಂಟೇ ಬಲು । ಪ್ರಳಯ ಬಂದಾಗ ಜೀವಿಪರುಂಟೆ ॥
ಜಲಜನಾಭ ಗೋವಿಂದಜನಾರ್ದನ । ಕಲುಷಹರಣ ಕರಿರಾಜ
ವರದನೆಂಬ ॥ ೨ ॥

ಗರುಡಗಂಜದ ಫಣಿಯುಂಟೇ । ಧ । ಳ್ಳುರಿಯಲಿ ಬೇಯದ
ತೃಣವುಂಟೇ ನರಹರಿನಾರಾಯಣ ದಾಮೋದರ ।
ಪುರಂದರವಿಠಲನೆಂದುಚ್ಚರಿಸುವ ॥ ೩ ॥

ಮಹಾನುಭಾವರಾದ ವಿಜಯದಾಸರು ಹರಿನಾಮ ಸ್ಮರಣೆಯಿಂದ ಕೃತಾರ್ಥರಾದ ಪರಮ ಭಾಗವತರೆಲ್ಲರ ನಾಮ ಸ್ಮರಣೆ ದೊರೆಯುವಂತೆ "ಹರಿನಾಮ ಸುಳಾದಿ'ಯನ್ನು ರಚಿಸಿರುತ್ತಾರೆ. ಅದು ಕೆಳಕಂಡಂತಿದೆ:

ಧ್ರುವತಾಳ

ಹರಿನಾಮ ಪ್ರಹ್ಲಾದನ ಮೊರೆ ಕೇಳಿ ಸಲಹಿತು ।
ಹರಿನಾಮ ಗಜೇಂದ್ರನ ವಿಪತ್ತು ಕಳೆಯಿತು
ಹರಿನಾಮ ಅಜಾಮಿಳನ ಪಾತಕ ಕೆಡಿಸಿತು ।
ಹರಿನಾಮ ನಾರದಗೆ ನೀಚ ಯೋನಿ ಬಿಡಿಸಿತು
ಹರಿನಾಮ ಭೀಷ್ಮನ ಪಂಥವ ಗೆಲಿಸಿತು ।
ಹರಿನಾಮ ಅಂಬರಿಷನ ವ್ರತವ ಸಂರಕ್ಷಿಸಿತು
ಹರಿನಾಮ ವಿಭೀಷಣನಿಗೆ ಪಟ್ಟವ ಕಟ್ಟಿಸಿತು ।
ಹರಿನಾಮ ದ್ರೌಪದಿಯ ಮಾನ ಸಂರಕ್ಷಿಸಿತು
ಹರಿನಾಮ ಧ್ರುವನ ತಪಸಿಗೆ ಒಲಿಯಿತು ।
ಹರಿನಾಮ ಅಹಲ್ಯೆಯ ಶಾಪ ಹಿಂಗಿಸಿತು
ಹರಿನಾಮ ಬಲಿನೃಪನ ಇಂದ್ರನ ಮಾಡಿತು ।
ಹರಿನಾಮ ಕುಚೇಲನ ದಾರಿದ್ರ್ಯ ಭಂಗಿಸಿತು
ಹರಿನಾಮ ವಿದುರನ ಕ್ಷೀರಕ್ಕೆ ಹಿಗ್ಗಿತು ।
ಹರಿನಾಮ ದೇವಕಿಯ ಬಂಧನ ಬಿಡಿಸಿತು
ಹರಿನಾಮ ಪರೀಕ್ಷಿತನ ಉದರದಿ ಸಲಹಿತು ।

Sri Vidyabharathi Book Centre, Sringeri

CC-O. In Public Domain. Digitized by eGangotri

ಹರಿನಾಮ ಜನಕನ ದೃಢಮತಿ ಮಾಡಿತು
ಹರಿನಾಮ ಪುಂಡರಿಕನ ಭಕ್ತಿಗೆ ಮೆಚ್ಚಿತು।
ಹರಿನಾಮ ಗುರುಪುತ್ರರ ತಿರುಗಿ ಬದುಕಿಸಿತು
ಹರಿನಾಮ ವಾಲ್ಮೀಕನ ಮುನಿಪನೆಂದೆನಿಸಿತು ।
ಹರಿನಾಮ ಪರಿಪರಿ ಭಕ್ತರೊಡನಾಡಿತು
ಹರಿನಾಮ ಹೊರತನ್ಯ ಉಪಾಯವಿಲ್ಲವಯ್ಯ ।
ಹರಿನಾಮ ಸಮಸ್ತ ಭಯ ಪರಿಹರವಯ್ಯ
ಹರಿನಾಮ ಮನಸಿನ ನಿರ್ಮಲಕೆ ಕಾರಣ।
ಹರಿನಾಮ ದೇವಕ್ಕಳಿಗೆ ಪಾರಾಯಣ
ಹರಿನಾಮ ಅಜಭವರಿಗೆ ಪರಮ ಪ್ರಾಣ ।
ಹರಿ ಹರಿ ಹರಿಯೆನ್ನೆ ರೋಗ ನಿವಾರಣ
ಹರಿನಾಮಕೆ ಸ್ವಾಮಿ ವಿಜಯವಿಠಲರೇಯ
ಹರಿಯೆಂದು ಪರಿಶುದ್ಧನಾಗಿ ನುಡಿಯಯ್ಯ ॥ ೧ ॥

ಮಟ್ಟತಾಳ

ಹರಿನಾಮವೇ ನಮ್ಮ ವಶವಾಗಿ ಇರಲಿಕ್ಕೆ ।
ಮರೆದು ಪಾಮರನಾಗಿ ಕೆಟ್ಟು ಪೋಗುವದೇಕೆ
ಮರುಳೆ ಮಾತನು ಕೇಳು ಅಂತರ ಕ್ಲೇಶವನು ।
ಇರಗೊಡದಿರು ನಿನಗೆ ತಿಳುಹುವೆನು ಇನ್ನು
ಮುರಮರ್ದನ ನಮ್ಮ ವಿಜಯವಿಠಲನ್ನ ।
ಸ್ಮರಣೆ ಮಾಡಲು ಬಂದ ದುರಿತ ವಿನಾಶನ ॥ ೨ ॥

ತ್ರಿಪುಟತಾಳ

ಹರಿನಾಮವೆಂಬುದೆ ದುರಿತ ಕಾನನವ ಸಂ ।
ಹರಿಸುವ ಪ್ರಳಯಾಗ್ನಿಯಂತಿಪ್ಪುದು
ಹರಿನಾಮ ನೆನೆದರೆ ಕುಲಕೋಟಿಯುದ್ಧಾರ ।
ಹರಿನಾಮ ನೆನೆದರೆ ಕೇಡಿಲ್ಲ ಕೇಡಿಲ್ಲ
ಹರಿನಾಮ ಜಗದಿ ಅಖಂಡವಾಗಿ ನಿಂ ।

Sri Vidyabharathi Book Centre, Sringeri

CC-O. In Public Domain. Digitized by eGangotri

ದಿರುತ ವ್ಯಾಪಿಸಿಕೊಂಡು ಇಪ್ಪದದಕೋ
ಹರಿನಾಮ ಪ್ರತಿಬಂಧಕಗಳ ಕಳಿದು ।
ಪೊರೆಯುತಲಿರೆ ನಿಮಗೆ ಚಿಂತೆ ಇನ್ಯಾಕೆ
ಹರಿತಾಪ ಹರ ನಮ್ಮ ವಿಜಯವಿಠಲ ।
ಸಜ್ಜನರ ಮಾತ ಪುಸಿಯಾಗಗೊಡುವನೇನು ? ॥ ೩ ॥

ಅಟ್ಟತಾಳ

ಹರಿನಾಮವಿದ್ದಲ್ಲಿ ಹರುಷವೆ ಎಂದಿಗು ।
ಸುರರು ಬಲ್ಲರು ಬಹುಕಾಲದಿಂದ
ನಿರಯದಿಂದ ಕಡೆಹಾಯಿಸುವದು ಆ ।
ದರದಿಂದಲಾವಾಗ ಪರಿಪಾಲಿಸುವದು
ನಿರುತ ಜ್ಞಾನ ಭಕ್ತಿ ವೈರಾಗ್ಯ ಕೊಡುವದು ।
ಬರಿದಾಗದು ಕಣೋ ತುಂಬಿದ ಭಂಡಾರ
ಧರಣಿಪಾಲಕ ನಮ್ಮ ವಿಜಯವಿಠಲರೇಯ ।
ಹೊರಗೆ ಒಳಗೆ ಇದ್ದು ಆನಂದವೀವ ॥ ೪ ॥

ಆದಿತಾಳ

ಒಂದು ಒಂದು ಹರಿನಾಮ ನೆನೆಸಿದರೆ ।
ಸಂದಿಸಂದಿಯಲಿದ್ದ ಪಾಪ ಪರಿಹರ
ಕುಂದು ಎಣಿಸದಿರು ಸಂದೇಹ ಪಡದಿರು ।
ಪೊಂದು ತಿರುಗಿ ಪೊಂದು ಹರಿನಾಮ ಸ್ಮರಣೆ
ನಿಂದಲ್ಲಿ ಕುಳಿತಲ್ಲಿ ನಡೆದಾಡುವದರಲ್ಲಿ ।
ಮಂದಮತಿಯಲ್ಲಿ ಮದಡನಿದ್ದಲ್ಲಿ
ಮಂದರೋದ್ಧರ ನಮ್ಮ ವಿಜಯವಿಠಲ ಬಂದು ।
ಬಂಧುವಾಗಿ ಅಭೀಷ್ಟೆಯನೀವ ॥ ೫ ॥

ಜತೆ

ಇಂತು ಹರಿಯ ಸ್ಮರಿಸಲಿನ್ನಾವ ಭಯವಿಲ್ಲ ।
ಕಂತುಪಿತ ನಮ್ಮ ವಿಜಯವಿಠಲ ಬಲ್ಲ ॥ ೧ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಸೂಚನೆ: ನಾಮ ಮಹಿಮೆ ಹೇಳುವಾಗ ನಾಮವೆಂದರೂ ಹರಿಯೆಂದರೂ ಹರಿನಾಮವೆಂದರೂ ಒಂದೇ ಅರ್ಥ.

ನಾಮವೇ ಮಂತ್ರ

ಮನನ ಮಾಡುವವನನ್ನು ಉದ್ಧರಿಸುವುದು ಮಂತ್ರ. ಇದರಿಂದ ಅಂದರೆ ಈ ನಾಮೋಚ್ಚಾರದಿಂದ ತಿಳಿಯಲ್ಪಡುವದಾವುದರಿಂದ ಮಂತ್ರವೆಂದು ಹೆಸರು. ಅಂದ ಮೇಲೆ ನಾಮಕ್ಕಿಂತ ಮಂತ್ರವಿನ್ಯಾವದು? ವ್ಯಾಹೃತಿಪೂರ್ವಕವಾಗಿ ಸ್ವರದಿಂದ ಹೇಳಿದರೂ ನಾಮಸಹಿತವಾಗಿರುವುದರಿಂದ ಪ್ರಧಾನವಾಗಿರುವುದು ನಾಮ. ವ್ಯಾಹೃತಿಯೂ ನಾಮ. ಆದ್ದರಿಂದ ರಾಮನಾಮವನ್ನು ಪುರಂದರದಾಸರು ರಾಮಮಂತ್ರವೆಂದೇ ಕರೆದಿದ್ದಾರೆ.

ರಾಗ : ಮಧ್ಯಮಾವತಿ — ತಾಳ : ಆದಿ

ರಾಮಮಂತ್ರವ ಜಪಿಸೊ | ಏ ಮನುಜ | ರಾಮಮಂತ್ರವ
ಜಪಿಸೊ || ಪ ||

ಆ ಮಂತ್ರ ಈ ಮಂತ್ರ ನೆಚ್ಚಿ ಕೆಡಲಿ ಬೇಡ |
ಸೋಮಶೇಖರ ತನ್ನ ಸತಿಗೆ ಪೇಳಿದ ಮಂತ್ರ || ಅ ||

ಕುಲಹೀನನಾದರು ಕೂಗಿ ಜಪಿಸುವ ಮಂತ್ರ |
ಸಲೆ ಬೀದಿ ಬೀದಿಯೊಳು ನುಡಿವ ಮಂತ್ರ
ಹಲವು ಪಾಪಂಗಳ ಹತಗೊಳಿಸುವ ಮಂತ್ರ |
ಸುಲಭದಿಂದಲಿ ಸ್ವರ್ಗ ಸೂರೆಗೊಂಬುವ ಮಂತ್ರ || ೧ ||

ಸ್ನಾನ ಮೌನಂಗಳಿಗೆ ಸಾಧನದ ಮಂತ್ರ |
ಜ್ಞಾನಿಗಳು ಮನದಿ ಧ್ಯಾನಿಪ ಮಂತ್ರ
ಹೀನ ಗುಣಂಗಳ ಹಿಂಗಿಸುವ ಮಂತ್ರ |
ಏನೆಂಬೆ ವಿಭೀಷಣಗೆ ಪಟ್ಟಕಟ್ಟಿದ ಮಂತ್ರ || ೨ ||

ಸಕಲ ವೇದಂಗಳಿಗೆ ಸಾರವೆನಿಪ ಮಂತ್ರ |
ಮುಕುತಿ ಮಾರ್ಗಕೆ ಇದೇ ಮೂಲ ಮಂತ್ರ

Sri Vidyabharathi Book Centre, Sringeri

CC-O. In Public Domain. Digitized by eGangotri

ಭಕುತಿರಸಕೆ ಭಾಟಿ ತೋರುವ ಮಂತ್ರ |
ಸುಖನಿಧಿ ಪುರಂದರವಿಠಲನ ಮಂತ್ರ ॥ ೩ ॥

ಹೀಗೆ ನಾನಾ ರೀತಿಗಳಲ್ಲಿ ನಾಮ ಸ್ಮರಣೆಯ ಮಹಿಮೆಯನ್ನು ಹರಿದಾಸರು ಹೊಗಳಿದ್ದಾರೆ. ಈ ಒಂದು ವಿಷಯದಲ್ಲಿ ಒಬ್ಬೊಬ್ಬರು ಮಾಡಿರುವ ದೇವರ ನಾಮುಗಳೇ ಹೇರಳವಾಗಿವೆ.

ಇತ್ತೀಚಿನ ಕಾಲದಲ್ಲಿ ಮಹಾಪುರುಷರೆಂದು ಪ್ರಖ್ಯಾತಿ ಪಡೆದ ಶ್ರೀರಾಮಕೃಷ್ಣ ಪರಮಹಂಸರು ಮಾಡುತ್ತಿದ್ದುದು ನಿರಂತರ ನಾಮಸ್ಮರಣೆ. ದೇವಿಯ ಭಕ್ತರಾದ ಅವರು ಹೇಳುತ್ತಿದ್ದ ದೋಹಾಯಿಯಲ್ಲಿ 'ಸಿರಫ್ ನಾಮ ಜಪುನೇಸೇ ವ್ಯಥಾ ದೂರ ಹೋತೀ ಸಾರೀ' ಎಂಬದಾಗಿ ಹೇಳಿದ್ದಾರೆ.

ಅಂದಮೇಲೆ ಜೀವನು ಅಸ್ವತಂತ್ರನಾಗಿದ್ದರೇನು? ಪರಮಾತ್ಮನ ನಾಮ ಭಜನೆಯಿಂದ ಪಾವನನಾದಮೇಲೆ ಜೀವನ ಭಾಗ್ಯಕ್ಕೆ ಕಡಿಮೆಯೆಲ್ಲಿದೆ? ದೇವರು ಕೊಡುವಂತೆ ಲೋಕದ ನರರು ಕೊಡಬಲ್ಲರೆ? ರಾಜ ಮೆಚ್ಚಿದರೆ ಧನವಾಹನ ವಿಭೂಷಣಗಳನ್ನು ಕೊಟ್ಟಾನು. ವೃತ್ತಿ ಕ್ಷೇತ್ರಗಳನ್ನು ಕೊಟ್ಟಾನು. ಜನನಮರಣಗಳು ಬರದಂತೆ ಮಾಡಬಲ್ಲನೆ? ವೃದ್ಧಾಪ್ಯ ಬರದಂತೆ ಮಾಡಬಲ್ಲನೆ? ಪರಮಾತ್ಮನು ಕೊಡಲು ಮೊದಲು ಮಾಡಿದರೆ ತನ್ನ ಮನೆಯನ್ನೇ ಕೊಡುತ್ತಾನೆ. ತನ್ನನ್ನು ಕೊಡುತ್ತಾನೆ. ಈ ಅರ್ಥದ ಮಾತನ್ನು ಜಗನ್ನಾಥದಾಸರು:

ಜನಪ ಮೆಚ್ಚಿದರೀವ ಧನ ವಾ
ಹನ ವಿಭೂಷಣ ವಸನ ಭೂಮಿಯ
ತನುಮನಗಳಿತ್ತಾದರಿಪರುಂಟೇನೊ ಲೋಕದೊಳು
ಅನವರತ ನೆನೆವವರನಂತಾ
ಸನವೆ ಮೊದಲಾದಾಲಯದೊಳಿ
ಟ್ಟಣುಗನಂದದಲವರ ವಶವಾಗುವ ಮಹಾಮಹಿಮ ॥ ೧೨ ॥

—ಎಂಬುದಾಗಿಯೂ

ಸ್ಮರಿಸುವವರಪರಾಧಗಳ ತಾ
ಸ್ಮರಿಸ ಸಕಲೇಷ್ಟಪ್ರದಾಯಕ
ಮರಳಿ ತನಗರ್ಪಿಸಲು ಕೊಟ್ಟುದನಂತಮಡಿಮಾಡಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಿಪರಿಯಲುಂಡುಣಿಸಿ ಸುಖಸಾ
ಶಿರದೊಳೋಲಾಡಿಸುವ ಮಂಗಳ
ಚರಿತ ಚಿನ್ಮಯಗಾತ್ರ ಲೋಕಪವಿತ್ರ ಸುಚರಿತ್ರ || ೧೬ ||೨

ಎಂಬುದಾಗಿಯೂ ಹೇಳುತ್ತಾರೆ. ದಾಸರ ದೃಷ್ಟಿ ವ್ಯಾಪಕವಾದದ್ದು, ಹೃದಯ ವಿಶಾಲವಾದದ್ದು, ಎಂಬುದಕ್ಕೆ ಕೆಳಗಿನ ಎರಡು ಪದ್ಯಗಳು ಸಾಕ್ಷಿಯಾಗಿವೆ:

ಸರ್ವದೇಶವು ಪುಣ್ಯದೇಶವು
ಸರ್ವಕಾಲವು ಪುಣ್ಯಕಾಲವು
ಸರ್ವಜೀವರು ದಾನಪಾತ್ರರು ಮೂರುಲೋಕದೊಳು
ಸರ್ವಮಾತುಗಳೆಲ್ಲ ಮಂತ್ರವು
ಸರ್ವಕೆಲಸಗಳೆಲ್ಲ ಪೂಜೆಯು
ಶರ್ವವಂದ್ಯನ ವಿಮಲಮೂರ್ತಿಧ್ಯಾನವುಳ್ಳವಗೆ || ೪ || ೧೦

ಆವ ಕುಲದವನಾದೊಡೇನಿ
ನ್ನಾವ ದೇಶದೊಳಿದ್ದೊಡೇನಿ
ನ್ನಾವ ಕರ್ಮವ ಮಾಡಲೇನಿನ್ನಾವ ಕಾಲದಲಿ
ಶ್ರೀವರನ ಸರ್ವತ್ರದಲಿ ಸಂ
ಭಾವಿಸುತ ಪೂಜಿಸುತ ಮೋದಿಪ
ಕೋವಿದರಿಗುಂಟೇನು ಭಯದುಃಖಾದಿ ದ್ವಂದ್ವಗಳು || ೪ || ೧೩

ಬಿಟ್ಟಿಗಳ ಸೇವದಿಂದಡಾಗಲಿ
ಹೊಟ್ಟೆಗೋಸುಗವಾದಡಾಗಲಿ
ಕೆಟ್ಟರೋಗಪ್ರಯುಕ್ತವಾಗಲಿ ಅಣಕದಿಂದೊಮ್ಮೆ
ನಿಟ್ಟುಸುರಿನಿಂ ಬಾಯ್ತೆರೆದು ಹರಿ
ವಿಠಲಾ ಸಲಹೆಂದೆನಲು ಕೈ
ಗೊಟ್ಟು ಕಾವ ಕೃಪಾಳು ಸಂತತ ತನ್ನ ಭಕುತರನ ||

ದುಷ್ಟರೆನ್ನದೆ ದುರ್ವಿಷಯದಿಂ
ಪುಷ್ಟರೆನ್ನದೆ ಪೂತಕರ್ಮ
ಭ್ರಷ್ಟರೆನ್ನದೆ ಶ್ರೀದವಿಠಲವೇಣುಗೋಪಾಲ

Sri Vidyabharathi Book Centre, Sringeri

CC-0. In Public Domain. Digitized by eGangotri

ಕೃಷ್ಣ ಕೈಪಿಡಿವನು ಸುಸತ್ಯ ವಿ
ಶಿಷ್ಟ ದಾಸತ್ವವನು ಪಾಲಿಸಿ
ನಿಷ್ಠೆಯಿಂದಲಿ ಹರಿಕಥಾಮೃತಸಾರ ಪಠಿಸುವರ ||

ಇಂತಹ ಭರವಸೆಗಳಿರುವಾಗ, ಶಾಸ್ತ್ರಗಳು ಅನುಕೂಲವಾಗಿರುವಾಗ ಜೀವನು ಭಯಪಡಲು ಕಾರಣವೇನು? ನಾಮಸ್ಮರಣೆಯಿಂದ ಶ್ರವಣಾದಿ ನವವಿಧ ಭಕ್ತಿ ಸಾಧನೆಮಾಡಿದ ಭಕ್ತನಿಗೆ ಮುಕ್ತಿಯಲ್ಲದೆ ಮತ್ತೇನು? ಭಯವೇನು?

Sri Vidyabharathi Book Centre, Sringeri

CC-O. In Public Domain. Digitized by eGangotri

ಅಧ್ಯಾಯ ಐದು

ವಿವಿಧ ರಸಗಳಲ್ಲಿ

ಭಕ್ತಿಪಂಥವು ಜೀವನ್ಮುಕ್ತಿಗೆ ಶೀಘ್ರ ಫಲಕಾರಿಯಾದ ಮಾರ್ಗವೆಂದು ಶಾಸ್ತ್ರಗಳು ಸಾರುತ್ತಲಿವೆ. ಜೀವನ್ಮುಕ್ತನ ಪರಮಾನಂದಾನುಭವವನ್ನು ಶಾಸ್ತ್ರಕಾರರು 'ರಸ' ಎಂದು ಕರೆಯುತ್ತಾರೆ. ಉಪನಿಷತ್ತು 'ರಸೋ ವೈ ಸಃ ರಸಂ ಹ್ಯೇವಾಯಂ ಲಬ್ಧ್ವಾ ಆನಂದೀಭವತಿ' ಎಂಬುದಾಗಿ ಸಾರುತ್ತಲಿದೆ. ಶ್ರೀಮದ್ಭಾಗವತವು ಈ ದೈವೀ ಪ್ರೇಮರಸದ ವಿಸ್ತಾರವೆಂದು ಕಂಡು ಬರುತ್ತಿದೆ. ರಜೋಗುಣ ತಮೋಗುಣಗಳ ಮಿಶ್ರಣವಿಲ್ಲದ ಕೇವಲ ಶುದ್ಧ ಮನಸ್ಸಿಗೆ ಸಂಬಂಧಪಟ್ಟ ಭಾವೋದ್ರೇಕಕ್ಕೆ ರಸವೆಂದು ಕರೆಯುತ್ತಾರೆ. ರಸವು ಶಬ್ದಗಳಿಂದ ಪೂರ್ತಿಯಾಗಿ ಬಣ್ಣಿಸಲು ಬರುವುದಲ್ಲ. ರಸಗಳು ತರಂಗಗಳಂತೆ ಹೊರಹೊಮ್ಮುವದನ್ನು ಕಂಡು ಲೌಕಿಕ ಅನುಕೂಲಕ್ಕಾಗಿ ಸ್ಥಾಯೀ, ವ್ಯಭಿಚಾರಿ ಎಂದು ಕರೆದಿರುತ್ತಾರೆ. ಮತ್ತೆ ಅದೇ ರಸೋದ್ರೇಕದಲ್ಲಿ ಕೇವಲ ಅಂತರಂಗದಿಂದಾಗುವುದನ್ನು ಭಾವವೆಂತಲೂ, ಬಾಹ್ಯಸ್ಪರ್ಶಗಳಿಂದಾಗುವುದನ್ನು ವಿಭಾವವೆಂತಲೂ ವಿಭಾಗಿಸಿರುತ್ತಾರೆ. 'ಶುದ್ಧ ಸತ್ವ ವಿಶೇಷಾತ್ಮಾ ಪ್ರೇಮಸೂರ್ಯಾಂಶುಸಾಮ್ಯಭಾಕ್' ಎಂದು ರಸಾಮೃತಸಿಂಧುವಿನಲ್ಲಿ ಹೇಳಿರುವಂತೆ, ಶುದ್ಧಸತ್ವಮಯವಾದ ಪ್ರೇಮಸೂರ್ಯಾಂಶುಸದೃಶವಾದ ಮನಸ್ಸಿನ ಉದ್ರೇಕಸ್ಥಿತಿ ಭಾವ ಶಬ್ದದ ಅರ್ಥವೆಂದು ಹೇಳುತ್ತಾರೆ. ಸ್ಥಾಯಿಯೆಂದರೆ ಆಳವಾದ ಮನಸ್ಸಿನಲ್ಲಿ ರೂಢಮೂಲವಾಗಿರುವ ಆತ್ಮರತಿಯೆಂದು ಅರ್ಥಮಾಡುತ್ತಾರೆ. ಸ್ಥಾಯಿಯಲ್ಲದ್ದು ವ್ಯಭಿಚಾರಿ, ಭಾವವಲ್ಲದ್ದು ವಿಭಾವ ಎಂದು ಆನಿಸಿಕೊಳ್ಳುತ್ತವೆ.

ಇಂತಹ ರಸಭಾವಗಳ ವೈವಿಧ್ಯವನ್ನು ನೋಡಿ ನಾಟ್ಯಶಾಸ್ತ್ರಪ್ರವರ್ತಕನಾದ ಭರತಮುನಿಯು—ಶೃಂಗಾರ, ವೀರ, ರೌದ್ರ, ಬೀಭತ್ಸ, ಹಾಸ್ಯ, ಅದ್ಭುತ, ಭಯಾನಕ, ಕರುಣಗಳೆಂದು ೮ ಪ್ರಕಾರಗಳನ್ನೇರ್ಪಡಿಸಿದನು. ಅಗ್ನಿಪುರಾಣದಲ್ಲಿ ಉಕ್ತವಾಗಿರುವ ಶಾಂತರಸವೂ ಸೇರಿ ರಸಗಳು ನವರಸಗಳಾದವು. ರಸಗಳ ಬೆಳವಣಿಗೆ ಕೇವಲ ಲೌಕಿಕವಾದುದನ್ನು ಚೈತನ್ಯಪಂಥಿಗಳು ಅಡ್ಡಕಟ್ಟಿ—ಶಾಂತಿ, ಪ್ರೀತಿ, ಸಖ್ಯ, ವಾತ್ಸಲ್ಯ, ಮಧುರರಸಗಳಿಂದ

Sri Vidyabharathi Book Centre, Sringeri

 CC-O. In Public Domain. Digitized by eGangotri

ಪಂಚಸಾಧನೆಗಳನ್ನು ಏರ್ಪಡಿಸಿಕೊಂಡರು. ವೀರ, ರೌದ್ರ, ಅದ್ಭುತ, ಭಯಾನಕರಸಗಳನ್ನು ಅವರು ಬಿಟ್ಟರೂ, ಪ್ರೀತಿ, ಸಖ್ಯ, ವಾತ್ಸಲ್ಯರಸಗಳು ಕರುಣಾರಸದಲ್ಲೂ, ಮಧುರರಸವು ಶೃಂಗಾರರಸದಲ್ಲೂ ಸಮಾವೇಶವಾಗುವುದರಿಂದ ಅವರದು ಪ್ರತ್ಯೇಕ ಮಾರ್ಗವಾಗುವುದಿಲ್ಲ. ಹರಿದಾಸರು ಮಧುರ ಭಾವದಿಂದ ಶೃಂಗಾರರಸದಲ್ಲಿ ಹಾಡಿರುವುದನ್ನಾರಂಭಿಸಿ, ಯಾರಿಗೂ ಬೇಡದ ಬೀಭತ್ಸವನ್ನು ಬಿಟ್ಟುಕೊಟ್ಟು ಮಿಕ್ಕ ರಸಗಳ ಹಾಡುಗಳ ಮಾದರಿಯನ್ನು ಕೊಟ್ಟರೆ ಈ ಅಧ್ಯಾಯದ ಉದ್ದೇಶವು ಪೂರ್ಣವಾಗುವುದು.

ಶೃಂಗಾರರಸ

ಶ್ರೀಕೃಷ್ಣನ ರಾಸಕ್ರೀಡಾ

ಶ್ರೀಕೃಷ್ಣನು ನವನಾರೀಕುಂಜರದ ಮೇಲೆ ಕುಳಿತು ಮಧುಕುಂಜ ವನಕ್ಕೆ ಬಂದ ಸನ್ನಿವೇಶವಿದು. ನೂತನವಾದ ಹೆಣ್ಣಾನೆಯ ಮೇಲೆ ಕುಳಿತು ಬಂದನೆಂಬುವುದು ಸಾಮಾನ್ಯ ಅರ್ಥ. ಒಂಬತ್ತು ಮಂದಿ ಸ್ತ್ರೀಯರು ಒಂದು ವಿಧವಾದ ಬಂಧನದಿಂದ ಆನೆಯ ಆಕಾರ ತಾಳಿದರೆಂದೂ, ಆ ಆನೆಯ ಮೇಲೆ ಕೃಷ್ಣನು ಕುಳಿತು ಬಂದನೆಂದೂ ಹೇಳುವುದು ವಿಶೇಷಾರ್ಥ. ಶ್ರೀಮದ್ ಭಾಗವತವು 'ಬ್ರಹ್ಮಸೂತ್ರಪದಂ' ಎಂಬ ವಾಕ್ಯದಂತೆ ಬ್ರಹ್ಮಸೂತ್ರಗಳಿಗೆ ವ್ಯಾಖ್ಯಾನರೂಪವಾಗಿರುವ ಪುರಾಣವು. ಶ್ರೀಕೃಷ್ಣನು ಪೂರ್ಣಬ್ರಹ್ಮ ಚಾರಿ ಎಂದು ಹೊಗಳಿಸಿಕೊಂಡವನು. ಅರ್ಜುನನಿಗೆ ಗೀತಾಶಾಸ್ತ್ರವನ್ನು ಉಪದೇಶಿಸಿ ವಿಶ್ವರೂಪವನ್ನು ತೋರಿಸಿದವನು. ತಾತ್ವಿಕ ದೃಷ್ಟಿಯಿಂದ ವಿಚಾರಿಸಿದರೆ ಕೃಷ್ಣೋಪನಿಷತ್ತಿನಲ್ಲಿ:

ಯೋ ನಂದಃ ಪರಮಾನಂದಃ ಯಶೋದಾ ಮುಕ್ತಿಗೇಹಿನೀ
ದೇವಕೀ ಬ್ರಹ್ಮವಿದ್ಯಾ ಸಾ ಯಾ ದೇವೈರುಪಗೀಯತೇ
ನಿಗಮೋ ವಸುದೇವೋ ಯಃ ವೇದಾರ್ಥಂ ಕೃಷ್ಣರಾಮಕಂ
ವನೇ ವೃಂದಾವನೇ ಕ್ರೀಡನ್ ಗೋಪಗೋಪೀಸುರೈಸ್ಸಹ
ಗೋಪ್ಯೋ ಗಾವರುಚಸ್ತಸ್ಯ ಯಷ್ಟಿಕಾ ಕಮಲಾಸನಃ
ವಂಶಸ್ತು ಭವಾನ್ ರುದ್ರಃ....

ಗೋಕುಲಂ ವನ ವೈಕುಂಠಂ ತಾಪಸಾಸ್ತತ್ರ ತೇ ದ್ರುಮಾಃ
ಲೋಭಕ್ರೋಧಾದಯೋ ದೈತ್ಯಾಃ ಕಲಿಕಾಲೋ ತಿರಸ್ಕೃತಃ
ಗೋಪರೂಪೋ ಹರಿಸ್ಸಾಕ್ಷಾನ್ಮಾಯಾಮಾನುಷವಿಗ್ರಹಃ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಷ್ಟಾವಷ್ಟಸಹಸ್ರೇ ದ್ವೇ ಶತಾಧಿಕ ಸ್ತ್ರಿಯಸ್ತಥಾ
ಋಚೋಽಪನಿಷದಷ್ಟಾವ್ಯೈ ಬ್ರಹ್ಮರೂಪಾ ಋಚಸ್ತ್ರಿಯಃ
ಋಚಾಂ ದಶಸಹಸ್ರಾಣಿ ಋಚಾಂ ಪಂಚಶತಾನಿ ಚ
ಋಚಾಮಶೀತಿಪಾದಾಶ್ಚ........ಇತ್ಯಾದಿ

ಎಂದು ಹೇಳಿರುವುದರಿಂದ ಋಗ್ವೇದ ಮಂತ್ರ ಸಂಖ್ಯಾ ೧೦,೫೮೦, ಯಜುರಾದಿ ಮಂತ್ರ ಸಂಖ್ಯಾ ೪,೩೪೮, ಉಪನಿಷನ್ಮಂತ್ರಗಳ ಸಂಖ್ಯಾ ೧,೧೮೦, ಒಟ್ಟು ೧೬,೧೦೮ ಆಗುತ್ತದೆ. ಶ್ರುತಿ ಶಬ್ದ ಸಂಸ್ಕೃತದಲ್ಲಿ ಸ್ತ್ರೀಲಿಂಗ ವಾದ್ದರಿಂದ ಶ್ರುತಿದೇವಿಯರೆನ್ನಿಸಿಕೊಳ್ಳುತ್ತಾರೆ. ಕೃಷ್ಣ ಶಬ್ದ ಪುಲ್ಲಿಂಗ ವಾದ್ದರಿಂದ ಪರಬ್ರಹ್ಮನೆನಿಸಿಕೊಳ್ಳುತ್ತಾನೆ. ಅಂದರೆ ಇಷ್ಟು ಶ್ರುತಿಗಳಿಂದಲೂ ವಾಚ್ಯನಾದವನು ಕೃಷ್ಣನೆಂದು ಅರ್ಥ. ಇವೆಲ್ಲದರ ಆಧಾರದ ಮೇಲೆ, ಎಲ್ಲ ಪ್ರೇಮಗಳಿಗಿಂತ ಪತಿಪತ್ನೀಪ್ರೇಮ ಹಿರಿದಾಗಿರುವುದರಿಂದ, ಅದು ವಿಷಯ ವಾಸನೆಯಿರದ—ಸ್ತ್ರೀಪುರುಷ ಭಾವನೆಯಿಂದ ಕಲುಷಿತವಾಗಿರದ ಮಧುರ ಭಕ್ತಿಯಾಗಿರುವುದರಿಂದ ಭಾಷಾಸರಣಿಯಲ್ಲಿ ಶೃಂಗಾರವಾಗಿ ಬಂದಿರುವುದನ್ನು ತಕ್ಕ ರೀತಿಯಿಂದ ಅರ್ಥಮಾಡಿಕೊಳ್ಳಬೇಕಲ್ಲದೆ, ಅಪಾರ್ಥಮಾಡಿಕೊಳ್ಳು ವುದು ಯೋಗ್ಯವಲ್ಲ.

ಆದ್ದರಿಂದ ರಾಸಕ್ರೀಡೆಯ ಪ್ರಥಮ ಪದವನ್ನು ಈ ಕೆಳಗೆ ಕೊಟ್ಟಿರು ತ್ತೇವೆ. ಇಲ್ಲಿ ನೋಡಬೇಕಾಗಿರುವುದು ಭಾಷೆ ಹೇಗೆ ಹರಿದುಬಂದಿರುವು ದೆಂಬುದನ್ನು; ಕನ್ನಡವು ಎಳೆದಂತೆ ಬರುವ ಸರಳ ಭಾಷೆಯೆಂಬುದನ್ನು ಹರಿದಾಸರು ಕನ್ನಡ ಜನತೆಗೆ ಮಾಡಿರುವ ಉಪಕಾರವನ್ನು.

ಲಾವಣಿ

ಮಧುಕುಂಜವನಕೆ ಮುರವೈರಿ | ನವನಾರೀಕುಂಜರವೇರಿ
ಮೂರುಸಂಜೆಯೊಳ್ ಹೊರಟನು ಶೌರಿ | ಜನರಂಜನೆಮಾಡುತ ಸ್ವಾರಿ
|| ಪ ||

ಮಧುಕುಂಜ-ಮಧುಕುಂಜ || ಕೊಸರು || ಶ್ರೀಗಂಧ-ಶ್ರೀಗಂಧ ||
ಶ್ರೀಗಂಧ ಲೇಪನ | ದಿಂದ ವದನ ಅರ | ವಿಂದದೊಳಗೆ ಮಕ |
ರಂದ ರಸವ ಸುಖ | ದಿಂದ ಕುಡಿವ ಅಳಿ | ಯಂದದಂತೆ ಕುರು
ಳಂದ ಮೆರೆಯೆ ಆಕರ್ಣ | ಹೊಂದಿದಾನಂದ ನಯನ ಬಲಿ

Sri Vidyabharathi Book Centre, Sringeri

 CC-O. In Public Domain. Digitized by eGangotri

ಯಿಂದ ಸ್ತ್ರೀಯರು ಶರ–ಸಂದು ಕಾಮಶರದಿಂದ ಬಹಳ ತರ
ನೊಂದು ಬಂದು ಬಳಸಿಂದು ನಿಲ್ಲೆ ಆ | ನಂದ ಗೋಪಿಯು
ಕಂದ ಕೊಳಲ ಸ್ವರ | ದಿಂದ ಮೋಹಿಸೆ | ಇಂದ್ರ ತನ್ನ ಸುರ
ವೃಂದ ಸಹಿತ ಮೇಲಂದಣಗಳ ಮುದದಿಂದ ಏರಿ ವರ
ಕುಂದ ಕುಸುಮ ಮಳೆಯಿಂದ | ಭೇರಿರವದಿಂದ | ತುತಿಸೆ | ಅರ
ವಿಂದನಾಭ ಸಿರಿಮಂದ ಹಾಸಯುದು | ವೃಂದರಮಣ ಗಮನಾಗೆ |
ಉಡು | ವೃಂದ ರಮಣ ಬೆರಗಾಗೆ ||೧||

ಭರ್ಜರಿ | ವಸನ ಬಹುಪರಿ | ಭರಣ ವರ ಸಿರಿ | ಯರದಿ ಸುಂದರಿ |
ಮೆರೆವ ಬಾಪುರಿ | ಇಟ್ಟ ಕಸ್ತೂರಿ | ನವಿಲು ನವಗರಿ | ಶಿರದಿ ಆಲಂಕರಿ |
ತನ್ನ ಚಾತುರಿ | ಕೊಳಲ ಬಾಯ್ದೂರಿ | ಯಿಂದ ಸುಸ್ವರ |
ಭರೀತ ರಾಗವ | ಹರೀ ಮಾಡೆ ಮೋ | ಹರೀಸಿ ಮೇಘ | ತ್ವರೀತದಿಂ |
ಹೂಂಕರಿಸಿ ಮೋಹಿಸೆ ಹರಿ || ಹರಿಣ ಸೂಕರ | ವ್ಯಾಘ್ರ ಕುಂಜರ |
ಶರಧಿ ಉಬ್ಬರ | ಭ್ರಮರ ಝೇಂಕರ | ಸುಖದ ಸುಸ್ವರ
ನವಿಲು ಚಾಗರಾದಿ ಸಲೆಮೈ | ಮರಾಡು ಬಿಡೆ ಆ ಪುರಿ ||
ಆ ಪುರಿಯೊಳಗೆ ಸ್ತ್ರೀಯರು | ಮನೆಯ ತೊರೆದರು |
ಕುಂಭಕುಚೆಯರು | ಸುರತಪ್ರೀಯರು ||
ಕಾಮಶರಾಸನಕೆ ಮನಬೆದರಿ | ಸ್ಮರಸಸೂರೆಗೊಂಡನೆಂದು ವದರಿ ||೨||

ವರ ನಾಗಶಯನ ಗಮನಾಗೆ | ಮದನ ಅನುವಾಗೆ | ಚಂದ್ರ
ಸಹವಾಗೆ | ಬಿಲ್ಲ ಹಿಡಿಬಾಗಿ | ಕುಸುಮ ಶರತೂಗಿ ಬರಲು
ಮೃದುವಾಗಿ | ಕೋಗಿಲೆಯು ಕೂಗೆ | ಸ್ತ್ರೀಯರ ಮನ | ಭೋಗ
ಪುಷ್ಪ ಫಲವಾಗೆ | ವೃಕ್ಷ ತಲೆದೂಗೆ | ಪಡೆದ ಫಲವೀಗ ಕೃಷ್ಣ
ಪದಕಾಗಿ ತಾವ್ರ ವಿನಿ | ಯೋಗಮಾಳ್ಪ ಪರಿಯಾಗಿ ಬಾಗಿರೆ
ನಾಗಮಥನ ಬರುವಾಗ | ಶಿರಕೆ ಫಣಬಾಗ ಶೇಷ ಹಿಂ |
ಭಾಗದಿ ಬರೆ | ಕರ | ಲಾಘವ ಕೊಟ್ಟಾ | ನಾಗವೇಣಿಯರು
ಭೋಗದಾಶೆಯಲಿ | ನಾಗ ಜಾಜಿ ಪುನ್ನಾಗ ಮಲ್ಲಿಗೆಗಳ
ಬೇಗದಿಂದ ರತಿ | ಭೋಗಕೆಮಗೆ ಪತಿ | ಯಾಗು ಎಂದು ತಾ
ವಾಗಿ ಮುಡಿಸಿ ಸಂತೈಸಿ || ರತಿ ಕೌತುಕದಲಿ ಮೈಮರೆಸಿ |

Sri Vidyabharathi Book Centre, Sringeri

 CC-O. In Public Domain. Digitized by eGangotri

ವರದ ಶೇಷಗಿರಿ | ಧೊರೆ ಜಯವಿಠಲನ
ಮಾತುಮಾತಿಗೆ ನಮಿಸಿ | ಮಹಿತಾಮೃತಸುಖವನುಸುರಿಸಿ ॥ ೩ ॥

ಈ ಲಾವಣಿಯನ್ನು ಬರೆದವರು ಮೈಸೂರಿನಲ್ಲಿದ್ದ ಶ್ರೀನಿವಾಸದಾಸರೆಂಬುವರು. ಮಧುರಭಕ್ತಿಯಿಂದ ಶ್ರೀಮದ್ಭಾಗವತ ದಶಮಸ್ಕಂಧವನ್ನು ಹರಿಕಥೆಯಾಗಿ ಬರೆದವರು. ಇವರ ದ್ವಾರಕಾ ವರ್ಣನೆಯನ್ನು ಹೆಚ್ಚು ಪರಿಚಯವನ್ನು ಮುಂದಿನ ಪುಟಗಳಲ್ಲಿ ಓದಬಹುದು.

ಗೋಪಿಕಾಸ್ತ್ರೀಯರು ಶ್ರೀಕೃಷ್ಣನ ವೇಣುಗಾನ ಕೇಳಿ ಬರುತ್ತಲೇ ಉಭಯರಿಗೂ ನಡೆದ ಸಂಭಾಷಣೆಯು ಗಮನಾರ್ಹವಾಗಿದೆ. ಕೃಷ್ಣನು ಬಂದ ಗೋಪಿಯರನ್ನು ಸ್ವಾಗತಿಸಿ—ಇದು ಘೋರರಾತ್ರೆ, ಕ್ರೂರಮೃಗಗಳಿವೆ, ಹೆಂಗಸರು ಇಲ್ಲಿ ಇರಬಾರದು, ಪರಪುರುಷನಾದ ನಾನು ಮಾಡಿದ ವೇಣುಗಾಯನ ಕೇಳಿಬಂದದ್ದು ಅನುಚಿತ, ನಿಮ್ಮ ಪತಿಗಳಿಂದಲೂ ಬಂಧುಗಳಿಂದಲೂ ಕೂಡಿ ಬಾಳುವುದು ನಿಮಗೆ ಧರ್ಮ ಎಂದು ಹೇಳುತ್ತಾನೆ. ಗೋಪಿಯರು—

ಮೈವಂ ವಿಭೋಽರ್ಹಸಿ ಭವಾನ್ ಗದಿತುಂ ನೃಶಂಸಂ ಸಂತ್ಯಜ್ಯ
ಸರ್ವವಿಷಯಾಂಸ್ತವ ಪಾದಮೂಲಂ |
ಭಕ್ತಾ ಭಜೇಮ ಧುರವಗ್ರಹಮಾತ್ಯಜಾಸ್ಮಾನ್ ದೇವೋ ಯಥಾದಿಪುರುಷೋ
ಭಜತೋ ಮುಮುಕ್ಷೂನ್ ॥

ತಾ॥ ಸ್ವಾಮಿಯೆ, ಇಷ್ಟು ಕ್ರೂರಮಾತುಗಳನ್ನಾಡಬೇಡ, ಸಕಲ ವಿಷಯಗಳಲ್ಲಿರುವ ಮಮತೆಯನ್ನು ತ್ಯಜಿಸಿ ನಿನ್ನ ಪಾದಮೂಲವನ್ನು ಭಜಿಸುತ್ತಿದ್ದೇವೆ. ಆದಿದೇವನಾದ ಪುರುಷನು ಮೋಕ್ಷಾಪೇಕ್ಷೆಗಳನ್ನು ಹೇಗೆ ತ್ಯಜಿಸುವದಿಲ್ಲವೋ ಹಾಗೆ ನೀನು ನಮ್ಮನ್ನು ತ್ಯಜಿಸಬೇಡ ಎಂದು ಗೋಪಿಯರು ಹೇಳುತ್ತಾರೆ.

ಇದೇ ಶ್ಲೋಕಾರ್ಥವನ್ನು ದಾಸರು ಹಾಡಾಗಿ ಹಾಡಿದ್ದಾರೆ:

ರಾಗ : ಆನಂದಭೈರವಿ — ತಾಳ : ರೂಪಕ

ನಿನ್ನಗಲಿ ಪೋಗಲಾರೆವೋ | ನೀರಜಾಕ್ಷ | ನಿನ್ನ ಸೇರಿ ಸುಖಿಸ
ಬಂದೆವೋ ॥ ಪ ॥

Sri Vidyabharathi Book Centre, Sringeri

 CC-O. In Public Domain. Digitized by eGangotri

ಮನ್ನಿಸಾದೆ ಮಮತೆಯಿಂದ | ಭಿನ್ನ ನುಡಿಗಳಾಡಿ ನಮಗೆ
ಹಣ್ಣುತೋರಿ ಕಾಳಕೂಟ | ವನ್ನು ಕೊಡುವರೇನೊ ಕೃಷ್ಣ || ಅ ||

ಐದುವದಕೆ ಶಕ್ಯವಲ್ಲದ | ಆದಿಪುರುಷ | ಅಪ್ರಮೇಯ ಅಮರಮಾನದ ||
ಶ್ರೀದ ನಮ್ಮ ಕಯ್ಯ ಬಿಡದೆ | ಆದರೀಸಬೇಕು ಪರವ | ರಾದರೇನು
ನಿನ್ನ ಶರಣರಾದಮೇಲೆ ಬಿಡುವರುಂಟೆ || ೧ ||

ಮೋಕ್ಷದಿಚ್ಛೆಯಿಂದ ನಿನ್ನನು | ಭಜಿಪ ಜನರ | ಪಕ್ಷವಹಿಸಿದಂತೆ ನಮ್ಮನು ||
ರಕ್ಷಿಸಾದೆ ಬಿಡುವರೇ ಕಟಾಕ್ಷದಿಂದ ಈಕ್ಷಿಸಾದೆ | ಲಕ್ಷ್ಮಿದೇವಿ ನಿನಗೆ
ಬಹಳಾಪೇಕ್ಷೆಯಿಂದ ಮೋಹಿಸಿದಳೆ || ೨ ||

ಅನಘ ನಿನ್ನ ನೋಡಿ ಮೋಹಿಸಿ | ಅಂತರಾತ್ಮ | ತನು ಮನಸ್ಸು
ನಿನಗೆ ಅರ್ಪಿಸಿ ||
ಜನನಮರಣದಿಂದ ಜನರು | ದಣಿವರೇನೊ ಕಾಂತ ನಮ್ಮ
ಮನಸಿನಂತೆ ಒಲಿದು ಸಲಹೊ |
ವನಜನಾಭ ಜಯವಿಠಲ || ೩ ||

ನೆಂಟರೆಂದರೆ

ತನುವಿನ ನೆಂಟರು ಕೆಲವರು ನಮಗಿನ್ನು |
ಧನದಿಂದ ನೆಂಟರು ಕೆಲವರು ನಮಗಿನ್ನು
ಗುಣದಿಂದ ನೆಂಟರು ಕೆಲವರು ನಮಗಿನ್ನು |
ಮನದಿಂದ ನೆಂಟರು ಕೆಲವರು ನಮಗಿನ್ನು
ದಿನದಿಂದ ನೆಂಟರು ಕೆಲವರು ನಮಗಿನ್ನು |
ಇನಿತು ನೆಂಟರೊಳು ಎನಗೆ ಒಬ್ಬರ ಕಾಣೆ
ಅನುವಾಗಿ ಇದ್ದಾಗ ಆಪ್ತರು ನಮ್ಮವರೆಲ್ಲ |
ಅನುವು ತಪ್ಪಿದರಿನ್ನು ಯಾರೂ ನಮ್ಮವರಲ್ಲ
ನಿನಗೆ ಎನಗೆ ನೆಂಟತನವು ಹೀಗೆ ಅಲ್ಲ |
ಅನಿಮಿಷ ಅಗಲದೆ ಅನಿಮಿತ್ತಬಂಧುವಾಗಿ
ಕ್ಷಣ ಬಿಡದಲೆ ಕಾವ ಗೋಪಾಲವಿಠಲ |
ನಿನಗೆ ಮಾಡುವದೇನೊ ಎನ್ನಿಂದ ನಮೋನಮೋ || ೧ ||

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂದು ಮೊರೆಯಿಡುತ್ತಾರೆ. ಈ ಬಗೆಯ ಪ್ರಶ್ನೋತ್ತರಗಳಿಂದ ಪ್ರಾರಂಭವಾದ ಉಭಯರ ಸಂಬಂಧವು ಕಡೆಯತನಕ ಹೀಗೇ ನಡೆದಿದೆ. ಸ್ತ್ರೀಪುರುಷ ಲಿಂಗಗಳ ಸಂಬಂಧವಾದ ಕುತ್ಸಿತಭಾವನೆಗಳು ಬರಲು ಇಲ್ಲಿ ಅವಕಾಶವಿಲ್ಲ. ಸಂಸ್ಕೃತದಲ್ಲಾಗಲಿ, ಇತರ ಭಾಷೆಗಳಲ್ಲಾಗಲಿ, ಕನ್ನಡದಲ್ಲಾಗಲಿ ಭಾಷಾ ಮರ್ಯಾದೆಯಂತೆ ಮಾತು ಮೂಢರಿಗೂ ಸವಿಕಟ್ಟಾಗುವಂತೆ ಶೃಂಗಾರರಸಮಯವಾಗಿ ಶ್ಲೋಕಗಳು, ಪದ ಪದ್ಯಗಳು ರಚಿತವಾಗಿವೆ. ಶೃಂಗಾರವು ಮಧುರಭಕ್ತಿಯಾಗಿ ಅದರಿಂದ ಮಹಾಭಾವವುತ್ಪನ್ನವಾಗಿ ಹೇಳುವವರಿಗೆ ಕೇಳುವವರಿಗೆ ಭಗವದ್ಭಕ್ತಿಯನ್ನು ವೃದ್ಧಿಗೊಳಿಸುವವುಗಳಾಗಿವೆ. ಭಾಷಾ ಮರ್ಯಾದೆ ತಿಳಿಯದೆ, ಕಾವ್ಯಗಳನ್ನು ಓದದೆ, ಲಘುಮನಸ್ಸಿನಿಂದ ಅಪಾರ್ಥ ಮಾಡಿಕೊಂಡರೆ ಪ್ರಮಾದವುಂಟಾಗುತ್ತದೆ. ಕೆಳಕಂಡ ಪದವು ಕೃಷ್ಣ ವಿರಹದಿಂದ ಸಂತಪ್ತರಾದ ಗೋಪಿಯರು ವನದಲ್ಲೆಲ್ಲಾ ಹುಡುಕುವರೆಂಬ ಸನ್ನಿವೇಶಕ್ಕೆ ಸಂಬಂಧಪಟ್ಟದ್ದು.

ರಾಗ : ಕಾಂಬೋಧಿ — ತಾಳ : ಆದಿ

ಹುಡುಕುವ ಬನ್ನಿರೆ ಹೂವಿನ ವನದೊಳಗೆ | ಕೃಷ್ಣನ ಒಳಹೊರಗೆ ॥ ಪ ॥

ತಡಮಾಡದೆ ನಾವ್ತವಕದಿಂದಲಿ ಕೂಡಿ | ಪಾಡುತ ಕೊಂಡಾಡಿ ॥ ಅ ॥

ಯಮುನೆಯ ತೀರದಿ ಸಂಪಿಗೆ ನೆರಳಿನಲಿ | ಮರೆಯದೆ ನೋಡುತಲಿ
ಕುಮುದ ಪಾರಿಜಾತ ಗಿಡಗಳ ಮರೆಯಲ್ಲಿ | ಬಿಡದೆ ಅಲ್ಲಲ್ಲೀ
ಕಮಲ ಮಲ್ಲಿಗೆ ಜಾಜಿ ಮಾವಿನಮರದಡಿಯ | ಲ್ಲಿರನೇ ನಮ್ಮೊಡೆಯ ॥
ನಮಿಪೆವು ಬಾರೆಂದು ನಾವೆಲ್ಲ ಕೂಗುವೆವೇ | ಮಾಡುವಿರೇಕೆ ತಡ ॥ ೧ ॥

ಕಾಣಲಿಲ್ಲವೆ ಶಾರಿಕ ಶುಕವೆ ಭೃಂಗ | ಹರಿಣ ನವಿಲು ಹಂಗ
ವೇಣನೂದುತ ಬಂದ ಕೋಕಿಲೆ ಕೇಳು | ಎಲ್ಲಿಹ ರಂಗ ಹೇಳು
ಜಾಣತನವ ಯವ್ವನವನೊಪ್ಪಿಸಿ ನಾವು | ಈ ಪರಿ ನಿಂದೇವೂ ॥
ತಾನೆ ಒಲಿದು ನಮ್ಮ ತಪ್ಪಿಸಿ ಪೋಗುವನೇ | ಕೇಳಿರಿ ಮೃಗಗಳಿರ ॥ ೨ ॥

ಈ ಪರಿ ಗೋಪಸ್ತ್ರೀಯರು ಒಂದಾಗಿ | ಕಳವಳಿಸುತ ಪೋಗಿ
ಶ್ರೀಪತಿ ಬಾರೆಂದು ಮೊರೆಯಿಡಲವ ಕೇಳಿ | ಬಂದನು ಆ ವ್ಯಾಳಿ

Sri Vidyabharathi Book Centre, Sringeri

 CC-O. In Public Domain. Digitized by eGangotri

ತಾ ಪತಿಕರಿಸಿದ ಕರುಣದಿ ಗೋಪಾಲ । ಭೂಸುರ ಮುನಿಪಾಲ ॥
ಶ್ರೀಪನ್ನಗಗಿರಿವಾಸ ವೆಂಕಟ ಪ್ರೆರಿವ । ನಂಬಿದರಘಶರಿವ ॥ ೩ ॥

ಹೀಗೆ ಹುಡುಕುತ್ತಾ ಶ್ರೀಕೃಷ್ಣನ ಪಾದಚಿಹ್ನೆಗಳನ್ನು ಕಂಡು:

ರಾಗ : ಪೂರ್ವಿ — ತಾಳ : ಆದಿ

ಇದು ನೋಡಿ । ಇದು ನೋಡಿ ।
ಇದು ಪದುಮಾಕ್ಷನ ಪಾದಗಳಲ್ಲವೆ ॥ ಪ ॥

ಧ್ವಜವಜ್ರಾಂಕುಶ ರೇಖೆಯಿಂದೊಪ್ಪುವ ।
ಅಜಭವ ವಂದಿತ ಕುಜಪ್ರದ ಪಾದಗ । ಳಿದು ॥ ೧ ॥

ಗೋಕುಲದೊಳು ನಮ್ಮಾಕಳ ಕಾಯುವ ।
ಶ್ರೀಕರವಾದ ಸುಖೋದಯ ಪಾದಗ । ಳಿದು ॥ ೨ ॥

ಮುನಿಗಳು ಮನದೊಳು ನೆನೆದರು ಕಾಣದ ।
ಚಿನುಮಯನ ಪದವನಜಗಳಲ್ಲವೆ ॥ ೩ ॥

ದೃಷ್ಟಿಸಿ ನೋಡಿರಿ ಇಷ್ಟದೈವ ಜಯ ।
ವಿಠಲನ ಉತ್ಕೃಷ್ಟ ಪದದ್ವಯ ॥ ೪ ॥

ಎಂಬುದಾಗಿ ಮತ್ತೆ ಮುಂದೆ ಮುಂದೆ ಹೋಗಿ ಶ್ರೀಕೃಷ್ಣನನ್ನು ಕಾಣುತ್ತಾರೆ. ಈ ಗೋಪಿಯರು ಒರುತ್ತಿರುವುದನ್ನು ನೋಡುತ್ತಾ ಕೃಷ್ಣನೊಡನಿದ್ದ ಮತ್ತೋರ್ವ ಲಲನೆಯು ಸ್ವಲ್ಪ ಮರೆಯಲ್ಲಿದ್ದು ಎದುರಿಗೆ ಬಂದು ಕಾಣಿಸಿ ಕೊಳ್ಳಲು ಗೋಪಿಯರು—

ಸೀಸಪದ್ಯ

ಸುಳಿಬಾಳೆಯೆಲೆಯಂತೆ ಸೋಮಮಂಡಲದಂತೆ
ಕಲಹಂಸಮರಿಯಂತೆ ಕಂಬುಕಂಠೀ
ಎಳೆ ಹವಳದ ಬಳ್ಳಿಯೆಸಳಿನಂದದಿ ನಾರಿ
ಕುಲಶಿರೋಮಣಿ ಕಾಂತಿವೀಚಿಯಂದ
ಕಲಭ ಕುಂಭವ ಪೋಲ್ವ ಕುಚಭಾರಕಾಬಾಲೆ
ಸೆಳೆನಡುವು ಬಳುಕುತಲಿ ಶೌರಿಯಿದ್ದ ॥

Sri Vidyabharathi Book Centre, Sringeri

 CC-O. In Public Domain. Digitized by eGangotri

ಬಳಿವಿಡಿದು ಬರಲು ಗೋಪ | ಲಲನೆಯರ
ಬಿಟ್ಟೇಕೆ | ಗೊಲಿದನೇನೆಂಬೆ | ಹಲವು ಜನ್ಮದ ಸುಕೃತವೊದಗಿತೆಂದು ॥೧॥

ಎಂದು ಆ ಲಲನೆಯು ಹಲವು ಜನ್ಮದ ಸುಕೃತ ಕಾರಣವಿರಬೇಕೆಂದು ಕೊಳ್ಳುತ್ತಾರೆ.

ಮೊಸರು ಬೇಕೇ ಮೊಸರು ಎಂದು ಕೇರಿಯಲ್ಲಿ ಬರುವ ನಾರಿಯೊಬ್ಬಳನ್ನು ಕೃಷ್ಣನು ಕಂಡ ಪರಿ, ಕೃಷ್ಣನಿಗೆ ಅವಳು ಉತ್ತರ ಕೊಟ್ಟ ಪರಿ, ಹರಿದಾಸರ ಬಾಯಿಂದ ಲಾವಣಿಯಾಗಿ ಹೇಗೆ ಹರಿದುಬಂದಿದೆಯೆಂಬುದನ್ನು ಕೆಳಕಂಡಂತೆ ಕೊಟ್ಟಿದೆ:

ಲಾವಣಿ

ನವನಾರಿ | ನವನಾರಿ | ನವನಾರಿ ॥ ಪ ॥

ನವನಾರಿ ಕೇರಿಯೊಳ್ | ವಾರೆನೋಟದಿಂದ | ಸಾರುತ ಪಾಲ್ಮೊಸ |
ರಾರಿಗೆಂದಳು ವೈಯ್ಯಾರಿ | ಧ್ವನಿತೋರಿ ॥ ಅ ॥

ಬಲ್-ಭರಾದಿಂದ ಒಂ | ದ್ವರಾದ ಕುಪ್ಪುಸ | ತರಾತರದಿ ಜರ
ತರಾದ ಶೀರೆಯು | ಭರಾದಿ ನೆರಿಗೆಯು | ಝುರೀಲಿ ಚರಿಸಿ | ವಾ
ಗ್ಝುರೀಲಿ ಕಿರುನಗೆ | ಸುರೀಯುತಲಿ | ಭರ್ಜರೀಯ ಸೆರಗನು
ಭರಾದಿ ಬೀಸುತ | ಕರಾದಿ ಕಂಕಣರವಾದಿ ವಜ್ರದ | ಮುಕೂರ ಮುತ್ತಿನ
ಸರಾವು ಸರಿಗೆಯು | ತುರೂಬು ಕರದಲಿ | ಸರೀಸುತಾ ಮದ
ಕರೀಯ ಗತಿಯೊಳು | ಬರೂತ ಚಿತ್ರಾ | ಬರಾದ ಪರಿಯೊಳು
ಮೆರಾವ ಸುಂದರಿ | ಸ್ಮರಾನ ಶರಗಳ | ಸುರೀಯುತಲಿ ವೈ
ಸಿರೀಯ ಬೀರುತ | ಸರಾಸನಯುನವ | ಶಿರೂಹುತಲಿವರ
ಸರೋಜಮುಖಿ ತಾ | ಬರೂತಲಿರುವದ | ಮುರಾರಿ ಕಂಡವಳ್
ಕರಾವ ಹಿಡಿದು ॥ ಭರಾದಿ ಬಿಟ್ಟವರ್ಯಾರೇ | ಚಲ್ | ಕರಾರು ಸುಂಕವ ತಾರೆ
ಎಲ್ಲಿಗೆ ಹೋಗುತಿ ನೀರೇ | ನಿಲ್ಲೆ ನಿಲ್ಲೆ ವೈಯ್ಯಾರೆ ॥ ೧ ॥

ಎಲೆ ಪೋರಾ | ಎಲೆ ಪೋರಾ | ಎಲೆ ಪೋರಾ |
ಎಲೆ | ಪೋರ ನಿಗಮದ ಚೋರನ ಬಿಡದೆ ಶ | ರೀರವ ಸೀಳಿದೆ
ಧೀರನಾಗಿ ಬಲ್ ಘೋರ ಶೈಲವ | ಹಾರಿಸಿ ಬೆನ್ನಿಲಿ | ಕೋರದಾಡೆಯೊಳ್

Sri Vidyabharathi Book Centre, Sringeri

CC-O. In Public Domain. Digitized by eGangotri

ಧರೆಯ ನೆಗಹಿದ | ನಾರಸಿಂಹನಾಗ್ಯಾರುಭಡಿಸಿದೆ | ಧಾರುಣಿ ಸುರನಾಗಿ
ಧರೆಯನು ಬೇಡಿದೆ | ವೀರ ದುಷ್ಟ ಭೂಭಾರ ನೃಪರ ಸಂ | ಹಾರನೆನಿಸಿ ಸ್ತ್ರೀ
ಚೋರನ ತರಿದೆ | ಕ್ರೂರ ಶಕಟನಾಕಾರವ ತೊಡೆದೆ | ಚಾರುಬುದ್ಧನಾಗಿ
ನಾಚಿಕೆ ತೊರೆದೆ
ಮೀರಿದ ಕುದುರೆಯನೇರುತ ನೀ ಬಲು | ಶೂರನೆಂದು ವಿಚಾರ ಮಾಡದೇ
ಕೇರಿಕೇರಿಲಿ ತಿರುಗುವ ನಾರೇರ ಸಂಗದ ಪಾರುಪತ್ಯ ಬ್ಯಾಡೋ
ಚೋರ ! ಬಲ್ಲೇನು ನಿನ್ನ ಸೂವಾರ ! || ೨ ||

ಎಲೆ ಬಾಲೇ | ಎಲೆ ಬಾಲೇ | ಎಲೆ ಬಾಲೇ |
ಎಲೆ ಬಾಲೆ ಮುತ್ತಿನ | ಮಾಲೆ ತಿಲುಕದ | ಫಾಲ ಪೊಳೆವ ಕಾಪೋಲ
ಉದುರ ವಿ
ಶಾಲ ಪದಕದಿಂ | ಲೋಲನಯನದಿಂ | ಶೀಲೆ ರತಿಯ ಸರಿ | ಬಾಲೆ
ನಾರೆರೊಳ್
ಜಾಲೆ ವಜ್ರದ | ವಾಲೆ ಕೊಡುವೆ ಮುದ | ದಾಲಿಂಗವನು ಪಾಲಿಸು ಮಾರನ
ಕೋಲಿಗೆನ್ನ ಮನ | ತಾಳದು ನಿನಗೆ | ನ್ಹೇಳಲೇನು ಬಹು ಜಾಲವಮಾಡದೆ
ನೀಲವೇಣಿ ಅನು | ಕೂಲೆಯಾಗು ಮನ | ಸೋಲು ಮದನ ಶರ |
ಜಾಲಕಾಗಿ ಹೃದ
ಯಾಲಯದೊಳು ನಿಲ | ಲಾರದೆ ಮನತಾ | ಕೋಳು ಹೋಯಿತಿ |
ನ್ನೇಳು ಬೇಗನೆ ಮ
ರಾಳ ಗಮನ | ಲಾಲಿಸು ಕಾಮನ | ಕಲಹದೊಳಗೆ ನಿ | ನ್ನೊಲಿಸುವೆ
ವಿಧವಿಧ
ಕಲೆಗಳಿಂದಲಿ | ಸಲಿಸುವೆ ಚಿತ್ತವ | ಚಲಿಸದೆ ಬೇಗನೆ ಬಾರೇ |
ಮನಸು ನಿನ್ನಯ ಮೇಲೆ
ಸುರನಾರಿರೊಳಗು ಬಲು ದೂರೇ | ನಿನ್ನ ಮಾತುಗಳನು ನಾ ಮೀರೆ || ೨ ||

ಇಲ್ಲಿ ನೋಡಬೇಕಾಗಿರುವುದು ಕನ್ನಡ ಭಾಷೆಯ ಸಂಭ್ರಮವನ್ನು. ಎಳೆಎಳೆಯಾಗಿ ಸುಳಿಯುತ್ತಿರುವ ಶಬ್ದಗಳ ಹವಣಿಕೆಯನ್ನು. ಹೀಗೆ ಲಾವಣಿಗಳನ್ನು ಬರೆದು ಲೀಲಾಜಾಲವಾಗಿ ಕನ್ನಡವನ್ನು ಪ್ರಯೋಗಿಸಿ, ಹೊಸಮಾರ್ಗ ತೋರಿಸಿ, ಭಾಷೆಯನ್ನು ಬೆಳೆಸಿದವರು ಹರಿದಾಸರು. ದಾಸರ ಮಾರ್ಗವನ್ನು ಮೊದಲು ಅನುಸರಿಸಿದವರು ಯಕ್ಷಗಾನವನ್ನು ಬರೆದ ಕವಿಗಳು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಕೃಷ್ಣನು ಮಥುರೆಗೆ ಹೋಗಿ ಬರುವನೆಂದು ಗೋಪಿಯರಿಗೆ ತಿಳಿದಾಗ ಗೋಪಿಯರ ಆಲಾಪ:

ಆ ರಾಜಧಾನಿಯು ಬ । ಲೇರಾ ಸುಡಿಗೆ ಸಿಲ್ಕಿ । ತಾರಾಮನಕೆ ಮುಗ್ಧರಾ
ಬಾರಾ ಪುನಃ ನಮ್ಮ । ಸೇರಾ ಮೊದಲಿನಂತೆ । ತೋರಾ ಸುರತ ನಿರ್ಭರಾ
ಆ ರಾಜಪಥದಿ ಶ್ಯಂ । ಗಾರಾಗಿ ಬರುವ ಶ್ರೀ । ಸಾರೇಯಾಣನ ನೋಡುವಾ
ಪೌರಾ ಸುಜನಕೇ ನಿ । ರ್ಧಾರಾಗಿ ಪದಗುಂಡ । ಪಾರಾದ ನಯನೋತ್ಸವ ॥ ೧ ॥

ಕ್ರೂರಾಖ್ಯನಿವಗೆ ಅ । ಕ್ರೂರಾಖ್ಯನ್ಯಾಕೆ ನಿ । ಸ್ಸಾರಾ ಕಠಿಣಹೃದಯನೇ
ಧೀರಾರ್ತ್ತ ಸುಜನ ಮಂ । ದಾರಾತ್ಮಪ್ರಿಯತನುನ । ದೂರಾಧ್ವನದಿನ್ನೈವನೇ
ಊರಾಗಿರುವ ವೃದ್ಧ । ರಾರಾದಂನ್ನಿದಕೆ । ವನಾರಾಡರಲ್ಲನಮ್ಮಾ
ಸಾರಾತ್ಮ ದೈವಪ್ರತಿ । ಕಾರಾಗಿ ಪರನಿತಿ ನಿ । ಕಾರಾಗಿ ಪೋಪರಮ್ಮಾ ॥ ೨ ॥

ಬೃಂದಾವನದ ಪುಣ್ಯ । ಕುಂದಾಯಿತೇನೊ ಈ । ನಂದಾರ್ಜಿತ ಸುಕೃತವ
ಹಿಂದಾಯಿಥ್ಯಾಂಗೊ । ಅರವಿಂದಾಕ್ಷಕೃಷ್ಣ ಇ । ಲ್ಲಿಂದಾ ಮಥುರೆಗ್ಹೋಗುವ
ಮುಂದಾಗಿ ನಾವೆಲ್ಲ । ರೊಂದಾಗಿ ಪೋಗಿ ಗೋ । ವಿಂದಾಂಗ ಸಂಗಪರರು
ನಂದಾತ್ಮಜಗೆ ಬ್ಯಾಡವೆಂದಾಡೆ ನಮ್ಮನೇ । ನಿಂದಾರು ಕುಲವೃದ್ಧರು ॥ ೪ ॥

ಕೋಲಾಹಲದಿ ಹರಿಯು । ಲೀಲಾಪ್ತರಾಗಿ ಬಹು । ಕಾಲಾಯಿತೇ ಅರೆಕ್ಷಣ
ನೀಲಾಭ್ರನಿಭ ಮಥುರಿ । ಪಾಲಾಗಲೂ ರಾತ್ರಿ । ಕಾಲ್ಹ್ಯಾಂಗೆ ಕಳೆವ ಕಠಿಣ
ಶೀಲಾತ್ಮ ಗೋಧೂಳಿ । ಕಾಲಾಗೆ ಕೊಳಲ ಧ್ವನಿ । ಜಾಲ್ಹ್ಯಾಕೆಮ್ಮನು ಸೆಳೆವನೇ
ಮೇಲಾದ ನಮ್ಮಗನು । ಕೂಲಾದ ಹರಿಯು ಪ್ರತಿ । ಕೂಲಾಗಥ್ಯಾಂಗಿರುವನೇ ॥ ೫ ॥

ಕ್ಷೀರಾಬ್ಧಿಶಾಯಿ ನದಿ । ಪಾರಾಗುವ ನಮಗೆ ದೂರಾಗುವಾ ಈ ದಿನ
ದಾರಾದರೇನ ನಲಿ । ದೂರಾದರಾಗಲಿ । ಈ ರಾತ್ರಿ ಸೇರುವವನ
ಮಾರಾರಿ ಪ್ರಮುಖರಿಗೆ । ತೋರಾತ್ರ ಮಹಿಮೆ ವಿ । ಸ್ತಾರಾದ ಸುಗುಣ ಪಟಲ
ದೌರಾತ್ಮ್ಯರ್ಯಮಗ್ಹ್ಯಾಂಗೆ । ದೂರಾಗದಿಹನೇ ಶ್ರೀ । ರಾಮ ಸುಂದರ ವಿಠಲ ॥ ೬ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಗೋಪಿಯರು ಶ್ರೀಕೃಷ್ಣನಿಗೆ ಸಂದೇಶ ಕಳುಹಿಸುತ್ತಾರೆ. ಪರಸ್ಪರ ಮಾತುಗಳಾಗುತ್ತವೆ. ಕೃಷ್ಣನು ಹೋಗಿ ಬರುವೆನೆಂದು—

ರಾಗ : ಮೋಹನ — ತಾಳ : ತ್ರಿಪುಟ

ಪೋಗಿ ಬರುವೆ ಗೋಪ | ನಾಗವೇಣಿಯರ ಚ |-
ನ್ನಾಗಿ ಮಮತಾಪೂರ್ಣವಾಗಿರಲಿ || ಪ ||

ಜಾಗು ಮಾಡದೆ ಮುಂದೆ | ವೇಗದಿಂದಲಿ ಎನ್ನ
ಸಾಗೀಸೀ | ಪತಿಗಳ ಕೂಡಿ | ಭೋಗೀಸೀ |
ಶತ್ಸೇವೆ ಮಾಡಲು | ಪೋಗುವುದು ಪಾ |
ಪೌಘವೆಲ್ಲವು | ನೀಗುವದು ಹೃದ್ರೋಗ ಮಂಗಳ |
ವಾಗುವದು ಲೇಸಾಗಿ ಹರುಷಿತ | ರಾಗಿ ಕಳುಹಿರಿ | ಈಗ ಮಥುರೆಗೆ || ಅ ||

ಬಾಲಕತನದಿ ನಿ | ಮ್ಮಾಲಯವನೆ ಪೊಕ್ಕು |
ಪಾಲು ಮೊಸರು ಬೆಣ್ಣೆ | ಕದ್ದು ಮೆದ್ದು ||
ಜಾಲದಿಂದಲಿ ನಿಮ್ಮ | ಬಾಲರು ತಿಂದರೆಂದ್ಹೇಳೀದೇ |
ನ್ನೃಷವಾಡಿ ನಾ | ಬಾಳೀದೇ
ಮೇಲಿಟ್ಟ ಭಾಂಡವ | ಸೀಳೀದೇ |
ಮಥಿಸುವ ಸುಪಾತ್ರೆಯ || ಕಾಲಿಲೊದ್ದು
ಬೀಳಕೆಡಹಿದೆನೀ | ನವನೀತವನು ಮಾ |
ರ್ಜಾಲ ಮರ್ಕಟ ಪಾಲ ಮಾಡಿದೆನೀ
ನೀವಿಟ್ಟ ಮೀಸಲ | ಶೀಲದಧಿ ಕೆನೆ |
ಪಾಲ ಕೆಡಿಸಿದೆನೀ | ಹೀಗುಚಿತವಲ್ಲೆಂ ||
ದ್ಹೇಳಿದರೆ ಕೇಳದಲೆ ನಾನತಿ |
ಹೇಳನೆಯ ಬಲು ಧಾಳಿ ಮಾಡಲು | ತಾಳಿ ಎನ್ನನು
ಕ್ಷಾಲಿಸಿದಿರಿ ಕೃ | ಪಾಳುಗಳ ಗುಣ | ಪೇಳಲೋಶವೆ || ೧ ||

ಫುಲ್ಲಲೋಚನೆರ ನಿ | ಮ್ಮೆಲ್ಲರ ಮನಸು ಎ |
ನ್ನಲ್ಲಿ ಇಟ್ಟಿರುವದ | ಬಲ್ಲೇ ಕೇಳಿ ||

Sri Vidyabharathi Book Centre, Sringeri

CC-O. In Public Domain. Digitized by eGangotri

ಇಲ್ಲೇ ನಿಮ್ಮನ ಬಿಟ್ಟು । ಎಲ್ಲೋ ಪೋಗುವೆನೆನ್ನ ।
ಸಲ್ಲಾದೇ ॥ ಕಾರ್ಯವೆ ಮುಖ್ಯ
ವಲ್ಲಾದೇ । ಬರುವೆನೆ ಅಲ್ಲಿ ನಿಲ್ಲಾದೇ ॥
ಬ್ರಹ್ಮಾಂಡದೊಳಗಾ । ವಲ್ಲಿ
ನೆನೆಸಿದರಲ್ಲಿ ನಾನಿರುವೇ ।
ನಾನಿಲ್ಲದ ಸ್ಥಳವಿಲ್ಲ । ಜಗದೊಳಗೆಲ್ಲ ತುಂಬಿರುವೇ ।
ಆದರಿಸಿ ಕರೆದವ । ರಲ್ಲಿ ಅತಿ ತ್ವರದಲ್ಲಿ ಬರುತಿರುವೇ ॥
ಈ ವಿಧದಿ ಪೇಳ್ವುದು ॥
ಸುಳ್ಳುಮಾತುಗಳಲ್ಲಿ ಆಗಮು । ದಲ್ಲಿ ಪೇಳಿದ ।
ಸೊಲ್ಲು ಎಂದಿದ । ರಲ್ಲಿ ಸಂಶಯ
ವಿಲ್ಲದಲೆ ನೀ । ವೆಲ್ಲಿ ಸ್ಮರಿಸಿದರಲ್ಲಿಗೊದಗುವೆ ॥ ೨ ॥

ಹಿಂದಕ್ಕೆ ಒಂದಿನ । ನಿಂದು ಕೊಳಲೂದೆ ಸ್ತ್ರೀ ।
ವೃಂದ ಕೇಳುತಲಿ ಆ । ನಂದದಿಂದಾ ॥
ಅಂದು ಬರುತಿರೆ ನಿಮ್ಮ । ಬಂಧುಗಳೆಲ್ಲ ನಿರ್ಬಂಧೀಸೀ ।
ಬೇಡೆನ್ನಲವರ । ನಿಂದೀಸೀ
ಎನ್ನೊಳು ಮನಸು । ಪೊಂದೀಸೀ
ಬೆಳದಿಂಗಳೊಳು ತ್ವರ । ದಿಂದ ಎನ್ನನು
ಬಂದು ಕೂಡಿದಿರೇ । ರಾಸೋತ್ಸವದಿ ಧಿಂ
ದಿಂ ಧಿನಿಧಿಮಿ । ಕೆಂದು ಆಡಿದರೇ
ಕೀರ್ತಿಯನು ಪದಗತಿ । ಯಿಂದ ಸುಖಕರದಿಂದ ಪಾಡಿದಿರೇ ॥

ಬಲ್ ಪರಿಯಲಿ । ಎ । ನ್ನಿಂದ ಬಂದ
ನಿಂದೆ ಕುಂದುಗ ಳೊಂದು ಎಣಿಸದೆ
ಪೊಂದಿದಿರಿ ಎಂ । ತೆಂದು ಶ್ರೀರಾಮ
ಸುಂದರ ವಿಠಲ । ಇಂದುಮುಖಿಯರಿ । ಗಿಂದು ಮೋದದಿ ॥ ೩ ॥

ಶ್ರೀಕೃಷ್ಣನು ಅಕ್ರೂರನೊಡನೆ ಪ್ರಯಾಣಮಾಡಿದ ನಂತರ ಸ್ವಾಮಿಯ ವಿರಹವನ್ನು ತಾಳಲಾರದೆ ಗೋಪಿಯರು ತೊಳಲುವ ಬಗೆ ಮುಂದಿನ ಪದದಲ್ಲಿ ವಿದಿತವಾಗುತ್ತದೆ:

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಗ : ಧನಾಸರಿ — ತಾಳ : ಜಂಪ

ಏನು ಮಾಡುವ ನಮ್ಮ | ಪ್ರಾಣದೊಲ್ಲಭ ರಾಜ | ಧಾನಿಗೈದಿದನೀ
ದಿನ || ಪ ||

ಮಾನನಿಧಿ ನಮ್ಮ ಅಭಿ | ಮಾನವನು ಬಿಟ್ಟು ಅ | ಧೀನನಾದ
ಕ್ರೂರನ ಆವನ || ಅ ||

ಕ್ರೂರಕಂಸನು ನಮ್ಮ | ಶೌರಿಯನು ಕರೆಸಿದಕೆ | ಸೇರಲವ ಯಮಪಟ್ಟಣ |
ಮಾರಜನಕನ ರಥವ | ನೇರಿಸೀ ವೈದ ಅ | ಕ್ರೂರನೆದೆ ಬಹಳ ಕಠಿಣ |
ದೂರು ಕೇಳದೆ ರಥವ | ದೂರ ನಡೆಸಿದ ತ್ವರಿತ | ವೈರಿಯೇನೋ ಹಿಂದಿನ ||
ನಾರಿಯರ ಉಸುರಿವಗೆ | ಸೇರದಿಹುದೇ ನಮ್ಮ | ಶ್ರೀರಮಣನಗಲಿಸಿದನೇ
ಅವನೇ || ೧ ||

ಅಕ್ರೂರನೆಂತೆಂದು | ಆ ಕ್ರೂರನಿಗೆ ಹೆಸರ | ಇಕ್ಕಿದವರ್ಯಾರು ಆವಗೆ |
ತಾ ಕೃತ್ರಿಮವ ಮಾಡಿ | ಚಕ್ರಧರನಗಲಿಸಿ | ವಕ್ರವಾದನು ಕ್ರೀಡೆಗೆ |
ಶಕ್ರನ್ನ ಗೆಲಿದತಿ ಪ | ರಾಕ್ರಮಿಯು ಪರರಿಂದ | ವಿಕ್ರೀತನಾದಿಂದಿಗೇ ||
ಸತ್ಕೃತದಿ ವದಗಿದ ತ್ರಿ | ವಿಕ್ರಮನ ಮಧುರ ಸ್ತ್ರೀಯು | ರಾಕ್ರಮಿಸದಲೆ
ಬಿಡುವರೇ | ನೀರೇ || ೨ ||

ಪರರ ದೂರಲಿ ಯಾಕೆ | ಶಿರಿಕೃಷ್ಣನ ಮನಸು | ಎರಡಾಯಿತಮ್ಮಗಳಿರಾ |
ಕರೆಯ ಬಂದ ಕ್ರೂರ | ಕರೆಯಲೇನಾಯ್ತು | ಬರಲೊಲ್ಲೆನೆಂದೆನಲು ಹರಿಯ
ಕರವಿಡಿದು ಬಲುಮೆಯಲಿ | ಕರದೊಯ್ವರಾರಿವನ | ಪರದೇವತೆಯ
ಮಧುರಿಯ ||
ತರಳೆಯರ ಮೆಚ್ಚು ಈ | ಹರದಿಯರ ಮನ್ಮಥಗೆ | ಗುರಿಮಾಡಿ
ಪೋದನಲ್ಲೇ | ನಲ್ಲೇ || ೩ ||

ಸಕ್ಕರೆಯ ಪೋಲುವ | ಠಕ್ಕುಮಾತುಗಳಾಡಿ | ಕಕ್ಕುಲಾತಿಯ ಬಡಿಸಿದ |
ದಕ್ಕಿದವನಲ್ಲ ದೇ | ವಕ್ಕಳಿಗೆ ದೇಶಕಾಲಕ್ಕೆ ಸಮಳೆಂದೆನಿಸಿದ |
ಲಕ್ಕುಮಿಾದೇವಿಯನು | ಲೆಕ್ಕಿಸದೆ ನಾಲ್ಮೊಗನ | ಪೊಕ್ಕಳಿಂದಲ್ಲಿ ಪಡೆದ ||
ಠಕ್ಕುಗಾರನು ನಮಗೆ | ದಕ್ಕುವನೆ ಅವನಾಶೆ | ಅಕ್ಕಗಳಿರಿನ್ಯಾತಕೆ
ಬೇಕೆ || ೪ ||

Sri Vidyabharathi Book Centre, Sringeri

 CC-O. In Public Domain. Digitized by eGangotri

ನಂದಸುತನಿಲ್ಲದೆ । ವೃಂದಾವನವು ಅಡವಿ । ಯಂದದಲಿ ತೋರುತಿಹದೇ ।
ಗಂಧ ಕಸ್ತುರಿಗಳನು । ತಂದು ಪೂಸಲು ಅಗ್ನಿ । ಯಂದದಲಿ ತೋರುತಿಹದೇ ।
ಮಂದಮಾರುತ ನಮಗೆ । ಇಂದ್ರ ಪ್ರಹಾರಾಯುಧವು । ಬಂದು ಹಾದಂತಾಗಿದೇ
ಎಂದಿಗೇ ಶ್ರೀರಾಮಾ ಸುಂದರವಿಠಲನು । ಬಂದೆಮ್ಮ ಸಂತೈಸುವಾ ।
ಕಾವಾ ॥ ೫ ॥

ಓರ್ವ ಗೋಪಿಯು ಅನ್ಯಗೆಳತಿಯೊಡನೆ ರಾತ್ರಿಯಿದ್ದು ಬೆಳಗಾಗುತ್ತಲೇ ತನ್ನ ಮನೆಗೆ ಬಂದ ಶ್ರೀಕೃಷ್ಣನನ್ನು ನೋಡಿ ಪರಿಹಾಸ್ಯದಿಂದ ಕೇಳಿದ ಬಗೆ:

ರಾಗ : ಘರ್ಜು — ತಾಳ : ಅಟ್ಟ

ಮಾಜುವದೇನೊ ಮಾರಮಣ । ಶುಕ । ವಾಜಿಯುವನ
ಚೇಷ್ಟೆಯೊಳಾದ ಹವಣ ॥ ಪ ॥

ಹೆಚ್ಚಗಳು ಬಲು ಪಚ್ಚವಾಗಿದೆ । ಕಜ್ಜಲವು ಕೆಳದುಟಿಗೆ ಸೋಕಿದೆ ।
ಮಜ್ಜನದ ಮೈಯಿಂದ ಮುಖದೊಳು । ಲಜ್ಜೆಗೈಸುವ ಲಕ್ಷಣಗಳಿವೆ ॥ ೧ ॥

ಗಳದೊಳಗೆ ಸುಳಿಬಳೆಗಳೊತ್ತಿವೆ । ಎಳೆದಳಿರುದುಟಿಯೊಳ್ಕಲೆಗಳಿವೆ
ನಳಿನದಳಗಳೊಳಳಿಗಳಡಗಿವೆ । ಕೆಳದಿಯೊಳು ಬೆಳಗುಳಿದ ಕಳವನು ॥ ೨ ॥

ಆ ಸಖಿಯ ಸಹವಾಸದಿಂದಾ । ಯಾ ಸಮಯ್ಯೊಳಗೀಸುಪರಿಯಲಿ
ಸೂಸುತಿರೆ ಕಮಲೇಶವಿಠಲ ನೀ । ಸೈಸಿಡಡೆ ತಾಮಾಸ ಬಲ್ಲದೆ ॥ ೩ ॥

ರುಷ್ಟಳಾದ ಓರ್ವ ಗೋಪಿಯು ಅನ್ಯಳ ಮನೆಯಲ್ಲಿದ್ದ ಮನೋವಲ್ಲಭನಿಗೆ ದೂತಿಯ ಮೂಲಕ ಸಂದೇಶವನ್ನು ಕಳುಹಿಸುತ್ತಾಳೆ. ದೂತಿಯು ಉತ್ತರವನ್ನು ತಂದು ಹೇಳುವುದರೊಳಗೆ ಆತುರದಿಂದ ದೂತಿಯ ಮುಖವನ್ನು ನೋಡಿ—

ರಾಗ : ಪೂರ್ವಿ — ತಾಳ : ಅಟ್ಟ

ಆನಂದ ನಂದನ । ನಾನಂದ ಮಾತಿಗೆ । ಏನಂದನೇ ನಂದನೆ
ಇಂದುವದನೆ ॥ ಪ ॥

ನೀನು ಪೋಗಲು ಬಹು । ಮಾನದಿಂದ ಬಂದ । ದ್ದೇನೆಂದು ಕೇಳೀದನೇ
ನಾನು ತಾನೇಕಾಂತದೊಳಗಾಡಿದ ಮಾತ । ಖೂನವ ಕೇಳೀದನೆ ॥

Sri Vidyabharathi Book Centre, Sringeri

 CC-O. In Public Domain. Digitized by eGangotri

ಆ ನಾರಿಯ ಮುಂದೆ । ಹೀನೈಸಿ ಎನ್ನವ । ಮಾನವ ಮಾಡಿದನೇ ।
ಮನ್ನಿಸಿದನೆ ॥ ಏನೆಂದನೇ ನಂದನೆ ॥ ೧ ॥

ಎನ್ನ ಸವತಿಗೈದ ಮನ್ನಣೆಗೆ ಮೆಚ್ಚಿ । ಧನ್ಯನಾದೆನೆಂದನೆ ।
ನಿನ್ನ ಕೂಡಿದಮೇಲೆ । ಅನ್ಯಸ್ತ್ರೀಯರ ಮುಖ । ವನ್ನು ನೋಡೆನೆಂದನೆ ॥
ನಿನ್ನ ಸುಧಾಧರ । ವನ್ನುಂಡಮೇಲೆ ವ್ಯ । ಷ್ಟಾನ್ನವೊಲ್ಲೆನೆಂದನೇ ।
ಪೇಳುವದೇನೆ ॥ ೨ ॥

ಪೂಶರಕೇಳಿಯೊಳ್ । ಭಾಷೆಗೈದವಗಿದು । ಲೇಸಲ್ಲವೆಂದಳೀನೇ ।
ಸಾಶಿರಶತಮತ್ತ ಕಾಶಿನಿಯರನೆಲ್ಲು । ದಾಶನಗೈದಳೀನೆ ॥
ವೇಷಗಾರ ಕಮಲೇಶವಿಠಲನೆಂದು । ದೂಷಣಗೈದಳೀನೇ
ಮಾಜುವದೇನೆ ॥ ೩ ॥

ರಾಧೆಯ ಮಂದಿರ ಸೇರಿ ನನ್ನನ್ನು ಶ್ರೀಕೃಷ್ಣನು ಘುರಿತನೆಂದು ಓರ್ವ ಗೋಪಿಯು ಪರಿತಪಿಸುವ ಬಗೆ—

ರಾಗ : ಹಿಂದುಸ್ತಾನಿ ಕಾಪಿ — ತಾಳ : ಅಟ್ಟ

ಶ್ರೀಧರ ರಾಧಾ । ಮಂದಿರ ಸೇರೀ ಎನ್ನ । ಮರೆದಾನೇ । ಮಾನಿನಿರನ್ನೆ ॥ ಪ ॥
ಸ್ಮರನುರವಣಿಯು । ಶರಹತಿಗೆ ಎದೆ । ಬಿರಿದ್ದುರಣ ತರ । ಹರಿಸುವಡೆ ॥ ೧ ॥
ಮದನದೊರೆದಳ । ಬೆದರಿಕೆಗೆ ಗಡ । ಗಡ ನಡುಗಿ ನಾ । ನೆದೆಯೊಡೆವೆ ॥ ೨ ॥
ಶಠವು ತನಗಿದು । ದಿಟವೆ ಕಮಲೇಶ । ವಿಠಲ ಮೋಹಕ । ನಟಣೆಯಲಿ ॥ ೩ ॥

ತರಹರಿಸುತ್ತಾ ಕೃಷ್ಣನು ವಂಚಕ, ಅವನ ಮನಸ್ಸು ತಿಳಿಯುವ ಹಾಗಿಲ್ಲ! ಎಂದು ಮತ್ತೆ—

ರಾಗ : ಜುಂಜೋಟಿ — ತಾಳ : ಆದಿ

ಮನಸು ತಿಳಿಯದೇ ಮಾನಿನೀ । ನಂಬಬಾರದೇ ॥ ಪ ॥
ಅನುದಿನದಲಿ ಬಲು । ವಿನಯದೋರಿ । ನಮ್ಮನುಭವಿಸಿದ ಪರಿ ।
ಕನಸಿನಂತೆ ತೋರುವರ ॥ ಅ ॥

Sri Vidyabharathi Book Centre, Sringeri

 CC-O. In Public Domain. Digitized by eGangotri

ಬೇಡೆಂದರೆ ಬಲು । ಬೇಡಿಕೊಂಬುವರೆ ॥ ಈಡಿಲ್ಲದ ಮಾತಾಡಿ ಮಮತೆಯಲಿ ।
ಕೂಡಿ ಕಡೆಗೆ ಬಿಟ್ಟೋ । ಡ್ಹೋಗುವ ಕೇಡಿಗರ ॥ ೧ ॥

ವರಹವ ತೋರಿಸಿ । ಮರುಳು ಮಾಡುವರೆ ॥
ಸ್ಮರಸಂಗರದಲು । ಪರಿಸುರತದಿ ಮೇ । ಲೊರಗಿ ಮೈಮರೆಸಿ ।
ಜರಿದೋಡುವ ಜಾರಾರ ॥ ೨ ॥

ಲೇಶ ಸಂಭ್ರಮಕೆ ನಾ । ಮೋಸ ಹೋಗುವರೇ ॥
ಲೇಸಲ್ಲವೆ ಸತಿ । ಸಾಸಿರಬೊಳಗೆ ಉ । ದಾಶಿಸುವದು ಕವು ।
ಲೇಶ ವಿಠಲರಾಯಾಗೆ ॥ ೩ ॥

ಹೀಗೆ ಆಗಣಿತ ಸಾಹಿತ್ಯರಾಶಿ ಶೃಂಗಾರರಸದ ಮೇಲೆ ಹರಿದಾಸ ಸಾಹಿತ್ಯದಲ್ಲಿದೆ. ಹಾಡುಗಳನ್ನು ಹಾಡುವ ಕ್ರಮವರಿತು, ಒಂದು ಎರಡು ಕಾಲಗಳಲ್ಲಿ ತಾಳಕ್ಕೆ ಸರಿಯಾಗಿ ಭಂಗಿಗಳನ್ನನುಸರಿಸಿ ಗಾನಮಾಡಿದರೆ ಸ್ಫುರಿಸುವ ರಸಭಾವಗಳು ಶಬ್ದಗಳಿಂದ ವರ್ಣಿಸುವ ಎಲ್ಲೆ ಮೀರಿದ ಆನಂದ ವನ್ನುಂಟುಮಾಡುತ್ತವೆ. ತೆಲುಗು ಕೀರ್ತನೆಗಳೂ ಜಾವಳಿಗಳೂ ದಕ್ಷಿಣ ಭಾರತದಲ್ಲಿ ಹುಟ್ಟುವುದಕ್ಕೆ ಮುಂಚೆ ಇದೇ ಹಾಡುಗಳನ್ನು ಎಲ್ಲ ಜನರೂ ಹಾಡುತ್ತಿದ್ದರು.

ನಮ್ಮದು ಕನ್ನಡನಾಡು. ಕನ್ನಡ ಲಕ್ಷಣಕಾರರಿಂದ, ವಾಗ್ಗೇಯಕಾರ ರಿಂದ ನಿರ್ಮಿತವಾಗಿ ಬೆಳೆದದ್ದು ಕರ್ಣಾಟಕ ಸಂಗೀತ. ನಮ್ಮ ವ್ಯವಹಾರ ಭಾಷೆ ಇಂಗ್ಲೀಷು! ನಮ್ಮ ಸಂಗೀತ ಭಾಷೆ ತೆ ..ಲು...ಗು. ಆದರೂ ನಾವ ಕನ್ನಡಿಗರು! ಮರ್ಯಾದೆಯಲ್ಲವೆ?

ವೀರರಸದಲ್ಲಿ

ವೀರರಸವೆಂದರೆ ಸಾಹಸಕಾರ್ಯಗಳನ್ನು ಮಾಡಿದುದನ್ನು ವರ್ಣಿಸಿ ಹೇಳುವುದು ವೀರರಸವೆನಿಸುತ್ತದೆ. ಆದ್ದರಿಂದ ಹರಿದಾಸ ಸಾಹಿತ್ಯದಲ್ಲಿ ಆ ವೀರ್ಯಶೌರ್ಯಗಳನ್ನು ತೋರಿಸಿದ ವೀರರ ಕೃತಿಗಳು ಹಾಡಾಗಿ ಹೇಗೆ ಬಂದಿದೆ ಎಂಬುದರ ಕೆಲವು ಮಾದರಿಗಳನ್ನು ಮುಂದೆ ಕೊಡಲಾಗುತ್ತದೆ.

Sri Vidyabharathi Book Centre, Sringeri

 CC-O. In Public Domain. Digitized by eGangotri

ಮಾರುತಿಯನ್ನು ಬ್ರಹ್ಮಾಸ್ತ್ರದಿಂದ ಬಿಗಿದು ರಾವಣ ಸಾರ್ವಭೌಮನ ಸಭೆಗೆ ಕರೆತಂದ ಸನ್ನಿವೇಶವಿದು. ರಾವಣನ ಸಿಂಹಾಸನಕ್ಕಿಂತ ಎತ್ತರವಾಗಿ ಮಾರುತಿಯು ತನ್ನ ಬಾಲದ ಸಿಂಬೆಮಾಡಿ ಕುಳಿತುಕೊಳ್ಳುತ್ತಾನೆ. ಪ್ರಹಸ್ತನು ಹಾಸ್ಯದಿಂದ ಮಾರುತಿಯನ್ನು ನೀನಾರೆಂದು ಪ್ರಶ್ನೆಮಾಡುತ್ತಾನೆ. ಮಾರುತಿಯು ತನ್ನ ಸಹಜ ವೀರಸ್ವಭಾವದಿಂದ ಪ್ರಹಸ್ತನಿಗೆ ಉತ್ತರ ಕೊಡುತ್ತಾನೆ.

ರಾಗ : ಕಲ್ಯಾಣಿ — ತಾಳ : ಅಟ್ಟ

ಶ್ರೀರಾಮನ ದೂತನು | ಕೇಳೈ ನಾನು । ರಘುರಾಮನ ದೂತನು || ಪ ||

ಶ್ರೀರಾಮನ ದೂತ ತ್ರಿಜಗದೊಳ್ ವಿಖ್ಯಾತ ||
ಮಾರುತನ ಸಂಜಾತ ಶ್ರೀಹನುಮಂತನೆಂಬರು ಎನ್ನನೆಲ್ಲರು || ಅ ||

ಸುರ ಗೋ ದ್ವಿಜರ ರಕ್ಷಿಸೆ । ಭೂಭಾರವ । ತರಿದು ದುಷ್ಟರ ಶಿಕ್ಷಿಸೆ
ಹರಿ ಕ್ಷೀರಾಬ್ಧಿಯನಗಲಿ । ಧರೆಯೊಳು ದ । ಶರಥನ ಭವನದಲಿ ||
ನರರೂಪಿನಲಿ ರಾಮನಾಮದಿಂದುದಿಸಿ ಅ । ಸುರಳಾದ ತಾಟಕಿ
ಯನು ಕೊಂದು ಮಾಣದೆ || ಧುರದೊಳು ಸುಬಾಹುಪ್ರಮುಖರಾದ | ದೈತೇ
ಯರನು ಸಂ । ಹರಿಸಿ ಪರಮಾನಂದಮಯನಾದ । ಕೌಶಿಕನ ಯಜ್ಞವ
ಕರುಣದಿಂದಲಿ ಕಾಯ್ದು ಗೌತಮ । ನರಸಿ ಕಲ್ಲಾಗಿರಲು ಚರಣಾಂ
ಬುರುಹದಿಂ ಸುಂದರಿಯಗೈದುರು | ಹರನ ಬಿಲ್ಲನು ಮುರಿದ ಧೀರನ || ೧ ||

ಜನಕಜಾತೆಯನೊಲಿಸಿ । ಮೇಲ್ಜಮದಗ್ನಿತನಯನ ಪರಿಭವಿಸಿ
ಜನಕನ ಸುವ್ರತವ | ಸಂರಕ್ಷಣೆಯನು ಮಾಡೆ ಮುನಿರೂಪವ ||
ವಿನಯದಿ ಧರಿಸಿ ಶ್ರೀ ಸತಿಸೋದರನ ಸಹ | ವನದುರ್ಗಗಳಲಿ ಸಂ
ಚರಿಸುತ್ತಲಮಿತದು || ಜನವಿರಾಧಾಸುರನ ಬರಿಗೈದು । ದಶ
ಮುಖನ ತಂಗಿಯ । ಹನನಗೊಳಿಸದೆ ನಾಸಿಕವ ತರಿದು । ಖರ
ದೂಷಣಾದಿಗ | ಳನು ವಿಭಾಡಿಸಿ ಕಾಕರೂಪದ । ದನುಜನಕ್ಷಿಯ
ಕಳೆದು ಮಾರೀ
ಚನ ಕನಕಸಾರಂಗರೂಪದ | ಘನಕೆ ಜಂಝಾಪವನನಾದನ || ೨ ||

Sri Vidyabharathi Book Centre, Sringeri

 CC-O. In Public Domain. Digitized by eGangotri

ರಾಮಲಕ್ಷ್ಮಣರಿಲ್ಲದ | ಸಮಯದಿ ದು | ರ್ನಾಮ ರಾವಣ ಸಲ್ಲದ |
ತಾಮಸಸನ್ಯಾಸಿಯ | ವೇಷದಿ ಬಂದು | ಭೂಮಿಜೆಯಹ ಸೀತೆಯ ||
ಪಾಮರನಾಗಿ ಕದ್ದೊಯ್ಯೆ ರಾಘವರು ಶ್ರೀ | ಭಾಮೆಯನರಸುತ್ತ
ಲರಸುತ್ತ ಬರುತಲ್ಲಿ || ತಾಮರಸ ಸಖಸುತನ ಪತಿಕರಿಸಿ |
ಕೋಲೊಂದನೂ ಸು | ತ್ರಾಮತನಯನ ಕೊರಳೊಳಗೆ ಕುಣಿಸಿ |
ರಣಕೋವಿದ ಕಪಿ | ಸ್ತೋಮವೆಲ್ಲವ ನೆರಹಿ ರಾಣೀ | ಕ್ಷೇಮವನು ನೆರೆ
ನೋಡಿಬಾರೆಂ | ದಾಮಹಾತುಮ ಕಳುಹೆ ದಕ್ಷಿಣ | ಸೀಮೆಗಳನರಸುತ್ತ
ಬಂದೆನು ||೩||

ಜಲನಿಧಿಯನು ದಾಂಟಿದೇ | ಕಾಲುವೆಯಂತೆ | ನಲಿದು ಲಂಕೆಯ ಸೇರಿದೆ |
ಬಲಶಾಲಿ ಲಂಕಿಣಿಯ | ಭಂಜಿಸಿ ಬೇಗ | ತಳುವಾದೆ ಜಾನಕಿಯ ||
ಪೊಳಲೊಳಗೆಲ್ಲ ನಾನರಸಿಕಾಣದೆ ಕಡೆ | ಯಲಿ ನಿಮ್ಮ ವನದೊಳು
ಜಲಜನೇತ್ರೆಯ ಪಾದ || ಜಲರುಹಂಗಳ ನೋಡಿ ಮೋದದಲಿ |
ರಘುಪತಿಯ ಕುಶಲವ | ತಿಳುಹಿ ಮುದ್ರಿಕೆಯಿತ್ತು ವಹಿಲದಲಿ |
ವೈದೇಹಿ ಕರುಣಿಸಿ | ದ ಲಘುಕುರುಹ ಪರಿಗ್ರಹಿಸಿ ರಘು |
ತಿಲಕನಂಘ್ರಿಯನೈದೆ ಪೋಪದು | ಕಳವೆನುತ ಚಿತ್ತದಲಿ ಭಾವಿಸಿ
ತಿಳಿದು ನಿರ್ಣಯದಿಂದ ನಿಂತೆನು ||೪||

ತರುಣಿಚೋರಗೆ ನಮ್ಮಯ | ವಾರ್ತೆಯ ಪೇಳಿ | ತಿರುಗಿ ಪೋಗಲು
ನಿಮ್ಮಯ |
ವರವನವನು ಛೇದಿಸಿ | ಅಕ್ಷಾದಿಭ | ಟರನೆಲ್ಲರನು ಭೇದಿಸಿ ||
ಪರಮೇಷ್ಠಿ ನುತಿಸಲಾ | ಕನ ಶರಕ್ಕೊಳಗಾಗಿ | ಅರಿತು ಸೋತವನಂತೆ
ಬಂದೆನೀ ಸಭೆಗಾಗಿ || ಕುರುಹು ತೋರಿಸು ನೋಳ್ಪೆ ರಾವಣನ |
ನಾನುಡಿಸಿಪೋಗುವೆ | ಸುರನರೋರಗನತ ಪದಾಂಬುಜನ |
ಸನ್ನಿಧಿಯನೈದುವೆ || ಧರಣಿಜೆಯ ಸುಕ್ಷೇಮವಾರ್ತೆಯ |
ನರುಹಿ ಖಾದ್ರೀನಾರಸಿಂಹಗೆ | ಭರದಿ ಮುಂದಣ ಕಾರ್ಯಭಾಗವ
ನರಿತು ಮಾಡುವದುಚಿತ ನಮಗದು ||೫||

Sri Vidyabharathi Book Centre, Sringeri

 CC-O. In Public Domain. Digitized by eGangotri

ಮಾರುತಿಯು ತನ್ನ ಪರಿಚಯ ಹೇಳಿ, ಎದುರಿಗೇ ಸಿಂಹಾಸನದಲ್ಲಿ ಮಂಡಿಸಿರುವ ರಾವಣನನ್ನು ಕಂಡರೂ ಕಾಣದವನಂತೆ ರಾವಣನೆಂಬುವನ್ಯಾರು ತೋರು, ಎನ್ನಲು—ಶೂರಾಗ್ರೇಸರನಾದ ರಾವಣಸಾರ್ವಭೌಮನಿವನೆಂದು ಪ್ರಹಸ್ತನು—

ಪ|| ನೋಡು ಪುಲಸ್ತ್ಯವಂಶಾಂಬುಧಿ ಚಂದ್ರನಂ ದಾನವೇಂದ್ರನಂ
ನೋಡು ಸಮಸ್ತನಿರ್ಜರ ಮನೋತ್ಸವಭಂಗನಂ ಮನ್ಮಥಾಂಗನಂ
ನೋಡು ದಶಾಸ್ಯವಿಂಶತಿಭುಜಾಂಬಕ ಶೌಡನಂ ಸುಪ್ರಚಂಡನಂ
ನೋಡರಿರಾಯರ ಗಂಡನಹ ರಾವಣನಾಮ ಸಾರ್ವಭೌಮನಂ || ೧ ||

ಎಂದು ತೋರಿಸುತ್ತಾನೆ.

ದಕ್ಷಬ್ರಹ್ಮನ ಯಜ್ಞವನ್ನು ಧ್ವಂಸಮಾಡಲು ಪರಮೇಶ್ವರನ ಕೋಪಜ್ವಾಲೆಯೇ ರೂಪತಾಳಿ ಬಂತೋ ಎಂಬಂತೆ ಬಂದ ವೀರಭದ್ರನು ದಕ್ಷಾಧ್ವರ ಮಂಟಪದಲ್ಲಿ ಬಂದ ವಿವರವನ್ನು ಕೆಳಕಂಡ ಪದವು ವರ್ಣಿಸಿರುವ ವೈಖರಿಯಿದು:

ರಾಗ : ಸಾವೇರಿ — ತಾಳ : ಆದಿ

ವೀರಭದ್ರನವ | ತಾರವ ಮಾಡಿದ | ನಾರು ಬಣ್ಣಿಸುವರೈ ||
ಧರೆಯೊಳು || ಪ ||

ವೀರ ವೈಷ್ಣವ ಶಿರೋರತುನನ ಹೃ | ದ್ವಾರಿಜದೊಳಗಿಹ ನಾರಸಿಂಹ ತ
ನ್ನಾರಾಧಕನಪಚಾರ ಮಾಡಿದ | ಕ್ರೂರನ ಕೊಲ್ಲಲು ಮಾರಿಬಂದ
ಪೊಲ್ || ಅ ||

ಧರಣಿಮಂಡಲವ ಚರಣ ಭೂಷಣದಲಿ | ತಾಂಡವನಾಡುತಲಂ |
ಬರದೊಳುರಿವ ಭಾಸ್ಕರನೋಲ್ಪದನದಲಿ | ಆಕಳಿಸುತಿರೆ ಬಾಯ್
ದೆರೆವುತ ಪಲ್ಗಳ ಕಿರಿಯುತ ಕಣ್ಗಳ | ತಿರುಗುತ ಜಿಹ್ವೆಯುಲೆರಗುತ
ಮುಖದೊಳ್ ||
ಬೆರಳ ಬೊಬ್ಬೆ ವಿ | ಸ್ತರಿಸಲು ದಕ್ಷಾ | ಧ್ವರದಲಿ ನೆರೆದಿಹ ಜನರ
ಉರುಳಿಸುತ || ೧ ||

Sri Vidyabharathi Book Centre, Sringeri

 CC-O. In Public Domain. Digitized by eGangotri

ಮುಖಮುಖನಾಯಕ ನಿಕರದ ಮುಡಿಗಳನು | ಮುಂಗೆಯ್ಯಿಗೆ ಸುತ್ತುತ
ತಕತ ಧಿಮಿತ ಧಿಕುಧಿಕು ಎನೆ ಶಬ್ದವನು | ಕೇಳ್ಕಗುತಿಹ ದಿಕ್ಪಾ |
ಲಕರ ನೋಡಿ ತೀಕ್ಷ್ಣಕರದ ಖಂಡೆಯ | ಪ್ರಕಟಿಸಿ ಹೊಯ್ದವರ
ಕರಚರಣಗಳ
ವಿಕಳಗೈಯೆ ಸುರನಿಕರವೆದೆಯೊಡೆಯೆ | ಅಕಟ ಮಹಾಪ್ರಳಯಕೆ ಸರಿ
ಮಿಗಿಲೆನೆ || ೨ ||

ನಟಸುತ ನಾಲ್ದೆಸೆ ಪುಟದೋಡುವ ಭಟರ | ಕಾಲ್ದುದಿಯಲಿ ಸವರುತ
ನಿಟಲೆಲು ಮುರಿಯಲು ಚಿಟಿಚಿಟಿ ಚೀರುವರ | ಅಂತಕನ ಮನೆಗೆ ಸಂ
ಘಟಿಸಿ ರಣಮಹೋತ್ಸವದಲಿ ದಕ್ಷನ | ಪಟುತರ ಶಿರವನು ಪುಟಿಸಿ
ಯಜ್ಞಾಂತಃ
ಪುಟಸ್ಥಿತ ಕಮಲೇಶವಿಠಲಗರ್ಪಿಸಿ | ಧೂರ್ಜಟಿಗೆ ಹರುಷ ಉತ್ಕಟವನು
ಗೈಯಲು || ೩ ||

ಮುಂದಿರುವ ಚಿಕ್ಕ ಲಾವಣಿಯು ಭೀಮಸೇನನು ನಿಶ್ಶಸ್ತ್ರನಾಗಿ ಏಕಾಂಗಿಯಾಗಿ ಶತ್ರುಸೈನ್ಯದ ಮಧ್ಯೆ ನುಗ್ಗಿ ಯುದ್ಧಮಾಡಿದ ಶೌರ್ಯವನ್ನು ವರ್ಣಿಸುತ್ತದೆ.

ಲಾವಣಿ

ಬಂದನು ಧೀರ | ಕುಂತಿಕುಮಾರ | ಬಂದನು ಧೀರ || ಪ ||
ಮರಹೆಗ್ಗೊಂಬನು ಭೀಮ ಮುರಿದನು | ವರರಥಗಳ ಮೇಲಪ್ಪಳಿಸಿದನು
ಕರಿತುರಗಗಳನು ಪುಡಿ ಮಾಡಿದನು | ಆರಿದ ಪದಾತಿಯ ಶಂಕೆಯಿಲ್ಲದನು
ಬರುವ ದೊಣ್ಣೆದಾಸನು ಯಾರಿವನು | ಧರಿಸಿಹ ಯಮದಂಡವ ನೋಡಿದರು
ಪುರವ ಸೇರಿದರೆ ಸ್ತ್ರೀಲಾಭದ ಫಲ | ದೊರಕಿತೆಂದು ಓಡಲು
ಜನರುಗಳು || ೧ ||

ಶ್ರೀಮದ್ರಾಮಾಯಣ, ಭಾರತ, ಭಾಗವತ ಮೊದಲಾದ ಪುರಾಣ ಕಥೆಗಳನ್ನೆಲ್ಲಾ ಪದಗಳಾಗಿ ಪದ್ಯಗಳಾಗಿ ಆರ್ಯಗಳಾಗಿ ಮಧ್ಯಮಧ್ಯ ವಚನ ಸಹಿತ ಬರೆದಿಟ್ಟಿರುವ ಹರಿದಾಸ ಸಾಹಿತ್ಯ ಭಂಡಾರದಲ್ಲಿ ವೀರರಸವಿರುವ

Sri Vidyabharathi Book Centre, Sringeri

 CC-O. In Public Domain. Digitized by eGangotri

ಪದಗಳನ್ನು ಹುಡುಕಬೇಕಾಗಿಲ್ಲ. ಯುದ್ಧಪ್ರಸಕ್ತಿ ಬಂದಾಗಲೆಲ್ಲಾ ವೀರರಸ ವಿದ್ದೇ ಇರುತ್ತದೆ. ಅದಕ್ಕೆ ತಕ್ಕಂತೆ ಪದಪದ್ಯಗಳನ್ನವರು ರಚಿಸಿರುತ್ತಾರಾದ್ದರಿಂದ ಮುಂದೆ ಕರುಣಾರಸವನ್ನು ನೋಡೋಣ!

ಕರುಣಾರಸದಲ್ಲಿ

ಕರುಣಾರಸದಲ್ಲಿ ಭಕ್ತಿಯೂ ಭಕ್ತಿರಸದಲ್ಲಿ ವಿರಹವೂ ಆರ್ತಭಾವವೂ ಒಂದಕ್ಕೊಂದು ಹೊಂದಿಕೊಂಡೇ ಬರುತ್ತವೆ. ವೀರರೌದ್ರರಸಗಳಲ್ಲಿ ಒಂದಕ್ಕೊಂದರ ಸಂಬಂಧವಿರುವಂತೆ ಶೃಂಗಾರ ಕರುಣಾರಸಗಳಿಗೂ ಸಂಬಂಧಗಳಿರುತ್ತವೆ.

ಭಕ್ತಜನರ ನಿತ್ಯಪಠಣೆಗನುಕೂಲವಾಗಿರಲೆಂದು ಶ್ರೀಪಾದರಾಯರು ಹಾಡಿರುವ ಪದವನ್ನು ಕೆಳಗೆ ಕೊಡಲಾಗಿದೆ:

ರಾಗ : ಭೈರವಿ — ತಾಳ : ಜಂಪೆ

ಯಾಕೆ ಪುಟ್ಟಿಸಿದೆ ನೀ । ಸಾಕಲಾರದೆ ಜಗ ।
ದೇಕಕಾರಣಪುರುಷನೆ । ಕೃಷ್ಣ ॥ ಪ ॥

ಏಕೋವಿಷ್ಣುವೆಂಬ ವಾಕು ಚಿಂತಿಸೆ ಇಂಥ ।
ಕಾಕುಮಾಡುವದುಚಿತವೇ । ಕೃಷ್ಣ ॥ ಅ ॥

ಒಡಲಿಗನ್ನವ ಕಾಣೆ । ಉಡಲು ಅರಿವೆಯು ಕಾಣೆ ।
ಗಡಗಡನೆ ನಡುಗುತಿಹೆನೋ । ಕೃಷ್ಣ ।
ಕುಡುತೆ ಕೊಡುವವರಿಲ್ಲ । ಮುಡಿಯು ಕೇಳುವರಿಲ್ಲ ।
ಬಡತನವು ಕಂಗೆಡಿಸಿತೋ । ಕೃಷ್ಣ ।
ಮಡದಿಮಕ್ಕಳ ಬಿಟ್ಟು । ಒಡಹುಟ್ಟಿದರ ಬಿಟ್ಟು ।
ಅಡವಿಪಾಲಾದೆನಲ್ಲೋ । ಕೃಷ್ಣ ॥
ಕಡೆಹಾಯುವದ ಕಾಣೆ । ನಡುಮಡುವಿನೊಳು ಕಯ್ಯ ।
ಬಿಡದೆ ದಡವನು ಸೇರಿಸೋ । ಕೃಷ್ಣ ॥ ೧ ॥

ಕೊಟ್ಟವರ ಸಾಲವನು । ಕೊಟ್ಟು ತೀರಿಸದವರ ।
ಪೊಟ್ಟೆಯೊಳ್ ಪುಟ್ಟಿದ್ದಾಯ್ತೋ । ಕೃಷ್ಣ ।
ಎಷ್ಟು ಜನ್ಮದಿ ಮನ । ಮುಟ್ಟಿ ಮಾಡಿದ ಕರ್ಮ ।

Sri Vidyabharathi Book Centre, Sringeri

 CC-O. In Public Domain. Digitized by eGangotri

ಕಟ್ಟೀಗ ಉಣಿಸುತಿಹದೋ । ಕೃಷ್ಣ ।
ಸೃಷ್ಟಿಯೊಳಗೆನ್ನಂಥ । ಕೆಟ್ಟ ಪಾಪಿಷ್ಠ ಜನ ।
ಘಟ್ಟಿಸಾಲಿಲ್ಲವೇನೋ । ಕೃಷ್ಣ ॥
ವಿಠಲನೆ ನಿನ್ನ ಮನ । ಮುಟ್ಟಿ ಭಜಿಸಿ ಹಿಂದೆ ।
ಎಷ್ಟು ಜನ ಬದುಕಿಲ್ಲವೊ । ಕೃಷ್ಣ ॥ ೨ ॥

ಆಳುದೇಹವು ಗೇಣುಕೀಳಾಗಿ ಪಲ್ಕಿರಿದು
ಖೂಳಜನರುಗಳ ಮನೆಗೆ । ಕೃಷ್ಣ ।
ಹಾಳು ಒಡಲಿಗೆ ತುತ್ತು । ಕೂಳಿಗೇ ಹೋಗ್ಯವರ ।
ಓಲೈಸಲಾರೆನಲ್ಲೋ । ಕೃಷ್ಣ ।
ಬಾಳು ಈ ಪರಿಯಾದ । ಮೇಲೆ ಭೂಮಿಯೊಳು ಬಹು
ಕಾಲ ಕಳೆಯುವದುಚಿತವೇ । ಕೃಷ್ಣ ॥
ಆಲಸ್ಯವಿಲ್ಲದೆ ಈ । ವೇಳೆಯಲಿ ಎನ್ನ ।
ಪಾಲಿಸಲು ಬಲುಕೀರ್ತಿಯೋ । ಕೃಷ್ಣ ॥ ೩ ॥

ಆರು ಗತಿ ನಿನಗಧಿಕ । ರಾರು ಧಾರುಣಿಯೊಳಗೆ ।
ತೋರಿಸೈ ಕರುಣಾನಿಧಿಯೇ । ಕೃಷ್ಣ ।
ಈರೇಳುಲೋಕಕಾಧಾರ । ವಾದವಗೆ ಬಲು ।
ಭಾರ ನಾನಾದೆನೇನೋ । ಕೃಷ್ಣ ।
ವಿಾರಿನಡೆಯಲು ಹದಿ । ನಾರೆರಡು ಪಲ್ಲುಗಳು ।
ಬೇರು ಕಳಚಿ ಕಳೆವವೊ । ಕೃಷ್ಣ ॥
ತೋರು ಬಂಕಾಪುರದ । ಧಾರುಣೀಪುರವಾಸ ।
ವೀರನರಸಿಂಹದೇವಾ । ಕೃಷ್ಣ ॥ ೪ ॥

ಎಂದೆಂದು ಶಿರಿಯರಸ । ನೆಂದು ಶ್ರುತಿ ಸಾರುತಿದೆ ।
ನೊಂದವರಿಗೇನು ಸಿರಿಯೋ । ಕೃಷ್ಣ ।
ಒಂದೊಂದು ನಿಮಿಷ ಯುಗ । ಕಿಂದಧಿಕವಾಗುತಿದೆ ।
ಮುಂದೋರಥಾಂಗಾಯಿತೋ । ಕೃಷ್ಣ ।
ಸಂದೇಹವಿಲ್ಲ ಗೋ । ವಿಂದ ಶ್ರೀಪದದಾಣೆ ।
ತಂದೆ ನೀ ರಕ್ಷಿಸದಿರೇ । ಕೃಷ್ಣ ॥

Sri Vidyabharathi Book Centre, Sringeri

 CC-O. In Public Domain. Digitized by eGangotri

ಮುಂದೆ ಭಜಿಸರು ಜನರು । ಮಂದಿವಾರ್ತೆಯ ಕೇಳಿ ।
ನಿಂದಿಪರು ಬಲು ನಿನ್ನನು । ಕೃಷ್ಣ ॥ ೫ ॥

ಪೃಥ್ವಿಯೊಳಗುದಿಸಿ ಮು । ವ್ವತ್ತಾರು ವತ್ಸರ ।
ಈತೆರದಿ ಕಾಲಕಳೆದೆ । ಕೃಷ್ಣ ।
ವ್ಯರ್ಥವಾಯಿತು ಜನ್ಮ । ಸಾರ್ಥಕಾಗದೆ ಕಣ್ಣು ।
ಕತ್ತಲೆಯು ಕವಿಯಿತಲ್ಲೋ । ಕೃಷ್ಣ ।
ಇತ್ತ ಬಾರೆಂದೆನ್ನ ಹತ್ತಿರಕೆ । ಕರೆದೊಂದು ।
ತುತ್ತ ಕೊಡುವರ ಕಾಣೆನೋ । ಕೃಷ್ಣ ॥
ವಿಸ್ತರಿಸಲಾರೆ ಇನ್ನೆತ್ತು । ಪೋಗಲಿ ನಿನ್ನ ।
ಚಿತ್ತವೇತಕೆ ಕರಗದೋ । ಕೃಷ್ಣ ॥ ೬ ॥

ಹರಿಯಾತ್ರೆ ಮಾಡಲಿಲ್ಲ । ಹರಿಮೂರ್ತಿ ನೋಡಲಿಲ್ಲ ।
ಹರಿದಾಸಸಂಗವಿಲ್ಲಾ । ಕೃಷ್ಣ ।
ಹರಿವಾರ್ತೆ ಕೇಳಲಿಲ್ಲ । ಸುರನದಿಯ ಮಿಾಯಲಿಲ್ಲ ।
ಧರಣಿಸಂಚರಿಸಲಿಲ್ಲ । ಕೃಷ್ಣ ।
ಅರಿತರಿತು ಮನವಿಷಯ । ಕೆರಗಿ ಹರುಷವ ತಾಳಿ ।
ಬರಿದಾಯಿತಾಯುವೆಲ್ಲ । ಕೃಷ್ಣ ॥
ಕರುಣವಾರಿಧಿಯೆನ್ನ । ಕರವಿಡಿದು ಪೊರೆಯದಿರೆ ।
ಕರೆದು ಉದ್ಧರಿಪರ್ಯಾರೋ । ಕೃಷ್ಣ ॥ ೭ ॥

ದುರುಳಜನರೊಡನಾಡಿ । ಹರಿಣಾಕ್ಷಿಯರ ನೋಡಿ ।
ಸರಿ ಯಾರು ಎಂದು ತಿರುಗಿ । ಕೃಷ್ಣ ।
ಪರರ ಅನ್ನವ ಬಯಸಿ । ಶರೀರವನು ಪೋಷಿಸಿ ।
ಸಿರಬಲಿತು ಶಿಲೆಯ ತಾಕಿ । ಕೃಷ್ಣ ।
ನಿರುತ ಕ್ಷುದ್ರುವನೆಣಿಸಿ । ಮೆರೆದೂರ ಮಾರಿ ಹೆ ।
ಗ್ಗರಿಕೋಣನಂತೆ ತಿರುಗಿ । ಕೃಷ್ಣ ॥
ಸ್ಮರಿಸಲಾರದ ಪಾಪ । ಸ್ಮರಣೆಪೂರ್ವಕಮಾಡಿ
ಧರೆಗೆ ಭಾರಾದೆನಲ್ಲೋ । ಕೃಷ್ಣ ॥ ೮ ॥

Sri Vidyabharathi Book Centre, Sringeri

 CC-O. In Public Domain. Digitized by eGangotri

ಎಷ್ಟು ಪೇಳಲಿ ಎನ್ನ । ಕಷ್ಟಕೋಟಲೆಗಳನು ।
ಸುಟ್ಟು ಎದೆ ಬೇಯುತಿಹದೋ । ಕೃಷ್ಣ ।
ಕಷ್ಟಪಟ್ಟೆನೆಂದು । ದೃಷ್ಟಿನೀರೊರೆಸಿ ಎನ್ನ ।
ಪೊಟ್ಟೆಯೊಳಗಿಡುವರ್‍ಯಾರೋ । ಕೃಷ್ಣ ।
ಕೃಷ್ಣನಾಮವಜ್ರಕ್ಕೆ । ಬೆಟ್ಟದುರಿತವು ಎದುರೆ ।
ತಟ್ಟನೇ ಬಂದು ನೀನು । ಕೃಷ್ಣ ॥
ಇಷ್ಟವನು ಸಲಿಸು ಮುಂ । ದೃಷ್ಟಿಯಲಿ ಶ್ರೀರಂಗ
ವಿಠಲ ಎನ್ನ ಸಲಹೋ । ಕೃಷ್ಣ ॥ ೯ ॥

ರಾಗ : ಧನಾಸರಿ — ತಾಳ : ಜಂಪೆ

ರಂಗ ನೀಲಾಂಗ । ನರಸಿಂಗ । ನಿನ್ನಂಘ್ರಿಕಮ । ಲಂಗಳಿಗೆ
ವಂದಿಸುವೆನೊ ॥ ಪ ॥

ತುಂಗವಿಕ್ರಮನೆ ಭವ । ಭಂಗವನು ಪರಿಹರಿಸೊ ।
ಅಂಗಜನಪಿತ ಮೋಹ । ನಾಂಗ ರಿಪುಮದಭಂಗ ॥ ಅ ॥

ಶ್ರೀವಿರಿಂಚಾದಿಗಳು ಸೇವಿಸುವ ಚರಣ ಕೆಂ । ದಾವರೆಯ ಪೋಲ್ವ ಚರಣ
ಆವಿಯದ್ಗಂಗಾದಿ ಸಕಲಾಭಿಮಾನಿಗಳಿ । ಗಾವಾಸವಾದ ಚರಣ
ಭಾವಜ್ಞರಾದ ಭಕ್ತಾವಳಿಗಳಿಗೆಲ್ಲ । ಭಾವಶುದ್ಧಿಯನೀವ ಚರಣ
ಆ ವನಾಂತರವೆಲ್ಲ ಸಂಚರಿಸಿದಾ ಚರಣ । ಆ ವನಧಿ ಬಂಧಿಸಿದ ಚರಣ
ಆ ವಸುಧೆಯಳತಂದು ಆಳಿದಂಥಾ ಚರಣ ।
ಪಾವನಾತರ ಚಾರುಚರಣ ಸುಗುಣಾಭರಣ ॥ ೧ ॥

ಸಿಕ್ಕಿ ಭವಪಾಶದಲಿ ದುಃಖಪಡುತಲಿ ಪರರ । ರೊಕ್ಕವನು ಗಳಿಸಿ ತಂದೆ
ಚಿಕ್ಕವರು ಸತಿಸುತರು ಮಿಕ್ಕಬಂಧುಗಳು ಎಂ । ದಕ್ಕರದಿ ಅವರೊಡನೆ ತಿಂದೆ
ಚಿಕ್ಕಮತಿಗಳಿಂದ ಲೆಕ್ಕಿಸದೆ ಸಜ್ಜನರ । ಧಿಕ್ಕರಿಸಿ ವಿಷಯದಲಿ ನೊಂದೆ
ಕಕ್ಕಸದ ಭವಣೆಗಳ ದಾಯಕ್ಕೆ ಸಿಕ್ಕಿ ನಾ । ದಿಕ್ಕವರೆ ಎನಗೆಂದು ನಿಂದೆ
ರಕ್ಕಸಾಂತಕ ನಿನ್ನ । ಪೊಕ್ಕು ಜೀವಿಸದೆ ಬಲು ।
ಸೊಕ್ಕಿನಿಂದಲಿ ತಿರುಗಿ । ಬಳಲಿದೆನೊ ಭವದೊಳಗೆ ॥ ೨ ॥

Sri Vidyabharathi Book Centre, Sringeri

 CC-O. In Public Domain. Digitized by eGangotri

ಎಂದಿಗೋ ನಿನ್ನ ಪದಸಂದರುಶನೋತ್ಸವದಿ । ಎಂದಿಗೋ ತನು ಪುಳಕವಹದು
ಎಂದಿಗೋ ಭವದುಃಖಬಂಧಮೋಚಕನೆ ನೀ । ನೆಂದಿಗೆನ್ನನುದ್ಧರಿಪುದು
ಎಂದಿಗೋ ನಾ ಧನ್ಯನೆಂದೆನಿಸಿ ಭವದಿ । ಇನ್ನೆಂದಿಗೋ ಮುಕ್ತನಹದು
ಎಂದಿಗೋ ಆನಂದಬಾಷ್ಪಂಗಳಿಂದ । ಇನ್ನೆಂದಿಗೋ ನಾ ಸ್ತುತಿಪುದು ॥
ಎಂದಿಗೋ ವರದಗುರು ಜಯವಿಠಲ ನೀನೊಲಿವು । ದೆಂದಿಗೋ ನಾ ಕಾಣೆ ।
ತಂದೆ ಕರುಣಾಸಿಂಧು ॥ ೩ ॥

ರಾಗ : ಶಹನ — ತಾಳ : ಜಂಪೆ

ಕಂಡುಕಂಡು ನೀ ಎನ್ನ । ಕೈಬಿಡುವರೇ ಕೃಷ್ಣ
ಪುಂಡರೀಕಾಕ್ಷ ಶ್ರೀ । ಪುರುಷೋತ್ತಮನೆ ದೇವ ॥ ಪ ॥

ಬಂಧುಗಳು ಎನಗಿಲ್ಲ । ಬದುಕಿನಲಿ ಸುಖವಿಲ್ಲ
ನಿಂದೆಯಲಿ ನೊಂದೆನೈ । ನೀರಜಾಕ್ಷ ॥
ಬಂಧುಬಳಗವು ನೀನೆ । ತಂದೆತಾಯಿಯು ನೀನೆ
ಎಂದೆಂದಿಗೂ ನಿನ್ನ । ನಂಬಿರುವೆನೋ ಸ್ವಾಮಿ ॥ ೧ ॥

ಕ್ಷಣವೊಂದು ಯುಗವಾಗಿ । ತೃಣಕಿಂತ ಕಡೆಯಾಗಿ
ಎಣಿಸಲಳವಲ್ಲದ । ಭವದಿ ನೊಂದೇ ॥
ಸನಕಾದಿಮುನಿವಂದ್ಯ । ವನಜಸಂಭವಜನಕ
ಫಣಿಶಾಯಿ ಪ್ರಹ್ಲಾದ । ಗೊಲಿದ ಶ್ರೀಕೃಷ್ಣ ॥ ೨ ॥

ಭಕ್ತವತ್ಸಲನೆಂಬ । ಬಿರುದು ಪೊತ್ತಮೇಲೆ
ಭಕ್ತರಾಧೀನನಾಗಿರಬೇಡವೇ ॥
ಮುಕ್ತಿದಾಯಕ ನಮ್ಮ । ಬನ್ನೂರುಪುರವಾಸ
ಶಕ್ತದೇವರದೇವ ಪುರಂದರವಿಠಲ ॥ ೩ ॥

ಆಡುವ ಮಾತಿನಲ್ಲಿ—ಹಾಡುವ ಹಾಡಿನಲ್ಲಿ—ಕರುಣೆ ಹುಟ್ಟುವಂತೆ ಇದ್ದರೆ, ಆದರಿಂದ ಉಂಟಾಗುವ ರಸವು ಕರುಣಾರಸವೆನಿಸಿಕೊಳ್ಳುತ್ತದೆ. ಕೀಳ್ತರಗತಿಯ ಮಾತಿನಲ್ಲೂ ಹಾಡಿನಲ್ಲೂ ಉತ್ಪನ್ನವಾಗುವ ರಸವು ಕರುಣಾ ರಸವೆಂದು ಕರೆಸಿಕೊಂಡರೂ ಅದು ಉಚ್ಚ ತರಗತಿಯ ರಸವೆನಿಸುವುದಿಲ್ಲ.

Sri Vidyabharathi Book Centre, Sringeri

 CC-O. In Public Domain. Digitized by eGangotri

ಪ್ರಾಣಿಯ ಮನಸ್ಸಿನಲ್ಲುಂಟಾಗುವ ಕಾಮವೂ ಒಂದು ರಸವೇ. ಅದು ಧರ್ಮಕ್ಕೆ ವಿರೋಧವಲ್ಲದಿದ್ದಾಗ ಮಾತ್ರ ಸಾತ್ವಿಕ ರಸವೆನಿಸಿಕೊಳ್ಳುತ್ತದೆ. 'ಧರ್ಮಾವಿರುದ್ಧೋ ಭೂತಾನಾಂ ಕಾಮೋಽಸ್ಮಿ ಭರತರ್ಷಭ' ಎಂದು ಗೀತಾ ಚಾರ್ಯನಾದ ಶ್ರೀಕೃಷ್ಣನೂ ಒಪ್ಪಿಕೊಂಡಿರುತ್ತಾನೆ. ಯಾವಾತನ ಸನ್ನಿಧಾನ ವಿದ್ದರೆ ಮಾನವಪ್ರಾಣಿಯಲ್ಲಿ ಎಲ್ಲ ಬಗೆಯ ರಸಗಳ ಉದಯವಾಗುವುದೋ, ಯಾವಾತನಿರದಿದ್ದರೆ ಶರೀರವಿದ್ದರೂ ಕಾಷ್ಠಪ್ರಾಯವಾಗುವುದೋ, ಆ ಸರ್ವೇಶ್ವರನು ಕೊಟ್ಟ ರಸವನ್ನು ರಸಶಬ್ದವಾಚ್ಯನೇ ಆದ ಆ ಪರಮಾತ್ಮ ಭಜನೆ ಸೇವನೆಗಳಿಗೆ ಉಪಯೋಗಿಸದಿದ್ದರೆ ಮಾನವನ ಜನ್ಮ ವ್ಯರ್ಥವೆನಿಸುತ್ತದೆ. ಆದ್ದರಿಂದ ಹರಿದಾಸರುಗಳು ಎಲ್ಲ ಬಗೆಯ ಭಕ್ತಿಗಳಲ್ಲಿ ಹಾಡಿ ಪರಮಾತ್ಮನನ್ನು ಒಲಿಸಿಕೊಂಡಿರುವಂತೆ ಎಲ್ಲ ರಸಗಳಲ್ಲೂ ಹಾಡಿ ರಸಋಷಿಗಳೆನಿಸಿ ಕೊಂಡಿರುತ್ತಾರೆ. ಹಾಗಿರದ ಮಾನವನು ಕಾನನದ ಪ್ರಾಣಿಗಿಂತ ಯಾವ ಬಗೆಯಿಂದ ಅಧಿಕನು?

ಅದ್ಭುತರಸದಲ್ಲಿ

ಯಾವದು ಆಗಲು ಸಾಧ್ಯವಲ್ಲವೋ ಅದು ಆಯಿತೆಂದು ಮಾತಿನಿಂದ ತೋರಿಸುವುದಕ್ಕೆ ಅದ್ಭುತವೆಂದು ಹೆಸರು. ಆದರ ಪರಿಣಾಮ ಮನಸ್ಸಿನ ಮೇಲಾದರೆ ಅದು ಅದ್ಭುತರಸವೆನಿಸಿಕೊಳ್ಳುತ್ತದೆ. ವೀರರಸಕ್ಕೆ ಹೊಂದಿ ಅದ್ಭುತವು ರಸವಾದಂತೆ ಇತರ ರಸಗಳಿಗೆ ಆಗುವುದನ್ನು ಪಂಡಿತರು ಮನ್ನಿಸಿಲ್ಲ. ದೇವತಾಮೂರ್ತಿಗಳ ಪೈಕಿ ವೀರಭದ್ರ, ರುದ್ರ, ಭೀಮ, ಹನುಮ, ನರಸಿಂಹ; ರಾಕ್ಷಸರ ಪೈಕಿ ರಾವಣ, ಕುಂಭಕರ್ಣ, ಹಿರಣ್ಯಕಶಿಪು ಮೊದಲಾದ ವ್ಯಕ್ತಿಗಳ ಹೆಸರೆತ್ತಿ ಅದ್ಭುತಗಳನ್ನು ಹೇಳಿದರೆ ಕೇಳುವವರು ಆನಂದದಿಂದ ಕೇಳುತ್ತಾರೆ. ಮುಂದಿನ ಪದವು ಹನುಮಂತನು ಹುಟ್ಟಿದ ಕಾಲದಲ್ಲಿ ಆದವೆಂದು ಅದ್ಭುತರಸದಲ್ಲಿ ಹೃದಯಂಗಮವಾಗುವಂತೆ ವರ್ಣಿಸುತ್ತದೆ.

ರಾಗ : ಪಂತುವರಾಳಿ — ತಾಳ : ಅಟ್ಟ

ಹನುಮಂತನುದಿಸಿದನು । ಭೂತಳದಲ್ಲಿ ।
ಹನುಮಂತನುದಿಸಿದನು ॥ ಪ ॥

Sri Vidyabharathi Book Centre, Sringeri

 CC-O. In Public Domain. Digitized by eGangotri

ಹನುಮಂತನುದಿಸಿದ । ವನಜನಾಭನ ಪಾದ ॥
ವನಜಗಳ ಸೇವೆಗಳ ಮಾಡಲು ಅನಿಲದೇವರ ಸುಪ್ರಸಾದದಿ ॥ ೮ ॥

ಎಳೆದಳಿರಂದದಿ ಥಳಥಳಿಸುವ ದೇಹ ।
ಗಳದಲ್ಲಿ ನವರತ್ನಗಳ ಹಾರ ಶಿರದಲ್ಲಿ ।
ಹೊಳೆವ ಕಿರೀಟಕುಂಡಲ ಕರ್ಣಕಟಸೂತ್ರ ।
ವಿಲಸಿತಕೃಪೆಯುಜ್ವಲಿಸಿದ ಉಪವೀತಾ ।
ದ್ಯಲಘುಸಾಲಂಕಾರ ದೇಹದಲಿ ॥
ಪುಟ್ಟುತ್ತ ಸೂರ್ಯನ । ಫಲವೆನುತ ಲಂಘಿಸಿದ ವೇಗದಲಿ ।
ಕಬಳಿಸುತಲಿರಲಾ । ಬಲನಿಷೂದನ ನೋಡಿ ಕೋಪದಲಿ ।
ಘಾತಿಸಲು ವಜ್ರದಿ ॥
ಬಳಲುತಲಿ ಮೂರ್ಛೆಯಲಿ ಬೀಳಲು ।
ತಿಳಿದು ಪವನನು ಮುನಿದನಾಕ್ಷಣ ॥ ೧ ॥

ಪರಮೇಷ್ಠಿ ಮೊದಲಾಗಿ ಇರುವೆಯು ಪರಿಯಂತ ।
ಇರುವ ದೇಹಿಗಳೊಳಗಿರುವ ಪ್ರಾಣಾಶುಗ ।
ವಿರದಂತೆ ಸೆಳೆಯುತಲಿರೆ ಬ್ರಹ್ಮಾದ್ಯರು ಪೋಗಿ ।
ಹರಿಗೆ ಬಿನ್ನೈಸಲು ಸುರರೊಡಗೂಡಿ ಶ್ರೀ ॥
ಧರನು ಮಾರುತನೈದಿ ಕುಸ್ತರಿಸಿ । ಮಾರುತಿಯನೆಬ್ಬಿಸಿ ।
ವರಗಳಿತ್ತನು ನಿರ್ಜರರವೆರೆಸಿ ।
ಸದ್ವಜ್ರಕಾಯವು ವರಚಿರಂಜೀವತ್ವವಾದರಿಸಿ ।
ಮೇಲ್ ಕಾಮರೂಪಾ ॥
ದ್ಯುರುತರದ ಸರ್ವಾರ್ಥಸಿದ್ಧಿಯ ।
ಕರುಣಿಸಿದ ಬಳಿಕಾಮರುತ್ಸುತ ॥ ೨ ॥

ಆದಿತ್ಯನಲಿ ಸರ್ವವೇದಗಳನು ಜಂಭ ।
ಭೇದಿಯಿಂ ವ್ಯಾಕರಣಾದಿ ಶಾಸ್ತ್ರಂಗಳ ।
ನೋದಿ ಬ್ರಹ್ಮಚರ್ಯಮಾದ ವ್ರತಕೆ ದೀಕ್ಷೆ ।
ಗೈದು ಪೂರ್ಣಕಾಮನಾದ ಮಹಾತ್ಮ ವಿ ॥
ನೋದಿ ಸುಗ್ರೀವನಲಿ ಸಖ್ಯವನು ।

Sri Vidyabharathi Book Centre, Sringeri

 CC-O. In Public Domain. Digitized by eGangotri

ಮಾಡುತ್ತ ಪರಮಾಹ್ಲಾದದಿಂದಲಿ ತಂದೆತಾಯ್ಗಳನು ।
ಸೇವಿಸುತ ನಿರ್ಮಲ । ಮಾದ ಮನದಲಿ ಮಾಡಿ ಭಕ್ತಿಯನು ॥
ಖಾದ್ರೀ ನೃಸಿಂಗನ ॥
ಪಾದದರುಶನವಾಗಬೇಕೆಂದಾ ದಯಾನಿಧಿ ಬಯಸುತಿರ್ದನು ॥ ೩ ॥

ಮತ್ತೆ ಮಾರುತಿಯ ಶಬ್ದ ಶಾಸ್ತ್ರವನ್ನು ಪಠಿಸುವಾಗ ಸೂರ್ಯನಿಗೆ ಅಭಿಮುಖನಾಗಿ, ಪೂರ್ವಾಚಲದ ಮೇಲೊಂದು ಕಾಲು, ಅಸ್ತಾಚಲದ ಮೇಲೊಂದು ಕಾಲು ಇಟ್ಟುಕೊಂಡು ಸೂರ್ಯನೆತ್ತ ತಿರುಗಿದರೂ ಅವನ ಮುಖಕ್ಕೆ ಮುಖವಿಟ್ಟು ಕಲಿತನಂತೆ!

'ತರಣಿಗಭಿಮುಖನಾಗಿ ಶಬ್ದಶಾಸ್ತ್ರವ ಪಠಿಸಿ ।
ಉರವಣಿಸಿ ಹಿಂದು ಮುಂದಾಗಿ ನಡೆದ ॥'

ಎಂದು ಮತ್ತೊಂದು ಪದದಲ್ಲಿ ಶ್ರೀಪಾದರಾಯರು ವರ್ಣಿಸುತ್ತಾರೆ. ಭೀಮಸೇನನು ಮಗುವಾಗಿ ತಾಯ ತೊಡೆಯ ಮೇಲೆ ಮಲಗಿದ್ದಾಗ—

ಕರದಿಂದ ಶಿಶುಭಾವನಾದ ಭೀಮನ ಬಿಡಲು ।
ಗಿರಿಯೊಡೆದು ಶತಶೃಂಗವೆಂದೆನಿಸಿತು ।
ಹರಿಗಳ ಹರಿಗಳಿಂದ ಕರಿಗಳ ಕರಿಗಳಿಂದರೆವ ವೀರನಿಗೆ
ಸುರನರರು ಸರಿಯೆ?

ಎಂದು ವರ್ಣಿಸಿರುತ್ತಾರೆ. ವೀರಭದ್ರನ ರಣವೈಖರಿಯನ್ನು ವರ್ಣಿಸುವಾಗ ಹರಿದಾಸರು ಮೈಮರೆದು ಅದ್ಭುತದ ಎಲ್ಲೆಯನ್ನು ದಾಟಿ ಭಯಾನಕದ ಷಡ್ಜವನ್ನು ಮುಟ್ಟುತ್ತಾರೆ. ಹಿಂದೆ ಕೊಟ್ಟಿರುವ ದಕ್ಷಯಜ್ಞ ಧ್ವಂಸದ ಪದದ ನುಡಿಯನ್ನು ಮತ್ತೆ ಕಥನ ಮಾಡಿದರೆ ಅದು ಹೀಗಿದೆ:

ಮಖಮುಖನಾಯಕ ನಿಕರದ ಮುಡಿಗಳನು ।
ಮುಂಗೈಯಿಗೆ ಸುತ್ತುತ ।
ತಕತ ಧಿಮಿತ ತಕಧಿಕು ಎನೆ ಶಬ್ದವನು । ಕೇಳ್ನಗುತಿಹ ದಿಕ್ಪಾ
ಲಕರ ನೋಡಿ ತೀಕ್ಷ್ಣಕರದ ಖಂಡೆಯ ।
ಪ್ರಕಟಿಸಿ ಹೊಯ್ದವರ ಕರಚರಣಗಳ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಕಳಗೈಯೆ ಸುರನಿಕರವನೆಡೆಯೊಡೆಯೆ ।
ಅಕಟ ಮಹಾಪ್ರಳಯಕೆ ಸರಿಮಿಗಿಲೆನೆ ॥ ೨ ॥

ಹನುಮಂತನು ಲಂಕೆಯನ್ನು ದಹಿಸಿದ ಅದ್ಭುತವನ್ನು ವಾಲ್ಮೀಕಿಗಿಂತ ಅಡಕವಾಗಿ ಹೆಚ್ಚಾಗಿ ವರ್ಣಿಸಿರುವುದು ಹರಿದಾಸರ ಕೆಳಕಂಡ ಪದದಿಂದ ಗೊತ್ತಾಗುತ್ತದೆ:

ರಾಗ : ಪೂರ್ವಿ — ತಾಳ : ಅಟ್ಟ

ಲಂಕೆಯ ದಹಿಸಿದನು । ಶ್ರೀ ಹನುಮಂತ । ಲಂಕೆಯ
ದಹಿಸಿದನು ॥ ಪ ॥

ಲಂಕೆಯ ದಹಿಸಿದ । ಪಂಕಜಾಕ್ಷನ ಪಾದ ।
ಪಂಕಜಭ್ರಮರನಸುರಾರಿ ಗ । ಜಾಂಕುಶನು ನಿಶ್ಶಂಕೆ
ಯಿಂದಲ್ಲಿ ॥ ಅ ॥

ಕೆಟ್ಟ ದಶಾಸ್ಯ ಮುಂದರಿಯದೆ ಬಹುಮತಿ ।
ಗೆಟ್ಟುವಾ ನರಸಿಂಹರಾಜನ ವಾಲದೊ
ಳಿಟ್ಟ ಕಾಲಾಗ್ನಿ ಧಳ್ಪುರಿಗೊಂಡು ಗಗನವ ।
ಮುಟ್ಟಚುಂಬಿಸೆ ಕಿಡಿಗಳ ಕೋಟೆ ಧರಣಿಯೊಳ್
ಬೆಟ್ಟದಂತುದುರೆ ಚಿಳ್ಳಿಟ್ಟಂಬರವ ಘೋರ ।
ಲಟ್ಟಹಾಸದಿ ಕಂಠೀರವ ಗರ್ಜನೆಯ ಮಾಡಿ
ದಿಟ್ಟತನದಿ ದಶಕಂಠನಿದ್ದೆಡೆಗೆ ಧು ।
ಮ್ಮಿಟ್ಟು ಸಭೆಯೊಳಿರ್ದ ದನುಜರನೆಲ್ಲನೆ ।
ಬ್ಬಿಟ್ಟು ಪೌಲಸ್ತ್ಯನವಿಗತಾಂಬರನ ಮಾಡಿ ।
ಸುಟ್ಟುಮುಖಗಳನಂಬರವೀಧಿಪೊಗಿಸಿ ಬೆ
ನ್ನಟ್ಟ ಓಡಿಸಿ ಮರಳಿ ॥ ಅವನರಮನೆ । ಬಟ್ಟವಿಡಿದು ತೆರಳಿ ।
ಕೋಪದಿ ಗುಡು । ಗುಟ್ಟ ಕೆಂಡಗಳರಳಿ ।
ಮಾಣದೆ ರಾಣೀ ॥ ರುಟ್ಟು ತೊಟ್ಟದ ಸುಟ್ಟು ಬೊಬ್ಬೆಗ ।
ಳಿಟ್ಟು ಶೋಕಿಸೆ । ಬಟ್ಟಬಯಲೊಳು ॥ ೧ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಘನಕುಂಭಕರ್ಣ ಶಾರ್ದೂಲ ಧೂಮ್ರಾಕ್ಷ ರಾ |
ವಣಿಮಕರಾಕ್ಷಯೂಪಾಕ್ಷ ಪ್ರಹಸ್ತ ಕುಂ |
ಭನಿಕುಂಭ ಮಿತ್ರಘ್ನನತಿಕಾಯ ದೇವಾಂ | ತ |
ಕ ನರಾಂತಕ ಮಹೋದರಾದ್ರಿ ಮುಖಸುರ |
ಶನಿದಂಷ್ಟ್ರದುರ್ಮತ್ತ ವಿರುಪಾಕ್ಷಪಾರ್ಶ್ವಸಾ |
ರಣಶುಕ ವೃಶ್ಚಿಕ ರೋಮಹಿರೋಮ ಶೂ |
ರ್ಪನಖಿ ಯುದ್ಧೋನ್ಮತ್ತ ಮುಖ್ಯರಾಕ್ಷಸರಿಪ್ಪ |
ಮನೆಮನೆಗಳನೆಲ್ಲ ತಿರುಗಿ ತಿರುಗಿ ಪೊಕ್ಕು
ಅನಲನಿಂ ದಹಿಸಿ ಭಸ್ಮೀಭೂತವನುಗೈಸಿ |
ವಿನುತವಾಗಿಪ್ಪ ವಿಭೀ | ಷಣನರಮನೆ ||
ಯನು ನೋಡಿ ಇವ ಯೋಗ್ಯನು | ಶ್ರೀಹರಿಪಾದ |
ವನಜಗಳಿಗೆ ಭಕ್ತನು | ರಾಮನ ಕಾರ್ಯ |
ವನು ಮಾಡಲಿವ ಶಕ್ತನು | ಮುಂದಿವನೆ ಈ |
ದನುಜವಂಶವಿನಾಶನು | ಸಂಶಯ ಸಲ್ಲ || ದೆನುತ
ಲಾತನ ಮನೆಯ ರಕ್ಷಿಸಿ | ದನು ದಯಾವನರಾಶಿ ಹನುಮನು || ೨ ||

ಮುಂದೆ ಪೋಗುತ ಬ್ರಹ್ಮ ಕ್ಷತ್ರವಿಟ್ಶೂದ್ರರ |
ಮಂದಿರಗಳನು ಗೋಪುರ ದೇವಾಲಯಗಳ |
ವೃಂದಗಳನು ಕರಿಹಯ ರಥಶಾಲೆಯು |
ಸಂದೋಹಗಳನು ಶಸ್ತ್ರಾಸ್ತ್ರ ವಸ್ತ್ರಾಗಾರ | ದಂದ
ಗಳನು ಧನಧಾನ್ಯ ಸನ್ಮಣಿಗಣ |
ದಿಂದಿಪ್ಪ ಕೋಶರಾಜಿಗಳ ಮಲ್ಲಾಲಯ |
ಚಂದದಿಂದಿಹ ರಾಜವೀಧಿಗಳುಪವೀಧಿ |
ಕುಂದದಿಷ್ಟಾರ್ಥವನೀವ ಪುಣ್ಯವೀಧಿ |
ಸಂದುಗೊಂದುಗಳು ಗಾಯಕ ವಿಟ ನಟ ವೇಶ್ಯಾ |
ಸುಂದರಿಯರ ಸದನಂಗಳು ಸೌಧಗಳ್ ||
ಚಂದಿರಶಾಲೆಗಳು | ಕ್ರೀಡಾರ್ಹಕೆ | ಸಂದಿಹ ಭವನಂಗಳು |
ಏಕಾಂತಕಾ | ನಂದ ನಿವಾಸಗಳು |

Sri Vidyabharathi Book Centre, Sringeri

 CC-O. In Public Domain. Digitized by eGangotri

ಮುಂತಾದುದ ॥ ಬೆಂದು ನಿಂದುರಿವಂದದಲಿ ತನ್ನ ।
ತಂದೆಗೆಳೆಯಗೆ ವಂದಿಸುತ್ತಲಿ ॥ ೩ ॥

ಕೇರಿಕೇರಿಗಳಲ್ಲಿ ಬೀದಿಬೀದಿಗಳಲ್ಲಿ ।
ನಾರಿಯರನು ಕಾಣದರಸುವ ಪುರುಷರು
ನೀರೆಯರ್ಪತಿಗಳಿಂದಗಲಿ ಶೋಕಿಸುವರು ।
ಓರಂತೆ ಸುತರ ಕಾಣದೆ ಚಿಂತೆಬಡುವರು ।
ಘೋರಾಗ್ನಿಯಿಂ ಬೆಂದು ಬಳಲುವರ್ಕೆಲವರು ।
ನೀರ ತೋರೆಂದು ಬಾಯಾರುವರ್ಕೆಲವರು ।
ಚಾರುತರದೊಳುಟ್ಟ ವಸನಗಳುರಿಗೊಂಡು ।
ಸೂರೆಯಾಗಲು ಮಾನಕಳುಕಿ ಸಮುದ್ರದೊ
ಳ್ಹಾರಿಬಿದ್ದಸುವನೀಗುವರಾಗ ಕೆಲವರು ।
ನಾರಿಯ ತಂದೀತೆರನಗೈದನೂರನೆಂ ॥
ದಾರಾವಣನ ಬೈವರು । ಇನ್ನ್ಯಾಕೆ ಸಂ
ಸಾರವೆಂದಳಲುವರ । ಲಂಕೆಗೆ ಉರಿ ।
ಮಾರಿ ಈ ಕಪಿಯೆಂಬರು । ದೈತ್ಯರಿಗೆಲ್ಲ ।
ವೈರಿ ಭೂಸುತೆಯೆಂಬರು ॥ ಸತ್ಯ ನಾವಿ ॥
ನ್ನೂರಲಿನ್ನಿರಬಾರದೆನುತಲಿ । ಪೌರಜನಗಳು ಸಾರಿ ಗೋಳಿಡೆ ॥ ೪ ॥

ವಾನರನೋರ್ವನ ಪಿಡಿದು ವಾಲವನು ವೈ ।
ಶ್ವಾನರ ನಿಂದಲುರುಹಿ ಪುರದೊಳಗೆ ದ ।
ಶಾನನ ಮೆರೆಸುವನೆಂದು ತ್ರಿಜಟೆಯೊಳು ।
ದಾನವಿಯೋರ್ವಳುಸುರುತಿರಲದ ಕೇಳಿ ।
ಜಾನಕಿ ಚಿಂತಿಸಿ ವಹ್ನಿಸೂಕ್ತವ ನಿಜ ।
ಮಾನಸದಲಿ ಧ್ಯಾನವ ಮಾಡೆ ಅನಿಲನ
ಸೂನು ಚಂದನಲಿಪ್ತ ದೇಹನಾಗುತ ಪರ ।
ಮಾನಂದಸಾಂದ್ರನಾಗುತ ಮುಪ್ಪುರಗಳ ಈ
ಶಾನನುರುಹಿದಂತೆ ಖಚಿತ್ರಿಕಂಠನಪುರ ।
ಹೀನಾಲಂಕಾರವ ಮಾಡಿ ನೀರಧಿಯೊಳು ॥

Sri Vidyabharathi Book Centre, Sringeri

 CC-O. In Public Domain. Digitized by eGangotri

ಸ್ನಾನವ ಮಾಡಿ ಬೇಗ । ಸೀತಾದೇವಿ ।
ಯೇನಾದಳೆನುತಲಾಗ । ಚಿಂತಿಸಿ ಬಂದು
ಮಾನಿನಿಮಣಿಯ ರಾಗಾ । ನ್ವಿತದಿ ಕಂಡು ।
ತಾನಾಲಂಕೆಯ ಶಿಖಿಗಾ । ಹುತಿಯನಿತ್ತ ॥
ವೈನವೆಲ್ಲವ ತಿಳುಹಿದನು ಖಾದ್ರೀನೃಸಿಂಹಾ । ಧೀನಮಾರುತಿ ॥ ೫ ॥

ದಾಸರ ಪದಗಳೊಂದೊಂದನ್ನು ಓದುವಾಗಲೂ, ರಾಗತಾಳಗಳಲ್ಲಿ, ಕಾಲಗತಿಗಳಲ್ಲಿ, ಓದುಗರು ಓದಿದರೆ–ಹಾಡಿದರೆ–ಸಾಹಿತ್ಯದ ಗಾಂಭೀರ್ಯ, ಶಬ್ದಸಮೃದ್ಧಿ, ಅರ್ಥಪೂರ್ಣತೆ, ರಸಭಾವಗಳ ಆವಿರ್ಭಾವ, ಒಂದೊಂದೂ ಗೊತ್ತಾಗಿ ಆನಂದವಾಗುತ್ತದೆ. ಲಘುಮನಸ್ಸಿನಿಂದ ಹೊತ್ತುಕಳೆಯಲೆಂದು ಹಾಳೆಗಳನ್ನು ಮಗುಚಿದರೆ ಅರ್ಥವಾಗುವುದಿಲ್ಲ. ಈ ಒಂದೇ ಪದದಲ್ಲಿರುವ ಒಂದೊಂದು ಔಚಿತ್ಯ ನೋಡಿದರೂ ದಾಸಸಾಹಿತ್ಯದ ನಿಜಸ್ವರೂಪ ಗೊತ್ತಾಗುತ್ತದೆ. ಇದೇ ಕವಿಯು, ಶಿವನು ಯುದ್ಧಕ್ಕೆ ಹೊರಟಾಗ ಸಾಮಗ್ರಿಗಳನ್ನೊದಗಿಸಿಕೊಟ್ಟಿರುವುದನ್ನು ನೋಡಿದರೆ ಪುರಾಣಕಥೆಗಳಲ್ಲಿ ಕೊಟ್ಟಿರುವ ಅದ್ಭುತವೊಂದನ್ನೂ ಬಿಡದೆ, ಇದ್ದಷ್ಟನ್ನೂ ಮತ್ತಷ್ಟು ಸಂಗ್ರಹ ಮಾಡಿ ಸಂಪೂರ್ಣ ಮಾಡಿ ಕೊಟ್ಟಿರುವಂತೆ ಕಾಣುತ್ತದೆ. ಆ ಸಂಗತಿ ಪದ್ಯ ರೂಪದಲ್ಲಿ—

ಧರೆರಥ ವೇದಘೋಟೆ ಶಶಿಸೂರ್ಯರಥಾಂಗ ವಿಧಾತಸೂತ ನಿ
ರ್ಜರಗಿರಿಚಾಪ ಶೇಷಗುಣ ಮಾಧವನ ಕಾಂಡವಮಾಡಿ ಸಾಂಬ ಮು
ಪ್ಪುರಗಳ ಗೆಲ್ದುದೇನರಿದು ಮಾರುತಿಯೊಬ್ಬನೆ ಲಂಕೆಯನು ಥ
ಳ್ಳುರಿಗೆಡೆಗೊಟ್ಟನಚ್ಚರಿಯಿದೆಂದು ಸುರರ್ನುತಿಗೈದರಭ್ರದೊಳ್ ॥ ೧ ॥

ಎಂಬಂತಿದ್ದು, ಶಿವನು ಅಷ್ಟೊಂದು ಸಾಮಗ್ರಿಗಳ ಸಹಿತ ಯುದ್ಧಮಾಡಿ ಮುಪ್ಪುರಗಳನ್ನು ಸುಟ್ಟದ್ದು ದೊಡ್ಡದಲ್ಲ; ಮಾರುತಿಯೊಬ್ಬನೇ ಇಷ್ಟು ಕಾರ್ಯವನ್ನು ಮಾಡಿದ್ದು ಆಶ್ಚರ್ಯ; ಎಂದು ದೇವತೆಗಳು ನುಡಿದಂತೆ ಅವರ ಬಾಯಿಗೆ ಈ ಮಾತನ್ನು ಹಾಕಿ ನುಡಿಸಿಬಿಟ್ಟಿದ್ದಾನೆ.

ಅದ್ಭುತರಸದ ಸವಿಯುಂಡು ಶ್ರಮ ಪರಿಹಾರಕ್ಕೆ ಸ್ವಲ್ಪ ಹಾಸ್ಯ ಬೇಕೆಂದು ಬಯಸುವವರಿಗೆ ಹರಿದಾಸರ ತಿಳಿಹಾಸ್ಯ ಕೆಳಕಂಡಂತಿರುತ್ತದೆ:

Sri Vidyabharathi Book Centre, Sringeri

 CC-O. In Public Domain. Digitized by eGangotri

ಹಾಸ್ಯರಸದಲ್ಲಿ

ರಾವಣನ ಸಭೆಯಲ್ಲಿ ತಾನಿಂಥವನೆಂದು ಪರಿಚಯಮಾಡಿಸಿ, ಸಿಂಹಾಸನಾರೂಢನಾಗಿರುವ ರಾವಣನನ್ನು ನೋಡಿ, ರಾವಣನೆಂಬುವನು ನೀನೇನೇ ಎಂದು ಕೇಳುವ ವ್ಯಾಜವಿಟ್ಟುಕೊಂಡು ಮಾರುತಿಯು ಹಾಸ್ಯಮಾಡಿ ಬುದ್ಧಿ ಹೇಳುತ್ತಾನೆ:

ರಾಗ : ದ್ವಿಜಾವಂತಿ — ತಾಳ : ಆದಿ

ನೀನೇನೇ ರಾವಣನೆಂಬಾತನು | ದಾನವವಂಶಜನು | ದಶಮುಖ || ಪ ||

ಭಾನುಕುಲೇಶ್ವರರಿಲ್ಲದ ಸಮಯದಿ | ಜಾನಕಿದೇವಿಯ ಚೌರ್ಯದಿ
ತಂದವ || ಅ ||

ಸುರನರ ಉರಗರ ಪರಿಭವಗೊಳಿಸಿದೆ | ಸರಿ ಎನಗಾರೆಂಬ | ಗರ್ವದಿ
ಹರನ ಗಿರಿಯ ನೀ ನೆಗಹಲು ತೋಳ್ಗಳು | ಗಿರಿಯಲಿ ತಗಲಿರಲು | ನೋಯುತ
ಹರುಷವಳಿದು ಸಾ | ಸಿರವರುಷಂಗಳು | ನರಿಯೊರಲುವ ಪರಿ |
ನರಳಿದ ಧೀರನು || ೧ ||

ವನಜಭವನ ವರ | ವೆನಗುಂಟೆಂಬುವ | ಘನತರವಹ ಮದದಿ | ಪೂರ್ವದಿ |
ಜನನುತ ಕಾರ್ತವೀರ್ಯನೊಳಾಹವದಲಿ | ಸೆಣಸಿ ದುರುಳತನದಿ | ತಿಳಿಯದೆ ||
ವಿನುತ ಭುಜಸಹ | ಸ್ರನ ಪುರದಲ್ಲಿ ಸೆರೆ | ಮನೆಯೊಳು ಸಿಲುಕಿ | ಬದುಕಿ
ಬಂದಾತನು || ೨ ||

ಬಲದೊಳಧಿಕನೆಂಬಮಾಹಂಕಾರದ | ಜಲಧಿಯೊಳೋಲಾಡಿ | ನೀನಿರು
ತಲಿರಲು ವಾಲಿ ನಿನ್ನನು ಪಚ್ಚುತಲೆಯ | ಹುಳುವೆನುತಲಿ ಪಿಡಿದು| ನಿಜಸುತ||
ಮಲಗಿಹ ತೊಟ್ಲಗೆ ಬಂಧಿಸೆ ಶಿಶುಪದ | ಗಳಲಳವಡಿಸಲು |
ಪಲುಕಿರಿದಾತನು || ೩ ||

ಕಾಮಾತುರದಲಿ ಬಹುಪತಿವ್ರತೆಯರ | ನೇಮವಳಿದು ಮರುಳಾ | ಪಿಂಗಳ |
ತಾಮಸರೊಳಗಗ್ರೇಸರನಾಗುತ | ನೀ ಮಾಣದೆ ವೇದಾ | ವತಿಯನು ||
ಕಾಮಿಸಿ ಪಿಡಿಯಲು ಕಡುಖತಿಗೊಳುತಲಿ | ಕಾಮಿನಿ ಶಪಿಸಲು |
ಕರದಲಿ ತಾಳ್ದವ || ೪ ||

Sri Vidyabharathi Book Centre, Sringeri

CC-O. In Public Domain. Digitized by eGangotri

ಜಗದೊಳಗನುಪಮ | ಸಾಹಸನೆನುತಲಿ | ನಗಜಾಧೀಶ್ವರನ | ಚಾಪವ |
ನೆಗಹುವೆನೆನುತಡಿಯಲಿ ಬಿದ್ದಳಲುತ/| ನಗೆಗೊಳಗಾಗುತಲಿ | ಲಜ್ಜೆಯ ||
ಬಗೆಯದೆ ಕಡೆಯಲಿ ಖಾದ್ರಿನೃಸಿಂಗನ | ಹಗೆಯ ಮಾಡಿಕೊಂಡು |
ಹಗರಣವಾದವ || ೫ ||

ಇದು ಹೀಗಿದ್ದರೆ, ಭಾರತದಲ್ಲಿ ದ್ರೌಪದೀಸ್ವಯಂವರ ಘಟ್ಟದಲ್ಲಿ ಮತ್ಸ್ಯಯಂತ್ರವನ್ನು ಕತ್ತರಿಸುವ ಸಂದರ್ಭದಲ್ಲಿ ಒಬ್ಬರಾಗುತ್ತಲೊಬ್ಬರು ರಾಜರು ಬಂದು ಸೋಲುತ್ತಿರಲು ಮದ್ರಾಧಿಪತಿಯಂಥವನು ಸಹ ಬಿದ್ದುದನ್ನು ಕಂಡು ಸ್ತ್ರೀಯರು—

ವಾರ್ಧಿಕ ಷಟ್ಪದಿ||

ಕೈಯ್ಹೊಡೆದು ನಗುತಿರ್ದರಬಲೆಯರ್ ಮಾದ್ರೀಶ
ಸೈಯ್ಯ ಸೈ ಸೈ ಶಬಾಸ್ಸೆಯೆನಲು ಮಿಡಿದೆರ್ದು
ಮಯ್ಯಧೂಳಿಯಲಿಂದ ಮುರಿದೋಡುತಿರಲಾಗ ಶಲ್ಯನಂ ಕಂಡು ಕರ್ಣ
ವಯ್ಯಾರದಿಂದ ಮುಂಗೈಯ ಸರಪಳಿ ತಿರುಹು
ತೊಯ್ಯನೈತಂದವನ ನೋಡಿ ಭೂಪತಿಮುನಕೆ
ಪ್ರೀಯವಾಗಿದೆ ಇವನ ಸೌಂದರ್ಯ ಫಲುಗುಣನ
ಪರಿಯೆಂದು ಭ್ರಮಿಸಿನಿಂದ ||೧||

ಕರ್ಣನೂ ಪರಾಜಿತನಾಗುತ್ತಾನೆ. ಬಲರಾಮನನ್ನು ಶ್ರೀಕೃಷ್ಣನು ಮತ್ಸ್ಯಯಂತ್ರದ ಗೊಡವೆ ಬೇಡೆಂದು ತಡೆಯುತ್ತಾನೆ. ಬ್ರಾಹ್ಮಣಸಭೆಯಲ್ಲಿ ಶಿಷ್ಯವೃತ್ತಿಯವನಂತೆ ಕುಳಿತಿದ್ದ ಛದ್ಮವೇಷಧಾರಿ ಅರ್ಜುನನನ್ನು ಕೃಷ್ಣನು ನೋಡುತ್ತಾನೆ. ವೈದಿಕ ಬ್ರಾಹ್ಮಣ ವೇಷದಿಂದ ಮತ್ಸ್ಯಯಂತ್ರವನ್ನು ಕತ್ತರಿಸಲು ಬಂದ ಅರ್ಜುನನನ್ನು ನೋಡಿ ಬ್ರಾಹ್ಮಣರು ಹಾಸ್ಯ ಮಾಡುತ್ತಾರೆ. ಅದರ ಬಗೆ ಕೆಳಕಂಡಂತಿದೆ:

ಆರ್ಯ|| ಏನೀ ಬ್ರಾಹ್ಮಣ ಎದ್ದುನಿಂತಿಹನು |
ಮಾನನಿಧಿಗಳೆಲ್ಲರು ಇರಲು
ಮಾನಿನಿಯಳ ಮೇಲಾಶೆಗೈದಿಹನು |
ಮೀನಕೇತನನ ಬಾಧೆಯೊಳು ||೧||

Sri Vidyabharathi Book Centre, Sringeri

 CC-O. In Public Domain. Digitized by eGangotri

ಬಾಣಾಸನ ಕೃಷ್ಣಾಜಿನವಲ್ಲಿದು
ತಾನೆತ್ತಲು ಪೃಥುಕದ ಗಂಟೇ
ಏನಿದು ಔಪಾಸನದ ಕೊಳವಿಯೊ
ಶ್ರೀನಿಧಿ ದಯ ಇವನಲ್ಲುಂಟೇ ॥ ೨ ॥

ಹಗರಣ ಮಾಡುವ ಬ್ರಾಂಹರನೆಲ್ಲರ ।
ನಗೆಗೇಡಾಗುವದೀ ಸಭೆಗೆ
ಸೊಗಸು ಭೋಜನ ದಕ್ಷಿಣೆ ಉಡುಗೊರೆ ।
ಹಗೆಯಾಯಿತು ಸಿದ್ಧವು ನಮಗೆ ॥ ೩ ॥

ಮತ್ತೆ,

ರಾಗ : ಧನಾಸರಿ — ತಾಳ : ಆದಿ

ಎದ್ದುದ್ದೇನು ಕಾರಣವಯ್ಯ । ಕಾರಣವಯ್ಯ ॥ ಪ ॥
ಈ । ಮುದ್ದುಮೋಹನಾಂಗಿಗೆ ಮೋಹಿಸಿ
ನೀನೆದ್ದುದ್ದೇನು ॥ ಅ ॥

ಗದ್ದುಗೆಯುವರೆಲ್ಲ । ಬಿದ್ದದ್ದು ನೋಡಿ । ಈ ।
ಮುದ್ದಿಗೊಳಿನಮುದ । ಬುದ್ಧಿಯಿಂದ ನೀ ॥ ೧ ॥

ತರುಣಿಯು ಕಾಂತಿಗೆ । ತರಣಿ ನಾಚುವನು । ನಿ ।
ನ್ನಿರುವಿಕೆ ಸಭೆಗೆ ಗಾ । ಬರಿಗೈಸುತಲಿ ॥ ೨ ॥

ಈ ಸಭೆಯೊಳ್ ಕಮ । ಲೇಶವಿಠಲ ತನ್ನ
ದಾಸರಭೀಷ್ಟೆ ಪೂ । ರೈಸುವದರಿತು ನೀ ॥ ೩ ॥

ಭಯಾನಕರಸದಲ್ಲಿ

ನಮ್ಮ ಶಾಸ್ತ್ರದಲ್ಲಿ ಮಾಡಬೇಕಾದುದನ್ನು ಮಾಡಬೇಕೆಂದು ವಿಧಿಸುತ್ತಾರೆ. ಮಾಡಬಾರದುದನ್ನು ಮಾಡಕೂಡದೆಂದು ನಿಷೇಧಿಸುತ್ತಾರೆ. ಅಷ್ಟು ಮಾತ್ರದಿಂದ ಜನರು ವಿಧಿಗೊಳಗಾಗುವುದಿಲ್ಲ. ಮಾಡಬೇಕಾದುದನ್ನು ಮಾಡುವುದಿಲ್ಲ, ಬಿಡಬೇಕಾದುದನ್ನು ಬಿಡುವುದಿಲ್ಲ. ಅದಕ್ಕಾಗಿ ಕೆಲವು ಆಶೆಗಳನ್ನೂ ಭಯಗಳನ್ನೂ ತೋರಿಸಬೇಕಾಗುತ್ತದೆ. ಆಶೆಯೆಂದರೆ ಪರ

Sri Vidyabharathi Book Centre, Sringeri

CC-O. In Public Domain. Digitized by eGangotri

ಲೋಕದಲ್ಲಿ ಒಳ್ಳೆಯದಾಗುವುದೆಂಬುವುದು. ಭಯವೆಂದರೆ ಪರಲೋಕದಲ್ಲಿ ಕೆಟ್ಟದಾಗುವುದೆಂಬುದು. ಅಷ್ಟಲ್ಲದೆ ಆಣೆ ಹಾಕಿದಂತೆ ಕೆಲವು ಮಾತನ್ನೂ ಹೇಳುತ್ತಾರೆ. ಇದರಂತೆ ರಾಜ್ಯಾಂಗದಲ್ಲಾದರೂ ನಿಯಮಗಳೇರ್ಪಟ್ಟಿವೆ. ಹೆಚ್ಚು ನಿಯಮಗಳಿಗೊಳಪಟ್ಟ ಜನಾಂಗವು ನಾಗರಿಕ ಜನಾಂಗವೆನಿಸುತ್ತದೆ. ಶಾಸ್ತ್ರದಲ್ಲಿ ಹೆಚ್ಚು ವಿಧಿಬದ್ಧನಾದವನು ಶಿಷ್ಟನೆನಿಸುತ್ತಾನೆ. ಆಗದವನು ದುಷ್ಟನೆನಿಸಿಕೊಳ್ಳುತ್ತಾನೆ.

ಹಿಂದೂ ಜನಸಾಮಾನ್ಯರಲ್ಲಿ ಏಕಾದಶೀ ವ್ರತವು ಎಲ್ಲ ವ್ರತಗಳಿಗಿಂತ ಶ್ರೇಷ್ಠ ವ್ರತವೆಂಬ ನಂಬಿಕೆಯಿದೆ. ಏಕಾದಶೀ ವ್ರತ ಮಾಡಿದವರಿಗೆ ಮಹಾ ಫಲವಿದೆಯೆಂದು ಹೇಳುವ ಪುರಾಣಗಳಿವೆ. ವ್ರತ ಮಾಡದವರಿಗೆ ಕೆಲಕೆಲವು ಭಯಗಳೂ ಆಣೆಗಳೂ ಇವೆ. ಶಾಸ್ತ್ರದ ಮಾತನ್ನು ಹರಿದಾಸರು ಕೆಳಕಂಡ ದೇವರ ನಾಮದಲ್ಲಿ ಹಾಡಿ ಭಯ ತೋರಿಸಿದ್ದಾರೆ.

ರಾಗ : ಪಂತುವರಾಳಿ — ತಾಳ : ಅಟ್ಟ

ಹರಿದಿನದಲಿ ಉಂಡ ನರರಿಗೆ | ಘೋರ |
ನರಕ ತಪ್ಪದು ಎಂದು ಶ್ರುತಿ ಸಾರುತಲಿದೆ || ಪ ||

ಒಂದೊಂದು ಅಗಳಿಗೆ ಕ್ರೋಟಿ ಕ್ರಿಮಿಗಳು |
ಅಂದಿನನ್ನವು ನಾಯಿ ಮಾಂಸವು
ಮುಂದರೋದ್ಧಾರನ ದಿನದಲ್ಲುಂಡವರನ್ನು |
ಹಂದಿಯು ಸುಡುವಂತೆ ಸುಡಿಸುವ ಯಮನು || ೧ ||

ಗೋವುವಿಪ್ರರುಗಳ ಕೊಂದ ಪಾಪ |
ಸಾವಿರ ಜೀವಹತ್ಯದ ಪಾಪ
ಭಾವಜನಯ್ಯನ ದಿನದಲುಂಡವರನ್ನು |
ಕೀವಿನೊಳಗೆ ಹಾಕಿಸುವನು ಯಮನು || ೨ ||

ಅನ್ನೋದಕ ತಾಂಬೂಲ ದರ್ಪಣ ನೋಟ |
ಭಿನ್ನ ಅವಸ್ಥೆಗಳು ವಿಶೇಷದಿ
ತನ್ನ ಸತಿಯ ಸಂಗಮಾಡಿದ ಮನುಜನ |
ಬೆನ್ನಿನ ಕರುಳಾ ಬಗೆಸುವ ಯಮನು || ೩ ||

Sri Vidyabharathi Book Centre, Sringeri

 CC-O. In Public Domain. Digitized by eGangotri

ಝೂಾವದ ಜಾಗರ ಕ್ರತು ನಾಲ್ಕುಸಾವಿರ ।
ಝೂಾವ ನಾಲ್ಕರ ಫಲವಿಂತಿಯಿಲ್ಲವ್ರೋ
ದೇವದೇವೇಶನ ದಿನ ನಿದ್ರೆಗೈವರ ।
ಕಾವಲಿ ಮೇಲಿಟ್ಟು ಸುಡಿಸುವ ಯಮನು ॥ ೪ ॥

ಇಂತು ಏಕಾದಶಿಯುಉಪವಾಸ ಜಾಗರ ।
ಸಂತಸದಿಂದ ಮಾಡುವ ಜನಕೆ ।
ಸಂತೋಷಗಳನಿತ್ತು ಪೊರೆಯುವ
ಲಕ್ಷ್ಮೀಕಾಂತನು ನಮ್ಮ ಶ್ರೀ । ಪುರಂದರವಿಠಲ ॥ ೫ ॥

ಬೀಭತ್ಸರಸದಲ್ಲಿ

ರಕ್ತಮಾಂಸಮದ್ಯವ್ರಣ ಇಂತಹುದನ್ನು ಕೇಳಲು ಕರ್ಕಶ; ನೋಡಲು ಅಸಹ್ಯ; ವಿಷಯವನ್ನು ವರ್ಣಿಸಿ ಹೇಳಿದರೆ ಅದು ಬೀಭತ್ಸವೆನಿಸುತ್ತದೆ. ವೀರರಸದಲ್ಲಿ ಕ್ರೌರ್ಯ ಬಂದ ಕೂಡಲೇ ಅದು ರೌದ್ರವಾಗುತ್ತದೆ. ರೌದ್ರದ ಎಲ್ಲೆ ಮೀರಿದರೆ ಅದೇ ಬೀಭತ್ಸವೆನಿಸುತ್ತದೆ. ವೀರರಸದಲ್ಲಿ ಇವೆರಡರ ಸಮಾವೇಶವೂ ಆಗುವುದರಿಂದ ಬೀಭತ್ಸವೆಂದು ಪ್ರತ್ಯೇಕ ಮಾದರಿಯನ್ನು ಬರೆಯುವುದು ಯೋಗ್ಯವಲ್ಲ. ಭಯಾನಕದಲ್ಲಿ ಕೊಂಚ ಬೀಭತ್ಸವೂ ಬಂದಿರುವುದರಿಂದ ಅದಷ್ಟು ಭಾಗವನ್ನು ಬೀಭತ್ಸವೆಂದುಕೊಳ್ಳಬಹುದು. ನರಕ ಯಾತನೆಗಳನ್ನು ವರ್ಣಿಸುವ ಹಾಡುಗಳಿದ್ದರೂ ಕೊಡಲು ಮನವು ಒಡಂಬಡುವುದಿಲ್ಲ.

ರೌದ್ರರಸದಲ್ಲಿ

ಭೀಮಸೇನನು ದುಶ್ಶಾಸನನನ್ನು ರಣಾಂಕಣದಲ್ಲಿ ಕೆಡಹಿ ಅವನ ವಕ್ಷಃಸ್ಥಳವನ್ನು ಬಗೆದು ಕುಣಿದಾಡಿದ ದೃಶ್ಯವೊಂದು ಭಾರತದಲ್ಲಿ ಬರುತ್ತದೆ. ಅದನ್ನು ಬರೆಯುವಾಗಲೂ ಎಲ್ಲೆಮೀರದೆ ಬರೆದಿರುವ ಒಂದು ನುಡಿಯನ್ನು ಕೆಳಗೆ ಓದಬಹುದು. ಆದರ ಮುಂದಿನ ನುಡಿಯನ್ನು ನೋಡಿದರೆ ಭೀಮನಲ್ಲಿ ಭಕ್ತಿ ಬರುತ್ತದೆ. ಈ ನುಡಿ ಓದಿದರೆ ಭಯವಾಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಗ : ಪದ — ತಾಳ : ಅಟ್ಟ

ಜಯ ಜಯ ಭೀಮಸೇನ ‖ ಪ ‖

ಜಯ ಭೀಮಸೇನ ದುರ್ಜಯ ಪರಾಕ್ರಮ ಧೀರ ।
ದಯಾಪಯೋನಿಧಿಯೆ ನಿರ್ಭಯ ವೈಷ್ಣವಾಗ್ರಣಿ ‖ ಅ ‖

ಮಣಿಮಯ ರಥವೇರಿ । ಫಣಿಕೇತನನನುಜನು ।
ರಣದಿ ದುರ್ಗಣನು ಮಾ । ರ್ಗಣಗಣಾಂಗಣದೊಳು
ರಣ ಅಂಗಣದಿ ನಿನ್ನ ಸೆಣೆಸಲಾಕ್ಷಣ ನೋಡಿ ।
ತೃಣಮಾಡಿ ಗದೆಯಿಂದ ಹಣಿದು ಹಣೆಯ ಮೆಟ್ಟಿ
ಕುಣಿಯುಲಾಭರಣವು ಝಣಕು ಕಿಂಝಣಕೆನ್ನೆ ।
ರಣದಿ ನುಡಿದ ವಾಕ್ಯಋಣವ ತೀರಿಸಿ ಅತ್ಯು ‖
ಲ್ಬಣದಿಂದವಗೆ ಲಂಘಿಸಿ । ವಕ್ಷದಿ ರಕ್ತ ಕೊಣನ ಶಸ್ತ್ರದಿ ನಿರ್ಮಿಸಿ ।
ಕಾದಾಡಿ ಕೂಗಿ । ರಣದೊಳೊಪ್ಪಿದೆ ನಿನಗೆಣೆಯಿಲ್ಲವೆನಿಸಿ ‖

ದುಶ್ಶ್ಯಾಸನನ ವಕ್ಷಃಸ್ಥಳದ ರಕ್ತಪಾನ ಮಾಡಿದನೆಂದಾಗಲಿ, ಅವನ ಹಲ್ಲುಗಳ ಬಾಚಣಿಗೆಯಿಂದ ದ್ರೌಪದಿಯ ಕೆದರಿದ ಮುಡಿಯನ್ನು ರಕ್ತಬಳಿದು ಬಾಚಿದನೆಂದಾಗಲಿ ಹೇಳುವಷ್ಟು ದೂರ ದಾಸರು ಹೋಗಿಲ್ಲ.

ಶಾಂತರಸದಲ್ಲಿ

ಪ್ರಸಕ್ತ ಶಾಂತರಸದಿಂದ ರಸಾಧ್ಯಾಯವು ಸಂಪೂರ್ಣವಾದರೆ, ರಸಗಳ ಸಂಖ್ಯೆ ಒಂಬತ್ತಾಗುತ್ತದೆ. ನವವಿಧ ಭಕ್ತಿಯೆಂದು ಭಾಗವತ ಕಾಲದಿಂದ ಪ್ರಸಿದ್ಧಿಯಿರುವಂತೆ, ನವರಸಗಳೆಂಬ ಪ್ರಸಿದ್ಧಿಯನ್ನೂ ಪ್ರೋಷಿಸಿದಂತಾಗುತ್ತದೆ. ಭರತಮುನಿಯ ಮತದಂತೆ ರಸಗಳು ಎಂಟು ಮಾತ್ರ. ಮಹಾಕವಿ ದಂಡಿಯು ಭರತಮುನಿಯನ್ನು ಅನುಸರಿಸಿ ಮಹಾಕಾವ್ಯಗಳನ್ನು ಬರೆದನು. ಅಗ್ನಿಪುರಾಣದಲ್ಲಿ ಅಂಗೀಕೃತವಾಗಿರುವ ಶಾಂತರಸವನ್ನು ರುದ್ರಭಟ್ಟನೂ ಹರಿಚಂದ್ರನೂ ಸ್ವೀಕರಿಸಿದರು. ಅನಂತರ ವಾತ್ಸಲ್ಯವೂ ಒಂದು ರಸವಾಯಿತು. ಬರುತ್ತ ಬರುತ್ತ ಉಪನಿಷತ್ಕಾಲದ 'ರಸ' ಶಬ್ದಾರ್ಥವು ಕೇವಲ ವೈಷಯಿಕ ರಸವಾಗಿ ರಾಜಸವಾಯಿತು. ಸ್ವಚ್ಛಂದವಾಗಿ ಬೆಳೆಯು

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ತಿರುವ ರಸಕಾವ್ಯಗಳಿಂದ ಆಗುವ ಮಾನಸಿಕ ಪರಿಣಾಮವನ್ನು ಚೈತನ್ಯ ಪಂಥಿಗಳು ತಡೆದು ಕೇವಲ ಸಾತ್ವಿಕಾರ್ಥದ ಐದು ರಸಗಳಲ್ಲಿ ಸಾಧನೆ ಗಳನ್ನೇರ್ಪಡಿಸಿದರು. ಕರ್ಣಾಟಕದ ಹರಿದಾಸರಾದರೂ ಭಕ್ತಿಯ ಬೆಳವಳಿ ಕೆಗೆ ಅನುಕೂಲವಾಗುವ ರೀತಿಯಲ್ಲಿ ರಸ ವಿಕಾಸವಾಗುವ ಸಾಹಿತ್ಯಗಳನ್ನು ಬರೆದು ತಾವು ಅನುಭವಿಸಿ ತನ್ಮಯರಾಗಿ ಲೋಕಕ್ಕೂ ಹಂಚಿದರು. ಶಾಂತ ರಸದಲ್ಲಿರುವುದು ವೈರಾಗ್ಯ ಮತ್ತು ಅದರಿಂದುಂಟಾಗುವ ತೃಪ್ತಿ. ಮಾನವ ಜನ್ಮದ ಅಸ್ಥಿರತೆ, ಪರಾಧೀನತೆ ಮೊದಲಾದವು ಶಾಂತರಸದಲ್ಲಿ ಸಮಾವೇಶ ವಾಗುತ್ತವೆ. ಶಾಂತರಸಕ್ಕೆ ಹೊಂದಿದ ಸಾಹಿತ್ಯವು ಹೇರಳವಾಗಿ ಇರುತ್ತದೆ.

'ನ ಸಾಧಯತಿ ಮಾಂ ಯೋಗೋ ನ ಸಾಂಖ್ಯಂ ಧರ್ಮ ಉದ್ಧವ॥ ನ ಸ್ವಾಧ್ಯಾಯಸ್ತಪಸ್ತ್ಯಾಗೋ ಯಥಾ ಭಕ್ತಿರ್ಮಮೋರ್ಜಿತಾ' ಎಂಬ ಭಾಗವತ ಏಕಾದಶಸ್ಕಂಧದ ಉಕ್ತಿಯಂತೆ ಶಾಂತಭಾವವನ್ನು ತಳೆದ ಮಾನವನು ಸಿದ್ಧನೆನಿಸುತ್ತಾನೆ, ತೃಪ್ತನಾಗುತ್ತಾನೆ, ಜೀವನ್ಮುಕ್ತನಾಗು ತ್ತಾನೆ. ಅವನ ಮಾತಿನಲ್ಲಿ ಶಾಂತತೆಯು ಸರ್ವದಾ ನೆಲೆಸಿರುತ್ತದೆ. ಶಾಂತಿ ಯಿಂದ ತೃಪ್ತಿಯುಂಟಾಗುತ್ತದೆ. ಶ್ರೀಮದ್ಭಗವದ್ಗೀತೆಯಲ್ಲಿ ಶ್ರೀಕೃಷ್ಣನು,

ಅದ್ವೇಷ್ಟಾ ಸರ್ವಭೂತಾನಾಂ ಮೈತ್ರಃ ಕರುಣ ಏವಚ
ನಿರ್ಮಮೋ ನಿರಹಂಕಾರಃ ಸಮದುಃಖಸುಖಃ ಕ್ಷಮೀ ॥ ೧೩ ॥

ಸಮಶ್ಶತ್ರೌ ಚ ಮಿತ್ರೇ ಚ ತಥಾ ಮಾನಾಪಮಾನಯೋಃ
ಶೀತೋಷ್ಣಸುಖದುಃಖೇಷು ಸಮಸ್ಸಂಗವಿವರ್ಜಿತಃ ॥ ೧೮ ॥

(ಅಧ್ಯಾಯ XII)

ಎಂದು ಹೇಳಿರುವಂತೆ ಅವನಲ್ಲಿ ಸಮಭಾವವು ತಾನೇ ತಾನಾಗಿರುತ್ತದೆ. ಅವನ ಮಾತಿನಲ್ಲಿ ಸ್ಥಾಯೀಭಾವವಿರುತ್ತದೆ. ಇಂತಹ ನಿರ್ವೇದ ಸ್ಥಿತಿಯಲ್ಲಿ ಪುರಂದರದಾಸರು ವ್ಯಾಸರಾಯರಿಂದ ಅಂಕಿತೋಪದೇಶ ಪಡೆದು 'ಇಂದಿನ ದಿನವೇ' ಎಂಬ ಉಗಾಭೋಗವನ್ನು ಹಾಡಿದ ನಂತರ ಪ್ರಶಾಂತಿಯ ಪರಮಾವಧಿಯಲ್ಲಿ ನಗರವೀಧಿಯಲ್ಲಿ ಬರುತ್ತಾ—

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಗ : ಎರುಕುಲ ಕಾಂಬೋದಿ — ತಾಳ : ಆದಿ

ಕೃಷ್ಣಮೂರ್ತಿ । ಕಣ್ಣಮುಂದೆ । ನಿಂತಿದ್ದಂತಿದೆ ॥ ಪ ॥

ಮಸ್ತಕದಲಿ ಮಾಣಿಕದ ಕಿರೀಟ ।
ಕಸ್ತೂರಿತಿಲಕದಿಂದೆಸೆವ ಲಲಾಟ
ಸಿಸ್ತಾಗಿ ಕೊಳಲನೂದುತ ಓರೆನೋಟ ।
ಕೌಸ್ತುಭ ಎಡಬಲದಲ್ಲಿ ಓಡಾಟ ॥ ೧ ॥

ಮುಘಮುಘಿಸುವ ಸೊಬಗಿನ ಸುಳಿಗುರುಳು ।
ಚಿಗುರು ಶ್ರೀತುಲಸಿಮಾಲೆಯ ಕೊರಳು
ಬಗೆಬಗೆ ಹೊನ್ನುಂಗುರವಿಟ್ಟ ಬೆರಳು ।
ಸೊಗಸಿನ ನಾಭಿಯು ತಾವರೆ ಅರಳು ॥ ೨ ॥

ಉಡುದಾರ ಒಡ್ಯಾಣ ನಿಖಿಲಾಭರಣ ।
ಬೆಡಗ ಪೀತಾಂಬರ ಶತರವಿಕಿರಣ
ಕಡಗನೂಪುರಗೆಜ್ಜೆಗಳನಿಟ್ಟ ಚರಣ ।
ಒಡೆಯ ಪುರಂದರವಿಠಲನ ಕರುಣ ॥ ೩ ॥

ಎಂಬ ಪದವನ್ನು ಹಾಡಿದರು.

ಕೆಳಕಂಡ ಸುಳಾದಿಯಲ್ಲಿ ಶಾಂತರಸದ ತೃಪ್ತಿಯ ಉದ್ಗಾರಗಳಿವೆ.

ಧ್ರುವತಾಳ

ನಿನ್ನ ಚಿತ್ತ ಎನ್ನ ಭಾಗ್ಯ । ಇನ್ನೊಬ್ಬರಿನಗಿಲ್ಲ ।
ಮನ್ನಣೆ ಅಮನ್ನಣೆ ನಿನ್ನದೊ ಸರ್ವೇಶ
ಬೆನ್ನ ಕೊಟ್ಟೆನೊ ನಿನಗೆ ಎನ್ನ ಏನನ್ನ ಮಾಡೋ
ಸನ್ನುತಾಂಗ ಶ್ರೀ ಶ್ರೀನಿವಾಸ
ನಿನ್ನ ಬಣ್ಣಿಸಿ ನಾನು ಘನ್ನ ಬೇಡುವದಿಲ್ಲ ।
ಎನ್ನದೆಂಬಹಂಕಾರವನ್ನು ಬಿಡಿಸೊ ದೇವ
ಎನ್ನ ಸಂಕಲ್ಪವೆಲ್ಲ ನಿನ್ನ ಅಧೀನವಯ್ಯ
ನಿನ್ನ ಸಂಕಲ್ಪಕಿನ್ನು ಭಿನ್ನಭಿನ್ನಗಳಿಲ್ಲ

Sri Vidyabharathi Book Centre, Sringeri

 CC-O. In Public Domain. Digitized by eGangotri

ಎನ್ನಿಚ್ಛಾಪ್ರೇರಕ ಎನ್ನೊಡೆಯನೆ ಕೇಳೊ ।
ಮನವಚನಕಾಯದಿಂದ ಇನ್ನೊಂದ ಹಾರೈಸೆ
ಬಿನ್ನಪ ಮಾಡುವೆ ಇದನೆ ನಿಲ್ಲಿಸಿಕೊಡು ।
ಇನ್ನುಮುನ್ನೆಂದೂ ಇದೆ ಸಿದ್ಧವಯ್ಯ
ಚಿನ್ಮಯಮೂರುತಿ ಗೋಪಾಲವಿಠಲ ।
ನಿನ್ನ ಬಿಡಲರಿಯೆ ಅನ್ಯರಿಗಾಲ್ಪರಿಯೆ ॥ ೧ ॥

ಮಟ್ಟತಾಳ

ನಿನ್ನಿಂದಲಿ ದತ್ತವಾಗದ ವಸ್ತು ।
ಅನ್ನಂಶವಿದ್ದರು ಅದು ಎನಗೆ ಬೇಡ
ಅನ್ಯಕರ್ಮವ ಮಾಡಿ ಅನ್ಯದೇವರ, ಬೇಡಿ ।
ಎನ್ನುದರ ಪೂರ್ತಿಯನ್ನು ಮಾಡಲಾರೆ
ಬಣ್ಣಗೆಟ್ಟವನಾಗಿ ಅನ್ನವಿಲ್ಲದೆ ಆ ।
ರಣ್ಯವ ಸೇರೀ ಪಣ್ಣ ಮೆಲುವೆ
ಚಿನ್ಮಯಮೂರುತಿ ಗೋಪಾಲವಿಠಲ ।
ನಿನ್ನ ಚಿತ್ತಕೆ ಬಾರದ್ದಿನ್ನೊಂದಾಗುವದಿಲ್ಲ ॥ ೨ ॥

ರೂಪಕತಾಳ

ನೀ ನಿತ್ಯ ನೀ ಸತ್ಯ ಅನಾದಿಕಾಲಕ್ಕೆ ।
ಏನು ಪಡುವ ತೃಪ್ತಿ ನಿನ್ನಿಂದಲೆನಗೆ
ಕಾಣದ್ದು ಒಂದುಂಟೆ ನಿನ್ನ ಕಂಡವರಿಗೆ ।
ಜಾಣತನವೇಕೆ ಎನ್ನೊಡೆಯ
ಪ್ರಾಣಿಗಳಿಗೆ ಅನಿತ್ಯವಸ್ತುಗಳಲ್ಲಿ ।
ಏನು ಭ್ರಮೆಯ ಪುಟ್ಟಿಸಿ ಮರುಳುಗೈಸುವೆಯೊ
ಶ್ರೀನಾಥ ನಿನ್ನ ಸಾಹಸಕೆ ನಾನೇನೆಂಬೆ ।
ಧ್ಯಾನಿಸಿನೋಡೆ ಶತಾನಂದಗೊಶವಲ್ಲ
ದೀನರಕ್ಷಕ ದೇವ ಗೋಪಾಲವಿಠಲ ।
ನೀನು ಕುಣಿಸಿದಂತೆ ನಾ ಕುಣಿವೆನಯ್ಯ ॥ ೩ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಜಂಪೆತಾಳ

ಹಾಗೆ ಆಯಿತಿನ್ನು ಹಾಗೆ ಆಗಲಿ ದೇವ |
ಹೀಗೆ ಆಯಿತಿನ್ನು ಹೀಗೆ ಆಗಲಿ ದೇವ
ಹಾಗು ಹೀಗು ಇನ್ನು ಎರಡು ಆಗಲಿ ದೇವ |
ಆಗ ಅಂಜಿದನ್ಯಾರೋ ಈಗ ಅಳುಕುವನ್ಯಾರೋ
ಆಗುವಂಥಾ ಕಾರ‍್ಯ ಆಗಲೀಸದನ್ಯಾರೋ |
ಆಗದಂಥಾ ಕಾರ‍್ಯ ಆಗಲೀಸುವನ್ಯಾರೋ
ತೂಗುವ ತೊಟ್ಟಿಲು ತೂಗಿ ತೂಗಿ ತೂಗಿ |
ಹೋಗಿ ತನ್ನ ಸ್ಥಳಕೆ ನಿಲ್ಲುವದಯ್ಯ
ಸಾಗರಶಯನ ಶ್ರೀ ಗೋಪಾಲವಿಠಲ |
ಭೋಗ ತೀರಿಸಿ ದೇವ ಬೇಗ ಸಲಹೊ

ತ್ರಿಪುಟತಾಳ

ವಾಸುದೇವ ನಿನಗೆ ವಾಸಿಯೊಂದೇ ಕೇಳು |
ಈಶನೆಂಬೋ ಪೆಸರು ನಿಮ್ಮದಯ್ಯ
ದಾಸನೆಂಬೋ ಪೆಸರು ಎಂದಿಗು ನಿಮಗಿಲ್ಲ |
ದಾಸತನವೆಲ್ಲ ನಮ್ಮದಯ್ಯ
ದಾಸತ್ವವಿಲ್ಲದೆ ಈಶತ್ವ ಪ್ರಕಟಿಸದು |
ದಾಸನಿಲ್ಲದ ಈಶತನವೇತಕೆ
ದೋಷರಹಿತ ರಂಗ ಗೋಪಾಲವಿಠಲ |
ದಾಸರ ಬಿಡದಿರು ಏಸೇನು ಬಂದರು || ೫ ||

ಅಟ್ಟತಾಳ

ತನುವಿನ ನೆಂಟರು ಕೆಲವರು ಎನಗಿನ್ನು |
ಧನದಿಂದ ನೆಂಟರು ಕೆಲವರು ಎನಗಿನ್ನು
ಗುಣದಿಂದ ನೆಂಟರು ಕೆಲವರು ಎನಗಿನ್ನು |
ಮನದಿಂದ ನೆಂಟರು ಕೆಲವರು ಎನಗಿನ್ನು
ದಿನದಿಂದ ನೆಂಟರು ಕೆಲವರು ಎನಗಿನ್ನು |

Sri Vidyabharathi Book Centre, Sringeri

CC-O. In Public Domain. Digitized by eGangotri

ಇನಿತು ನೆಂಟರೊಳು ಎನಗೆ ಒಬ್ಬರ ಕಾಣೆ
ಅನುವಾಗಿ ಇದ್ದರೆ ಅಷ್ಟು ನಮ್ಮವರೆಲ್ಲ ।
ಅನುವು ತಪ್ಪಿದರಿನ್ನು ಆರು ನಮ್ಮವರಲ್ಲ
ನಿನಗೆ ಎನಗೆ ನೆಂಟತನವು ಹೀಗೆ ಅಲ್ಲ ।
ಅನಿಮಿಷ ಅಗಲದೆ ಅನಿಮಿತ್ತಬಂಧುವಾಗಿ
ಕ್ಷಣಬಿಡಲದೆ ಕಾವ ಗೋಪಾಲವಿಠಲ ।
ನಿನಗೆ ಮಾಡುವದೇನೊ ಎನ್ನಿಂದ ನಮೊ ನಮೋ ॥ ೬ ॥

ಆದಿತಾಳ

ನೀನೆ ವೈಕುಂಠ ನೀನೇ ಮುಕುತಿ ಎನಗೆ ।
ನೀನೆ ಸಕಲತೀರ್ಥ ಕ್ಷೇತ್ರಂಗಳೆನಗೆ
ನೀನೆ ಫಲಪ್ರದ ಸಕಲರಲ್ಲಿ ನಿಂತು ।
ನೀನಿದ್ದ ಸ್ಥಳದಲ್ಲಿ ಸಕಲ ದಿವಿಜರು
ದೀನಜನರ ಪಾಲ ಗೋಪಾಲವಿಠಲ ।
ಜ್ಞಾನಿಗಳಿಗೆ ಪ್ರಿಯ ನಾ ನಮಿಸುವೆನೊ ॥ ೭ ॥

ಜತೆ

ಕಾಣದವನೆ ನಿನ್ನ ಕಂಡದ್ದಾರೈಸುವ ।
ಕಾಣುವನ ಬೇಡನು ಗೋಪಾಲವಿಠಲ ॥ ೧ ॥

ವ್ಯಾಸರಾಯರು ಶ್ರೀರಂಗಕ್ಷೇತ್ರದಲ್ಲಿ ಪ್ರತ್ಯಕ್ಷ ಭಗವದ್ದರ್ಶನವಾದಾಗ ಹಾಡಿದ ಪದವನ್ನು ಕೆಳಗೆ ಉದಹರಿಸಿರುತ್ತದೆ. ಈ ಪದವನ್ನು ಹಾಡಿದ್ದು ಧ್ವಜಸ್ತಂಭದ ಬಳಿ ಬೆಣ್ಣೆಮಾರುತಿಯಿರುವ ಸ್ಥಳದಲ್ಲಿ. ಆಗ ಮಾರುತಿಯನ್ನು ಆ ಸ್ಥಳದಲ್ಲಿ ಪ್ರತಿಷ್ಠಿಸಿದವರು ವ್ಯಾಸರಾಯರು. ಕೃಷ್ಣದೇವರಾಯನು ಸಮ್ಮುಖದಲ್ಲಿದ್ದು ಭಕ್ತಮಾರುತಿ ವಿಗ್ರಹವನ್ನು ಪ್ರತಿಷ್ಠಿಸಲು ಸಹಾಯ ಮಾಡಿದನೆಂದು ಇತಿಹಾಸವಿದೆ. ಈಗಲೂ ರಂಗನಾಥನ ದರ್ಶನ ಲಭಿಸದಿದ್ದರೆ ಮಾರುತಿಯ ದರ್ಶನಮಾಡಿ ಜನರು ತೃಪ್ತಿಪಡುತ್ತಾರೆ. ವ್ಯಾಸರಾಯರು ಪ್ರತಿಷ್ಠಿಸಿದ ಆ ಮಾರುತಿಯು ಇಷ್ಟಾರ್ಥಪ್ರದನೆಂದು ಜನರು ಸೇವೆಗಳನ್ನು ಸಲ್ಲಿಸುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಗ : ಆರಭಿ — ತಾಳ : ಆದಿ

ಸೇರಿದೆನು ಸೇರಿದೆನು ಜನದೀಶನ ।
ಜನ್ಮನರಕದ ಭಯವು ಇನ್ನು ಎನಗಿಲ್ಲ ॥ ಪ ॥

ನೇತ್ರಗಳು ಕೃಷ್ಣನ ಮೂರ್ತಿಯನು ನೋಡುತಿವೆ ।
ಶ್ರೋತ್ರಗಳು ಹರಿಕಥೆಯ ಕೇಳುತಲಿವೆ
ರಾತ್ರಿ ಹಗಲೂ ಎನ್ನ ಮನಸು ಶ್ರೀರಂಗನಲಿ ।
ಪಾತ್ರವಾಗುತಿದೆನ್ನ ಗಾತ್ರ ಕೃಷ್ಣನ ಮುಂದೆ ॥ ೧ ॥

ಹಸ್ತಗಳು ಮಂಟಪದ ಮಾರ್ಜನೆಯ ಮಾಡುತಿವೆ ।
ಮಸ್ತಕವು ಶ್ರೀಹರಿಯ ಚರಣಕೆರಗುತಿದೆ
ವಿಸ್ತಾರವಾಗಿ ಪದಪ್ರದಕ್ಷಣೆಯ ಮಾಡುತಿದೆ ।
ಕಸ್ತೂರಿ ಗಂಧವಾ ಮೂಗು ಘ್ರಾಣಿಸುತಿದೆ ॥ ೨ ॥

ಹರಿನಾಮ ಕೀರ್ತನೆಯ ಮಾಡುತಿದೆ ಎನ್ನ ಜಿಹ್ವೆ ।
ಹರಿನಾಮ ಜನ್ಮಪಾವನತೆಯಿಂದ
ಹರಿಪ್ರೀತಿಯಾಗಿದೆ ನೋಡಿದರೆ ಎನ್ನ ದೇಹ ।
ಸಿರಿಕೃಷ್ಣ ನೆಲೆಸಿದನು ಎನ್ನ ಮನಮಂದಿರದಿ ॥ ೩ ॥

ವಿಜಯದಾಸರಿಗೆ ಹರಿಸಾಕ್ಷಾತ್ಕಾರವಾದಾಗ ಶಾಂತಿಯಿಂದ ತೃಪ್ತಿಯಿಂದ ಹಾಡಿದ ಸುಳಾದಿಯ ಒಂದು ತಾಳ ಮಾತ್ರ ಮುಂದೆ ಉದಹರಿಸಿದೆ.

ಅಟ್ಟತಾಳ

ನರಿ ಮೇರುಗಿರಿ ಶಿಖರಾಗ್ರದಿ ಕುಳಿತು ।
ಕರದೊಳು ಪೀಯೂಷಪಾತ್ರೆಯ ಪಿಡಿದು
ಸುರಿವ ತೆರನಂತೆ ಎನಗಿಂದು ದೊರಕಿತು ।
ಹರಿಚರಣಾಮೃತ ಸುರಿದು ಸುಖಿಸಿದೆ
ಗುರುಗಳನುಗ್ರಹ ಪಿರಿದಾಗಿ ಸಿದ್ಧಿಸಿತು ।
ನರಿಗೆ ವಂಚಕನಾಮ ಪರಿಹರವಾಯಿತು
ಧರೆಯೊಳು ನಾನೊಬ್ಬ ವಂಚಕನಾಗಿದ್ದೆ ।

Sri Vidyabharathi Book Centre, Sringeri

 CC-O. In Public Domain. Digitized by eGangotri

ಕರುಣಿಸಿ ಹರಿ ತನ್ನ ಇರವ ತೋರಿಸಿದ
ಸುರರ ಪಾಲಕ ರಂಗ ವಿಜಯವಿಠಲನ |
ನಿರೀಕ್ಷಿಸಿ ಕೊಂಡಾಡಿ ಭವವನು ದಾಟಿದೆ ॥ ೪ ॥

ಇದೇ ಸುಳಾದಿಯ ಜತೆಯನ್ನು ನೋಡಿದರೆ–ಹಾಡಿದರೆ–ರೋಮಾಂಚ ವಾಗಿ ದೇವರನ್ನು ಕಂಡ ತೃಪ್ತಿಯಾಗುತ್ತದೆ.

ಜತೆ

ಗಿರಿರಾಯ ಸುರರಾಯ ಸುಖಪೂರ್ಣ ಮಹರಾಯ |
ಉರಗಾದ್ರಿವೇಂಕಟ ವಿಜಯ ವಿಠಲರಾಯ ॥ ೧ ॥

ಕನ್ನಡ ಭಾರತವನ್ನು ರಚಿಸಿದ ನಾರಣಪ್ಪನು ಪುರಂದರದಾಸರ ಮನೆಯಲ್ಲಿಳಿದು ತನ್ನ ಗ್ರಂಥವನ್ನು ತಾನೇ ಓದಿತೋರಿಸಿದಾಗ, ತೃಪ್ತಿಯಿಂದ ಕೆಳಕಂಡ ಸುಳಾದಿಯನ್ನು ದಾಸರು ಹಾಡಿದರು. ನಾರಣಪ್ಪನನ್ನು ಪರಮ ಭಾಗವತನೆಂದು ತಿಳಿದುದರಿಂದ ಅವನ ಹೆಸರನ್ನು 'ಕುಮಾರವ್ಯಾಸ' ಎಂದು ಸೂಚಿಸಿ ಸುಳಾದಿ ಮಾಡಿದ್ದಾರೆ. ಐತಿಹಾಸಿಕ ಮಹತ್ವ, ಶಾಂತರಸ ದಿಂದುಂಟಾಗುವ ತೃಪ್ತಿಯ ಮಹತ್ವ ಎರಡೂ ಇರುವ ಕಾರಣ ಪೂರ್ತಿ ಯಾಗಿ ಕೊಟ್ಟಿದ್ದೇವೆ.

ರಾಗ : ಸುಳಾದಿ — ತಾಳ : ಧ್ರುವ

ಹರಿಶರಣಾರೆನ್ನ ಮನೆಯ ಮೆಟ್ಟಲು ಮನೆ |
ಪರಮಪಾವನ್ನವಾಯಿತು ಆಳಆಳ
ಹರಶರಣರೆನ್ನ ಕೂಡಿ ಮಾತನಾಡೆ ಮನವು |
ಕರಣಂಗಳು ಪಾವನ್ನ ಆಳಆಳ
ಹರಿಶರಣರು ಎನ್ನ ಮನೆಯಲ್ಲುಂಡರೆ
ಎನ್ನವರ ಇಪ್ಪತ್ತೊಂದು ಕುಲ ಪಾವನ ಆಳ
ಹರಿಗದುಗಿನ ವೀರ ನಾರಾಯಣಸ್ವಾಮಿ |
ಹರಿಪುರಂದರ ವಿಠಲರೇಯ ಆಳ ॥ ೧ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಮಟ್ಟತಾಳ

ಭಾರತ ಆಗಮ ಗೋಚರವೆಂದು ವಿ |
ಚಾರಿಸೆ ಮನುಜರಿಗೆ ಗೋಚರವಪ್ಪಂತೆ
ವೀರನಾರಾಯಣ ನೀ ಕವಿಯೆನಿಸೀದೆ ಕು |
ಮಾರವ್ಯಾಸನಿಂದ ಭಾರತ ವಿರಚಿಸಿದೆ ॥ ೨ ॥

ರೂಪಕತಾಳ

ಬದರಿಕಾಶ್ರಮದಲ್ಲಿ ಇದ್ದು ಇದ್ದು |
ಬಾದರಾಯಣನೆಂದೆನಿಸಿದಂತೆ
ವಿದುರವಂದಿತ ಪುರಂದರವಿಠಲ ನೀನು |
ಗದುಗಿನ ವೀರನಾರಾಯಣನೆನಿಸಿದೆ ॥ ೩ ॥

ಅಟ್ಟತಾಳ

ಭಾರತಮಲ್ಲ ಭೀಮನೆಂಬರು ಗಡ |
ಭಾರತಮಲ್ಲ ಅರ್ಜುನೆಂಬರು ಗಡ
ಭಾರತಮಲ್ಲ ಕರ್ಣನೆಂಬರು ಗಡ |
ಭಾರತಮಲ್ಲರು ಇವರ್ಯಾರು ಅಲ್ಲ ಗಡ
ಭಾರತಮಲ್ಲ ಗದುಗಿನ ವೀರ |
ನಾರೇಯಣನು ಗಡ ಪುರಂದರವಿಠಲ ॥ ೪ ॥

ಆದಿತಾಳ

ಯದುಕುಲದಲ್ಲುದಿಸಿ ಗೋಪೇರನೊಲಿಸಿದ |
ಗದುಗಿನ ವೀರ ಪುರಂದರವಿಠಲ ॥ ೫ ॥

ಜತೆ

ಪದುಮನಾಭಗಿರಿ ಪುರಂದರವಿಠಲ
ಗದುಗಿನ ವೀರನಾರಾಯಣಸ್ವಾಮಿ ॥ ೧ ॥

ಇದರಷ್ಟು ಚಿಕ್ಕ ಸುಳಾದಿ ಯಾವುದೂ ಇಲ್ಲ. ಸಾಹಿತ್ಯ ಕಡಮೆ ಯಾಗಿದ್ದಷ್ಟೂ ಸಂಗೀತಕ್ಕೆ ಹೆಚ್ಚು ಸ್ಥಾನ ದೊರೆಯುವುದರಿಂದ, ಇದನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾಹಿತ್ಯ ಸುಳಾದಿಯೆನ್ನುವುದಕ್ಕಿಂತ ಸಂಗೀತ ಸುಳಾದಿಯೆಂದು ಕರೆಯಬಹುದು. ಸ್ವಯಂ ರಚಿಸಿದ ಕಾವ್ಯವನ್ನು ಸ್ವಯಂ ಗಮಕಿಯಾಗಿ ನಾರಣಪ್ಪನು ಹೇಗೆ ಹಾಡಿರಬಹುದೋ ಉತ್ತರವಾಗಿ ಪುರಂದರದಾಸರು ಮೇಲ್ಕಂಡ ಸುಳಾದಿಯನ್ನು ಹೇಗೆ ಹಾಡಿರಬಹುದೋ ತಿಳಿಯಲು ಸಾಧ್ಯವಿಲ್ಲ. ಕಡೆಯದಾದ ಜತೆಯಲ್ಲಿ 'ಪದುಮನಾಭಗಿರಿ'ಯೆಂಬ ಶಬ್ದವಿರುವುದರಿಂದ ಆ ಪ್ರಾಂತ್ಯದ ಕ್ಷೇತ್ರಪುರಾಣದಲ್ಲಿ ಗದುಗಿಗೆ ಏನು ಹೆಸರು ಇತ್ತೋ ವಿಚಾರಿಸಬೇಕು. ಅಥವಾ ಗದಗಿನ ಸಮೀಪದ ವೆಂಕಟಾಪುರವೆಂಬ ಸಣ್ಣಗುಡ್ಡವಿರುವ ವಿಷ್ಣುಕ್ಷೇತ್ರಕ್ಕೆ ಈಗಿನ ಗದಗು ಸೇರಿ ಪದುಮನಾಭಗಿರಿಯೆಂದು ಕರೆಸಿಕೊಳ್ಳುತ್ತಿತ್ತೋ ಎಂಬುದನ್ನು ತಿಳಿಯಬೇಕು.

ದಿಗ್ದರ್ಶನ ಮಾಡಿದಂತೆ ನವರಸಗಳ ಮಾದರಿಗಳನ್ನು ತೋರಿಸಿದುದಾಯಿತು. ಗೀತಾಚಾರ್ಯನಾದ ಕೃಷ್ಣನು ಸಾಂಖ್ಯಯೋಗಗಳು ಪ್ರತ್ಯೇಕವಾದುವುಗಳಲ್ಲ, ಎರಡರ ಫಲವೂ ಒಂದೇ ಎಂಬಂತೆ, ಭಕ್ತಿ ಮತ್ತು ರಸ ಎಂಬುವು ಒಂದರಿಂದ ಮತ್ತೊಂದು ಬೇರೆಯಾದುದಲ್ಲ. ಭಕ್ತಿಯು ಅಭಿವ್ಯಕ್ತಿಗೆ ಬಂದಾಗ ರಸವೆನಿಸಿಕೊಳ್ಳುತ್ತದೆ. ರಸವನ್ನು ಶಬ್ದದಿಂದ ವರ್ಣಿಸಿದಾಗ ಅದರ ರಸವನ್ನು ಭಾವನೆಂದು ಕರೆಯುತ್ತಾರೆ. ಎಲ್ಲಕ್ಕೂ ಮೂಲವಾಗಿರುವುದು ಭಕ್ತಿ. ಭಕ್ತಿಯೆಂದರೆ ಪ್ರೇಮ. ಪ್ರೇಮವಿಲ್ಲದ ಕರ್ಮವಿಲ್ಲ. ಪ್ರೇಮವಿಲ್ಲದ ಜ್ಞಾನವಿಲ್ಲ. ಪ್ರೇಮವಲ್ಲದೆ ಭಕ್ತಿಯೆಂಬುವುದು ಅನ್ಯವಸ್ತುವಲ್ಲ. ಭಕ್ತಿಯ ವೈವಿಧ್ಯಗಳು ಐದಾಗಲಿ ಒಂಬತ್ತಾಗಲಿ ಹನ್ನೊಂದಾಗಲಿ ಲೌಕಿಕವಾಗಿ ಗುರುತಿಸಲು ಮಾಡಿಕೊಂಡ ಅನುಕೂಲ್ಯಗಳು. ಎಲ್ಲದರ ಒಳಗಿರುವುದು ಪ್ರೇಮ. ಅದು ಶುದ್ಧಸತ್ವ. ಅದರ ಅಭಿವ್ಯಕ್ತ ಸ್ವರೂಪ ರಸ. ರಜೋಗುಣ ತಮೋಗುಣಗಳ ಮಿಶ್ರಣವಾದರೆ ವೀರ ರೌದ್ರ ಬೀಭತ್ಸಗಳುಂಟಾಗುತ್ತವೆ. ಪ್ರೇಮವು ಕಾಮವಾಸನೆಗೊಳಗಾದರೆ ಲೌಕಿಕ ಶೃಂಗಾರವಾಗುತ್ತದೆ. ಕಾಮವಾಸನೆಯಿಲ್ಲದ ಪ್ರೇಮವು ಶುದ್ಧವಾಗಿ ಮಾನವನ ದೇಹೇಂದ್ರಿಯಮನಸ್ಸುಗಳ ಅಂತಸ್ತಿನಿಂದ ಉಚ್ಚ ತರಗತಿಗೇರಿ ಅಮೃತವರ್ಷವನ್ನು ಗರೆದರೆ ಆ ಸಾತ್ವಿಕ ಪ್ರೇಮವು ರಸದ ಆವಿರ್ಭಾವವನ್ನು ತೋರಿಸುತ್ತದೆ. ಆ ಆವಿರ್ಭೂತ ರಸವೆಂಬುವುದು ಭಗವತ್ಸ್ವರೂಪ, ಪ್ರೇಮಮಯ ಶ್ರೀಕೃಷ್ಣಸ್ವರೂಪ. ಅವನಿಗೂ ಅವನ ರೂಪಕ್ಕೂ ಅವನಿಗೂ ಅವನ ಗುಣಕ್ಕೂ ಭೇದವಿಲ್ಲ. ಅವನೇ ಅದು, ಅದೇ ಅವನು. ಉಪನಿಷತ್ತುಗಳು ಸಾರುವಂತೆ 'ರಸೋ ವೈ ಸಃ' ರಸವೇ ಅವನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಧ್ಯಾಯ ಆರು

ಸಂಕೀರ್ಣ

ಹಿಂದಿನ ಅಧ್ಯಾಯಗಳಲ್ಲಿ ಒಂದೊಂದು ಕ್ರಮವನುಸರಿಸಿ, ಆ ಕ್ರಮದಂತೆ ದಾಸ ಸಾಹಿತ್ಯದ ಮಾದರಿಗಳನ್ನು ಕೊಟ್ಟದ್ದಾಯಿತು. ಈ ಸಂಕೀರ್ಣ ಅಧ್ಯಾಯದಲ್ಲಾದರೋ—ವಿವಿಧ ಸನ್ನಿವೇಶಗಳಲ್ಲಿ ದಾಸರು ಹಾಡಿರುವ ಮಾದರಿಗಳನ್ನು ಕೊಡಲಾಗುತ್ತದೆ. ದಾಸರ ಸಾಹಿತ್ಯವೆಂದರೆ—ಕೇವಲ ಸಾಂಪ್ರದಾಯಿಕ ಹಾಡುಗಳು, ಜೀವನವನ್ನು ಉತ್ಸಾಹಗೊಳಿಸದ ನೀರಸ ನಿರಾಶೆಯ ಪದಗಳು, ಸಮಾಜದ ನಡತೆಯನ್ನು ನಿಂದಿಸುವ ಹಾಡುಗಳು, ಕಾಲದುದಕ್ಕೆ ಬೇಕಾದಷ್ಟು ನಾಮಾವಳಿಗಳು; ಎಂದು ಸಾಧಾರಣ ಜನರು ತಿಳಿದಿರುವಷ್ಟು ಮಾತ್ರವೇ ಅಲ್ಲ. ಇವೆಲ್ಲದರಿಂದ ಬೇರೆಯಾದ, ಸಮೃದ್ಧಿ ಯಾದ, ಉತ್ಸಾಹಜನಕವಾದ, ಸಾಹಿತ್ಯವೂ ರಾಶಿರಾಶಿಯಾಗಿದೆ ಎಂಬು ದನ್ನು ತಿಳಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

ಭಾರತ ಪ್ರಪಂಚದಲ್ಲಿ ಯಾವ ಕವಿಯಾಗಲಿ, ತನ್ನ ಕಾವ್ಯಕ್ಕೆ ಪ್ರಾಶಸ್ತ್ಯಬರಲೆಂದು ಇತರ ಕಾವ್ಯಗಳನ್ನು ಒಂದಲ್ಲ ಒಂದು ರೀತಿ ಜರಿದಿರು ವುದು ಕಂಡುಬರುತ್ತದೆ. ಮತಗಳನ್ನು ವಿಚಾರಿಸಿದರೆ, ತನ್ನ ಮತವೇ ಸರಿ ಯಾದುದು ಎಂದು ಸಮರ್ಥಿಸಿರುವುದು ಕಂಡುಬರುತ್ತದೆ. ಯುಕ್ತಿಯಿಂದ ಮನಗಾಣಿಸಲು ಸಾಧ್ಯವಾಗದ ತತ್ವವಿಷಯಗಳನ್ನು ಎಲ್ಲ ಮತೀಯರೂ ಸ್ವರ್ಗನರಕಗಳ—ಪುಣ್ಯಪಾಪಗಳ—ಅಂಜಿಕೆ ತೋರಿಸಿ ಒಪ್ಪಿಸಿರುತ್ತಾರೆ. ಶೈವ ವೈಷ್ಣವ ಪಂಥಿಗಳು ಒಬ್ಬರನ್ನೊಬ್ಬರು ಪಾಷಂಡಿಗಳೆನ್ನುತ್ತಾರೆ. ಬೈಬಲ್ ಕೊರಾನುಗಳನ್ನು ನಂಬದವರನ್ನು ಆ ಮತೀಯರು ಹೀದನರು ಕಾಫರರು ಎನ್ನುತ್ತಾರೆ. ಜ್ಞಾನಿಗಳು ಕರ್ಮವನ್ನು ಜರಿಯುತ್ತಾರೆ. ತಾರ್ಕಿಕರು ಭಕ್ತಿಪಂಥವನ್ನು ಸೋಲುಮನಸ್ಸಿನ ಮತವೆನ್ನುತ್ತಾರೆ. ಸತ್ಯದ ಹೆಸರಿನಲ್ಲಿ, ಸರ್ವಶಕ್ತನ ಹೆಸರಿನಲ್ಲಿ, ಇಷ್ಟೆಲ್ಲ ಗೊಂದಲಗಳಿವೆ.

ಅಮೃತರಸವನ್ನು ಸುರಿಸುವ ಪನಸಫಲವನ್ನು ತಿನ್ನಬೇಕೆಂಬುವವರು, ಇಡೀ ಹಣ್ಣನ್ನು ಬಾಯ ಅಳತೆಗೆ ಹೆಚ್ಚಿ ಹಾಗೆಯೇ ತಿನ್ನುವುದಕ್ಕಾಗು

Sri Vidyabharathi Book Centre, Sringeri

CC-O. In Public Domain. Digitized by eGangotri

ವದಿಲ್ಲ. ಮೇಲಿನ ಮುಳ್ಳನ್ನು ತೆಗೆಯಬೇಕು, ಶಾಡೆಯನ್ನೊಗೆಯಬೇಕು, ಅಂಟು ತಗಲದಂತೆ ಕೈಗೆ ಎಣ್ಣೆಯನ್ನು ಬಳಿದುಕೊಂಡಿರಬೇಕು, ಮಧ್ಯದ ಕಾಂಡವನ್ನು ಬೇರ್ಪಡಿಸಬೇಕು, ತೊಳೆ ಸಿಕ್ಕಿದರೂ ಅದರೊಳಗಿನ ಬೀಜ ವನ್ನು ಬದಿಗಿಡಬೇಕು; ಇಷ್ಟೂ ಮಾಡಿ ಫಲವನ್ನು ಸವಿಯಬೇಕು. ಯಾವ ಫಲವನ್ನು ಸವಿಯಬೇಕಾದರೂ ಇಷ್ಟಿಲ್ಲದಿದ್ದರೆ ತಕ್ಕಷ್ಟಾದರೂ ಪರಿಶ್ರಮ ಮಾಡಬೇಕು. ಪರಿಶ್ರಮ ಮಾಡದವರಿಗೆ ಅಮೃತದ ಸವಿ ಸಿಕ್ಕುವದಿಲ್ಲ. ಬೇರೆ ಬೇರೆ ಸಾಹಿತ್ಯಗಳು ಪನಸ ಫಲದಂತೆ, ನಾರಿಕೇಳ ಫಲದಂತೆ ಇದ್ದರೆ, ಹರಿದಾಸ ಸಾಹಿತ್ಯವು ಕೇವಲ ಸಿಪ್ಪೆ ಸುಲಿಯುವಷ್ಟು ಪರಿಶ್ರಮವಿರುವ ಕದಳೀ ಫಲವೆಂದು ತಿಳಿಯಬೇಕು. ಮುಳ್ಳು ಅಂಟು ಶಾಡೆಗಳಿವೆಯೆಂದು ಯಾರೂ ಪನಸ ಫಲವನ್ನು ಬಿಸುಡುವದಿಲ್ಲ; ನಾರು ಕರಟಗಳಿವೆಯೆಂದು ನಾರಿಕೇಳವನ್ನು ತ್ಯಜಿಸುವುದಿಲ್ಲ; ಅಂದಮೇಲೆ ರಸಕದಳಿಗಾಗಿ ಚಿಂತೆಯು ಏತರದು?

ಗುರು ಶ್ರೀನಿವಾಸ ವಿಠಲವೆಂಬಂಕಿತದಿಂದ ಬ್ರಹ್ಮಸೂತ್ರಗಳನ್ನೂ ಶ್ರೀಮದ್ಭಗವದ್ಗೀತೆಯನ್ನೂ ಕನ್ನಡ ಭಾಮಿನೀ ಷಟ್ಪದಿ ರೂಪದಲ್ಲಿ ಬರೆದಿರುವ, ಕೃಷ್ಣದಾಸರೆಂಬ ಸತ್ಪುರುಷರು ಅದೇ ಷಟ್ಪದೀ ವೃತ್ತದಲ್ಲಿ 'ಗಯ ಚರಿತ್ರೆ'ಯೆಂಬ ಕಾವ್ಯಗ್ರಂಥವನ್ನು ಬರೆದಿರುತ್ತಾರೆ. ಈ ದಾಸರು ೧೯ನೇ ಶತಮಾನದಲ್ಲಿ ಮುಮ್ಮಡಿ ಕೃಷ್ಣರಾಜರ ಕಾಲದಲ್ಲಿ ಮೈಸೂರಿನಲ್ಲಿದ್ದವರು. ಗಯಚರಿತ್ರೆಯನ್ನು ವೈಶಂಪಾಯನ ಮುನಿಯು ಜನಮೇಜಯರಾಯನಿಗೆ ಹೇಳಿದಂತೆ ಕಥೆ ಪ್ರಾರಂಭವಾಗುತ್ತದೆ. ನಾರಾಯಣನ ನಾಭಿಯಿಂದ ಬ್ರಹ್ಮ, ಅವನಿಗೆ ಪುಲಸ್ತ್ಯ, ಅವನಿಗೆ ಪೌಲಸ್ತ್ಯ, ಅವನಿಗೆ ವಿಶ್ರವಸು, ಅವನಿಂದ ಕುಬೇರ; ಹೀಗೆ ಸೃಷ್ಟಿಯಾಗುತ್ತದೆ. ಕುಬೇರನು ತಪಸ್ಸಿನಿಂದ ಶ್ರೀಹರಿಯನ್ನು ಮೆಚ್ಚಿಸಿ ದಿಕ್ಪಾಲಕನಾಗುತ್ತಾನೆ. ಅವನ ನಗರವರ್ಣನೆ, ವನವರ್ಣನೆ, ವನದಲ್ಲಿ ವಿಹರಿಸುವ ತರುಣಿಯರ ವರ್ಣನೆ, ಇತರ ಕಾವ್ಯ ಗಳಂತೆ ಹೃದಯಂಗಮವಾಗಿವೆ. ತೆಂಗು, ಬಾಳೆ, ಹಲಸು, ಖರ್ಜೂರ, ಅಡಿಕೆ ಮೊದಲಾದ ವೃಕ್ಷಗಳನ್ನು ವರ್ಣಿಸುವ ಸಂದರ್ಭದಲ್ಲಿ, ಗಿಡಗಿಡಗಳು ಒಂದನ್ನೊಂದು ಜರಿಯುವ ವಿಚಿತ್ರವಿಲ್ಲಿ ಗಮನಾರ್ಹವಾಗಿದೆ. ಆದ್ದರಿಂದ ಆ ಮಾದರಿಗಳನ್ನಿಲ್ಲಿ ಉದಹರಿಸುತ್ತೇವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ವನಕದಳಿಗಳು ಪನಸವೃಕ್ಷವನ್ನು ನೋಡಿ:

ಪೊಡವಿಯೊಳು ನಮಗೊಂದೆ ಬಾಳುವೆ
ನಡೆಯದೊಂದಾಗಿಹುದರಿಂದೆಡೆ
ಬಿಡದೆ ಹಲವಾಗಿಹುದು ಫಲವಿದನರಿದು ಸಜ್ಜನರು
ಕೆಡದೆ ಇಹದಲಿ ಹಲಬರರ್ಚಿಸಿ
ನಡೆಯಲೊಂದೇ ಪಥದೊಳೋರ್ವನ
ಹಿಡಿದು ನಾರಾಯಣನ ಬದುಕಲು ಹಲವು ಸುಖವೆಂದು

ಸುಲಭ ನಿಜ ಸತ್ಪುರುಷ ಸೂಚಿಸಿ
ಒಲಿವವೋಲ್ ತಲೆವಾಗಿ ಕದಳೀ
ಫಲವೆರಸಿ ಬಲು ತರುಗಳೆಸೆದವು ಗೊನೆಯ ಭಾರದಲಿ
ನೆಲದ ಮೇಲಂಕುರಿಸುತಲೆ ಮಿಗೆ
ಮಲರಹಿತರೆನಿಸದಲೆ ಮೈಯೊಳು
ದಳೆದ ಮುಳ್ಳತಿ ಸ್ಥೂಲವೆನಿಸುವೆವೆಂಬ ಗರ್ವದಲಿ

ಕಳೆಯದಿರಿ ಕಾಲವನು ಕೊಂಡೊಯಿ
ದೆಳದಿನಲಿ ತೊತ್ತುವರು ನಿಮ್ಮನು
ಬಲಿತರೆಯು ಛೇದಿಸುವರೆನುತಲಿ ಹಲಸನುರೆ ಜರಿದು
ಸುಲಭರಾಗಿರೆ ಸರ್ವರೆಮ್ಮನು
ಫಲದಲಾಶೀರ್ವದಿಸಿ ಗ್ರಹಿಸುವ
ರೆಲೆ ಮರುಳೆ ಕೇಳೆಂದು ಖರ್ಜೂರಗಳು ನಗುವವೊಲು

ತರುಗಳೊಳು ರಾಜಿಸಲು ಕಾಣುತ
ಕೆರಳಿ ಮಿಗೆ ಕಂಟಕಫಲಂಗಳು
ಜರಿಯುತಾ ಖರ್ಜೂರತತಿಗಳನುರುಬಿ ಮುಂಕೊಂಡು
ಅರಿಯದಜ್ಞಾನದಲಿ ನಮ್ಮನು
ಜರಿದು ಹುರುಡಿಸಿ ನುಡಿಯೆ ಧರೆಯೊಳು
ಬರುವುದೇ ಸ್ಥೂಲತ್ವ ಕಾಣಿಗೆ ಬೆಲೆಯನ್ನೈದುವಿರಿ

Sri Vidyabharathi Book Centre, Sringeri

 CC-O. In Public Domain. Digitized by eGangotri

ಹೊರ ತರಕೆ ಕಂಟಕವೆನಿಸಿ ಗೋ
ಚರಿಸಿ ಅಂತಶ್ಶುದ್ಧಿಯಿರಲೆ
ನಿಮ್ಮರವನೀಕ್ಷಿಸಿ ಸ್ವೀಕರಿಸಿ ಕಾಂಚನವನಿತ್ತಪರು
ಹೊರಗೆನಿಸಿ ಮಾಧುರ್ಯ ಹೊಟ್ಟೆಯೊ
ಳಿರಿಸಿದೀಕೃತ್ರಿಮವ ಕಾಣುತ
ಕೊರೆದುರವ ಬಿಸುಡುವರು ನಿಮ್ಮನು ಬರಿದೆ ಗಳುಹದಿರಿ

ಹಗಲಿರುಳು ಬಿಟ್ಟಗಲದೊಂದೇ
ಸೊಗಸಿನುದ್ಯಾನದಲಿ ರಾಜಿಸಿ
ಜಗದಿ ಜೀವನದಿಂದ ರಾಜಿಪ ನಮ್ಮನಮ್ಮೊಳಗೆ
ಹಗೆತನವದೇಕೆನುತ ಖರ್ಜೂ
ರಗಳಿಗುತ್ತರ ಕೊಡುವವ್ರೋಲ್ ಸ
ನ್ಮೊಗದಿ ಮೆರೆದವು ಪನಸ ಮನಮಧ್ಯದಲಿ ನೋಳ್ಪರಿಂಗೆ

ಜಗದಲಿಮುಗಿನ್ನಾರು ಸಮರೆಂ
ದೊಗುಮಿಗೆಯ ದೀರ್ಘದಲಿ ಬೆಳೆದಿರೆ
ಸುಗುಣರೆಂಬರೆ ಸೊಗಸುಗಾರರು ನಿಮ್ಮ ಪತಿಕರಿಸಿ
ಮುಗಿದು ನಾರಿನೊಳಡಗಿ ಮೂವಗೆ
ಯುಗಲದಿಹ ಪೆಸರಾಂತು ವಂಚಿಸಿ
ಹಗಲಿರುಳು ಮಾಧುರ್ಯಯುತ ವಿಷ ಧರಿಸಲೇನಹುದು
ಇರಿದು ನೆತ್ತಿಯನೊಡೆದು ರಂಧ್ರವ
ಕೊರೆದು ಬಿಸುಡುವರುಳಿದರದರೊಳು
ಮರಳಿ ಶಸ್ತ್ರದಿ ಛಿದ್ರಗೈವರು ವಿಷವಡಗೆ ಬಳಿಕ
ಅರಿದು ಗಾಣದೊಳಿಟ್ಟರೆದು ಬಾಧಿ
ಪರು ಮನುಜರು ನಿಮ್ಮನರಿಯಿರೆ
ತೆರಹುಗೊಡದಂತಿನಿತು ಬಾಧೆಗಳಿಲ್ಲವೆಮಗಿನ್ನು

ಕರೆವರೊಂದೇ ನಾಮದಲಿ ಸ್ವೀ
ಕರಿಸಿ ಭೋಗಿಗಳೊಮ್ಮೆಗಾದರು
ತೊರೆಯರೆಮ್ಮವನೆಂದು ಜರಿಯುತ ನಾರಿಕೇಳಗಳ

Sri Vidyabharathi Book Centre, Sringeri

CC-O. In Public Domain. Digitized by eGangotri

ತರುಬನ್ವೋಲ್ರಾಜಿಸಲು ಪೂಗೀ
ವರ ಫಲಗಳಿದಿರಿನಲಿ ವ್ವೈಯು
ಬ್ಬಿರದೆ ಕೋಪದಿ ಹರನ ಸಾಮ್ಯವನಾಂತು ವಾದಿಸಲು

ಧರಿಸಿ ಕಾಯದೊಳಕ್ಷಿ ಮೂರನು
ಹಿರಿದೆನಿಪ ವರ ನಾರಿಕೇಳಗ
ಳುರುಬಿ ಕೇಳಿಲೆ ಮೂಢರುಗಳತ್ಯಲ್ಪರ ದೃಢರು
ಹುರುಡಿಸಲು ನೀವೆಮಗೆ ಕುಂದಿ
ಲ್ಲರಿವೆವಾವ್ ಸೊಕ್ಕಿನಲಿ ಮೆರೆವಿರಿ
ಬರಿದೆ ಉನ್ನತವಾಗಿ ಬೆಳೆದರೆ ಹಿರಿಯರೆನಿಸುವಿರೇ

ಧರೆಯೊಳಾದ್ಯಂತದಲಿ ಮಧ್ಯದಿ
ನರರ ಕ್ಕೈಯಲಿ ಮನ್ನಣೆಯ ಪಡೆ
ದಿರುವರ್ರೈಸೆಲೆ ಧನ್ಯರುಪಕಾರಿಗಳು ಸರ್ವರಲಿ
ಸರಿಯೆನಿಸಿಕೊಂಬೆವು ಕಣಾ ಪರಿ
ಪರಿಯೆನಿಸಿ ರಾಜಿಸಿದ ಕಾಲಕು
ತೊರೆದಪೆವ್ರ ಕಾಯುವನು ಪರರುಪಕಾರಗೋಸುಗರು

ಸರಿಬಹಿರೆ ನಮಗೆಂದಿಗಾದರು
ನಿರುತ ಪರ್ಣಾಶ್ರಯದಲೇ ನಿ
ಮ್ಮರವಣಿಗೆ ಪರಿಕಿಸಲು ಬೇರಿನ್ನುಂಟೆ ಸ್ವಾತಂತ್ರ್ಯ
ಹಿರಿದು ಬಲಿತರೆ ನಿಮ್ಮನೊಲ್ಲರು
ಜರಿದು ಬಿಸುಡುವರೆಳದಿನಲಿ ಸ್ವೀ
ಕರಿಸರೊಬ್ಬರು ಮಧ್ಯಕಾಲದಿ ಸಿಗಿದು ನಿಮ್ಮುವನು
ಧರೆಯೊಳೀರೆರಡೆರಡು ನಾಲ್ಕೆರ
ಡೆರಡು ಎಂಟನೆಗ್ಯೆಸಿ ಬೇಯಿಸಿ
ನರರು ವದನದೊಳಿಟ್ಟು ತಂಬುಲವೆಂದು ಉಗುಳುವರು
ಪರಮಶುಚಿಯಾಗಿದ್ದ ಪರ್ಣವ್ರ
ದುರುಳರಾದೀ ನಿಮ್ಮ ಸಂಗಡ
ಬೆರೆದ ಕಾರಣ ಮನುಜರುದರವನ್ನೈದಲರಿದಾಯ್ತು

Sri Vidyabharathi Book Centre, Sringeri

CC-O. In Public Domain. Digitized by eGangotri

ಇರದೆ ಸಂಗಡಿಗರನು ಕೆಡಿಸುವ
ಕರುಬುತನವಿಲ್ಲೆಮ್ಮೊಳಗೆ ಬೆರೆ
ತರನು ಪಾವನಗೈದು ಶುಚಿರುಚಿಯೆನಿಸುವೆಮ್ಮವನು
ಜರಿಯದಿರಿ ಶಿಖಿಬಾಹಿರರು ನೀ
ವರರೆ ಪೂಗಿಗಳೆಂದು ನಿಂದಿಸು
ತಿರುವವೊಲು ಗೋಚರಿಸಿ ಮೆರೆದವು ನಾರಿಕೇಳಗಳು

ಎಂಬಂತೆ ವೃಕ್ಷವೃಕ್ಷಗಳಿಗೂ, ಮುಂದೆ ಪರಸ್ಪರ ಪುಷ್ಪಲತೆಗಳಿಗೂ ಸಂವಾದ ವುಂಟಾಗಿರುವಂತೆ ಅವರು ಅನೇಕ ಪದ್ಯಗಳನ್ನು ರಚಿಸಿರುತ್ತಾರೆ. ಕೃಷ್ಣ ದಾಸರು ರಚಿಸಿರುವ ಗಯೋಪಾಖ್ಯಾನವು, ಹನ್ನೆರಡು ಸಂಧಿಗಳುಳ್ಳ ಆರುನೂರ ಎಂಬತ್ತೈದು ಪದ್ಯಗಳ ದಿವ್ಯವಾದೊಂದು ಕಾವ್ಯವಾಗಿದೆ. ಈ ಕಾವ್ಯದಲ್ಲಿ ಕೃಷ್ಣಾರ್ಜುನರ ಯುದ್ಧವು ಬಲುರಮ್ಯವಾಗಿ ವರ್ಣಿಸಲ್ಪಟ್ಟಿದೆ. ಸಂದರ್ಭಗಳಲ್ಲಿ ಶ್ರೀಕೃಷ್ಣಭಕ್ತಿ ತಾಂಡವಾಡುತ್ತ ನಾರಣಪ್ಪನ ನೆನಪನ್ನು ತಂದುಕೊಡುತ್ತದೆ. ಕಾವ್ಯದಲ್ಲಿ ಮಾಡಿರುವ ರಸಪೋಷಣೆ ಅಡಿಗಡಿಗೂ ಅಪ್ರತಿಮವಾಗಿದೆ.

ಹರಿದಾಸರ ಜಾನಪದ ಸಾಹಿತ್ಯ

ಬುಡುಬುಡಿಕೆಯ ಹಾಡು

ಪುರಂದರದಾಸರು ಮೇಲ್ಮಟ್ಟದ ಜನರಿಂದ, ದೀನದರಿದ್ರರ ತನಕ ಒಂದೇ ಸಮನಾಗಿ ಧರ್ಮಪ್ರಚಾರ ಮಾಡಬೇಕೆಂದು ಸದ್ಭಾವನೆಯಿಂದ ಕೆಳ ಕಂಡ ಬುಡುಬುಡಿಕೆಯ ಹಾಡನ್ನು ರಚಿಸಿರುತ್ತಾರೆ. ಬುಡುಬುಡಿಕೆಯವರು, ಭಟ್ಟರಾಜುಗಳು ಸಹ, ತಮ್ಮ ಜೀವಿಕೆಗಾಗಿ ಭಿಕ್ಷ ಬೇಡುತ್ತಿದ್ದರೆ ಅವರ ಬಾಯಿಯಿಂದಲೂ ಧರ್ಮದ ಮಾತು ಬರಬೇಕೆಂಬುದು ದಾಸರ ಉದ್ದೇಶ. ಹಾಡು ಬಡುಬುಡಿಕೆಯದಾದರೂ ಉಪನಿಷದರ್ಥ ಹೇಗೆ ಗರ್ಭಿತವಾಗಿದೆ ಎಂಬುದನ್ನು ಬಲ್ಲವರು ನೋಡಬೇಕು.

ಬುಡುಬುಡಿಕೆಯನ್ನು ಬಾರಿಸುತ್ತಾ ಭಿಕ್ಷುಕನು ಹೇಳುವ ಪರಿಯು ಹೀಗಿದೆ:

Sri Vidyabharathi Book Centre, Sringeri

CC-O. In Public Domain. Digitized by eGangotri

ಜಹಾ ಜಹಾ ಜಹ ಜಹವೈತಣ್ಣಾ
ಜಹ ಜಹ ಜಹವೈ ಕೇಳೋ ತಮ್ಮಾ
ಜಯುವಡೆ ಜಯುವದೆ ಈ ಮನೆತನಕೆ
ಬುಡು ಬುಡು ಬುಡು ಬುಡು ನಿನ್ನ ಸಂಶಯುವ ॥ ಪ ॥

ಶುಕನೆಂಬೋ ಪಕ್ಷಿ ಹೇಳುತದಪ್ಪಾ । ಜಗವೆಂಬೋ ಗಿಡ ಹುಟ್ಟೈತಣ್ಣಾ
ಹಣ್ಣುಗಳೆರಡೂ ಹೈದಾವಪ್ಪಾ । ಮೂರು ಬುಡದ ಗಿಡ ಕೇಳಣ್ಣಾ
ಹಣ್ಣಿನ ವಳಗೇ ನಾಲ್ಕು ರಸವೂ । ಐದು ದೊಡ್ಡಾ ಹರೆ ಕಾಣಪ್ಪಾ
ಆರು ಬಗೆಯ ರೂಪವು ಕೇಳೊ । ಏಳು ಬಗೆಯ ತೊಗಟುಂಟಣ್ಣ
ಸಣ್ಣ ಗರಿಗಳು ಎಂಟೈಧಾವೇ । ಆಕ್ಷವು ಆದಕೆ ವಂಭತ್ತೈತೇ
ಎಲೆಗಳು ಹತ್ತು ಐದಾವಪ್ಪಾ । ಒಂದೇ ಹಕ್ಕೀ ಹಣ್ತಿಂತೈತೇ
ಮತ್ತೊಂದ್ಹಕ್ಕೀ ನೋಡುತದಪ್ಪಾ । ಹಣ್ತಿಂದ್ಹಕ್ಕೀ ಬಡವಾಗೈತೇ
ತಿನ್ನದ ಹಕ್ಕೀ ಬಲ್ತೈತಣ್ಣಾ । ಸುಳ್ಳಲ್ಲಾ ನೀ ಕೇಳೋ ತಮ್ಮಾ
ದ್ವಾಸುಪರ್ಣದ ಶ್ರುತಿಯಲ್ಲೈತೆ । ಒಂದೇ ಕುಲದ ಹಕ್ಕ್ಯಲ್ಲಣ್ಣಾ
ಒಂದೇ ಕುಲವೆಂದು ತಿಳಿಯಲಿ ಬ್ಯಾಡ । ತಿಳಿದರೆ ನಿನಗೆ ಕೇಡಾದೀತೂ
ಹಳೇ ವಸ್ತ್ರ ಬೀಸಾಡಣ್ಣಾ । ಹೊಸ ವಸ್ತ್ರ ದೇವರು ನಿನಗೆ ಕೊಟ್ಟಾನು
ಹಕ್ಕೀ ನರಸ ಹೇಳಿದ ಮಾತು । ಸುಳ್ಳೀ ಎಂದೂ ತಿಳಿಬ್ಯಾಡಣ್ಣಾ
ಮಾರ್ಗವ ಕಟ್ಟೀ ಸುಲಿಯುತ್ತಾರೆ । ಗಿರಿದುರ್ಗಾವೂ ಐದಾವಪ್ಪಾ
ಮಾರನೆಂಬೋ ಕಳ್ಳೈಧಾನೇ । ಪುರಂದರ ಬಂದರು ಬಿಡುವೋನಲ್ಲಾ
ಹವಿಾರನಾದರೆ ಹೊಂಟ್ಹೋಗ್ತಾನೆ । ಹನುಮನ ಹಾದೀ ಹಿಡಿಯೋ ತಮ್ಮಾ
ಕಣ್ಣುಮೂಗು ಕಿವಿನಾಲಿಗೆಯಪ್ಪಾ । ಒಂದೊಂದೊಬ್ಬರ ಕೊಂದಾವಣ್ಣಾ
ಕುರಂಗ ಮಾತಂಗ ಪತಂಗ ಕೇಳೋ । ಭೃಂಗ ಮಿಾನವೂ ಹತವಾದವಣ್ಣಾ
ಜ್ಞಾನ ಭಕ್ತೀ ಎಂಬೋ ಮಾರ್ಗ । ದೊಡ್ಡ ಮಾರ್ಗವ ಹಿಡೀಬೇಕಣ್ಣಾ
ದೊಡ್ಡ ಸಂಗತೀ ಸಿಗುವೋ ತನಕ । ಎರಡೂ ಮನೆಯಲ್ಲಿರಬೇಕಣ್ಣಾ
ದಾನದ ಕಯ್ಯಾ ತೋರಿಸಬೇಕು । ಆದರಿಂದ ನದಿಯು ದಾಟುತಿಯಪ್ಪಾ
ನಿನ್ನ ಯೋಗ್ಗಿತೀ ತಿಳಿದಾಮೇಲೇ । ಪುರಂದರವಿಠಲ ಸ್ಥಳಕೊಟ್ಟಾನು ॥ ೧ ॥

Sri Vidyabharathi Book Centre, Sringeri

 CC-O. In Public Domain. Digitized by eGangotri

ಗುಡಿಗುಡಿ ಹಾಡು

ರಾಗ : ಆನಂದಭೈರವಿ — ತಾಳ : ಛಾಪು

ಗುಡಿಗುಡಿಯನು ಸೇದಿ ನೋಡೊ । ಸೇದಿ ನೋಡೋ । ನಿನ್ನ
ಒಡಲ ಪಾಪಗಳೆಲ್ಲ । ತೊಡೆದು ಈಡ್ಯಾಡೋ ॥ ಪ ॥

ಬುರುಡೆಯಂದದಿ ಈ ಶರೀರ । ನಿನ್ನ ।
ದೃಢಭಕ್ತಿಯೆಂಬಂಥ ಕೊಳವಿಯಾಕಾರ
ಸಿರಿ ನಾರಾಯಣನೆಂಬೋ ನೀರ । ಇದ ।
ನರಿತು ತಕ್ಕೊಳ್ಳೊ ಎಲೆ ಪೋಜುಗಾರ ॥ ೧ ॥

ಮನವೆಂಬ ಸಂಚಿಯ ಬಿಚ್ಚೀ । ದಿನ ।
ದಿನದ ಪಾಪಗಳೆಂಬ ಭಂಗಿಯ ಕೊಚ್ಚಿ
ನೆನೆವೆಂಬ ಚಿಲುಮೆಯೊಳಿರಿಸಿ । ಅ ।
ಚ್ಯುತನ ಧ್ಯಾನವೆಂಬ ಕಿಚ್ಚನೆ ಹಚ್ಚಿ ॥ ೨ ॥

ಮೆದ್ದು ಮೇಲಮುಲೇರುವದೋ । ದಾ ।
ರಿದ್ರ್ಯ ಪಾತಕ ಸುಟ್ಟು ಹೊಗೆಯು ಹಾರುವದೋ
ಬುದ್ಧಿಗೆ ಜ್ಞಾನ ತೋರುವದೋ । ಮುದ್ದು ।
ಪುರಂದರವಿಠಲನ ಪಾದ ಕಾಣುವುದೋ ॥ ೩ ॥

ಕಣಿ

ಕನಕದಾಸರನ್ನು ಕುಲಸ್ಥರಾದ ಹಾಲಮುತಸ್ಥರು ದೇವರ ಕಾರ್ಯಕ್ಕೆ ನೀನೂ ಬರಬೇಕೆಂದು ಕರೆದಾಗ, ದೇವರ ಹೆಸರಿನಿಂದ ಪ್ರಾಣಿಗಳ ವಧೆಮಾಡ ಬೇಡಿ, ನಾನು ಹೇಳುವ ಕಣಿಯನ್ನು ಕೇಳಿ, ಎಂದು ಕೆಳಕಂಡ ಪದವನ್ನು ಹಾಡುತ್ತಾರೆ:

ರಾಗ : ಜೋಗಿ ಸಾವೇರಿ — ತಾಳ : ಆದಿ

ಕಣಿಯ ಹೇಳಬಂದೆ ನಾರಾಯಣನಲ್ಲದ್ದಿಲ್ಲವೆಂದು
ಬಿನುಗುದೈವದ ಗೊಡವೆ ಬೇಡಿ ನರಕ ತಪ್ಪದೋ ॥ ಪ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಹಳ್ಳಿಯವರು ಪಳ್ಳಿಯವರು ಸೂಳೇರೆಲ್ಲಾ ಕೂಡಿಕೊಂಡು
ಬೆಳ್ಳನ್ನ ಬೆಳಹತನಕ ನೀರ ಕಡಿಯಲ್ಲೀ
ಗುಳ್ಳುಗುಸುಕ ಕೂಡಿಸಿಕೊಂಡು | ಕಳ್ಳುಕೊಡನ ಬರಿದು ಮಾಡಿದ
ಕಳ್ಳದೈವದ ಗೊಡವೆ ಬ್ಯಾಡಿ ನರಕ ತಪ್ಪದೋ ||೧||
ಊಳಿಗದವರ ಮಾತ ಕೇಳಿ ಖೂಳರೆಲ್ಲ ಕೂಡಿಕೊಂಡು
ಹಾಳುಮಾಡಿ ಕೈಯ್ಯೋಳಿರ್ದ ಹೊನ್ನು ಹಣಗಳ
ಬಾಳುತಿಪ್ಪ ಕುರಿಕೋಣಂಗಳ | ಬೀಳಬೀಳನೆ ಕೊಂದು ಕೆಡಹಿ
ಬೀಳಬೇಡಿ ನರಕಕ್ಕೆಂದು ಹೇಳಬಂದೆನೋ ||೨||

ಗುತ್ತಿಯವರ ಮಾತ ಕೇಳಿ ಗುತ್ತಿಯಲ್ಲಮ್ಮನಿಗೊಲಿದು
ಬತ್ತಲೆ ಬಾಗಿಲೊಳು ನಿಂತ ಪರಿಯ ನೋಡಿರೋ
ಮತ್ತೆ ಬೇವಿನುಡಿಗೆಗಳನು | ಅರ್ಥಿಯಿಂದ ಉಟ್ಟುಕೊಂಡು
ಮುಕ್ತಿಪಡೆವೆನೆಂಬುದೊಂದು ಶಕ್ತಿ ಕಾಣಿರೋ ||೩||
ಯಕ್ಕನಾತಿಯರಕಾಟ ಜೋಕೆಯರು ಕನ್ನೆಯರು
ಬತ್ತಲೆ ಬಾಗಿಲೊಳು ನಿಂತ ಭೈರೇದೇವರು
ಮತ್ತೆ ಮಾರಿ ಮಸಣಿದುರ್ಗಿ | ಮೈಲಾರಿ ಮೊದಲಾದ ಈ
ಠಕ್ಕುದೈವದ ಗೊಡವೆ ಬೇಡಿ ನರಕ ತಪ್ಪದೋ ||೪||
ಪೊಡವಿಗಧಿಕ ಭಾಗಾನಗರದೊಡೆಯ ಘಟ್ಟವೇಂಕಟಭೀಮನ
ಕಡು ಚೆಲ್ವನಾಳುವ ನಮ್ಮ ಕನಕನೊಡೆಯನ
ಒಡೆಯ ಆದಿಕೇಶವನ | ದೃಢಭಕ್ತಿಯಿಂದಲಿ ಭಜಿಸಿ
ಸೊಡರುದೈವದ ಗೊಡವೆ ಬೇಡಿ ನರಕ ತಪ್ಪದೋ

ಒಗಟುಗಳು

ಅರ್ಥ ಬಿಡಿಸಲಸದಳವಾದ ಒಗಟಿನಂತೆ ಹಾಡುವುದರಲ್ಲಿ ಪುರಂದರ ಕನಕದಾಸರುಗಳು ಒಬ್ಬರಿಗಿಂತ ಮತ್ತೊಬ್ಬರು ಪ್ರವೀಣರು. ಒಗಟಿನ ವಾಙ್ಮಯವು ಬಲು ವಿಸ್ತಾರವಿದ್ದು, ಹಳ್ಳಿಪಳ್ಳಿಗಳಲ್ಲಿ ಸಹ ವ್ಯಾಪಿಸಿ ಬುದ್ಧಿವಂತರಿಗೆ ಕೊಡುವ ಸಮಸ್ಯೆಗಳಂತಿದ್ದುವು. ಈಗ ಈ ವಾಙ್ಮಯವೇ ಮರೆಸು ಹೋಗಿಬಿಟ್ಟದೆ. ಇದಕ್ಕೆಲ್ಲಾ ಆಧುನಿಕ ವಿದ್ಯಾಭ್ಯಾಸ ಕಾರಣ; ನಾಟಕ ಸಿನೀಮಾಗಳು ಕಾರಣ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪುರಂದರದಾಸರ ಒಗಟು

ಮುಳ್ಳುಕೊನೆಯ ಮೇಲೆ ಮೂರು ಕೆರೆಯ ಕಟ್ಟಿ
ಎರಡು ತುಂಬದು ಒಂದು ತುಂಬಲೇ ಇಲ್ಲ
ತುಂಬದಿದ್ದ ಕೆರೆಗೆ ಬಂದರು ಮೂವರು ವಡ್ಡರು
ಇಬ್ಬರು ಕುಂಟರು ಒಬ್ಬಗೆ ಕಾಲೇ ಇಲ್ಲ ॥ ಪ ॥

ಕಾಲಿಲ್ಲದ ವಡ್ಡಗೆ ಕೊಟ್ಟರು ಮೂರೆಮ್ಮೆಗಳ
ಎರಡು ಬರಡು ಒಂದಕೆ ಕರುವೇ ಇಲ್ಲ
ಕರುವಿಲ್ಲದ ಎಮ್ಮೆಗೆ ಕೊಟ್ಟರು ಮೂರು ಹೊನ್ನುಗಳ
ಎರಡು ಸವೆಕಲು ಒಂದು ಸಲ್ಲಲೆ ಇಲ್ಲ
ಸಲ್ಲದಿದ್ದ ಹೊನ್ನಿಗೆ ಬಂದರು ಮೂವರು ನೋಟಗಾರ್‍ರು
ಇಬ್ಬರು ಕುರುಡರು ಒಬ್ಬಗೆ ಕಣ್ಣೇ ಇಲ್ಲ
ಕಣ್ಣಿಲ್ಲದ ನೋಟಗಾರಗೆ ಕೊಟ್ಟರು ಮೂರು ಊರುಗಳ
ಎರಡು ಹಾಳು ಒಂದಕೆ ಒಕ್ಕಲಿ ಇಲ್ಲ
ಒಕ್ಕಲಿಲ್ಲದ ಊರಿಗೆ ಬಂದರು ಮೂವರು ಕುಂಬಾರರು
ಇಬ್ಬರು ಜೊಂಚರು ಒಬ್ಬಗೆ ಕೈಯೇ ಇಲ್ಲ
ಕೈಯ್ಯಿಲ್ಲದ ಕುಂಬಾರನು ಮಾಡಿದ ಮೂರು ಮಡಕೆಗಳ
ಎರಡು ವಡಕು ಒಂದಕೆ ಬುಡವೇ ಇಲ್ಲ
ಬುಡವಿಲ್ಲದ ಮಡಕೆಗೆ ಹಾಕಿದರ್‍ಮೂರಕ್ಕಿಕಾಳು
ಎರಡು ಬೇಯದು ಒಂದು ಬೇಯಲೇ ಇಲ್ಲ
ಬೇಯಲಿಲ್ಲದ ಅಕ್ಕಿಗೆ ಬಂದರು ಮೂವರು ನೆಂಟರು
ಇಬ್ಬರು ಉಣ್ಣರು ಒಬ್ಬಗೆ ಹಸಿವೇ ಇಲ್ಲ
ಹಸಿವಿಲ್ಲದ ನಂಟನಿಗೆ ಕೊಟ್ಟರು ಮೂರು ಟೊಣಪೆಗಳ
ಇದರರ್ಥ ಪುರಂದರವಿಠಲನೆ ಬಲ್ಲ

ಕನಕದಾಸರ ಒಗಟು

ಒಂಬತ್ತು ಹೂವಿಗೆ ಒಂದೇ ನಾಳವು ಚಂದಮಾಮ । ನಾಳ
ತುಂಬ ಕಳಾತುದಿ ಬಿಂಬಭಾನು ಪ್ರಭೆ ಚಂದಮಾಮ ॥ ಪ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಕದರುಗಾತರ ಕಂಭ ಟಿಕ್ಕೆಗಾತರ ಹೂವು ಚಂದಮಾವು
ಆನೆಗಾತರ ಕಾಯಿ ಒಂಟೆಗಾತರ ಹಣ್ಣು ಚಂದಮಾವು ॥ ೧ ॥

ಕಾಲಿಲ್ಲದದಾತನು ಆ ಮರವೇರಿದ ಚಂದಮಾವು
ಕೈಯಿಲ್ಲದಾತನು ಕೊಯ್ದನು ಆ ಹಣ್ಣು ಚಂದಮಾವು ॥ ೨ ॥

ತಳವಿಲ್ಲದ ಗೂಡೇಲಿಟ್ಟರು ಆ ಹಣ್ಣು ಚಂದಮಾವು
ನೆತ್ತಿಲ್ಲದಾತನು ಹೊತ್ತನು ಆ ಹಣ್ಣು ಚಂದಮಾವು ॥ ೩ ॥

ಮಾರ್ಗತಪ್ಪಿ ಮಾರ್ಗ ಹಿಡಿದರು ನಡೆದರು ಚಂದಮಾವು
ಸದ್ದಿಲ್ಲದ ಸಂತೇಲಿ ಇಳಿಸಿದರಾ ಹಣ್ಣು ಚಂದಮಾವು ॥ ೪ ॥

ರೊಕ್ಕವಿಲ್ಲದಾತ ಕೊಂಡನು ಆ ಹಣ್ಣು ಚಂದಮಾವು
ಮೂಗಿಲ್ಲದಾತನು ಮೂಸಿದ ಆ ಹಣ್ಣು ಚಂದಮಾವು ॥ ೫ ॥

ಅಂಗಳಿಲ್ಲದಾತ ನುಂಗಿದನಾ ಹಣ್ಣು ಚಂದಮಾವು
ಗುರುವಿನ ಮಹಿಮೆಯ ಗುರುವೇ ಬಲ್ಲನು ಚಂದಮಾವು ॥ ೬ ॥

ಮೂಢ ನರರೇನ ಬಲ್ಲರು ರಂಗಜ್ಯೋತಿಯ ಚಂದಮಾವು
ಕನಕನಾಡಿದ ಗುಟ್ಟು ಆದಿಕೇಶವ ಬಲ್ಲ ಚಂದಮಾವು ॥ ೭ ॥

ಈ ಬಗೆಯ ಒಗಟುಗಳು ವೀರಶೈವ ವಾಙ್ಮಯದಲ್ಲಿ ಹೇರಳವಾಗಿವೆ. ಏಕತಾರೆಯನ್ನು ಮಿಡಿಯುತ್ತಾ ತತ್ವಗಳನ್ನು ಹಾಡುವ ಜನರಲ್ಲಿ ಒಗಟು ಹಾಕುವುದು ಬಿಡಿಸುವುದು, ಒಂದು ಕಲೆಯಾಗಿದೆ. ಈ ಜನರು ಶಾಲೆಯಲ್ಲಿ ಕಲಿತ ಅಕ್ಷರಸ್ಥರಲ್ಲ. ಈ ಕಾಲದ ತರುಣರಿಗೆ ತತ್ವಗಳನ್ನೂ ಒಗಟುಗಳನ್ನೂ ಕೇಳುವ ರೂಢಿಯಿಲ್ಲ. ರಾಜ್ಯಾಂಗದ ಪಠ್ಯಪುಸ್ತಕಗಳಲ್ಲಿ ಬಾರದಿರುವ ಸಂಗತಿಗಳು ಅವರಿಗೆ ತಿಳಿಯದ ಕಾರಣ ರುಚಿಸುವುದಿಲ್ಲ. ಈ ಬಗೆಯ ವಾಙ್ಮಯವನ್ನೇ ಸಂಗ್ರಹಿಸಲು ಯಾರಾದರೂ ಪ್ರಯತ್ನಪಟ್ಟರೆ ಸಾಕಾದಷ್ಟು ದೊರೆಯುವುದರಲ್ಲಿ ಸಂಶಯವಿಲ್ಲ. ಹೊಸ ಕಾಲ ಹೊಸ ಭಾವನೆಯ ಹಸಗೆಟ್ಟ ಸಾಹಿತ್ಯ ಬೆಳೆಯುತ್ತಿರುವಾಗ, ಹಳೆಯದನ್ನು ಕೇಳುವವರ್ಯಾರು? ಹಳೆಯದನ್ನು ಅಳಿಸಿ ಹೊಸದರಿಂದಲೇ ಸಂಸ್ಕೃತಿಯನ್ನು ನಿರ್ಮಿಸುವೆವೆಂದರೆ, ಅದು ಸಿನೀಮಾ ತಾರೆಗಳ ಸಂಗೀತದಂತೆ ಜೊಳ್ಳುಪೊಳ್ಳಾಗಿ ಹೋಗಿಬಿಡುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಊರ ದೇವರ ಮಾಡಬೇಕಣ್ಣಾ । ತನ್ನೊಳಗೆ ತಾನೇ ॥ ಪ ॥

ಊರ ದೇವರ ಮಾಡಿರೆಂದು । ಸಾರುತಿದೆ ಶ್ರುತಿ ಇರಳು ಹಗಲು
ದ್ವಾರಗಳೊಂಬತ್ತು ಮುಚ್ಚಿ । ನಿಲ್ಲಿಸಿ ಭ್ರೂಮಧ್ಯದಲ್ಲಿ ॥ ಅ ॥

ಎಷ್ಟು ಯುಗಗಳು ಕೀರಿ ಹೋಯ್ತಣ್ಣಾ । ದೇವರ ಮಾಡದೆ
ಕಷ್ಟದಿಂದ ನೊಂದೆ ಕಾಣಣ್ಣಾ
ಅಷ್ಟದಳದ ಕಂಭ ನಿಲ್ಲಿಸಿ । ಕಟ್ಟೆ ಚಪ್ರಂಗಳನೆ ಹಾಕಿ
ಸೃಷ್ಟಿದೇವರ ತಂದುನಿಲ್ಲಿಸಿ । ದುಷ್ಟಕೋಣನ ಶಿರವ ತರಿದು ॥ ೧ ॥

ಕಷ್ಟಕ್ಲೇಶವೆಂಬ ಕುರಿಯಣ್ಣಾ । ಅದನ್ನೆ ತಂದು
ಕಟ್ಟೆ ತಲೆಯನು ಹೊಡೆಯಬೇಕಣ್ಣಾ ॥
ಅಷ್ಟಮದದ ಕುರಿಗಳನ್ನು । ಕಟ್ಟೆ ತಲೆಯನು ಚಂಡನಾಡಿ
ಅಟ್ಟೆತಿರುಗುವ ಕೋಳಿಯನ್ನು । ಕುಟ್ಟಿಸೂರೆ ಹಾಕುತಲಿ ॥ ೨ ॥

ನಾನು ಎಂಬೋ ಮೇಕೆ ಕಾಣಣ್ಣಾ । ಅದಕ್ಕೆ ತನ್ನ
ಜ್ಞಾನವೆಂಬೋ ಪೋತರಾಜಣ್ಣಾ ॥
ತಾನೆ ಎಂಬೋ ಚಾಟಿಹೊಡೆದು । ಹೀನಪೋತನ ಸೀಳಬಿಸುಟು
ಧ್ಯಾನಗುಡಿಸಲ ಸೂರೆಗೊಂಡು । ತಾನೆ ಬೆಳಗುವ ಜ್ಯೋತಿ
ನಿಲ್ಲಿಸಿ ॥ ೩ ॥

ನಾಳೆ ನೋಡೋಣೆನ್ನ ಬೇಡಣ್ಣಾ । ಕೇಳಣ್ಣಾ ನೀನೀ
ವೇಳೆಯೊಳಗೇ ಮಾಡಬೇಕಣ್ಣಾ ॥
ನಾಳೆ ನೋಡೋಣೆಂದರೇ ನೀ । ಬಾಳುವೋ ಕಾಲಾದಿಯಮನು
ಕೋಳಿಪಿಳ್ಳೆ ಆಡುವಾಗ । ಹಾಳುಹದ್ದಿನಂತೆ ಒಯ್ವ ॥ ೪ ॥

ಹೆಂಡರುಮಕ್ಕಳು ಕಾಣಣ್ಣಾ । ಕೇಳಣ್ಣಾ ನಿನ್ನ
ಮಂಡೆ ತುಂಬಾ ಬಳಗ ಸುಳ್ಳಣ್ಣಾ ॥
ದಂಡಧಾರಿ ಯಮನು ಬಂದು । ಮಂಡೆಮೇಲೆ ಹೊಯ್ಯುವಾಗ
ಹೆಂಡರುಮಕ್ಕಳು ನಿನ್ನ । ಕಂಡು ಬಿಡಿಸುವದಿಲ್ಲ ಕೇಳೋ ॥ ೫ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಮತ್ತೆ ಹೆಣ್ಣಿನ ನೋಡುವಿಯಲ್ಲೋ । ನೀ ಗಳಿಸಿದಂಥಾ
ಬುತ್ತಿ ನೋಡಿ ಉಂಬುವಿಯಲ್ಲೋ ॥
ಮೃತ್ಯುವಿನ ಬಾಯಿಗೆ ನೀನು । ತುತ್ತು ಆಗಿ ಹೋಗಬೇಡ
ತೊತ್ತು ಆಗಿ ಗುರುವಿಗೇ ನೀ । ಉತ್ತಮ ಸೇವೆಯನು ಮಾಡಿ ॥೬॥

ಮುಂದೆ ಇಂಥಾ ಜನ್ಮ ಬರದಣ್ಣಾ । ನೋಡಣ್ಣಾ ನಿನಗೆ
ಮಂದಮತಿಯು ಆಗಬೇಡಣ್ಣಾ ॥
ಹಿಂದಿನ ಕಷ್ಟವ ಮರೆದು । ಮುಂದಿನ ಹಮ್ಮನೆ ತೊರೆದು
ತಂದೆ ಪುರಂದರವಿಠಲನ । ಹೊಂದಲು ನೀ ಮುಕ್ತನಣ್ಣಾ ॥ ೭ ॥

ಯೋಗಶಾಸ್ತ್ರದ ಮೇಲೆ

ರಾಗ : ಆನಂದಭೈರವಿ — ತಾಳ : ಛಾಪು

ಕಣ್ಣಿನೊಳಗೆ ನೋಡು ಹರಿಯ । ಒಳ
ಗಣ್ಣಿನಿಂದಲಿ ನೋಡು ಮೂಜಗ ದೊರೆಯ ॥ ಪ ॥

ಆಧಾರ ಮೊದಲಾದ ಆರು । ಚಕ್ರ ।
ಶೋಧಿಸಿ ಬಿಡಬೇಕು ಈ ಕ್ಷಣ ಮೂರು
ಸಾಧಿಸಿ ಸುಷುಮ್ನವೇರು । ಅಲ್ಲಿ ।
ಭೇದಿಸಿ ನೀ ಪರಬ್ರಹ್ಮನ ಸೇರು ॥ ೧ ॥

ಎವೆಯಿಕ್ಕದೆ ಮೇಲೆ ನೋಡಿ । ಬೇಗ ।
ಪವನನಿಂದಲಿ ವಾಯುಬಂಧನ ಮಾಡಿ
ಕವಿದು ನಾದವ ಪಾಕಮಾಡಿ । ಅಲ್ಲಿ ।
ನವವಿಧ ಭಕುತೀಲಿ ನಲಿನಲಿದಾಡಿ ॥ ೨ ॥

ಅಂಡದೊಳಗೆ ಆಡುತಾನೆ । ಭಾನು
ಮಂಡಲ ನಾರಾಯಣನೆಂಬುವನೇ
ಕುಂಡಲಿ ತುದಿಯೊಳಿದ್ದಾನೆ । ನಮ್ಮ ।
ಪುರಂದರವಿಠಲ ಪಾಲಿಸುತಾನೆ ॥ ೩ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಹರಿದಾಸರ ರೀತಿನೀತಿಗಳು

ಹರಿದಾಸರ ರೀತಿನೀತಿಗಳನ್ನು ತಿಳಿಸುವ ಪದಗಳ ಮಾದರಿ ಕೆಳಕಂಡ ಹಾಗಿವೆ. ಅಸತ್ಯವನ್ನು ಖಂಡಿಸುವುದರಲ್ಲಿ ದಯೆದಾಕ್ಷಿಣ್ಯಗಳು ದಾಸರಿಗಿಲ್ಲ.

ರಾಗ : ಪಂತುವರಾಳಿ — ತಾಳ : ಆದಿ

ಆದದ್ದಾಯ್ತಿನ್ನಾದರು ಒಳ್ಳೆ । ಹಾದಿ ಹಿಡಿಯೊ ಪ್ರಾಣಿ
ಈ ದುರ್ನಡತೆಯಿಂದ್ಹೋದರಿಹಪರದಿ । ಮೋದೆಂದಿಗು ಕಾಣೆ ॥ ಪ ॥

ನೆಲಾಸತೀಧನದೊಳಾನವರತ । ಹುಳಾಗಿರುವಿಯಲ್ಲೋ
ಸ್ಥಳಾಸ್ಥಳರಿಯದೆ ಕಲಾಪವಾಡ್ಯಫ । ಕೊಳಾಗುವದು ಸಲ್ಲೋ
ಹಲಾ ಪಿಡಿದು ವಿಧಿ ಕುಲಾಚರಣೆ ಬಿಡೆ । ಫಲಾ ತೆಗುವರಲ್ಲೋ
ಎಲಾ ಕೇಳು ಒಂದು ತಿಲಾಮಾತ್ರ ನೀ । ಗೆಲಾಹ ಬಗೆಯಿಲ್ಲೋ ॥ ೧ ॥

ಶಿಲಾದಿ ವಿಗ್ರಹ ಥಳಾಸೆ ಹರಿಯೆಂ । ಬ್ಯಲಾ ಕೇವಲ ಸುಳ್ಳೋ
ಚಲಾಪ್ರತಿಮೆ ಪದಗಳಾರ್ಚಿಸಿದಲೇ । ಮಲಾ ಘಳಿಸಿದ್ಯಲ್ಲೋ
ಕಳಾ ಬಿಡದಿರೆ ಅನಿಲಾನ ಹರಿಮನೆ । ಮೊಳಾಗಿರುವ್ರುದಲ್ಲೋ
ನಳಾ ಭರತಮುಖ ಇಳಾಣ್ಮರಂದದಿ । ಭಲಾ ಎನಿಸಿಕೊಳ್ಳೋ ॥ ೨ ॥

ಬಿಲಾ ಸೇರಿ ತಲೆಕೆಳಾಗಿ ತಪಿಸಲು । ಫಲಾ ಲೇಶತ್ತಿಲ್ಲೋ
ಖಳಾರಿ ದಿನಬಿಂದು ಜಲಾ ಕೊಳ್ಳೆನೆಂದು । ಛಲಾ ಮಾಡಲಿಲ್ಲೋ
ಬಲಾದರದಲಿಂ ತುಲಾದಿ ಸ್ನಾನ ಮೊ । ದಲಾದ ವ್ರತವೆಲ್ಲೋ
ಬಲಾರಿನುತ ಪ್ರಾಣೇಶ ವಿಠ್ಠಲನ । ಬಲಾ ಘಳಿಸಿಕೊಳ್ಳೋ ॥ ೩ ॥

ರಾಗ : ಕಾಂಬೋದಿ — ತಾಳ : ಜಂಪೆ

ಇದು ಭಾಗ್ಯ ಇದು ಭಾಗ್ಯ ಇದು ಭಾಗ್ಯವಯ್ಯಾ
ಪದುಮನಾಭನ ಪಾದಭಜನೆ ಸುಖವಯ್ಯಾ ॥ ಪ ॥

ಕಲ್ಲಾಗಿ ಇರಬೇಕು ಕಠಿಣ ಭವತೊರೆಯೊಳಗೆ
ಬಿಲ್ಲಾಗಿ ಇರಬೇಕು ತನ್ನವರೊಳಗೆ
ಮೆಲ್ಲನೇ ಮಾಧವಗೆ ಮನವ ಮೆಚ್ಚಿಸಬೇಕು
ಬೆಲ್ಲವಾಗಿರಬೇಕು ಬಲ್ಲವರೊಳಗೆ ॥ ೧ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಬುದ್ಧಿಯಲಿ ತನುಮನವ ತಿದ್ದಿಕೊಳ್ಳಲಿ ಬೇಕು
ಮುದ್ದಾಗಿ ಇರಬೇಕು ಮುನಿಯೋಗಿಗಳಿಗೆ
ಮಧ್ವಮತಾಬ್ಧಿಯಲಿ ಮೀನಾಗಿ ಇರಬೇಕು
ಶುದ್ಧಮನದಲಿ ತತ್ವ ಶೋಧಿಸಲಿ ಬೇಕು ॥ ೨ ॥

ವಿಷಯಭೋಗದ ತೃಣಕೆ ಉರಿಯಾಗಿ ಇರಬೇಕು
ನಿಶಿದಿನವು ಶ್ರೀಹರಿಯ ಭಜಿಸಬೇಕು
ವಸುಧೆಯೊಳು ಪುರಂದರವಿಠಲನ ನಾಮವನು
ಹಸನಾಗಿ ನೆನೆನೆನೆದು ಸುಖಿಯಾಗಬೇಕು ॥ ೩ ॥

ರಾಗ : ಸೌರಾಷ್ಟ್ರ — ತಾಳ : ಛಾಪು

ಎಚ್ಚರಿಕೆ ಭಾಗ್ಯ ಯಾರಿಗೂ ಸ್ಥಿರವಲ್ಲ ನಿಶ್ಚಯವೆಚ್ಚರಿಕೆ
ಹೆಚ್ಚದೆ ಹಿಗ್ಗದೆ ಇದ್ದರೆ ಲೋಕಕ್ಕೆ ಮೆಚ್ಚು ಕೇಳೆಚ್ಚರಿಕೆ ॥ ಪ ॥

ಬಲ್ಲಿದ ನೀನೆಂದು ಬಡವರ ಬಾಯನು ಬಡಿಯಬೇಡೆಚ್ಚರಿಕೆ
ಎಳ್ಳಷ್ಟು ತಪ್ಪಲು ಯಮನವರು ನರಕಕ್ಕೆ ಎಳೆದೊಯ್ವರೆಚ್ಚರಿಕೆ ॥ ೧ ॥

ಮಾಡು ದಾನಧರ್ಮ ಪರಉಪಕಾರವ ಮರೆಯದಿರೆಚ್ಚರಿಕೆ
ನೋಡಿ ನಡೆಯುವಂಥ ಪುಣ್ಯವಂತರ ನೋಡು ನಟನೆ ಬೇಡೆಚ್ಚರಿಕೆ ॥ ೨ ॥

ಮೂಢರೊಡನಾಡಿ ಮುಂದುಗಾಣದೆ ನೀನು ಮುನಿಯದಿರೆಚ್ಚರಿಕೆ
ಕೇಡನೆಣಿಸದಿರು ನಂಬಿದ ಠಾವಿಗೆ ಕೆಡುವೆ ನೀ ಎಚ್ಚರಿಕೆ ॥ ೩ ॥

ಬಾಳುವಾಗ ಶಿರಿ ಸ್ಥಿರವಾಗಿ ಇಹುದೆಂದು ಬೆಡಗು ಬೇಡೆಚ್ಚರಿಕೆ
ಹಾಳುಬದುಕಿಗಾಗಿ ಹಲವರ ಕೂಡಣ ಹಗೆಯು ಬೇಡೆಚ್ಚರಿಕೆ ॥ ೪ ॥

ಕಾಲನವರು ಬಂದು ಯಾವಾಗ ಎಳೆವರೊ ಕಾಣದು ಎಚ್ಚರಿಕೆ
ಶ್ರೀಲೋಲ ಪುರಂದರವಿಠಲನ ಸ್ಮರಣೆಯ ಮರೆಯದಿರೆಚ್ಚರಿಕೆ ॥ ೫ ॥

ರಾಗ : ಶಂಕರಾಭರಣ — ತಾಳ : ರೂಪಕ

ಸತ್ಯವಂತರ ಸಂಗವಿರಲು ತೀರ್ಥವ್ಯಾತಕೆ
ನಿತ್ಯ ಅನ್ನದಾನವಿರಲು ಭಯವು ಯಾತಕೆ ॥ ಪ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ತಾನು ಉಣ್ಣದ ಪರರಿಗೀಯದ ಧನವಿದ್ದ್ಯಾತಕೆ
ಮಾನಹೀನನಾಗಿ ಬಾಳ್ವ ಮನುಜನೇತಕೆ
ಜ್ಞಾನವಿಲ್ಲದೆ ನೂರುಕಾಲ ಬದುಕಲೇತಕೆ । ತನ್ನ
ಮಾನಿನೀಯ ತೊರೆದಮೇಲೆ ಭೋಗವ್ಯಾತಕೆ ॥ ೧ ॥

ಮಾತು ಕೇಳದೆ ಮಲೆತು ನಡೆವ ಮಕ್ಕಳೇತಕೆ
ಪ್ರೀತಿಯಿಲ್ಲದೆ ಎಡೆಯೊಳಿಟ್ಟ ಅನ್ನವೇತಕೆ
ನೀತಿಯಿಂದ ನಡೆಯದಿರುವ ಭಂಟನೇತಕೆ
ಸೋತು ಹೆಣ್ಣಿನ ಪಾಶದೊಳಿರುವ ಪುರುಷನೇತಕೆ ॥ ೨ ॥

ಸನ್ನೆಯರಿತು ನಡೆಯದಿರುವ ಸತಿಯು ಏತಕೆ
ಮನ್ನಣೆಯಿತ್ತು ರಾಜ್ಯವಾಳದ ಧೊರೆಯು ಏತಕೆ
ಮುನ್ನಕೊಟ್ಟು ಹುಟ್ಟದಲ್ಲದೆ ಬಯಸಲ್ಯಾತಕೆ । ಪ್ರ
ಸನ್ನ ಆದಿಕೇಶವನಲ್ಲದ ದೈವವೇತಕೆ ॥ ೩ ॥

ರಾಗ : ಕಾಂಬೋದಿ — ತಾಳ : ಜಂಪೆ

ಭೂಷಣಕೆ ಭೂಷಣ ಇದೆ ಭೂಷಣ
ಶೇಷಗಿರಿವಾಸ ಶ್ರೀ ವರವೆಂಕಟೇಶ ॥ ಪ ॥

ನಾಲಿಗೆಗೆ ಭೂಷಣ ನಾರೆಯಣನ ನಾಮ
ಕಾಲಿಗೆ ಭೂಷಣ ಹರಿಯ ಯಾತ್ರೆ
ಆಲಯಕೆ ಭೂಷಣ ತುಲಸಿವೃಂದಾವನ । ವಿ
ಶಾಲಕರ್ಣಕೆ ವಿಷ್ಣುಕಥೆ ಭೂಷಣ ॥ ೧ ॥

ದಾನವೇ ಭೂಷಣ ಎರಡು ಹಸ್ತಂಗಳಿಗೆ
ಮಾನವೇ ಭೂಷಣ ಮಾನವರಿಗೆ
ಜ್ಞಾನವೇ ಭೂಷಣ ಮುನಿಯೋಗಿಗಳಿಗೆಲ್ಲ
ಮಾನಿನಿಗೆ ಭೂಷಣ ಪತಿಯ ಭಕುತಿ ॥ ೨ ॥

ರಂಗನ್ನ ನೋಡುವುದೆ ಕಂಗಳಿಗೆ ಭೂಷಣ
ಮಂಗಳಾಂಗಗೆ ಮಣಿವ ಶಿರ ಭೂಷಣ

Sri Vidyabharathi Book Centre, Sringeri

CC-O. In Public Domain. Digitized by eGangotri

ಶೃಂಗಾರ ತುಲಸಿಮಣಿ ಕೊರಳಿಗೆ ಭೂಷಣ
ರಂಗವಿಠಲನ ನಾಮ ಸರ್ವಭೂಷಣವಯ್ಯ ॥ ೩ ॥

ರಾಗ : ಕಾಂಬೋದಿ — ತಾಳ : ಜಂಪೆ

ಭೂಷಣಕೆ ಭೂಷಣ ಹರಿಯ ನಾಮ । ಮಿಕ್ಕ
ವೇಷ ಭಾಷಾಭರಣವೆಲ್ಲ ನಿರ್ನಾಮ ॥ ಪ ॥

ಹರಿಯ ಸಂದರ್ಶನವೆ ನೇತ್ರಕ್ಕೆ ಭೂಷಣವು
ಹರಿಪಾದ ಪ್ರಣತಿಯೆ ಶಿರಕೆ ಭೂಷಣವು
ಹರಿಯರ್ಚನಾದಿಗಳು ಕರಗಳಿಗೆ ಭೂಷಣವು
ಹರಿಯಾತ್ರೆ ಮಾಡುವದೆ ಚರಣಕ್ಕೆ ಭೂಷಣವು ॥ ೧ ॥

ಹರಿಯ ನಾಮಾಮೃತವು ರಸನೆಗೆ ಭೂಷಣವು
ಹರಿಸ್ತೋತ್ರ ಪೂರ್ಣವಿದ್ಯೆಗೆ ಭೂಷಣ
ಹರಿಯಂಗಸಂಗವೀ ತನುವಿಗೆ ಭೂಷಣವು
ಹರಿಯ ಅನುರಾಗವೇ ಮನಸಿಗೆ ಭೂಷಣವು ॥ ೨ ॥

ಹರಿಯ ಸ್ಮರಿಸುತಲಿಹುದೆ ಸ್ಥಿರಮತಿಗೆ ಭೂಷಣವು
ಹರಿಗಳುಕಿ ಬಾಳುವುದೆ ಜನ್ಮಕ್ಕೆ ಭೂಷಣ
ಹರಿಗೆ ಹಿಗ್ಗುತಲಿಹುದೆ ಕರಣಕ್ಕೆ ಭೂಷಣವು
ಗುರುಜಯವಿಠಲನ ಸ್ಮೃತಿ ಸಕಲ ಭೂಷಣವು ॥ ೩ ॥

ರಾಗ : ಚಕ್ರವಾಕ — ತಾಳ : ಆದಿ

ಧನ ನಿಲ್ಲದಯ್ಯ ಸಾ । ಧನ ನಿಲ್ಲುವದಯ್ಯ
ತನು ನಿಲ್ಲದಯ್ಯ ದಾ । ತನು ಎನಿಸಯ್ಯ ॥ ಪ ॥

ಜನ ಬರುವರೋ ಸ । ಜ್ಜನ ಬಾರರಯ್ಯ
ಅನುಸರಿಸೀ ಜೀ । ವನ ಪೊರೆಯಯ್ಯಾ ॥ ೧ ॥

ಹಣ ಪುಟ್ಟುವದೊ ಸೊ । ಗುಣ ಪುಟ್ಟದಯ್ಯ
ಗುಣನಿಧಿ ಹರಿಗುಣ । ಗುಣಿಸಿ ಬಾಳಯ್ಯ ॥ ೨ ॥

Sri Vidyabharathi Book Centre, Sringeri

 CC-O. In Public Domain. Digitized by eGangotri

ಭಾಗ್ಯನಿಧಿ ವಿಠಲನ । ಆಜ್ಞೆಯಿದಯ್ಯಾ
ಸುಜ್ಞರ ಸೇವಿಸಿ । ಪ್ರಾಜ್ಞನಾಗಯ್ಯ ॥ ೩ ॥

ರಾಗ : ಸೌರಾಷ್ಟ್ರ — ತಾಳ : ಛಾಪು

ಮುಂದೆ ಭಲಾ ಎಂದು ಹಿಂದಾಡಿಕೊಂಬನ ಸಂಗ ಬೇಡ
ಕುಂದು ನಿಂದೆ ಅಪವಾದವಿಡುವನ ಸಂಗ ಬೇಡ ॥ ಪ ॥

ಮಾತುಮಾತಿಗೆ ಮಾನವರನ್ನು ಜರಿವನ ಸಂಗ ಬೇಡ
ನೀತಿವಂತರನು ಭೀತಿಪಡಿಸುವವನ ಸಂಗ ಬೇಡ ॥ ೧ ॥

ವಿನಯವಿವೇಕವಿಲ್ಲದ ವಿದ್ಯಾವಂತನ ಸಂಗ ಬೇಡ
ಧನಕೋಟಿ ಕೊಟ್ಟರು ಕಪಟ ಮಾನವನ ಸಂಗ ಬೇಡ ॥ ೨ ॥

ತನ್ನ ಕಾರ್ಯಕ್ಕಾಗಿ ಪರರನ್ನು ಕೆಡಿಸುವನ ಸಂಗ ಬೇಡ
ಘನ್ನಮಹಿಮ ಶ್ರೀ ಪುರಂದರವಿಠಲನ ಮರೆಯಬೇಡ ॥ ೩ ॥

ರಾಗ : ಪೂರ್ವಿ — ತಾಳ : ಜಂಪೆ

ಅಜ್ಞಾನಿಗಳ ಕೂಡ ಅಧಿಕಸ್ನೇಹಕ್ಕಿಂತ
ಸುಜ್ಞಾನಿಗಳ ಕೂಡ ಕಲಹವೇ ಲೇಸು ॥ ಪ ॥

ಉಂಬುಡುವದಕ್ಕಿರದ ಅರಸನೋಲಗಕಿಂತ
ತುಂಬಿದೂರೊಳಗೆ ತಿರಿದುಂಬುದೇ ಲೇಸು
ಹಂಬಲಿಸಿ ಹಾಳುಹರಟೆಗಳ ಹರಟೇಗಿಂತ
ನಂಬಿ ಹರಿದಾಸರನು ಪೊಂದುವುದೆ ಲೇಸು ॥ ೧ ॥

ಒಡನೆ ಹಂಗಿಸುವವನ ಪಾಲೋಗರಕ್ಕಿಂತ
ಕುಡಿನೀರ ಕುಡಿದುಕೊಂಡಿರುವುದೇ ಲೇಸು
ಕಡುಕುಹಕನೊಡನೆ ಸಂಗವ ಮಾಡುವದಕಿಂತ
ಅಡವಿಯೊಳಗಜ್ಞಾತವಾಸ ಲೇಸು ॥ ೨ ॥

ಮಸೆದು ಮತ್ಸರಿಪ ಸತಿಯೊಡನೆ ಬಾಳ್ವುದಕಿಂತ
ಹಸನಿಲ್ಲದ ಹಾಳುಗುಡಿಯೆ ಲೇಸು

Sri Vidyabharathi Book Centre, Sringeri

CC-O. In Public Domain. Digitized by eGangotri

ಆಸಮಬಲ ನಮ್ಮ ಶ್ರೀ ಪುರಂದರವಿಠಲನ
ನಿಶಿದಿನದಿ ನೆನೆಯುತ್ತ ಬಾಳುವುದೆ ಲೇಸು ॥ ೩ ॥

ರಾಗ : ಕಾಂಬೋದಿ — ತಾಳ : ಜಂಪೆ

ಪಾಪಿ ಬಲ್ಲನೆ ಪರರ ಸುಖದುಃಖವ
ಕೋಪಿ ಬಲ್ಲನೆ ಶಾಂತಿ ಶೀಲ ಸದ್ಗುಣವ ॥ ಪ ॥

ಕತ್ತೆ ಬಲ್ಲದೆ ಹೊತ್ತ ಕತ್ತುರಿಯ ಪರಿಮಳವ
ಮೃತ್ಯು ಬಲ್ಲಳೆ ಹೊತ್ತುವೇಳೆಯೆಂಬುದನು
ತೊತ್ತು ಬಲ್ಲಳೆ ಮಾನ ಅಭಿಮಾನವೆಂಬುದನು
ಭೃತ್ಯ ಬಲ್ಲನೆ ಒಡೆಯಗಿರುವ ಕಷ್ಟಗಳನ್ನು ॥ ೧ ॥

ಹೇನು ಬಲ್ಲುದೆ ಮುಡಿದ ಹೂವಿನ ಸುಗಂಧವನು
ಶ್ವಾನ ಬಲ್ಲುದೆ ರಾಗಭೇದಂಗಳ
ಮೀನು ಬಲ್ಲದೆ ನೀರು ಸ್ವಾದುಸೌಳೆಂಬುದನು
ಹೀನ ಬಲ್ಲನೆ ಸುಗುಣದುರ್ಗುಣಗಳನ್ನು ॥ ೨ ॥

ಬಾಳೆ ಬಲ್ಲುದೆ ಮರಳಿ ಫಲವಾಹ ಬಗೆಯನ್ನು
ಸೂಳೆ ಬಲ್ಲಳೆ ಗೆಳೆಯಗಿರುವ ಬಡತನವ
ಕೇಳಬಲ್ಲನೆ ಕಿವುಡ ಏಕಾಂತಮಾತುಗಳ
ಹೇಳಬಲ್ಲನೆ ಮೂಕ ಕನಸಿನ ಪರಿಯನ್ನು ॥ ೩ ॥

ಕಾಗೆ ಬಲ್ಲುದೆ ಒಳ್ಳೆ ಕೋಗಿಲೆಯ ಸ್ವರವನ್ನು
ಗೂಗೆ ಬಲ್ಲುದೆ ಹಗಲ ಹರಿದಾಟವ
ಜೋಗಿ ಬಲ್ಲನೆ ಮನೆಯೊಳಿಲ್ಲ ಉಂಟೆಂಬುದನು
ರೋಗಿ ಬಲ್ಲನೆ ಪಕ್ವಭೋಜನದಸವಿಯ ॥ ೪ ॥

ಹೇಡಿ ಬಲ್ಲನೆ ರಣದ ಸಾಹಸದ ಶೌರ್ಯವನು
ಕೋಡಗವು ಬಲ್ಲುದೇ ರತ್ನದ ಬೆಲೆಯ
ಬೇಡಿದುದ ನಮ್ಮ ಶ್ರೀ ಪುರಂದರವಿಠಲನೊಲ್
ನಾಡದೈವಂಗಳು ಕೊಡಬಲ್ಲವೇ ಮರುಳೆ ॥ ೫ ॥

Sri Vidyabharathi Book Centre, Sringeri

 CC-O. In Public Domain. Digitized by eGangotri

ಸ್ತ್ರೀಯರಿಗಾಗಿ

ರಾಗ : ಶಂಕರಾಭರಣ — ತಾಳ : ಆದಿ

ಬುದ್ಧಿಮಾತು ಹೇಳಿದರೆ ಕೇಳಬೇಕಮ್ಮ । ಮಗಳೆ
ಶುದ್ಧಳಾಗಿ ಗಂಡನೊಡನೆ ಬಾಳಬೇಕಮ್ಮ ॥ ಪ ॥

ಅತ್ತೆಮಾವಗೆ ಅಂಜಿಕೊಂಡು ನಡೆಯಬೇಕಮ್ಮ । ಮಗಳೆ
ಚಿತ್ತದೊಲ್ಲಭನಕ್ಕರೆಯನ್ನು ಪಡೆಯಬೇಕಮ್ಮ
ಹೊತ್ತುಹೊತ್ತಿಗೆ ಮನೆಯ ಕೆಲಸ ಮಾಡಬೇಕಮ್ಮ । ಮಗಳೆ
ಹತ್ತುಮಂದಿ ಒಪ್ಪುವ ಹಾಗೆ ನುಡಿಯಬೇಕಮ್ಮ ॥ ೧ ॥

ಕೊಟ್ಟುಕೊಂಬುವ ನೆಂಟರೊಡನೆ ದ್ವೇಷ ಬೇಡಮ್ಮ । ಮಗಳೆ
ಅಟ್ಟು ಉಂಬುವ ಕಾಲದಲ್ಲಿ ಆಟ ಬೇಡಮ್ಮ
ಹಟ್ಟಬಾಗಿಲಲ್ಲಿ ಬಂದು ನಿಲ್ಲಬೇಡಮ್ಮ । ಮಗಳೆ
ಕಟ್ಟಿ ಆಳುವ ಗಂಡನೊಡನೆ ಸಿಟ್ಟು ಬೇಡಮ್ಮ ॥ ೨ ॥

ನೆರೆಹೊರೆಯವರಿಗೆ ನ್ಯಾಯ ಹೇಳಬೇಡಮ್ಮ । ಮಗಳೇ
ಗರುವ ಕೋಪ ಮತ್ಸರವ ಮಾಡಬೇಡಮ್ಮ
ಪರರ ನಿಂದಿಪ ಹೆಂಗಸರೊಡನೆ ಸೇರಬೇಡಮ್ಮ । ಮಗಳೆ
ಪುರಂದರವಿಠಲನ ಸ್ಮರಣೆಯನ್ನು ಮರೆಯಬೇಡಮ್ಮ ॥ ೩ ॥

ರಾಗ : ಧನಾಸರಿ — ತಾಳ : ಆದಿ

ಭಂಗಾರವಿಡಬಾರೇ । ನಿನಗೊಪ್ಪುವ । ಭಂಗಾರವಿಡಬಾರೇ
ರಂಗನಾಥನ ದಿವ್ಯ । ಮಂಗಳನಾಮವೆಂಬ । ಭಂಗಾರವಿಡಬಾರೆ ॥ ಪ ॥

ಮುತ್ತೈದೆತನವೆಂಬ ಮುದದಲಿ ಕುಂಕುಮದ ಕಸ್ತೂರಿಯ ಬಟ್ಟನಿಡೇ ।
ನಿನ್ನ ಫಣೆಗೆ । ಕಸ್ತೂರಿಯ ಬಟ್ಟನಿಡೇ
ಹೆತ್ತವರ ಕುಲಕೆ ಕುಂದು ಬಾರದ ಹಾಗೆ ಮಸ್ತಕ ಮಕುಟವಿಡೇ
ಕರ್ತೃಪತಿಯ ಮಾತ ಮೀರಬಾರದು ಎಂಬ ಮುತ್ತಿನ್ವಾಲೆ ಕೊಪ್ಪನಿಡೇ ।
ನಿನ್ನ ಕಿವಿಗೇ । ಮುತ್ತಿನ್ವಾಲೆ ಕೊಪ್ಪನಿಡೇ
ಹತ್ತುಮಂದಿಯ ಕೈಲಿ ಹೌಧಾದೆನಿಸಿಕೊಂಬ ಹಸ್ತಕಡಗ ಕಂಕಣವಿಡೇ ॥ ೧ ॥

Sri Vidyabharathi Book Centre, Sringeri

ಆರಗಳಿಗೇ ಪತಿಯ ಅಗಲಬಾರದು ಎಂಬ ಅಚ್ಚಮಂಗಳಸೂತ್ರ ಕಟ್ಟಿ |
ನಿನ್ನ ಕೊರಳಿಗೆ | ಅಚ್ಚಮಂಗಳಸೂತ್ರ ಕಟ್ಟೀ
ಪರಪುರುಷನ ನಿನ್ನ ಪಡೆದ ತಂದೆಯೆಂಬ ಬಿರಿದಿನೊಢ್ಯಾಣವಿಡೇ
ಕರೆದೊಬ್ಬರಿಗೆ ಅನ್ನವಿಕ್ಕುವೆನೆಂತೆಂಬ ಹರಡಿದೋರೆಯನಿಡೇ |
ನಿನ್ನ ಕೈಗೆ | ಹರಡಿದೋರೆಯನಿಡೇ
ನೆರೆಹೊರೆಯವರೆಲ್ಲ ಸರಿಸರಿಯೆಂಬಂಥ ಸರಿಗೆ ಸರವ ಹಾಕೇ ||೨||

ಮಾನ ಹೊರಗೆ ಬಿಚ್ಚೆನೆಂಬ ಕಂಭಾವತಿಯ ನೇಮದ ಮಡಿಯನುಡೇ |
ನಿನ್ನ ಮೈಗೇ | ನೇಮದ ಮಡಿಯನುಡೇ
ಹೀನಗುಣವ ಬಿಟ್ಟು ಹಿತದಲ್ಲದ್ದೇನೆಂಬ ಹೆಚ್ಚಿನ ಕುಪ್ಪಸ ತೊಡೇ
ಜ್ಞಾನನಿಧಿಗಳಾದ ಗುರುಗಳ ಪಾದಕ್ಕಾನತಳಾಗಿ ಬಾಳೇ |
ಗುರುಗಳ | ಪಾದಕ್ಕಾನತಳಾಗಿ ಬಾಳೇ
ಮೌನಿಗಳೊಡೆಯ ಶ್ರೀ ಪುರಂದರವಿಠಲನ ಪ್ರೇಮ ಸೆರಗೀಲಿ ಕಟ್ಟೇ ||೩||

ಹರಿದಾಸರು ಪ್ರಪಂಚದ ರೀತಿನೀತಿಗಳನ್ನು ತಿಳಿಸುವಾಗ, ಎಲ್ಲಾದರೊಮ್ಮೆ ತಾವನುಸರಿಸಿರುವ ಮತದ ಮಾತಾಡುವರಲ್ಲದೆ, ವಿಶ್ವಧರ್ಮವನ್ನವರು ಮರೆಯುವುದಿಲ್ಲ. ಯಾವ ದೇಶಕಾಲಗಳಿಗಾಗಲಿ, ಮತಗಳಿಗಾಗಲಿ, ನೀತಿಯೆಂಬುವುದು ಸಮಾನವಾದ ನೆಲೆಗಟ್ಟಿನಂತಿರುತ್ತದೆ. ನೀತಿಯೆಂಬ ನೆಲಗಟ್ಟಿನ ಮೇಲೆ ಸಾಂಪ್ರದಾಯಿಕ ಕೆಲವು ಉಪದೇಶಗಳಿಂದ ಸಹಿತವಾಗಿ ಮತಮಂದಿರದ ನಿರ್ಮಾಣವಾಗಿರುತ್ತದೆ. ನೀತಿಗೊಳಗಾಗದವರನ್ನು ಮತವು ಪುರಸ್ಕರಿಸುವುದಿಲ್ಲ. ನೀತಿ ಮತ ಬಾಹಿರರನ್ನು ಕುರಿತು ತತ್ತತ್ಕಾಲದಲ್ಲಿ ಸಮಾಜವು ಕೆಲವು ಕಟ್ಟಲೆಗಳನ್ನುಪದೇಶಿಸುತ್ತದೆ. ಆ ಕಟ್ಟಲೆ ಮೀರಿದವರನ್ನು ಸಮಾಜವು ಬಹಿಷ್ಕರಿಸುತ್ತದೆ. ಬಹಿಷ್ಕೃತರ ಸಂಖ್ಯೆ ಬೆಳೆಯಿತು ಎಂದರೆ ಮತ್ತವರದೇ ಒಂದು ಗುಂಪಾಗಿ ನಿಲ್ಲುತ್ತದೆ. ಅವರಿಗಾದರೂ ಕೆಲಕೆಲವು ಸುಲಭ ನೀತಿನಿಯಮಗಳಿಲ್ಲದ್ದಿರೆ ಸಮಾಜಧಾರಣೆ ಮಾಡಲು ಸಾಧ್ಯವಾಗುವುದಿಲ್ಲ. ಅಂತಹವರ ಉದ್ಧಾರಕ್ಕಾಗಿ ಬುದ್ಧಿವಂತರಾದ ಯಾರಾದರೊಬ್ಬರು ಮುಂದೆ ನಿಂತು ತಮ್ಮದೇ ಆದ ಒಂದು ಮತವನ್ನು ನಿರ್ಮಾಣ ಮಾಡುತ್ತಾರೆ. ಹೊಸ ಮತ ಬಂದ ಕೂಡಲೇ ಹಳೆಯದರ ನಿಂದೆಗಾರಂಭವಾಗುತ್ತದೆ. ಒಟ್ಟು ಸಮಾಜದಲ್ಲಿ ಘರ್ಷಣೆಯಾಗುತ್ತದೆ. ಇದರಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಮತದ ಹಾನಿಯ ಮಾತಿರಲಿ, ಸಾಮಾನ್ಯ ಮಾನವನೀತಿಗೇ ಭಂಗ ಬರುತ್ತದೆ. ಸಂಪ್ರದಾಯದಲ್ಲಿ ಸಿಂತಿದ್ದ ಮತವು ಮತ್ತೆ ವಿಚಾರದ ಕಡೆತದಲ್ಲಿ ಸಿಕ್ಕಿದರೆ, ಆಚಾರ ಶುದ್ಧವಾಗಿ, ವಿಚಾರ ಬೆಳೆದು, ಮತ್ತದೇ ವಿಶ್ವಧರ್ಮವೆನಿಸಿ ಲೋಕೋದ್ಧಾರಕ್ಕೆ ಕಾರಣವೆನಿಸುತ್ತದೆ. 'ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಂ' ಎಂಬ ಶ್ಲೋಕಾರ್ಥದಲ್ಲಿ ಉಕ್ತವಾದ ಧರ್ಮವು ಸಕಲ ಮತಗಳಿಗೂ ಆಧಾರವಾಗಿ ನಿಂತು ಸಮಾಜಕಲ್ಯಾಣವಾಗುತ್ತದೆ.

ಕರ್ನಾಟಕದ ಹರಿದಾಸರಾದರೋ—ಸಮಾಜವನ್ನು ಕಟ್ಟುವುದಕ್ಕೆ ಬಂದವರಲ್ಲದೆ ಒಡೆಯಲು ಬಂದವರಲ್ಲ. 'ಮುನ್ನ ಮಾಡಿದ ಕರ್ಮ ಬೆನ್ನ ಬಿಡದಿರ್ದಡೆ ನಿನ್ನ ನೊರೆಯು ಹೋಗಲ್ಯಾಕೋ ಗೋವಿಂದ' ಎಂದವರು ಹರಿದಾಸರು. 'ನಮ್ಮನ್ನೊಲ್ಲದ ಹಯವದನ ಎಲ್ಲಿದ್ದರೇನು' ಎಂದವರು ಹರಿದಾಸರು. ತಪ್ಪುಗಳನ್ನು ತಪ್ಪದೆ ಖಂಡಿಸಿ ಪಾಪಾತ್ಮರನ್ನು ಪುನೀತಗೊಳಿಸಲು ಬಂದವರು ಹರಿದಾಸರು. ನಿಂದೆಗೊಳಗಾದ ಹೀನದೀನ ಹೆಂಗಳೆಯರನ್ನು ಸಹ ಪುರಸ್ಕರಿಸಿ, ಮಠಾಧಿಪತಿಗಳ ಬಹಿಷ್ಕಾರವನ್ನು ಪರಮಾನುಗ್ರಹವೆಂದು ಅಂಗೀಕರಿಸಿ, ಸಮಾಜವನ್ನುದ್ಧರಿಸಿದವರು ಹರಿದಾಸರು. ದಾಸರ ದಯಾಪಾತ್ರವಾಗದ ಮಾನವಪ್ರಾಣಿ ಒಂದಾದರಿಲ್ಲ. ಅಂತ್ಯಜರೆನಿಸಿದ ಹೊಲೆಯರನ್ನು ಸಹ ಹರಿಜನರೆಂದು ಕರೆದವರು ಹರಿದಾಸರು. ಹೊಲೆಯರ ಮೇಲೆ ಜನರ ತಿರಸ್ಕಾರವನ್ನು ಹೋಗಲಾಡಿಸಿದವರು ಹರಿದಾಸರು. 'ಹೊಲೆಯ ಹೊರಗಿಹನೆ, ಊರೊಳಗಿಲ್ಲವೇ' ಎಂದರು ಹರಿದಾಸರು. 'ಹೊರಗಿದ್ದ ಹೊಲೆಯನ್ನ ಒಳಗೆ ಬಚ್ಚಿಟ್ಟರೆ ಇದಕ್ಕೇನು ಮದ್ದೋ ಪುರಂದರವಿಠಲ' ಎಂದು ಕೇಳಿದವರು ಹರಿದಾಸರು. ಆ ವಿವರವನ್ನು ಮುಂದೆ ನೋಡೋಣ!

ಹರಿಜನರು

ದಯಾಘನರಾದ ಮಹಾತ್ಮಾ ಗಾಂಧಿಯವರು ಕೆಲವು ವರ್ಷಗಳಿಂದ ಈಚೆಗೆ ನಮ್ಮ ದೇಶದ ನಿಮ್ನವರ್ಗದ ಜನರನ್ನು ಹರಿಜನರೆಂದು ಕರೆಯುತ್ತಿರುವುದು ಎಲ್ಲರಿಗೆ ತಿಳಿದಿರುವ ಸಂಗತಿ. ಹರಿಜನ ಶಬ್ದವು ಮೋಹನದಾಸರಿಂದ ನಿರ್ಮಿತವಾದುದಲ್ಲ. ೧೭ನೇ ಶತಮಾನದಲ್ಲಿ ಮಹಾರಾಷ್ಟ್ರದಲ್ಲಿ ರಾಷ್ಟ್ರೀಯ ಜಾಗೃತೆ ಹುಟ್ಟಿ ಶಿವಾಜಿ ಮಹಾರಾಜರಿಂದ ಹಿಂದೂಸಾಮ್ರಾಜ್ಯ ಪ್ರತಿಷ್ಠಿತ

Sri Vidyabharathi Book Centre, Sringeri

 CC-O. In Public Domain. Digitized by eGangotri

ವಾದಾಗ, ನಮ್ಮ ದೇಶದ ಢೇಡ, ಚಮ್ಮಾರ, ಹೊಲೆಯ, ಮಾದಿಗ ಇತ್ಯಾದಿ ಹೆಸರುಗಳಿಂದ ಕರೆಸಿಕೊಳ್ಳುತ್ತಿದ್ದ ಅಸ್ಪೃಶ್ಯರನ್ನು ಸಮರ್ಥರಾಮದಾಸರಾದಿಯಾದ ಹರಿದಾಸರುಗಳು ಹರಿಜನರೆಂದು ಕರೆದರು. ಹಿಂದೂ ಸಾಮ್ರಾಜ್ಯಕ್ಕಾಗಿ ಆ ಹರಿಜನರು ಎಲ್ಲರ ಜೊತೆಯಲ್ಲಿ ಸರಿಸರಿ ನಿಂತು ಸಮರಾಂಗಣದಲ್ಲಿ ಹೋರಾಡಿದರು. ಮಧ್ಯಕಾಲದಲ್ಲಿ ಮರೆತುಹೋಗಿದ್ದ ಹೆಸರನ್ನು ಇತಿಹಾಸದಿಂದ ತಿಳಿದು ಮಹಾತ್ಮಾ ಗಾಂಧಿಯವರಾದರೂ ನಮ್ಮ ಸಮಾಜಕಲ್ಯಾಣ ದೃಷ್ಟಿಯಿಂದ ಮತ್ತೆ ಜ್ಞಾಪಕಕ್ಕೆ ತಂದುಕೊಟ್ಟರು.

'ತಂತುಂ ತ್ವನ್' ಎಂಬ ಋಗ್ವೇದ ಮಂತ್ರ ಹೇಗೆ ನೂಲುವುದನ್ನು ಕಲಿಸಿತ್ತೋ ಹಾಗೆ ಮಹಾರಾಷ್ಟ್ರದ ಹರಿದಾಸರು, ಅಸ್ಪೃಶ್ಯರನ್ನು ಹರಿಜನರೆಂದು ಕರೆಯಲು ಕಲಿಸಿದ್ದರು. ಈ ಎರಡರ ಜ್ಞಾಪಕವನ್ನುಂಟುಮಾಡಿಕೊಟ್ಟವರು ಮಹಾತ್ಮಾ ಗಾಂಧಿಯವರು.

ನಮ್ಮ ಶಾಸ್ತ್ರದಲ್ಲಿ ವರ್ಣಚತುಷ್ಟಯದ ಜೊತೆಗೆ ಚಂಡಾಲರೆಂಬ ಮತ್ತೊಂದು ವರ್ಗದ ಜನರು ಸ್ಮೃತಿಗಳ ಕಾಲದಲ್ಲಿದ್ದರೆಂದು ಗೊತ್ತಾಗುತ್ತದೆ. ಚಂಡಾಲರ ಲಕ್ಷಣವನ್ನು ಸ್ಮೃತಿಕಾರರು ವರ್ಣಿಸುತ್ತಾರೆ. ಆದರೆ ಆ ಚಂಡಾಲರ ಸಂತತಿ ಎಂದೋ ನಾಶವಾಗಿ ಆ ಲಕ್ಷಣದ ಜನರು ಈಗ ಭರತಖಂಡದಲ್ಲಿ ಕಂಡುಬರುತ್ತಿಲ್ಲ. ದುರ್ದೈವದಿಂದ ಏಕೋ, ಹೇಗೋ, ಎಂದೋ ಚಂಡಾಲರಿಗಿದ್ದ ತಿರಸ್ಕಾರ ನಮ್ಮ ದೇಶದ ಹೊಲೆಯರಿಗೆ ಮಾದಿಗರಿಗೆ ಪ್ರಾಪ್ತವಾಗಿಬಿಟ್ಟಿದೆ. ಅವರ ಕಶ್ಮಲ ಜೀವನ, ಜನರ ತಿರಸ್ಕಾರಕ್ಕೆ ಕಾರಣವಾಗಿರಬಹುದು. ಮಹಾರಾಷ್ಟ್ರದಲ್ಲಿ ರಾಷ್ಟ್ರೀಯ ಜಾಗ್ರುತೆ ಹುಟ್ಟುವುದಕ್ಕೆ ೧೫೦ ವರ್ಷ ಮುಂಚೆ ವಿಜಯನಗರ ಸಾಮ್ರಾಜ್ಯದಲ್ಲಿ ಕರ್ಣಾಟಕದ ಹರಿದಾಸರು ಆ ಹೊಲೆಮಾದಿಗರಲ್ಲಿ ಕನಿಕರ ತಾಳಿರುವುದು ಕಂಡುಬರುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾದಿರಾಜರಂಥ ಮಠಾಧಿಪತಿಗಳು ಅಸ್ಪೃಶ್ಯರಲ್ಲಿ ದಯೆ ತೋರಿಸಿ, ಅವರಿಗೂ ಹರಿಭಕ್ತಿಮಾರ್ಗವನ್ನು ಕಲಿಸಿ, ತುಳು ಭಾಷೆಯಲ್ಲಿ 'ಪಾಡ್ದನ' ಎಂಬ ಹೆಸರಿನ ಭಕ್ತಿಸಾಹಿತ್ಯವನ್ನು ಮಾಡಿಕೊಟ್ಟು ಉಪಕಾರಮಾಡಿರುವುದು ಕಂಡುಬರುತ್ತದೆ. ಪುರಂದರ ದಾಸರಾದರೋ, ಬಲು ಖಂಡಿತೋಕ್ತಿಯಿಂದ—

Sri Vidyabharathi Book Centre, Sringeri

CC-O. In Public Domain. Digitized by eGangotri

ಹೊಲೆಯು ಬಂದನೆಂದು ಒಳಗೆ ದೇವರ ಮಾಡಿ
ಗಣಗಣ ಗಂಟೆಯು ಬಾರಿಸುವರಯ್ಯಾ
ತನುವಿನ ಕೋಪವು ಹೊಲೆಯಲ್ಲವೇ
ಪರಧನ ಪರಸತಿ ಹೊಲೆಯಲ್ಲವೇ
ಹೊರಗಿದ್ದ ಹೊಲೆಯನ ಒಳಗೆ ಬಚ್ಚಿಟ್ಟರೆ
ಇದಕೇನು ಮದ್ದೋ ಪುರಂದರವಿಠಲ

ಎಂಬ ಉಗಾಭೋಗವನ್ನಾಡಿ, ತಿರಸ್ಕರಿಸುತ್ತಿದ್ದ ಜನರ ಮನಃಪರಿವರ್ತನ ಮಾಡಿ, ಮತ್ತೆ—

ರಾಗ : ಮುಖಾರಿ — ತಾಳ : ಜಂಪೆ

ಹೊಲೆಯು ಹೊರಗಿಹನೆ ಊರೊಳಗಿಲ್ಲವೇ
ಹೊಲಗೇರಿಯಲಿ ಮಾತ್ರ ಹೊಲೆಯನಿರುತಿಹನೇ ॥ ಪ ॥

ಶೀಲವನು ಕೈಕೊಂಡು ನಡೆಸದಾತನೆ ಹೊಲೆಯ
ಹೇಳಿದ ಶಾಸ್ತ್ರಗಳ ತಿಳಿಯದವ ಹೊಲೆಯ
ಆಳಾಗಿ ಅರಸನಿಗೆ ಮುನಿಯುವಾತನೆ ಹೊಲೆಯ
ಸೂಳೆಯನು ಹೋಗುವವ ಶುದ್ಧ ಹೊಲೆಯ ॥ ೧ ॥

ಇದ್ದು ದಾನಂಗಳನು ಮಾಡದಿದ್ದವ ಹೊಲೆಯ
ಕದ್ದುತಿಂದೂ ಒಡಲ ಹೊರೆಯುವವ ಹೊಲೆಯ
ಪದ್ಧತಿಯ ಬಿಟ್ಟು ತಾ ನುಡಿಯುವಾತನೆ ಹೊಲೆಯ
ಮದ್ದಿಕ್ಕಿ ಕೊಲ್ಲುವನ ಮರಳು ಹೊಲೆಯ ॥ ೨ ॥

ಕೊಂಡ ಋಣವನು ತಿರುಗಿ ಕೊಡದಿದ್ದವನು ಹೊಲೆಯ
ಭಂಡುಮಾತುಗಳನು ಬಯಲಿಕ್ಕುವನೆ ಹೊಲೆಯ
ಗಂಡಹೆಂಡಿರ ನಡುವೆ ಭೇದವಿಕ್ಕುವ ಹೊಲೆಯ
ಹೆಂಡತಿಯ ಇಚ್ಛೆಯಲಿ ನಡೆಯುವಾತನೆ ಹೊಲೆಯ ॥ ೩ ॥

ಆಶೆಯನು ಹುಟ್ಟಿಸಿ ಭಾಷೆ ತಪ್ಪುವ ಹೊಲೆಯ
ಲೇಸು ಉಪಕಾರವನು ಸ್ಮರಿಸದವ ಹೊಲೆಯ

Sri Vidyabharathi Book Centre, Sringeri

 CC-O. In Public Domain. Digitized by eGangotri

ಕಾಸು ಕೊಟ್ಟು ಬಹಳ ಕೊಟ್ಟೆನೆಂಬುವ ಹೊಲೆಯ
ಹೇಸದಲೆ ಹುಸಿನುಡಿಯುವಾತನೆ ಹೊಲೆಯ ||೪||

ಅರಿತು ಆಚಾರವನು ನಡೆಸದಿದ್ದವ ಹೊಲೆಯ
ಪರನಿಂದೆ ಮಾಡುವವ ಪರಮಹೊಲೆಯ
ಗುರುಹಿರಿಯರ ಕಂಡು ಎರಗದಾತನು ಹೊಲೆಯ
ಪುರಂದರವಿಠಲನ ನೆನೆಯದಾತನೆ ಹೊಲೆಯ ||೫||

ಪುರಂದರದಾಸರು ದೇವರನಾಮ ಉಗಾಭೋಗಗಳಲ್ಲಿ ಹೀಗೆ ಹೇಳಿದ್ದರೆ, ವಿಜಯದಾಸರು ಇನ್ನೂ ಒಂದಡಿ ಮುಂದಿಟ್ಟು **ಹೊಲೆಯ, ಹೊಲತಿ** ಸುಳಾದಿಗಳನ್ನೇ ಮಾಡಿ ಹಾಡಿ ಸಮಾಜವನ್ನು ಎಚ್ಚರಿಸಿರುತ್ತಾರೆ.

ಹೊಲೆಯ ಸುಳಾದಿ

ಧ್ರುವತಾಳ

ಹೊಲೆಯನಾವನು ಈ ಕಲಿಯುಗದೊಳಗೆ ನಿ
ಶ್ಚಲವಾಗಿ ತಿಳಿಯುವುದು ಸುಲಭ ಮಾನವರು
ನಲಿದು ಕೇಳುವುದು ಚಂಚಲಮಾಡದೆ
ಫಲಿತಾರ್ಥವಿದು ಹಂಬಲಿಪುದು ಸತತದಲಿ
ಹಲವು ಮಾತೇನು ನಿರ್ಮಲವಾಗಿ ಕೋಪವ
ಕಳೆಯಲರಿಯದವ ಹೊಲೆಯ ಶುದ್ಧಹೊಲೆಯ
ಕಳವು ಮತ್ತೊಂದು ವಾರ್ತೆ ಗಳಿಕೆಯಾಗದ ಪುಸಿ
ಕಲಕಲವಾಗಿ ಬಿಡದಲಾಡುವನೆ ಹೊಲೆಯ
ಘಳಿಗೆ ತೊಲಗದವರ ಬಳಿಯಲ್ಲಿ ನಿರಂತರ
ಸುಳಿದಾಡುವನು ಅನಾಚಾರಿ ಹೊಲೆಯ
ಬಳಗ ಬರಲು ಬಿಟ್ಟು ಒಳಗೆ ಉಂಬುವ ಹೊಲೆಯ
ಕುಲಗೇಡಿಯಾಗಿ ವಂಶಾವಳಿಯ ಕೆಡಿಸುವ ಹೊಲೆಯ
ಮಲಗಿದ್ದವರ ಮೋಸಗೊಳಿಸಿ ಮನೆಯ ಬದುಕ
ಸೆಳೆದು ಕೊಂಡೊಯ್ವ ಖಳ ಎಂದಿಗೂ ಹೊಲೆಯ
ಇಳೆಯವಲ್ಲಭ ನಮ್ಮ ವಿಜಯವಿಠಲನ
ತಿಳಿದು ಪೂಜಿಸದ ಮಲಿನ ಹೊಲೆಯ ||೧||

Sri Vidyabharathi Book Centre, Sringeri

CC-O. In Public Domain. Digitized by eGangotri

ಮಟ್ಟ ತಾಳ

ಅನ್ನದಾನವನು ಮಾಡದಿದ್ದವ ಹೊಲೆಯ
ಹೊನ್ನು ಗಳಿಸಿ ಸುಮ್ಮನೆ ಕೂಡಿಸುವ ಹೊಲೆಯ
ಕನ್ನಿಕೆಯನು ಮಾರಿಕೊಂಬವ ಹೊಲೆಯ
ಹೆಣ್ಣಿನ ಬಣ್ಣಕೆ ಸೋಲುವನೆ ಹೊಲೆಯ
ತನ್ನ ಪರಾಕ್ರಮ ಪೇಳಿಕೊಂಬುವ ಹೊಲೆಯ
ಮನ್ನಣೆಮಾಡಲು ಹಿಗ್ಗುವನೇ ಹೊಲೆಯ
ಅನ್ನದಗೋಸುಗ ಹೊತ್ತುಕಳೆಯುವ ಹೊಲೆಯ
ಅನ್ಯಜನರ ನೋಡಿ ಬಳಲುವನೇ ಹೊಲೆಯ
ಉಣ್ಣಲಿಕ್ಕೆ ಹಿಂದೆ ಹಂಗಿಸುವನು ಹೊಲೆಯ
ಬೆನ್ನಬಿದ್ದನ್ನ ಒಪ್ಪಿಸಿಕೊಡುವನು ಹೊಲೆಯ
ಮಣ್ಣು ಕೂಡಿಸಿ ಧಾನ್ಯ ಮಾರುವನೇ ಹೊಲೆಯ
ಎನ್ನದು ಎಂತೆಂಬ ಸೊಲ್ಲಿನವನು ಹೊಲೆಯ
ಪನ್ನಂಗಶಯನ ಶ್ರೀ ವಿಜಯವಿಠಲನ
ಸನ್ನುತಿಸಿ ಜ್ಞಾನಪಡೆಯದಿದ್ದವ ಹೊಲೆಯ ॥ ೨ ॥

ತ್ರಿಪುಟ ತಾಳ

ಶ್ರವಣ ಕೇಳುತಲಿದ್ದು ಪೋಗುವನೇ ಹೊಲೆಯ
ಅವಸರದಲಿ ಕಯ್ಯ ಬಿಡುವವನೇ ಹೊಲೆಯ
ನವನೀತ ವಿಕ್ರಯಕೆ ಕೊಡುವ ಭೂಸುರ ಹೊಲೆಯ
ಯವನರಲಿ ಸೇವೆಮಾಡುವನೇ ಹೊಲೆಯ
ಕವಿಗಳ ಆವಾಗ ನಿಂದಿಸುವನು ಹೊಲೆಯ
ಸವಿಯೆಂದು ನೀರುಳ್ಳಿ ತಿಂಬುವನೇ ಹೊಲೆಯ
ರವಿಯು ಮೂಡಲು ಮಲಗಿ ಹೊರಳುವನೇ ಹೊಲೆಯ
ಶವ ಕೇರಿಯೊಳಗಿರಲು ಉಂಬುವನೇ ಹೊಲೆಯ
ಕಿವಿಗೊಟ್ಟು ಕೊಂಡೆಯ ಕೇಳುವನೇ ಹೊಲೆಯ
ಅವನಿಯೊಳಗೆ ಕ್ಷಮೆಯಿಲ್ಲದವನೆ ಹೊಲೆಯ
ಜವನಭೀತಿಗೆ ಎಚ್ಚರಿಯದವನು ಹೊಲೆಯ

Sri Vidyabharathi Book Centre, Sringeri

 CC-O. In Public Domain. Digitized by eGangotri

ಸವತಿಯ ಮೇಲೆ ಮಗಳ ಕೊಡುವನು ಹೊಲೆಯ
ಬವರದಲಿ ನೃಪನ ಒಪ್ಪಿಸುವನು ಹೊಲೆಯ
ಗವಹೂಡಿ ಬದುಕು ಮಾಡಿಸುವನು ಹೊಲೆಯ
ಪವಮಾನನುತ ನಮ್ಮ ವಿಜಯವಿಠಲನಂಘ್ರಿ
ನವಭಕುತಿಯಲರ್ಚಿಸದವನು ಹೊಲೆಯ ||೩||

ಅಟ್ಟತಾಳ

ಕ್ರತುಮಾಡುವಲ್ಲಿಗೆ ಹೋಗದಿದ್ದವ ಹೊಲೆಯ
ಸತಿಪತಿಗೇ ಭೇದ ಇಕ್ಕುವನೇ ಹೊಲೆಯ
ಋತುಕಾಲದಲ್ಲಿ ಬೇರೆಯಿಪ್ಪನು ಹೊಲೆಯ
ಪಿತಮಾತಾಗುರುಗಳ ಬೈಯುವನೇ ಹೊಲೆಯ
ಯತಿಗಳ ನಿಂದಿಸುವನು ಹೇಡಿ ಹೊಲೆಯ
ಹಿತಮಾಡಿದವರಿಗೆ ಪ್ರತಿಕೂಲನು ಹೊಲೆಯ
ಮತಿಯಿಂದ ಸಾಲ ತಂದು ತಿಂದುಹಾಕುವ ಹೊಲೆಯ
ಕ್ಷಿತಿಯೊಳು ಅಪಕೀರ್ತಿ ಹೊತ್ತವನೇ ಹೊಲೆಯ
ರತಿಪತಿಪಿತ ವಿಜಯವಿಠಲನ ಬಿಟ್ಟು
ಸತತ ಸಂಸಾರದಿ ಆಸಕ್ತನೇ ಹೊಲೆಯ ||೪||

ಆದಿ

ಬಿಸಜನಾಭನ ದಿವಸ ಮಾಡದಿದ್ದವ ಹೊಲೆಯ
ನೊಸಲಲ್ಲಿ ಪುಂಡ್ರವ ಹಚ್ಚದವನು ಹೊಲೆಯ
ಅಶನಘಾತಕನಾಗಿ ತಿರುಗುವನೇ ಹೊಲೆಯ
ಪಶುಶಿಶುಗಳ ಒದ್ದು ನೂಕುವನೇ ಹೊಲೆಯ
ಹಸಿದುಬಂದವರನ್ನು ಕಳುಹುವನೇ ಹೊಲೆಯ
ಸೊಸೆಯ ಮಕ್ಕಳಂತೆ ಅರಿಯದವನು ಹೊಲೆಯ
ಹಸನಾದ ಹರಿಪಾದತೀರ್ಥ ಕೊಳದವ ಹೊಲೆಯ
ಪಸರಿಸಿ ಅನರ್ಪಿತ ಅನ್ನ ಉಂಬುವ ಹೊಲೆಯ
ಅಸುರಾರಿ ವಿಜಯವಿಠಲನ ದೈವವೆಂದು
ಕುಶಲದಿ ಹಾಡಿ ಪಾಡದವನೆ ಹೊಲೆಯ ||೫||

Sri Vidyabharathi Book Centre, Sringeri

CC-O. In Public Domain. Digitized by eGangotri

ಜತೆ

ಇದರೊಳು ಕ್ರಮವುಂಟು ವಿಜಯವಿಠಲನ
ಪದಗಳರ್ಚಿಸದವ ಎಂದೆಂದಿಗೂ ಹೊಲೆಯ ॥ ೧ ॥

ಹೊಲತಿ ಸುಳಾದಿ

ಧ್ರುವ ತಾಳ

ಹೊಲತಿ ಮತ್ತಾವಳು ಹೊಲೆಗೇರಿಯೊಳಗಿಲ್ಲ
ಹೊಲಗೇರಿಯೊಳಗಿದ್ದ ಹೊಲತಿ ಹೊಲತಿಯಲ್ಲ
ಕುಲವೆ ಆವಳಾದರು ಹೇಳಲಳುಕುವಳು
ಒಳಗೆ ಬಂದು ನಮ್ಮೊಳು ತಿರುಗಲಾರಳು
ಕಲಕಲ ನುಡಿಯುತ್ತ ಬಳಿಯಲ್ಲಿ ಒಂದರ
ಘಳಿಗೆ ಬಿಡದಲ್ಲಿದ್ದು ಹೊಲೆಗಲಸುವಳೇ?
ಕುಲಕೋಟಿಗಳ ಕೇವಲವಾಗಿ ನಿತ್ಯ ಸತ್ಯ
ಸುಲಭವಾಗಿಪ್ಪ ಕರತಳದ ಮುಕ್ತಿ
ಗಳ ದೂರಮಾಡಿ ನರಕಕ್ಕೆಳೆಯುವಳೇ?
ಇಳೆಯೊಳಗಾರಾದರೂ ಈ ನಡತೆಯು
ನೆಲೆಯು ತಿಳಿದು ಹೊಲತಿಯೆಂದು ಕರೆಯಿರೊ
ಬಲದೇವ ವಿಜಯವಿಠಲನ ಚರಣಕ್ಕೆ
ಒಲಿಯದವಳ ಶುದ್ಧಹೊಲತಿಯೆಂದರಿಯಿರೊ ॥ ೧ ॥

ಮಟ್ಟತಾಳ

ಮಕ್ಕಳ ಬಲುವೆಯಲಿ ಗಂಡನ ಪಾದದಲಿ
ಭಕ್ತಿಯ ಮಾಡದಲೇ ಇಪ್ಪವಳೇ ಹೊಲತಿ
ರೊಕ್ಕ ಕದ್ದುಕೊಟ್ಟು ವ್ಯಾಪಾರವ ಮಾಡಿ
ನಿಕ್ಕರುಣಿಯಾಗಿ ತಿರುಗುವಳೇ ಹೊಲತಿ
ನಕ್ಕು ನಾಚಿಕೆಗೆಟ್ಟು ಕಂಡಲ್ಲಿ ಸಂಚರಿಸಿ
ಕಕ್ಕಸಮನದಲ್ಲಿ ಇಪ್ಪುವಳೇ ಹೊಲತಿ

Sri Vidyabharathi Book Centre, Sringeri

CC-O. In Public Domain. Digitized by eGangotri

ರಕ್ಕಸಾಂತಕ ವಿಜಯವಿಠಲ ಶ್ರೀಹರಿಯ
ಭಕ್ತರಲಿ ದ್ವೇಷ ಮಾಡುವಳೇ ಹೊಲತಿ ॥ ೨ ॥

ತ್ರಿಪುಟತಾಳ

ಪಙ್ಕ್ತಿಯೊಳಗೆ ಪ್ರಪಂಚದವಳೆ ಹೊಲತಿ
ಪಂಥವಾಳಿಗಳನಿಕ್ಕುವಳೇ ಹೊಲತಿ
ನಿಂತಲ್ಲಿ ಮನೆವಾರ್ತೆ ಹೇಳುವಳೇ ಹೊಲತಿ
ಸಂತತ ಶುಚಿಯಿಲ್ಲದವಳೆ ಹೊಲತಿ
ಶಾಂತಗುಣದಿ ನಿತ್ಯ ನಡೆಯದವಳೆ ಹೊಲತಿ
ಕಂತುಗೇಡಿ ಪತಿಗೆಂತೆನಿಪಳೆ ಹೊಲತಿ
ಶಾಂತಮೂರುತಿ ನಮ್ಮ ವಿಜಯವಿಠಲನಂಘ್ರಿ
ಸಂತತ ಪತಿಯಲ್ಲಿ ನೆನೆಯದವಳೆ ಹೊಲತಿ ॥ ೩ ॥

ಅಟ್ಟತಾಳ

ಮುದ್ದಿಕ್ಕಿ ಜನರನ್ನು ಕೊಲಿಸುವಳೇ ಹೊಲತಿ
ಇದ್ದದ್ದು ಇಲ್ಲವೆಂದಾಡುವಳೇ ಹೊಲತಿ
ಶುದ್ಧಿಗೈಯದೆ ಪಾಕ ಕೆಡಿಸುವಳೇ ಹೊಲತಿ
ಸುದ್ದಿಗೆ ಕಿವಿಜೋತು ಪೋಗುವಳೇ ಹೊಲತಿ
ನಿದ್ರೆಯಲ್ಲೇ ಆಸಕ್ತಳು ಮಹಾ ಹೊಲತಿ
ಶುದ್ಧರಂಕೆಯ ಮೀರಿ ನಡೆಯುವಳೇ ಹೊಲತಿ
ಕದ್ದು ಬಾಯಸವಿ ಸವಿಯುವಳೇ ಹೊಲತಿ
ಬುದ್ಧಿ ಸ್ತಿಮಿತವಿಲ್ಲದವಳೆ ಹೊಲತಿ
ಸಿದ್ಧಮಹಿಮಸ್ವಾಮಿ ವಿಜಯವಿಠಲನಲ್ಲಿ
ಸದ್ಭಕ್ತಿಯರಿಯದವಳು ಹೀನಹೊಲತಿ ॥ ೪ ॥

ಆದಿತಾಳ

ವೈಷ್ಣವಜ್ಞಾನವ ನಂಬದದವಳು ಹೊಲತಿ
ಶಿಷ್ಟಾಚಾರವ ಬಿಟ್ಟು ನಡೆಯುವಳೇ ಹೊಲತಿ
ಕೆಟ್ಟರುವರ ಸಂಗಡಾಡುವಳೇ ಹೊಲತಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಗುಟ್ಟಾಗಿ ಸಂಸಾರ ಮಾಡದವಳೆ ಹೊಲತಿ
ಹೊಟ್ಟೆಗೋಸುಗ ಕೃತ್ಯ ಬಿಟ್ಟುಂಬುವಳೇ ಹೊಲತಿ
ಅಟ್ಟುಹಾಕುವೆನೆಂಬ ಸೊಲ್ಲಿನವಳು ಹೊಲತಿ
ನಿಷ್ಠುರವಚನಗಳಾಡುವಳೇ ಹೊಲತಿ
ಪುಟ್ಟಿದ ಮನೆಗಪಕೀರ್ತಿ ತರುವಳೆ ಹೊಲತಿ
ದಿಟ್ಟಮೂರುತಿ ನಮ್ಮ ವಿಜಯವಿಠಲನ
ಪಟ್ಟಣ ಸೇರದ ನಾರಿಯೆ ಹೊಲತಿ ॥ ೫ ॥

ಜತೆ

ಸಂತತೆಸಗಿದ ಕರ್ಮ ತನ್ನನಾಳುವ ಪತಿಯು
ಕಾಂತ ವಿಜಯವಿಠಲಗೆನ್ನದವಳೆ ಹೊಲತಿ ॥ ೧ ॥

ಹರಿದಾಸರ ಮಡಿ

ಹಿಂದೂಜನಸಾಮಾನ್ಯರಲ್ಲಿ ಯಾವದೊಂದು ಕರ್ಮವನ್ನೂ ಅತ್ಯಂತ ಶುಚಿರ್ಭೂತರಾಗಿ ಮಾಡಬೇಕೆಂದು ಸ್ಮೃತಿಪುರಾಣಗಳು ಬಲು ಮಹತ್ವ ಕೊಟ್ಟು ಸಾರುತ್ತಿವೆಯೆಂಬುದನ್ನು, ನಮ್ಮ ಜನರೆಲ್ಲರೂ ತಿಳಿದಿರುತ್ತಾರೆ. ಋಷ್ಯಾಶ್ರಮಗಳನ್ನು ಪ್ರವೇಶಿಸಬೇಕಾದರೆ ರಾಜಾಧಿರಾಜರು ಶುಚಿರ್ಭೂತ ರಾಗಿ ಭಯಭಕ್ತಿಗಳಿಂದ ಪಾದಚಾರಿಗಳಾಗಿ ಮಹರ್ಷಿಗಳನ್ನು ಕಾಣುತ್ತಿದ್ದ ರೆಂದು ಚರಿತ್ರೆಗಳು ಹೇಳುತ್ತಿವೆ. ದೇಹ ಗೇಹ ಸಹವಾಸಗಳು ಪವಿತ್ರ ವಾಗಿದ್ದ ವಿನಾ ಪರಮಾತ್ಮನ ನಾಮೋಚ್ಚಾರಣೆಯನ್ನು ಮಾಡಲು ಅಧಿಕಾರವಿಲ್ಲವೆಂಬಷ್ಟು ಭಯ, ಶಿಷ್ಟಜನರಲ್ಲಿ ಅದ್ಯಾಪಿ ಕಂಡುಬರುತ್ತಿದೆ. ಮತಾಚಾರ್ಯರುಗಳು ಶಾಸ್ತ್ರ ಗ್ರಂಥಗಳನ್ನು ಬರೆದಂತೆ, ಸದಾಚಾರವನ್ನು ಬರೆದಿಟ್ಟಿದ್ದಾರೆ. ಈ ಬಗೆಯ ಶುಚಿಯನ್ನು ಕನ್ನಡದಲ್ಲಿ ಮಡಿಯೆಂದು ಕರೆಯುತ್ತಾರೆ. ಈ ಮಡಿ ಶಬ್ದಾರ್ಥವು ದೀರ್ಘವಾದ ಕಾಲದ ಸೆಳೆತಕ್ಕೆ ಸಿಕ್ಕಿ, ಒಬ್ಬೊಬ್ಬರ ಮಡಿ ಒಂದೊಂದು ರೀತಿಯಾಗಿ, ಮಡಿಯೆಲ್ಲಾ ಮೈಲಿಗೆಯಾಗಿ ಬಿಡುತ್ತಿದೆ. ಬಾಹ್ಯ ಮಡಿಯೆಷ್ಟಿದ್ದರೂ ಪರಮಾತ್ಮನ ನಾಮಸ್ಮರಣೆಯಿಂದ ಚಿತ್ತಶುದ್ಧಿಯಾದಲ್ಲದೆ, ಮಡಿಯಾಗುವುದಿಲ್ಲವೆಂದು ಸಂಧ್ಯಾದಿ ಕರ್ಮಗಳಲ್ಲಿ—

Sri Vidyabharathi Book Centre, Sringeri

CC-O. In Public Domain. Digitized by eGangotri

ಅಪವಿತ್ರಃ ಪವಿತ್ರೋ ವಾ ಸರ್ವಾವಸ್ಥಾಂ ಗತೋಽಪಿ ವಾ
ಯಃ ಸ್ಮರೇತ್ ಪುಂಡರೀಕಾಕ್ಷಂ ಸ ಬಾಹ್ಯಾಭ್ಯಂತರಶ್ಶುಚಿಃ

ಎಂಬ ಶ್ಲೋಕದಿಂದ ಉದಕಪ್ರೋಕ್ಷಣೆಮಾಡಿಕೊಳ್ಳುತ್ತಾರೆ. ಶಾಸ್ತ್ರ ಹೀಗಿದ್ದರೆ—ತಾವು ಮಡಿವಂತರು, ತಾವು ಶಿಷ್ಟರು, ಎಂದೆನಿಸಿಕೊಳ್ಳಲು ಜ್ಞಾನಲವದುರ್ವಿದಗ್ಧರಾದ ಕೆಲವರು, ಇಲ್ಲದ ಡಾಂಭಿಕಗಳನ್ನು ಮಾಡಿ ಅಜ್ಞಜನರನ್ನು ವಂಚಿಸುತ್ತಾರೆ. ಶ್ರದ್ಧಾಳು ಸ್ತ್ರೀಯರಿಗೆ ಈ ಭ್ರಾಂತಿ ಮುಸುಕಿತು ಎಂದರೆ, ಅವರ ಮಡಿಯ ಗಡಿಬಿಡಿಯು, ಹಡೆದ ಹುಡುಗ ಹುಡುಗಿಯರಿಗೆಲ್ಲ ಆಪತ್ತಾಗಿ ಪರಿಣಮಿಸಿಬಿಡುತ್ತದೆ. ಉಟ್ಟ ಬಟ್ಟೆಗೂ ಸ್ವಯಂ ನಿರ್ಮಲವಾದ ನೀರಿಗೂ ಕಷ್ಟಕಾಲ ಬಂದುಬಿಡುತ್ತದೆ. ಅಂಥವರ ಚಿತ್ತದಲ್ಲಿ ಪರಮಾತ್ಮನ ಸ್ಥಾನದಲ್ಲಿ ಮೈಲಿಗೆಯೆಂಬ ಮಾಯೆಯು ತಾನೇತಾನಾಗಿ ನಿಂತುಬಿಡುತ್ತದೆ. ಆದರಿಂದ ಕಾಮಕ್ರೋಧಗಳುಂಟಾಗುತ್ತವೆ. ಕೆಲವರಿಗಂತು, ಮಾರ್ಜನ ಮಂತ್ರದಿಂದ ಉದಕಪ್ರೋಕ್ಷಣೆಮಾಡಿಕೊಳ್ಳುತ್ತಿರುವಾಗಲೇ, ಗಾಯಿತ್ರೀ ಜಪ ಮಾಡುತ್ತಿರುವಾಗಲೇ, ಇದ್ದಕ್ಕಿದ್ದಹಾಗೆ ಮೈಲಿಗೆಯಾಗಿ ಬಿಡುತ್ತದೆ. ಇಂತಹ ಸ್ತ್ರೀಪುರುಷರ ಅಜ್ಞಾನವನ್ನು ನೋಡಿ, ಪುರಂದರದಾಸರಾದಿಯಾದ ಹರಿದಾಸರು ಬಲು ವಿನೋದ ಮಾಡಿದ್ದಾರೆ. ಆ ಹಾಡುಗಳು ಕೇಳ ಕಂಡಂತಿವೆ:

ರಾಗ : ನಾದನಾಮಕ್ರಿಯೆ — ತಾಳ : ಆದಿ

ಮಡಿಮಡಿಮಡಿಯೆಂದು ಮೂರ್ಮಾರು ಹಾರುತಿ
ಮಡಿಯೆಲ್ಲಿ ಬಂತೇ ಬಿಕನಾಸಿ || ಪ ||

ಮಡಿಯೂ ನೀನೇ ಮೈಲಿಗೆ ನೀನೇ
ಸುಡಲಿ ನಿನ್ನ ಮಡಿ ಬಿಕನಾಸಿ || ಅ ||

ಎಲವು ಚರ್ಮ ಮಲಮೂತ್ರ ಗುಂಡಿಯಲಿ
ನಲಿಯುತ ನಿಂತಿಹೆ ಬಿಕನಾಸೀ
ನೆಲೆಗೊಂಡಿಹ ನವ ದ್ವಾರದ ಹೊಲೆಯೊಳು
ಮಲೆತು ಕೊಳೆತು ನಿಂತೆ ಬಿಕನಾಸೀ || ೧ ||

Sri Vidyabharathi Book Centre, Sringeri

CC-O. In Public Domain. Digitized by eGangotri

ಹುಟ್ಟುತ ಸೂತಕ ಸಾಯುತ ಸೂತಕ
ನಟ್ಟನಡುವೆ ನಿಂತೆ ಬಿಕನಾಸಿ
ಬಿಟ್ಟುಬಿಡದೆ ಕಾವೇರಿಲಿ ಮುಳುಗಲು
ಮುಟ್ಟು ಹೋದೀತೇ ಬಿಕನಾಸಿ ॥ ೨ ॥

ಚರ್ಮವ ತೊಳೆದರೆ ಕರ್ಮ ಹೋಗುವದೆ
ಮರ್ಮವ ತಿಳಿಯದ ಬಿಕನಾಸಿ
ಧರ್ಮನಯ್ಯ ಶ್ರೀ ಪುರಂದರವಿಠಲನ
ನಿರ್ಮಲಮನದಲಿ ನೆನೆ ಬಿಕನಾಸಿ ॥ ೩ ॥

ನೀರು ಕಂಡ ಬಳಿಯಲ್ಲೆಲ್ಲಾ ಮುಳುಗುವ ಭ್ರಾಂತರನ್ನು ನೋಡಿ :

ರಾಗ : ಕಲ್ಯಾಣಿ—ತಾಳ : ಛಾಪು

ತನುವ ನೀರೊಳಗದ್ದಿ ಫಲವೇನು
ಮನದಲ್ಲಿ ದೃಢಭಕ್ತಿಯಿಲ್ಲದ ಮನುಜರು ॥ ಪ ॥

ಧಾನಧರ್ಮಂಗಳ ಮಾಡುವದೇ ಸ್ನಾನ
ಜ್ಞಾನತತ್ವಂಗಳ ತಿಳಿವದೆ ಸ್ನಾನ
ಹೀನಪಾಪಂಗಳ ಬಿಡುವದೆ ಸ್ನಾನ
ಧ್ಯಾನದಿ ಮಾಧವನ ನೋಳ್ಪದೆ ಸ್ನಾನ ॥ ೧ ॥

ಗುರುಗಳ ಪಾದದರ್ಶನವೇ ಸ್ನಾನ
ಹಿರಿಯರ ಸೇವೆಮಾಡುವದೇ ಸ್ನಾನ
ಕರೆದು ಅನ್ನವನ್ನಿಕ್ಕುವದೊಂದು ಸ್ನಾನ
ನರಹರಿ ಚರಣ ನಂಬುವದೇ ಸ್ನಾನ ॥ ೨ ॥

ದುಷ್ಟರ ಸಂಗವ ಬಿಡುವುದು ಸ್ನಾನ
ಶಿಷ್ಟರ ಸಂಗದಲಿರುವುದು ಸ್ನಾನ
ಸೃಷ್ಟಿಯೊಳಗೆ ಶ್ರೀ ಪುರಂದರವಿಠಲನ
ಮುಟ್ಟಿ ಭಜಿಸದಿರೆ ವಿರಜಾ ಸ್ನಾನ ॥ ೩ ॥

Sri Vidyabharathi Book Centre, Sringeri

 CC-O. In Public Domain. Digitized by eGangotri

ಇದೇ ಅರ್ಥವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ತತ್ತ್ವಸುವಾಲಿಯ ಜಗನ್ನಾಥದಾಸರು:

ಜಲದೊಳಗೆ ಮಿಂದು ನಿರ್ಮಲರಾದೆವೆನುತ । ತ
ಮ್ಮೊಳು ತಾವೇ ಹಿಗ್ಗೀ ಸುಖಿಸುವರು ॥ ಸುಖಿಸುವರು
ಪರಮ ಮಂಗಳಮೂರ್ತಿ ನಿನ್ನ ನೆನೆಯಾದೆ ॥ ೩೭ ॥

ಜಡಭೂತ ಜಲ ಜನರ ಮಡಿಮಾಡಬಲ್ಲದೇ
ಜಡಧಿಮಂದಿರನಾ ಶುಭನಾಮ ॥ ಶುಭನಾಮ
ಮೈಲಿಗೆಯ ಕೆಡಿಸಿ ಮಂಗಳವ ಕೊಡದೇನೋ ॥ ೩೮ ॥

ಓಡಿಹೋಗುವ ಮಡಿಯ ಮಾಡಿ ದಣಿಯಲಿ ಬೇಡ
ನೋಡು ಸರ್ವತ್ರ ಹರಿರೂಪ ॥ ಹರಿರೂಪ ನೋಡಿ ಕೊಂ
ಡಾಡು ಮನವುಬ್ಬಿ ಸುಖಿಸುತ್ತ ॥ ೩೯ ॥

ಮಡಿಯ ಸಾರಾಂಶವಿಷ್ಟು: ಯಾವುದು ಮಡಿಯೋ ಅದೆಂದಿಗೂ ಮೈಲಿಗೆಯಾಗುವುದಿಲ್ಲ. ಯಾವುದು ಮೈಲಿಗೆಯೋ ಅದೆಂದಿಗೂ ಮಡಿ ಯಾಗುವುದಿಲ್ಲ.

ಹರಿದಾಸರ ವೃತ್ತನಾಮದ ಒಂದು ಮಾದರಿ

ಪದ — ತಾಳ : ಅಟ್ಟ

ರಕ್ಷಿಸು ವೆಂಕಟಗಿರಿರಾಜ । ರವಿಶತತೇಜ । ಆಶ್ರಿತಕಲ್ಪಭೂಜ ॥ ಪ ॥

ವೃತ್ತ :

ಶ್ರೀಮಾನ್ ಶೇಷಧರಾ ಧರಾಧಿಪ ಸದಾ ಶ್ರೀಮತ್ಸುಸೌಖ್ಯಪ್ರದಾ
ಶ್ರೀ ಮಾಯಾಜಯ ಶಾಂತಿ ಕಾಂತಸ್ವರತಾ ಶ್ರೀವಿಷ್ಣು ಸಿದ್ಧೇಶ್ವರ
ಶ್ರೀಮತ್ಪದ್ಮಜ ಪಾರ್ವತೀಶವಿನುತ ಶ್ರೀಪಾದಪದ್ಮದ್ವಯ
ಸ್ವಾಮಿನ್ ದೇಹಿ ಸದಾ ತ್ವದೀಯ ಭಜನಂ ಶ್ರೀಮಂತಶ್ವಂ
ಪಾಹಿ ಮಾಂ ॥ ೧ ॥

Sri Vidyabharathi Book Centre, Sringeri

 CC-O. In Public Domain. Digitized by eGangotri

ನಾಮ :

ಹಾಟಕ ಮುಖರಿ ಸರಿತ್ತೀರ | ಕೃತಮಂದಿರ | ವೈಕುಂಠಾಗಾರ
ಕೋಟಿ ಮನ್ಮಥ ಚಂದ್ರಭಾಸ್ಕರ ದ್ಯುತಿರಸ್ಕರ | ಶ್ರಿತಮೋಹನಾಕಾರ
ಕೂಟಸ್ಥ ಅಖಿಳಲೋಕಾಧಾರ | ಸಂತಸಪರಾ | ತ್ಪರಮನೋಹಾರ
ಕೈಟಭ ಮುಖಖಳ ಜಲಧರ | ಚಂಡಸಮಿರ | ದೀನಜನಮಂದಾರ || ೨ ||

ವೃತ್ತ :

ದೇಶಾಕಾಲಗುಣಾದ್ಯತೀತ ಅನಘಾ ದೇವೇಂದ್ರ ಸಂಸೇವಿತ
ದಾಶಾರ್ಹಾದಶರೂಪ ರೂಪ ಅಜಿತಾ ದಾಮೋದರಾ ಮಾಧವಾ
ಕಾಶೀಜಾಧವ ಚಿಚ್ಚಕೋರ ಉಡುಪಾ ಕಾಳೀ ಫಣಾಮರ್ದನ
ಶ್ರೀಶಾಗೀಶ ಅಹೀಶ ಈಶವಿನುತಾ ಶ್ರೀವಿಷ್ಣು ನೀ ಪಾಲಿಸೋ || ೨ ||

ನಾಮ :

ವಟುವೇಷಧರಿಸಿ ರಕ್ಕಸವೃಂದ | ವಂಚಿಸಿನಿಂದ | ಸನ್ನುತ ಮುನಿವೃಂದ
ನಟನೆಮಾಡುತ ಕುಂಡದೊಳಗಿಂದ | ನಲಿಯುತ ಬಂದ | ಹವಿರ್ಭೋಕ್ತೃ ಆನಂದ
ವಟದೆಲೆಯೊಳು ಮಲಗಿದಾನಂದ | ನಂದನಕಂದ | ಕಾರಣಗೋವಿಂದ
ಕುಟಿಲಮತಿ ಖಳಕುಲ ಕೊಂದ | ಧೀರ ಮುಚುಕುಂದ | ವರದನೆ ಮುಕುಂದ || ೨ ||

ವೃತ್ತ

ನಿತ್ಯಾನಂದ ಮಹೋದಧೇ ನಿರೂಪಮಾ ನಿರ್ದೋಷ ಜ್ಞಾನಾತ್ಮಕ
ಸತ್ಯಾವಲ್ಲಭ ಸಾತ್ವತಾಂ ಕುಲಪತೇ ಸಾಯುಜ್ಯ ಸಾರೂಪ್ಯದ
ಸೂತ್ರಾಧಾರಕ ಹೃದ್ಗುಹಾಲಯ ಸದಾ ಸುಷುಪ್ತಿ ಜಾಗ್ರತ್ಪ್ರದ
ಸತ್ಸೈಶ್ವರ್ಯ ಬಲಾದಿ ಸರ್ವಭರಿತಾ ಸರ್ವಾಪರೋಕ್ಷೀಸದಾ || ೩ ||

ನಾಮ :

ವರದ ಅಭಯಚಕ್ರದರಧರ | ಚತುಷ್ಟಯಕರ | ಉರಪೀನವಿಸ್ತಾರ
ಸರಿಗೆಪದಕವೊಪ್ಪೆ ಕಂಧರ | ಕರ ಸಿಂಧೂರ | ಕರ ಪೋಲ್ವ ಕೇಯೂರ

Sri Vidyabharathi Book Centre, Sringeri

CC-O. In Public Domain. Digitized by eGangotri

ಬೆರಳಲ್ಲಿ ಮಾಣಿಕ್ಯದುಂಗುರ | ತೋಳಬಂಧುರ | ಸಾಲಿಗ್ರಾಮದ ಹಾರ
ಶಿರಿವತ್ಸಾಂಕಿತನಾಭಿ ಗಂಭೀರ | ಜಗದುದ್ಧಾರ | ಸರ್ವಭುವನ
ದುದ್ಧಾರ ॥ ೩ ॥

ವೃತ್ತ :

ಲಕ್ಷ್ಮೀವಕ್ಷಸುಕುಂಕುಮಾಂಕಿತ ಪದ | ಲಕ್ಷ್ಮೀವಿಲಾಸಾಸ್ಪದ
ಲಕ್ಷ್ಮೀಬಾಹುಲತಾಶ್ರಯ | ಭುಜಯುಗ ಲಕ್ಷ್ಮ್ಯಾ ಸದಾಲಿಂಗಿತ
ಲಕ್ಷ್ಮೀಅಕ್ಷಸುಪದ್ಮ ಪದ್ಮಿನಿಪ್ರಿಯ | ಲಕ್ಷ್ಮೀಮನೋನಾಯಕ
ಲಕ್ಷ್ಮೀಚಿತ್ತಚಕೋರ ಪೂರ್ಣ ಉಡುಪ | ಲಕ್ಷ್ಮೀಶ ತ್ವಂ
ಪಾಹಿ ಮಾಂ ॥ ೪ ॥

ನಾಮು :

ಸುಖಮಯ ಮಾನಮಂದರಧರ | ಧರಾಮನೋಹರ | ನರಮೃಗ ಆಕಾರ
ನಖದಿಂದ ಬೊಮ್ಮಾಂಡ ಖರ್ಪರ | ಭೇದಿಸಿದ ಧೀರ | ರಾಜಕುಲಘನ ಈರ
ಮುಖವ ಕಾಯ್ದ ಮಹನೃಪವರ | ಗೋಪೀಜನ ಜಾರ | ನಾನಾ ಲೀಲಾ
ವತಾರ
ಮುಖಜಾವರದ ಮುಪ್ಪುರಹರ | ನುತಮುನಿವರ | ಕಲ್ಕಿ ದೀನಮಂದಾರ
॥ ೫ ॥

ವೃತ್ತ :

ರಂಗಾನಂಗಪಿತಾ ರಜಸ್ತಮಹರಾ ರಾಜೀವ ಫುಲ್ಲೇಕ್ಷಣಾ
ಶೃಂಗಾರಾಂಬರಧಾರ ನೂಪುರಲಸತ್ಕಾಂಚೀಲತಾ ಶೋಭಿತಾ
ಸಂಗೀತಪ್ರಿಯಸಾರ ಸನ್ಮುನಿಜನಸಂಗಾ ಅಸಂಗಾ ಅಜಾ
ಗಂಗಾತಾತ ವಿಹಂಗನಾಥಗ ಕೃಪಾ | ಪಾಂಗಾ ಶುಭಾಂಗಾನಾಮೋ ॥ ೬ ॥

ನಾಮು :

ಸಟೆಯಿಲ್ಲದಲೆ ನಿನ್ನ ಪಾದವ | ನಂಬಿದರಭವ | ಸಿಂಧುವಿನ ಪ್ರಮಾಣವ
ಕಟಿಯಲ್ಲಿ ಕರವಿಟ್ಟು ತೋರುವ | ಭಕ್ತ ಕೈರವ | ಸ್ತೋಮ ಸೋಮನೆನಿಸುವ

Sri Vidyabharathi Book Centre, Sringeri

ತಟಿತಕೋಟಿ ಕೋಟಿ ಪ್ರಭಾವ | ಧಿಕ್ಕರಿಸುವ | ಮುದ್ದು ಮುಕುಟಕುಂಡಲವ
ಸ್ಫುಟಿತಹಾಟಕ ಮಣಿಕಟಕವ | ಹಾರಪದಕವ | ನಿಟ್ಟು ಮೆರೆವ ಶ್ರೀದೇವ
|| ೫ ||

ವೃತ್ತ :

ನಾನಾ ಜನ್ಮದೆ ಕಾಯವಾಚಮನಸಾ ಎನ್ನಿಂದಲೀ ಮಾಳ್ಪುದು
ಜ್ಞಾನಾಜ್ಞಾನಾ ಕೃತಾಖಿಳ ಕ್ರಿಯಗಳು ನಿನ್ನಿಂದ ಪ್ರೀತ್ಯಾಗಲಿ
ನಾನಾದ್ರವ್ಯದಿ ಕಾರ್ಯರೂಪ ಗುಣದಿ ಸರ್ವತ್ರ ಬಿಂಬಕ್ರಿಯಾ
ಜ್ಞಾನಾವಮಾತುರವಿತ್ತು ನೀನು ಪೊರೆಯೋ ಪ್ರಾಣೇಶ ನಾರಾಯಣ || ೬ ||

ನಾಮ :

ವಿಶ್ವತೈಜಸ ಪ್ರಾಜ್ಞತುರ್ಯಾತ್ಮ | ಅಂತರಾತುಮ | ಪರಮಾತ್ಮಜ್ಞಾನಾತ್ಮಾ
ವಿಶ್ವನಾಟಕ ಗುಣಗಣಧಾಮ | ಸಂತತಸಾಮ | ವಂದ್ಯನೆ ಸಾರ್ವಭೌಮ
ವಿಶ್ವತೋಮುಖ ರುಗ್ಯಜುಸ್ಸಾಮ | ಆಗಮಸ್ತೋಮ | ಪ್ರತಿಪಾದ್ಯತ್ರಿಧಾಮ
ವಿಶ್ವಾಸದಿಂದಲಿ ತವನಾಮ | ಭಜನೆಯ ಕಾಮ | ಎನಗೀಯೋ
ಶ್ರೀರಾಮ || ೬ ||

ವೃತ್ತ:

ಮಂದಾಹಾಸ ಮುಖೇಂದು ಸಂದರುಶನಾದಿಂದಾಘ ಬೆಂದಿಪ್ಪುದೋ
ಒಂದೇ ವಂದನಮಾಡಲಾಕ್ಷಣ ಸುಖಾಸಂದೋಹ ಸಂದಪ್ಪುದೋ
ನಿಂದೂ ಅರ್ಚಿಸಿ ಸ್ತೋತ್ರ ಮಾಳ್ಪನು ಮಹಾ ನಂದಾವನೂ ಬಲ್ಲನೋ
ತಂದೇ ನಿನ್ನಯ ಸುಂದರಾಂಘ್ರಿ ಸತತಾ ಪೊಂದಿಪ್ಪುದೇ ಪಾಲಿಸೋ || ೭ ||

ನಾಮ :

ಮಾಡಲರಿಯೆ ಸುಸಾಧನವನು | ದುಷ್ಟಚಿತ್ತನು | ಪಾಪಕರ್ಮದಿ ರತನು |
ಬೇಡುವೆ ಬಹುವಿಧ ಸುಖವನು | ಆಶಾಬದ್ಧನು | ಇದಕೆ ಗತಿಯೇನು
ಬೇಡಿದುದೆಲ್ಲ ಕೊಡುವೆ ನೀನು | ಎಂದು ಬಂದೆನು | ಆಶ್ರಿತಸುರಧೇನು
ಬೇಡದಂದದಿ ಮಾಳ್ಪ ಘೋರೆ ನೀನು | ಇದೇ ವರವನು | ನೀಡಬಹುದಯ್ಯ
ನೀನು || ೭ ||

Sri Vidyabharathi Book Centre, Sringeri

CC-O. In Public Domain. Digitized by eGangotri

ವೃತ್ತ :

ಅನ್ಯಾವಾರ್ತೆಗೆ ಪೋಗಲೀಸದೆ ಮನಾ ನಿನ್ನಂಘ್ರಿಯೊಳ್ ನಿಲ್ಲಿಸೋ
ನಿನ್ನಾವಾರ್ತೆಯ ಕೇಳಿಸಯ್ಯ ಕಿವಿಗೇ ನಿನ್ನನ್ನೆ ಕೊಂಡಾಡಿಸೋ
ನಿನ್ನಾಮೂರ್ತಿಯ ತೋರಿಸಯ್ಯ ಮನಕೇ ನಿನ್ನರ್ಚನೇ ಮಾಡಿಸೋ
ನಿನ್ನಂತಾಗಲಿ ಸರ್ವ ಇಂದ್ರಿಯಗಳು ನಿನ್ನಾಳ್ಗಳೊಳ್ ಕೂಡಿಸೋ ॥ ೮ ॥

ನಾಮ :

ಭಜಿಪ ಜನರಿಗೆ ಭಾಗ್ಯೋದಯಾ | ಭಾಗವತಧ್ಯೇಯ | ಶುಭಗುಣನಿಲಯ
ವಿಜಯಸಾರಥಿವೀತಾಖಿಳ ಹೇಯಾ | ನಿರ್ಜಿತಮಾಯಾ | ವಿಪ್ರಗೋಸುರ
ಪ್ರಿಯಾ
ತ್ರಿಗಜದೀಶನೆ ಅಪ್ರಾಕೃತಕಾಯಾ | ಕವಿಜನಗೇಯಾ | ವೆಂಕಟಗಿರಿರಾಯಾ
ನಿಜಗುರು ಗೋಪಾಲ ವಿಠಲನಯ್ಯಾ | ನಮೋನಮೋ ಜೀಯಾ | ಬೇಗ
ಪಿಡಿ ಎನ್ನ ಕೈಯ್ಯಾ ॥ ೮ ॥

ಪುಷ್ಪಗಳ ಸಂವಾದ

ಪರಮಾತ್ಮನ ಪ್ರೇಮರಸದಲ್ಲಿ ಸಮರಸವಾದ ಮನಸ್ಸನ್ನು ಸಮಸ್ಥಿತಿಗೆ ನಿಲಿಸಿಕೊಂಡು, ಪುಷ್ಪಗಳ ಸರಸ ರಸದೊಡನೆ ದಣುವಾರಿಸಿಕೊಳ್ಳಬೇಕೆಂದರೆ ಹಿಂದೆ ಗಯಚರಿತ್ರೆಯಿಂದ ಆರಿಸಿಕೊಟ್ಟ ಪದಸರಣಿಯಲ್ಲಿ ಪುಷ್ಪಗಳ ಸಲ್ಲಾಪ ಹೀಗಿದೆ. ಅದು ಶೃಂಗಾರಮಯವಾಗಿದೆ. ಶೃಂಗಾರ ರಸವನ್ನು ಎಲ್ಲಾದರೂ ಒಮ್ಮೆಗಾದರೂ ತರದಿದ್ದರೆ ಕವಿಗಳು ಕಾವ್ಯವನ್ನೊಪ್ಪುವುದಿಲ್ಲ. ಶಂಕರಮಧ್ವರಂಥಾ ಸನ್ಯಾಸಿಗಳ ವಿಜಯಚರಿತ್ರೆ ಬರೆದ ವಿದ್ಯಾರಣ್ಯರೂ ಪಂಡಿತಾಚಾರ್ಯರೂ ಸಹ, ಇದ್ದದ್ದರಲ್ಲಿ ಅಣಿಮಾಡಿಕೊಂಡು ಶೃಂಗಾರ ರಸವನ್ನು ಸೇರಿಸಿಬಿಟ್ಟಿದ್ದಾರೆ. ಶೃಂಗಾರವಿರದಿದ್ದರೆ ಮಹಾಕಾವ್ಯವೆನಿಸುವುದಿಲ್ಲವೆಂಬ ಭಯ ಅವರನ್ನೂ ಬಿಟ್ಟಿಲ್ಲ. ಕನ್ನಡ ಗಯಚರಿತ್ರಕಾರರಾದರೂ ಸಂಪ್ರದಾಯಶರಣರಾಗಿ ಪುಷ್ಪಗಳ ಸಂವಾದದಲ್ಲಿ ಶೃಂಗಾರ ರಸವನ್ನೂ ತೂರಿಸಿಬಿಟ್ಟಿದ್ದಾರೆ. ಆ ಪದ್ಯಗಳು ಕೆಳಕಂಡಂತಿವೆ:

Sri Vidyabharathi Book Centre, Sringeri

CC-O. In Public Domain. Digitized by eGangotri

ವಾರಿಯಿಹ ಘಸ ಮಡುವ ಬಿದ್ದು ವಿ
ಕಾರವಿಲ್ಲದೆ ಇನನುದಯುವನು
ಹಾರಯಿಸಿಕೊಂಡಿದ್ದು ಪಗಲಲಿ ಅಳಿಯನೊಡಗೂಡಿ
ನೀರನಂದದಿ ಮಧುವ ಸವಿದು
ಬ್ಬೇರಿ ಚೀರಿದರಳಿಯ ಕೃತ್ಯಕೆ
ಊರರಿಯೆ ನಾಚದಲೆ ರಾಜನ ಶಾಸನಕೆ ಶಿರವ

ಭೂರಿ ಭಯದಲಿ ಬಾಗಿ ರಜನೀ
ನಾರಿಯಲಿ ಚಿಂತಿಸುತ ಪ್ರತಿದಿನ
ಮಾರನುಪಟಳಕಳುಕುತಿಹ ಜಾರೆಯರ ತೆರನಂತೆ
ನೀರನಾಶ್ರಯಗೊಂಡು ಜೀವಿಸಿ
ತೋರೆ ಮಧ್ಯವ ಸಕಲ ಜನರಿಗೆ
ವಿಾರಿಭಂಗವ ಗಣಿಸದಿರೆ ತಾವರೆಯೆನದೆ ಲೋಕ

ತಾ॥ ಈ ಪದ್ಯಗಳಿಗೆ ಅಳಿ ಅಂದರೆ ಭ್ರಮರ ಪರವಾಗಿ ಒಂದರ್ಥ. ಅಳಿಯನ ಪರವಾಗಿ ಒಂದರ್ಥ. ಅಳಿಯನ ಪರವಾದ ತಾತ್ಪರ್ಯ ಬರೆದರೆ 'ಅಳಿ'ಯ ಪರವಾದ ಅರ್ಥ ತಾನೇ ಆಗುತ್ತದೆ. ತಾವರೆಗಳು ಆಳವಾದ ಮಡುವಿನಲ್ಲಿ ಬಿದ್ದರೂ, ವಿಕಾರ(ನಾಚಿಕೆ)ವಿಲ್ಲದೆ ಸೂರ್ಯೋದಯವನ್ನೇ ಕಾಯುತ್ತಾ, ಉದಯವಾದೊಡನೆ ಹಾಡೇ ಹಗಲಿನಲ್ಲಿ ನೀರನಂದದಿ (ಗಂಡನಂತೆ) ಅಂದರೆ ಗಂಡನೊಡನೆ ಬೆರೆಯುವಂತೆ ಅಳಿಯನೊಡಗೂಡಿ (ಅಳಿಯನ ಸಹವಾಸಮಾಡಿ) ಅವನು ಊರೆಲ್ಲಾ ಕೇಳುವಂತೆ ಮಧುಪಾನ (ಅಧರ ಮಧು) ಮಾಡಿ ಚೀರಿದರೂ ನಾಚಿಕೆಯಿಲ್ಲದೆ, ರಾಜಾಜ್ಞೆಗೆ (ರಾಜನೆಂದರೆ ದೊರೆ ಮತ್ತು ಚಂದ್ರ) ತಲೆಬಾಗಿ (ತಲೆತಗ್ಗಿಸಿ ಮೊಗ್ಗಾಗಿ) ನೀರಿನಾಶ್ರಯ (ನೀರಿನ ಆಶ್ರಯ ಮತ್ತು ಗಂಡನ ಆಶ್ರಯ)ಗೊಂಡಿದ್ದರೂ ಜಾರಸ್ತ್ರೀಯರಂತೆ ಮಾರನುಪಟಳಕ್ಕೊಳಗಾಗಿ ತನುಮಧ್ಯವನ್ನೆಲ್ಲರಿಗೂ ತೋರಿಸುತ್ತಿರುವ ತಾವರೆಗಳಾದ ನೀವು ತಾವ್+ಅರೆಗಳಲ್ಲವೇ ಎಂದು ಕೇತಕಿಗಳು ಮೂದಲಿಸುತ್ತವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ದೂರು ಹೊತ್ತಿದಿರಿನಲಿ ಜೀವಿಸಿ
ಹೋರುವೀ ಕುಸುಮಾಳಿ ವರ್ಗಕೆ
ಸಾರಲತಿ ಕಂಟಕಿಗಳಾವೆಂದೆನುತ ನಿಕ್ಷೈಸಿ
ಸೇರದಲೆ ಮಧ್ಯದೊಳು ಮಿಗೆ ತಳ
ವಾರರಂದದಿ ಸುತ್ತುಮುತ್ತಿದು
ಚೋರರನು ಕಾದಿಪ್ಪ ತೆರನಂದದಲಿ ವನವನವ

ಕೋರಿ ಸಂರಕ್ಷಿಸುವ ಕಾರಣ
ಧೀರರೆಲ್ಲರು ಕೇತಕಿಗಳಿಂ
ದಾರಿಪುವ್ರಜ ವಿಜಯಲಕ್ಷ್ಮೀರಮಣನಂಘ್ರಿಯಲಿ
ಪಾರಮಾರ್ಥಿಕದಿಂದಲೆಮ್ಮನು
ಸಾರಿಸಾರಿಗೆ ಅರ್ಪಿಸುವರೆಂ
ದೇರಿಸೊಂಪಿಲಿ ಸರಸಿಜನ ಮೂದಲಿಪ ತೆರದಂತೆ

ತೋರುತಿಹ ಕೇತಕಿಗಳನು ಕಂ
ಡಾರಮಾಗಾರಾಬ್ಜ ಮುಖ ಕೆಂ
ಪೇರಿ ಮಂದಸ್ಮಿತದಲಿಲೆ ನಿಸ್ಸಾರ ಹೃದಯರಿರ
ಚೀರಿ ನೈರಂತರದಿ ಪರರನು
ಬಾರಿಬಾರಿಗೆ ದೂಷಿಸುವ ಕಡು
ಘೋರಪಾತಕಿ ಕಂಟಕಿಗಳಿವರಳಿ ನಿಕರಕೆಂದೇ

ಕ್ರೂರರುಗಳನುವರಿದು ಗ್ರಾಮಾ
ದ್ದೂರಗೈಸುವ ತೆರದಿ ನಿಮ್ಮನು
ಜಾರಿಸಿಹರುದ್ಯಾನ ಬಾಹಿಷ್ಕೃತರೆನಿಸಿ ನಿರುತ
ತಾರದಲೆ ಮನಕಡನು ನಿಂದಿಸಿ
ದೂರಿಗಳಹುವ ಪಾಪಕೋಸುಗ
ತೋರುತಿಹ ಗರಿಗಳನು ಮುರಿಮುರಿದೈಸೆ ನಿಮ್ಮವನು

ನಾರಿಯರು ತದನಂತರದಿ ಕರ
ವಾರಿಜಗಳಿಂ ಸಿಗಿದು ಕೇಶದ
ಲೋರಣದಿ ಬಿಗಿಬಿಗಿದು ಚೋರರ ತೆರದಿ ಬಂಧಿಪರು

Sri Vidyabharathi Book Centre, Sringeri

 CC-O. In Public Domain. Digitized by eGangotri

ಊರುವಿಯೊಳಿಹ ಕುಸುಮಜಾತಿಯು
ಲಾರಿಗೀಪರಿ ಭವಣೆಯಿಲ್ಲ ನಿ
ವಾರಿಸುವರಾರಕಟ ಹಿತವರ ಕಾಣೆವವನಿಯಲಿ

ಇನನುದಯವತಿ ಪ್ರಿಯವೆಮಗೆ ಕೇಳ್
ಘನವು ನಿರ್ಮಲಹೃದದಲಾಶ್ರಯ
ಜನುಮ ತಾವರೆಯಾಗಲುದಕದಿ ಮುಣುಗದಿದ್ದಪೆವೇ
ಅನುದಿನಳಿಯನು ಪುತ್ರನಂತಿರೆ
ಮನವೊಲಿದು ಪೋಷಿಪೆವು ಪಹಿಸದೆ
ಕೊನರಿಗಳಹಿದರಿಂದ ಫಲ ನಿಮಗೇನು ಬಹುದಿನ್ನು

ಶ್ರೀಯೆಮಗೆ ಪ್ರಿಯಳೀ ಚತುರ್ಮುಖ
ರಾಯನಿಜಸುತನೆಮ್ಮ ಸಾಮ್ಯವು
ಪ್ರೀಯ ಮೂಲೋಕದೊಳು ಮುಖಲೋಚನಂಗಳಿಗೆ
ಶ್ರೀಯ ಮಿಗಿಲೊಪ್ಪುವದಿದೆಲೆ ಬಿಲ '
ಶೇಯ ವಾಸಾಸ್ಪದರೆ ಕೇಳೆಂ
ದಾಯತದ ಉತ್ತರ ಕೊಡುವವೋಲ್ ಕಮಲವೊಪ್ಪಿದವು

ಈ ಏಳು ಪದ್ಯಗಳ ಅರ್ಥ ಸುಲಭವಾಗಿಯೇ ಇದೆ. ಮೇಲಿನ ಪದ್ಯದಲ್ಲಿ 'ಜನುಮ ತಾವರೆಯಾಗಲು' ಎಂಬಲ್ಲಿ ತಾವ್ ಅರೆಯಾಗಲು ಎಂದು ಅರ್ಥ ಮಾಡಿಕೊಳ್ಳಬೇಕು. ಬಿಲಶೇಯ ವಾಸಾಸ್ಪದರು ಅಂದರೆ ಸರ್ಪಗಳ ವಾಸಕ್ಕೆ ಆಸ್ಪದ ಕೊಟ್ಟಿರುವರು ಎಂದರ್ಥ. ಕೇತಿಕಿಯಲ್ಲಿ ಯಾವಾಗಲೂ ಸರ್ಪಗಳು ವಾಸನೆಗಾಗಿ ಸೇರುವವೆಂಬುದು ಪ್ರಸಿದ್ಧ ವಿಷಯ.

ಹರಿದಾಸ ಸಾಹಿತ್ಯದಲ್ಲಿ ನಗರ ವರ್ಣನೆ

ಹೈದರಲ್ಲಿ ಟಿಪ್ಪೂ ಸುಲ್ತಾನರು ಮೈಸೂರು ರಾಜ್ಯವನ್ನಾಕ್ರಮಿಸಿ, ಅರಮನೆ ಕೋಟೆಕೊತ್ತಲಗಳನ್ನು ನಾಶಮಾಡಿ, ಶ್ರೀರಂಗಪಟ್ಟಣದಲ್ಲಿ ರಾಜ್ಯವಾಳುತ್ತಿದ್ದರು. ಬ್ರಿಟಿಷರು ಟಿಪ್ಪುವನ್ನು ಕೊಂದು ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ರಾಜ್ಯಾಭಿಷೇಕ ಮಾಡಿದನಂತರ, ಪುನಃ ಮೈಸೂರು ರಾಜಧಾನಿಯಾಯಿತು. ದಿವಾನ ಪೂರ್ಣಯ್ಯನವರು ಪ್ರಸಿದ್ಧ ಶಿಲ್ಪಿಗಳಿಂದ ಭವ್ಯವಾದ ಅರಮನೆಯನ್ನು ಕಟ್ಟಿಸಿ, ರಾಜ್ಯವನ್ನು ರೂಢಿಸಿ ಬೊಕ್ಕಸದಲ್ಲಿ ಎರಡುಕೋಟಿ

Sri Vidyabharathi Book Centre, Sringeri

 CC-O. In Public Domain. Digitized by eGangotri

ದ್ರವ್ಯವನ್ನು ಶೇಖರಿಸಿ, ರಾಜಸೇವೆಯಿಂದ ೧೮೧೧ರಲ್ಲಿ ನಿವೃತ್ತರಾದರು. ೧೮೩೧ರ ವರೆವಿಗೆ ಕೃಷ್ಣ ಪ್ರಭುಗಳು ಸ್ವಯಂ ರಾಜ್ಯಭಾರಮಾಡಿ, ಕಾರಣಾಂತರದಿಂದ ಆಡಳಿತವನ್ನು ಬ್ರಿಟಿಷರಿಗೊಪ್ಪಿಸಿದರು. ಆ ಕಾಲದಲ್ಲಿ ಮಹಾರಾಜರು ವಾನಪ್ರಸ್ಥಾಶ್ರಮಿಗಳಂತಿದ್ದು, ಶಾಸ್ತ್ರವಿಚಾರ ಕಾವ್ಯಾಲಾಪನೆಗಳಲ್ಲಿ ಆಸಕ್ತರಾಗಿದ್ದರು. ಮುಮ್ಮಡಿಯವರು ಸಂಸ್ಕೃತ ಕವಿಗಳಿಗೆ ಆಶ್ರಯ ಕೊಟ್ಟಂತೆ ಕನ್ನಡ ಕವಿಗಳಿಗೂ ಆಶ್ರಯ ಕೊಟ್ಟು, ಸ್ವಯಂ ಮಹಾಭಾರತವನ್ನು ಕನ್ನಡ ವಚನರೂಪವಾಗಿ ಭಾಷಾಂತರ ಮಾಡಿದರು. ದಿನವೂ ಹೊಸ ಹೊಸ ಕವಿತೆಗಳು ಪ್ರಭುಗಳ ವಿಮರ್ಶೆಗೆ ಬರುತ್ತಿದ್ದವು. ಆ ಸಮಯದಲ್ಲಿ ಪ್ರಭುಗಳು ನಮ್ಮ ಅರಮನೆಯನ್ನು ವರ್ಣಿಸಬಲ್ಲಿರಾ, ಎಂದು ಕವಿಗಳನ್ನು ಕೇಳಿದರು. ಕವಿಗಳು ಕ್ಲಿಷ್ಟವಾದ ಶೈಲಿಯಲ್ಲಿ ವೃತ್ತ, ಕಂದ, ವಚನಗಳಾಗಿ ಬರೆದು ತಂದು ಪ್ರಭುಗಳಿಗೊಪ್ಪಿಸಿದರು. ಪ್ರಭುಗಳು, ತುಂಬಾ ಶ್ರಮಪಟ್ಟಿದ್ದೀರಿ, ಆದರೆ ಇದನ್ನು ಬಾಯಿಪಾಠಮಾಡಿ ಹೇಳುವರ್ಯಾರು? ಅರ್ಥವಾಗುವುದು ಹೇಗೆ? ಹರಿದಾಸಶೈಲಿಯಲ್ಲಿ ಲಾವಣಿಯಾಗಿ ಬರೆದಿದ್ದರೆ ಚೆನ್ನಾಗಿರುತ್ತಿಲ್ಲವೇ? ಎಂದು ಕೇಳಿದರು. ಕವಿಗಳು—ದಾಸರ ಶೈಲಿಯಲ್ಲಿ ಬರೆಯಬೇಕಾದರೆ ದಾಸರೇ ಆಗಬೇಕೆಂದು ವ್ಯಂಗ್ಯೋಕ್ತಿಯಿಂದ ನುಡಿದರು. ಮಹಾರಾಜರು, ಆಹಾ! ಹಾಗೋ? ನಮ್ಮ ಮೈಸೂರಲ್ಲಿ ಅಂಥಾ ದಾಸರ್ಯಾರೂ ಇಲ್ಲವೋ! ಎಂದರು. ಮುಸಾಹೇಬರೊಬ್ಬರು ಮುಜುರೆಮಾಡಿ, ಪ್ರಭೋ ಶ್ರೀನಿವಾಸ ದಾಸರಿದ್ದಾರೆಂದು ಅರಿಕೆಮಾಡಿದರು. ಆಗಲೇ ರಾಜಾಜ್ಞೆಯಿಂದ ಮೇನೆಯಲ್ಲಿ ಕರೆತರಲು ರಾಜಭಟರು ದಾಸರ ಮನೆಗೆ ಬಂದರು. ದಾಸರು ಸಮಾಚಾರವೇನೆಂದು ವಿಚಾರಿಸಿ, ಬರಗಿನ ಕಡ್ಡಿ ಮಸಿಬುಡ್ಡಿಗಳನ್ನು ಮಾತ್ರ ಮೇನೆಯಲ್ಲಿಟ್ಟು ತಾವು ಪಾದಚಾರಿಗಳಾಗಿ ರಾಜಗೃಹವನ್ನು ಪ್ರವೇಶಿಸಿದರು. ಪ್ರಭುಗಳು—ದಾಸರೆ, ನಮ್ಮ ಅರಮನೆಯನ್ನು ಹೊಸ ಕನ್ನಡದಲ್ಲಿ ವರ್ಣಿಸಬಲ್ಲಿರಾ, ಎಂದು ಪ್ರಶ್ನೆಮಾಡಿದರು. ದಾಸರು—ಪ್ರಭೋ, ನಾನು ನಿಯಮಬದ್ಧ ದಾಸ, ಶ್ರೀಕೃಷ್ಣಪರಮಾತ್ಮನ ದ್ವಾರಕೆಯನ್ನು ಮಾತ್ರ ವರ್ಣಿಸಬಲ್ಲೆನು, ಎಂದರು. ಹಾಗೆಯೇ ಆಗಲೆಂದು ರಾಜಾಜ್ಞೆಯಾಯಿತು. ದಾಸರು ಕಡ್ಡಿ ಮಸಿಬುಡ್ಡಿಗಳನ್ನು ತರಿಸಿಕೊಂಡು, ಸಮ್ಮುಖದಲ್ಲಿ ಕುಳಿತುಕೊಂಡು, ರಾಜರು ತರಿಸಿಕೊಟ್ಟ ಕಾಗದದಲ್ಲಿ ಲಾವಣಿಯನ್ನು ಬರೆದು ಮುಗಿಸಿದರು. ಒಂದು ಶಬ್ದವನ್ನು [illegible] ದಿರುವುದಾಗಲಿ, ಲೇಖನಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಯನ್ನು ಕಿವಿಗೆ ಸಿಕ್ಕಿಸಿ ಯೋಚಿಸಿದ್ದಾಗಲಿ, ಯಾರಿಗೂ ಕಂಡು ಬರಲಿಲ್ಲ. ಪ್ರಭುಗಳು ಉದ್ದಕ್ಕೆ ಓದಿಕೊಂಡು ನಕ್ಕು, ದಾಸರೆ, ಇದನ್ನು ನೀವೇ ಓದಿರಿ ಎಂದರು. ಶ್ರೀನಿವಾಸ ದಾಸರು ಕೈಯಲ್ಲಿ ತಾಳಹಾಕುತ್ತಾ:

ಮಹರಾಜ ಯದುಕುಲಧಾಮ
ಸುರರಾಜ ಸುಂದರಶ್ಯಾಮ
ದ್ವಿಜರಾಜವಂಶಲಲಾಮ
ದನುಜಾಂತಕ ವರನಿಸ್ಸೀಮ
ಮಹರಾಜ—ಮಹರಾಜ ॥ ಪ ॥

ಸುಂದರತರ ದ್ವಾರಾವತಿನಗರ
ಸುತ್ತಯೋಜನ ದ್ವಾದಶ ವಿಸ್ತಾರ
ಸಿಂಧೂರದಿ ತಿದ್ದಿದ ಗೋಪುರ
ಶಶಿಕೋಟಿ ಪ್ರಭೆಗಳ ಧಿಕ್ಕಾರ
ಒಂದಾರಿಂದಲಿಹುದು ಪ್ರಾಕಾರ
ವಜ್ರಾನ್ವಿತ ಕವಾಟದ್ವಾರ ॥

ಬಂಧಿಸಿಹರು ಬಹುರತ್ನಗಳಿಂದ
ಬುರುಜುಗಳವೆ ಬಹುಲಕ್ಷಗಳಿಂದ
ಅಂದವಾದ ಅಳ್ವೇರಿಗಳು
ಕರಿವೃಂದಗಳಿಂದಲಂಕಾರಗಳು । ಮೇ
ಲಿಂದ್ರನೀಲಪುತ್ಥಳಿಗಳ ತಿದ್ದಿ
ಇಟ್ಟಿಹರೈ ಪ್ರಾಕಾರದಿ ಹೊದ್ದಿ
ಮುಂದೆ ಮೃಗೇಂದ್ರನ ಮುಖಗಳ ರಚಿಸಿ
ಮಾಣಿಕ್ಯಗಳದರಲಿ ಮೇಳವಿಸಿ
ಒಂದೇ ರೀತಿಯೊಳಿರುವ ತೆನೆಗಳು
ವರುಣಾಲಯದಂತಿರುತಿಹ ಅಗಳು
ಮಂದರಗಿರಿಯಂದದಿ ಉನ್ನತ
ಮೂರು ಲೋಕದೊಳು ಬಲು ಪ್ರಖ್ಯಾತ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಿಂಧು ಮಧ್ಯದೊಳೆಸೆವದು ನಗರ
ಸೀಮೆಯೊಳಾವನು ಬಲ್ಲನು ಚದುರ ||

ಚಂದ್ರನ ಸುಕರ | ಮುತ್ತಿನ ಮಕರ
ತೋರಣನಿಕರ ಸಾವಿರಾ
ಬಂಧನ ಮುರಿಗೆಗಳಿಂದ ವಿಮಾನಗ
ಳಿಂದ ಪತಾಕೆಗಳಿಂದ ಸುಕೌಶಲ
ದಿಂದ ದಿವೌಕಸವೃಂದ ವಿಚಿತ್ರಸು
ಗಂಧ ವಿಶೇಷಗಳಿಂದತಿ ನೋಡಲು
ಚೆಂದಳಿ ವೃಂದಾರವಿಂದಗಳೊಪ್ಪಿಂದಿಸು
ಮಂದರ ಸ್ವರಪಿಕ ವೃಂದಧ್ವನಿಗಾ
ನಂದವಿಸೆ | ಹರುಷಂಕುರಿಸೆ | ಸಖನೋಹರಿಸೆ
ಮಂದಿರಗಳ ಮೇಲ್ ಚಂದ್ರಶಾಲೆಗ
ಳಿಂದಲೆಸೆಯೆ ಪೂರ್ಣೇಂದುವದನೆಯರು
ಮಂದಹಾಸೆಯರು | ಪಂಕಜಾಕ್ಷಿಯರು
ಆಂದಣಗಳಲಿ ವಿ | ಹರಿಸುತಲಿರೆ ವರ
ಸಾಂದ್ರವಾದ ಜಾಳಾಂದ್ರಗವಾಕ್ಷೆಗ
ಳಿಂದಲೆಸೆವ ಮೇಲುಪ್ಪರಿಗೆಗಳಿರೆ
ಗಂಧಸನ್ನೀರಿನ ತಳಿಯ ಹಾಕಿಹರು
ಸ್ಯಂದನಗಳು ಶತಸಾವಿರ ಸಂಖ್ಯೆಯೊಳ್
ನಿಂದಿವೆ ಪುರದ್ವಾರದಲಿ—ವೃ
ಷ್ಣ್ಯಂಧಕರಾಯುಧಗಳ ಪಿಡಿದಿಹರು
ನಿಂದಿಹರೂ ಮುದದಲ್ಲಿ | ಕರಿ
ವೃಂದತುರುಗಕಾಲಾಳುಗಳು | ಪುರ
ಸುಂದರ ವೀಧಿಗಳಲ್ಲಿ | ಸೂ
ನಂದನಂದ ಸನಕಾದ್ಯರು ಬಂದು
ನಿಂದಿಹರು ಸಮುಖದಲಿ || ವರ
ಕುಂದಣದಂತೆ ವಿರಾಜಿಸುವಾಮಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಭಿತ್ತಿಗಳು ನವರತ್ನಗಳು । ಸಾ
ಲಿಂದಲೆಸೆವ ನವದ್ವಾರಗಳು । ಆಗಾರಗಳು । ತರ
ದಿಂದ ತೋರ್ಪ ಮೇಲ್ಕಟ್ಟುಗಳು । ನೆಲಗಟ್ಟುಗಳು । ಜಲ
ಬಿಂದುಗಳಿಂದಾನಂದ ಕೊಡುವ ಕಾರಂಜಿಗಳು । ಸುಮಪುಂಜಗಳೂ ಮಾ
ಹೇಂದ್ರನಿರುವ ಅಮರಾವತಿಯೋ ಇದ ಕಟ್ಟಿದವನ ಪ್ರಾವೀಣತೆಯೋ ಬಲು
ಸಂದಣಿ ಸುರರೈತಂದು ದ್ವಾರದಲಿ
ನಿಂದು ಸ್ವಾಮಿ ಪರಾಕು (ನಮ್ಮ ಸುಮಾಕು, ಲಾಲಿಸಬೇಕು;) ಎಂತೆಂ
ದಿಂದ್ರಾದ್ಯರು ನಿಂದೊದರೆ ! ಆ ಗರ್ಜನೆಗೇ ನೆಲ ಬೆದರೇ ॥ ೧ ॥

ಝುಗಿಝುಗಿಸುವ ಸಿರಿಕರದ ಕನ್ನಡಿಯೋ
ಜಗದೊಳಗಿಲ್ಲದ ಸ್ಮರನ ಗರುಡಿಯೋ
ನಗವೈರಿಗೆ ಇದು ನಾಟ್ಯಚಾವಡಿಯೋ
ನಾಗನಗರಿಯು ಪ್ರಭೆಗಿಮ್ಮಡಿಯೋ
ನಗರದಮಲ ಸುಕಾಂತಿಚ್ಛವಿಯೋ
ನಾಗರತ್ನದಿಂ ರಚಿಸಿದ ಗುಡಿಯೋ
ವಿಗಡ ಮದನ ಕರಸುರುಗಿಯ ಕಿಡಿಯೋ
ಮೃಗಶಾಬಾಕ್ಷಿಯರಿಗೆ ಎದೆಪುಡಿಯೋ
ಮೃಗಧರ ಮಾರ್ತಾಂಡರುಗಳ ಸಭೆಯೋ
ಜಗವನು ಬೆಳಗಿಪ ದೀಪದ ಕುಡಿಯೋ
ಜಗತೀಪತಿ ಶ್ರೀಹರಿಯು ದೇವುಡಿಯೋ ॥

ನಗುತಿವೆ ದೀಪಾವಳಿಗಳು ಸ್ತಂಭಾ
ದಿಗಳಲಿ ಸ್ವರ್ಗವ ನೋಡಿ । ಮೇಲ್
ಗಗನವ ಚುಂಬಿಪ ಗಾಢತರದಿ
ಆ ಗಂಭೀರದಲೊಪ್ಪುವ ಮಹಡಿ । ಹೋಗ
ಹೊರ್ಗುತಿಹ ಚಿತ್ತಾರಗಳಲಿ ಶೋಭಿಪ
ಸ್ವರ್ಣಮಯ ವರ ಗ್ವಾಡಿ
ಗ್ವಾಡಿಗಳಲಿ ನೋಳ್ಪರ ಚಿತ್ತ ಭ್ರಾಮಕ
ಚೌಕಡಿಯಲಿ ನಿಲುಗನಡಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾಲುಗಳಲಿ ಮಣಿಮಯ ಸ್ತಂಭಗಳು
ರುಗ್ಮಗಳಲಿ ತಿದ್ದಿದ ಲೋವೆಗಳು
ರಜತದಲಿ ಮಾಡಿದ ಹಂಸಗಳು | ಕುಸು
ಮಗಳಿಂದೊಪ್ಪುವ ಬೇಲಗಳು
ಜಾಗರದಲಿ ರಂಜಿಪ ನವಿಲುಗಳು
ಅರಗಿಳಿಗಳ ದಿವ್ಯಸಾಲುಗಳು
ಅಗಣಿತ ರತ್ನಾನ್ವಿತ ಪೀಠಗಳು
ಅದ್ಭುತವಾದ ವಿಚಿತ್ರದ್ವಾರಗಳು
ಸೊಗಸಿನ ಚಿತ್ರದ ಮೇಲ್ಕಟ್ಟುಗಳು
ತೆಗೆದ ಲಕ್ಷಗವಾಕ್ಷಗಳು
ತಾರೆಗಳಲಿ ತಿದ್ದಿದ ಕುಸುರಿಗಳು
ಕುಸುರಿಗಳಿಗೆ ಮುತ್ತಿನ ಚೆಂಡುಗಳು
ಚೆಂಡುಗಳಿಗೆ ರತ್ನದ ಗೊಣಸುಗಳು
ಗೊಣಸುಗಳಲಿ ಒಪ್ಪುವ ಕಮಲಗಳು
ಕಮಲಗಳಲಿ ನೆರೆವಾ ಭ್ರಮರಗಳು
ಸುಗಂಧಭರಿತ ಸುಮದರಳುಗಳು
ಮಘಮಘಿಸುವ ಗಂಧಾದಿಗಳಿಂದೊಪ್ಪುವ
ಮಂಚಗಳು ಸ್ಮರಸಂಚುಗಳು
ತೆಗೆಮಿಗಿಲುಂಟೇ ಜಗದೊಳು ಸಿರಿಕರ
ಯುಗದೊಳು ಸೌಭಾಗ್ಯವ ತಾ ಧರಿಸಿ
ನಗರದಿ ನೆಲೆಸಿಹಳೈ ಹರಿಯರಸಿ
ತಾ ಮನವೆರೆಸಿ ದುಃಖವ ಮರೆಸಿ
ಪೊಗಳಲಳವೆ ಮಹರಾಜ ಸುರೋತ್ತಮ
ಸೆಜ್ಜೆಯ ಮೇಲಕೇ ಸ್ವಾರಿ
ಮೂರು ಹೆಜ್ಜೆಯಿಡಲು ಜಂಭಾರೀ
ತಾ ಲಜ್ಜಿಸಿ ಬಿಟ್ಟನು ದಾರೀ
ಬಲು ಜರ್ಝರಿಸಿತು ಸುರನಗರೀ ॥ ೨ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಸಿರಿಯರಸನ ಶ್ರೀಮುಖದ ಶೃಂಗಾರ
ಶಶಿಕೋಟಿ ಪ್ರಭೆಗಳ ಧಿಕ್ಕಾರ
ಅರಳಿದ ಕುಸುಮ ಮಂಜರಿಗಳ ಹಾರ
ಆಡುವ ಮುತ್ತಾವಳಿ ಝೋಂಕಾರ
ಮರಕತ ಸುಂದರ ಶ್ಯಾಮಶರೀರ
ಮಕರಧ್ವಜ ಸಾಸಿರನಾಕಾರ
ಶಿರಮುಡಿಯೊಳು ಶೃಂಗಾರ ಕಿರೀಟ
ಸುಮನೋಹರದಲಿ ತಿದ್ದಿದ ಮಾಟ
ಕರುಣಾರಸಪೂರಿತ ಅರೆನೋಟ
ಕಾಮಿತ ಕೊಡುವುದು ಈ ಭ್ರೂಮಾಟ
ವರಕಸ್ತೂರೀ ತಿಲಕಲಲಾಟ
ವಾಮಾಕ್ಷಿಯರಿಗೆ ಇದೆ ಎದೆಗೂಟ
ಸರಸಿಜದಳ ನೇತ್ರಗಳ ವಿಲಾಸ
ಸರಸೋಕ್ತಿ ಸೂಸುವುದು ಪೀಯೂಷ
ಪರಮ ದಯಾಳುಗಳಿಗೆ ಇವ ಅರಸ
ಪರಿಪರಿಯಲಿ ಸುಖಕರೆಸುವ ಪರುಷ
ಕೊರಳಲಿ ಮೆರೆಯುವ ಮುತ್ತಿನ ಕಂಠೀ
ಕಿವಿಯೊಳು ಶೋಭಿಪ ಮಕರದ ವಂಟ
ತರುಣಾದಿತ್ಯನ ಪೋಲುವ ಪದಕ
ತೋರುತಿದೇ ಫಾಲದಿ ಅಳಕ
ಕರದೊಳು ಹಾಕಿದ ರತ್ನದ ಥೋಡೇ
ಕೌಸ್ತುಭರತ್ನಕೆ ನೋಡಿನ್ನೀಡೇ
ಅರುಣಾಧರದಾಳಿಂಬ ಸುದಂತ
ಅಂಬುಜಕಂಬುಗದಾರಿಕರಾಂತ
ಸರಸಿಜನಾಭಿ ತ್ರಿವಳಿಗಳಿಂದ
ಸುಂದರ ಬಾಪುರಿಗಳು ಬಲು ಅಂದ
ಸುರುಚಿರಾಂಬರ ಭೂಷಣ ವಿಲಾಸ
ಸುಮನಸರೀಕ್ಷಿಸೆ ಪರಮೋಲ್ಲಾಸ

Sri Vidyabharathi Book Centre, Sringeri

CC-O. In Public Domain. Digitized by eGangotri

ಪುರಹರ ಸುರನರವಂದಿತ ಪಾದ
ಪುಣ್ಯಶ್ಲೋಕರಿಗಿದು ಸುಸ್ವಾದ
ಮಹಿಮೆ ಅಗಾಧ ಮನಕತಿಮೋದ
ಬಿರುದಿನ ಖಡೆಯ ಭಳಿರೆನ್ನೊಡೆಯ
ಮುರಮಧು ನರಕಾಸುರಸಂಹಾರಿ
ಮುರಳೀಧರ ಗೋವರ್ಧನಧಾರಿ
ಗರುಡನ ಏರಿ ಕಂಸಕುಠಾರಿ
ಬರುತಿಹ ಸ್ವಾರಿ ಬಿಡಿ ಬಿಡಿ ದಾರಿ
ಕರಲಾಘವದಿಂ ಕರಿಯ ಗಮನದಿಂ
ಹರಿ ದಯಮಾಡುವ ಛಂದ | ಸುಂ
ದರಿಯರು ಸಮುಖದಿ ನಾಟ್ಯಗಳು ವಿ
ಸ್ತರಿಸುವರತಿನಯದಿಂದ | ನವ
ತರುಣಿಯರು ಮೃದುಚರಣೆಯರು | ಸು
ವರಣೆಯರಾರತಿ ಛಂದ | ತರ
ತರದಿಂದೊಪ್ಪುವ ಕಲಶ ಕನ್ನಡಿಗಳ
ಧರಿಸಿರುವರು ಕರದಿಂದ | ವಿ
ಪ್ರರುಗಳು ಆಶೀರ್ವಾದಗಳಿಂದಲಿ
ಹರಸುವರು ಒಲವಿಂದ | ಸು
ಧರ್ಮ ಸಭಾಸ್ಥಾನದಿ ಗರುಡಧ್ವಜ
ವರಸಿಂಹಾಸನವೇರಿ
ಮೆರೆಯಲು ಮೊಳಗಿತು ಕಹಳೆ ತುತ್ತೂರಿ
ಬಿರುದಿನ ಭೇರಿ ತಮ್ಮಟೆ ಮೌರಿ
ಮುರಜ ಢಕ್ಕ ಜರ್ಝರಿಪ ಭಟರ | ಅ
ಬ್ಬರಕೆ ಜರಿಯೆ ಗಿರಿಕೂಟ | ಘೋ
ರ್ಗರೆವ ಶರಧಿ ಆರ್ಭಾಟ | ದು
ರ್ಧರವು ಕರ್ಣಕಾಸ್ಫೋಟ | ನೀ
ರ್ಗರೆವ ಮೇಘದಬ್ಬರವೋ ಸಿಡಿಲಿನು
ಬ್ಬರವೋ ಅರಿಯೆ ದರ್ಬಾರ | ವ

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ತ್ರರದಿ ನೆರೆದ ಪರಿವಾರ । ಭೂ
ತರುಣಿಯುರವುರಶೃಂಗಾರ ॥ ೩ ॥

ಜಲಜನಾಭ ಶ್ರೀಕೃಷ್ಣನ ಮುಂದೆ
ಜಯವಿಜಯಾದ್ಯರು ನಿಂದಿಹರಂದೇ
ಕಳವಳಕೊಡುತಿದೆ ವಾದ್ಯದ ಘೋಷ
ಕರಿಗಳ ಸಾಲದೆ ಗಿರಿಸಂಕಾಶ
ಹಳವಿಗಿಹಚ್ಚಿದ ಹೇಮರಥಗಳು
ಹರಿವೇಗದಿ ರಂಜಿಪವಶ್ವಗಳು
ಬಲಿದುನಿಂತ ಬಲು ಬಿರಿದುಗಳನ್ನು
ಬೆಳ್ಳಿ ಚಿತ್ರಗಳ ಗಣನಿನ್ನೇನು
ಘುಳಿಘುಳಿಸುತಲದೆ ಶಂಖದ ನಾದ
ಗರುಡಧ್ವಜನಿಗೆ ಅದು ಬಲು ಮೋದ
ಬಲಶಾಲಿಗಳದೆ ಲಕ್ಷ ಸಂಖ್ಯಾತ
ಬರಿ ಮಾತಲ್ಲಿದು ಕೇಳೆನ್ನ ಮಾತ
ಝುಳುಪಿಸುವರು ಖಡ್ಗಗಳನು ಪಿಡಿದು
ಬಳಸಿನಿಂತ ಬಲುವೀರರ ಗಡಣ
ಬಾಯಲಿ ಕೊಂಡಾಡುವನೇ ನಿಪುಣ
ಫಲಿಫಲಿರೆಂಬುವ ಗಗ್ಗರಿಭಲ್ಲೀ
ಘರ್ಜಿಸುವುದು ಕೇಳ್ಬರುದಿನ ಕಹಳೆ
ಕಳಕಳಿಸುತಲದೆ ಮಹ ಸೌರಂಭ
ಕುಂಭಿಣಿಗಾಶ್ಚರ್ಯದ ಸಿರಿತುಂಬ
ತುಳುಕುತದೇ ಸೌಭಾಗ್ಯದಿ ನಗರ
ತುದಿ ಮೊದಲಾವನು ಬಲ್ಲನು ಚದುರ
ಜಲಜಭವಾಂಡದೊಳಾರಿಸಿ ನೋಡಾ
ಜೋಡುಂಟೆ ನಮ್ಮ ಧೊರೆಗೆಲೊ ಮೂಢ
ಸೆಳೆನಡುವಿನ ಶೃಂಗಾರದ ಸತಿಯರು
ಸರಿಸದಲಿ ನಿಂದಿಹರು । ಕೆಂ
ದಳಿರು ಪೋಲ್ವ ಹಸ್ತಗಳಿಂದಲ್ಲೀ

Sri Vidyabharathi Book Centre, Sringeri

CC-O. In Public Domain. Digitized by eGangotri

ಚಾಮರಗಳ ಹಾರಿಸುತಿಹರು | ಪು
ತ್ತ್ರಳಿಗಳಂತೆ ನಿಲುಗನಡಿಗಳನು ಕರ
ದಲ್ಲೀ ಪಿಡಿದಿರುತಿಹರು | ಚಿಗು
ರೆಲೆಯಿಂದೊಪ್ಪುವ ತಾಂಬೂಲಗಳನು
ಚಿನ್ಮಯಗೇ ಕೊಡುತಿಹರು | ಮ
ದ್ದಲೆಯು ತಾಳತಂಬೂರಿ ಸುವೀಣಾ
ವಾದ್ಯವು ಲಯಸ್ವರ ಬದ್ಧದಿಂದ | ಸು
ಬುದ್ಧಿವಂತರೆಲ್ಲಿದ್ದು ನಿಂತು ತಮ್ಮ
ವಿದ್ಯೆಗಳನು ತೋರುವರು | ಸು
ಪದ್ಧತಿಗಳ ಬಲ್ಲವರು
ಭಳಿರೆ ಭಳಿರೆ ಸದ್ಗುಣಗಣನಿಲಯ
ಭಕ್ತಜನಾವಳಿಗೆಲ್ಲ ನೀ ಸದಯ
ಬಲಿಗೊಲಿದತಿ ಸುಂದರತರ ಮೂರ್ತಿ
ಭೂವ್ಯಾಕಾಶದಿ ತುಂಬಿತು ಕೀರ್ತಿ
ಜಲಜನಾಭವರ ಜಾಹ್ನವಿಜನಕ
ಜಗತೀಪತಿಜಯ ಯದುಕುಲತಿಲಕ
ಖಳಕುಲಮೂಲೋತ್ಪಾಟನಕಾರಿ
ಕುಜನಕುಠಾರಿ ಕೌಸ್ತುಭಧಾರಿ
ಫಲುಗುಣಸಖ ಜಯವಿಠಲನೆಂದು
ಬಲು ಹೊಗಳುತಲಿರೆ ಬಂದಿಗಳು | ಮಂ
ಜುಳದ ದಿವ್ಯತರ ನಾದಗಳು | ಎ
ಲ್ಲೆಲ್ಲು ತೋರ್ಪ ವಿನೋದಗಳು | ಭೂ
ವಲಯದಲ್ಲಿ ಮಹರಾಜ ಸಭಾ
ಶೋಭಿಸುವದು ಶತಸೂರ್ಯನಿಭ | ಪ್ರಭೆ
ತುಂಬಿ ಚುಂಬಿಸುತಿದೆ ನೋಡು ನಭ | ಭೂ
ವಲಯಕೆ ಇದು ವೈಕುಂಠಸಭಾ ||೪||

ಇಂತಹ ಶಬ್ದಸಂಪತ್ತು, ಇಂತಹ ವರ್ಣನೆಗಳುಳ್ಳ ಸಂಗೀತಮಯ ಸಾಹಿತ್ಯವನ್ನು ಎಷ್ಟು ಬೇಕೆಂದರೂ ಪುಸ್ತಕರೂಪವಾಗಿ ಕೊಡುವ ಸಂಪತ್ತು

Sri Vidyabharathi Book Centre, Sringeri

CC-O. In Public Domain. Digitized by eGangotri

ಹರಿದಾಸ ಸಾಹಿತ್ಯದಲ್ಲಿದೆ. ಹುಳು ಹಿಡಿದು ಹಾಳಾಗುತ್ತಿರುವ ಹಳೇ ಪುಸ್ತಕಗಳನ್ನು ಸೂರ್ಯನ ಬೆಳಕಿಗೆ ತರಬೇಕೆಂದರೆ ಉದಾರಿಗಳಾದ ಜನರಾಗಲಿ, ಉದಾರ ಮನಸ್ಸಿನ ಆಡಳಿತವಾಗಲಿ, ಇಲ್ಲವೇ ಎಂದು ವ್ಯಸನವಾಗುತ್ತಿದೆ. ಈಗಿನ ಶಾಲಾಬಾಲಕರಿಗೆ ಕಂಠಸ್ಪರ್ಧೆಯನ್ನೇರ್ಪಡಿಸಿ ಅಂತಿಂಥ ಸಾಹಿತ್ಯಗಳನ್ನು ಹೇಳಿಸಿ ಯೋಗ್ಯತಾಪತ್ರಗಳನ್ನು ಕೊಡುವವರು ದಾಸರ ದಿವ್ಯ ಸಾಹಿತ್ಯಗಳನ್ನು ಹಾಡಿಸಿ ಕಂಠಾಭರಣ ಕೊಡಬಾರದೇ ಎಂದೆನಿಸುತ್ತದೆ. ಶೃಂಗಾರ ಹೇಳಬೇಕೆಂದು ಹರಿದಾಸರು ಸೂಳೆಗೇರಿಗಳನ್ನು ವರ್ಣಿಸಿದವರಲ್ಲ. ಯಾವದೊಂದು ರಸದಲ್ಲಿ ಹಾಡಲಿ, ಜೀವರ ಹೆಸರಿನಲ್ಲಿ ಹಾಡಿದರು ವಿನಾ, ಅನವಶ್ಯ ಅಶ್ಲೀಲ ಅಯೋಗ್ಯ ವಿಷಯಗಳ ಮೇಲೆ ಹಾಡಲಿಲ್ಲ.

ಮೋಹಿನಿ ರೂಪ

ಶ್ರೀನಾಥ ಮೋಹಿನಿ ರೂಪ । ತಾ ತಾಳಿದನ್ಯೆ ಸುಕಲಾಪ
ಏನೆಂಬೆನು ಹರಿಯ ಪ್ರತಾಪ । ತಾನೋಡಿಸುವುದು ಹೃತ್ತಾಪ ॥ ಪ ॥

ಭಂಗಾರದ ಲತೆಯಂತೆ ಬಳಕುವಳು
ಬಾಜುಬಂದಿಗೆ ಗೊಂಡೆಗಳ ಕಟ್ಟಿಹಳು
ಮುಂಗಾಲಿಲಿ ನೆರಿಗೆಗಳ ಚಿಮ್ಮುವಳು
ಮುತ್ತಿನ ಬೈತಲೆಯಿಂದ ಮೆರೆಯುವಳು
ಭೃಂಗನೀಲ ಕುಂತಳದಿ ರಂಜಿಪಳು
ಫಾಲದಿ ತಿಲಕವ ತಿದ್ದಿ ಹಚ್ಚಿಹಳು
ತುಂಗಕುಚದ ಭಾರಕ್ಕೆ ತಡೆಯಳು
ತುದಿಬೆರಳಲಿ ಗಲ್ಲವನೊತ್ತಿಹಳು
ಮುಂಗೈ ಮೇಲರಗಿಳಿಯನಿಟ್ಟಿಹಳು
ಮೋಹನ ಮಾಲೆಯ ಗಳಕೆ ಕಟ್ಟಿಹಳು
ರಂಗುಕೇಸರೀಗಂಧ ಹಚ್ಚಿಹಳು
ರತ್ನಖಚಿತ ಹಾವಿಗೆಯ ಮೆಟ್ಟಿಹಳು
ರಂಗುಮಾಣಿಕದುಂಗುರವನಿಟ್ಟಿಹಳು
ರಾಜೀವದ ಮಂಜರಿಯ ಪೋಲುವಳು

Sri Vidyabharathi Book Centre, Sringeri

CC-O. In Public Domain. Digitized by eGangotri

ಹೊಂಗ್ಯಾದಿಗೆ ಪೋಲುವ ಮೈಬಣ್ಣ
ಹುಮ್ಮಸದಲಿ ಪೋಲುವರಿಲ್ಲಣ್ಣ
ಹಿಂಗಡೆಯಲಿವರ ಹೆರಳುಭಂಗಾರ
ಹಿಮ್ಮಡಿ ಬಡಿವದು ಸರ್ಪಾಕಾರ
ಭಂಗಿಸುವಳು ಬಹು ದೈತ್ಯರ ಹೃದಯು
ಭ್ರೂವಿಲಾಸದಲಿ ತೋರ್ಪಳು ಸುಧೆಯು
ಅಂಗದ ಸೌಗಂಧಕ್ಕೆ ಅಳಿವೃಂದ
ಆಡುತಲಿದೆ ಝೇಂಕಾರಗಳಿಂದ
ಸಂಗಡ ನೆರೆದ ಸುರಾಸುರವೃಂದ
ಸೊಕ್ಕಿ ಮೋಹಿಸುವರು ಸತಿ ಚೆಲುವಿಂದ ||

ಮಂಗಳಮುಖಿ ನಮ್ಮಂಗಳ ಮೋಹಿಸ
ಲಿಂಗಡಲಿಂ ಬಂದಿಹಳೋ | ಬೆಳ
ದಿಂಗಳ ಸೋಲಿಸುವಂಗಛವಿಯಲಿ
ಕಂಗೊಳಿಸುತಲೈತಹಳೋ
ಮೃದ್ವಂಗಿ–ಮೃದ್ವಂಗಿ | ಮೃ
ದ್ವಂಗಿ ಮತ್ತಮಾತಂಗಯಾನೆ ಅ
ನಂಗನ ಧಿಕ್ಕರಿಸುವಳೋ | ನ-
ಮ್ಮಂಗಳಿಗಮೃತವನೆರೆಯಲು | ಕಲ
ಶಂಗಳ ಕರದಲಿ ಪಿಡಿದಿಹಳೋ | ರಾ
ಜಾಂಗಳದಿ ನಿಂದಿಹಳೋ | ಜ
ಗಂಗಳ ಪಾಲಿಸುವವಳೋ | ಮನ
ಸಂಗಳ ಅಪಹರಿಸುವಳೋ | ಜಡ
ಜಂಗಮರಿಗೆ ಪ್ರಿಯತಮಳೋ ||

ಸಾರಾಂಗಿ–ಸಾರಾಂಗಿ–ಸಾ
ರಾಂಗಿ ಸಾಂಬಮದಭಂಗಿ ಬಹಳ ಸುಖ
ಸಂಗಿ ಸುಂದರಲತಾಂಗಿ ಮೋಹನಾ
ಪಾಂಗಿ ಪೊಳೆವ ಕನಕಾಂಗಿ ಖಚಿತ ಬಿಡು

Sri Vidyabharathi Book Centre, Sringeri

CC-O. In Public Domain. Digitized by eGangotri

ಹೆಂಗಸಲ್ಲವೋ ಈಕಿ । ನೀವು
ಭಂಗಬಡುವಿರೆಲೊ ಜೋಕಿ ॥ ೧ ॥ ಶ್ರೀನಾಥ

ಕನ್ನಡಿಯಂದದಿ ಪೊಳೆವ ಕಪೋಲ
ಕಪ್ಪುರವಾಸಿತ ವರ ತಾಂಬೂಲ
ಕಣ್ಣಿಗೊಪ್ಪುವ ಕನಕದುಕೂಲ
ಕಾಮಿನಿಯಂದದಿ ತೋರ್ಪಳು ಜಾಲ
ಚುನ್ನಡಿ ಹಾಕಿದ ಚಂದ್ರದ ಕುಪುಸ
ಚಪಲಾಕ್ಷಿಯ ನೋಟದ ಬಲುರಭಸ
ಕರ್ಣಾಯತ ನೇತ್ರಗಳ ವಿಲಾಸ
ಕಾಮನ ಶರಪಂಜರಕಿದು ಕೋಶ
ಉನ್ನತ ನಾಸಿಕದಲ್ಲಿ ಬುಲಾಕು
ವಜ್ರಮಯದ ವರ ಮುಖರದ ಬೆಳಕು
ಕರ್ಣದಿ ರತ್ನಖಚಿತ ತಾಟಂಕ
ಕುಸುರಿಹಚ್ಚಿದ ಬಾವುಲಿಗಳ ಬಿಂಕ
ಸಣ್ಣಮುತ್ತಿನ ಸರಪಳಿ ಚಳತಂಬು
ಸೊಗಸುವ ಮುಖದಲಿ ಕಿರಿಬೆವರಂಬು
ಸಣ್ಣನಡುವಿನೊಯ್ಯಾರದ ನಲ್ಲೇ
ಸರಸಿಜತನಯನ ಸೃಷ್ಟಿಯಿದಲ್ಲೇ
ಬಣ್ಣಿಸಲಳವಲ್ಲದ ಸೌಂದರ್ಯ
ಬಿಡಿಸುವಳೋ ಕೇಳ್ಮುನಿಗಳ ಧೈರ್ಯ
ಬೆಣ್ಣೆಯಂತೆ ಮೃದುವಾದ ಶರೀರ
ಭಾಗ್ಯವಿಹೀನರಿಗಿದು ಬಹುದೂರ
ಕನ್ನೆ ಶಿರೋಮಣಿ ಕಾಮನ ಅರಗಿಣಿ
ಕೌಸ್ತುಭಮಣಿಗಣಹಾರೆ । ಮೋ
ಹನ್ನಮಯೀ ಮಧುರಾಧರಿ ಮಂಜುಳ
ವಾಕುಝರಿಯಲಿ ಚದುರೆ । ಚ
ಪ್ಪನ್ನದೇಶದೊಳ್ ಚಾಲ್ವರಿದರು ಚಪ

Sri Vidyabharathi Book Centre, Sringeri

CC-O. In Public Domain. Digitized by eGangotri

ಲಾಕ್ಷಿಗೆ ಸಮರಿನ್ನಹರೆ । ಕೃತ
ಪುಣ್ಯದಿಂದ ಕೈಸೇರುವಳಲ್ಲದೆ
ಕಾಮಾಂಧರಿಗತಿದೂರೇ !
ಸಂಪನ್ನೇ-ಸಂಪನ್ನೇ । ಸಂ
ಪನ್ನೆ ಸುಗುಣಗುಣಪೂರೇ
ಸುವರ್ಣವರ್ಣ ಸುಕುಮಾರೇ । ಸಂ
ಪೂರ್ಣಕಳಾಪರಿಪೂರೇ । ಮ
ಹಾರ್ಣವಸಮ ಗಂಭೀರೆ
ಈ ಹೆಣ್ಣು-ಈ ಹೆಣ್ಣು-ಈ
ಹೆಣ್ಣು ಸುರಾಸುರರನ್ನು ಮಹಾತ್ಮಳು
ತನ್ನ ಮನಕೆ ತರಳಿನ್ನು ಬಿಡೋ ವಿಷ
ದ್ಹಣ್ಣು ಮೆಲುವನ ಮಣ್ಣು ಕೂಡಿಸುವಳು
ಮಾನ್ಯಳು ಮತಿಸಂಪನ್ನಳು ಪರಮಾ
ಪನ್ನಜನರಿಗಮೃತಾನ್ನ ಕೊಡುವಳಘ
ಶೂನ್ಯಳು ನೋಡರಿ ಸೈನ್ಯಾರಣ್ಯವಿನಾಶೆ
ಬ್ರಹ್ಮಣ್ಯ ಭವಾದ್ಯರಿಗೀಶೆ || ೨ || ಶ್ರೀನಾಥ

ಹುಡುಗಿ ನೋಡು ಹೊಸ ಪರಿಯಾಗಿಹಳು
ಹದವಿಾರದ ಯವ್ವನದಿ ಮೆರೆವಳು
ಮುಡಿಯೊಳು ಮಲ್ಲಿಗೆಯರಳ ತುಂಬಿಹಳು
ಮಂದಸ್ಮಿತದಲಿ ಮೋಹಿಸುತಿಹಳು
ಬೆಡಗಿನಿಂದ ಬಿಡುನುಡಿಯ ತೋರುವಳು
ಬಹುವಿಧದಾಭರಣಗಳನಿಟ್ಟಿಹಳು ||
ನಡಗೆಗಳಂದಕೆ ನಾಚಿತು ಹಂಸಿ
ನಖಮಣಿಚಂದ್ರಿಕೆ ಕೆಡಸಿತ ಮಾಂಸಿ
ಜಡಿತ ಮುತ್ತಿನ ತಾಯಿತ ಕಟ್ಟಾಣಿ
ಜಗವನು ಮೋಹಿಸುವಳು ಸುಶ್ರೋಣಿ
ಬಿಡುಬಿಂಕದ ಸವಿನುಡಿಗಳ ಛಂದ
Sri Vidyabharathi Book Centre, Sringeri

 CC-O. In Public Domain. Digitized by eGangotri

ಬೆದರಿಸಿತು ಶುಕಪಿಕಗಳ ವೃಂದ
ಹಿಡಿಗಮರುವ ಮಧ್ಯಕೆ ಮನಮರುಗಿ
ಹಮ್ಮೈಸಿತು ಕೇಸರಿ ಬಲುಸೊರಗಿ
ಉಡುಪತಿಕೋಟಿಪ್ರಭೆ ಧಿಕ್ಕಾರ
ಉಲ್ಲಾಸದ ವರಮುಖ ಚಂದಿರ
ಉಡುಗಣದಂತೆ ವಿರಾಜಿಸುವದು ನವ
ರತ್ನಮಯದ ಹಣೆಕಟ್ಟು | ಮೇಲ್
ಪಡಿಯಿಲ್ಲದೆ ಪಚ್ಚೆಯಲಿ ರಚಿಸಿದ
ಬೈತಲೆಗೊಪ್ಪುವ ಬಟ್ಟು | ಆಳ
ವಡಿಸಿದ ಅಲಂಕಾರಗಳಿಂದೊಪ್ಪುವ
ಅಂಗಜ ಶರಗಳ ತೊಟ್ಟು | ಎಡೆ
ಬಿಡದೆ ಎಚ್ಚರಿಕೆ ಪೇಳುತ ಬರುವನು
ಮುಂಗಡೆಯಲಿ ಕೈಗೊಟ್ಟು | ನಡೆ
ಮಡಿಗಳ ಹಾಸುತಲೈತಪ್ಪನು ಮುಂ
ದುಡುಪತಿ ಗಗನವ ಬಿಟ್ಟು ಬಲ್
ಸೆಡವಿನಿಂದ ಬರುತಾಳೆ ವಿನೋದ
ಸಕಲ ಜಗತ್ತಿಗೆ ಬಲು ಸುಸ್ವಾದ
ಕೊಡುವಳು ಕೋಮಲತರ ಸುಗಾತ್ರೆ
ಕೆಂದಾವರೆದಳದಾಯತ ನೇತ್ರೆ ||
(ವರಸುಚರಿತ್ರೆ - ಪರಮಪವಿತ್ರೆ
ಮಂಗಳವಕ್ತ್ರೆ-ಮುನಿಮನಮಿತ್ರೆ)
ಕಡೆಗಣ್ಣಿನ ಸನ್ನೆಯಲಿ ಖಳರನು
ಕಾಮಾಗ್ನಿಗೆ ವಶಗೊಳಿಸಿ | ಸುಧೆ
ಬಡಿಸಲು ಸುರರಿಗೆ ಸರ್ವದ ತನ್ನಲಿ
ಸದ್ಬುದ್ಧಿಯ ನೆಲೆಗೊಳಿಸಿ | ಈ
ಪೊಡವಿಯೊಳಗೆ ಪಡಿಯಿಲ್ಲ ಗುಣಕೆ
ಕಡೆಯಿಲ್ಲ ತನ್ನ ಅಡಿಯಲ್ಲಿ ಮನಸು
ಇಡ | ಬಲ್ಲ ಜನರ ಒಡ | ಲಲ್ಲಿ ಇಟ್ಟು

Sri Vidyabharathi Book Centre, Sringeri

ಕಡೆ | ಗೆಲ್ಲ ಮುಕ್ತಿ | ಕೊಡುವಲ್ಲಿ ಕೇಳು
ತಡ | ವಿಲ್ಲ ಸುಳ್ಳು ನುಡಿಯಲ್ಲ ಮಡದಿ ಇವ
ಳಲ್ಲ | ನೋಡು ಜಗದಿ | ನ
ಮ್ಮೊಡೆಯ ಶ್ರೀಶ ಜಯವಿಠಲನಲ್ಲದೆ
ಎಲ್ಲಿಂದ ಬಂದಳೀ ಕೆಳದಿ ಶ್ರೀನಾಥ || ೩ ||

ಹರಿದಾಸ ಸಾಹಿತ್ಯದಲ್ಲಿ ಬಾಳುವೆ

ಮಾನವನ ಬಾಳು ಹೇಗಿರಬೇಕೆಂಬುದನ್ನು ಹರಿದಾಸರು ಪರಿಪರಿಯಾಗಿ ತಿಳಿಸಿರುತ್ತಾರೆ. ಹಾಗಿರದ ಬಾಳು ಎಷ್ಟು ಗೋಳೆಂಬುದನ್ನು ಮನಸ್ಸಿಗೆ ತಾಕುವಂತೆ ಹೇಳುತ್ತಾರೆ. ವ್ಯಾಕುಲಿತ ಮನಸ್ಸಿನ ವ್ಯಾಕುಲವನ್ನು ಕಳೆಯುತ್ತಾರೆ. ಮಾನವನು ಸಭ್ಯನಾಗಬೇಕು, ಮಾನವನು ಭಕ್ತನಾಗಬೇಕು, ಮಾನವನು ಮುಕ್ತನಾಗಬೇಕು, ಎಂಬುದೇ ಹರಿದಾಸರ ಹಂಬಲ. ಭವಾಟವಿಯಲ್ಲಿ ಬಳಲುವವನ ಮನಸ್ಸಿಗಂತು ಹರಿದಾಸರ ಪದ ಸುಳಾದಿಗಳು ಸಂಜೀವನದಂತಿರುತ್ತವೆ. ಈ ದೃಷ್ಟಿಯಿಂದ ಈ ಬಗೆಯ ಸಾಹಿತ್ಯವನ್ನೇ ಆರಿಸಿಕೊಡಬೇಕೆಂದರೆ ಅದು ರಾಶಿರಾಶಿಯಾಗಿದೆ. ಅವುಗಳ ಕೆಲವು ಮಾದರಿಗಳು ಕೆಳಕಂಡಂತಿವೆ.

ರಾಗ : ಪೂರ್ವಿ — ತಾಳ : ಆದಿ

ಫಲವಿದು ಬಾಳ್ದುದಕೆ | ಸಿರಿ
ನಿಲಯನ ಗುಣಗಳ ತಿಳಿದು ಭಜಿಸುವದೆ || ಪ ||

ಸ್ವೋಚಿತ ಕರ್ಮಗಳಾಚರಿಸುತ ಬಲು
ನೀಚರಲ್ಲಿಗೆ ಪೋಗಿ ಯಾಚಿಸದೆ
ಖೇಚರವಾಹ ಚರಾಚರ ಬಂಧವಿ
ಮೋಚಕನಿಹನೆಂದ್ಯೋಚಿಸುತಿಪ್ಪದೆ || ೧ ||

ನಿಚ್ಚ ಸುಭಕುತಿಯೊಳಚ್ಯುತನಂಘ್ರಿಗ
ಳರ್ಚಿಸಿ ಮೆಚ್ಚಿಸುತೆಚ್ಚರದಿ

Sri Vidyabharathi Book Centre, Sringeri

CC-O. In Public Domain. Digitized by eGangotri

ತುಚ್ಛ ವಿಷಯುಗಳಿಗಿಚ್ಛೈಸದೆ ಯ
ದೃಚ್ಛಲಾಭದಿಂ ಪ್ರೋಚ್ಚನಾಗುವದೆ ॥ ೨ ॥

ಮನವಾಕ್ಕಾಯದೊಳನುಭವಿಸುವ ದಿನ
ದಿನದ ವಿಷಯ ಸಾಧನಗಳನು
ಅನಿಲಾಂತರ್ಗತ ವನರುಹ ದಳಲೋ
ಚನಗರ್ಪಿಸಿ ದಾಸನು ನಾನೆಂಬುದೆ ॥ ೩ ॥

ಹಂಸ ಮೊದಲು ಹದಿನೆಂಟು ರೂಪಗಳ
ಸಂಸ್ಥಾನವ ತಿಳಿದನುದಿನದಿ
ಸಂಸೇವಿಸುವ ಮಹಾಪುರುಷರ ಪದ
ಪಾಂಸುವ ಧರಿಸಿ ಅಸಂಶಯನಪ್ಪುದೆ ॥ ೪ ॥

ವರಗಾಯಿತ್ರೀ ನಾಮಕ ಹರಿಗೀ
ರೆರಡಂಘ್ರಿಯ ವಿವರವ ತಿಳಿದು
ತ ರುವಾಯದಿ ಷಡ್ವಿಧರೂಪವ ಸಾ
ದರದಲಿ ಧ್ಯಾನಿಸಿ ನಿರುತ ಜಪಿಸುವದೆ ॥ ೫ ॥

ಗೃಹಕರ್ಮವ ಬೇಸರದಲೆ ಪರಮೋ
ತ್ಸಹದಲಿ ಮಾಡುತ ಮೂಜಗದ
ಮಹಿತನ ಸೇವೆಯಿದೆನುತಲಿ ಮೋದದಿ
ಅಹರಹ ಮನದಿ ಸಮರ್ಪಿಸುತಿಪ್ಪುದೆ ॥ ೬ ॥

ಒಂದು ರೂಪದೋಳನಂತ ರೂಪವು
ಪೊಂದಿಪ್ಪವು ಗುಣಗಣಸಹಿತ
ಹಿಂದೆ ಇಂದು ಮುಂದೆಂದಿಗು ಶ್ರೀಗೋ
ವಿಂದಗೆ ಸರಿಮಿಗಿಲಿಲ್ಲೆಂಬುವದೆ ॥ ೭ ॥

ಹರಿಕಥೆ ಪರಮಾದರದಲಿ ಕೇಳುತ
ಮರೆದು ತನುವ ಸುಖ ಸುರಿಯುತಲಿ
ಉರುಗಾಯನ ಸಂದರುಶನ ಹಾರೈ
ಸಿರುಳು ಹಗಲುಗಳ ಜರುಗಿಸುತಿಪ್ಪುದೆ ॥ ೮ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಬಿಗಿವ ಕಂಠದಿಂ ದೃಗ್ಬಾಷ್ಪಗಳಿಂ
ನಗೆಮೊಗದಿಂ ರೋಮಗಳುಗಿದು
ಮಿಗೆ ಸಂತೋಷದಿ ನೆಗೆದಾಡುತ ನಾ
ಲ್ಮೊಗನಯ್ಯನ ಗುಣ ಪೊಗಳಿ ಹಿಗ್ಗುವದೆ ॥ ೯ ॥

ಕ್ಲೇಶಾನಂದಗಳೀಶಾಧೀನ ಸ
ಮಾಸಮ ಬ್ರಹ್ಮಸದಾಶಿವರು
ಈಶಿತವ್ಯರು ಪರೇಶನಲ್ಲದೆ
ಶ್ವಾಸ ಬಿಡುವ ಶಕ್ತಿ ಲೇಸಿಲ್ಲೆಂಬುದೆ ॥ ೧೦ ॥

ಪನ್ನಗಾಚಲ ಸನ್ನಿವಾಸ ಪಾ
ವನ್ನಚರಿತ ಸದ್ಗುಣಭರಿತ
ಜನ್ಯಜನಕ ಲಾವಣ್ಯನಿಧಿ ಜ
ಗನ್ನಾಥವಿಠಲನ ತನ್ನವನೆಂಬುದೆ ॥ ೧೧ ॥

ರಾಗ : ಮೋಹನ — ತಾಳ : ಅಟ್ಟ

ಅಂತರಂಗದಲ್ಲಿ | ಹರಿಯ ಕಾಣದವ
ನೇ ಹುಟ್ಟುಕುರುಡಾನೋ | ಕುರುಡಾನೋ ॥ ಪ ॥

ಸಂತತ ಶ್ರೀಕೃಷ್ಣ ಚರಿತೆ ಕೇಳದವ
ಜಡಮತಿ ಕಿವುಡಾನೋ | ಎಂದೆಂದಿಗು ॥ ಅ ॥

ಕುರುವೀರಸಖನಾದ ಕೃಷ್ಣನ ಮುಂದೆ
ಕುಣಿಯದವನೆ ಕುಂಟನೋ
ನರಹರಿಚರಣೋದಕವ ಧರಿಸದ ಶಿರ
ನಾಯುಂಡ ಹಂಚು ಕಣೋ
ಹರುಷದಿಂದಲಿ ನರಹರಿಯ ಪೂಜೆಯ ಮಾಡ
ದವನೆ ಕೈಮುರುಕಾನೋ ॥

ಸುರವರ್ಯ ಕೃಷ್ಣಪ್ರಸಾದವಿಲ್ಲದ ಊಟ
ಸೂಕರಭೋಜನವೋ | ಎಂದೆಂದಿಗು ॥ ೧ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಅಮರೇಶ ಕೃಷ್ಣಗರ್ಪಿತವಿಲ್ಲದ ಕರ್ಮ
ಅಸತಿಯ ವ್ರತನೇಮವೋ
ರಮೆಯರಸಗೆ ಪ್ರೀತಿಯಿಲ್ಲದ ವಿತರಣೆ
ರಂಡೇ ಕೊರಳ ಸೂತ್ರವೋ
ಕಮಲನಾಭನ ಪಾಡಿ ಪೊಗಳದ ಸಂಗೀತ
ಗಾರ್ಧಪರೋದನವೋ ||
ಮಮತೆಯಿಂದಲಿ ಕೇಶವಗೆ ನಮಸ್ಕಾರ
ಮಾಡದವನೆ ಮೃಗವೋ । ಎಂದೆಂದಿಗು ।೧ ||

ಸುರಧೇನುವಿರಲಾಗಿ ಶ್ವಾನನ ಪಾಲ
ಕರೆದು ಕುಡಿಯಬೇಡವೋ
ಜರೆಹುಟ್ಟುಮರಣವ ತೊಡೆವ ಸುಧೆಯ ಬಿಟ್ಟು
ಸುರೆಯ ಸೇವಿಸಬೇಡವೋ
ಕರಿತುರಗವು ಇರಲಾಗಿ ಕೆಡಹುವಂಥ
ಕತ್ತೆಯೇರಲಿ ಬೇಡವೋ ||
ಪರಮಪದವನೀವ ಸಿರಿಕೃಷ್ಣನಿರಲಾಗಿ
ನರರ ಸೇವಿಸಬೇಡವೋ । ಎಂದೆಂದಿಗು || ೨ ||

ವ್ಯಾಕುಲ ಪರಿಹಾರ ಸುಳಾದಿ

ಧ್ರುವತಾಳ

ವ್ಯಾಕುಲವ್ಯಾಕೋ ಮನವೆ ಯಾಕೆ ನಿನಗೆ ನಿತ್ಯ
ಸಾಕುವ ದಾತನು ಶ್ರೀಕಾಂತನಿರಲಾಗಿ
ಲೋಕಾಲೋಕವನೆಲ್ಲಾನೇಕಬಗೆಯಿಂದ
ಜೋಕೆಮಾಡುವನು ಬೇಕೆಂದು ಪ್ರತಿದಿನ
ಕಾಕೂಲಾತಿಯ ಪಿಡಿದು ಲೌಕಿಕದೊಳು ಬಿದ್ದು
ಕೂಕರ್ಮವನುಸರಿಸಿ ಶೋಕಕೊಳಗಾಗದಿರು
ನೂಕು ಸಂತಾಪವನೇಕಬಗೆಯಿಂದ
ವಾಕುಸಾರಿದೆ ನಿಜ ನೀ ಕೇಳು ದೃಢವಾಗಿ
ಈ ಕುಂಭಿಣಿಯ ಮಧ್ಯಪ್ರಾಕೃತವಿಡಿದು ಬ

Sri Vidyabharathi Book Centre, Sringeri

CC-O. In Public Domain. Digitized by eGangotri

ದೂಕುವ ಜೀವಿಗಳ ಸಾಕುವನ್ಯಾರೋ
ಗೋಕುಲಾಂಬುಧಿ ಚಂದ್ರ ವಿಜಯವಿಠಲ ಗ್ರಾಸ
ಹಾಕುವನಿರಲಾಗಿ ನೀ ಕಳವಳಿಸುವರೇ ॥ ೧ ॥

ಮಟ್ಟತಾಳ

ಬರ ಬಂದರೇನು ಬಾರದಿದ್ದರೇನು
ಧರೆಯೆಲ್ಲಾ ಇಂದೇ ಕರಗಿ ಪೋದರೇನು
ಅರಸಾಗಿದ್ದವರ ಕರುಣ ತಪ್ಪಿದರೇನು
ವರುಷಂಗಳು ತಡೆದು ಬರದೆ ಇದ್ದರೇನು
ಗಿರಿಸಮುದಯಗಳು ಉರುಳಿಬಿದ್ದರೇನು
ಹರಿದು ಮುಗಿಲು ಮೇಲೆ ಮರಗಿ ಬಿದ್ದರೇನು
ಧರಣಿಪಾಲಕ ರಂಗ ವಿಜಯವಿಠಲರೇಯನ
ಪರಮಭಕುತ ಹರಿಶಣರಗೆ ಭಯವೇನು ॥ ೨ ॥

ತ್ರಿಪುಟತಾಳ

ಶಾರೆ ಹೊನ್ನಿಗೆ ಶಾರೆ ಭತ್ತವಾದರೇನು
ನೂರಾರು ಖಂಡುಗ ಕಾಸಿಗಾದರೇನು
ಊರೂರಲಿ ಧನ ಸೂರೆಬಿಟ್ಟರೇನು
ಮೂರುವ ಧಾರಣಿ ಏರಿ ಇಳಿದರೇನು
ಅರಾಜಕವಾಗಿ ಭೀತಿ ಬಂದರೇನು
ಆರಾದರೂ ಮೋರೆ ತಿರುಹಿಕೊಂಡರೇನು
ಮೇರೆದಪ್ಪಿ ಏಳು ಶರಧಿ ಹೆಚ್ಚಿದರೇನು
ಶರೀರವೇ ಶ್ರೀನಿವಾಸನ ಪಾದಕ್ಕೆ
ಆರೋಪಿಸಿದ ಮೇಲೆ ಎಲೆ ಮನವೆ
ವಾರವಾರಕ್ಕೆ ಮತ್ತೆ ಯೋಚನೆಗೊಳ ಸಲ್ಲ
ಪೂರೈಸಿ ತಿಳಿ ಹರಿಯ ಮಹಿಮೆಯನು ಚೆನ್ನಾಗಿ
ಶ್ರೀರಂಗ ರಾಜ ಶ್ರೀವಿಜಯವಿಠಲರೇಯ
ಭಾರಕರ್ತನಾಗಿ ಪೊರೆವನು ಪ್ರತಿದಿನ ॥ ೩ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಅಟ್ಟತಾಳ

ಉದುರದೊಳಗೆ ಬಂದು ಉದುಭವಿಸಿದಾಗ
ವದನಕ್ಕೆ ತಂದು ತೊಡೆದರ್‍ಯಾರೊ ಬೆಣ್ಣೆಯ
ಬದಿಗನು ತಾನಾಗಿ ಪಾದೋಪಾದೆಗೆ ಹರಿ
ಬದಿಯಲ್ಲಿ ನಿಂದು ಹದುಳ ನೋಡುತಲಿ
ಪೊದೆವನ ಗಿರಿಗುಹ ಹೊದರದೊಳಿದ್ದರು
ಕ್ಷುಧೆಯಾಗಗೊಡದಂತೆ ಉದಯಾಸ್ತಮಾನ ಬಿಡದೆ
ಒದಗಿ ಸಾಕುವ ತಂದೆ ವಿಜಯವಿಠಲನಿರಲು
ಮದಡಮಾನವ ನೀನು ಉದರ ಚಿಂತೆಯ ಬಿಡು
ಹೃದಯದೊಳಗೆ ಸಿರಿ ಪದುಮನಾಭನ ಇಡು || ೪ ||

ಆದಿತಾಳ

ಹಿಂದೆ ಬಹು ಜನ್ಮಂಗಳು ಬಂದು ಬಂದು ಪೋದುದಕ್ಕೆ
ಒಂದು ತೃಣವಾದರು ನಿನ್ನಿಂದ ನೀನೇ ಗಳಿಸಲಿಲ್ಲ
ಇಂದಿರಾರಮಣ ತಾನೇ ಒಂದೊಂದು ಪರಿಯಲ್ಲಿ
ಬಾಂಧವನಾಗಿ ನಿತ್ಯ ನಿಂದು ಭಾರಕರ್ತನಾಗಿ
ಒಂದು ನಿಮಿಷ ವಿರಾರಗೊಡದೆ ಸಂದೇಹಗೊಳಿಸದೆ
ತಂದು ಸಾಕುವ ಗೋವಿಂದ ವಿಜಯವಿಠಲನು
ಮಂದಮಾನವ ನೀನು ಸಂದೇಹಬಡದಿರು || ೫ ||

ಜತೆ

ಅಣುರೇಣು ಪೊಟ್ಟೆಗೆ ನಡೆಸುವ ದೇವನು
ನಿನಗೀಯದಿಪ್ಪನೆ ವಿಜಯವಿಠಲಸ್ವಾಮಿ || ೧ ||

ಈ ಬಗೆಯ ದಾರ್ಢ್ಯ ಹರಿದಾಸರದು. **'ಸಾಲಮಾಡಬೇಡ, ಸಾಲದೆನಬೇಡ, ನಾಳೆಗಿಡಬೇಡ'** ಎಂಬುವು ಹರಿದಾಸರ ಜೀವನಸೂತ್ರಗಳು. ಈ ಸುಳಾದಿಯನ್ನು ಹಾಡಿದ ವಿಜಯದಾಸರು, ಶ್ರೀಹರಿಯ ಅನುಗ್ರಹ ತಮಗಾಗುವ ಮುನ್ನ ತಾವಿದ್ದ ಸ್ಥಿತಿಯನ್ನು ಮುಂದಿನ ದೇವರ ನಾಮದಲ್ಲಿ ಸಂಕೋಚಪಡದೆ ಹೇಳಿಕೊಂಡಿದ್ದಾರೆ:

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಗ: ಸೌರಾಷ್ಟ್ರ — ತಾಳ: ಅಟ್ಟ

ನಿನ್ನ ಒಲುಮೆಯಿಂದ ನಿಖಿಳ ಜನರು ಬಂದು
ಮನ್ನಿಸುವರು ಮಹರಾಯ ! ಎನ್ನ ಪುಣ್ಯಗಳಿಂದ
ಈ ಪರಿಯುಂಟೇನೊ । ನಿನ್ನದೆ ಸಕಲ ಸಂಪತ್ತು ॥ ಪ ॥

ಸಂಜೆತನಕ ಇದ್ದು ಸಣ್ಣ ಸೌಟು ತುಂಬ
ಗಂಜಿಗಾಣದೆ ಬಳಲಿದೆನೋ ಹಿಂದೆ
ವ್ಯಂಜನ ನಾನಾ ಸುಭಕ್ಷ್ಯಭೋಜ್ಯಂಗಳ
ಭುಂಜಿಸುವೆನು ಮತ್ತೇನೋ ॥ ೧ ॥

ಒಬ್ಬ ಹೆಂಗಸಿಗೆ ಅನ್ನವನಿಕ್ಕುವದಕಿನ್ನು
ತಬ್ಬಿಬ್ಬುಗೊಂಡೆನೋ ಹಿಂದೇ
ನಿರ್ಭರದಿಂದ ಸರ್ಬರ ಕೂಡಿನ್ನು
ಹಬ್ಬವನುಂಬೆ ಶ್ರೀಹರಿಯೆ ॥ ೨ ॥

ನೀಚತ್ವ ತಿಳಿಯದೆ ಸರ್ವರ ಚರಣಕ್ಕೆ
ಚಾಚಿದೆ ನೊಸಲ ಹಸ್ತಗಳ
ಯೋಚಿಸಿ ನೋಡಲು ಸೋಜಿಗವಾಗಿದೆ
ವಾಚಕ್ಕೆ ನಿಲುಕದ ಹರಿಯೆ ॥ ೩ ॥

ಮಧ್ಯಾಹ್ನ ಕಾಲಕ್ಕೆ ಅತಿಥಿಗಳಿಗೆ ಅನ್ನ
ಮೆದ್ದೆನೆಂದರೆ ಈಯಗಾಣೇ
ಇದ್ಧರೆಯೊಳಗೆ ಸತ್ಪಾತ್ರರಿಗುಣಿಸುವ
ಪದ್ಧತಿಯೇನೋ ಧರ್ಮಾತ್ಮಾ ॥ ೪ ॥

ಜೀರ್ಣಮಲಿನ ವಸ್ತ್ರ ಕಾಣದ ಮನುಜಗೆ
ಊರ್ಣ ವಿಚಿತ್ರದ ವಸನ
ವರ್ಣವರ್ಣಗಳಿಂದ ಬಾಹುವದೇನೋ ಸಂ
ಪೂರ್ಣ ಗುಣಾರ್ಣವ ದೇವ ॥ ೫ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ವೈದೀಕ ವೃತ್ತಿಯು ಕೊಡುವಗೆ ಲೌಕೀಕ
ವೈದಿಸುವದು ಬಲುಸ್ಸ್ಯಾತೇ
ವೈದುನಗೊಲಿದ ಶ್ರೀ ವಿಜಯವಿಠಲ ನಿನ್ನ
ಪಾದಸಾಕ್ಷಿ ಅನುಭವವೋ ॥ ೬ ॥

ಈ ಬಗೆಯ ಸ್ವಾನುಭವವನ್ನು ತಿಳಿಸಿ ಈ ದಾಸರು ಹಬ್ಬಮಾಡುವ ಬಗೆಯನ್ನು ತಿಳಿಸುತ್ತಾರೆ:

ಹಬ್ಬ ಸುಳಾದಿ

ಧ್ರುವತಾಳ

ಹಬ್ಬಗಳಿವೆ ಕೇಳಿ ಊರ್ಬಿಯೊಳಗೆ ವೈ
ದರ್ಭಿರಮಣ ಕರುಣಾಬ್ಧಿಯೊಲಿದ ಬಳಿಕ
ಒಬ್ಬರ ಕಾಡಿಬೇಡಿ ಹಬ್ಬಮಾಡಿದರಿಂದ
ಉಬ್ಬು ತೀರದು ಕಾಣೊ ಬುದ್ಬುಧ ಜನರಿಗೆ
ಲಭ್ಯವಾದ ಧಾನ್ಯ ರುಬ್ಬಿ ಗಂಜಿಯು ಕಾಸಿ
ಒಬ್ಬ ಸತಿಪತಿ ಇಬ್ಬರಾನಂದದಿಂದ
ಹೆಬ್ಬೆಟ್ಟನಿಂದ ಸವಿದು ಸಭ್ಯರಾಗಿಪ್ಪುದೆ
ಹಬ್ಬವು ಬಲುಹಬ್ಬ ಹಬ್ಬವು ಕಾಣಿರೊ
ನಿರ್ಭಯವಾದ ರತ್ನಗರ್ಭದಲ್ಲಿ ಕುಟೀರ
ಗುಬ್ಬಿಯ ಗೂಡಿನಷ್ಟು ನಿರ್ಬಂಧವಿಲ್ಲದೆ
ಗರ್ಭವಾಸವ ರಚಿಸಿ ಹಬ್ಬಮಾಡಿದರದು
ಹಬ್ಬವು ಕಾಣಿರೋ ಹಬ್ಬ ಹಬ್ಬಾ ಹಬ್ಬ
ಕರ್ಬುರನಂತೆ ತಿಂದು ಕೊಬ್ಬಿ ತಿರುಗುವಂಗೆ
ದುರ್ಭಾಗ್ಯವಲ್ಲದೆ ಹಬ್ಬವೆನಿಸುವದೆ
ಕಬ್ಬುಬಿಲ್ಲನಯ್ಯ ವಿಜಯವಿಠಲನಿಗೆ
ದರ್ಭೆಯೇರಿಸಿದರೆ ಸರ್ಬರ ಕರ ಪಿಡಿವ ॥ ೧ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಮಟ್ಟತಾಳ

ಕಾಮಕ್ರೋಧಂಗಳ ಬಿಡುವದೆ ಬಲುಹಬ್ಬ
ನೇಮನಿಷ್ಠೆಗಳ ಮಾಳ್ಪುದೆ ಬಲುಹಬ್ಬ
ಕಾಮನ ಉಪಹತಿಗೆ ಅಂಜುವದೇ ಹಬ್ಬ
ಕಾಮುಕಜನಗಳ ಬಿಡುತಿಪ್ಪುದೆ ಹಬ್ಬ
ಭೂಮಿಯೊಳಗೆ ಜ್ಞಾನಿಯಾಗುವದೇ ಹಬ್ಬ
ಸ್ವಾಮಿಭೃತ್ಯನ್ಯಾಯ ತಿಳಿಯುವದೇ ಹಬ್ಬ
ವ್ಯೋಮಗಂಗಾಜನಕ ವಿಜಯವಿಠಲನ
ಧಾಮದೊಳಗೆ ಪೂಜೆಮಾಡುವದೇ ಹಬ್ಬ ॥ ೨

ತ್ರಿಪುಟತಾಳ

ಬಂದ ಅತಿಥಿಗಳ ಪೂಜಿಸುವದೆ ಹಬ್ಬ
ಮಂದಾಕಿನಿಯಲ್ಲಿ ಮಜ್ಜನವೇ ಹಬ್ಬ
ನಿಂದಕಜನರಲ್ಲಿ ಬೆರೆಯದಿಪ್ಪುದೆ ಹಬ್ಬ
ವಂದಿಸಿ ಗುರುಗಳಿಗೆ ಎರಗುವದೇ ಹಬ್ಬ
ಕುಂದು ಸಜ್ಜನರನ್ನು ನುಡಿಯದಿಪ್ಪುದೆ ಹಬ್ಬ
ತಂದೆತಾಯಿಗಳಿಗೆ ಅನುಕೂಲವೇ ಹಬ್ಬ
ಅಂದರೆ ನಗುತ ಸಂತೋಷಪಡುವದೆ ಹಬ್ಬ
ಇಂದು ನಾಳೆಗೆಂಬ ಚಿಂತೆ ಬಿಡುವದೆ ಹಬ್ಬ
ಇಂದ್ವರ್ಕ ಉಳ್ಳನಕ ವಿಜಯವಿಠಲನ
ಒಂದೇ ಭಕುತಿಯಿಂದ ಭಜಿಸುವದೇ ಹಬ್ಬ ॥ ೩ ॥

ಅಟ್ಟತಾಳ

ಋಣರೂಪವಾಗುವ ಸಂಸಾರವೆ ಹಬ್ಬ
ಗುಣವಂತನಾಗಿ ಸಂಚರಿಸುವದೇ ಹಬ್ಬ
ಕನಸಿಲಿ ಪರಹೆಣ್ಣು ಬಯಸದಿಪ್ಪುದೆ ಹಬ್ಬ
ಮನವಚಕಾಯಕ್ಕೆ ಬಡತನವೇ ಹಬ್ಬ
ಅನಿಮಿಷ ಜಾಗರ ಹರಿವಾಸರವೆ ಹಬ್ಬ

Sri Vidyabharathi Book Centre, Sringeri

CC-O. In Public Domain. Digitized by eGangotri

ದಿನಪ್ರತಿದಿನ ಸತ್ಕರ್ಮಾಚರಣೆ ಹಬ್ಬ
ಮಣಿಕರ್ಣಿಕೆಯಲ್ಲಿ ದೇಹತ್ಯಾಗವೆ ಹಬ್ಬ
ತನುವಿಗೆ ವ್ಯಾಧಿ ಬಾರದಿಪ್ಪುದೆ ಹಬ್ಬ
ಚಿನುಮಯ ಮೂರುತಿ ವಿಜಯವಿಠಲನ
ಮನಸಿನೊಳನುದಿನ ಈಕ್ಷಿಸುವದೆ ಹಬ್ಬ ॥ ೪ ॥

ಆದಿತಾಳ

ಕಾಲನ ಬಾಧೆಗೆ ಸಿಲುಕದಿಪ್ಪದೆ ಹಬ್ಬ
ಕಾಲಕಾಲಕೆ ಯಾತ್ರೆ ತೀರ್ಥ ಮಾಳ್ಪದೆ ಹಬ್ಬ
ಪೇಳುವ ಹರಿಕಥಾಶ್ರವಣವೆ ದೊಡ್ಡ ಹಬ್ಬ
ನಾಲಿಗೆಗೆ ಹರಿನಾಮ ಭಜನೆ ಹಬ್ಬ
ಹಾಳುಹರಟೆ ಬಿಟ್ಟು ಹರಿಯ ನೆನೆವದೆ ಹಬ್ಬ
ಶ್ರೀಲೋಲಪರನೆಂದು ಕೂಗುವದೇ ಹಬ್ಬ
ವಾಲಯುಗಯದಲ್ಲಿ ಕುಲಪವಿತ್ರವೆ ಹಬ್ಬ
ಫಾಲಲಿಪಿಗೆ ಮನನೋಯದಿಪ್ಪದೆ ಹಬ್ಬ
ವೇಳೆಗೆ ದೊರೆತದ್ದು ಭುಂಜಿಸುವದೆ ಹಬ್ಬ
ಬೀಳುನುಡಿವರ ಬಿಟ್ಟುಕೊಡುವದೆ ಹಬ್ಬ
ಪಾಲಾಬ್ಧಿಶಯನ ಶ್ರೀವಿಜಯವಿಠಲನ
ಊಳಿಗದವನಾಗಿ ಬಾಳ್ಗೈಸುವದೆ ಹಬ್ಬ ॥ ೫ ॥

ಜತೆ

ದಂಪತಿಗಳು ಏಕವಾಗಿಪ್ಪುದೇ ಹಬ್ಬ
ಶಂಪದಂತೆ ವಿಜಯ ವಿಠಲ ಹೊಳೆವದೆ ಹಬ್ಬ ॥ ೧ ॥

ಮತಸಾಮರಸ್ಯ

ಮತಸಾಮರಸ್ಯದಲ್ಲಿ ಹರಿದಾಸರ ಸೇವೆ ಅಸಾಧಾರಣವಾಗಿರುವದು. ವೀರಶೈವರಿಗೂ ಬ್ರಾಹ್ಮಣರಿಗೂ ಮುಷ್ಟಾಮುಷ್ಟಿಯಾಗುತ್ತಿದ್ದ ವೇಳೆಯಲ್ಲಿ ಮಟಮಟ ಮಧ್ಯಾಹ್ನದಲ್ಲಿ, ಸೊಲ್ಲಾಪುರದಂಥಾ ವೀರಶೈವರ ಕೇಂದ್ರದಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಹಾಡಿರುವ ಕೆಳಕಂಡ ಕೀರ್ತನೆಯು ಅನೇಕ ಜನರನ್ನು ಪ್ರಾಣಾಪತ್ತಿನಿಂದ ಸಲಹಿ, ಮತಸಹಾನುಭೂತಿಯನ್ನುಂಟುಮಾಡಿತೆಂಬುದನ್ನು ಇತಿಹಾಸವೇ ತಿಳಿಸುತ್ತದೆ. ಅಂತಹ ಪದಗಳ ಮಾದರಿಗಳೆಂದರೆ—

ರಾಗ : ಮಧ್ಯಮಾವತಿ — ತಾಳ : ಅಟ್ಟ

ಜಂಗಮರು ನಾವು । ನೀವೇ ನೋಡಿ । ಜಂಗಮರು ನಾವು ॥ ಪ ॥

ಜಂಗಮರು ನಾವು ಲಿಂಗಾಂಗಿಗಳು
ಮಂಗಳವಂತರ ಭವಿಗಳೆಂಬರೆ ಬರಿದೆ ॥ ಅ ॥

ಶಿವಗುರುದೈವ ಕೇಶವ ನಮ್ಮ ಮನೆದೈವ
ವರದಮೋಹನ ನಮ್ಮ ಗುರು ಶಾಂತೇಶ
ಶಿವಗುರು ದ್ರೋಹಮಾಡಿದ ಪರವಾದಿಗೆ
ರವರವ ನರಕದೊಳುರುಳುವದೇ ಗತಿ ॥ ೧ ॥

ವಿಭೂತಿ ನಮಗುಂಟು ವಿಶ್ವೇಶ ನಮಗುಂಟು
ಶೋಭನ ಮುದ್ರೆಯು ನಮಗುಂಟೂ
ಶ್ರೀ ಭಾಗೀರಥೀ ಅಗ್ನಿಮಜ್ಜನವುಂಟು
ಸೌಭಾಗ್ಯವೀವ ಮಹಂತಿನ ಮಠದವರು ॥ ೨ ॥

ವಿರಕ್ತರು ನಾವು ಶೀಲವಂತರು ನಾವು
ವೀರಭದ್ರನ ಪ್ರಿಯಭಕ್ತರಾವು
ಕಾರಣಕರ್ತ ಶ್ರೀ ಪುರಂದರವಿಠಲನ
ಕಾರುಣ್ಯಕೆ ಮುಖ್ಯ ಪಾತ್ರರು ನಾವು ॥ ೩ ॥

ಎಂಬಂತಿದೆ. ಇದೇ ರೀತಿಯ ಮತ್ತೊಂದು ಪದವು—

ರಾಗ : ಪಂತುವರಾಳಿ — ತಾಳ : ಆದಿ

ಗುರುವಿನ ಧರ್ಮ ಕೋರೇಣ್ಯದ ಭಿಕ್ಷ । ಅರಿತು ನೀಡಲು ಮೋಕ್ಷ
ಮರೆತುಬಿಟ್ಟರೆ ಕಪಾಳಮೋಕ್ಷ । ಯಮುನಲ್ಲಾಹದೊ ಶಿಕ್ಷ ॥ ಪ ॥

Sri Vidyabharathi Book Centre, Sringeri

 CC-O. In Public Domain. Digitized by eGangotri

ಖಂಡುಗ ಜೀವನ ಕೈಲ್ಹಿಡಕೊಂಡು । ಮುಂಡೇ ಬಾಗುತ ಮನೆಮನೆಗೆ
ಅಂಡಲೆಯುತ ಬಂದು ನಿಲ್ಲಲು ಮೋರೆಯ । ಹಿಡಕೊಂಡರ್ಯಾವು
ದಂಡನೆ ತಪ್ಪದು ॥ ೧ ॥

ಜಂಗಮರೇ ಜಗತ್ಪಾವನರು । ಲಿಂಗಾಂಗಿಗಳೇ ನಿಸ್ಸಂಗಿಗಳು
ಮಂಗಳಮಹಿಮ ಸಿತಾಂಗನ ಭಜಕರ । ಅಂಗುಷ್ಟವ ತೊಳೆದಗ್ಗಣಿ
ಧರಿಸೋ ॥ ೨ ॥

ಐವತ್ತಾರು ದೇಶದೊಳಿಪ್ಪ । ತ್ರ್ಯೊಂದು ಸಾವಿರದಾರನೂರು
ಕೈವಲ್ಯಸಾಧನ ಮಂತ್ರವ ಜಪಿಸಲು । ಭವನೇತ್ರಣದೊ ಮೋಹನ
ವಿಠಲ ॥ ೩ ॥

ಗ್ರಂಥವಿಮರ್ಶೆಯ ವಿನೋದ

ಮಹಾಭಾರತವನ್ನು ಹಿಂದಿನಿಂದ ಇಂದಿನವರೆಗೆ ಎಷ್ಟೋ ಜನರು ವಿಮರ್ಶಿಸಿದ್ದಾರೆ. ವಿಮರ್ಶಕರು ತಮಗೆ ತೋರಿದ ನ್ಯಾಯದಂತೆ ಯಾರನ್ನಾದರೂ ನಿಂದಿಸಿದರೆ, ಜನರು ಅವರನ್ನು ನಿಂದಿಸುತ್ತಾರೆ. ಹರಿದಾಸರು ಏಳೇ ನುಡಿಯ ಪದದಲ್ಲಿ ಪ್ರಾಸಬದ್ಧವಾಗಿ ಹಾಡುತ್ತಾ ಹೇಗೆ ವಿಮರ್ಶೆಮಾಡಿರುವರೆಂಬುದನ್ನು ಇಲ್ಲಿ ನೋಡಬೇಕು:

ರಾಗ : ಮಧ್ಯಮಾವತಿ — ತಾಳ : ಅಟ್ಟ

ಬಂದಿದೆ ದೂರು ಬರಿದೆ ಪಾಂಡವರಿಗೆ
ಕೊಂದರು ಕಾದಾಡಿ ಕೌರವರ ಎಂದು ॥ ಪ ॥

ಮುನ್ನಿನಿಂದ ಮಿಗೆ ದ್ವೇಷವ ತಾಳಿ
ಉನ್ನಗತಿ ಪಗಡೆಯ ಲೆತ್ತವನಾಡಿ
ತನ್ನ ಕುಹಕದಿಂದ ಕುರುವಂಶವನೆಲ್ಲ
ಛಿನ್ನಗೈದವ ಶಕುನಿಯೊ ಪಾಂಡವರೋ ॥ ೧ ॥

ಮರಣ ತನ್ನಿಚ್ಛೆಯೊಳಾದ ಗಂಗೆಯ ಸುತ
ಧುರದಿ ಶಿಖಂಡಿಯ ನೆವದಿಂದಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಸರಳು ಮಂಚದ ಮೇಲ್ಮಲಗಿ ಮೊಮ್ಮನ ಕುಲ
ವರೆಸಿಕೊಂಡವ ಭೀಷ್ಮನೊ ಪಾಂಡವರೋ ॥ ೨ ॥

ಮಗನ ನೆವದಿ ತನ್ನ ತನುಪ ಬಿಸುಟು ಸುರ
ನಗರಿಗೈದಿದನು ವೈರಾಗ್ಯದಿಂದ
ಜಗವರಿಯಲು ಬಂದು ಕುರುವಂಶವನೆಲ್ಲ
ಬಗೆದು ಕೊಂದವ ದ್ರೋಣನೊ ಪಾಂಡವರೋ ॥ ೩ ॥

ತೊಟ್ಟ ಬಾಣವ ತೊಡಲೊಲ್ಲದೆ ಮಾತೆಗೆ
ಕೊಟ್ಟ ಭಾಷೆಗೆ ಐವರ ಕೊಲ್ಲದೆ
ನೆಟ್ಟನೆ ರಣಮುಖದಲಿ ಕಾದಿ ಪ್ರಾಣವ
ಬಿಟ್ಟು ಕೊಂದವನು ಕರ್ಣನೊ ಪಾಂಡವರೋ ॥ ೪ ॥

ಮಥನಿಸಿ ಸೂತತನವ ಮಾಡಿ ರಥದೊಳು
ಅತೀಹಿನಗಳೆಯುತ್ತ ರವಿಸುತನ
ರಥದಿಂದಿಳಿದು ಬಿದ್ದು ಕುರುವಂಶವನ್ನೆಲ್ಲ
ಹತಮಾಡಿದವನು ಶಲ್ಯನೊ ಪಾಂಡವರೋ ॥ ೫ ॥

ಜಲದೊಳು ಮುಳುಗಿ ತಪವ ಮಾಡಿ ಕುರುರಾಯ
ಬಲವನೆಬ್ಬಿಸಿ ಕಾದುವೆನೆನುತ
ಕಲಿ ಭೀಮಸೇನನ ಧ್ವನಿಯ ಕೇಳಿ ಬಂದು
ಕುಲವ ಕೊಂದವನು ಕೌರವನೊ ಪಾಂಡವರೋ ॥ ೬ ॥

ಕೌರವಪಾಂಡವರೊಳು ಭೇದ ಪುಟ್ಟಿಸಿ
ಕುರುಕ್ಷೇತ್ರದಿ ಫೌಜು ಜೋಡಿಸಿ ಕಾದಿಸಿ
ಕುರುವಂಶವನೆಲ್ಲ ಸರಕುಮಾಡದೆ ಸಂ
ಹರಿಸಿದನಾದಿಕೇಶವನೊ ಪಾಂಡವರೋ ॥ ೭ ॥

ಹರಿಭಕ್ತಗೆ ಗ್ರಹಬಾಧೆಗಳಿಲ್ಲ

ರಾಗ : ಕಾಂಬೋದಿ — ತಾಳ : ಜಂಪೆ

ಸಕಲಗ್ರಹಬಲ ನೀನೆ ಸರಸಿಜಾಕ್ಷ
ನಿಖಿಲ ವ್ಯಾಪಕರೊಡೆಯ ವಿಶ್ವವ್ಯಾಪಕನೋ ॥ ಪ ॥

Sri Vidyabharathi Book Centre, Sringeri

 CC-O. In Public Domain. Digitized by eGangotri

ರವಿಚಂದ್ರಬುಧ ನೀನೆ ರಾಹುಕೇತುವು ನೀನೆ
ಕವಿಶನಿಗುರುಮಂಗಳಾನು ನೀನೇ
ದಿವಸವಾರವು ನೀನೆ ನವವಿಧಾನ್ನವು ನೀನೆ
ಭವರೋಗಹರ ನಮ್ಮ ರಕ್ಷಕನು ನೀನೆ ||೧||

ಪಕ್ಷಮಾಸವು ನೀನೆ ಪರ್ವಕಾಲವು ನೀನೆ
ನಕ್ಷತ್ರಯೋಗ ಕರಣಗಳು ನೀನೆ
ಅಕ್ಷಯವೆಂದು ದ್ರೌಪದಿಯು ಮಾನವ ಕಾಯ್ದ
ಪಕ್ಷಿವಾಹನ ದೀನರಕ್ಷಕನು ನೀನೆ ||೨||

ಋತುಕಾಲವು ನೀನೆ ವ್ರತನೇಮವೂ ನೀನೆ
ಕ್ರತುಸಂಧ್ಯಾವಂದನಕರ್ಮ ನೀನೇ
ಜಿತವಾಗಿ ಎನ್ನೊಡೆಯ ಪುರಂದರವಿಠಲ
ಸ್ತುತಿಗೆ ಸಿಲುಕದ ಮಹಾತ್ಮಕ ಹರಿಯು ನೀನೆ ||೩||

ಹರಿಭಕ್ತರಿಗೆ ಯಾವಾಗಲೂ ಕಲ್ಯಾಣ

ರಾಗ : ಕಾಂಬೋದಿ — ತಾಳ : ಜಂಪೆ

ಸತತ ಕಲ್ಯಾಣ ಅಚ್ಯುತಭಟರಿಗೆ
ರತಿಪತಿಪಿತನಂಘ್ರಿರತ ಮಹಾತ್ಮರಿಗೆ ||ಪ||

ಅರಿಗಳೇ ಸಖರಕ್ಕು ಅತಿವಿಷಾಮೃತವಕ್ಕು
ಉರಗ ಪೂಮಾಲೆಯಕ್ಕು ಉರಿ ತಣ್ಣಗಕ್ಕು
ಶರಧಿ ಗೋಷ್ಪದವಕ್ಕು ಶರಘಾತ ಚೆಂಡಕ್ಕು
ನರಹರಿಯ ನಾಮವನು ನಂಬಿ ಭಜಿಪರಿಗೆ ||೧||

ಆಧಿವ್ಯಾಧಿಗಳಿಲ್ಲ ಅಶುಭವಾರ್ತೆಗಳಿಲ್ಲ
ಕ್ರೋಧನೃಪಭಯವಿಲ್ಲ ಕಾಕುಮತಿಯಿಲ್ಲ
ಖೇದ ಮನಕಿಲ್ಲೆಂದು ಖಿನ್ನತೆಯು ಮುಖಕಿಲ್ಲ
ಶ್ರೀಧವನ ನವಭಕುತಿ ಶೀಲರಿಗೆ ||೨||

Sri Vidyabharathi Book Centre, Sringeri

 CC-O. In Public Domain. Digitized by eGangotri

ಪಾಪತಾಪಗಳೋಟ ಪರಿದು ಬಹ ಎಡಗೋಟ
ಆಪತ್ತುಗಳಿಗೋಟ ಆಲಸ್ಯಕೋಟ
ಕೋಪದಾರಿದ್ರ್ಯತೆಗೋಟ ಕಲಿವ್ಯಸನವುದಕೋಟ
ಶ್ರೀಪ್ರಸನ್ವೇಂಕಟನ ನಂಬಿ ಭಜಿಪರಿಗೆ ॥ ೩ ॥

ಕರ್ಕಶಿಯಾದ ಹೆಂಡತಿಯು ಬಗೆ

ರಾಗ : ಪೂರ್ವಿ — ತಾಳ : ಅಟ್ಟ

ಹೆಂಡತೀ ಪ್ರಾಣ ಹಿಂಡುತೀ । ದೊಡ್ಡ
ಕೊಂಡ ಕೋಡಗನಂತೆ ಮಾಡಿ ಕುಣಿಸುತ್ತೀ ॥ ಪ ॥

ಹೊತ್ತಾರೆ ಏಳುತ್ತಿ ಹೊರಗೆ ತಿರುಗಾಡುತ್ತೀ
ಹೊತ್ತು ಹೋಯಿತು ಭತ್ಯ ತಾರೆನ್ನುತ್ತೀ
ಉತ್ತಮ ಗುರುಹಿರಿಯರ ಮಾತ ಮೀರುತ್ತಿ
ಮೃತ್ಯುದೇವತೆಯಂತೆ ಮನೆಯೊಳಗಿರುತೀ ॥ ೧ ॥

ಇಲ್ಲದ್ದ ಬೇಡುತ್ತಿ ಸುಳ್ಳುಮಾತಾಡುತ್ತಿ
ಒಳ್ಳೇ ಊಟವ ಉಣಬೇಕೆನ್ನುತ್ತೀ
ಎಳ್ಳಷ್ಟು ಕೆಲಸ ಮಾಡಲಾರೆನೆಂತೀ
ಎಲ್ಲೆಲ್ಲು ತಲೆಯೆತ್ತದ್ಹಾಂಗೆ ಮಾಡುತ್ತೀ ॥ ೨ ॥

ಹಿರೇತನಕ್ಹೋಗುತಿ ಗರುವಿಕೆಮಾಡುತಿ
ನೆರೆಹೊರೆಯರ ಕೂಡ ಜಗಳಾಡುತಿ
ಸಿರಿಪುರಂದರ ವಿಠಲನ ಸ್ಮರಿಸದೆ
ದುರಿತಕ್ಕೆ ಗುರಿಯಾಗಿ ನಿಲ್ಲುತ್ತೀ ॥ ೩ ॥

ಎಲ್ಲಾ ಕಲ್ಲು ಎಲ್ಲಾ ಮಣ್ಣು

ಛಾಪುತಾಳ

ಕಲ್ಲಿಂದ ಜಗ ಕಲ್ಲಿಂದ । ಕಲ್ಲು ಬಿಟ್ಟರೆ
ಇಲ್ಲ ಮತ್ತೆ ಗತಿಯೆಂದಾ ॥ ಪ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಕಲ್ಲು ಕಡಲ ಕಡೆಯೆ ಅಮೃತವೇ ಪುಟ್ಟಿತು
ಕಲ್ಲು ಗೋವರ್ಧನ ಮಳೆಯಿಂದ ಕಾಯಿತು
ಕಲ್ಲು ರಾಮರ ಪಾದ ಸೋಕಿ ಹೆಣ್ಣಾಯಿತು
ಕಲ್ಲು ಲಂಕೆಗೆ ಮಾರ್ಗ ತಾನಾಯಿತು ॥ ೧ ॥

ಕಲ್ಲು ಕೊರೆಯಲು ಮೂರ್ತಿ ತಾನಾಯಿತು
ಕಲ್ಲಿನೊಳಗೆ ದೇವರು ಮೂಡಿತು
ಕಲ್ಲು ದೇವರ ಗುಡಿಗೋಪುರವಾಯಿತು
ಕಲ್ಲು ಕೋಟಿ ಕೋಟಿ ಬೆಲೆಯಾಯ್ತು ॥ ೨ ॥

ಕಲ್ಲೆಂದು ಜರಿಯದೆ ಕಾಲಕಾಲದಿ ನಿಮ್ಮ
ಕಲ್ಲುಮನಸು ಬಿಟ್ಟು ಪೂಜೆಯ ಮಾಡಿರೊ
ಕಲ್ಲಿನೊಳಗಿದ್ದು ವಿಜಯವಿಠಲಸ್ವಾಮಿ
ಎಲ್ಲಾರಿಗು ಸದ್ಗತಿಯನೀವಾ ॥ ೩ ॥

ಮೋಲ್ಕಂಡ ಮಟ್ಟಸಂತೆ

ಮಣ್ಣಿಂದ । ಎಲ್ಲಾ ಮಣ್ಣಿಂದ
ಮಣ್ಣು ಬಿಟ್ಟವರಿಗೆ ಇನ್ನು ಬೇರಿಲ್ಲ ॥ ಪ ॥

ದೇವರ ಗುಡಿಮನೆ ಮಠವೆಲ್ಲ ಮಣ್ಣು
ಆವಾಗ ಆಡುವ ಮಡಿಕೆ ತಾ ಮಣ್ಣು
ಕೋವಿದರರಸನ ಕೋಟೆಯೆಲ್ಲಾ ಮಣ್ಣು
ಪಾವನಗಂಗೆಯ ತಡಿಯೆಲ್ಲ ಮಣ್ಣು ॥ ೧ ॥

ಅನ್ನ ಉದಕ ಊಟ ವಿಾಯೋಣ ಮಣ್ಣು
ಬಣ್ಣ ಭಂಗಾರ ಬೊಕ್ಕಸವೆಲ್ಲ ಮಣ್ಣು
ಉನ್ನಂತವಾದ ಪರ್ವತವೆಲ್ಲ ಮಣ್ಣು
ಕಣ್ಣು ಮೂರುಳ್ಳವನ ಕೈಲಾಸ ಮಣ್ಣು ॥ ೨ ॥

ಭತ್ತ ಭರಣ ಧಾನ್ಯ ಬೆಳೆಯೋದು ಮಣ್ಣು
ಸತ್ತವರ ಹೂಳಿ ಸುಡುವುದು ಮಣ್ಣು

Sri Vidyabharathi Book Centre, Sringeri

CC-O. In Public Domain. Digitized by eGangotri

ಉತ್ತಮವಾದ ವೈಕುಂಠವೆ ಮಣ್ಣು
ಕರ್ತೃ ಪುರಂದರವಿಠಲನ ಮನೆ ಮಣ್ಣು ॥ ೩ ॥

ಪ್ರಾಚೀನ ಕರ್ಮವನ್ನು ಕುರಿತು ವಿನೋದದಿಂದ

ರಾಗ : ಕಾಂಬೋದಿ — ತಾಳ : ಜಂಪೆ

ಪ್ರಾಚೀನ ಕರ್ಮವಿದು ಬಿಡಲರಿಯದು
ಯೋಚನೆಯ ಮಾಡಿ ನೀ ಮರುಳಾಗದಿರು ಮನುಜ ॥ ಪ ॥

ಸೇತುವೆಯ ಕಟ್ಟಿ ಲಂಕೆಗೆ ಹಾರಿ ಹನುಮಂತ
ಖ್ಯಾತಿಯಿಂದಾ ರಾವಣನ ಕೊಲ್ಲಿಸಿ
ಸೀತೆಯನು ತಂದು ಶ್ರೀರಾಮರಿಗೆ ಕೊಡಲಾಗಿ
ಪ್ರೀತಿಯಲಿ ಕೌಪೀನ ಬಿಡಿಸಲಿಲ್ಲ ಹರಿಯು ॥ ೧ ॥

ಲೋಕದೊಳಗೆಲ್ಲ ಸಂಚರಿಸುವ ರವಿರಥಕೆ
ಏಕಗಾಲಿಯು ಏಳು ಕುದುರೆಗಾಳೂ
ಜೋಕೆಯಿಂದಲಿ ಹಿಡಿದು ನಡೆಸುವ ಅರುಣನಿಗೆ
ಬೇಕೆಂದು ಕಾಲುಗಳ ಕೊಡಲಿಲ್ಲ ಹರಿಯು ॥ ೨ ॥

ಸಾಸಿರನಾಮದೊಡೆಯಾದಿಕೇಶವನ
ಬೇಸರದೆ ಹೆಗಲ ಮೇಲಿಟ್ಟುಕೊಂಡು ಆ
ಕಾಶಮಾರ್ಗದಲಿ ಚರಿಸುವ ಗರುಡನಿಗೆ
ನಾಸಿಕದ ಕೊನೆಡೊಂಕ ತಿದ್ದಲಿಲ್ಲ ಹರಿಯು ॥ ೩ ॥

ತಾನಾಗಿ ಹರಿದು ಬರುವ ಪ್ರಾಸವೈಭವ

ಇಂದ್ರನ್ನ ರಾಜ್ಯವ ತಂದನ್ನ ಶುಭಗುಣ
ಸಾಂದ್ರನ್ನ ಸುರಸಭಾ ಚಂದ್ರನ್ನ
ನಂದನ್ನ ಕಂದನ್ನ ವಂದ್ಯನ್ನ ನಿತ್ಯಾ
ನಂದನ್ನ ತುತಿಪೆ ಮುಕುಂದನ್ನ ॥ ೧ ॥

Sri Vidyabharathi Book Centre, Sringeri

 CC-O. In Public Domain. Digitized by eGangotri

ಶೌರಿಯು ನೆನೆವೆನುದಾರಿಯು ಕುಜನರ
ವೈರಿಯು ಮಂದರೋದ್ಧಾರಿಯು
ಹರೀಯು ದುರಿತ ನಿವಾರೀಯು ಸುಜನೋಪ
ಕಾರೀಯು ಮುಕುತಿಗೆ ದಾರೀಯು ॥ ೨ ॥

ನೀಲನ ನಿಜಜನಪಾಲನ ನಿರ್ಮಲ
ಶೀಲನ ಸುಚರಿತ್ರ ಜಾಲನ್ನ
ಬಾಲನ ಸಂಗೀತಲೋಲನ ತುತಿಪೆನು
ಕಾಲನವರಿಗೆ ಅನಾಲನ್ನ ॥ ೩ ॥

ಇಷ್ಟನ್ನ ದುರಿತಾಘರಟ್ಟನ್ನ ಜಗಕತಿ
ಧಿಟ್ಟನ್ನ ಸತತ ಸಂತುಷ್ಟನ್ನ
ಶಿಷ್ಟನ್ನ ಶುಭಗುಣ ಪುಷ್ಟನ್ನ ತುತಿಪೆನು
ಕೃಷ್ಟನ್ನ ಶ್ರುತಿಗಿಂಬುಗೊಟ್ಟನ್ನ ॥ ೪ ॥

ರಂಗನ್ನ ಕರುಣಾಂತರಂಗನ್ನ ಖಳಕುಲ
ಭಂಗನ್ನ ನಿಜಜನ ಸಂಗನ್ನ
ಅಂಗನಾಜನಕೆ ಅನಂಗನ್ನ ನಿತ್ಯ ಶು
ಭಾಂಗನ್ನ ನಮಿಪೆನುತ್ತುಂಗನ್ನಾ ॥ ೫ ॥

ಯಮಕ ಆರ್ಯಗಳು

ಸುಧೇಷ್ಣೆಗೆ ಬೃಹನ್ನಡೆಯ ಭರವಸೆ

ತಾಯಿ ತವಾನುಗ್ರಹ ಒಳಿ
ತಾಯತವಾಗಿರಲಿ ತಾಳ್ವೆ ತಾಯಿತವ
ತಾಯಿ ತವರಮನೆಯೊಳು ಗುರು
ತಾಯಿತವರ ಗೆಲುವೆ ನಾತ ತಾಯಿತವ ॥ ೧ ॥

ಉತ್ತರಕುಮಾರನಿಗೆ ಆರತಿ

ರಾಜನಳಿನಮುಖಿಯರು ನೀ
ರಾಜನ ಬೆಳಗಿದರು ಗೆಲುವನೇ ಕದನ

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಜನ ಸುತನಯನದಿ ನೀ
ರಾಜನ ಕುದರಿಸಲು ಗೆಲುವನೇ ಕದನ ॥ ೧ ॥

ಬೃಹನ್ನಡೆಯು ಉತ್ತರಕುಮಾರನಿಗೆ

ನೀತರು ವೀಕ್ಷಣವೇರಿ ಮು
ಹೀತಳ ಕಿಮು ಚಾಪ ಸಿಂಜಿನೀ ತರುವಿ?
ನೀತರು ವೀರಭಟರುಗಳ
ನೈತರಿಸಿಹ ಕುರುಪ ಬಾಲನೀ ತರುವಿ ॥ ೧ ॥

ಕೃಷ್ಣನ ಕೊಳಲು

ಕೊಳಲು ಕೈಯಲಿ ಕೊಳಲು
ಕೃಷ್ಣನ ಕೊಳಲು ಧ್ವನಿತುಂಬಿತಾ ಕೊಳಲು
ಕೊಳಲು ಕೇಳಿ ಮುತ್ತಿಕೊಳಲು
ಸರ್ಪರ ಕೊಳಲು ವೈಕುಂಠವ ಒಳಕೊಳಲು ॥ ೧ ॥

ತತ್ವಸುವಾಲಿಯ ತ್ರಿಪದಿಗಳ ಮಾದರಿ

ಪತಿತ ನಾನಾದರೂ ಪತಿತಪಾವನ ನೀನು
ರತಿನಾಥ ಜನಕ ನಗಪಾಣಿ ॥ ನಗಪಾಣಿ
ನೀನಿರಲು ಇತರ ಚಿಂತ್ಯಾಕೋ ಎನಗಿನ್ನು ॥ ೧ ॥

ನಡೆನುಡಿಗಳಪರಾಧ ಒಡೆಯ ನೀನೆಣಿಸಿದರೆ
ಬಡವ ನಾನೆಂತೂ ಬದುಕಾಲೋ ॥ ಬದುಕಲೋ
ಕರುಣಾಳು ಕಡೆಬೀಳ್ವದೆಂತೋ ಭವದಿಂದ ॥ ೨ ॥

ಏಸೇಸು ಕಲ್ಪದಲಿ ದಾಸ ನಾ ನಿನಗಯ್ಯ
ಈಶ ನೀನೆಂಬೋ ನುಡಿ ಸಿದ್ಧ ॥ ನುಡಿ ಸಿದ್ಧ
ವಾಗಿರಲುದಾಸೀನವಾಡೋದುಚಿತಲ್ಲಾ ॥ ೩ ॥

ಆವ ಯೋನಿಯೊಳಿರಿಸು ಆವ ಲೋಕದೊಳಿರಿಸು
ಆವಾಗ ನಿನ್ನ ನೆನೆವಂತೆ ॥ ನೆನೆವಂತೆ
ಕರುಣಿಸೋ ದೇವಕೀಕಂದಾ ದಯದಿಂದ ॥ ೪ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಶಿಷ್ಟನೆಂದೆನಿಸೆನ್ನ ಭ್ರಷ್ಟನೆಂದೆನಿಸು ಸ
ರ್ವೇಷ್ಟಮೂರುತಿಯೇ ಜನರಿಂದ ॥ ಜನರಿಂದ
ನುಡಿಸಿದ್ದು ಇಷ್ಟವೇ ಕಾಣೋ ಎನಗಿನ್ನು ॥ ೫ ॥

ಶರಣಪಾಲಕನೆಂಬ ಬಿರುದಿದ್ದ ಕಾರಣ
ಪೊರೆಯದಿರೆ ಎನ್ನ ನಗರೇನೋ ॥ ನಗರೇನೊ
ಮೂಲೋಕದರಸನಾ ನಿನ್ನ ಬಿಡೆ ಕಂಡ್ಯ ॥ ೬ ॥

ಪಾಪಪುಣ್ಯಗಳು ಬರಲಾಪವೇ ನಿನ್ನುಳಿದು
ಪ್ರಾಪಕನು ನೀನು ಇರಲಾಗಿ ॥ ಇರಲಾಗಿ
ತಿಳಿಯದುದೆ ಪಾಪ ತಿಳಿಯುವದೇ ಮಹಪುಣ್ಯ ॥ ೭ ॥

ಮನವೆ ಆಲೋಚಿಸಿಕೊ ನಿನಗಿದ್ದ ಚಿಂತೆ ನ
ಮ್ಮನಿರುದ್ಧಗಿಲ್ಲೇ ಅನುಗಾಲ ॥ ಅನುಗಾಲ
ಸಲಹುವವ ಬಿನುಗು ಮಾನವರ ಬಿಡುವ್ನೋನೇ ॥ ೮ ॥

ಭಂಡಮನವೇ ಕೇಳು ಕಂಡಕಂಡವರಿಗಿ
ನ್ನಂಡಲೆದರೇನು ಪುರುಷಾರ್ಥ ॥ ಪುರುಷಾರ್ಥ
ಸ್ವಾಮಿಪದ ಪುಂಡರೀಕವನೇ ನೆರೆನಂಬು ॥ ೯ ॥

ಅಶನವಸನಗಳೀವ ವಸುದೇವಸುತನಿರಲು
ಹುಸಿಯಾಗಿ ಬದುಕೋ ನರರೀಗೆ ॥ ನರರಿಗಾ
ಲ್ಪರಿದರೆ ಹಸಿವಿಯಡಗುವದೇ ಎಲೆ ಜೀವಾ ॥ ೧೦ ॥

ಹಿಂದೆ ಜನ್ಮಾಂತರದಿ ತಂದು ಕೊಟ್ಟವರಾರು
ಇಂದುಮುಂದೀವ ದೊರೆ ಯಾರು ॥ ದೊರೆ ಯಾರು
ಎಲೆ ಮನವೆ ಮಂದಮತಿಯಾಗೀ ಕೆಡದಿರು ॥ ೧೧ ॥

ತತ್ತ್ವಪದಾರ್ಥದಲಿ ತತ್ತ್ವದಾಕಾರನಾ
ಗೆತ್ತ ನೋಡಿದರೂ ಇರುತಿಪ್ಪ ॥ ಇರುತಿಪ್ಪ
ಶ್ರೀಹರಿಗೆ ಭೃತ್ಯನೆಂಬುವದೇ ಬಲು ಧರ್ಮ ॥ ೧೨ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ನರಕ ಸ್ವರ್ಗಗಳೆಂಬುವೆರಡು ಇಲ್ಲಿಹವು ವಿ
ಸ್ಮರಣೆಯೇ ನರಕ ಸ್ಮೃತಿ ಸ್ವರ್ಗ ॥ ಸ್ಮೃತಿಸ್ವರ್ಗ
ವಿರೆ ಬಾಹ್ಯನರಕಭಯಕಂಜೇ ಎಂದೆಂದೂ ॥ ೧೩ ॥

ಅಪರಾಧಿ ನಾನೆಂಬುದುಪಚಾರ ಮಾತ್ರ ನಿನ
ಗಪರಾಧಿಯೊಂಬೋದಿಳೆಯೊಳು ॥ ಇಳೆಯೊಳು
ಇನ್ನುಂಟೆ ಅಪರಾಧಿಯೊಂಬೋಧಪರಾಧ ॥ ೧೪ ॥

ಇದಕ್ಕಿಂತ ಉಪದೇಶ, ಇದಕ್ಕಿಂತ ಮನಸ್ಸನ್ನು ಕರಗಿಸುವ ಮಾತು ಕನ್ನಡ ಭಾಷೆಯಲ್ಲಿಲ್ಲ. ಜೀವನದ ಯಾವದೊಂದು ವಿಷಯದ ಮೇಲೂ ಹರಿದಾಸರು ಹಾಡಿದ ಹಾಡುಗಳಿವೆ. ಮಾತುಗಳು ಮಾಂಸಗ್ರಂಥಿಯನ್ನು ನಡುಗಿಸುತ್ತವೆ. ಮನಸ್ಸನ್ನು ಮೃದುಮಾಡುತ್ತವೆ; ಶಾಂತರಸದಲ್ಲಿ ತನ್ಮಯತ್ವವನ್ನುಂಟುಮಾಡುತ್ತವೆ, ಮಾನವನು ದೇವತೆಯಾಗುತ್ತಾನೆ.

ಇದು ದಾಸಸಾಹಿತ್ಯದ ವೈಶಿಷ್ಟ್ಯ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಧ್ಯಾಯ ಏಳು

ಬ್ರಹ್ಮಾನಂದ

ಶ್ರೀ ಹರಿಭಕ್ತಿಯಿಂದುಂಟಾದ ಬ್ರಹ್ಮಾನಂದ ಸಾಮ್ರಾಜ್ಯದಲ್ಲಿ ನಿರಂತರ ಸುಖಾನುಭವಮಾಡುತ್ತಿರುವ ಭಗವಾನ್ ನಾರದಮಹರ್ಷಿಗಳು 'ಅಥಾತೋ ಭಕ್ತಿಂ ವ್ಯಾಖ್ಯಾಸ್ಯಾಮಃ' ಎಂಬ ಸೂತ್ರದಿಂದಾರಂಭಿಸಿ 'ಯ ಇದಂ ನಾರದಪ್ರೋಕ್ತಂ ಶಿವಾನುಶಾಸನಂ ವಿಶ್ವಸಿತಿ, ಶ್ರದ್ಧತ್ತೇ, ಸ ಭಕ್ತಿಮಾನ್ ಭವತಿ, ಸ ಪ್ರೇಷ್ಠಂ ಲಭತೇ, ಸ ಪ್ರೇಷ್ಠಂ ಲಭತೇ ;' ಎನ್ನುವವರೆಗೆ ಐದು ಅಧ್ಯಾಯಗಳಲ್ಲಿ ಉಪದೇಶಿಸಿರುವ ೮೪ ಸೂತ್ರಗಳು ಸಕಲಶಾಸ್ತ್ರಸಾರಭೂತಗಳಾಗಿರುತ್ತವೆ. ಸೂತ್ರಗ್ರಂಥಗಳ ಜಾತಿಯಲ್ಲಿ ಒಂದೇ ಪುಟದಲ್ಲಿ ಬರೆದಿಡುವಷ್ಟು ಅಡಕವಾದ ಮತ್ತು ಸ್ವಯಂಪೂರ್ಣವಾದ ಸೂತ್ರ ಗ್ರಂಥ ನಾರದಭಕ್ತಿಸೂತ್ರಗಳನ್ನು ಬಿಟ್ಟರೆ ಮತ್ತೊಂದಿರುವುದಿಲ್ಲ. ವ್ಯಾಸಾದಿ ಮಹರ್ಷಿಗಳ ಸೂತ್ರಗಳು 'ಅಥಾತೋ ಬ್ರಹ್ಮಜಿಜ್ಞಾಸಾ ಅಥಾತೋ ಧರ್ಮಜಿಜ್ಞಾಸಾ' ಎಂಬಂತೆ ಜಿಜ್ಞಾಸಾ ರೂಪವಾಗಿದ್ದರೆ, ನಾರದರ ಸೂತ್ರಗ್ರಂಥವು ಹಾಗಿರದೆ ಸಾಧನೆಯಿಂದ ಸಿದ್ಧಿಪಡೆದ ಸ್ವಾನುಭವದ ವ್ಯಾಖ್ಯಾನರೂಪವಾಗಿರುತ್ತದೆ. ಆದುದರಿಂದ ಇತರ ಸೂತ್ರ ಗ್ರಂಥಗಳಿಗೆ ವಿವಿಧ ಭಾಷ್ಯಕಾರರಾದಂತೆ ನಾರದ ಸೂತ್ರಗ್ರಂಥಕ್ಕೆ ಆಗಿಲ್ಲ. ಶಾಂಡಿಲ್ಯ ಮೊದಲಾದ ಭಕ್ತಿಸಾಧಕರು ಮತಭೇದದಿಂದ ತಮ್ಮದೇ ಆದ ಪ್ರತ್ಯೇಕ ಸೂತ್ರಗಳನ್ನು ಬರೆದಿದ್ದರೂ, ಅವುಗಳನ್ನು ನಾರದರು ಖಂಡಿಸದೆ ಅವರುಗಳ ಮತ ಹೀಗಿದೆಯೆಂದು ಮಾತ್ರ ತಿಳಿಸಿ, ತಮ್ಮ ಅನುಭವದಿಂದ ಸಿದ್ಧವಾದ ಸಂಗತಿಗಳನ್ನು ಸೂತ್ರವತ್ತಾಗಿ ಬರೆದಿರುತ್ತಾರೆ. ಶ್ರುತಿ ಸಮೂಹದಲ್ಲಿ ಹುಡುಕುತ್ತ ಹೊರಟರೆ, ಋಗ್ವೇದ ಎಂಟನೇ ಮಂಡಲದಲ್ಲಿ ನಾರದರು ಒಬ್ಬ ಪ್ರಸಿದ್ಧ ಮಂತ್ರದ್ರಷ್ಟರೆಂದು ಗೊತ್ತಾಗುತ್ತದೆ. ಸ್ಮೃತಿ ಸಮೂಹದಲ್ಲಿ ಹುಡುಕುತ್ತ ಹೊರಟರೆ, ಇವರ ಹೆಸರಿನದೇ ಆದ 'ನಾರದಸ್ಮೃತಿ'ಯಿದ್ದು ಇವರೊಬ್ಬ ಸಂಪ್ರದಾಯ ಪ್ರವರ್ತಕರಾಗಿರುವರೆಂದು ಗೊತ್ತಾಗುತ್ತದೆ. ಶೈವ, ವೈಷ್ಣವ, ಶಾಕ್ತ, ಹೀಗೆ ಯಾವ ಪುರಾಣಗಳಲ್ಲಿ ನೋಡಿದರೂ

Sri Vidyabharathi Book Centre, Sringeri

CC-O. In Public Domain. Digitized by eGangotri

ನಾರದರು ಮುಖ್ಯ ಪಾತ್ರವಹಿಸಿರುವುದು ಕಂಡುಬರುತ್ತದೆ. ಯುಗ ಪುರುಷರಾದ ಇವರು ಕಾವ್ಯಗಳಲ್ಲಿ ಆದಿಕಾವ್ಯವೆಂದು ಪ್ರಸಿದ್ಧವಾಗಿರುವ ವಾಲ್ಮೀಕಿ ರಾಮಾಯಣದ ರಚನೆಗೆ ಕಾರಣರಾಗಿರುತ್ತಾರೆ. **ಸಂಗೀತ ಮಕರಂದ**ವೆಂಬ ಗ್ರಂಥರಚನೆ ಮಾಡಿರುವರೆಂಬ ಪ್ರಸಿದ್ಧಿಯಿಂದಲೂ, ವೀಣಾವಾದನನೈಪುಣ್ಯದಿಂದಲೂ, ಇವರು ಬಹುದೊಡ್ಡ ಗಾಯನಾಚಾರ್ಯರಾಗಿರುತ್ತಾರೆ. ವ್ಯಾಸಭಗವಾನರು ಈ ನಾರದರ ಪ್ರೇರಣೆಯಿಂದಲೇ ಶ್ರೀಮದ್ಭಾಗವತವನ್ನು ರಚಿಸಿರುವ ಕಾರಣ, ಆ ಗ್ರಂಥವು ನಾರದರ ಭಕ್ತಿಸೂತ್ರಗಳ ವ್ಯಾಖ್ಯಾನರೂಪವಾಗಿರುವಂತೆ ಮಾತುಮಾತಿನಲ್ಲೂ ಕಂಡುಬರುತ್ತದೆ. ಇಂತಹ ಭಕ್ತಿಪಂಥವೇ ಸನಾತನ ಧರ್ಮವೆಂತಲೂ ಭಾಗವತ ಧರ್ಮವೆಂತಲೂ ಕರೆಸಿಕೊಳ್ಳುತ್ತಾ, ವೇದವ್ಯಾಸರಿಂದಲೂ ಇವರ ಪುತ್ರ ಶುಕ್ರಾಚಾರ್ಯರಿಂದಲೂ ಪರಂಪರೆಯಾಗಿ ಉಪದಿಷ್ಟವಾಗಿ ಮಾನವ ಪ್ರಪಂಚಕ್ಕೆ ಇದು ಧರ್ಮ, ಇದೇ ವಿಶ್ವಧರ್ಮ ಎಂದು ಪ್ರಖ್ಯಾತಿಪಡೆದಿರುವುದು ಗೋಚರವಾಗುತ್ತದೆ. ಚಾರ್ವಾಕ ಬೌದ್ಧಾದಿ ನಾಸ್ತಿಕ ಮತಗಳ ಅಭ್ಯುದಯ ಕಾಲದಲ್ಲಿ ಸಹ ಈ ಭಾಗವತಧರ್ಮವು ನಾಶವಾಗದೆ ಜೀವಬ್ರಹ್ಮೈಕ್ಯರೂಪವಾದ ವೇದಾಂತವನ್ನುಪದೇಶಿಸಿದ ಶಂಕರಾಚಾರ್ಯರ ಕಾಲದಲ್ಲಿ ಸಕಲ ವ್ಯವಹಾರದಲ್ಲೂ ಪಾಲನೆಪೋಷಣೆಗಳನ್ನು ಪಡೆದು ರಾರಾಜಿಸಿರುವುದು ಕಂಡುಬರುತ್ತದೆ. ರಾಮಾನುಜಾಚಾರ್ಯರು, ಮಧ್ವಾಚಾರ್ಯರು, ನಿಂಬಾರ್ಕ ವಲ್ಲಭಾಚಾರ್ಯರುಗಳು, ಚೈತನ್ಯ ಮಹಾಪ್ರಭುಗಳು, ಎಲ್ಲರೂ ಇದೇ ಭಾಗವತಧರ್ಮದ ಅವಲಂಬಿಗಳಾಗಿದ್ದು ಸಂಪ್ರದಾಯದಲ್ಲಿ ಅಲ್ಪಸ್ವಲ್ಪ ಭೇದಗಳುಳ್ಳವರಾಗಿರುವುದು ಒಡೆದುಕಾಣುತ್ತದೆ.

ಇಂತಹ ಭಾಗವತ ಧರ್ಮವನ್ನು ಅಚ್ಚಳಿಯದಂತೆ, ಉದ್ರೇಕದಿಂದ ಔಚಿತ್ಯ ಕೆಡದಂತೆ, ಪರಮಪರಿಶುದ್ಧ ರೀತಿಯಲ್ಲಿ ಪರಿಪಾಲಿಸಿಕೊಂಡು ಬಂದಿರುವವರು ಕರ್ಣಾಟಕದ ಹರಿದಾಸರುಗಳು. 'ಯಲ್ಲಬ್ಧ್ವಾ ಪುಮಾನ್ ಸಿದ್ಧೋ ಭವತಿ, ಅಮೃತೋ ಭವತಿ, ತೃಪ್ತೋ ಭವತಿ, ಯತ್ಪ್ರಾಪ್ಯ–ನ ಕಿಂಚಿತ್ ವಾಂಛತಿ, ನ ಶೋಚತಿ, ನ ದ್ವೇಷ್ಟಿ, ನ ರಮತೆ, ನ ಸ್ನೇಹೀಭವತಿ; ಯದ್ ಜ್ಞಾತ್ವಾ ಮತ್ತೋಭವತಿ, ಸ್ತಬ್ಧೋಭವತಿ' ಎಂಬ ಸೂತ್ರಾರ್ಥಗಳ ಮೂರ್ತಿಮಂತಸ್ವರೂಪರು ಹರಿದಾಸರುಗಳು. ಈ ಮಹಾನುಭಾವರು ಆರಿಸಿಕೊಂಡ ಭಕ್ತಿಪಂಥವು ಸೂತ್ರದ ಮಾತಿನಂತೆಯೇ ಕರ್ಮಜ್ಞಾನ ಯೋಗಮಾರ್ಗಗಳಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಿಂತ ಶ್ರೇಷ್ಠತಮವಾಗಿರುವುದು. ವಿಷಯತ್ಯಾಗ, ಸಂಗರಾಹಿತ್ಯ, ಕರ್ಮಫಲ ತ್ಯಾಗ, ಸಂಸರ್ಗದಲ್ಲಿದ್ದರೂ ನಿರಂತರ ಭಗವದ್ಗುಣಾನುವಾದದಲ್ಲೇ ಆಸಕ್ತಿ, ಇವೆಲ್ಲಾ ಹರಿದಾಸರ ಹುಟ್ಟುಗುಣಗಳು. ಈ ಮಹಾನುಭಾವರ ಸಾಧನೆಗೆ ಸಿದ್ಧಿಯೇ ಪ್ರಮಾಣವಾಗಿರುವುದರಿಂದ ಪ್ರಮಾಣಾಂತರಗಳು ಸಹ ಬೇಕಾಗಿಲ್ಲ. ಅಂತರಂಗದಲ್ಲಿ ಜ್ಯೋತಿದರ್ಶನ, ಬಹಿರಂಗದಲ್ಲಿ ಸಗುಣ ಮೂರ್ತಿ ದರ್ಶನ ಮಾಡುತ್ತ ಪರವಶವಾಗಿ ಆನಂದಬಾಷ್ಪಗಳಿಂದ, ರೋಮಾಂಚನದಿಂದ, ಅವರುದ್ಧ ಕಂಠಸ್ವರದಿಂದ, ತಮ್ಮಲ್ಲಿ ತಾವು ಪ್ರಲಪಿಸಿದ ಉಪದೇಶಗಳನ್ನು ಕೇಳಿದ ಜನರ ಕುಲಕುಲಗಳೇ ಪಾವನವಾದವು. ತೀರ್ಥರಲ್ಲಿ ತೀರ್ಥತ್ವ, ಕರ್ಮದಲ್ಲಿ ಸುಕರ್ಮತ್ವ, ಶಾಸ್ತ್ರದಲ್ಲಿ ಸಚ್ಛಾಸ್ತ್ರತ್ವಗಳುಂಟಾಗಿ ಹರಿದಾಸರು ಜನ್ಮತಾಳಿದ ಭೂಮಂಡಲವು ಪಾವನವಾಯಿತು. 'ನ ತೇಷು ಜಾತಿ-ವಿದ್ಯಾ-ರೂಪ-ಕುಲ-ಧನಕ್ರಿಯಾದಿಭೇದಃ' ಎಂಬ ಸೂತ್ರದಲ್ಲಿ ಹೇಳಿರುವಂತೆ ಈ ಮಹಾನುಭಾವರಲ್ಲಿ ಯಾವದೊಂದು ಭೇದಭಾವನೆಗಳೂ ಇರಲಿಲ್ಲ. ಈ ಪರಂಪರೆಯಲ್ಲಿ ಸ್ತ್ರೀಯರು, ಶೂದ್ರರು, ಮತತ್ರಯಗಳ ಬ್ರಾಹ್ಮಣರು, ಸರ್ವಸಂಗಪರಿತ್ಯಾಗಮಾಡಿದ ವಿದ್ಯಾಸಿಂಹಾಸನಾಧಿಪತಿಗಳಾದ ಸನ್ಯಾಸಿಗಳು ಮೊದಲಾಗಿ ಯಾರಿದ್ದರೂ ಎಲ್ಲರದೂ ಒಂದೇ ಮಾತು, ಒಂದೇ ರೀತಿ, ಒಂದೇ ನೀತಿ, ಎಂಬಂತಿದ್ದು ಪಾವನವಾಯಿತು ಕನ್ನಡನಾಡು. ಇವರ ಮಾರ್ಗವನ್ನು ಮಹಾರಾಷ್ಟ್ರರು ಅನುಸರಿಸಿದರು. ಇವರ ನಿಶಾನಿಯನ್ನೇ 'ಭಗವಾಝಂಡಾ' ಎಂದು ರಾಮದಾಸ ಸಮರ್ಥರು ಸ್ವೀಕರಿಸಿದರು. ಧರ್ಮಸ್ಥಾಪನೆಯಾಯಿತು, ರಾಷ್ಟ್ರನಿರ್ಮಾಣವಾಯಿತು. ಜನತೆಯಲ್ಲಿ ಶಾಂತಿತುಷ್ಟಿಪುಷ್ಟಿಗಳು ನೆಲೆಸಿದವು. ಆದ್ದರಿಂದ ಆದೇ ಸೂತ್ರಕಾರರಾದ ನಾರದರ ಮಾತಿನಿಂದ ಹೇಳಿದರೆ ಅವು ಇಂದಿಗೂ ಎಂದಿಗೂ ಸಂದೇಶವಾಕ್ಯಗಳಂತೆ ನಿಲ್ಲುತ್ತವೆ. ಆ ಮಹಾವಾಕ್ಯಗಳೆಂದರೆ 'ಭಕ್ತಿಶಾಸ್ತ್ರಗಳನ್ನು ಮನನಮಾಡಿರಿ, ಸರ್ವಕಾಲದಲ್ಲಿ ಸರ್ವರೀತಿಯಲ್ಲಿ ಭಗವಂತನನ್ನು ಭಜನೆಮಾಡಿರಿ, ಎಲ್ಲಕ್ಕಿಂತ ಭಕ್ತಿ ದೊಡ್ಡದು, ಭಕ್ತಿಯೇ ದೊಡ್ಡದು.'

ಹರಿದಾಸರ ಬ್ರಹ್ಮಾನಂದಾನುಭವದ ಉದ್ಗಾರಗಳ ಮಾದರಿಗಳನ್ನು ತಿಳಿಸುವ ಮಂಗಳಾಧ್ಯಾಯವಿದಾದುದರಿಂದ, ಉಪಲಬ್ಧವಿರುವ ಕಾಗದದ ಅಳತೆಗೆ ತಕ್ಕಂತೆ, ವಾಚಕರ ಕ್ಷಮೆ ಬೇಡುತ್ತಾ ಕೆಲವು ಮಾದರಿಗಳನ್ನು ಮಾತ್ರ ಇಲ್ಲಿ ಕೊಡಲಾಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

೨೩೭ನೇ ಪುಟದಲ್ಲಿ ಶಾಂತರಸದಲ್ಲಿ ಕೊಟ್ಟಿರುವ 'ಸೇರಿದೆನು ಸೇರಿದೆನು ಜಗದೀಶನ' ಎಂಬ ಪದವು ಈ ಬ್ರಹ್ಮಾನಂದದ ತರಗತಿಗೆ ಸೇರಿದುದಾದ್ದರಿಂದ ಮಾತ್ರದರ ಉಲ್ಲೇಖ ಇಲ್ಲಿ ಮಾಡುವುದಿಲ್ಲ. ೭೯ನೇ ಪುಟದಲ್ಲಿ ಕೊಟ್ಟಿರುವ 'ಇಂದಿನ ದಿನವೇ ಶುಭದಿನವು' ಎಂಬ ಉಗಾಭೋಗವೂ ೭೪ನೇ ಪುಟದಲ್ಲಿ ಕೊಟ್ಟಿರುವ ಬ್ರಹ್ಮಾನಂದ ಸುಳಾದಿಯೂ ಇದೇ ತರಗತಿಗೆ ಸೇರಿರುವ ಕಾರಣ ಪುನರುಕ್ತಿ ಬೇಕಾಗಿಲ್ಲ. ಕೆಳಕಂಡ ಪದವು ಪುರಂದರದಾಸರು ಬೇಲೂರಿಗೆ ಬಂದಾಗ ಶ್ರೀ ಸೌಮ್ಯಕೇಶವಸ್ವಾಮಿಯ ದರ್ಶನಮಾಡಿದಾಗ ಅಂತರಂಗದಲ್ಲಾದ ಜ್ಯೋತಿರ್ದರ್ಶನ, ಬಹಿರಂಗದಲ್ಲಾದ ರೂಪದರ್ಶನಗಳನ್ನು ತಿಳಿಸುತ್ತದೆ. ಆ ಪದದ ವಿವರವು ಕೆಳಕಂಡಂತಿದೆ:

ರಾಗ : ಸಾವೇರಿ — ತಾಳ : ಅಟ್ಟ

ಕಂಡೆನು ಗೋವಿಂದನ | ಮನ್ಮನದಲ್ಲಿ ॥ ಪ ॥
ಪುಂಡರೀಕಾಕ್ಷ ಪಾಂಡವಪಕ್ಷಪಾತನ ॥ ಅ ॥

ಕೇಶವ ನಾರಾಯಣ ತ್ರಿವಿಕ್ರಮ |
ವಾಸುದೇವ ಅಚ್ಯುತಾನಂತನ
ಸಾಸಿರನಾಮದ ಶ್ರೀಹೃಷೀಕೇಶನ |
ಶೇಷಶಯನ ನಮ್ಮ ವಸುದೇವತನಯನ ॥ ೧ ॥

ಮಾಧವ ಮಧುಸೂದನ ಜನಾರ್ದನ |
ಆದಿಮೂರುತಿ ಶ್ರೀ ಶ್ರೀಧರನ
ವೇದಾಂತವೇದ್ಯನ ಇಂದಿರೆರಮಣ |
ನಾದ ಪ್ರಹ್ಲಾದವರದ ನರಸಿಂಹನ ॥ ೨ ॥

ಪುರುಷೋತ್ತಮ ಭಾರ್ಗವ ರಾಘವನ |
ಶರಣಾಗತ ವಜ್ರಪಂಜರನ
ಕರುಣಾಕರ ಶ್ರೀಪುರಂದರವಿಠಲನ |
ನೆರೆನಂಬಿದೆ ಬೇಲೂರ ಚನ್ನಿಗನ ॥ ೩ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಪುರಂದರದಾಸರ ಬ್ರಹ್ಮಾನಂದದ ಇನ್ನೊಂದು ಮಾದರಿ :

ರಾಗ : ಸೌರಾಷ್ಟ್ರ — ತಾಳ : ಅಟ್ಟ

ಹರಿದಾಸರ ಸಂಗ ದೊರಕಿತು ಎನಗೆ | ಇನ್ನೇನಿನ್ನೇನು
ವರಗುರು ಉಪದೇಶ ನೆರವಾಯಿತು ಎನಗೆ | ಇನ್ನೇನಿನ್ನೇನು || ಪ ||

ಮಾಯಾ ಸಂಸಾರದ ಮಮಕಾರ ತಗ್ಗಿತು | ಇನ್ನೇನಿನ್ನೇನು
ತೋಯಜಾಕ್ಷನ ನಾಮ ಜಿಹ್ವೆಗೆ ಒದಗಿತು | ಇನ್ನೇನಿನ್ನೇನು || ೧ ||

ಹಲವು ದೈವಂಗಳ ಹಂಬಲು ಬಿಟ್ಟಿತು | ಇನ್ನೇನಿನ್ನೇನು
ಜಲಜನಾಭನ ಧ್ಯಾನ ಹೃದಯದಿ ನೆಟ್ಟಿತು | ಇನ್ನೇನಿನ್ನೇನು || ೨ ||

ಕಂದೆತಾಯಿ ಮುಚುಕುಂದವರದನಾದ | ಇನ್ನೇನಿನ್ನೇನು
ಸಂದೇಹವಿಲ್ಲ ಮುಕುಂದ ದಯಮಾಡಿದ | ಇನ್ನೇನಿನ್ನೇನು || ೩ ||

ಏನೆಂದು ಪೇಳಲಿ ಆನಂದ ಸಂಭ್ರಮ | ಇನ್ನೇನಿನ್ನೇನು
ಆನಂದಗೋಪನ ಕಂದನ ಕಂಡೆನು | ಇನ್ನೇನಿನ್ನೇನು || ೪ ||

ಎನ್ನ ವಂಶಗಳೆಲ್ಲ ಪಾವನ್ನವಾದವು | ಇನ್ನೇನಿನ್ನೇನು
ಚಿನ್ಮಯಪುರಂದರವಿಠಲ ದೊರಕಿದ | ಇನ್ನೇನಿನ್ನೇನು || ೫ ||

ಪುರಂದರದಾಸರ ಬ್ರಹ್ಮಾನಂದಾನುಭವ ಹೀಗಿದ್ದರೆ ಅವರ ಶಿಷ್ಯರು ವಿಜಯದಾಸರ ಅನುಭವ ಕೆಳಕಂಡಂತಿದೆ. ಏನೊಂದು ಯೋಗ್ಯತೆಯೂ ಇಲ್ಲದ ತಮಗೆ ಪುರಂದರದಾಸರ ಅನುಗ್ರಹನೇ ಸಾಕ್ಷಾತ್ಕಾರಕ್ಕೆ ಕಾರಣ ವಾಯಿತೆಂದು ಬಲು ರೀತಿಯಿಂದ ಅವರು ಗುರುಗಳನ್ನು ಕೊಂಡಾಡಿದ್ದಾರೆ.

ಸುಳಾದಿ

ಧ್ರುವತಾಳ

ದಾಸರ ನಿಜಕಾರುಣ್ಯಪಾತ್ರನು ನಾನು
ದಾಸರ ಹೆಬ್ಬಾಗಿಲ ಕಾಯುವವ ನಾನು
ದಾಸರ ಮನೆಯಂಗಳ ಬಳಿವವ ನಾನು
ದಾಸರ ಮನೆ ಸಮ್ಮಾರ್ಜಕ ನಾನು

Sri Vidyabharathi Book Centre, Sringeri

CC-O. In Public Domain. Digitized by eGangotri

ದಾಸರ ಸದನಕ್ಕೆ ಜಲವಾಹಕ ನಾನು
ದಾಸರ ಪೂಜಾಸಾಧನ ತರುವವ ನಾನು
ದಾಸರುಂಡೆಂಜಲ ತೆಗೆಯುವನು ನಾನು
ದಾಸರ ಬಳಿಯಲ್ಲಿ ಸರ್ವೋಗದವ ನಾನು
ದಾಸರುಂಡದ್ದುಂಡು ದಾಸರುಟ್ಟದ್ದುಟ್ಟು
ದಾಸರಾಡಿದ್ದೇ ವೇದವಾಕ್ಯವೆಂದು
ಲೇಸಾಗಿ ಪೇಳುತ್ತಲಿರುವವರ ಸಂಗ
ಲೇಶ ಬಿಡದೆ ಕಾಲಕಳೆಯುತ್ತಲಿರುವ
ದಾಸದಾಸೀಜನರ ದಾಸನು ನಾನು
ಭೂಷಣವೆನಗಿದು ಆವಾವ ಕಾಲಕ್ಕು
ದಾಸಜನರ ಪ್ರಿಯ ವಿಜಯವಿಠಲನ
ದಾಸನಾದವನಿಗೆ ಯಾವದು ಕೊರತೆ ॥ ೧ ॥

ಮಟ್ಟತಾಳ

ಸುಣ್ಣಕೆ ಗತಿಯಿಲ್ಲದ ಪಾಮರ ಮನುಜಗೆ
ರನ್ನವಜ್ರದ ಕಣಿ ತನ್ನಿಂದಲೆ ತಾನೆ
ಕಣ್ಣಿಗೆ ಪೊಳೆದಂತೆ ಚಿನ್ಮಯ ಪೊಳೆದನು
ಘನ್ನದುರಿತ ವಿಮೋಚನ್ನವಾಯಿತಿದಕೆ
ಎನ್ನ ಪುಣ್ಯವಲ್ಲ ಎನ್ನ ಸಾಧನವಲ್ಲ
ಮನ್ನಿಸಿ ಗುರುಗಳು ಇನ್ನಿತು ಪಾಲಿಸಲು
ಜನ್ನಾರ್ದನ ದೇವ ವಿಜಯವಿಠಲನ್ನ
ಕಣ್ಣಿಂದಲಿ ಕಂಡೆ ಸನ್ನುತಿಪ್ಪೆನದಕೆ ॥ ೨ ॥

ತ್ರಿಪುಟತಾಳ

ಅರವಿಂದದ ಬಳಿ ಖದ್ಯೋತಕ್ರಿಮಿ ಬಂದು
ಹರಿದಾಡುತಿರಲಾಗಿ ಅದೆ ಅದೇ ಕಾಲದಿ
ತರಣಿ ಉದ್ಭವವಾಗೆ ಮುದುರಿದ್ದ ಸರಸಿಜ
ಅರಳಲು ಕಾಣುತ ಖದ್ಯೋತವು

Sri Vidyabharathi Book Centre, Sringeri

CC-O. In Public Domain. Digitized by eGangotri

ಹಳುಹಬಟ್ಟರೇನು ನರರರಿಯರೆ ಚರಿತೆ
ಮರುಳುಮನವೆ ನಿನ್ನದೆಂದು ಹಿಗ್ಗದಿರು
ಎರಡರ ಪೆಸರೊಂದಾದರೆ ಮಹಾಖ್ಯಾತಿ
ತರಣಿಗಲ್ಲದೆ ಖದ್ಯೋತಕೆ ಉಂಟೆ
ಗುರುವಿಕೆಯೂ ಸಲ್ಲ ವಿಜಯವಿಠಲನ್ನ
ಶರಣರ ಕೃಪೆಯಿಂದ ಬಂದ ಭಾಗ್ಯವೆನ್ನ || ೩ ||

ಅಟ್ಟತಾಳ

ಪರಮದರಿದ್ರನು ಬಲುರೋಗಿಷ್ಠನು
ನಿರುತನಿಂದಕ ಮಹಾದುಃಖಿಷ್ಟ ಎಂದಿಗು
ಕುರುಡನು ಕುಂಟನು ಕಿವುಡ ಮೂಕ ನಾನಾ
ಪರಿ ವ್ಯಾಕುಲದವ ಆರು ಇಲ್ಲದಿಪ್ಪ
ಪರದೇಶಿ ಕೇವಲ ತೃಷೆಪೀಡಿತ ಕ್ಷುಧಾ
ತುರನಾಗಿ ಬೇಸಿಗೆ ಬಿಸಿಲೊಳು ಚರಿಸುತ
ಸ್ಮರಣೆಯಿಲ್ಲದೆ ನೀರಿಲ್ಲದರಣ್ಯಾದಿ
ಇರುತಿಪ್ಪ ಮಂದಮಾನವನ ತತ್ಕಾಲದಿ
ಭರದಿಂದ ಕೊಂಡೊಯ್ದು ಸಂಜೀವನಾದ್ರಿಯಲ್ಲಿ
ಸುರತರುವಿನ ತಂಪು ನೆರಳೊಳಗಿಟ್ಟ
ಪರಿಯಂತೆ ಎನಗಿಂದು ದಾಸೋತ್ತಮರಿಂದ
ದೊರಕಿತು ಪರಮಾನಂದಸುಖ
ಧರೆಯೊಳಗೆ ನಮ್ಮ ವಿಜಯವಿಠಲನ
ಮರೆಯದೆ ಕೊಂಡಾಡಿ ನಲಿನಲಿದಾಡುವೆನು || ೪ ||

ಆದಿತಾಳ

ಉಪಜೀವ ನಿನಗಿದು ಎಲೆ ಮನವೇ ಕೇಳು
ಗುಪಿತದಲ್ಲಿ ಚರಿಸು ಅಂತರಂಗದಲ್ಲಿ
ಸುಪಥ ಬಯಸುತಿರು ಸುಜನರ ಬಿಡದಿರು
ಸಫಲನಾಗು ಅತಿ ಉಗ್ರಕರ್ಮವ ಬಿಡು

Sri Vidyabharathi Book Centre, Sringeri

CC-O. In Public Domain. Digitized by eGangotri

ಉಪಚಾರವೆನದಿರು ಹರಿದಾಸರು ಒಲಿದು
ಕೃಪೆ ಮಾಡಿದಲ್ಲದೆ ಬರಿದೆ ಬಾಹದೆ ಸುಖ
ಉಪದೇಶಕರ್ತ ವಿಜಯವಿಠಲನ
ಜಪತಪಧ್ಯಾನದಿಂದ ಹೊತ್ತು ಪೋಗಾಡು ॥ ೫ ॥

ಜತೆ

ಇಂದ್ರನಾಮಕರಾದ ದಾಸರೊಲಿದ ಮೇಲೆ
ಚಂದ್ರಪ್ರಕಾಶ ಶ್ರೀವಿಜಯವಿಠಲ ಒಲಿವ ॥ ೧ ॥

ರಾಗ : ಶಂಕರಾಭರಣ — ತಾಳ : ಜಂಪೆ

ಅಂತರಂಗದ ಕದವು ತೆರೆಯಿತಿಂದು
ಎಂತು ಪುಣ್ಯದ ಫಲವು ದೊರಕಿತೋ ಎನಗಿಂದು ॥ ಪ ॥

ಏಸು ದಿನವಾಯಿತೋ ಬೀಗಮುದ್ರೆಯ ಮಾಡಿ
ವಾಸವಾಗಿದ್ದರು ದುರಳರಲ್ಲಿ
ಮೋಸವಾಗಿತ್ತು ಇಂದಿನತನಕ ತವ
ರಾಶಿಯೊಳಗೆ ಹೊಳಿ ಕಾಣಿಸುತ್ತಿರಲಿಲ್ಲ ॥ ೧ ॥

ಹರಿಕರುಣವೆಂಬಂಥ ಕೀಲಿಕೈ ದೊರಕಿತು
ಗುರುಕರುಣವೆಂಬಂಥ ಶಕ್ತಿಯಿಂದ
ಪರಮಭಾಗವತರ ಸಹವಾಸದಲಿ ಪೋಗಿ
ಹರಿಸ್ಮರಣೆಯಿಂದಲಿ ಬೀಗಮುದ್ರೆಯನೊಡೆದೆ ॥ ೨ ॥

ಸ್ವಮೂರ್ತಿಗಣ ಮಧ್ಯ ಸಚ್ಚಿದಾನಂದೈಕ
ರಮೆಧರೆಯರಿಂದ ಸೇವೆಯ ಕೊಳ್ಳುವ
ಕಮಲಜಾದಿಗಳಿಂದ ತುತಿಸಿಕೊಳ್ಳುತ ಹೃದಯ
ಕಮಲದೊಳಗಿರುವ ಶ್ರೀ ವಿಜಯವಿಠಲನ ಕಂಡೆ ॥ ೩ ॥

ಜಗನ್ನಾಥದಾಸರು ತಮಗಾದ ಸಾಕ್ಷಾತ್ಕಾರದ ಪರಿಯನ್ನು ಮುಂದಿನಂತೆ ವರ್ಣಿಸಿರುತ್ತಾರೆ:

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಗ : ಮೋಹನ — ತಾಳ : ಆದಿ

ಕಂಡೆ ಪಂಡರಿರಾಯನ । ಶ್ರೀಮನಃಪ್ರೀಯನ ॥ ಪ ॥

ಚಂಡವಿಕ್ರಮಕರ । ದಂಡ ಮುನಿಪಗೊಲಿ
ದಂಡಜಾಧಿಪ ಪ್ರಕಾಂಡ ಸುಪೀಠನ ॥ ಅ ॥

ಮಣಿಮಯ ಮಕುಟ ಮಧುಪ ನವೆರಾ । ಪೆರೆ
ಫಣೆಯೊಳಿಟ್ಟ ಕಸ್ತೂರಿ ತಿಗರ
ವನರುಹ ಉಪಮಲೋಚನಯುಗ ಚಂಪಕನಾಸವ
ಕುಂಡಲದ ವಿಕಾಸವ । ಕದಪಿನ ವಿಲಾಸವ ।
ಮೊಗದ ಮಂದಹಾಸವ ॥ ೧ ॥

ಕುಂದಕೋರಕ ದಶನಾವಳಿಯ । ಬಿಂಬ
ದಂದದಿ ಪೊಳೆವ ಅಧರ ಕಳೆಯು
ಕಂಧರ ತ್ರಿವಳಿ ಪುರಂದರ ಇಭಕರ ಪೋಲುವ
ಭುಜಯುಗ ವಿಶಾಲವ । ಕರತಲರಸಾಲವ
ನಖರ ಮಲ್ಲಿಕಾಲವ ॥ ೨ ॥

ಅತಿವಿಸ್ತೃತ ವಕ್ಷಸ್ಥಳವ । ಸಿರಿ
ಸತಿಸದನಾರ್ಕದಂದದಿ ಪೊಳೆವ
ರತುನ ಕೌಸ್ತುಭದೀಧಿತಿವಿಲಸಿತ ವೈಜಯಂತಿಯ
ಉದರ ರೋಮಪಙ್ಕ್ತಿಯು । ನಾಭಿ ವಲ್ಮೀಕದಂತಿಹ
ಕುಕ್ಷಿ ತ್ರಿವಳಿ ಕಾಂತಿಯ ॥ ೩ ॥

ಮುಂಬಿಸಲಂತೆ ಕನಕಚೇಲ । ಸು ನಿ
ತಂಬದಿ ಪೊಳೆವ ಗೋಲಿಯ ಚೀಲ
ಕಂಬು ಕೋಕನದ ವಿಡಂಬಮೇಖಳಬಕದಂಬವ
ಊರು ಕದಳೀಸ್ತಂಭವ । ಜಾನುಗಳಿಂದುಬಿಂಬವ
ಆಚರಿಪ ವಿಡಂಬವಾ ॥ ೪ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾತಂಗಕರದ ಜಂಘೆಗಳ | ಗುಲ್ಫ
ಜಾತಿ ಮಾಣಿಕಾಂಗುಲಿ ಸಂಘಗಳ
ಜ್ಯೋತಿ ಬೆಳಗೆ ಜಗನ್ನಾಥವಿಠಲನಂಘ್ರಿ ಪುಷ್ಕರ
ಉದಿತ ಶತಭಾಸ್ಕರ | ಗಭಸ್ತಿ ತಿರಸ್ಕರ
ಸುಜನರ ಯಶಸ್ಕರ || ೫ ||

ರಾಗ : ಮಧ್ಯಮಾವತಿ — ತಾಳ : ಆದಿ

ಧನ್ಯನಾದೆ ! ವಿಠಲನ ಕಂಡು
ಧನ್ಯನಾದೆ ಕಾಮುನ್ನಪಿತನ ಲಾ |
ವಣ್ಯಮೂರುತಿಯು ಕಣ್ಣಿಲಿ ಕಂಡು || ಅ ||

ದೇವವರೇಣ್ಯ ಸದಾವಿನೋದಿ ವ್ಯಂ |
ದಾವನ ಚರಿಸಿದ ಓವನ ಕಂಡು || ೧ ||

ಮಂಗಳಾಂಗ ಕಾಳಿಂಗಮಥನ ಮಾ |
ತಂಗವರದ ವರರಂಗನ ಕಂಡು || ೨ ||

ಹಾಟಕಾಂಬರ ಕಿರೀಟಿಸಾರಥಿಯ |
ತಾಟಕಾರಿ ವೈರಾಟನ ಕಂಡು || ೩ ||

ಚಿಂತಿತ ಫಲದ ಮದಂತರ್ಯಾಮಿ ಸ |
ತ್ಪಾಂಥಜನಾಪ್ತ ಮಹಾಂತನ ಕಂಡು || ೪ ||

ಮಾತುಳಾಂತಕ ವಿಧಾತಪಿತ ಜಗ
ನ್ನಾಥವಿಠಲ ವಿಖ್ಯಾತನ ಕಂಡು || ೫ ||

ರಾಗ : ಪೂರ್ವಿ — ತಾಳ : ಆದಿ

ಯಾತರ ಭಯ ಶ್ರೀನಾಥನ ಪರಮಪ್ರೀತಿಯ ಪಡೆದವಗೆ || ಪ ||

ಕಾತುರಪಡದಲೆ ಪಾತಕಹರ ವಿಧಿ | ತಾತನೆ ನಿಜಸುಖತಾತ
ನೆಂದರಿತಗೆ || ಅ ||

Sri Vidyabharathi Book Centre, Sringeri

CC-O. In Public Domain. Digitized by eGangotri

ಬಂಧುಜನರು ತನ್ನ ವಂದಿಸಿದಾಕ್ಷಣ | ಬಂದ ಭಾಗ್ಯವೇನೋ
ಹಿಂದೆ ಮುಂದೆ ತನ್ನ ನಿಂದಿಸಿ ನುಡಿಯಲು ಕುಂದಾದದ್ದೇನೊ ||
ಇಂಧಿರೆರಮಣ ಗೊವಿಂದನ ಮಾನಸ | ಮಂದಿರದಲಿ ಎಂದೆಂದಿಗು
ಭಜಿಪಗೆ ||೧||

ದುಸುಮುಸುಗುಟ್ಟುವ ಸತಿಸುತರಿಂದಲಿ ಹಸಗೆಟ್ಟದ್ದೇನೋ
ಅಶನಾಚ್ಛಾದನ ತರಲಿಲ್ಲವೆಂದು ವ್ಯಸನಬಟ್ಟರೇನೋ ||
ಕುಸುಮನಾಭ ಸುಮನಸವಂದಿತ ಪದ | ವಸುದೇವಸುತನ
ವಶದೊಳಿದ್ದವಗೆ ||೨||

ಘಾಸಿಯಿಂದ ಆಯಾಸಗೊಳದೆ ಆವಾಸದೊಳಿದ್ದರೇನೋ
ಕಾಶಿಕಂಚಿಕಾಳಹಸ್ತಿ ಮೊದಲಾದ ದೇಶ ತಿರುಗಲೇನೋ ||
ಈಶಶ್ರೀಶ ಜಗನ್ನಾಥವಿಠಲನ | ದಾಸನೆನಿಸಿ ಸಂತೋಷ
ದೊಳಿರುವಗೆ ||೩||

ಹರಿದಾಸರುಗಳ ಆನಂದವಿಂಥಾದ್ದು, ಅನುಭವವಿಂಥಾದ್ದು, ತ್ಯಾಗ ವಿಂಥಾದ್ದು.

ಒಂದು ಸಾವಿರ ವರ್ಷಗಳ ಹರಿದಾಸರ ಇತಿಹಾಸದಲ್ಲಿ ನೂರರಲ್ಲಿ ಒಂದಂಶ ಸಹ ನಮಗೆ ಉಪಲಬ್ಧವಾಗಿಲ್ಲ. ಹರಿದಾಸ ಸಾಹಿತ್ಯ ರಾಶಿಯಲ್ಲಿ ಸಾವಿರದಲ್ಲೊಂದಂಶ ಕೂಡ ದೊರೆತಿಲ್ಲ. ಇತರ ಗ್ರಂಥಗಳ ಶೋಧನೆ ನಡೆಯುತ್ತಿರುವಂತೆ ದಾಸಸಾಹಿತ್ಯಕ್ಕಾಗಿ ಶೋಧನೆಯು ನಡೆಯುತ್ತಿಲ್ಲ. ಸಂಶೋಧನೆ ಮಾಡುವವರ ಕೈಗೆ ಕದಾಚಿತ್ ದೇವರ ನಾಮುಗಳ ಪುಸ್ತಕ ಸಿಕ್ಕಿದರೆ ಅದೇನೋ ಹಾಡಿನ ಪುಸ್ತಕ, ನಮಗೇಕೆನ್ನುವ ತಿರಸ್ಕಾರ ತಪ್ಪಿಲ್ಲ. ಐವತ್ತು ವರ್ಷಗಳ ಹಿಂದೆ ಕೇಳುತ್ತಿದ್ದ ದೇವರ ನಾಮುಗಳು ಈಗ ಕಿವಿಗೆ ಬೀಳುತ್ತಿಲ್ಲ. ನಲವತ್ತು ವರ್ಷಗಳಿಂದ ಮುದ್ರಣ ಮಾಡಿದ ಸಂಸ್ಥೆಗಳು ಶುದ್ಧಪ್ರತಿಗಳಿಗಾಗಿ ಶ್ರಮಪಟ್ಟಿಲ್ಲ. ಅಂಕಿತಗಳನ್ನು ಬದಲಾಯಿಸುವುದು, ಮಾತುಗಳನ್ನು ಬದಲಾಯಿಸಿ ತಿದ್ದಿದ ಮುದ್ರಣವೆನ್ನುವುದು, ಸರ್ವಸಾಮಾನ್ಯವಾಗಿಬಿಟ್ಟಿದೆ. ಈ ಕಾರಣಗಳಿಂದ ಈ ಸಾಹಿತ್ಯಕ್ಕೆ ಹೆಚ್ಚಾಗಿ ದುಡಿಯಬೇಕಾದ ಕಾಲವೀಗ ಬಂದಿದೆ. ಮರಾಟಿಯಲ್ಲಿ ಸಂತಸಾಹಿತ್ಯದ ಮುದ್ರಣವಾಗಿರುವಂತೆ ಕನ್ನಡದಲ್ಲೂ ಆಗಬೇಕಾಗಿದೆ. ಮಹಾರಾಷ್ಟ್ರರಂತೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಕನ್ನಡಿಗರು ಸಂತಸಾಹಿತ್ಯದಲ್ಲಿ ಅಭಿಮಾನ ತಾಳಬೇಕು; ಸಹಾಯ ಮಾಡಬೇಕು ಮಾತ್ರ.

ಮಂಗಳಗಳು

ಜಯ ಜಯ ಮಂಗಳ ಹರಿಗೆ । ಜಯ ಜಯ ಮಂಗಳ ಸಿರಿಗೆ
ಜಯ ಜಯ ಮಂಗಳ ವರದ ಪುರಂದರವಿಠಲಗೆ ॥ ೧ ॥

ಶುಭವೆನ್ನಿ ಶೋಭನ ಹರಿಗೆ । ಶುಭವೆನ್ನಿ ಶೋಭನ ಸಿರಿಗೆ
ಶುಭವೆನ್ನಿ ಶೋಭನ ವರದಪುರಂದರವಿಠಲಗೆ ॥ ೨ ॥

ಪರಮಾನಂದವು ಹರಿಗೆ । ಪರಮಾನಂದವು ಸಿರಿಗೆ
ಪರಮಾನಂದವು ವರದಪುರಂದರವಿಠಲಗೆ ॥ ೩ ॥

ರಾಗ : ಸುರಟ — ತಾಳ : ಅಟ್ಟ

ಆನಂದಮಯಗೆ ಚಿನ್ಮಯಗೆ । ಶ್ರೀ ।
ನಾರಾಯಣಗಾರತಿಯೆತ್ತಿರೆ ॥ ಪ ॥

ವೇದವ ತಂದು ಬೆಟ್ಟವ ಪೊತ್ತು ಧರಣಿಯು
ಸಾಧಿಸಿ ಕಂಭದೊಳುದಿಸಿದಗೆ ॥
ಭೂದಾನವ ಬೇಡಿ ನೃಪರ ಸಂಹರಿಸಿದ
ಆದಿಮೂರುತಿಗಾರತಿಯೆತ್ತಿರೆ ॥ ೧ ॥

ಇಂದುವದನೆಸಹಿತಾರಣ್ಯದೊಳು ನಿಂದು
ನಂದಗೋಕುಲದೊಳು ಬೆಳೆದವಗೆ ॥
ಮಂದಗಮನೆಯರ ಮುಂದೆ ನಿರ್ವಾಣದಿ
ನಿಂದ ಮೂರುತಿಗಾರತಿಯೆತ್ತಿರೆ ॥ ೨ ॥

ತುರಗವನೇರಿ ದೈತ್ಯರ ಸೀಳಿ ಭಕ್ತರ
ಪೊರೆದ ಮಂಗಳ ಹಯವದನನಿಗೆ ॥
ವರವೇಲಾಪುರ ಚನ್ನಿಗರಾಯನ
ಚರಣಕಮಲಕಾರತಿಯೆತ್ತಿರೆ ॥ ೩ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಗ : ಭೈರವಿ — ತಾಳ : ಜಂಪೆ

ಜಯಮಂಗಳಂ ನಿತ್ಯ ಶುಭಮಂಗಳಂ ॥ ಪ ॥

ತೊಳಸದಕ್ಕಿಯ ತಿಂಬ | ಕಿಲುಬು ತಳಿಗೆಯೊಳುಂಬ
ಕೊಳಗದಲಿ ಹಣಗಳನು ಅಳೆಸಿಕೊಂಬ ॥
ಇಲ್ಲ ತನಗೆಂತೆಂದು ಸುಳ್ಳುಮಾತಾಡಿದರೆ
ಎಲ್ಲವನು ಕಸುಕೊಂಬ ಸುಳ್ಳುಧೊರೆಗೆ ॥ ೧ ॥

ತನ್ನ ನೋಡುವೆವೆಂದು ಮುನ್ನುಗ್ರಾವುದ ಬಂದು
ತನ್ನ ಗುಡಿಯ ಪೊಕ್ಕ ಜನರಿಗೆಲ್ಲಾ ॥
ಹೊನ್ನು ಹಣ ಕಸುಕೊಂಡು ತನ್ನ ದರುಶನ ಕೊಡದೆ
ಬೆನ್ನೊಡೆಯ ಹೊಡೆಸುವ ಅನ್ಯಾಯಕಾರಿಗೆ ॥ ೨ ॥

ಗಿಡ್ಡ ಹಾರುವಗೆ ಸೆರಗೊಡ್ಡಿ ಬೇಡೀದವಗೆ
ದುಡ್ಡು ಕಾಸುಗಳಿಗೆ ಕೈನೀಡಿದವಗೆ ॥
ಅಡ್ಡ ಬಿದ್ದ ದಾಸರ ವಿಡ್ಡೂರ ಕಳೆದು
ದೊಡ್ಡವರ ಮಾಳ್ಪ ಸಿರಿವಿಜಯವಿಠಲಗೆ ॥ ೩ ॥

ರಾಗ : ಸುರಟಿ — ತಾಳ : ಛಾಪು

ಮಂಗಳಂ ಮಂಗಳಂ | ದಯಾನಿಧೇ ॥ ಪ ॥

ನಂದನಂದನ ಶ್ಯಾಮಸುಂದರ ಶುಭಕಾಯ
ಇಂದೀವರಾಕ್ಷ ಮುಕುಂದ ಮುರಾರೇ ॥ ೧ ॥

ದೇವ ದೇವೇಶ ದೇಹಿ ಕಲ್ಯಾಣಂ
ಶ್ರೀವರಭೂವರ ಶ್ರೀಶ್ರೀನಿವಾಸ ॥ ೨ ॥

ರಾಜಿತವರದ ಗೋಪಾಲವಿಠಲ ಮಹಾ
ರಾಜ ಭಜಕಕಲ್ಪಭೂಜ ಸುತೇಜ ॥ ೩ ॥

॥ ಶ್ರೀ ಕೃಷ್ಣಾರ್ಪಣಮಸ್ತು ॥

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri